
ಶ್ರೀ ರಮಣಮಾರ್ಗ

ಭಾಗ - ೧ ಮತ್ತು ಭಾಗ - ೨

ಮೂಲ: ಶ್ರೀ ಸಾಧು ಓಂ (ದಿ ಪಾತ್ ಆಫ್ ಶ್ರೀ ರಮಣ)

ಅನುವಾದಕರು: ಬಿ.ಎಚ್. ಶ್ರೀಧರ ಮತ್ತು ಎಚ್.ಆರ್. ಅಮರನಾಥ



ತೇಜು ಪಬ್ಲಿಕೇಷನ್ಸ್

ಶ್ರೀ ರಮಣಮಾರ್ಗ

ಭಾಗ – ೧ ಮತ್ತು ಭಾಗ – ೨

ಮೂಲ:

ಶ್ರೀ ಸಾಧು ಓಂ

(The Path of Sri Ramana)

ಅನುವಾದಕರು:

ಬಿ.ಎಚ್. ಶ್ರೀಧರ

ಎಚ್.ಆರ್. ಅಮರನಾಥ

ತೇಜು ಪಬ್ಲಿಕೇಷನ್ಸ್

ನಂ. 1014, 24ನೇ ಮುಖ್ಯರಸ್ತೆ, 16ನೇ ಕ್ರಾಸ್,
ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070.

SRI RAMANAMARGA
(Part - 1 and Part - 2)

by

Sri Sadhu Om
(The Path of Sri Ramana)

Translated by
B.H. Sridhara
H.R. Amaranatha

Published by
V. Padmavathi, on behalf of **Teju Publications**
1014, 24th Main, 16th Cross, BSK 2nd Stage
Bangalore - 560 070. Mob : 9900195626

First Edition : 2019

Pages : 310 + iv

Price : ₹ 250 ಬೆಲೆ : ರೂ. ೨೫೦

No. of Copies : 1100

70 GSM N.S. Maplitho – 1/8 Demy

Cover Design : **Chandrashekar**

Typeset at : **Page Designers**
Bangalore - 560 004. Ph : 41691270 E-mail : bsmadhu75@gmail.com

Printed at : **Sathyananada Printers**
Pipeline Service Road, Magadi Road,
Bangalore.

ಗ್ರಂಥಕರ್ತರ ಬಗೆಗೆ

ಶ್ರೀ ಸಾಧು ಓಂ ಅಥವಾ ಓಂ ಸಾಧುಗಳು ತಮಿಳು ನಾಡಿನ ತಂಜಾವೂರು ಜಿಲ್ಲೆಯಲ್ಲಿ ಹುಟ್ಟಿದವರು ; ತಂಜಾವೂರು ನ್ಯಾಯವಾಗಿ ತಮಿಳು ಪಾಂಡಿತ್ಯ ಮತ್ತು ಸಂಸ್ಕೃತಿಗಳಿಗೆ ಕೇಂದ್ರವೆಂದು ಪ್ರಸಿದ್ಧವಾಗಿದೆ. ತಮ್ಮ ಬಾಲ್ಯದಿಂದಲೇ ಅವರು ಆಧ್ಯಾತ್ಮಿಕ ಮನಃಪ್ರಣಾಳಿಯುಳ್ಳವರಾಗಿದ್ದರು ; ಅಂದಿನಿಂದಲೂ ಅವರು ಸಾಧುಸಂತರನ್ನು ಹಾಗೂ ಋಷಿ ಮುನಿಗಳನ್ನು ಕಂಡಾಗಲೆಲ್ಲಾ ಭಕ್ತಿ–ಗೌರವಗಳನ್ನು ಸಲ್ಲಿಸುತ್ತಿದ್ದರು. (ಈಗಲೂ ಅವರು ಅವರ ಜೀವನದ ಸಂಗತಿಗಳನ್ನು ಹೇಳಿ ಶ್ರಾವಕರನ್ನು ಆನಂದ ತುಂದಿಲರನ್ನಾಗಿ ಮಾಡುತ್ತಾರೆ) ; ಮತ್ತು ಅವರು ತಮ್ಮ ಹದಿವಯಸ್ಸಿನಲ್ಲಿಯೇ ದೇವರ ಅನುಗ್ರಹದಿಂದ ಒಬ್ಬ ತಮಿಳು ಕವಿಗಳಾಗಿದ್ದರು : ೧೪ನೆಯ ಎಳೆಯ ವಯಸ್ಸಿನಲ್ಲಿಯೇ ಅವರಿಗೆ ಸ್ಫೂರ್ತಿಯುಂಟಾಯಿತು. ಭಗವಾನ್ ಶ್ರೀ ರಮಣ ಮಹರ್ಷಿಗಳೊಡನೆ ಅವರಿಗಾದ ಭೇಟಿಯು ಅವರ ಕಾವ್ಯಪ್ರತಿಭೆಯನ್ನು ಪೂರ್ಣವಾಗಿ ಅರಳಿಸಿತು. ಈವರೆಗೆ ಅವರು ಸುಮಾರು ೬೦೦೦ ಗೀತಗಳನ್ನೂ ಪದ್ಯಗಳನ್ನೂ ಬರೆದಿದ್ದಾರೆ. ಅವುಗಳ ವಸ್ತುಗಳು ಗುರು ರಮಣರ ಬಗೆಗಿನ ಭಕ್ತಿ ಅಥವಾ ಆ ಮಹರ್ಷಿಗಳ ಜೀವನದ ಅನ್ಯಾದೃಶವಾದ ವೈಭವದ ಮತ್ತು ಸೌಂದರ್ಯದ ಇಲ್ಲವೆ ಅವರ ತತ್ವಜ್ಞಾನದ ಅತ್ಯಂತ ಶುದ್ಧರೂಪದ ವಿವರಣೆ. ಓಂ ಸಾಧುಗಳ ಭಾಷೆಯಾದರೋ ತನ್ನ ಸರಳತೆ ಮತ್ತು ಸ್ಪಷ್ಟತೆಗಳಿಂದ ನಮ್ಮ ಹೃದಯವನ್ನು ಕರಗಿಸದಿರದು, ಭಗವಾನ್ ಶ್ರೀ ರಮಣರ ಬಗೆಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು ಎಂದು ನಮಗೆನ್ನಿಸುವಂತೆ ಮಾಡದಿರದು – ಅಲ್ಲದೆ, ಅವರ ಉಪದೇಶಗಳ ಬಗೆಗೂ ಇನ್ನಷ್ಟು ಅರಿತುಕೊಳ್ಳಬೇಕು ಎಂಬ ಆಸೆಯನ್ನು ನಮ್ಮಲ್ಲಿ ಹುಟ್ಟಿಸದಿರದು.

ಶ್ರಿ ಸಾಧು ಓಂ ಗಳು ಪ್ರಶ್ನೆಗಳಿಗೆ ಉತ್ತರ ಕೊಡುವುದು ಶ್ರೀ ರಮಣರ ಅನುಗ್ರಹದಿಂದ ಎಂದು ನಮಗೆನ್ನಿಸುತ್ತದೆ. ವಿವಿಧ ಶ್ರಾವಕರ ವಿವಿಧ ದೃಷ್ಟಿಕೋನಗಳಿಂದ ಕೇಳಿದ ಪ್ರಶ್ನೆಗಳ ಸೂಕ್ಷ್ಮಾಂಶಗಳಿಗೆ ನ್ಯಾಯಸಮ್ಮತವಾಗಿ ಅವರು ಕೊಡುವ ಉತ್ತರಗಳು ಆಹ್ಲಾದಕರವೂ ನವೋನವವೂ ಆದ ಸ್ವಂತಿಕೆಯಿಂದ ಕೂಡಿರುತ್ತವೆ. ಭಗವಾನ್ ಶ್ರೀ ರಮಣರೊಡನೆ ಅವರಿಗಿದ್ದ ಸಂಪರ್ಕ ಕೇವಲ ಐದೇ ವರ್ಷಗಳವರೆಗಿನದು. ಹೀಗಿದ್ದರೂ– "ಕಲ್ಲಿದ್ದಲಿಗೆ ಬೆಂಕಿ ಹೊತ್ತಲು ಹೆಚ್ಚು ಕಾಲ ಬೇಕು ; ಇದ್ದಿಲಿಗೆ ಪ್ರಮಾಣದ ಪ್ರಕಾರ ಕಡಿಮೆ ಕಾಲ ಸಾಕು ; ಆದರೆ ಕೋವಿ ಮದ್ದು ಆಗಿಂದಾಗ ಹೊತ್ತಿಕೊಳ್ಳುತ್ತದೆ–ಎಂಬಂತೆ ಇರುತ್ತದೆ, ಜ್ಞಾನಿಗಳ ಪ್ರಭಾವಿ ಕಟಾಕ್ಷಕ್ಕೆ ಪಕ್ಕಾದವರ ಕತೆ." ಹೀಗೆ ಹೇಳಿದವರು ಶ್ರೀ ರಮಣರೇ. ('ಒಬ್ಬ ಸಾಧುಗಳ ಶ್ರೀ ರಮಣರ ಕುರಿತ ನೆನಹುಗಳು'–ಪುಟ ೫೬). ಈ ಗ್ರಂಥದಲ್ಲಿ ಅಂದರೆ ಶ್ರೀರಮಣ ಮಾರ್ಗದಲ್ಲಿ ಗ್ರಂಥಕರ್ತರು ಈ ಕೆಳಗಿನ ವರ್ಗಕ್ಕೆ ಸೇರರು ಎಂಬುದು ಗೊತ್ತಾಗುತ್ತದೆ.

"..... ಪೂರ್ಣ ಜ್ಞಾನಿಯ ಹತ್ತಿರ ಕುಳಿತೂ
ಮನದಹಮಿಕೆಯೆನ್ನುವ ಕಾರ್ಗತ್ತಲು
ನಿಂತಲ್ಲೇ ನಿಂತಿರುವುದು ದೀಪ
ಸ್ತಂಭದ ಬುಡದಚ್ಛಾಯೆವೊಲಂತಹ
ಮನುಜರು ಮುಪ್ಪನ್ನಪ್ಪುತ ಸಾಯ್ವರು :
ಹಿಂದಿನ ಜನ್ಮಗಳಲಿ ಸಂಪಾದಿಸಿ
ದಂತಹ ಕೀಳ್ತನವಿಂದೂ ಅವ–
ರೆದೆಯಲ್ಲಂತೆಯೆ ಮುಂಬರಿಯುತ್ತಿದೆ."

"ಗುರುವಾಚಕ ಕೋವೈ" – ನುಡಿ ೧೦೧
'ಪರ್ವತ ಮಾರ್ಗ' ಅಕ್ಟೋಬರ್ ೧೯೬೬

(ತಮ್ಮ ಗುರುಗಳಾದ) ಶ್ರೀ ರಮಣರ ಸಹವಾಸದಿಂದ ಶ್ರೀ ಓಂ ಸಾಧುಗಳಿಗೆ ಆ ಮಹರ್ಷಿಗಳ ಮಾತಿನ ತಾತ್ಪರ್ಯವನ್ನು ಹೀರಿಕೊಳ್ಳಲು ಸಾಧ್ಯವಾಯಿತು ; ತಮಿಳಿನ ಮಹಾ ಕವಿಗಳೂ ಶ್ರೀ ರಮಣರ ಹಿರಿಯ ಹಾಗೂ ಪ್ರಧಾನ ಶಿಷ್ಯರೂ ಆಗಿದ್ದ ಸ್ವಾಮಿ ಮುರುಗನಾರರ ಸಂಪರ್ಕದ ದೆಸೆಯಿಂದ ಶ್ರೀ ರಮಣರು ಉಪದೇಶ ಕೊಡಲು ಬಳಸಿದ ಬಿಗಿಯಾದ ಅಭಿಜಾತ ತಮಿಳು ಭಾಷೆಯನ್ನು ಅರಿತುಕೊಳ್ಳಲು ಸಾಧುಗಳಿಗೆ ಸಾಧ್ಯವಾಯಿತು. ಅಷ್ಟೇ ಅಲ್ಲ– ಗುರುರಮಣರಲ್ಲಿ ಸಾಧುಗಳಿಗಿದ್ದ ಹೃತ್ಪೂರ್ವಕವಾದ ಭಕ್ತಿ ಮತ್ತು ಅವರ ಉಪದೇಶಗಳನ್ನು ಏಕಾಗ್ರತೆಯಿಂದ ಗ್ರಹಿಸಿ ಮಾಡಿದ ಅನುಷ್ಠಾನಗಳು ಮಹರ್ಷಿಗಳ ಅನುಗ್ರಹಕ್ಕೆ ಸಾಧುಗಳನ್ನು ಪಾತ್ರರನ್ನಾಗಿ ಮಾಡಿದವು. ಅದರ ಫಲವಾಗಿ ಶ್ರೀ ರಮಣಾನುಗ್ರಹವು ಸಾಧುಗಳಲ್ಲಿ ಹರಿದು ಬಂದು ಆಪಾದಮಸ್ತಕವಾಗಿ ತುಂಬಿಕೊಂಡಿತು. ಅನುಗ್ರಹದ ಅಂಥ ತುಂಬಿ ಹರಿಯುವಿಕೆಯ ದೆಸೆಯಿಂದ ಸಾಧು ಓಂಗಳ ಶ್ರಾವಕನಿಗೆ ತಾನೂ ಆ ಅನುಗ್ರಹಕ್ಕೆ ಭಾಗಿಯಾಗಿದ್ದೇನೆ ಎಂಬ ಭಾವನೆಯುಂಟಾಗದಿರದು. ಈ ಪ್ರಕಾರವಾಗಿ, ಸಾಧು ಓಂಗಳ ಹತ್ತಿರಕ್ಕೆ ಶ್ರೀ ರಮಣರ ಉಪದೇಶಗಳ ಸ್ಪಷ್ಟೀಕರಣಕ್ಕಾಗಿ ಬರುವವರಿಗೆ (ತಕ್ಕ ಉತ್ತರಗಳನ್ನು ಕೊಡಲು) ಸಾಧುಗಳಿಗೆ ಮೇಲೆ ಹೇಳಿದ ಮೂರು ಅರ್ಹತೆಗಳಿವೆ. ಇಂಗ್ಲೀಷಿನ ಮೇಲೆ ಹೆಚ್ಚಿನ ಪ್ರಭುತ್ವವಿಲ್ಲವೆಂದು ಹೇಳುವ ಶ್ರೀ ಸಾಧುಗಳಿಗೆ ಉಕ್ತ ಅರ್ಹತಾತ್ರಯದ ದೆಸೆಯಿಂದ ಶ್ರೀ ರಮಣ ಮಹರ್ಷಿಗಳ ಉಪದೇಶಗಳನ್ನರಿತುಕೊಳ್ಳಲು ಆಂಗ್ಲಾನುವಾದಗಳನ್ನಷ್ಟೇ ಅವಲಂಬಿಸಿದವರ ತಪ್ಪು ತಿಳುವಳಿಕೆಗಳನ್ನು ಕಂಡುಹಿಡಿಯಲು ಸಾಧ್ಯವಾಗಿದೆ.

ಓದುಗನಿಗೆ ಟಿಪ್ಪಣೆ

"ಕೆಲವು ಪುಸ್ತಕಗಳನ್ನು ರುಚಿ ನೋಡಬೇಕು, ಕೆಲವನ್ನು ನುಂಗಬೇಕು, ಇನ್ನೂ ಕೆಲವನ್ನು ಮೆಲುಕು ಹಾಕಿ ಅರಗಿಸಿಕೊಳ್ಳಬೇಕು"

– ಬೇಕನ್

ಈ ಪುಸ್ತಕವನ್ನು ಬರಿದೆ ಅರಗಿಸಿಕೊಂಡರೆ ಸಾಲದು, ರಕ್ತಗತ ಮಾಡಿಕೊಳ್ಳಬೇಕು: ದೈನಂದಿನ ಬಾಳಿನಲ್ಲಿ ಅದರ ಹೂರಣವನ್ನು ತನ್ನ ಇರವಿನ ಅಂಗವನ್ನಾಗಿ ಜಿಜ್ಞಾಸುವು ಮಾಡಿಕೊಳ್ಳಬೇಕು. "ಶ್ರೀ ರಮಣಮಾರ್ಗ"ದಲ್ಲಿ ಇರುವ ಭಕ್ತಿ–ಜ್ಞಾನಗಳೆಂಬ ಎರಡು ಕವಲುಗಳೂ ಬಹಳ ಪಕ್ವಾತ್ಮರಿಗಾಗಿಯೇ ಇವೆ ; ಅಂಥ ಪಕ್ವ ಜೀವಿಗಳು ಅಂಥ ಶ್ರದ್ಧೆಗಳಿಂದ ವಂಚಿತರಾಗರು. ಪುನಃ ಪುನಃ ಮಾಡುವ ಅಭ್ಯಾಸದಿಂದಲೂ ನಿಷ್ಪಕ್ಷಪಾತದಿಂದ ಆಳವಾಗಿ ಗಾಢವಿಚಾರ ಮಾಡುವುದರಿಂದಲೂ ಮುಮುಕ್ಷುಗಳಿಗೆ ಸೂಕ್ಷ್ಮಾಂಶಗಳು ಹೊಳೆಯುತ್ತವೆ. ಗ್ರಂಥದ ಸ್ಥೂಲಾವಲೋಕನದಿಂದ ಅಂಥ ಯಾವ ಅಂಶಗಳೂ ಹೊಳೆಯವು. ವಿಧಿ, ಅನಿರ್ಬದ್ಧ ಸಂಕಲ್ಪ ಶಕ್ತಿ, ಶಾಸ್ತ್ರಗಳ ಅಗಾಧ ಅರ್ಥವತ್ತೆ ಮತ್ತು ಸರಿಯಾದ ಆತ್ಮಶೋಧ ಹಾಗೂ ಆತ್ಮಸಮರ್ಪಣೆಗಳು ಪುನಃ ಪುನರಭ್ಯಾಸ ಮತ್ತು ಗಾಢ ಚಿಂತನೆಗಳಿಂದ ಮಾತ್ರ ಸ್ಪಷ್ಟವಾಗುವಂಥವು. ಶಾಸ್ತ್ರಗಳಲ್ಲಿ ಎಲ್ಲಾದರೂ ಪರಸ್ಪರ ವ್ಯಾಹತಿಯುಂಟಾದಂತೆ ಕಂಡುಬಂದರೆ–ಹಾಗೆ ಕಂಡುಬರುವುದು ಅವುಗಳ ನಿಜವಾದ ಬೆಲೆಯನ್ನು ನಾವು ತಿಳಿದುಕೊಳ್ಳುವಂತೆ ಮಾಡುವುದೇ ಆಗಿದೆ. ಹಾಗೇ ಆತ್ಮಶೋಧ ಆತ್ಮ ಸಮರ್ಪಣಗಳು ಸಾರತಃ ಭಿನ್ನವಲ್ಲ ; ಅದೇ ಇದು, ಇದೇ ಅದು–ಎಂಬುದು ಅಭ್ಯಾಸ ಪುನರಾವರ್ತನೆಯಿಂದಲೂ ಆಳವಾದ ಚಿಂತನೆಯಿಂದಲೂ ಸ್ಪಷ್ಟವಾಗುತ್ತದೆ.

ಈ ಗ್ರಂಥವು "ಶ್ರೀ ರಮಣ ಮಾರ್ಗ" ಎಂಬ ತನ್ನ ಶೀರ್ಷಿಕೆಯನ್ನು ಹೇಗೆ ಸಾರ್ಥಕಗೊಳಿಸುತ್ತದೆ? ಶ್ರೀ ರಮಣ ಭಕ್ತರಿಗೆ ಆತ್ಮಶೋಧ–ಆತ್ಮಸಮರ್ಪಣೆಗಳೇ ನಿಜವಾದ ರಮಣೋಪದೇಶಗಳು, ಈ ಎರಡನ್ನೂ ಶ್ರೀ ರಮಣರ, ತಮಿಳಿನಲ್ಲಿರುವ, ಮೂಲ ಗದ್ಯ–ಪದ್ಯ ಕೃತಿಗಳಲ್ಲಿ ಚೆನ್ನಾಗಿ ವರ್ಣಿಸಲಾಗಿದೆ–ಎಂಬುದು ಗೊತ್ತಿರುವ ಸಂಗತಿ. ಶ್ರೀ ರಮಣರ ಕೃತಿಗಳ ಪರಿಚಯ ಚೆನ್ನಾಗಿರುವವರಿಗೆ ಆತ್ಮಶೋಧ–ಆತ್ಮಸಮರ್ಪಣ ಪದ್ಧತಿಗಳು ಅವರ ಮಾರ್ಗದ ಎರಡು ಶಾಖೆಗಳೆಂಬುದು ಗೊತ್ತಿದೆ. ಅಲ್ಲದೆ, ಅವರಿಗೆ "(೧) ಉಳ್ಳದು ನಾರ್ಪದು (೨) ಉಪದೇಶ ಉಂಧಿಯಾರಿನ ಕೊನೆಯ ೧೫ ಪದ್ಯಗಳು ಮತ್ತು (೩) ಅಪ್ಪಲಂ ಗೀತ (೪) ಆತ್ಮಜ್ಞಾನಗೀತ (೫) ಬ್ರಹ್ಮಾತ್ಮದ ಬಗೆಗಿನ ೫ ಪದ್ಯಗಳು ಮತ್ತು (೬) ಅರುಣಾಚಲನ ಮೇಲಿನ ೫ ಪದ್ಯಗಳಲ್ಲಿಯ ಕೆಲವು ನುಡಿಗಳು (೭) ಗುರುವಚನ ಮಾಲೆಯ+ ಕೆಲವು ನುಡಿಗಳು ಆತ್ಮಶೋಧ ಸಾಧನೆಯ

\+ ಗುರುವಚನಮಾಲೆ : ಶ್ರೀ ಮುರುಗನಾರರು ಸಂಗ್ರಹಿಸಿದ, ಪದ್ಯರೂಪದಲ್ಲಿರುವ ಶ್ರೀ ರಮಣೋಕ್ತಿಗಳು : ತಮಿಳು ಹೆಸರು :ಗುರುವಾಚಕ ಕೋವೈ (Garland of Garu's Sayings).

ಆಧಾರಸ್ತಂಭಗಳೆಂಬುದೂ 'ಐದು ಸ್ತೋತ್ರ'ದಲ್ಲಿಯ ಕೆಲವು ನುಡಿಗಳಲ್ಲಿ ಆತ್ಮಾರ್ಪಣವನ್ನು ಚೆನ್ನಾಗಿ ವರ್ಣಿಸಲಾಗಿದೆ"ಯೆಂಬುದೂ ಸ್ಪಷ್ಟವಾಗಿ ಗೊತ್ತಿದೆ. ಶ್ರೀ ರಮಣರ ಈಯೆಲ್ಲ ಪದ್ಯಗಳಿಂದಲೇ ಶ್ರೀ ರಮಣ ಮಾರ್ಗವು ರಚಿತವಾಗಿದೆ ಎಂಬ ಅಂಶವನ್ನು ಓದುಗನ ಗಮನಕ್ಕೆ ತರಬೇಕು. ಐದನೆಯ ಅನುಬಂಧವು ಓದುಗನಿಗೆ ಪ್ರಯೋಜನಕಾರಿ; ಅದರಲ್ಲಿ ಅವನು ಉದ್ಧೃತವಾಕ್ಯವನ್ನಾಗಿ ಸಂದರ್ಭಾನುಸಾರವಾಗಿ ಎಲ್ಲಿ ಯಾವ ಪದ್ಯವನ್ನು ಎತ್ತಿಕೊಳ್ಳಲಾಗಿದೆ ಅಥವಾ ಪಠ್ಯದಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಸಾಧು ಓಂಗಳು ಕತೆಗಳನ್ನು ಬಳಸುತ್ತಾರೆ. ಅವು ಕೆಲವೆಡೆ ತಮಾಷೆಯಾಗಿರುತ್ತವೆ, ಕೆಲವೆಡೆ ಹೃದಯವಿದ್ರಾವಕವಾಗಿರುತ್ತವೆ. ಅಂಥ ಎಲ್ಲ ಕತೆಗಳ ಉದ್ದೇಶವೂ ರಮಣರ ಉಪದೇಶ ಸಾರವನ್ನು ನಮಗೆ ತಿಳಿಸುವುದೇ ಆಗಿದೆ. ಆದರೀ ಗ್ರಂಥವು ಕೇವಲ ಒಂದು ಕತೆ ಪುಸ್ತಕವಲ್ಲ. ನಾಮದೇವರ ಮತ್ತು ಆಚಾರರ ಕತೆಗಳಂಥವುಗಳನ್ನು ಪುರಾಣಗಳಿಂದ++ಎತ್ತಿ ಹೇಳಿರುವುದರ ಉದ್ದೇಶ ಸಹಾ ನಮ್ಮ ಲಕ್ಷ್ಯವನ್ನು ಉತ್ತಮ ಪುರುಷದ ನಾನೆಂಬುದರತ್ತ ಸೆಳೆಯುವುದೇ ಆಗಿದೆ.

ಆಧುನಿಕನ ಮನಸ್ಸಿಗೆ ಶ್ರುತ್ಯುಕ್ತಿಗಳನೇಕ ಪಾಂಡಿತ್ಯಪೂರ್ಣವಾಗಿ ತೋರುವುದಲ್ಲದೆ, ವ್ಯಾವಹಾರಿಕ ಎನ್ನಿಸವು. ಆದರೆ ಈ ಪುಸ್ತಕದಲ್ಲಿ ಮುಮುಕ್ಷುವಿನ ಕೊನೆಯ ಗುರಿಯನ್ನು ಸಮೀಪಿಸಲು ಹೇಳಿದ ಮಾತು ಹೆಚ್ಚು ವ್ಯಾವಹಾರಿಕ (ಅನುಷ್ಠಾನಯೋಗ್ಯ) ಎಂದು ತೋರುವುದಲ್ಲದೆ ಪಾಂಡಿತ್ಯದ ಆಡಂಬರ ಎಂದು ತೋರುವುದಿಲ್ಲ! ನಮ್ಮ ಗುರಿಯನ್ನು ಮುಟ್ಟಲು ಶ್ರುತಿಜ್ಞಾನ (ಶಾಸ್ತ್ರಜ್ಞಾನ) ಅನವಶ್ಯಕ ಎಂಬ ಆಶ್ವಾಸನವನ್ನು+++ ಕೊಟ್ಟು ಶ್ರೀ ರಮಣರು ಪ್ರೋತ್ಸಾಹಿಸುತ್ತಾರೆ ; ಶಾಸ್ತ್ರಜ್ಞಾನವು ವಿಘ್ನವಾದೀತೆಂದೂ ಎಚ್ಚರಿಸಿದ್ದಾರೆ! ಈ ಅಂಶವನ್ನಿಲ್ಲಿ ಮನಂಬುಗುವಂತೆ ವಿಶದಪಡಿಸಲಾಗಿದೆ. ಈ ಪುಸ್ತಕದಲ್ಲಿ ಹೇಳಿದ್ದೆಲ್ಲವನ್ನೂ ತನ್ನ ಸೂಕ್ಷ್ಮ ನಿರೀಕ್ಷಣೆಯ ಮೂಲಕ ಯಾವನೂ ಪರೀಕ್ಷಿಸಬಹುದು. ಅದನ್ನು ಅವನು ತನ್ನ ಜೀವನಕ್ಕೆ ಅನ್ವಯಿಸಿಕೊಳ್ಳಲೂಬಹುದು. ವಸ್ತುತಃ ಅದನ್ನು ಆತ ಅನ್ವಯಿಸಬೇಕು. **ಭಗ್‌ವಾನ್ ರಮಣರ ಉಪದೇಶಗಳನ್ನು ಬರಿ ಓದುವುದರಿಂದ ಸತ್ಯದ ಸರಿಯಾದ ಅರ್ಥ ಆವಿರ್ಭವಿಸದು. ಅವರು ಹೇಳಿಕೊಟ್ಟದ್ದನ್ನು ಪ್ರಾಮಾಣಿಕವಾಗಿಯೂ ಏಕಾಗ್ರತೆಯಿಂದಲೂ ಅನುಸರಿಸುವವರಿಗೆ ಮಾತ್ರ ಅದರ ಸರಿಯಾದ ತಿಳುವಳಿಕೆ ಉಂಟಾಗುವುದು ಸಾಧ್ಯ.** ಭಕ್ತರಿಗೆ ಹತ್ತನೆಯ ಮನುಷ್ಯನ ಕಥೆ ಹೇಳುವಾಗ ಶ್ರೀ ರಮಣರು 'ತಮ್ಮ ಕಳೆದುಹೋದ ಸಹಚರನನ್ನು ಪಡೆಯುವ ಸನ್ನಿವೇಶ ಸನ್ನಿಹಿತವಾಗಿದೆಯೆಂದು ಅವರು ಉಲ್ಲಸಿತರಾದರು, ದಾರಿಹೋಕನು ಹೇಳಿದ ಕ್ರಮವನ್ನು ಒಪ್ಪಿ ಅನುಸರಿಸಿದರು* ಎಂದು ನಿಗಮನಿಸಿದರು. ಹಾದಿಹೋಕನನ್ನು (ಶ್ರೀ ರಮಣರು) ಹೇಳಿದ ಪ್ರಕಾರ ಅನುಸರಿಸೋಣ.

ಮತಧರ್ಮಗಳು ಹೇಳಿದ ಸೃಷ್ಟಿಸಿದ್ಧಾಂತಗಳನ್ನು, ಅವುಗಳ ವ್ಯಾಘಾತಕರ ಅತಾರ್ಕಿಕ ಉಲ್ಲೇಖಗಳ ದೆಸೆಯಿಂದ, ಹೆಚ್ಚಾಗಿ ಪಕ್ವಮತಿಗಳಾದ ಜೀವಾತ್ಮರು (ನಂಬಿ) ಸಮಾಧಾನ ಪಡಲಾರರು, ತೃಪ್ತರಾಗರು. ಈ ಹೊತ್ತಗೆಯಲ್ಲಿ ವಿಶ್ವನಿರ್ಮಾಣವನ್ನು ಕುರಿತು ಬ್ರಹ್ಮಾತ್ಮವೇ

++ ಪುರಾಣಗಳು : ಹಿಂದು ಧರ್ಮದಲ್ಲಿರುವ ಕತೆ ಮತ್ತು ಐತಿಹ್ಯಗಳು

+++ 'ದಿ ಮಹರ್ಷಿಸ್ ಗಾಸ್ಪೆಲ್' (ಮಹರ್ಷಿಗಳ ಅಮೃತವಾಣಿ)ಯ ೫೦ನೆಯ ಪುಟವನ್ನು ನೋಡಿ.

* 'ಉಳ್ಳದು ನಾಲ್ಪದು' ಪುಸ್ತಕದ ಪುರವಣಿಯ ೩೪, ೩೫, ೩೬ನೆಯ ಪದ್ಯಗಳನ್ನು ನೋಡಿರಿ.

ಹೇಗೆ ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ನಾಶಕರ್ತ ಎಂದು ಹೇಳಿರುವುದು ಮತ್ತು ಅದನ್ನು ಗ್ರಂಥಕರ್ತರು ವೈಜ್ಞಾನಿಕವಾಗಿ ಶ್ರೀ ರಮಣರ ಅನುಭವ ಹಾಗೂ ಅಭಿಪ್ರಾಯಗಳಂತೆ ವಿವರಿಸಿದ್ದು ಹೊಸತು. ಸ್ಥೂಲಾವಲೋಕನಕಾರನಿಗೆ ಈ ವಿಧಾನದಲ್ಲಿ ದೇವರನ್ನು ಅಪಮೌಲ್ಯಕ್ಕಿಳಿಸಲಾಗಿದೆ ಎಂದು ತೋರಬಹುದಾದರೂ ನಿಜವಾಗಿಯೂ ಇದು ಪರಮಾತ್ಮನ ಪೂರ್ಣ ವೈಭವವನ್ನು ಹೊರಗೆಡಹುತ್ತದೆ. ಮೊದಲನೆಯ ಅಧ್ಯಾಯದ ಉದ್ದೇಶವೇ ಅಂಥದು. ಇದನ್ನು ಕೊನೆತನಕ ಪುನಃ ಪುನಃ ಸರಿಯಾಗಿ ಸೂಕ್ಷ್ಮಾವಲೋಕನ ಮಾಡಿದರೆ–ಜಗತ್ತು ಹಾಗೂ ದೇವರುಗಳ ಬಗೆಗೆ ಹೇಳಿದ ಅದರ ಮಾತುಗಳಿಂದ–ಆತ್ಮಶೋಧದ ಅಗತ್ಯವನ್ನು ಯಾವನಾದರೂ ಅರಿತುಕೊಳ್ಳದಿರಲಾರನು. ಹೇಗೆ? ವಿಮೃಷ್ಟ ವಸ್ತುಗಳಾದ ಜಗತ್ತು ಮತ್ತು ದೇವರುಗಳಿಗಿಂತ ಸಾಪೇಕ್ಷವಾಗಿ ಮನಸ್ಸು ಹೆಚ್ಚಿನದೂ ಅಧಿಕ ಶಕ್ತಿ ಸಂಪನ್ನವೂ ಆಗಿರುವುದೆಂಬುದನ್ನು ಸರಿಯಾಗಿ ಸೂಕ್ಷ್ಮವಿಮರ್ಶೆ (ಸೂಕ್ಷ್ಮಾವಲೋಕನ) ತಿಳಿಸಿ ಕೊಡುತ್ತದೆ–ಜಗತ್ತೂ ದೇವರೂ ಮಧ್ಯಮ ಮತ್ತು ಪ್ರಥಮ ಪುರುಷಗಳು. ಇದು ಗೊತ್ತಾಗುವುದೇ ಉತ್ತಮ ಪುರುಷದ ಸೂಕ್ಷ್ಮ ವಿಮರ್ಶೆಯ ಆರಂಭದಶೆ. ಉತ್ತಮ ಪುರುಷ ವಾಚ್ಯವಾದ ವಸ್ತುವಿನ ಮೇಲಿನ ನಿಗಮನಾಂತವೇ ನಿಜಜ್ಞಾನದ ಉಷಃ ಕಾಲಾರಂಭ.

ದೇವರ ಮತ್ತು ಸೃಷ್ಟಿಯ ಕುರಿತ ಸಮಸ್ಯೆಗಳನ್ನು ತಿಳಿಯುವ ಹೊಸ ಹಾದಿಯನ್ನು ತೋರಿಸಿ ಕೊಟ್ಟ ಮೇಲೆ ಭಕ್ತಿ, ಜ್ಞಾನ, ಆನಂದ ಮತ್ತು ಚಿತ್ ಪದಾರ್ಥಗಳೆಂಬಂತಹ ಎಷ್ಟೋ ಕಲ್ಪನೆಗಳ ನಿಜ ಸ್ವರೂಪಗಳನ್ನು ಹೊಸ ರೀತಿಯಿಂದ ಅರಿತುಕೊಳ್ಳುವ ಬಗೆಯನ್ನು ಸಾಧು ಓಂಗಳು ತೆರೆದಿಟ್ಟಿದ್ದಾರೆ. ಅಹಂಕಾರ – ಮಮಕಾರಗಳು ಹೊಲೆಗಸಗಳು. ಅವನ್ನು ಜ್ಞಾನ–ಭಕ್ತಿ ಮಾರ್ಗಗಳಿಂದ ದೂರಸರಿಸಬಹುದೆಂಬುದನ್ನೂ ಸಾಧುಗಳು ಪಳಚ್ಚನೆ ಹೊಳೆಯಿಸುತ್ತಾರೆ. ಸಾಮಾನ್ಯರ ಕಲ್ಪನೆಯಂತೆ ಭಕ್ತಿಯು ದೇವರ ಕುರಿತಾದ ಪ್ರೀತಿಯೆಂದೇ ಆಗಿರುತ್ತದೆ. ಆದರೆ ಭಕ್ತಿಯೆಂದರೇನು? ದೇವರಲ್ಲಿ ಸಜ್ಜನನೊಬ್ಬ ತಳೆದಿರುವ ಭಕ್ತಿಯೂ, ತನ್ನ ಆಹಾರವಾಗಿರುವ ಪ್ರಾಣಿಯ ಬಗೆಗೆ ಇರುವೆ ತಳೆದಿರುವ ಉತ್ಕಟಾಪೇಕ್ಷೆಯೂ ಸರಿಸಮಾನವಾದ ಭಕ್ತಿಮುಖಗಳೆಂಬುದು ಸಾಧು ಓಂ ಮತ. ಪ್ರೇಮದ ಈ (ಸಾಧಾರಣ) ಮುಖವು ಸರ್ವಸಾಮಾನ್ಯವೆಂಬುದು ಸಾಧುಗಳ ಮತ. ಭಕ್ತಿಯ ಬೇರನ್ನು ಹೀಗೆ ತಳಪಾಯವನ್ನಾಗಿ ಮಾಡಿಕೊಂಡು ಈ ನವಮಾರ್ಗವು ಪರಾಭಕ್ತಿಯತ್ತ ನಮ್ಮನ್ನು ತಿರುಗಿಸುವುದು. "ಭಕ್ತಿಯೇ ನಮ್ಮ ಇರವು; ಆಶೆಯೇ ನಮ್ಮ (ವೈಯಕ್ತಿಕತೆಯ) ಉದಯ ಎಂಬುದು ಸಾಧು ಓಂಗಳ ಅನುಭವದ ಸಾರ.

ಈ ಹೊತ್ತಗೆಯಲ್ಲಿ ಹಿಂದು ಸಂಪ್ರದಾಯದಂತೆಯೇ ಭಕ್ತಿಯನ್ನು ಬಣ್ಣಿಸಿದ್ದು ಕಂಡುಬರುತ್ತದೆ. ಪ್ರೀತಿ ಎಂಬುದು ದೇವರ ಬಗೆಗೆ ಒಂದೇ ಆಗಿರುವುದರಿಂದ ಆ ಪ್ರಕಾರವಾಗಿಯೇ ಅದನ್ನಿಲ್ಲಿ ವಿವರಿಸಲಾಗಿದೆ. (ಭಗವದ್ವಿಷಯಾ ರತಿರ್ಭಕ್ತಿಃ). ಬೇರೆ ಬೇರೆ ಬಗೆಯ ಭಕ್ತಿಯ ವರ್ಗೀಕರಣವು ಎಲ್ಲರಿಗೂ ಅನ್ವಯಿಸುತ್ತದೆ.

ಪಾಠಕ, ಮನುಷ್ಯ, ಪ್ರಿಯಕೃಷ್ಣದೇವ, ಗುರುಶ್ರೀ ರಮಣ ಎಂಬ ಈ ಯಾರೂ ವಿಶಿಷ್ಟ ಪಂಥಕ್ಕೆ ಸೇರಿದವರಲ್ಲ–ಅವರು ವಿಶ್ವಾತ್ಮರು, ವಿಶ್ವಜನೀನರು. ಅವನವನ ಯೋಗ್ಯತೆಗೂ ಅಭಿರುಚಿಗೂ ತಕ್ಕಂತೆ ಶ್ರೀ ರಮಣರು ಭಕ್ತಿಯ ಬಗೆಗೆ ಬೋಧಿಸಿದ್ದನ್ನು ವಿವಿಧ ರೀತಿಗಳಿಂದ

ಗ್ರಹಿಸಬಹುದು ; ಆದರೆ ಶ್ರೀ ರಮಣರ ಪ್ರಕಾರ ನಿಜವಾದ ಭಕ್ತಿಯೆಂದರೇನೆಂಬುದನ್ನು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ತೋರಿಸಿ ಕೊಡಲಾಗಿದೆ.

ಬ್ರಹ್ಮಾತ್ಮಭಕ್ತಿಯೊಡನೆ ಹೋಲಿಸಿದರೆ (ಪರಾಭಕ್ತಿಯೊಡನೆ ತುಲನೆ ಮಾಡಿದರೆ) (೧ನೆಯ ದರ್ಜೆಯಿಂದ ೪ನೆಯ ದರ್ಜೆಯುವರೆಗಿನ ಭಕ್ತಿಯು) ಭಕ್ತಿಮಾರ್ಗದ ಅನುಷ್ಠಾನಗಳೆಲ್ಲವೂ ನಿಷ್ಪ್ರಯೋಜಕ ಎಂದು ಆಗ ಈಗ (ಈ ಪುಸ್ತಕವನ್ನು) ಓದಿದವನಿಗೆ ಎನ್ನಿಸದಿರದು ; ಹೆಚ್ಚು ಆಳವಾಗಿ ಓದಿದ ಮೇಲೆ, ಮುಮುಕ್ಷುಗಳ ಪಕ್ವತೆಯ ಮಟ್ಟಗಳ ಮೇರೆಗೆ ಆ ವಿವಿಧ ಭಕ್ತಿ ರೀತಿಗಳ ಅವಶ್ಯಕತೆ ಇರುವುದನ್ನು ಚೆನ್ನಾಗಿ ಅರಿತುಕೊಂಡು ಸಂಪೂರ್ಣ ಒಪ್ಪಿ, ಅವುಗಳ ಅನುಷ್ಠಾನಗಳನ್ನು ಅಧ್ಯಾಯದ ಉದ್ದಕ್ಕೂ ನಿಂದಿಸದಿರುವುದನ್ನು ಯಾವನಾದರೂ ತಿಳಿದುಕೊಳ್ಳಬಲ್ಲನು. ಆದರೆ ಬ್ರಹ್ಮಾತ್ಮ ರತಿಯೆಂಬ ಪರಾಭಕ್ತಿಯೊಂದೇ ನಿಜವಾದ ಭಕ್ತಿ ಸ್ವರೂಪವೆಂದು ಗುರುತಿಸಲಾಗಿದೆ ಮತ್ತು ನಾವೆಲ್ಲರೂ ಅಡ್ಡಿ–ಆತಂಕಗಳನ್ನೊಡ್ಡದೆ ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಬ್ರಹ್ಮಾತ್ಮಕ್ಕೆ ಹೆಚ್ಚಿನ ಗೌರವ ಕೊಟ್ಟದ್ದು ತೋರಿಸುವುದೇನೆಂದರೆ, ಮೊಟ್ಟ ಮೊದಲು ವೇದರಾಶಿಯು ೧ನೆಯ, ೨ನೆಯ ಮತ್ತು ೩ನೆಯ 'ಅ' ವರ್ಗದವರ ಉಪಾಧ್ಯಾಯತ್ವದಲ್ಲಿರುತ್ತದೆ ; ಆಮೇಲೆ ಭಕ್ತನ ಪ್ರಿಯತಮದೇವ ಹಾಗೂ ಅಂತ್ಯದಲ್ಲಿ ಗುರು–ಎಂದು. ಈ ಪ್ರಕಾರ ಗ್ರಂಥಕರ್ತರು ವೇದಸಾರವೆಂದರೆ ಪರಬ್ರಹ್ಮ ಎಂಬುದರ ಮೂಲಕ ಭಗವಾನ್ ರಮಣರ ನುಡಿಗಳನ್ನು ನಮಗೆ ನೆನಪು ಮಾಡಿ ಕೊಡುತ್ತಾರೆ :

"ಹೇ ಅರುಣಾಚಲ ವೇದ ಸಾರ ತಾ ಬ್ರಹ್ಮವದ್ವಿತೀಯ
ಎನಿಸಿ ಬೆಳಗುತಿದೆಯಂತಹ ಮತ್ತೊಂದಿಲ್ಲವೋ ದ್ವಿತೀಯ
ಕರುಣಿಸೆನಗೆ ನೀನದನು" (ಒಂದೆ ಒಂದಾಗಿ ಮೆರೆಯುತಿರುವ
ಪರಬ್ರಹ್ಮ ಸಚ್ಚಿದಾನಂದವನು ನಿತ್ಯಸತ್ಯಕಿರುವ) !

– ಅಕ್ಷರ ಮಣಮಾಲೈ (ವಧು ಕೋದ ಪತ್ರ ಮಾಲೆ –ಸೊಲ್ಲು ೯೯)

ಈ ಅಧ್ಯಾಯದಲ್ಲಿ ಮಾಡಿದ ಭಕ್ತಿವರ್ಗೀಕರಣವು, ಸಾಧನ ಮಾರ್ಗದಲ್ಲಿ ಸರಿಯಾಗಿ ನಾವೆಲ್ಲಿದ್ದೇವೆ ಎಂಬುದನ್ನು ಅರಿತುಕೊಳ್ಳುವುದರಲ್ಲಿ ಮತ್ತು ನಮ್ಮ ಬಗ್ಗೆ ನಾವು ನಿಷ್ಪಕ್ಷಪಾತವಾಗಿದ್ದರೆ ನಾವದರಲ್ಲಿ ಮುಂಬರಿಯುವುದರಲ್ಲಿ, ನಮಗೆ ದೊಡ್ಡ ನೆರವಾಗಿ ಪರಿಣಮಿಸುತ್ತದೆ.

ಕರ್ಮಮೂಲ, ಕರ್ಮಕರ್ತ ಮತ್ತು ಕರ್ಮಫಲಗಳ ಬಗೆಗೆ ಅನೇಕ ಪ್ರಶ್ನೆಗಳನ್ನು ಶ್ರೀ ಸಾಧು ಓಂಗಳಿಗೆ ಭಕ್ತರು ಹಾಕುತ್ತಾರೆ. ಹಿಂದಿನೆರಡು ಅಧ್ಯಾಯಗಳಲ್ಲಿ ಹೇಗೋ ಹಾಗೇ ಇಲ್ಲಿಯೂ ಗ್ರಂಥಕರ್ತರು ಕರ್ಮವನ್ನು ಹೊಸ ದೃಷ್ಟಿಕೋನದಿಂದ ನೋಡುತ್ತಾರೆ. ಪ್ರಾರಬ್ಧವು ತಮೋಮಯವಾದ ವಿಧಿವಾದಕ್ಕೂ ನಿರಾಶೆಗೂ ಪಲಾಯನವಾದಕ್ಕೂ ಒಯ್ದು ಮುಟ್ಟಿಸುತ್ತದೆ ಎಂದು ಅನೇಕರು ನಂಬುತ್ತಾರೆ ; ಆದರೆ ಪ್ರಾರಬ್ಧ–ಪುನರ್ಜನ್ಮಗಳ ನಿಜ ಸ್ವರೂಪದ ಸರಿಯಾದ ತಿಳುವಳಿಕೆಯನ್ನು ಮಾಡಿಕೊಂಡರೆ ನಿರಾಶಾಸ್ಥಿತಿಯು ಸಂತೋಷಕರವಾದ ಪ್ರತ್ಯಾಶೆಯಾಗಿ ಮಾರ್ಪಡುತ್ತದೆ. ಅದರ ಸ್ವೀಕಾರವು ಇನ್ನು ಮುಂದೆ ವಿಧಿವಾದ ಶರಣತೆಯಾಗದು, ಸುಲಭ ಮಾರ್ಗವಾದೀತು. ಈ ಅಧ್ಯಾಯದಲ್ಲಿ, ನಾವು ನಮಗೆ ಸಂಕಲ್ಪ ಮಾಡಲು ಮತ್ತು ಅದರಂತೆ ನಡೆದುಕೊಳ್ಳಲು ಇರುವ ಪೂರ್ಣ

ಸ್ವಾತಂತ್ರ್ಯವನ್ನು ಹೇಗೆ ಇಬ್ಬಗೆಯಿಂದ ದುರುಪಯೋಗ ಮಾಡಿಕೊಳ್ಳುತ್ತೇವೆಯೆಂಬುದನ್ನು ಆ ತಪ್ಪುಗಳನ್ನು ಹೇಗೆ ನಾವು ಸರಿಪಡಿಸಿಕೊಳ್ಳಬಹುದೆಂಬುದನ್ನೂ, ಚೆನ್ನಾಗಿ ವಿವರಿಸಲಾಗಿದೆ. ಈ ಪ್ರಕಾರ, ವಿಧಿಯೂ ಅನಿರ್ಬದ್ಧ ಸ್ವಾತಂತ್ರ್ಯವೂ ಪರಸ್ಪರ ವಿರುದ್ಧವಾದವುಗಳಲ್ಲ ಎಂಬುದನ್ನು ಅರಿತುಕೊಳ್ಳುವೆವು. ಯಾವ ತರಹದ ಪ್ರಾರ್ಥನೆಗೆ ಕೂಡಾ ಅವಕಾಶ ಕೊಡದ ನಿರುಪಾಧಿಕವಾದ ಬ್ರಹ್ಮಾತ್ಮಸಮರ್ಪಣೆಯೆಂಬುದೇ (ಪರಮಾರ್ಥ) ಅಂತ್ಯದಲ್ಲಿ ನಮ್ಮ ನಿಗಮನವಾಗಿ ಬಿಡುತ್ತದೆ. ಇದು ಆತ್ಮಾವಧಾನವಲ್ಲದೆ ಬೇರೆಯೇನೂ ಅಲ್ಲ. ಹೀಗೆ ಓಂ ಸಾಧುಗಳು ಶ್ರೇಷ್ಠವಾದ ಕರ್ಮ–ಭಕ್ತಿ–ಜ್ಞಾನಗಳೆಂದರೆ ಬ್ರಹ್ಮಾತ್ಮಸ್ಥವಾಗಿ ಇರುವುದೇ ಅಲ್ಲದೆ ಮತ್ತೇನೂ ಅಲ್ಲ ಎಂಬುದನ್ನು ನಮಗೆ ಮನದಟ್ಟು ಮಾಡಿಕೊಡುತ್ತಾರೆ. ಬ್ರಹ್ಮಾತ್ಮಕತೆಯೇ ನಮ್ಮ ನಿಜಸ್ವರೂಪ ; ಅದರ ಸಾಧನೆ ಆತ್ಮಶೋಧ ಎಂದು ಹೇಳಿ ಅವರು ಶ್ರೀ ರಮಣರ ಮುಂದಿನ ಪದ್ಯ ಪಂಕ್ತಿಗಳನ್ನು ಸಿದ್ಧಮಾಡಿ ತೋರಿಸುತ್ತಾರೆ:

(ಅಹಂಕಾರ) "ತನ್ನುದಯಸ್ಥಳದಲ್ಲಿ
ನೆಲೆ ನಿಲ್ಲಲು ನಿತ್ಯವಾಗಿ ಕಲಿತಲ್ಲಿ
ಅದೇ ಕರ್ಮ ಆ ಕಲಿಯುವ ಪ್ರಯೋಗ
ಅದೇ ಭಕ್ತಿ ಮತ್ತದೇ ಜ್ಞಾನ, ಯೋಗ."

ಉಪದೇಶ ಉಂದಿಯಾರ್ : ಸೊಲ್ಲು ೧೦

"ಕರ್ಮ ಯಾರಿಗೆ? ಭಕ್ತ್ಯಭಾವವದಾರಿಗೋ? ತಾನಾರಿಗೆ?
ಐಕ್ಯ ಶೂನ್ಯತೆ ಯಾರಿಗಾ ಅಜ್ಞಾನ ತಾನಾರಿಗೆ?
ಎಂದು ಕೇಳ್ವುದೆ ಕರ್ಮ, ಭಕ್ತಿ, ಜ್ಞಾನ, ಯೋಗ (ಅದೆಲ್ಲಿಯೂ)
ಬ್ರಹ್ಮದಲಿ ನೆಲೆ ನಿಲ್ವುದೇ ಪರಸತ್ಯವೋ ನಿಜವಾಗಿಯೂ".

ಉಳ್ಳದು ನಾರ್ಪದು ಪುರವಣಿಯಲ್ಲಿಯ ೧೪ನೆಯ ಪದ್ಯ.

ಈ ಪುಸ್ತಕದ ಮೂರು ಅಧ್ಯಾಯಗಳನ್ನೂ ಓದಿ ಮುಗಿಸಿದ ಮೇಲೆ ಈ ಟಿಪ್ಪಣಿಯನ್ನು ಆಳವಾಗಿ ವಿಚಾರ ಮಾಡುವುದು ಓದುಗನಿಗೆ ಬಹಳ ಉಪಯುಕ್ತ.



ಶ್ರೀ ಸಾಧು ಓಂ

‘ಶ್ರೀ ರಮಣಮಾರ್ಗ’ ಓದುವ ಮುನ್ನ.....

ಸದ್ಗುರು ಶ್ರೀ ರಮಣಮಹರ್ಷಿಗಳ ಬೋಧನೆಯನ್ನು ಶಾಸ್ತ್ರವೆಂದು ಭಾವಿಸಿ ಅದರಂತೆ ನಡೆದ, ನುಡಿದ ಮಹಾನುಭಾವರು ಶ್ರೀ ಸಾಧು ಓಂ ಅವರು. ಜಿಜ್ಞಾಸುಗಳ ಅಪೇಕ್ಷೆಯಂತೆ ಅವರು ಬರೆದ ‘ದಿ ಪಾತ್ ಆಫ್ ಶ್ರೀರಮಣ ಪಾರ್ಟ್–೧’ ಮತ್ತು ‘ದಿ ಪಾತ್ ಆಫ್ ಶ್ರೀರಮಣ ಪಾರ್ಟ್–೨’ ಎಂಬ ಎರಡು ಕೃತಿಗಳು ಶ್ರೀರಮಣರ ವಚನಗಳನ್ನು, ಬೋಧನೆಯ ಸಾರವನ್ನು ಅತ್ಯಂತ ಸ್ಪಷ್ಟವಾಗಿಯೂ, ನಿಃಸಂದಿಗ್ಧವಾಗಿಯೂ ವಾಚಕರಿಗೆ ತಲುಪಿಸುವ ಕೃತಿರತ್ನಗಳು.

ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ನೆಲೆಸಿದ್ದ ನನ್ನ ತಂದೆ ಪ್ರೊ. ಬಿ.ಎಚ್. ಶ್ರೀಧರರು ಶ್ರೀರಮಣರನ್ನು ಅಂತರಂಗದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದವರು. ಶ್ರೀ ಸಾಧು ಓಂ ಮತ್ತು ಅವರ ನಿಕಟಾನುವರ್ತಿಗಳಾಗಿದ್ದ ಶ್ರೀ ಧಾಕಪ್ಪಾಜಿ ಅವರೊಂದಿಗೆ ಶ್ರೀಧರರ ನಿರಂತರ ಸಂಪರ್ಕವಿತ್ತು. ೮೦ರ ದಶಕದಲ್ಲಿ ಶ್ರೀ ಸಾಧು ಓಂ ಅವರ ಅಪೇಕ್ಷೆಯಂತೆ ಮೇಲಿನ ಎರಡು ಕೃತಿಗಳನ್ನು ‘ಶ್ರೀರಮಣಮಾರ್ಗ ಭಾಗ–೧’ (೧೯೮೧ರ ಆವೃತ್ತಿ) ಮತ್ತು ‘ಶ್ರೀರಮಣಮಾರ್ಗ ಭಾಗ–೨’ (೧೯೭೦ರ ಆವೃತ್ತಿ) ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಲಾರಂಭಿಸಿದರು. ಸಂಸ್ಕೃತ–ಕನ್ನಡ–ಇಂಗ್ಲೀಷುಗಳಲ್ಲಿ ನುರಿತ ವಿದ್ವಾಂಸರೂ, ಅದಾಗಲೇ ಕನ್ನಡ ಸಾಹಿತ್ಯಕ್ಕೆ ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ನೀಡಿದ್ದ ಕವಿ–ವಿಮರ್ಶಕರೂ ಆಗಿದ್ದ ನನ್ನ ತಂದೆಯವರಿಂದ ಅನುವಾದ ಕಾರ್ಯ ವೇಗವಾಗಿ ಸಾಗಿತು. ಶ್ರೀ ಸಾಧು ಓಂ ಮತ್ತು ಶ್ರೀ ಧಾಕಪ್ಪಾಜಿಯವರೊಂದಿಗಿನ ಚರ್ಚೆ, ವಿಶ್ಲೇಷಣೆಗಳಿಂದ ಅನುವಾದಕ್ಕೆ ನಿಷ್ಕೃಷ್ಟತೆ ದೊರಕಿತು. ಅಂತೆಯೇ ‘ಅನುವಾದ ಸೊಗಸಾಗಿದೆ’ ಎಂಬ ಪ್ರಶಂಸೆ ಕೂಡ ಶ್ರೀ ಧಾಕಪ್ಪಾಜಿಯವರಿಂದ ಲಭಿಸಿತು.

ತದನಂತರ, ಮೊದಲ ಭಾಗವನ್ನು ಶ್ರೀ ಸಾಧು ಓಂ ಅವರ ಅಣತಿಯಂತೆ ಪ್ರಕಟಣೆಗಾಗಿ ‘ಶ್ರೀರಮಣಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಬೆಂಗಳೂರು’ ಸಂಸ್ಥೆಯ ವ್ಯವಸ್ಥಾಪಕ ಶ್ರೀ ಎ.ಆರ್. ನಟರಾಜನ್ ಅವರಿಗೆ ಕಳುಹಿಸಿದರು. ಕೆಲವು ತಿಂಗಳುಗಳ ಬಳಿಕ ಶ್ರೀಧರರು ‘ಶ್ರೀರಮಣಮಾರ್ಗ’ದ ಪ್ರಕಟಣೆಯ ವಿಚಾರ ಏನಾಯ್ತೆಂದು ಶ್ರೀ ನಟರಾಜರನ್ನು ವಿಚಾರಿಸಿದಾಗ ಅವರು ತಮ್ಮ ಮನೆ ಬದಲಾಯಿಸುವಾಗ ಹಸ್ತಪ್ರತಿ ಕಳೆದುಹೋಯಿತೆಂದೂ, ಮತ್ತೊಂದು ನಕಲಿದ್ದರೆ ಕಳುಹಿಸಿರೆಂದೂ ತಿಳಿಸಿದರು. ಆದರೆ ಶ್ರೀಧರರ ಬಳಿ ನಕಲು ಪ್ರತಿ ಇರಲಿಲ್ಲ. ಹೀಗಾಗಿ ತತ್ಕಾಲಕ್ಕೆ ಎಲ್ಲವೂ ಸ್ಥಗಿತವಾಯಿತು.

ಮೊದಲ ಭಾಗದ ಮೂರು ಅಧ್ಯಾಯಗಳ ಮತ್ತು ಎರಡು ಪರಿಶಿಷ್ಟಗಳ ಅನುವಾದ ಹೇಗೋ ಶ್ರೀಧರರ ಹಸ್ತಪ್ರತಿಗಳ ರಾಶಿಯಲ್ಲಿ ಕೆಲವು ಕಾಲಾನಂತರ ಲಭ್ಯವಾದವು. ಎರಡನೆಯ ಭಾಗ ಇನ್ನೂ ಪ್ರಕಟಣೆಗೆ ನೀಡದೇ ಇದ್ದುದರಿಂದ ನಮ್ಮ ಬಳಿಯಲ್ಲೇ

ಇತ್ತು. ಆದರೆ. ಮೊದಲ ಭಾಗದ ೪, ೫, ೬, ೭ ಮತ್ತು ೮, ಈ ಐದು ಅಧ್ಯಾಯಗಳ ಅನುವಾದವಿಲ್ಲದೆ ಪೂರ್ಣರೂಪದಲ್ಲಿ ಕೃತಿಯನ್ನು ಪ್ರಕಟಿಸಲಾಗದ ಅಸಹಾಯಕತೆಯಲ್ಲಿ ಮತ್ತೆ ಕೆಲವು ಕಾಲ ಕಳೆಯಿತು. ಆ ನಡುವೆ ೧೯೯೦ ಏಪ್ರಿಲ್‌ನಲ್ಲಿ ಶ್ರೀಧರರೂ ಶ್ರೀರಮಣರ ಪಾದ ಸೇರಿದರು.

ಇದೀಗ, ಅಂದರೆ ೨೦೧೯ರಲ್ಲಿ, ಪವಾಡವೆಂಬಂತೆ ಶ್ರೀಧರರ ಅಂತೇವಾಸಿ ಶಿಷ್ಯರೂ, ಕುಟುಂಬಮಿತ್ರರೂ, ರಮಣದರ್ಶನ ಜಿಜ್ಞಾಸುಗಳೂ ಆದ ಕವಿ–ವಿಮರ್ಶಕ–ವಿದ್ವಾಂಸ ಪ್ರೊ. ಎಚ್.ಆರ್. ಅಮರನಾಥರು ನಮ್ಮ ವಿನಂತಿಯಂತೆ ಅಲಭ್ಯವಾಗಿದ್ದ ಮೊದಲ ಭಾಗದ ಐದು ಅಧ್ಯಾಯಗಳನ್ನು ಅನುವಾದಿಸಿಕೊಟ್ಟು ಕೃತಿಗೆ ಪೂರ್ಣರೂಪ ನೀಡಿ ಉಪಕರಿಸಿದ್ದಾರೆ. ಅವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು ಸಲ್ಲುತ್ತವೆ.

ಹೀಗೆ ಪ್ರಕಟಣೆಗೆ ಮತ್ತೆ ಸಜ್ಜಾದ 'ಶ್ರೀರಮಣಮಾರ್ಗ'ದ ಎರಡೂ ಭಾಗಗಳನ್ನು ಈಗಾಗಲೇ ಶ್ರೀಧರರ ಸಮಗ್ರ ಸಾಹಿತ್ಯವನ್ನು ೬ ಸಂಪುಟಗಳಲ್ಲಿ ಅಂದವಾಗಿ ಪ್ರಕಟಿಸಿಕೊಟ್ಟ 'ತೇಜು ಪಬ್ಲಿಕೇಷನ್ಸ್, ಬೆಂಗಳೂರು' ಪ್ರಕಾಶನ ಸಂಸ್ಥೆಯ ಮಾರ್ಗದರ್ಶಿ ಶ್ರೀ ರಾಮನಾಥ್ ಅವರು ಅದೇ ಉತ್ಸಾಹದಿಂದ, ಅಷ್ಟೇ ಅಂದವಾಗಿ ಪ್ರಕಟಿಸಿದ್ದಾರೆ. ಅವರಿಗೆ ನಮ್ಮ ಹಾರ್ದಿಕ ನಮನಗಳು.

ಶ್ರೀ ಸಾಧು ಓಂ ಮತ್ತು ಶ್ರೀ ಧಾಕಪ್ಪಾಜಿಯವರ ಸಮ್ಮತಿ, ಪ್ರಶಂಸೆಗಳಿಗೆ ಪಾತ್ರವಾಗಿದ್ದ ಈ ಅನುವಾದವನ್ನು ತಿರುವಣ್ಣಾಮಲೈನ – ಶ್ರೀ ರಮಣಕ್ಷೇತ್ರ, ಕಣ್ವಾಶ್ರಮ ಟ್ರಸ್ಟ್ – ಈಗಿನ ಅಧಿಕಾರಿ ಶ್ರೀ ನಾರಾಯಣನ್ ಅವರ ಅವಗಾಹನೆಗೂ ತರಲಾಗಿದೆ. ದಶಕಗಳ ಬಳಿಕ 'ಶ್ರೀ ರಮಣಮಾರ್ಗ'ದ ಎರಡೂ ಭಾಗ ಬೆಳಕಿಗೆ ಬಂದು ಶ್ರೀರಮಣ ವಚನಗಳು ಕನ್ನಡಹೃದಯಗಳನ್ನು ತಲುಪುತ್ತಿರುವುದು ಶ್ರೀರಮಣಾನುಗ್ರಹವಲ್ಲದೆ ಬೇರೆಯಲ್ಲ!

ರಾಜಶೇಖರ ಹೆಬ್ಬಾರ

ಪರಿವಿಡಿ

ಶ್ರೀ ರಮಣಮಾರ್ಗ

ಭಾಗ – ೧

[‘ಆತ್ಮಶೋಧ’ದ ಮಾರ್ಗದ ಬಗೆಗೆ ಶ್ರೀ ರಮಣಮಹರ್ಷಿಗಳು
ಕೊಟ್ಟ ಉಪದೇಶಗಳ ವಿವರಣೆ]

ಓಂ ನಮೋ ಭಗವತೇ ಶ್ರೀ ಅರುಣಾಚಲ ರಮಣಾಯ

ಶ್ರೀ ರಮಣರ ಒಂದು ಸಂಕ್ಷಿಪ್ತ ಜೀವನ ಚರಿತ್ರೆ

"ಎಲ್ಲ ಗ್ರಹ ತಾರಾದಿ ಗೋಲಗಳಲ್ಲಿ ಮುಕ್ತಿಯನ್ನು ಪಡೆಯಲು ತಕ್ಕದ್ದಾಗಿರುವುದು ಈ ಭೂಮಿಯೊಂದೇ ; ಭೂಮಿಯ ಎಲ್ಲ ದೇಶಗಳಲ್ಲಿ ಭಾರತವೇ ಅತ್ಯುತ್ತಮ ದೇಶ; ಭಾರತದ ಪುಣ್ಯ ಕ್ಷೇತ್ರಗಳಲ್ಲಿ ವಿವಿಧ ದಿವ್ಯ ಶಕ್ತಿಗಳು ಪ್ರಕಟವಾಗಿ ಕೆಲಸ ಮಾಡುತ್ತಿವೆ ; ಅವುಗಳಲ್ಲಿ ಅರುಣಾಚಲವು ಅಗ್ರೇಸರ !"

"ಯಾರು ಅಲ್ಲಿ ಹುಟ್ಟಿದ್ದರೋ ಯಾರು ಅದನ್ನು ನೋಡುವರೋ ಯಾರು ಅಲ್ಲಿ ಸಾಯುವರೋ ಅವರಿಗೆ ಮುಕ್ತಿಯನ್ನು ದಯಪಾಲಿಸುವ ಪುಣ್ಯ ಕ್ಷೇತ್ರಗಳೆಂದರೆ ತಿರುವಾರೂರ್, ಚಿದಂಬರಂ ಮತ್ತು ಕಾಶಿ : ಆದರೆ ಅರುಣಾಚಲವು ತನ್ನ ಬಗೆಗೆ ಆಲೋಚಿಸಿದರೆ ಸಾಕು ಅಂಥ ಆಲೋಚಕರಿಗೆ ಮುಕ್ತಿಯನ್ನು ದಯಪಾಲಿಸುತ್ತದೆ !"

ಶ್ರೀ ಅರುಣಾಚಲವೆಣ್‌ಬಾ ನುಡಿ ೧, ೨ :

ಅರುಣಾಚಲವು ಭೂಮಿಯ ಹೃದಯ. ಅದು ಶಿವ ಪ್ರಭುವಿನ ಆದಿಲಿಂಗ ಸ್ವರೂಪವುಳ್ಳದ್ದು. ಅದು ಜ್ಞಾನಾಗ್ನಿಯ ಪರ್ವತ. ಬ್ರಹ್ಮ–ವಿಷ್ಣುಗಳು ಮೋಹಾಂಧರಾದಾಗ ಅವರಿಗೂ ಅರುಣಾಚಲವು ಜ್ಞಾನ ಗುರುವಾಗಿ ಅವರ ಅಹಂಕಾರಗಳನ್ನು ನಾಶ ಮಾಡಿ ನಿಜಜ್ಞಾನವನ್ನು ಅವರಿಗೆ ಬೋಧಿಸಿತು. ಕಾಲದಾದಿಯಿಂದ ಲೋಕತ್ರಯಕ್ಕೆಂದು ಜ್ಞಾನಗುರುಪೀಠವನ್ನಿಟ್ಟುಕೊಂಡಿದ್ದರಿಂದ ಈಗಲೂ ಇಡೀ ಜಗತ್ತಿಗೆ ಉಪದೇಶಮಾಡಲೆಂದು ಸದ್‌ಗುರು ಶ್ರೀರಮಣರ ರೂಪದಲ್ಲಿ ಅರುಣಾಚಲವು ವ್ಯಕ್ತವಾಯಿತು. ಅಲ್ಲದೆ, ಅದು ತಾನು ಆದಿಗುರು ದಕ್ಷಿಣಾಮೂರ್ತಿ ಎಂಬುದನ್ನು ಅಪ್ರತ್ಯಕ್ಷವಾಗಿ ಸೂಚಿಸಲೆಂದು (ದಕ್ಷಿಣಾಮೂರ್ತಿಯು ೧೬ ವರ್ಷದ ಬಾಲಕನಾಗಿ ಅವತರಿಸಿದ್ದನು). ಅರುಣಾಚಲಕ್ಕೆ ಬಂದು, ೧೬ ವರ್ಷ ವಯಸ್ಸಿನಲ್ಲಿ ಗುರುಪೀಠವನ್ನು ಏರಿತು. ಅಲ್ಲಿ ಅದು ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ಬಾಳಿ ಜನನ–ಮರಣವೆಂಬ ರೋಗದಿಂದ ಅಸಂಖ್ಯಾತ ಜನರನ್ನು ಪಾರುಮಾಡಿತು.

ಭಗವಾನ್ ಶ್ರೀ ರಮಣರೆಂದು ಸಾಮಾನ್ಯವಾಗಿ ಜನರು ಮೇಲೆ ಹೇಳಿದ ಮಹಾ ಪುರುಷರನ್ನು ಕರೆಯುವುದುಂಟು. ಪೂರ್ವೋಕ್ತ ಪರ್ವತವನ್ನು ಆ ಮಹಾಪುರುಷರು "ಅರುಣಾಚಲ ರಮಣ" ಎಂದು ಕರೆದಿದ್ದಿದೆ. ಇದನ್ನು ಶ್ರೀ ರಮಣರ "ಅರುಣಾಚಲ ಅಕ್ಷರಮಣ ಮಾಲೈ" ಎಂಬ ಸ್ತೋತ್ರದ ಕೊನೆಯ ನುಡಿಯಲ್ಲಿ ನೋಡಬಹುದು. "ಆತ್ಮ ವಿದ್ಯಾಕೀರ್ತನಂ" ಎಂಬ ತಮ್ಮ ಕೃತಿಯ ೫ ನೆಯ ನುಡಿಯಲ್ಲಿ[೧] ಅವರು ಪರವಸ್ತುವೆಂದು ತಾವು ಅನುಭವದಿಂದ ಕಂಡುಕೊಂಡ ಪ್ರತ್ಯಗಾತ್ಮವು ಅರುಣಾಚಲವೇ ಎಂದಿರುವುದೂ

೧. ಈ ನುಡಿಯಲ್ಲಿ ಶ್ರೀ ರಮಣರು ಬಳಸಿದ ಮೂಲ ಶಬ್ದಗಳು "ಅಣ್ಣಾಮಲೈಯನ್ ಆಣ್ಮ" ಎಂದರೆ– ಪರಮ ಆತ್ಮವನ್ನು ಅಣ್ಣಾಮಲೈ ಎನ್ನುತ್ತಾರೆ – ಅಥವಾ – ಅಣ್ಣಾಮಲೈ ಎಂಬುದು ನನ್ನ ಪರಮ ಆತ್ಮ.

ತಮ್ಮ ನಿಜ ಸ್ವರೂಪದ ಬಗೆಗೆ ಪ್ರಶ್ನಿಸಿದ ಶಿಷ್ಯನೊಬ್ಬನಿಗವರಿತ್ತ, ಉತ್ತರದಲ್ಲಿ "ಈ ಅರುಣಾಚಲ ರಮಣನೇ ಪರಮಾತ್ಮನು; ಅವನೇ ವಿಷ್ಣುಪ್ರಭೃತಿ ಸರ್ವಾತ್ಮಗಳ ಹೃದಯ ಕಮಲ ಸಾರದಲ್ಲಿ ಚೈತನ್ಯವಾಗಿ ಆನಂದದಿಂದ ಪ್ರಕಾಶಿಸುತ್ತಿದ್ದಾನೆ" ಎಂದಿರುವುದೂ ರಹಸ್ಯ ಸ್ಫೋಟ ಮಾಡುತ್ತದೆ. ಆ ಸ್ಫುಟಿತ ರಹಸ್ಯವೆಂದರೆ ಅರುಣಾಚಲನವು ರಮಣರು, ರಮಣರು ಅರುಣಾಚಲ' ಅವರಿಗೆ ತಕ್ಕ ಹೆಸರೆಂದರೆ ಶ್ರೀ ಅರುಣಾಚಲ ರಮಣ ಎಂಬುದೇ ಆಗಿದೆ. ಆದುದರಿಂದ ಓಂ. ನಮೋ ಭಗವತೇ ಶ್ರೀ ಅರುಣಾಚಲ ರಮಣಾಯ ![೨]

ಜನ್ಮಾಂತರಗಳ ಮೂಲಕ ಆ ಸರ್ವೋತ್ತಮ ಪದಾರ್ಥವು ಸಾವಕಾಶವಾಗಿ ಜೀವಾತ್ಮಗಳನ್ನು ಆತ್ಮಜ್ಞಾನಸಿದ್ಧಿಗೆ ತಕ್ಕವುಗಳನ್ನಾಗಿ ಪಕ್ವಗೊಳಿಸುತ್ತದೆ. ಕೊನೆಯಲ್ಲಿ, ಅವು ಸಂಪೂರ್ಣ ಪರಿಪಕ್ವವಾದ ಮೇಲೆ ತಾನು ಸದ್ಗುರು ರೂಪದಲ್ಲಿ ಅವತರಿಸಿ ಅಂಥ ಪಕ್ವಾತ್ಮಗಳೆಲ್ಲವನ್ನೂ ತನ್ನ ದಿವ್ಯ ಪಾದಗಳೆಡೆಗೆ ಆಕರ್ಷಿಸಿಕೊಂಡು ಅವರಿಗೆ ಅದ್ವೈತ ಐಕ್ಯಭಾವವನ್ನು ವರವನ್ನಾಗಿ ಕೊಡುವುದು : ಆ ಪಕ್ವಾತ್ಮಗಳು ಭೂಮಿಯ ಯಾವ ಪ್ರದೇಶದಲ್ಲಿ ಹುಟ್ಟಿದ್ದರೂ ಪರವಾಗಿಲ್ಲ. ಇದು ದಿವ್ಯಯೋಜನೆ. ಸದ್ಗುರು ಅವತರಿಸುವಾಗ ಅನೇಕ ವಿಶಿಷ್ಟ ಲಕ್ಷಣಗಳು ಸ್ಪಷ್ಟವಾಗುತ್ತವೆ. ಆ ಲಕ್ಷಣಗಳಿಂದ ವಿವೇಕಿಗಳು ಆತನೇ ಸದ್ಗುರು ಎಂದು ತಿಳಿದುಕೊಳ್ಳಬಲ್ಲವರಾಗುವರು.

ಸನಕಾದಿ ಚತುರ್ಮುನಿಗಳು ಅತ್ಯಂತ ಹೆಚ್ಚು ಪರಿಪಕ್ವ ಆತ್ಮಗಳಾಗಿದ್ದರು. ಬ್ರಹ್ಮ, ವಿಷ್ಣು, ಶಿವ ಎಂಬ ಪರಮಾತ್ಮಾವತಾರಗಳಲ್ಲಿ ಯಾರನ್ನೂ ಗುರುವೆಂದು ಸ್ವೀಕರಿಸಲು ಅವರು ಇಷ್ಟಪಡಲಿಲ್ಲ. ಸದ್ಗುರು ಶೋಧಕ್ಕಾಗಿ ಅವರು ತಿರುಗಿ ತಿರುಗಿ ಮುದುಕರಾದರು. ಆಗ ಗುರುರಹಿತನಾದ ಶ್ರೀ ದಕ್ಷಿಣಾಮೂರ್ತಿಯು ಪ್ರತ್ಯಗಾತ್ಮ ಮಗ್ನನಾಗಿದ್ದನು. ಅವನು ೧೬ ವರ್ಷ ವಯಸ್ಸಿನವನಾಗಿ ಆಲದ ಮರದ ಕೆಳಗೆ ಕುಳಿತಿದ್ದನು. ದಕ್ಷಿಣಾಭಿಮುಖನಾಗಿ ಆತನು ಚಿನ್ಮುದ್ರೆಯಲ್ಲಿದ್ದನು. (ಚಿನ್ಮುದ್ರೆಯೆಂದರೆ ಜ್ಞಾನಸೂಚಕವಾದ ಹಸ್ತಭಂಗಿ). ಆತನ ಪ್ರಸನ್ನ ಸನ್ನಿಧಿಗೆ ಬಂದಾಗ ಅವರು ಆತನೆಡೆಗೆ ಆಕೃಷ್ಟರಾಗಿ "ಈತನೇ ನಿಜವಾದ ಸದ್ಗುರು" ಎಂದು ಗುರುತಿಸಿದರು : ಅವರ ಜ್ಞಾನಗ್ರಹಣಶಕ್ತಿ ಅಷ್ಟು ಪರಿಪಕ್ವವಾಗಿತ್ತು. ಅವರು ಅವನ ಪಾದಸನ್ನಿಧಿಯಲ್ಲಿ ಕುಳಿತು ಅವನ ಮೌನೋಪದೇಶದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡರು. ಮೂಲಗುರುವಾದ ಶ್ರೀ ದಕ್ಷಿಣಾಮೂರ್ತಿಯು ಹೇಗೆ ತನಗೆ ತಾನೇ ಗುರುವಾಗಿದ್ದನೋ (ಆತ್ಮಕ್ಕೆ ಆತ್ಮವೇ ಹೇಗೆ ಗುರುವಾಗಿತ್ತೋ) ಹಾಗೇ ಅವನು ಜಗತ್ರಯಕ್ಕೆ ಗುರುವಾದನು. ಅದೇ ರೀತಿಯಿಂದ ಭಗವಾನ್ ಶ್ರೀ ರಮಣರು ಗುರುರಹಿತರಾಗಿಯೇ ಸರ್ವಲೋಕಗಳಿಗೂ ಗುರುಗಳಾದರು. ಜಗತ್ತಿಗಿಳಿದು ಬಂದ ಮಹಾತ್ಮರಾದ – ಶ್ರೀರಾಮ ಶ್ರೀ ಕೃಷ್ಣರನ್ನೂ ಹಿಡಿದು–ಎಲ್ಲರಿಗೂ ಮನುಷ್ಯರೂಪದ ಒಬ್ಬ ಗುರು ಅಗತ್ಯವಾಗಿದ್ದನೆಂಬುದು ಜಗತ್‌ಪ್ರಸಿದ್ಧ. ಬುದ್ಧನೂ ಅಂಥ ಇತರ ಪರಿಪಕ್ವಾತ್ಮರೂ ಜ್ಞಾನಗುರುವಿಲ್ಲದೆ ಸತ್ ಪದಾರ್ಥದ ಜ್ಞಾನವನ್ನು ಸಾಕ್ಷಾತ್ಕರಿಸಿಕೊಂಡರೆಂಬುದೇನೋ ನಿಜ ; ಆದರೆ ಬುದ್ಧ ಕೂಡಾ ಕಪಟಿಗಳೂ ಕೆಲಸಕ್ಕೆ ಬಾರದವರೂ ಆದ ಅನೇಕ ಗುರುಗಳೆಡೆಗೆ ಹೋಗಿ ಬಹಳ ಸಲ ನಿರಾಶನಾಗಿ ಬಹಳ ವರ್ಷಗಳ ಕಾಲ ಕಠಿನ ಪ್ರಯತ್ನಮಾಡಿದ ಮೇಲೆಯೇ ತನ್ನ ಗುರಿಯನ್ನು ಮುಟ್ಟಿದನು. ಆದರೆ ಭಗವಾನ್ ಶ್ರೀ

---

೨. ಓಂ ಶ್ರೀ ಅರುಣಾಚಲರಮಣರಿಗೆ ನಮ್ಮ ಅಭಿವಾದನ.

ರಮಣರು ತನ್ನಿಂದ ತಾನೇ ತಮ್ಮನ್ನಾಕ್ರಮಿಸಿದ ಮೃತ್ಯುಭಯದಿಂದ ಪ್ರೇರಿತರಾಗಿ, ತಪಸ್ಸು–ಅಧ್ಯಾತ್ಮ ಸಾಧನೆಗಳಿಲ್ಲದೆ, ಕೇವಲ ೧೬ ರ ಪ್ರಾಯದ ಶಾಲಾ ಬಾಲಕನಾಗಿದ್ದಾಗ, ದೇವರೂಪ – ನರರೂಪ ಹೊತ್ತ ಯಾವ ಗುರುವಿನ ನೆರವೂ ಇಲ್ಲದೆ, ಅತ್ಯಲ್ಪ ಕಾಲದಲ್ಲಿ ಆತ್ಮ ಸಾಕ್ಷಾತ್ಕಾರ (ಪರಬ್ರಹ್ಮ ಸಾಕ್ಷಾತ್ಕಾರ)ವನ್ನು ಮಾಡಿಕೊಂಡರು. ಆ ದಿನ ಅವರಲ್ಲಿ ಉದಯಿಸಿದ ಸತ್ಯವಸ್ತುಜ್ಞಾನವು (ಸತ್ ಪದಾರ್ಥದ ನಿರ್ವಿಕಲ್ಪ ಸಮಾಧಿ ಸ್ವರೂಪದ ಅನುಭವವು) ಅವರ ಸಹಜ ಸ್ಥಿತಿಯಾಗಿ ಕಡೆತನಕ ಉಳಿಯಿತು. ಆ ಸ್ಥಿತಿಗೆ ಅನಂತರ ಯಾವ ಅಂಶವನ್ನೂ ಸೇರಿಸಿಲ್ಲ ; ಯಾವ ಅಂಶವನ್ನು ಕಳೆದು ತೆಗೆಯಲೂ ಇಲ್ಲ. ಭಗವಾನ್ ಶ್ರೀ ರಮಣರು ಹೀಗೆ ಇಡೀ ಜಗತ್ತಿಗೆ ಅಗ್ರೇಸರರಾದ ಜ್ಞಾನ ಗುರುಗಳೆಂದು ಪ್ರಕಾಶಿಸುತ್ತಿದ್ದರೂ ಅವರು ನಾಮರೂಪಾತೀತವಾದ ಪರಮೋಚ್ಚ ವಸ್ತುವಿನಿಂದ ನಿಜವಾಗಿಯೂ ಬೇರೆಯಲ್ಲ. ಆದರೂ ನಮ್ಮ ಅಜ್ಞ ದೃಷ್ಟಿಕೋನದ ಮೇರೆಗೆ ಅವರ ದೇಹದ ಬಾಳಿನ ಸ್ಥಿತಿಗತಿಗಳನ್ನು ತೆಗೆದುಕೊಂಡು, ಅವರ ಜೀವನ ಚರಿತ್ರೆಯ ಚಿತ್ರವನ್ನು ನೋಡೋಣ.

ಭಗವಾನ್ ಶ್ರೀ ರಮಣರು ಕ್ರಿ.ಶ. ೧೮೭೯ನೆಯ ಇಸವಿಯ ಡಿಸೆಂಬರ್ ೩೦ನೆಯ ದಿನಾಂಕದಂದು "ಸುಂದರಂ ಅಯ್ಯರ್" ಮತ್ತು "ಅಳಹಮ್ಮಾಳ್" ಎಂಬೀವರ ಎರಡನೆಯ ಮಗನಾಗಿ ಜನಿಸಿದರು. ತಿರುಚುಳಿ ಎಂಬುದು ಅವರ ಜನ್ಮಸ್ಥಳ. ಅದು ಭಾರತದ ಒಂದು ಪ್ರಾಂತವಾದ ತಮಿಳುನಾಡಿನಲ್ಲಿರುವ ಮಧುರಾ ಪಟ್ಟಣಕ್ಕೆ ಆಗ್ನೇಯ ದಿಕ್ಕಿನಲ್ಲಿ ೩೦ ಮೈಲುಗಳ ದೂರದ ಒಂದು ಶಿವಕ್ಷೇತ್ರ. ಆ ಬಾಲಕನಿಗೆ ಅವನ ಮಾತಾಪಿತೃಗಳು "ವೆಂಕಟರಾಮನ್" ಎಂದು ನಾಮಕರಣ ಮಾಡಿದರು. ಆತನ ಅಣ್ಣನ ಹೆಸರು ನಾಗಸ್ವಾಮಿ ತಮ್ಮನ ಹೆಸರು ನಾಗಸುಂದರಂ ; ಮತ್ತು "ಅಲರ್‌ಮೇಲು" ಅವರ ತಂಗಿಯಾಗಿದ್ದಳು.

ತಿರುಚುಳಿ ಮತ್ತು ದಿಂಡುಕ್ಕಲ್ಲುಗಳಲ್ಲಿ ವೆಂಕಟರಾಮನ್ (ವೆಂಕಟರಾಮನು) ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದನು. ಅವನಿಗೆ ೧೨ ವರ್ಷಗಳಾದಾಗ ಅವನ ತಂದೆಯವರು ಮೃತರಾದರು.[೩] ಆತನೂ ಆತನ ಅಣ್ಣನೂ ಮಧುರೆಯಲ್ಲಿದ್ದ ತಮ್ಮ ಚಿಕ್ಕಪ್ಪನ ಮನೆಗೆ ಹೋದರು. ಅಲ್ಲಿ ಅವರು ಅಮೇರಿಕನ್ ಮಿಶನ್ ಹೈಸ್ಕೂಲಿನಲ್ಲಿ ಉಚ್ಚ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಆತನಿಗೆ ಸುಸ್ಪಷ್ಟವೂ ಹರಿತವೂ ಆದ ಬುದ್ಧಿಯೂ ತೀಕ್ಷ್ಣವಾದ ಸ್ಮರಣ ಶಕ್ತಿಯೂ ಇದ್ದರೂ ಆತನವುಗಳನ್ನು ಪಾಠಶಾಲೆಯಲ್ಲಿ ಬಳಸಲಿಲ್ಲವೆಂದು ತೋರುತ್ತದೆ. ಆತನು ತನ್ನ ತರಗತಿಯಲ್ಲಿ ಬರಿಯ ಸಾಮಾನ್ಯ ವಿದ್ಯಾರ್ಥಿಯಾಗಿದ್ದನು. ಆದರೆ ದೇಹಾರೋಗ್ಯ ಚೆನ್ನಾಗಿದ್ದುದರಿಂದ ಆತನು ಕುಸ್ತಿಯಲ್ಲಿ ಅಗ್ರೇಸರನಾಗಿದ್ದನು.

---

೩. ತನ್ನ ತಂದೆಯವರ ಮರಣದ ವಾರ್ತೆಯನ್ನು ಕೇಳಿದ ಮೇಲೆ ವೆಂಕಟರಾಮನು ದಿಂಡುಕಲ್ಲಿನಿಂದ ಅವರನ್ನು ನೋಡಲು ತಿರುಚುಳಿಗೆ ಬಂದನು. "ತಂದೆಯವರು ಇಲ್ಲಿ ಮಲಗಿರುವಾಗ ಅವರು ಹೋದರೆಂದು ಇವರೇಕೆ ಹೇಳುತ್ತಾರೆ?" ಎಂದು ಆತನು ಆಶ್ಚರ್ಯಪಟ್ಟನು. ಆಗ ಕೆಲ ಹಿರಿಯರು, "ಇದು ನಿನ್ನ ತಂದೆಯವರೇ ಆಗಿದ್ದರೆ ಅವರು ನಿನ್ನನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿರಲಿಲ್ಲವೇ? ಆದ್ದರಿಂದ ನೋಡು – ಅವರು ಹೋದರು" ಎಂದು ಅವನಿಗೆ ಹೇಳಿದರು. ಈ ಮಾತು ಆತನಲ್ಲಿ 'ಆ ದೇಹವು ತನ್ನ ತಂದೆಯವರಲ್ಲ' ಎಂಬುದನ್ನು ಎಚ್ಚರಿಸಿರಬಹುದು ; ದೇಹವು ವ್ಯಕ್ತಿಯಲ್ಲ–ಎನ್ನಿಸಿರಬಹುದು. ಆತನ ಹದಿನಾರನೆಯ ವರ್ಷದ ವಯಸ್ಸಿನಲ್ಲಿ ಈ ಬೀಜವು ಹೂವಾಗಿ ಅರಳಿರಬಹುದೆಂದು ನಾವು ಗ್ರಹಿಸಬಹುದಾಗಿದೆ.

ಕಾಲುಚೆಂಡಾಟ, ದಂಡಯುದ್ಧ ಮತ್ತು ಈಜುವುದೇ ಮುಂತಾದ ಚಟುವಟಿಕೆಗಳಲ್ಲಿಯೂ ಆತನು ಅಗ್ರಗಣ್ಯನಾಗಿದ್ದನು. ೧೦ನೆಯ ಇಯತ್ತೆಯ ಪರೀಕ್ಷೆಗೆ ಕುಳಿತುಕೊಳ್ಳುವ ಮೊದಲು ಒಮ್ಮಿಂದೊಮ್ಮೆ ಆತನ ಜೀವನದಲ್ಲಿ ಮಹಾದಿವ್ಯ ಬದಲಾವಣೆಯು ಉಂಟಾಯಿತು. ಈ ದೊಡ್ಡ ಪರಿವರ್ತನವನ್ನು ತರಲೆಂದು ಆತನು ಯಾವ ಶ್ರುತಿಯನ್ನೂ ಓದಲಿಲ್ಲ. ಯಾವ ಗುರುವನ್ನೂ ಆಶ್ರಯಿಸಲಿಲ್ಲ. ಆತ ಆಕಸ್ಮಿಕವಾಗಿ ೬೩ ತಮಿಳು ಸಂತರ ಜೀವನ ಚರಿತ್ರೆಗಳನ್ನೊಳಗೊಂಡ "ಪೆರಿಯ ಪುರಾಣಂ" ಎಂಬ ಗ್ರಂಥವನ್ನು ಓದಿದ್ದೇನೋ ನಿಜ ; ಆದರೆ ಅದು ಸಹ ಆತನ ಆತ್ಮಜ್ಞಾನಕ್ಕೆ (ಆತ್ಮ ಸಾಕ್ಷಾತ್ಕಾರಕ್ಕೆ) ನಿಜವಾದ ಕಾರಣವಾಗಿರಲಿಲ್ಲ. ಹಾಗಾದರೆ ಯಾವುದು ಕಾರಣವಾಗಿರಲು ಸಾಧ್ಯ?

೧೮೯೬ನೆಯ ಇಸವಿಯ ಜುಲೈ ತಿಂಗಳ ನಡುವಿನ ಒಂದು ದಿನ ವೆಂಕಟರಾಮನು ಉಪ್ಪರಿಗೆಯ ಮೇಲಿನ ಒಂದು ಸಣ್ಣ ಕೋಣೆಯಲ್ಲಿ ಒಬ್ಬನೇ ಕುಳಿತಿದ್ದನು. ದೇಹದಲ್ಲಿ ಯಾವ ರೋಗವೂ ಇಲ್ಲದಿದ್ದರೂ ತಾನು ಸಾಯುವೆನೆಂಬ ದೊಡ್ಡ ಹೆದರಿಕೆಯೊಂದು ಅವನಲ್ಲಿ ಉದ್ಭವಿಸಿತು. ಅದು ಕೇವಲ ಕಾಲ್ಪನಿಕ ಅಥವಾ ಮೇಲುಮೇಲಿನ ಹೆದರಿಕೆಯಾಗಿರದೆ ನಿಜವಾದ ಮರಣಭಯವೇ ಆಗಿತ್ತು. ಅದರಿಂದ ಅವನು ಅಶಾಂತ ಮನಸ್ಕನಾಗಲಿಲ್ಲ. ಅದನ್ನು ಅವನು ಯಾರಿಗೂ ಹೇಳಲೂ ಇಲ್ಲ. ಮುಂಬರುವ ಸಾವನ್ನು ಅವನು ಧೈರ್ಯವಾಗಿ ಸ್ವಾಗತಿಸಿದನು ; ಮತ್ತು ಅದನ್ನು ಸೂಕ್ಷ್ಮ ಪರಿಶೀಲನೆಗೆ ಒಳಪಡಿಸಲು ಕಟಿಬದ್ಧನಾದದ್ದಲ್ಲದೆ, ಆ ಪರಿಶೀಲನೆಯ ಫಲಿತವನ್ನು ಶೋಧಿಸಲೂ ಸಿದ್ಧನಾದನು. "ಹೌದು, ಸಾವು ಬಂದಿದೆ ; ಅದು ಬಂದರೆ ಬರಲಿ, ಸಾವೆಂದರೇನು? ಅದು ಯಾರಿಗೆ ಬರುತ್ತದೆ? ನನಗೆ. ನಾನು ಯಾರು? ಸಾಯುವಂಥದು ಯಾವುದು? ಹೌದು, ಸಾಯುವುದು ಈ ಶರೀರ ; ಅದು ಸಾಯಲಿ" ಹೀಗೆ ನಿರ್ಣಯಿಸಿ ಅವನು ತನ್ನ ತೋಳುಗಳನ್ನೂ ಕಾಲುಗಳನ್ನೂ ನೀಡಿಕೊಂಡು ಮಲಗಿದನು. ತುಟಿಗಳನ್ನು ಬಲವಾಗಿ ಮಡಿಸಿಕೊಂಡು, ಉಸಿರಾಡದೆ ಮತ್ತು ಮಾತಾಡದೆ ಆತನು ತನ್ನ ಲಕ್ಷ್ಯವನ್ನು ಬಹಳ ಸೂಕ್ಷ್ಮವಾಗಿ ತನ್ನತ್ತ ತಿರುಗಿಸಿದನು. ಸಾವಿನ ಅನುಭವವಾಯಿತು! ಆಗ ಅವನಿಗೆ ಏನು ತಿಳಿದು ಬಂದಿತು?

"ಸರಿ, ಈ ದೇಹವು ಸತ್ತು ಹೋಗಿದೆ. ಈಗ ಅದನ್ನು ಸ್ಮಶಾನಕ್ಕೆ ಒಯ್ದು ಸುಟ್ಟು ಹಾಕುತ್ತಾರೆ. ಅದು ಬೂದಿಯಾಗುತ್ತದೆ. ಆದರೆ ಈ ಶರೀರದ ನಾಶದೊಡನೆ ನಾನೂ ನಾಶ ಹೊಂದುವೆನೇ? ನಾನು ನಿಜವಾಗಿ ಈ ಶರೀರವೇ ಆಗಿರುವೆನೇ? ಈ ಸಾವಿನಿಂದ ಸ್ಪೃಷ್ಟವಾಗದೆ, ಅದು ಈ ದೇಹವನ್ನು ಹೆಣವಾಗಿ ಪರಿವರ್ತಿಸಿದ್ದರೂ, ಈಗ ಇಲ್ಲಿ ನಾನು ಇನ್ನೂ ಉಳಿದಿದ್ದೇನೆ ಮತ್ತು ಪ್ರಕಾಶಿಸುತ್ತಿದ್ದೇನೆ! ಅಂದ ಮೇಲೆ ನಾನೀ ನಶ್ವರ ಶರೀರವಲ್ಲ. ನಾನೂ ಇದೂ ಬಿನ್ನ. ನಾನು ಅನಶ್ವರ, 'ನಾನು (ಪರಮ ಆತ್ಮ ಅಥವಾ ಬ್ರಹ್ಮ) ಎಲ್ಲ ಪದಾರ್ಥಗಳ ನಡುವೆ ಶರೀರಬದ್ಧನಲ್ಲದ ನಾನೇ ನಿಜವಸ್ತು. ಶರೀರವೂ ಜಗತ್ತೂ ವಿನಾಶಕ್ಕೆ ಪಾತ್ರಗಳು. ಆದರೆ ಶರೀರಾತೀತನಾದ ನಾನು ನಿತ್ಯನಾದ ಪರಮಸತ್ ಪದಾರ್ಥ."

ಈ ನಿಜವಾದ ಆತ್ಮಜ್ಞಾನವು ಆತನಲ್ಲಿ ಸ್ಪಷ್ಟವಾಗಿ ಪ್ರತ್ಯಕ್ಷಾನುಭವದ ರೂಪದಲ್ಲಿ ಹೊಳೆಯಿತು. ಮತ್ತು ಅವನಲ್ಲಿ ಉದಯಿಸಿದ್ದ ಮರಣ ಭಯವು ಮುಂದೆಂದೂ ಬಾರದಂತೆ ಮಾಯವಾಯಿತು. ಅಂದಿನಿಂದ ಈ ಆತ್ಮಾನುಭವ ಸ್ಥಿತಿಯು ಅವನ ಸಹಜಸ್ಥಿತಿಯಾಗಿ ನಿತ್ಯವೂ ಉಳಿಯಿತು, ನಿತ್ಯವೂ ಪ್ರಕಾಶಿಸುತ್ತ ಮುಂಬರಿಯಿತು. ಅದು ದಿಕ್ಕಾಲಾನವಚ್ಛಿನ್ನವೂ

ಹೆಚ್ಚು ಕಡಿಮೆ ಆಗದುದೂ ಆಗಿ ನೆಲೆನಿಂತಿತು. ಆದರೂ ಅನೇಕರು ಶ್ರೀ ರಮಣರು ಚಿಕ್ಕ ವಯಸ್ಸಿನಲ್ಲಿ ತಿರುವಣ್ಣಾಮಲೈಯಲ್ಲಿರುವಾಗ ಉದ್ದೇಶಪೂರ್ವಕವಾಗಿ ತಪಸ್ಸು ಮಾಡುತ್ತಲೋ ಯಾವುದಾದರೂ ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತಲೋ ಇದ್ದುದು ಅನೇಕ ವೇಳೆಗಳಲ್ಲಿ ಕಂಡುಬಂದಿತ್ತೆಂದು ನಂಬಿದ್ದರೂ ಅವರು ಅಂಥ ಕಲ್ಪನೆಗಳೆಲ್ಲವೂ ಅಸತ್ಯವಾದವುಗಳೆಂದು ಸ್ಪಷ್ಟವಾಗಿ ಆಮೇಲೆ ಖಂಡಿಸಿದ್ದಾರೆ. ಅವರೊಮ್ಮೆ "ಮಧುರೆಯಲ್ಲಿ ಪ್ರಕಾಶಿಸಿದ ಸೂರ್ಯನು ತಿರುವಣ್ಣಾಮಲೆಯಲ್ಲಿಯೂ ಹಾಗೇ ಇದ್ದನು ಎಂದು ತಿಳಿದುಬಂದಿತು. ನನ್ನ ಅನುಭವಕ್ಕೆ ಯಾವ ಹೊಸತೂ ಸೇರಿಕೊಳ್ಳಲಿಲ್ಲ ಇಲ್ಲವೆ ಅದರಿಂದ ಯಾವುದನ್ನೂ ಕಳೆದು ತೆಗೆಯಲಿಲ್ಲ" ಎಂದು ಹೇಳಿದ್ದರು.[೪]

ಹೀಗೆ ಹೊರಗಿನ ಯಾವ ಗುರುವೂ ಇಲ್ಲದೆ ಮತ್ತು ಒಳಗಿನ ದೀರ್ಘಕಾಲಿಕವೂ ಕಷ್ಟಕರವೂ ಆದ ಯಾವ ಸಾಧನೆಯೂ ಇಲ್ಲದೆ ಮೊದಲನೆಯ ಯತ್ನದಿಂದಲೇ ಶ್ರೀ ವೆಂಕಟರಾಮರು ಸಹಜಾತ್ಮ ಜ್ಞಾನಸ್ಥಿತಿಯನ್ನು ಪಡೆದರು. ಆ ಸ್ಥಿತಿಯನ್ನು ಉಪನಿಷತ್ತುಗಳೂ ಇತರ ವೇದಾಂತ ಶ್ರುತಿಗಳೂ ಮಾನವ ಜನ್ಮದ ಅದ್ವಿತೀಯ ಹಾಗೂ ಪರಮೋಚ್ಚ ಲಾಭ ಎಂದು ಘೋಷಿಸಿವೆ.

ಈ ಅನುಭವವು (ಆತ್ಮ ಸಿದ್ಧಿಯು) ವೆಂಕಟರಾಮರ ಬಾಹ್ಯ ಜೀವನದಲ್ಲಿಯೂ ಅವರ್ಣನೀಯವೂ ವಿಸ್ತಾರವೂ ಆದ ಬದಲಾವಣೆಗಳನ್ನು ಉಂಟುಮಾಡಿತು. ತಾನು

---

೪. ಇನ್ನೊಂದು ಸಂದರ್ಭದಲ್ಲಿ ೧೯೪೬ ರ ಅಕ್ಟೋಬರ್ ೪ನೆಯ ದಿನಾಂಕದಂದು ಪ್ರೊ.ಡಿ.ಎಸ್.ಶರ್ಮರೆಂಬ ಭಕ್ತರೊಬ್ಬರು 'ನಿಮ್ಮ ಜೀವನದಲ್ಲಿ ಸಾಧನೆಯ ಅವಧಿಯೇನಾದರೂ ಇದ್ದಿತೇ?' ಎಂದು ಕೇಳಿದ್ದಕ್ಕೆ ಶ್ರೀ ರಮಣರು ಕೊಟ್ಟ ಉತ್ತರ ಇಂತಿದೆ :

"ನನಗೆ ಅಂಥ ಅವಧಿಯ ಅರಿವು ಇಲ್ಲ. ನಾನು ಯಾವ ಪ್ರಾಣಾಯಾಮವನ್ನಾಗಲಿ, ಜಪವನ್ನಾಗಲಿ ಮಾಡಲಿಲ್ಲ. ನನಗೆ ಮಂತ್ರಗಳು ತಿಳಿದಿರಲಿಲ್ಲ. ನನಗೆ ಧ್ಯಾನ ಅಥವಾ ಪ್ರಣಿಧಾನಗಳ ಕಲ್ಪನೆ ಇರಲಿಲ್ಲ. ಅನಂತರ, ಅಂಥ ವಿಷಯಗಳ ಬಗ್ಗೆ ಕೇಳಿದ ಬಳಿಕವೂ ಅವುಗಳಿಂದ ನಾನು ಆಕೃಷ್ಟನಾಗಲಿಲ್ಲ. ಈಗಲೂ ನನ್ನ ಮನಸ್ಸು ಅತ್ತ ಮುಖ ಹಾಕಲು ಒಪ್ಪದು. ಸಾಧನೆಗೆ ಪಡೆಯತಕ್ಕ ಒಂದು ವಸ್ತುಬೇಕು ಮತ್ತು ಅದನ್ನು ಪಡೆಯುವ ಒಂದು ಸಾಧನವೂ ಅಗತ್ಯ. ನಮ್ಮಲ್ಲಿ ಆಗಲೇ ಇಲ್ಲದ ಯಾವುದನ್ನು ನಾವು ಪಡೆದುಕೊಳ್ಳಬೇಕಾಗಿದೆ? ಧ್ಯಾನ, ಏಕಾಗ್ರತೆ, ಪ್ರಣಿಧಾನಗಳಲ್ಲಿ ನಾವು ಮಾಡತಕ್ಕದ್ದೆಂದರೆ, ಯಾವುದರ ಆಲೋಚನೆಯನ್ನೂ ಮಾಡದೆ ಶಾಂತವಾಗಿರುವುದು! ಆಗ ನಾವು ನಮ್ಮ ಸಹಜಸ್ಥಿತಿಯಲ್ಲಿರುತ್ತೇವೆ. ಈ ಸಹಜಸ್ಥಿತಿಗೆ ಮೋಕ್ಷ, ಜ್ಞಾನ, ಆತ್ಮ ಮುಂತಾದ ವಿವಿಧ ಹೆಸರುಗಳನ್ನು ಇಡಲಾಗಿದೆ. ನಾನು ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಿದ್ದ ಕಾಲವೊಂದಿತ್ತು. ಅದರಿಂದ ನಾನೇನಾದರೂ ಸಾಧನೆ ಮಾಡುತ್ತಿದ್ದೇನೆಂದು ಅರ್ಥವಲ್ಲ. ಈಗಲೂ ನಾನು ಕೆಲವೇಳೆ ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತೇನೆ. ಆಗ ನಾನು ಯಾವುದಾದರೂ ಸಾಧನೆ ಮಾಡುತ್ತಿದ್ದೇನೆಂದು ಜನರು ತಿಳಿದುಕೊಂಡರೆ ತಿಳಿದುಕೊಳ್ಳಲಿ. ಅದರಿಂದ ನನ್ನಲ್ಲಿ ಯಾವ ವ್ಯತ್ಯಾಸವೂ ಆಗದು. ಯಾವುದಾದರೊಂದು ವಿಸ್ತಾರವಾದ ಸಾಧನೆಯನ್ನು ಮಾಡುವುದರಿಂದ ಪ್ರತ್ಯಗಾತ್ಮವು ಮೇಲಿನಿಂದ ಅವರಲ್ಲಿ ಇಳಿದುಬಂದು, ಬಹಳದೊಡ್ಡ ಪದಾರ್ಥವಾಗಿ ಕಾಣಿಸಿಕೊಂಡು ಅದ್ಭುತ ವೈಭವದಿಂದ ಮೆರೆದರೆ ಆಗ ತಮಗೆ ಸಾಕ್ಷಾತ್ಕಾರವಾಯಿತೆಂದು ಜನರು ತಿಳಿದುಕೊಂಡಿರುವಂತೆ ತೋರುತ್ತದೆ. ಬ್ರಹ್ಮಾತ್ಮವು ಸಾಕ್ಷಾತ್ (ನೇರ). ಆಗಿರಲಿ– ಆದರೆ ಅದಕ್ಕೆ "ಕಾರಃ" (ಮಾಡುವುದು) ಅಥವಾ "ಕೃತಂ" (ಮಾಡಲ್ಪಟ್ಟದ್ದು) ಎಂಬುದಿಲ್ಲ. "ಕಾರಃ" ಎಂಬುದು ಯಾರಾದರೂ ಏನನ್ನಾದರೂ ಮಾಡುವುದನ್ನು ಸೂಚಿಸುತ್ತದೆ. ಆದರೆ ಪ್ರತ್ಯಗಾತ್ಮವು ಪರಮಾತ್ಮವು ಏನನ್ನಾದರೂ ಮಾಡುವುದರಿಂದ ಅನುಭವಕ್ಕೆ ಬರುವುದಿಲ್ಲ. ಏನನ್ನೂ ಮಾಡದಿರುವುದರಿಂದ–ಶಾಂತವಾಗಿರುವುದರಿಂದ ಮತ್ತು ಕೇವಲ ತಾನೇ ತಾನಾಗಿರುವುದರಿಂದ ಅನುಭವಕ್ಕೆ ಬರುತ್ತದೆ!"

ನಿತ್ಯ, ಪೂರ್ಣಸತ್ಯ, ದೇಹೇತರ ಎಂಬುದನ್ನು ಅಂದಿನಿಂದ ಅವರು ಅನುಭವಿಸಿದರು. ಸಾಮಾನ್ಯಜನರ ಜೀವನಕ್ಕೆ ಅವರದು ಅಸಂಗತವೂ ಅದ್ಭುತವೂ ಹೊಸತೂ ಆಗಿ ಪರಿವರ್ತನೆ ಹೊಂದಿತು. ಸಾಮಾನ್ಯರಿಗೆ ಅವರ ಆ ಜೀವನದ ಅರ್ಥವೂ ಆಗಲಿಲ್ಲ. ಅವರದನ್ನು ಅನುಸರಿಸುವುದಂತೂ ದೂರವೇ ಉಳಿಯಿತು. ಅವರು ಎಷ್ಟು ಪ್ರಯತ್ನಿಸಿದರೂ ಅಷ್ಟೇ.

ಈ ಅನುಭವವಾದ ಅನಂತರ ಶಾಲಾ ಪಾಠಗಳಲ್ಲಿ ಮೊದಲಿದ್ದ ಅಲ್ಪಾಸಕ್ತಿಯೂ ಶ್ರೀ ವೆಂಕಟರಾಮನ್‌ರಿಂದ ಹೊರಟು ಹೋಯಿತು. ಮಿಕ್ಕವರ ಸಂತೋಷಕ್ಕಾಗಿ ಅವರು ಸುಮ್ಮನೆ ಶಾಲೆಗೆ ಹೋದರು. ಆಟಗಳಲ್ಲಿ ಹಿಂದೆ ಅವರಿಗಿದ್ದ ಅಷ್ಟೆಲ್ಲಾ ಆಸಕ್ತಿಯೂ ಪೂರ್ಣವಾಗಿ ಅವರಿಂದ ಹೊರಟುಹೋಯಿತು. ಸ್ನೇಹಿತರ ಹಾಗೂ ಬಂಧುಗಳ ಬಗೆಗಿದ್ದ ಪ್ರೀತಿ–ಸಂಸರ್ಗಗಳೂ ಅವರಲ್ಲಿ ಒಣಗಿ ಹೋದವು. ಆಹಾರದ ಮತ್ತು ಇತರ ಪ್ರಾಪಂಚಿಕ ಚಟುವಟಿಕೆಗಳ ಮೇಲಿದ್ದ ಅವರ ಮೋಹ–ಮಮತೆಗಳೂ ಮಾಯವಾದವು. ನ್ಯಾಯಕ್ಕಾಗಿ ಹಿಂದೆ ಯಾವಾಗಲೂ ಹೋರಾಡುತ್ತಿದ್ದ ವೆಂಕಟರಾಮನ್‌ರು ಈಗ ಉದಾಸೀನರಾಗಿ ನ್ಯಾಯಾನ್ಯಾಯಗಳ ಯಾವ ಬಗೆಗೂ ಅವರು ಪ್ರತಿಕ್ರಿಯೆ ತೋರಿಸದಾದರು. ಯಾರಾದರೂ ಬೈದರೆ ಅದಕ್ಕೆ ಪ್ರತಿಯಾಗಿ ಚೆನ್ನಾಗಿ ಹೊಡೆದು ಕಳಿಸುತ್ತಿದ್ದ ಅವರ ಸ್ವಭಾವ ಬದಲಾಗಿ ಹೋಯಿತು. ಅದಕ್ಕೀಗ ಅವರ ಪ್ರತಿಕ್ರಿಯೆಯೆಂದರೆ, ಇನಿ ನಗೆಯ ಕ್ಷಮಾಶೀಲದ ಮತ್ತು ಉದಾಸೀನತೆಯ ಮುದ್ರೆಗಳು ಅವರ ಮುಖದ ಮೇಲೆ ಕಾಣಿಸಿಕೊಳ್ಳುವುದಷ್ಟೇ ; ಅವರ ಉತ್ತರ ಅದೇ ಆಯಿತು !

ಎಂಥ ಆಶ್ಚರ್ಯಕರ ಪರಿವರ್ತನೆ ! ಆತ್ಮಜ್ಞಾನವು ಶ್ರೀ ವೆಂಕಟರಾಮನ್‌ರನ್ನು ಪರಿಪೂರ್ಣ ಸಾಧುಗಳನ್ನಾಗಿ ಪರಿವರ್ತಿಸಿತು. ಪ್ರೀತಿ, ಅಹಿಂಸೆ, ಸಹನೆ, ದಯೆ, ಕ್ಷಮೆ, ಇಂದ್ರಿಯ ನಿಯಂತ್ರಣ (ನಿಗ್ರಹ), ನಮ್ರತೆ ಮತ್ತು ನಿರ್ಭೀತಿ ಎಂಬಂಥ ಎಲ್ಲ ದಿವ್ಯಗುಣಗಳೂ ಸ್ವಾಭಾವಿಕವಾಗಿಯೂ ಪರಿಪೂರ್ಣವಾಗಿಯೂ ಅವರಲ್ಲಿ ನೆಲೆಸಿದವು. ಅವು ಹಾಗೆ ನೆಲೆಸಿದ್ದು ಅಭ್ಯಾಸಬಲದಿಂದಲ್ಲ – ಆತ್ಮಜ್ಞಾನದ ಫಲವಾಗಿ. ಅವರಿಗೆ ಪ್ರಾಪಂಚಿಕ ಚಟುವಟಿಕೆಯ ಬಾಳು ಅರ್ಥಹೀನವಾಯಿತು, ಒಣ ಒಣ ಎನ್ನಿಸಿತು, ಅವಾಸ್ತವವೆನ್ನಿಸಿತು; ಸ್ವಪ್ನದಿಂದ ಎಚ್ಚೆತ್ತವರಿಗೆ ಹೇಗೋ ಹಾಗೆ ನಿರುಪಯುಕ್ತವಾದವು, ಶೂನ್ಯವೂ ಅಸಹಜವೂ ಆಗಿ ತೋರಿದವು. ಅವರು ಪದೇ ಪದೇ ಏಕಾಕಿಯಾಗಿರತೊಡಗಿದರು ; ಆತ್ಮದಲ್ಲಿಯೇ ಮುಳುಗಿ ಅಭಿವ್ಯಕ್ತವಾಗತೊಡಗಿದರು. ಹಿಂದಿನ ವೆಂಕಟರಾಮರು ಸತ್ಯವಾಗಿ ಅಲ್ಲಿರಲಿಲ್ಲ ಮತ್ತು ಭಗವಾನ್ ರಮಣರು ಮಾತ್ರ ಅಲ್ಲಿ ಪ್ರಕಾಶಿಸಿದರು !

ದಿಂಡುಕಲ್ಲಿನಲ್ಲಿ ವೆಂಕಟರಾಮನ್‌ರು ಓದುತ್ತಿದ್ದಾಗ ಅವರಿಗೆ ೧೨ ವರ್ಷಗಳ ವಯಸ್ಸಾಗಿತ್ತು. ಆಗಲೇ ಆತ್ಮ ಮಗ್ನತೆಯ ಸೂಚನೆಯನ್ನು ಒಂದು ಘಟನೆ ಕೊಟ್ಟಿತ್ತು. ಹಾಗೆ ನಡೆದ ಘಟನೆಯನ್ನು ಅವರ ಸುತ್ತಮುತ್ತಲಿದ್ದವರು ಅದರ ಪ್ರಾಮುಖ್ಯ ಹಾಗೂ ಅಮೂಲ್ಯತೆಗಳ ದೃಷ್ಟಿಯಿಂದ ಗುರುತಿಸಲಿಲ್ಲ ; ಒಂದು ದಿನ ಅವರ ಸಂಬಂಧಿಕರೆಲ್ಲರೂ ಹೊರಗೆ ಹೋಗಿದ್ದಾಗ ಮನೆಗೆ ಒಳಗಿನಿಂದ ಬೀಗ ಹಾಕಿ, ವೆಂಕಟರಾಮನ್‌ರು ತಮ್ಮ ಹಾಸಿಗೆಯ ಮೇಲೆ ಮಲಗಿದ್ದರು. ಅವರು ತಿರುಗಿ ಬಂದಾಗ ಬಾಗಿಲನ್ನು ಬಡಿದು ಜೋರಾಗಿ ಅವರನ್ನು ಕರೆದರೂ ಬಾಗಿಲು ತೆರೆಯದಾಯಿತು. ಇನ್ನೊಂದು ಕಡೆಯಿಂದ

ಮನೆಯೊಳಗೆ ಹೊಕ್ಕು ಅವರು ವೆಂಕಟರಾಮನ್‌ರನ್ನು ಅಲುಗಾಡಿಸಿ, ಉರುಳಿಸಿ, ಬಲವಾಗಿ ಮೈಮೇಲೆ ಹೊಡೆದು ಗಾಢ ನಿದ್ರೆಯಿಂದ ಎಬ್ಬಿಸಲು ಪುನಃ ಪ್ರಯತ್ನ ಮಾಡಿದರು. ಆದರೆ ಎಲ್ಲವೂ ವ್ಯರ್ಥವಾಯಿತು. ವೆಂಕಟರಾಮರು ಏಳಲೇ ಇಲ್ಲ. ಕೆಲಹೊತ್ತಿನ ಮೇಲೆ ಅವರು ತಾವೇ ಎಚ್ಚೆತ್ತರು. ಅಲ್ಲಿ ಸೇರಿದ್ದ ಜನರು "ಕುಂಭಕರ್ಣನ[೫] ನಿದ್ರೆ!" ಎಂದು ಹೇಳಿ ಆಶ್ಚರ್ಯಪಟ್ಟರು. ಆದರಾಸ್ಥಿತಿಯು ತಮೋಮಯವಾದ ನಿದ್ರೆಯೂ ಆಗಿರಲಿಲ್ಲ, ಮೂರ್ಛೆಯೂ ಆಗಿರಲಿಲ್ಲ. ಅದು ವಾಸ್ತವಿಕವಾಗಿ ಸಮಾಧಿ ಸ್ಥಿತಿಯಾಗಿತ್ತು. ಬಹಳ ವರ್ಷಗಳ ಅನಂತರ ಒಮ್ಮೆ ಶ್ರೀ ರಮಣರು ಆ ಸ್ಥಿತಿಯನ್ನು ಕುರಿತು, "ಮಾಡಿ ಮಿಕ್ಕ[೬] ಫಲಿತಾಂಶವೀಗ ಪುನಃ ಶುರುವಾಗಿದೆ ; ಅದರ ಫಲವಾಗಿಯೇ ಅವಧಾನವು ಯಾವಾಗಲೂ ಮೂಲಾತ್ಮದಲ್ಲಿಯೇ ಇತ್ತು." ಎಂದು ಉದ್ಗರಿಸಿದರು. ವೆಂಕಟರಾಮನ್‌ರು ತಮ್ಮ ಅಭ್ಯಾಸದಲ್ಲಿದ್ದ ಎಲ್ಲ ಆಸಕ್ತಿಯನ್ನೂ ಕಳೆದುಕೊಂಡುದರಿಂದ ಅವರ ಉಪಾಧ್ಯಾಯರು ಅವರಿಗೆ ಶಿಕ್ಷೆ ವಿಧಿಸಲಾರಂಭಿಸಿದರು. ಅವರಲ್ಲಾದ ದೊಡ್ಡ ಬದಲಾವಣೆಯನ್ನು ನೋಡಿ ಅಣ್ಣ ನಾಗಸ್ವಾಮಿ ಕೂಡ ಸಿಟ್ಟಿಗೆದ್ದನು. ವೆಂಕಟರಾಮನ್‌ರು ಆತ್ಮಮಗ್ನರಾಗಿದ್ದುದನ್ನು ಕಂಡಾಗಲೆಲ್ಲಾ ಅವನು ಅವರನ್ನು ಮೂದಲಿಸುತ್ತಿದ್ದನು : "ಎಂಥ ಮಹಾಮುನಿಯಯ್ಯಾ, ದೊಡ್ಡ ಯೋಗೀಶ್ವರನಿವ" ಎಂದು. ಆದರೆ ಶ್ರೀ ವೆಂಕಟರಾಮನ್‌ರಿಗೆ ಸತ್‌ಪದಾರ್ಥದ ಸ್ಪಷ್ಟವಾದ ತಿಳುವಳಿಕೆಯಿದ್ದುದರಿಂದ ಅವರು ಅಚಲಿತರಾಗಿದ್ದು ಇಂಥ ಯಾವುದನ್ನೂ ಲೆಕ್ಕಿಸುತ್ತಿರಲಿಲ್ಲ. ವೆಂಕಟರಾಮರು ಕಲಿಯಲಾಗದಿದ್ದ ವ್ಯಾಕರಣಪಾಠವೊಂದನ್ನು ಮೂರು ಸಲ ಬರೆದು ತೋರಿಸೆಂದು ಅವರ ಉಪಾಧ್ಯಾಯರು ವಿಧಿಸಿದರು.

ಮಾರನೆಯ ದಿನ ೧೮೯೬ ನೆಯ ಅಗಸ್ಟ್ ೨೯ರ ಶನಿವಾರವಾಗಿತ್ತು. ಮೂರು ಸಲ ಬರೆಯಲು ವಿಧಿಸಿದ ವ್ಯಾಕರಣ ಪಾಠವನ್ನು ಶ್ರೀ ರಮಣರು ಎರಡು ಸಲ ಮಾತ್ರ ಬರೆದು ಮುಗಿಸಿದ್ದರು. ಅಷ್ಟಕ್ಕೇ ಅವರಿಗೆ ಆ ಕೆಲಸದ ಬಗ್ಗೆ ಜುಗುಪ್ಸೆಯುಂಟಾಗಿತ್ತು. ಅದು ನಿರುಪಯುಕ್ತ ಎನ್ನಿಸಿತ್ತು. ಸೀಸದ ಕಡ್ಡಿಯನ್ನೂ ಪಟ್ಟಿಯನ್ನೂ ತೆಗೆದೆಸೆದು ಅವರು ಕುಳಿತು ಕಣ್ಣು ಮುಚ್ಚಿ ಆತ್ಮನಿಷ್ಠರಾದರು. ಆತ್ಮಾನುಭವದಲ್ಲಿ ಮಗ್ನರಾದರು. ಇದನ್ನು ನೋಡಿ ಹತ್ತಿರದಲ್ಲಿ ಕುಳಿತಿದ್ದ ಅಣ್ಣ ನಾಗಸ್ವಾಮಿಗೆ ಖೇದವುಂಟಾಯಿತು. ತನ್ನ ತಮ್ಮನನ್ನು ತಿದ್ದುವುದಕ್ಕಾಗಿ ಆತನು ಕರುಣೆಯಿಂದಲೂ ಕೋಪದಿಂದಲೂ "ಹೌದು ಇಂಥವನಿಗೆ ಇದೆಲ್ಲಾ ಏಕೆ?" ಎಂದು ಉದ್ಗರಿಸಿದನು. ಅಂಥ ಟೀಕೆಗೆ ಸಾಮಾನ್ಯವಾಗಿ ಉದಾಸೀನರಾಗಿರುತ್ತಿದ್ದ ಶ್ರೀ ರಮಣರಿಗೆ ಆ ಸಂದರ್ಭದಲ್ಲಿ ಆ ಶಬ್ದಗಳು ಅರ್ಥಪೂರ್ಣವಾಗಿ ಕಂಡವು. "ಹೌದು ಆತ ಹೇಳುವುದು ಸತ್ಯ" ಎಂದು ಯೋಚಿಸಿದರು. ನಾನೀಗ ಇವುಗಳನ್ನೆಲ್ಲಾ ತೆಗೆದುಕೊಂಡು ನಾನಿಲ್ಲಿ ಏನು ಮಾಡಬೇಕು? ಏನೂ ಇಲ್ಲ!" ಎಂಬ ವಿಚಾರ ಅವರ ತಲೆಯಲ್ಲಿ ಹಾಯ್ದು ಹೋಯಿತು. ಆ ಕೂಡಲೇ ಅವರು ಮನೆಬಿಟ್ಟು ಹೊರಡಲು

೫. ೬ ತಿಂಗಳವರೆಗೆ ನಿದ್ರೆ ಮಾಡುವುದಕ್ಕೆ ಹೆಸರಾಗಿದ್ದ ರಾಕ್ಷಸನು ಕುಂಭಕರ್ಣ. ಅವನ ವಿಷಯ ರಾಮಾಯಣದಲ್ಲಿ ಬಂದಿದೆ.

೬. ಅಂದರೆ, ಹಿಂದಿನ ಜನ್ಮಗಳಲ್ಲಿ ಸತ್ತು ಹುಟ್ಟಿದ ಮೇಲೆ ಮುಗಿದಿರದ ಕಾರ್ಯಗಳನ್ನು ಪುನರಾರಂಭಿಸುವುದರ ಬಗೆಗೆ – ಶ್ರೀ ರಮಣ ಮಾರ್ಗ ಭಾಗ ಎರಡು, ಪರಿಶಿಷ್ಟ – ೨ ಇದನ್ನು ನೋಡಿರಿ. ಮಿಕ್ಕಿದ್ದೆಂದರೆ ಇಲ್ಲಿ ಪೂರ್ವಜನ್ಮದಲ್ಲಿ ಮಾಡಿ ಮುಗಿಸದೆ ಬಿಟ್ಟ ಕೆಲಸ–ಎಂದರ್ಥ.

ನಿರ್ಧಾರ ಮಾಡಿದರು. ಒಮ್ಮಿಂದೊಮ್ಮೆ ಅರುಣಾಚಲದ ಸ್ಮರಣೆ ತನ್ನಿಂದ ತಾನೇ ಅವರ ಮನಃಪಟಲದಲ್ಲಿ ಹೊಳೆಯಿತು. ಆಗ ಅವರು, "ಅರುಣಾಚಲವೊಂದೇ ನನಗೆ ಹೋಗಲಿರುವ ಸ್ಥಳ ಎಂಬುದು ನಿಜ !" ಎಂದು ನಿರ್ಧರಿಸಿದರು. ಅವರೆದ್ದು ಹೊರ ಹೊರಡಲನುವಾದಾಗ ನಾಗಸ್ವಾಮಿಯು "ಚಿಕ್ಕಮ್ಮನಿಂದ ಕಾಲೇಜು ಶುಲ್ಕವನ್ನು ತೆರಲು ಐದು ರೂಪಾಯಿಗಳನ್ನು ಇಸಿದುಕೋ" ಎಂದನು.

ಶ್ರೀ ರಮಣರು ಅಂದಿನ ಮದ್ರಾಸಾಧಿಪತ್ಯದ ಒಂದು ಹಳೆಯ ಭೂಪಟವನ್ನು ನೋಡಿದರು. ದುರ್ದೈವದಿಂದ ಅದರಲ್ಲಿ ವಿಳುಪ್ಪುರದಿಂದ ಕಾಟ್‌ಪಾಡಿಗೆ ಹೋಗುವ ಶಾಖಾಮಾರ್ಗವನ್ನು ತೋರಿಸಿರಲಿಲ್ಲ. ಅವೆರಡರ ನಡುವೆ ತಿರುವಣ್ಣಾಮಲೈ ಅಥವಾ ಅರುಣಾಚಲವಿದೆ. ಆದುದರಿಂದ ಅವರು ತಿರುವಣ್ಣಾಮಲೈಗೆ ದಿಂಡಿವನಂ ಎಂಬುದು ಅತ್ಯಂತ ಸನಿಹದ ರೈಲು ನಿಲ್ದಾಣವೆಂದು ಭಾವಿಸಿದರು. ತಮ್ಮ ಚಿಕ್ಕಮ್ಮ ಕೊಟ್ಟ ೫ ರೂಪಾಯಿಗಳಲ್ಲಿ ೩ ರೂಪಾಯಿಗಳನ್ನು ಮಾತ್ರ ತೆಗೆದುಕೊಂಡು, ಗಡಿಬಿಡಿಯಲ್ಲಿ ಒಂದು ಚೀಟಿ ಬರೆದು, ಉಳಿದ ಎರಡು ರೂಪಾಯಿ ಇಟ್ಟು ಮನೆಯಿಂದ ಹೊರಟರು. ಆ ಚೀಟಿಯಲ್ಲಿ ಹೀಗೆ ಬರೆದಿತ್ತು:

ನನ್ನ ತಂದೆಯವರನ್ನು ಹುಡುಕುವುದಕ್ಕಾಗಿ ಆತನ ಅಪ್ಪಣೆಯ ಮೇರೆಗೆ ಈ ಸ್ಥಳವನ್ನು ನಾನು ಬಿಟ್ಟು ಹೋಗುವೆನು. ಇದು ಒಳ್ಳೆಯ ಉದ್ದೇಶಕ್ಕಾಗಿಯೇ ಮಾಡಿದ ಉಪಕ್ರಮ. ಆದುದರಿಂದ ಈ ಕಾರ್ಯಕ್ಕಾಗಿ ಯಾರೂ ವ್ಯಥೆ ಪಡಬೇಕಾಗಿಲ್ಲ. ಇದನ್ನು ನೋಡಲು ಯಾರೂ ಹಣವನ್ನು ಸಹ ಖರ್ಚು ಮಾಡಬೇಕಾಗಿಲ್ಲ.

ನಿನ್ನ ಶುಲ್ಕವನ್ನು ಇನ್ನೂ ಕೊಟ್ಟಿಲ್ಲ.

ಅದಕ್ಕಾಗಿ ಇಲ್ಲಿ ೨ ರೂಪಾಯಿಗಳಿವೆ.

ಹೀಗೆ ಸಹಿಗೆ ಬದಲಾಗಿ ಚೀಟಿಯ ಕೆಳಗೆ ಒಂದು ಸರಳ ರೇಖೆಯನ್ನು ಮಾತ್ರ ಎಳೆಯಲಾಗಿತ್ತು. ಇಲ್ಲಿಯ ವಾಕ್ಯಗಳ ರಚನೆಯಲ್ಲಿ ಅಗಾಧವಾದ ಅರ್ಥವಿದೆ. ಮೊದಲನೆಯ ವಾಕ್ಯವನ್ನಾರಂಭಿಸುವ 'ನಾನು' ಎಂಬ ಪದವು ಎರಡನೆಯದರಲ್ಲಿ ಇದು ಎಂದು ಬದಲಿಸಲ್ಪಟ್ಟಿದೆ. ಚೀಟಿಯ ಕೊನೆಯಲ್ಲಿ ಈ 'ಇದು' ಎಂಬುದೂ ಮಾಯವಾಗಿ ಸಹಿಯಿಲ್ಲದೆ ಚೀಟಿಯು ಮುಕ್ತಾಯಗೊಂಡಿದೆ.

ಹೌದು, ನಾನು, ನನ್ನದು ಎಂಬೀಯೆರಡನ್ನು ದೇವರಿಗೆ ಸಮರ್ಪಿಸಿದ ಮೇಲೆ ನಾನೆಂದುಕೊಳ್ಳುತ್ತಿದ್ದ ಮಾನವ ಶರೀರವು ಮತ್ತು ನನ್ನದೆಂದುಕೊಳ್ಳುತ್ತಿದ್ದ ಭಾವವೂ (ಅಹಂಕಾರ–ಮಮಕಾರಗಳು) ಶ್ರೀ ರಮಣರಿಗೆ 'ಇದು' ಎಂದು ತೋರಿದವು. 'ಇದು' ಎಂಬುದು ಅಚೇತನವೂ ಪರಕೀಯವೂ ಆದ ಪದಾರ್ಥ. ಕೊನೆಯದಾಗಿ ಸರ್ವೋಚ್ಚ ವಸ್ತುವಿನಲ್ಲಿ ಐಕ್ಯ ಹೊಂದಿದಾಗ ಇನ್ನೇನು ಪ್ರತ್ಯೇಕವಾಗಿ ಉಳಿದೀತು? ಹಸ್ತಾಕ್ಷರಗಳ ಅಭಾವವು ತೋರಿಸುವುದು ಈ ಐಕ್ಯಸ್ಥಿತಿಯನ್ನೇ. ಕೇವಲ ೧೬ನೆಯ ವರ್ಷ ವಯಸ್ಸಿನಲ್ಲಿಯೇ ಪೂರ್ಣಜ್ಞಾನಸ್ಥಿತಿಯು[೭] ಎಷ್ಟು ಸ್ಪಷ್ಟವಾಗಿತ್ತು! ನಾನೆಂಬ ಭಾವವು ಇರುವವರೆಗೆ ಪ್ರತಿಯೊಬ್ಬನೂ ದೇವರೇ ತನ್ನ ಆಶ್ರಯ ಎಂದು ಅವಲಂಬಿಸಬೇಕು ಎಂಬುದನ್ನು ನನ್ನ

---

೭. ನಿಜಜ್ಞಾನದ ಸ್ಥಿತಿಯು. ಅದರಲ್ಲಿ ಆತ್ಮವನ್ನುಳಿದು ಇನ್ನೇನೂ ಇರದು (ಪರಬ್ರಹ್ಮಸ್ಥಿತಿ ಅದೇ).

ತಂದೆಯವರನ್ನು ಹುಡುಕುವುದಕ್ಕಾಗಿ ಎಂಬ ಪದಸಂಹತಿಯನ್ನು ಬರೆದ ಬಳಿಕ 'ನಾನು' ಎಂದು ಬರೆದದ್ದು ಸ್ಪಷ್ಟವಾಗಿ ತೋರಿಸುತ್ತದೆ. ಯಾವ ಭಾವಿ ಅದ್ವೈತಿಯೂ ತನ್ನ ವ್ಯಕ್ತಿತ್ವ ಉಳಿದಿರುವವರೆಗೆ ನ್ಯಾಯವಾಗಿ ದೇವರನ್ನು ನಿರಾಕರಿಸಲಾರನು.

ಶ್ರೀ ರಮಣರು ಮಧುರೆಯ ರೈಲು ನಿಲ್ದಾಣಕ್ಕೆ ಹೋದರು. ಅಂದಿನ ಕಾಲದಲ್ಲಿ ಮಧುರೆಯಿಂದ ತಿರುವಣ್ಣಾಮಲೆಗೆ ಹೋಗಲು ಬೇಕಾದ ರೈಲು ಶುಲ್ಕ ಎಂದು ಸ್ಥೂಲವಾಗಿ ಭಾವಿಸಿದ್ದು ಸರಿಯಾಗಿ ಅಷ್ಟೇ ಆಗಿತ್ತು. ಆದರೆ ಏನು ಸಂಭವಿಸಬೇಕಾಗಿತ್ತು? ತಿರುವಣ್ಣಾಮಲೆಗೆ ತಾವು ಸೀದಾ ರೈಲಿನಲ್ಲಿ ಹೋಗಬಹುದೆಂಬುದು ಗೊತ್ತಿಲ್ಲದೆ ಶ್ರೀ ರಮಣರು 'ದಿಂಡಿವನಂ' ಎಂಬ ಸ್ಥಳಕ್ಕೆ ತಿಕೀಟು ತೆಗೆದುಕೊಂಡು ರೈಲಿನಲ್ಲಿ ಕುಳಿತುಕೊಂಡರು. ಪ್ರವಾಸಕಾಲದಲ್ಲಿ ಅವರ ಜೊತೆಗೆ ಕುಳಿತಿದ್ದ ಮೌಲ್ವಿಯೊಬ್ಬನು (ಇಸ್ಲಾಮಿನ ಅರ್ಚಕನು) ತಾನೇ ಮಾತಾಡತೊಡಗಿ ತಿರುವಣ್ಣಾಮಲೆಗೆ ಹೋಗಲು ಅವರು ವಿಳುಪ್ಪುರದಲ್ಲಿ ರೈಲು ಬದಲಾಯಿಸಬೇಕೆಂದು ತಿಳಿಸಿದನು. ಹಣ ಕೈಯಲ್ಲಿ ಇನ್ನೂ ಉಳಿದಿದ್ದುದರಿಂದ ಆ ಉಳಿದ ಹಣದಿಂದ ಶ್ರೀ ರಮಣರು ಮಾಂಬಳಪ್ಪಟ್ಟು ಎಂಬಲ್ಲಿಗೆ ಮಾತ್ರ ತಲುಪಲು ಶಕ್ತರಾದರು. ಅಲ್ಲಿ ಇಳಿದು ಅವರು ೧೦ ಮೈಲು ದೂರ, ಅರುಣಾಚಲದ ದಿಕ್ಕಿನಲ್ಲಿ ನಡೆದರು : ಕಲ್ಲಮೇಲೆ ಕಟ್ಟಿದ ಅರೈಯಣಿ ನಲ್ಲೂರು ದೇವಸ್ಥಾನವನ್ನು ಅವರು ಸೇರಿದರು; ಆದರೆ ರಾತ್ರಿಯಲ್ಲಿ ಅಲ್ಲಿ ಉಳಿಯಲು ಅವರಿಗೆ ಅವಕಾಶ ದೊರಕಲಿಲ್ಲ ; ಅನುಮತಿ ಸಿಕ್ಕಲಿಲ್ಲ. ಅನಂತರ ಅರ್ಚಕನೊಡನೆ ಅವರು ಕಿಳೂರಿನ ವಿರಕ್ತೇಶ್ವರ ದೇವಾಲಯಕ್ಕೆ ನಡೆದರು. ಪೂಜೆ ಮುಗಿದ ಮೇಲೆ ದಣಿದು ಹಸಿದಿದ್ದ ಶ್ರೀ ರಮಣರು ಸ್ವಲ್ಪ ಪ್ರಸಾದವನ್ನು ಕೀಳೂರಿನ ವೀರಟ್ಟೇಶ್ವರ ಪೂಜಾರಿಯನ್ನು ಕೇಳಿದರು. ಆ ಬ್ರಾಹ್ಮಣ ಅರ್ಚಕನು ಹಾಗೆ ಕೊಡಲಾಗುವುದಿಲ್ಲ ಎಂದನು. ಆಗ ದೇವಾಲಯದ ಓಲಗದವನು ಇದನ್ನು ಕಂಡು ಎದೆಗರಗಿದವನಾಗಿ, "ದಯವಿಟ್ಟು ನನ್ನ ಪಾಲಿನ ಪ್ರಸಾದವನ್ನಾದರೂ ಇವನಿಗೆ ಕೊಡಿರಿ" ಎಂದು ಬೇಡಿದನು. ಆ ಸಜ್ಜನನ ಬೇಡಿಕೆಯ ದೆಸೆಯಿಂದ ಶ್ರೀ ರಮಣರ ಕೈಗೆ ಸ್ವಲ್ಪ ಆಹಾರವು ಬಿದ್ದಿತು. "ಭೂಲೋಕದಲ್ಲಿರುವ ಎಲ್ಲ ಪ್ರಾಣಿಗಳಲ್ಲಿಯೂ ದಯೆಯಿಂದ ವರ್ತಿಸುವವನೇ ಸದ್ ಬ್ರಾಹ್ಮಣನು[೮] ಎಂಬ ಪರಿಪೂರ್ಣ ಬ್ರಾಹ್ಮಣಿಕೆಯ ವ್ಯಾಖ್ಯೆಯನ್ನು ಆ ಓಲಗದವನು ತನ್ನ ನಡತೆಯಿಂದ ಅಂದು ನಿದರ್ಶಿಸಿದನು. ಹತ್ತಿರದಲ್ಲೇ ಆ ರಾತ್ರಿಯನ್ನು ಕಳೆದ ಶ್ರೀ ರಮಣರು ಬೆಳಗಿನಲ್ಲಿ (ಅದು ಶ್ರೀಕೃಷ್ಣ ಜಯಂತಿಯ ದಿನವಾಗಿತ್ತು) ಮುತ್ತು ಕೃಷ್ಣ ಭಾಗವತರೆಂಬ ಒಬ್ಬರ ಮನೆಗೆ ಹೋದರು. ಭಾಗವತರ ಮನೆಯಲ್ಲಿ ಸ್ವಲ್ಪ ಆಹಾರವನ್ನು ತೆಗೆದುಕೊಂಡ ಮೇಲೆ ತಾವು ಹಾಕಿಕೊಂಡಿದ್ದ ಎರಡು ಬಂಗಾರದ ಮುರುಗಳ ನೆನಪು ಶ್ರೀ ರಮಣರಿಗಾಗಿ ಅವರು ಅವುಗಳನ್ನು ಕೊಟ್ಟು ಭಾಗವತರಿಂದ ನಾಲ್ಕು ರೂಪಾಯಿಗಳನ್ನು ಪಡೆದರು. ಆ ಹಣದಿಂದ ಅವರು ತಿರುವಣ್ಣಾಮಲೆಗೆ ಟಿಕೇಟನ್ನು ಕೊಂಡುಕೊಂಡು ಮರುದಿನ ಬೆಳಿಗ್ಗೆ (೧೮೯೬ ನೆಯ ಇಸವಿಯ ಮಂಗಳವಾರ ಸಪ್ಟೆಂಬರ್ ಒಂದನೆಯ ತಾರೀಕಿನಲ್ಲಿ) ಶ್ರೀ ಅರುಣಾಚಲಕ್ಕೆ ಅವರು ಹೋಗಿ ಸೇರಿದರು. ಅರುಣಾಚಲವು ಬಾಲ್ಯದಿಂದಲೂ ಅವರ ಹೃದಯವನ್ನು ಆಕ್ರಮಿಸಿತ್ತು. ಮತ್ತು ಪ್ರಸ್ತುತ ಸಂದರ್ಭದಲ್ಲಿ ಅವರ ಮನಸ್ಸನ್ನು ಕದ್ದೊಯ್ದು ತನ್ನ ಹತ್ತಿರಕ್ಕೆ ಅದು ಎಳೆದುಕೊಂಡಿತು.

---

೮. ತಿರುಕ್ಕುರುಳ್ – ನುಡಿ ೩೦

ಶ್ರೀ ರಮಣರು ನೇರವಾಗಿ ಶ್ರೀ ಅರುಣಾಚಲೇಶ್ವರ ದೇವಸ್ಥಾನದ ಗರ್ಭಗುಡಿಯೊಳಗೆ ಹೋಗಿ ಸಂಪೂರ್ಣವಾಗಿ ಆತ್ಮಾರ್ಪಣೆ ಮಾಡಿಕೊಂಡರು. ಆವರೆಗೂ ಅವರ ದೇಹದಲ್ಲಿದ್ದ ಪ್ರಖರವಾದ ಉಷ್ಣತೆಯು ಒಮ್ಮೆಂದೊಮ್ಮೆ ಇಳಿದು ಹೋಯಿತು. ಆತ್ಮನದಿಯ ಪ್ರಯಾಣವು ಮುಟ್ಟತಕ್ಕ ಸ್ಥಳವನ್ನು ಸೇರಿದ ಕೂಡಲೇ ನಿಂತು ಹೋಯಿತು: ಆ ಸ್ಥಳವೆಂದರೆ ಆನಂದಸಾಗರ. ಶ್ರೀ ರಮಣರು ಗರ್ಭಗುಡಿಯಿಂದ ಹೊರ ಹೊರಟುದು ಜ್ಞಾನದ ಪೂರ್ಣತೆಯೆಂಬ ದ್ರವ್ಯಕೋಶಲಾಭದಿಂದ ಸಂಪೂರ್ಣ ತೃಪ್ತರಾಗಿಯೇ. ಶ್ರೀ ಅರುಣಾಚಲೇಶ್ವರನಿಗೆ ಮನೋವಾಕ್ಕಾಯಗಳ ಎಲ್ಲ ಸ್ವಾತಂತ್ರ್ಯವನ್ನೂ ಸಮರ್ಪಿಸಿಬಿಟ್ಟದ್ದರಿಂದ ಶ್ರೀ ರಮಣರು ಅಯತ್ನತಃ ಮೌನಿಗಳಾದರು. ಯಾರೋ ಒಬ್ಬರು ಅವರ ಹತ್ತಿರ ಬಂದು "ಸ್ವಾಮಿ, ನಿಮ್ಮ ತಲೆಯನ್ನು ಬೋಳಿಸಿಕೊಳ್ಳುವಿರಾ?" ಎಂದು ಕೇಳಿದಾಗ ಶ್ರೀ ರಮಣರು ಅದು ಅರುಣಾಚಲೇಶ್ವರನ ಸಂಕಲ್ಪವೆಂದು ಮನದಟ್ಟಾದುದರಿಂದ ಆಗಲೆಂದು ತಲೆಯಲ್ಲಾಡಿಸಿದರು. ಅವರ ಉದ್ದವೂ ನಯವೂ ಅಲೆಯಲೆಯೂ ಆಗಿದ್ದ ಕೂದಲು ಸುಂದರವಾದ ಒಂದು ಕರಿಯ ಬಳ್ಳಿಯಂತಿತ್ತು; ಅದು ನಿಮಿಷಾರ್ಧದಲ್ಲಿ ತೆಗೆಯಲ್ಪಟ್ಟಿತು ; ಅವರ ತಲೆ ಚೊಕ್ಕಟವಾಗಿ ಬೋಳಿಸಲ್ಪಟ್ಟಿತು. ತಮ್ಮ ಜಾತಿ ಸಂಕೇತವಾಗಿದ್ದ ಜನಿವಾರವನ್ನವರು ತೆಗೆದೆಸೆದರು. ತಮ್ಮ ಪಂಚೆಯಿಂದ ಕೌಪೀನಕ್ಕೆಂದು ಒಂದು ಚೂರನ್ನು ಹರಿದುಕೊಂಡು ಮಿಕ್ಕ ಭಾಗವನ್ನು, ಅದರ ತುದಿಗೆ ಕಟ್ಟಿದ್ದ ಹಣದೊಡನೆ, ಬಿಸುಟು ಬಿಟ್ಟರು. ಭಾಗವತರ ಮನೆಯ ವಾತ್ಸಲ್ಯಮಯಿಯಾದ ಮಹಿಳೆ ಕೊಟ್ಟಿದ್ದ ಸಿಹಿ ತಿಂಡಿಯ ಪೊಟ್ಟಣವನ್ನು ಅಯ್ಯನ್ಕುಳವೆಂಬ ಕೆರೆಗೆ ಎಸೆಯಲಾಯಿತು. ಕ್ಷೌರ ಮುಗಿದ ಮೇಲೆ ಅವರು ಸ್ನಾನವನ್ನು ಕೂಡ ಮಾಡಲಿಲ್ಲ. ಆದರೆ ಅವರು ದೇವಸ್ಥಾನಕ್ಕೆ ಹಿಂದಿರುಗುವಾಗ ಅನಿರೀಕ್ಷಿತವಾಗಿ ಮಳೆ ಸುರಿಯಿತು. ಮಹತ್ತಮ ತಪಸ್ಸಿನ ಮುಗಿತಾಯಕ್ಕೆಂದು ಅದು ತನ್ನ ದಿವ್ಯಸುತನಿಗೆ ಶ್ರೀ ಅರುಣಾಚಲೇಶ್ವರನು ಮಾಡಿಸಿದ ಅವಭೃತ ಸ್ನಾನವೆಂದು ಹೇಳಬಹುದು ! ಶ್ರೀ ರಮಣರು ದೇವಾಲಯವನ್ನು[೯] ತಲುಪಿ, ಸಮಾಧಿಯಲ್ಲಿ ಮುಳುಗಿ, ಸಹಸ್ರ ಸ್ತಂಭ ಮಂಟಪದಲ್ಲಿ ಕುಳಿತರು.

ಆದರೆ ಮರುಳು ಜಗತ್ತು ಮುನಿಗಳ ಮಹತ್ವವನ್ನು ಅರಿಯಬಲ್ಲುದೇ? "ಹುಚ್ಚು ಹುಡುಗ, ಮೂಕ ಎಂದು ಕೆಲ ದುಷ್ಟರೂ ಕುಚೇಷ್ಟೆಯ ಮಕ್ಕಳೂ ಅವರನ್ನು ಅಣಕಿಸಿ ತೊಂದರೆ ಕೊಟ್ಟರು ; ಅವರೆಡೆಗೆ ಕಲ್ಲುಗಳನ್ನೂ ಒಡಕು ಮಡಿಕೆ ಚೂರುಗಳನ್ನೂ ಎಸೆದರು. ಹೌದು ; ಅದು ಭೂಮಿಗಿಳಿದ ಮಹಾತ್ಮರೆಲ್ಲರಿಗೂ ಸಾಮಾನ್ಯವಾಗಿ ದೊರಕುವ ಸಂಭಾವನೆಯಲ್ಲವೇ? ಬುದ್ಧ, ಮಹಾವೀರ, ಯೇಸು ಮತ್ತು ಇತರರು ಜನರಿಂದ ಇಂಥ 'ರೀತಿಯಿಂದ' ನಡೆಯಿಸಿಕೊಳ್ಳಲ್ಪಡಲಿಲ್ಲವೇ? ಆದುದರಿಂದ ಇದೇನೂ ಹೊಸದಲ್ಲ! ಅವರತ್ತ ಉದಾಸೀನರಾದರೂ ಶ್ರೀ ರಮಣರು ಅವರ ದೃಷ್ಟಿಯಿಂದ ದೂರಸರಿದು, ಹಗಲಿನಲ್ಲೂ ಒಳಹೋಗಲು ಯಾರೂ ಧೈರ್ಯಮಾಡದಂಥ ಪಾತಾಳಲಿಂಗವೆಂಬ ಕತ್ತಲ ಗವಿಯಲ್ಲಿ ಇಳಿದು ಕುಳಿತರು. ಲಿಂಗದ ಹಿಂದೆ ಅವರು ಅವಿತುಕೊಂಡು ಸಮಾಧಿಯಲ್ಲಿ ಮಗ್ನರಾಗಿ ಕುಳಿತರು ! ದಿನಗಳು ಉರುಳಿದವು. ಆದರೆ ಅವರು ಸಮಾಧಿಯಿಂದ ಹೊರ

೯. ಅನಂತರದ ವರ್ಷಗಳಲ್ಲಿ–ತಾವು ದೇವಸ್ಥಾನವನ್ನು ಹೊಕ್ಕಾಗ, ಗರ್ಭಗುಡಿಯ ಬಾಗಿಲು ತೆರೆದಿತ್ತು ಮತ್ತು ಅಲ್ಲಿ ಯಾರೂ ಇರಲಿಲ್ಲ–ಎಂಬುದನ್ನು ಹೊರಗೆಡಹಿದರು. ಅಲ್ಲದೆ, ಆಗ ತಾವು ಆ ಲಿಂಗವನ್ನು ಅಪ್ಪಿಕೊಂಡೆವೆಂಬುದನ್ನೂ ಅವರು ತಿಳಿಸಿದರು.

ಹೊರಡಲೇ ಇಲ್ಲ! ಜಗತ್ತಿನ ಹಾಗೂ ದೇಹದಜ್ಞಾನವನ್ನು ಮೀರಿದ ಸ್ಥಿತಿಯ ಸ್ವರೂಪದ ಸತ್ ಪದಾರ್ಥದಲ್ಲಿ ಅವರು ಐಕ್ಯಹೊಂದಿ ಸ್ಥಾಪಿತರಾಗಿದ್ದಾಗ ಅವರಿಗೆ ದೇಹದ ಅಥವಾ ಮನಸ್ಸಿನ ಹಸಿವು-ಬಾಯಾರಿಕೆಗಳು ಹೇಗೆ ಉಂಟಾದಾವು? ಅಶರೀರಸ್ಥಿತಿಯಾದ ಜ್ಞಾನಾನಂದದಲ್ಲಿ ಮುಳುಗಿದ ಅವರಿಗೆ ಹೊರಜಗತ್ತಿನಿಂದ ಉಂಟಾಗುವ ನೋವಿನ ಅಥವಾ ದುಃಖದ ಭಾವನೆ ಹೇಗೆ ಅನುಭವಕ್ಕೆ ಬಂದೀತು?

ಶ್ರೀ ರಮಣರು ಕುಳಿತಿದ್ದ ಒದ್ದೆ ನೆಲದಲ್ಲಿ ಅನೇಕಾನೇಕ ಇರುವೆಗಳೂ ಒರಲೆಹುಳುಗಳೂ ಸೊಳ್ಳೆಗಳೂ ನೊಣಗಳೂ ಪಡಚೇಳುಗಳೂ ಇದ್ದವು. ಅವರ ತೊಡೆಗಳ ಕೆಳಬದಿಯನ್ನು ಅವು ತಿನ್ನಲಾರಂಭಿಸಿದುದರಿಂದ ನೆತ್ತರು ಹರಿಯಲು ಆರಂಭವಾಯಿತು. ಸೋರುವ ನೆತ್ತರು ಗಡ್ಡೆ ಗಟ್ಟಿತು, ಕೀವಾಯಿತು ಮತ್ತು ಆಯೆರಡೂ ಮಣ್ಣಿನಲ್ಲಿ ಸೇರಿ ಅವರ ದೇಹವನ್ನು ನೆಲಕ್ಕೆ ಮೊಹರು ಹೊಡೆದಂತೆ ಅಂಟಿಸಿಬಿಟ್ಟವು. ಆದರೂ ಅವರು ಅದರಿಂದ ವಿಚಲಿತರಾಗಲಿಲ್ಲ. ಏಕೆಂದರೆ ಅದರ ವಿಷಯ ಅವರಿಗೇ ಗೊತ್ತೇ ಆಗಿರಲಿಲ್ಲ. ವಾಲ್ಮೀಕಿಯಂತಹ ಋಷಿಗಳು ತಪಸ್ಸು ಮಾಡುತ್ತಿರುವಾಗ, ತಪಸ್ಸಿನಲ್ಲಿ ಮುಳುಗಿದ್ದಾಗ, ಒರಲೆಯ ಹುತ್ತವು ಅವರ ಮೈಯ ಮೇಲೆ ಬೆಳೆದವೆಂದೂ ಹಕ್ಕಿಗಳು ಅವರ ತಲೆಗಳ ಮೇಲೆ ಗೂಡುಕಟ್ಟಿಕೊಂಡಿರಲಾರಂಭಿಸಿದವೆಂದೂ ನಾವು ಪುರಾಣ ಕಥೆಗಳಲ್ಲಿ ಓದಿಲ್ಲವೇ? ಆ ಪ್ರಕಾರ ಬದುಕಿ ಶ್ರೀ ರಮಣರು ಅಂಥ ಕಥೆಗಳು ಸುಳ್ಳಲ್ಲವೆಂದು ಈ ಹೊಸ ಕಾಲದಲ್ಲಿ ಸಿದ್ಧ ಮಾಡಿದ್ದಾರೆ.

ಬಹಳ ದಿನಗಳ ಬಳಿಕ ಆ ಕಾಲದಲ್ಲಿ ತಿರುವಣ್ಣಾಮಲೆಯಲ್ಲಿ ವಾಸಿಸುತ್ತಿದ್ದ ಮಹಾತ್ಮರಾದ ಶ್ರೀ ಶೇಷಾದ್ರಿ ಸ್ವಾಮಿಗಳಿಂದ ಈಯೆಲ್ಲವೂ ಜನರಿಗೆ ಗೊತ್ತಾಯಿತು. ಶ್ರೀ ಶೇಷಾದ್ರಿ ಸ್ವಾಮಿಗಳು ಹುಚ್ಚರಂತೆ ತೋರಿದರೂ ಅವರು ನಿಜವಾಗಿ ಒಬ್ಬ ಸಾಧುಗಳಾಗಿದ್ದರು ಮತ್ತು ಕೆಲ ಸಜ್ಜನರು ಅವರ ಉದಾತ್ತ ಸ್ತಿತಿಯನ್ನರಿತು ಭಕ್ತಿ ಗೌರವಗಳಿಂದ ನೋಡುತ್ತಿದ್ದರು. ಶ್ರೀ ರಮಣರ ಜ್ಞಾನದ ನಿಜವಾದ ಮಹತ್ವವನ್ನು ಅವರು ಗುರುತಿಸಲು ಸಮರ್ಥರಾಗಿದ್ದರು. "ಹಾವಿನ ಕಾಲುಗಳೆಲ್ಲಿವೆಯೆಂಬುದು ಹಾವಿಗೇ ಗೊತ್ತು" ಎಂಬುದೊಂದು ಗಾದೆ. ಒಂದು ದಿನ ಪಾತಾಳ ಲಿಂಗ ಗುಹೆಯಿಂದ (ನೆಲೆವನೆಯಿಂದ) ಹೊರಬಂದು ಶ್ರೀ ಶೇಷಾದ್ರಿ ಸ್ವಾಮಿಗಳು ತಮ್ಮ ಶಿಷ್ಯರಾದ ವೆಂಕಟಾಚಲ ಮುದಲಿಯಾರರನ್ನು ಕುರಿತು – "ಒಳಗೊಬ್ಬರು ಸಣ್ಣ ಸ್ವಾಮಿಗಳಿದ್ದಾರೆ, ಹೋಗಿ ನೋಡು" ಎಂದು ಹೇಳಿ ಅವರು ದೂರ ನಡೆದುಬಿಟ್ಟರು. ಅದು ಹಗಲಾಗಿದ್ದರೂ ವೆಂಕಟಾಚಲ ಮುದಲಿಯಾರರು ಲಾಟಾನೊಂದನ್ನು ತೆಗೆದುಕೊಂಡು ಇತರ ಕೆಲವರೊಡನೆ ಪಾತಾಳ ಲಿಂಗದೊಳಗೆ ಇಳಿದರು. ಅವರು ಶ್ರೀ ರಮಣರನ್ನು ಗಟ್ಟಿಯಾಗಿ ಕರೆದರು. ಆದರೆ ಅವರಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ ಅವರ ದೇಹವನ್ನವರು ಎತ್ತಿದರು. ಆದರೆ, ಅಯ್ಯೋ ಅವರ ದೇಹವು ನೆಲಕ್ಕೆ ಮೊಹರು ಹೊಡೆದಂತೆ ಖಚಿತವಾಗಿದ್ದುದರಿಂದ ಅದನ್ನವರು ಬಲಾತ್ಕರಿಸಿ ಮೇಲಕ್ಕೆತ್ತಿದ ಕೂಡಲೇ ಹೊಸ ಗಾಯಗಳಿಂದ ರಕ್ತ ಚಿಮ್ಮಿತು ! ಇದನ್ನು ನೋಡಿ ಅವರು ಅವಾಕ್ಕಾದರು, ಗೌರವ ಭಯಗಳಿಂದ ಸ್ತಂಭೀಭೂತರಾದರು. ಎಚ್ಚರಿಕೆಯಿಂದಲೂ ಮೃದುವಾಗಿಯೂ ಅವರು ಆ ದೇಹವನ್ನು ಮೇಲಕ್ಕೆ ತಂದು ಗೋಪುರಂ ಸುಬ್ರಹ್ಮಣ್ಯ ದೇವಾಲಯದಲ್ಲಿಟ್ಟರು. ಆಗಲೂ ಶ್ರೀ ರಮಣರು ದೇಹಪ್ರಜ್ಞೆಯನ್ನು ಪುನಃ ಪಡೆಯದಾದರು ; ಸಮಾಧಿಯಲ್ಲಿಯೇ ಇದ್ದರು.

ಕೆಲ ಭಕ್ತರು ಶ್ರೀ ರಮಣರು ಮಾನವ ರೂಪದಲ್ಲಿ ಅವತರಿಸಿ ಬಂದ ದೇವರೇ ಎಂಬ ದೃಢವಿಚಾರದಿಂದ ಅವರ ಸೇವೆಯನ್ನು ಬಹಳ ಉತ್ಸಾಹದಿಂದ ಮಾಡಲು ಸನ್ನದ್ಧರಾದರು. ಬಹಳ ದಿನಗಳಲ್ಲಿ ಒಮ್ಮೆ ಅವರು ಕಣ್ದೆರೆದಾಗ ಸ್ವಲ್ಪ ಹಾಲು, ನುರಿದ ಬಾಳೆಹಣ್ಣು ಅಥವಾ ದ್ರವಾಹಾರ ತೆಗೆದುಕೊಂಡು ಶ್ರೀ ರಮಣರಿಗೆ ಆ ಭಕ್ತರು ಊಟ ಮಾಡಿಸುತ್ತಿದ್ದರು. ಶ್ರೀ ರಮಣರ ಬಾಹ್ಯ ಕರ್ಮಗಳಾದ ಆಹಾರ ಸೇವನೆ, ಮಲ–ಮೂತ್ರ ವಿಸರ್ಜನೆ ಮುಂತಾದವುಗಳು ನಿದ್ರೆಯಲ್ಲಿ ಇದ್ದ ಮಗುವಿನಲ್ಲಿ ಹೇಗೆ ನಡೆಯುತ್ತವೆಯೋ ಹಾಗೆ ನಡೆಯುತ್ತಿದ್ದವು. ಕೆಲ ದಿನಗಳವರೆಗೆ ಶ್ರೀ ರಮಣರು ಕಣ್ ತೆರೆಯದಿದ್ದಾಗ ಆ ಭಕ್ತರೇ ಅವರ ಬಾಯನ್ನು ತೆರೆದು ಸ್ವಲ್ಪವಾದರೂ ದ್ರವ ಮಿಶ್ರಣವನ್ನು ಅದರಲ್ಲಿ ಹಾಕುತ್ತಿದ್ದರು.

ಶ್ರೀ ರಮಣರು ಅರುಣಾಚಲೇಶ್ವರ ದೇವಸ್ಥಾನದಲ್ಲಿ ಕೆಲ ತಿಂಗಳುಗಳ ಕಾಲ ಒಂಟಿಯಾಗಿ ಉಳಿದರು. ಆದರೆ ತಮ್ಮನ್ನು ನೋಡಲು ಜನರು ತಮ್ಮ ಸುತ್ತ ಗುಂಪುಗಟ್ಟಿ ಬರುವುದನ್ನು ಮೆಚ್ಚದ ಅವರು ಗುರುಮೂರ್ತಂ ದೇವಾಲಯಕ್ಕೆ ಹೋದರು. ಅದು ಪಟ್ಟಣದಿಂದ ತಕ್ಕಮಟ್ಟಿಗೆ ದೂರದಲ್ಲಿತ್ತು. ಸುಮಾರು ಒಂದೂವರೆ ವರ್ಷ ಅವರು ಅಲ್ಲಿಯೇ ಸಮಾಧಿಸ್ಥರಾಗಿದ್ದರು.

ಈ ನಡುವೆ ಶ್ರೀ ರಮಣರು ಮಧುರೆಯಲ್ಲಿ ಬರೆದಿಟ್ಟು ಬಂದಿದ್ದ ಚೀಟಿ ದೊರಕಿದ ಮೇಲೆ ಅವರ ಅಣ್ಣ ನಾಗಸ್ವಾಮಿಯೂ ಅವರ ತಾಯಿಯೂ ಚಿಕ್ಕಪ್ಪನೂ ಇತರ ಸಂಬಂಧಿಕರೂ ಸ್ನೇಹಿತರೂ ಅವರನ್ನು ಅನೇಕ ಕಡೆಗಳಲ್ಲಿ ಹುಡುಕಲಾರಂಭಿಸಿ ಈವರೆಗೆ ನಿರಾಶರಾಗಿದ್ದರು. ಕಟ್ಟಕಡೆಗೆ ಗುರುಮೂರ್ತಿ ದೇವಾಲಯದಲ್ಲಿ ಶ್ರೀ ರಮಣರ ಸೇವೆ ಮಾಡುತ್ತಿದ್ದ ಅಣ್ಣಾಮಲೈ ತಂಬಿರಾನ್ ಎಂಬೊಬ್ಬರಿಂದ ಶ್ರೀ ರಮಣರಿರುವ ಸ್ಥಳ ಅವರಿಗೆ ಗೊತ್ತಾಯಿತು. ಮಧುರೆಯಲ್ಲಿ ಶ್ರೀ ರಮಣರು ಸುಬ್ಬಯ್ಯರ್ ಎಂಬ ತಮ್ಮ ಚಿಕ್ಕಪ್ಪನವರ ಜೊತೆಗೆ ಇರುತ್ತಿದ್ದರು. ಆ ಸುಬ್ಬಯ್ಯರ್ ಇತ್ತೀಚೆಗೆ ತೀರಿಕೊಂಡರು. ಆಗ ಅವರ ತಮ್ಮ ನೆಲ್ಲಯ್ಯಪ್ಪಯ್ಯರ್ ಕೂಡಲೇ ತಿರುವಣ್ಣಾಮಲೆಗೆ ಹೊರಟರು. ಅವರು ಗುರುಮೂರ್ತಂ ದೇವಾಲಯವನ್ನು ತಲುಪಿದರು. ಅವರು ಎಷ್ಟು ಪರಿಯಾಗಿ ಮಧುರೆಗೆ ಬಾ ಎಂದು ಕೇಳಿಕೊಂಡರೂ ಶ್ರೀ ರಮಣರು ಮೌನವನ್ನೇ ಅವಲಂಬಿಸಿದರು. ತಮ್ಮ ಪ್ರಯತ್ನದಲ್ಲಿ ಸೋತು ನೆಲ್ಲಯ್ಯಪ್ಪಯ್ಯರ್ ಬರಿಗೈಯಿಂದ ಮನೆಗೆ ಹಿಂದಿರುಗಿದರು.

ಅವರ ವ್ಯರ್ಥ ಪ್ರಯತ್ನವನ್ನು ಕಂಡು (ಶ್ರೀ ರಮಣರ ತಾಯಿಯವರಾದ) ಶ್ರೀಮತಿ ಅಳಹಮ್ಮಾಳರೇ ಸ್ವತಃ ನಾಗಸ್ವಾಮಿಯ ಜೊತೆಗೆ ಹೊರಟು ಆದಷ್ಟು ಬೇಗ (ಅಣ್ಣಾಮಲೈಯನ್ನು) ತಲುಪಿದರು. ಅದು ೧೮೯೮ ನೆಯ ಇಸವಿಯ ಡಿಸೆಂಬರ್ ತಿಂಗಳು. ಆಗ ಶ್ರೀ ರಮಣರು ಅರುಣಾಚಲದ ಪೂರ್ವದಿಬ್ಬವಾದ ಪವಳಕುನ್್ರು ಎಂಬಲ್ಲಿ ನೆಲೆಸಿದ್ದರು. ಅವರ ದೇಹದ ಕರುಣಾಜನಕ ಸ್ಥಿತಿಯನ್ನು ಕಂಡ ಅವರ ತಾಯಿಯವರು ಥಟ್ಟನೆ ಕಣ್ಣೀರು ಸುರಿಸುತ್ತ ಪ್ರಾರ್ಥಿಸತೊಡಗಿದರು.

“ನನ್ನ ಮಗುವೇ, ಮದುರೆಗೆ ತಿರುಗಿ ಬಾ. ನೀನು ಕಲ್ಲುಮುಳ್ಳುಗಳ ಮೇಲೆ ಮಲಗಿರುವುದನ್ನು ಕಂಡು ನಾನು ಮನೆಯಲ್ಲಿ ಸುಖವಾಗಿರುವುದನ್ನು ಹೇಗೆ ಸಹಿಸಲಾದೇನು? ಮಗನೇ ಹಠ ಮಾಡಬೇಡ. ದಯವಿಟ್ಟು ಇಂಥ ನೀರಾಗವನ್ನು (ನಿರ್ಮಮತೆಯನ್ನು) ತೋರಿಸಬೇಡ ! ನಿನ್ನ ತಾಯಿಯ ಹೃದಯವೊಡೆದು ಇಬ್ಭಾಗವಾಗಿದೆ. ಮನೆಗೆ ಬಾ

ಮಗೂ!" ಹೀಗೆ ಅವರ ತಾಯಿಯವರು ಗೋಳೋ ಎಂದು ಅತ್ತರು ಮತ್ತು ನಾನಾ ಬಗೆಗಳಿಂದ ಬೇಡಿಕೊಂಡರು. ನಾಗಸ್ವಾಮಿ ಕೂಡ ಪುನಃ ಪುನಃ ಬೇಡಿದ ಮತ್ತು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ : "ಅಯ್ಯೋ! ಹಾಗೆ ನಿನಗೆ ಹೇಳಿದಾಗ ನಾನು ಹಾಗೇ ನೀನು ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡಿರಲಿಲ್ಲ. ಇಂಥ ದೊಡ್ಡ ದುಃಖವನ್ನು ಆ ಮಾತು ತಂದೀತೆಂದು ನಾನೆಂದೂ ಊಹಿಸಿರಲಿಲ್ಲ !" –ಎಂದು. ಹತ್ತು ದಿನಗಳ ಪರ್ಯಂತ ಅವರು ಉಳಿದು ಬೇಡಿಕೊಂಡರೂ ಶ್ರೀ ರಮಣರ ಮುಖದಲ್ಲಿ ಒಪ್ಪಿಗೆಯ ಅಥವಾ ಅಸಮ್ಮತಿಯ ಯಾವ ಗುರುತೂ ಸ್ವಲ್ಪವೂ ಕಂಡುಬರಲಿಲ್ಲ. ಅವರು ಎಂದಿನಂತೆಯೇ ಮೌನವನ್ನು ಅವಲಂಬಿಸಿದ್ದರು. ಆ ಕರುಣಾರ್ದ್ರ ದೃಶ್ಯವನ್ನು ತಾಳಲಾರದ ಕೆಲ ನೋಟಕರು ಒಂದು ಚೂರು ಕಾಗದವನ್ನೂ ಸೀಸದ ಕಡ್ಡಿಯನ್ನೂ ಅವರ ಕೈಗಿತ್ತು ಬೇಡಿದರು, "ಸ್ವಾಮಿಗಳೇ, ನಿಮ್ಮ ತಾಯಿಯವರು ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ. ಅವರ ಹೃದಯವೊಡೆದು ರಕ್ತ ಒಸರುತ್ತಿದೆ. ಅನುಗ್ರಹರೂಪದಲ್ಲಿ ನಿಮ್ಮ ಉತ್ತರವನ್ನು ಬರೆದಾದರೂ ಕೊಡಿರಿ. ನೀವು ನಿಮ್ಮ ಮೌನವನ್ನು ಮುರಿಯಬೇಕಾಗಿಲ್ಲ!" – ಎಂದು ಅವರು ಬರೆದರು :

"ಪ್ರತಿಯೊಬ್ಬರ ಪ್ರಾರಬ್ಧಾನುಸಾರವಾಗಿ (ಅದೃಷ್ಟವಶಾತ್) ಸರ್ವವ್ಯಾಪಿಯಾದ ಆ ದೇವರು ಆ ಪ್ರಾರಬ್ಧವು ತನ್ನ ಪಾತ್ರವನ್ನು ನಿರ್ವಹಿಸುವಂತೆ ಮಾಡುವನು. ಅಸಂಭಾವ್ಯವು ಎಂದೂ ಸಂಭವಿಸದು– ಯಾರು ಎಷ್ಟೇ ಕಠಿನ ಪ್ರಯತ್ನ ಮಾಡಲಿ. ಸಂಭಾವ್ಯವು ಎಂದೂ – ಎಷ್ಟು ವಿಘ್ನ ಎದುರಾದರೂ–ಸಂಭವಿಸದೆ ಉಳಿಯಲಾರದು. ಇದು ನಿಶ್ಚಿತ! ಆದುದರಿಂದ ಸುಮ್ಮನಿರುವುದು ಅತ್ಯುತ್ತಮ."

ಆತ್ಮಜ್ಞಾನದಿಂದ ಬಂದ ಅವರ ಧ್ಯೇಯನಿಷ್ಠೆಯು ಎಂಥದು! ರಾಗ–ದ್ವೇಷಗಳಿಂದ ಮುಕ್ತವಾದ ಆ ಧ್ಯೇಯನಿಷ್ಠೆ ಯಾವ ರೀತಿಯದು! ಪರ್ವತವಾದರೂ ಕರಗುವಂಥ ಸನ್ನಿವೇಶದಲ್ಲಿ ಅದೆಂಥ, ಅದೆಷ್ಟು ದೊಡ್ಡ, ಅಚಲ ಮನಸ್ಕತೆ !

"ಆತ್ಮದಲ್ಲಿ ಅಚಲನಾಗಿ ನಿಂತ ಮನುಜನ
ವಿಭವ ಮೀರಿಸುವುದು ತಾ ಬಲಿಷ್ಠ ಬೆಟ್ಟದ."

–ತಿರುಕ್ಕುರಳ್ ನುಡಿ ೧೨೪

ಭಕ್ತರೂ ಶ್ರೀ ರಮಣರ ತಾಯಿಯವರೂ ಏನು ಮಾಡಿಯಾರು? ಅವರ ತಾಯಿಯವರು ದುಃಖೋದ್ವಿಗ್ನರಾಗಿ ಮನೆಗೆ ಹಿಂದಿರುಗಿದರು.

ಮನುಷ್ಯರೆಲ್ಲರೂ ಅಲ್ಲದೆ ಮೃಗಪಕ್ಷಿಗಳೂ ಶ್ರೀ ರಮಣರ ಅನುಗ್ರಹ ಪೂರ್ಣವಾದ ಮೃದುವರ್ತನೆಯನ್ನು ಅನುಭವಿಸಿದ್ದು ಇಂದು ಸರ್ವವಿದಿತವಾದ ವಿಷಯವಾಗಿರುವಾಗ, ನಮ್ಮಲ್ಲಿ ಹಲವರು ತಮ್ಮ ತಾಯಿಯವರ ಬಗೆಗೆ ಆ ರೀತಿಯಿಂದ ನಡೆದುಕೊಂಡದ್ದನ್ನು ಕೇಳಿ ಆಶ್ಚರ್ಯಪಟ್ಟರಲ್ಲವೇ?

ಶ್ರೀಮತಿ ಅಳಹಮ್ಮಾಳ್ ಅವರು ಮಾತೃಸಹಜ ವಾತ್ಸಲ್ಯದಿಂದ ತುಂಬಿರುವ ತನಕ ಮತ್ತು ಆ ಸಂಸರ್ಗಾಜ್ಞಾನದಲ್ಲಿರುವವರೆಗೆ, 'ನೀನು ನನ್ನ ಮಗು ; ನಾನು ನಿನ್ನ ತಾಯಿ, ನಿನ್ನನ್ನು ಕಾಪಾಡತಕ್ಕವಳು' ಎಂದು ಭಾವಿಸುತ್ತಿರುವವರೆಗೆ–ಆ ಅಜ್ಞಾನ ದೃಷ್ಟಿಯನ್ನು ತಾಯಿಯವರಿಂದ ದೂರಮಾಡಿ ಅವರನ್ನು ಉಳಿಸುವುದು ಶ್ರೀ ರಮಣರ ಕರ್ತವ್ಯವಲ್ಲವೇ? ಆದುದರಿಂದ ಅಂಥ ಮೌನಖಡ್ಗದಿಂದ ಅವರು ತಾಯಿಯವರ ಆಸಕ್ತಿ ಗ್ರಂಥಿಯನ್ನು

ಕಡಿದು ಹಾಕುತ್ತಿದ್ದರು. ಇದು ಅವರನ್ನು ಪರಿತ್ಯಜಿಸುವುದಕ್ಕಲ್ಲ; ಆದರೆ ಕೊನೆಯಲ್ಲಿ ಅವರನ್ನು ತಮ್ಮವರನ್ನಾಗಿ ತೆಗೆದುಕೊಳ್ಳಲೆಂದೇ ಆಗಿದೆ. ಅದು ಅವರು ಎಲ್ಲವನ್ನೂ ಪರಿತ್ಯಜಿಸಿ ತನ್ನ ಮಗನ ಪಾದಗಳ ಬಳಿ ಬರುವಂತೆ ಮಾಡುವುದರ ಪ್ರಥಮ ಹೆಜ್ಜೆ ಮಾತ್ರವಾಗಿತ್ತು. ಆ ಮಗನೋ ಮೂರ್ತಿಮತ್ತಾದ ಜ್ಞಾನವಾಗಿದ್ದನು. ಅಷ್ಟಲ್ಲದೆ, ಇನ್ನೊಂದು ಸಂದರ್ಭದಲ್ಲಿ, ೧೯೧೪ ನೆಯ ಇಸವಿಯಲ್ಲಿ ಅವರು ಶ್ರೀ ರಮಣರನ್ನು ನೋಡಲು ಬಂದಾಗ ಮಿತಿಮೀರಿ ಜ್ವರ ಬಂದಿತು. ಶ್ರೀ ರಮಣರು ನಾಲ್ಕು ಪದದ ನುಡಿಗಳನ್ನು ರಚಿಸಿದರು. ಆಗ ಅವರ ಜ್ವರವು ಇಳಿದು ಹೋಯಿತು. ಅವರು ಅನಂತರ ಮದುರೆಗೆ ಹಿಂದಿರುಗಿದರು.

ತಮ್ಮ ತಾಯಿಯವರ ಪ್ರಥಮ ಸಂದರ್ಶನ ನಡೆದ ಅನಂತರ ಅವರು ವಿರೂಪಾಕ್ಷಿ ಗುಹೆಗೆ ನಡೆದರು. ಶಿಷ್ಯರ ತಂಡವು ಪೂರ್ಣವಾಗಿ ಅರಳಿದ ಜ್ಞಾನಕಮಲದಿಂದ ಮಕರಂದವನ್ನು ಕುಡಿಯಲು ಅವರನ್ನು ಸುತ್ತುವರಿಯುತ್ತಿದ್ದ ವರ್ಷಗಳವು. ಹೌದು, "ಮರವು ಪಕ್ವಫಲವನ್ನು ಬಿಟ್ಟಾಗ ಹಣ್ದಿನಿಗಳಿಗೆ ಪ್ರತ್ಯೇಕವಾಗಿ ಕರೆ ನೀಡಬೇಕೇನು?" ಭಗವಾನ್ ಶ್ರೀ ರಮಣರ ಅನುಗ್ರಾಹಕವೂ ಮೌನಮುದ್ರಿತವೂ ಆದ ಉಪಸ್ಥಿತಿಯು ಆತ್ಮ ಸೂರ್ಯನಾಗಿ ಬೆಳಗುತ್ತ ಭಕ್ತರ ಸಂದೇಹಗಳನ್ನು ಪರಿಹರಿಸಿ ಅವರ ಹೃದಯಗಳನ್ನು ಅರಳಿಸುತ್ತಿತ್ತು. ಆಗ ತರುಣ ಶ್ರೀ ರಮಣರ ವಯಸ್ಸು ಕೇವಲ ಇಪ್ಪತ್ತು ವರ್ಷಗಳಷ್ಟಾಗಿತ್ತು. ಆದರೆ ಅವರ ಹತ್ತಿರಕ್ಕೆ ಬರುತ್ತಿದ್ದ ಜ್ಞಾನಕ್ಷುದರ್ದಿತ ಶಿಷ್ಯರು ಅವರಿಗಿಂತ ಎಷ್ಟೋ ಪಾಲು ಹಿರಿಯರೂ ಹೆಚ್ಚು ವಿದ್ವಾಂಸರೂ ಆಗಿರುತ್ತಿದ್ದರು.

"ಚಿತ್ರಂ ವಟ ತರೋರ್ಮೂಲೇ ವೃದ್ಧಾಃಶಿಷ್ಯಾ ಗುರುರ್ಯುವಾ
ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಃ ಸ್ಯುಶ್ಛಿನ್ನಸಂಶಯಾಃ[೧೦]
ವಟವೃಕ್ಷದಡಿ ಕುಳಿತ ಗುರು ಯುವಕನಾಶ್ಚರ್ಯ
ಶಿಷ್ಯರೋ ವಯೋವೃದ್ಧರಾಗಿದ್ದರು !
ಗುರುವಿನುಪದೇಶವೋ ಬರಿ ಮೌನವಾಗಿತ್ತು
ಶಿಷ್ಯರವರಿಂದ ನಿಃಸಂದೇಹರು !"

ಅದೇ ಆಶ್ಚರ್ಯಕರ ಸಂಗತಿಯು ಶ್ರೀ ರಮಣರೆದುರಿನಲ್ಲಿ ನಡೆಯಿತು.

ಜಗತ್ತು ಅವರಿಂದ ಕೆಲ ಉಪದೇಶಗಳನ್ನು ಬರೆಹದ ಮೂಲಕ ಪಡೆದುಕೊಳ್ಳಲು ಶಕ್ತವಾದರೂ ಆಮೇಲೆ ಬಾಯ್ಮಾತುಗಳ ಮೂಲಕ ಹಾಗೇ ದೊರಕಿಸಿಕೊಳ್ಳಲು ಸಮರ್ಥವಾದರೂ ಶ್ರೀ ರಮಣರ ಬರಿ ಮೌನೋಪಸ್ಥಿತಿಯಿಂದ ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡವರೂ ತಮ್ಮನ್ನು ಕಾಪಾಡಿಕೊಂಡವರೂ ಆದ ಅನೇಕ ಮುಮುಕ್ಷುಗಳಿದ್ದರು.

"ಮೌನವೆಂಬುದಪ್ರತಿಮ ಪ್ರೌಢಿಯಾಯ್ತುವಾಕ್ಕಿನ
ಒಳಗಿನಿಂದ ಮೂಡಿ ಬಂದ ಅನುಗ್ರಹ ಸ್ಥಿತಿ ಕಣಾ "
[ಒಳಗಿನಿಂದ ಮೂಡಿಬಂದ ಅನುಗ್ರಹ ಸ್ಥಿತಿಯಾದ ಮೌನವು ಅಪ್ರತಿಮ ವಾಗ್ವೈಖರಿ]

– ಶ್ರೀ ಭಗವಾನ್

---

೧೦. ಇದೊಂದು ಸಂಸ್ಕೃತ ಪದ್ಯ ; ಶ್ರೀ ದಕ್ಷಿಣಾಮೂರ್ತಿಯನ್ನು ಕುರಿತದ್ದು. ಇದನ್ನು ಶ್ರೀ ರಮಣರು ತಮಿಳಿಗೆ ಭಾಷಾಂತರ ಮಾಡಿದ್ದರು.

ಮೌನವು ನಿಷ್ಫಲವಾಗದ ಉಪದೇಶ. ಬರೆಹ ಮತ್ತು ಮಾತು ಅದಕ್ಕೆ ಸರಿಯಾಗಿ ನಿಲ್ಲಲಾರವು. ಕೆಲವೊಮ್ಮೆ ಅವು ವಿಘ್ನಗಳೆನ್ನಿಸಿದರೂ ಎನ್ನಿಸಬಹುದು !"–ಶ್ರೀ ರಮಣರು ಹೀಗೆ ಹೇಳುತ್ತಾರೆ.

ಕ್ರಿ.ಶ. ೧೯೦೦ ರಲ್ಲಿ ರಾಜಯೋಗದ ಸಾಧನೆಯಲ್ಲಿದ್ದ **ಗಂಭೀರಂ ಶೇಷಯ್ಯರ್** ಎಂಬವರು ಅನೇಕ ಬಾರಿ ಶ್ರೀ ರಮಣರನ್ನು ಸಂದರ್ಶಿಸುತ್ತಿದ್ದರು ಮತ್ತು ಆಧ್ಯಾತ್ಮಿಕ ಸಾಧನೆಗಳ ಬಗೆಗೆ ಅವರು ಸಮಾಧಿಯಿಂದ ಎಚ್ಚತ್ತು ಕಣ್ದೆರೆದಾಗಲೆಲ್ಲಾ ಪ್ರಶ್ನಿಸುತ್ತಿದ್ದರು. ಗಂಭೀರಂಶೇಷಯ್ಯರು ಉತ್ತರ ಬರೆಯಲು ಶ್ರೀ ರಮಣರಿಗೆ ಕಾಗದದ ಚೂರುಗಳನ್ನೂ ಲೇಖನಿಯನ್ನೂ ಕೊಡುತ್ತಿದ್ದರು. ಹಾಗೇ ಶ್ರೀ ರಮಣರು ಅಂಥ ಸಂದರ್ಭಗಳಲ್ಲಿ ಬರೆದು ಕೊಟ್ಟ ಉತ್ತರಗಳೆಲ್ಲವನ್ನೂ ಆಮೇಲೆ **ಶ್ರೀ ನಟನಾನಂದ**ರು ಸಂಪಾದಿಸಿದರು ಮತ್ತು ಅವುಗಳನ್ನು ಮೂಲ ತಮಿಳಿನಲ್ಲಿಯೇ 'ವಿಚಾರ ಸಂಗ್ರಹಂ' ಎಂಬ ಹೆಸರಿನಿಂದ ರಮಣಾಶ್ರಮವು ಪ್ರಕಟಮಾಡಿತು. 'ನಾನು ಯಾರು?' ಎಂಬುದು ಅದೇ ರೀತಿಯಿಂದ ಶ್ರೀ ರಮಣರ ಕೈಯಿಂದ ದೊರಕಿತು. **ಶ್ರೀ ಶಿವಪ್ರಕಾಶಂ** ಪಿಳ್ಳೆಯವರಿಗೆ ದೊರಕಿದ ಅದು ಗಾತ್ರದಲ್ಲಿ ಚಿಕ್ಕದಾದರೂ ಪರಮಾರ್ಥವನ್ನು ಪಡೆಯುವ ಸರಿಯಾದ ಮಾರ್ಗವನ್ನು ತೋರಿಸಿಕೊಡುವುದರಿಂದ ಮಾನವ ಕುಲವನ್ನುಳಿಸುವ ಶಕ್ತಿ ಅದಕ್ಕಿದೆಯೆಂದು ಅದೀಗ ಬಹಳ ಪ್ರಸಿದ್ಧವಾಗಿದೆ. ಶ್ರೀ ನಟನಾನಂದರ ಪ್ರಶ್ನೆಗಳಿಗೆ ಶ್ರೀ ರಮಣರು ಕೊಟ್ಟ ಉತ್ತರಗಳು ಅದೇ ಮೇರೆಗೆ 'ಉಪದೇಶ ಮಂಜರಿ' ಎಂಬ ಪುಸ್ತಕ ರೂಪದಲ್ಲಿ ಹೊರಬಿದ್ದಿದೆ. ೧೯೦೭ರಲ್ಲಿ **ಕಾವ್ಯಕಂಠ ಗಣಪತಿ ಶಾಸ್ತ್ರಿ**ಗಳೆಂಬ ಬಹುದೊಡ್ಡ ಸಂಸ್ಕೃತ ಕವಿಗಳು ಶ್ರೀ ರಮಣರನ್ನು ನೋಡಲು ಬಂದರು. ಅವರು ಅನೇಕ ಲಕ್ಷ ಮಂತ್ರ ಜಪ ಮಾಡಿದ ತಪಸ್ವಿಗಳಾಗಿದ್ದರು ; ಆದರೆ ಅವರಿಗೆ ಆಗಲೂ ನಿಜವಾದ ತಪಸ್ಸೆಂದರೇನೆಂಬುದು ತಿಳಿದಿರಲಿಲ್ಲ. ಆದುದರಿಂದ ಅವರು ಶ್ರೀ ರಮಣರನ್ನು ಸಂದರ್ಶಿಸಿ ಹೇಳಿಕೊಂಡರು. "ನಾನು ವೇದಗಳೆಲ್ಲವನ್ನೂ ಕಲಿತಿದ್ದೇನೆ ; ಲಕ್ಷಗಟ್ಟಲೆ ಮಂತ್ರ ಜಪಗಳನ್ನು ಮಾಡಿದ್ದೇನೆ; ಉಪವಾಸ ಮತ್ತು ಇತರ ವ್ರತಗಳನ್ನು ಪಾಲಿಸಿದ್ದೇನೆ. ಆದರೂ ನನಗೆ ಇನ್ನೂ ನಿಜವಾಗಿ ತಪ್ಪಸ್ಸೆಂದರೇನೆಂಬುದು ಗೊತ್ತಿಲ್ಲ. ದಯವಿಟ್ಟು ನನಗೆ ಉಪದೇಶ ಮಾಡಿರಿ"– ಎಂದು. ಶ್ರೀ ರಮಣರೆಂದರು. "ನಾನೆಂಬುದು ಎಲ್ಲಿಂದ ಬರುತ್ತದೆ ಎಂಬುದನ್ನು ನೋಡಿದರೆ ಅಲ್ಲಿ ಮನಸ್ಸು ಮುಳುಗುತ್ತದೆ ; ಅದೇ ತಪಸ್ಸು"–ಎಂದು. ಈ ಉತ್ತರ ನೀಡಿದ ಮೇಲೂ ಶ್ರೀ ಗಣಪತಿಶಾಸ್ತ್ರಿಗಳು, "ಜಪದಿಂದ ಉಕ್ತ ಸ್ಥಿತಿಯನ್ನು ಪಡೆಯಲು ಸಾಧ್ಯವೇ" ಎಂದು ಮತ್ತೆ ಕೇಳಿದರು. ಶ್ರೀ ರಮಣರು, "ಒಂದು ಮಂತ್ರವನ್ನು ಉಚ್ಚರಿಸಿದಾಗ ಅದರ ಸದ್ದು ಎಲ್ಲಿಂದ ಬರುತ್ತದೆ ಎಂಬುದನ್ನು ಗಮನಿಸಿದರೆ ಅಲ್ಲಿ ಮನ ಮುಳುಗುತ್ತದೆ ; ಅದೇ ತಪಸ್ಸು" ಎಂದು ಉತ್ತರ ಕೊಟ್ಟರು.

ಈ ಉಪದೇಶಗಳನ್ನು ಪಡೆದುಕೊಂಡ ಮೇಲೆ ಶ್ರೀ ಕಾವ್ಯ ಕಂಠ ಗಣಪತಿ ಶಾಸ್ತ್ರಿಗಳು, "ಇವರು ಸಾಮಾನ್ಯ ಜೀವಾತ್ಮರಲ್ಲ. ಇವರು ಪರಿಪೂರ್ಣರಾದ ಜ್ಞಾನಗುರುಗಳು. ಇವರು ಯಾವಾಗಲೂ ಸಹಜ ಆತ್ಮ ಸಮಾಧಿಯಲ್ಲಿರುವುದರಿಂದ, ಇವರು ನಿಜವಾಗಿಯೂ ಭಗವಾನ್ ಮಹರ್ಷಿ" ಎಂದು ಘೋಷಿಸಿ, **ಭಗವಾನ್ ಶ್ರೀ ರಮಣಮಹರ್ಷಿ** ಎಂದು ಪದ್ಯದಲ್ಲಿ ಅವರನ್ನು ಸ್ತುತಿಸಿದರು. ಆ ದಿನದಿಂದಲೇ ಶ್ರೀ ರಮಣರು "ಶ್ರೀ ರಮಣ ಮಹರ್ಷಿಗಳು" ಎಂದು ಹೆಸರು ಪಡೆದರು.

ಭಗವಾನ್ ಶ್ರೀ ರಮಣರು ಅನನ್ಯರೂ ದಿವ್ಯರೂ ಆದ ಕವಿಗಳು. ಅವರ ತಾಯಿ ನುಡಿಯಾದ ತಮಿಳಿನಲ್ಲಿ ಅವರೊಬ್ಬ ಕಾವ್ಯ ಪ್ರತಿಭಾ ಸಂಪನ್ನರು. ಹಳೆಯ ಕವಿಗಳ ಪವಿತ್ರ ಶೈಲಿಗೆ ಅವರು ಹೊಸ ಪ್ರಾಣವಾಯುವನ್ನು ಉಸಿರನ್ನಾಗಿ ತುಂಬಿದರು. ಅವರ ಶೈಲಿಯು ಅಚ್ಚುಕಟ್ಟಾದದ್ದೂ ಅನ್ಯೂನಾನತಿರಕ್ತವಾದದ್ದೂ ಆಗಿದ್ದುದಲ್ಲದೆ ಅದರ ಪ್ರವಾಹವು – ಆ ತಮಿಳು ಕಾವ್ಯಧಾರೆಯು–ಉದಾತ್ತವೂ ಹೊಸ ಸಂಪದ್ಭರಿತ ತಾತ್ಪರ್ಯವುಳ್ಳದ್ದೂ ಆಯಿತು. ಸತ್ಯವನ್ನು ಹೇಳುವುದಾದರೆ, ಶ್ರೀ ರಮಣರು ವೈದಿಕ ಋಷಿಗಳು ; ಅವರು ನಮಗೆ ತಮಿಳು ಉಪನಿಷತ್ತುಗಳನ್ನು ನೀಡಿದರು ಎನ್ನಬೇಕು. ಅಷ್ಟಲ್ಲದೆ, ಅವರು ತಮಿಳಿನಲ್ಲಿ ಮಾತ್ರ ಕವಿಗಳಾಗಿರದೆ, ಸಂಸ್ಕೃತ, ಮಲೆಯಾಳಿ ಮತ್ತು ತೆಲುಗು ಭಾಷೆಗಳಲ್ಲೂ ಕವಿಗಳಾಗಿದ್ದರು. ವೆಣ್ ಬಾ ಛಂದಸ್ಸಿನಲ್ಲಿ ತೆಲುಗು ಪದ್ಯಗಳನ್ನು ರಚಿಸಿದವರಲ್ಲಿ ಅವರೇ ಮೊದಲಿಗರು. ಅದು ತಮಿಳಿನ ಅತ್ಯಂತ ಕಠಿಣವಾದ ಛಂದಸ್ಸು.

ಅನರ್ಘ್ಯ ಮೌಲ್ಯದ ಪದ್ಯರೂಪಗಳನ್ನು ರಚಿಸುವುದರ ಮೂಲಕ ಶ್ರೀ ರಮಣರು ಅನೇಕಾನೇಕ ಜ್ಞಾನರತ್ನಗಳಿಂದ ತಮಿಳು ಮಾತೆಯನ್ನು ಅಲಂಕರಿಸಿದರು. ಆದರೆ ಭಗವಾನ್ ರಮಣರು ಕೇವಲ ಲೇಖಕರಾಗಿರಲಿಲ್ಲ. ಅವರು ಎಂದೂ ಯಾವುದನ್ನೂ ಬರೆಯಲು ಸಂಕಲ್ಪ ಮಾಡಿರಲಿಲ್ಲ. ನಿಜವಾಗಿಯೂ ಅವರು ಅರುಣಾಚಲದಲ್ಲಿ ಕಾಲಿಟ್ಟಂದಿನಿಂದ ನಿಃಸಂಕಲ್ಪಸ್ಥಿತಿಯಲ್ಲಿಯೇ ಇರಲಾರಂಭಿಸಿದರು. ಆದರೆ ಭಗವಾನ್ ಶ್ರೀ ರಮಣರ ಕೆಲ ಉಪದೇಶವಾಕ್ಯಗಳಿಂದಲಾದರೂ ಜಗತ್ತು ಪಾವನವಾದದ್ದು ಹೇಗೆ? ಸೃಷ್ಟಿ, ಸ್ಥಿತಿ, ಲಯಕರ್ತನಾದ ಸರ್ವಶಕ್ತ ದೇವರ ಅಸ್ತಿತ್ವವನ್ನು ನಾವು ಒಪ್ಪುವುದಿಲ್ಲವೇ? ಅದೇ ಶಕ್ತಿಯು ಭಕ್ತರ ಪ್ರಾರ್ಥನೆ, ಸಂದೇಹ ಮತ್ತು ಪ್ರಶ್ನೆಗಳನ್ನು ವಿಷಯಗಳನ್ನಾಗಿ ತೆಗೆದುಕೊಂಡು ಶ್ರೀ ರಮಣರ ಮನೋವಾಕ್ಕಾಯಗಳನ್ನು ಸಾಧನಗಳನ್ನಾಗಿ ಮಾಡಿಕೊಂಡು, ಅವರ ಮೂಲಕ ಮಾನವ ಕೋಟಿಯ ಮುಕ್ತಿಗಾಗಿ ಆಧ್ಯಾತ್ಮಿಕ ಉಪದೇಶಗಳನ್ನು ಕೊಟ್ಟಿದೆ. ಕೆಲವು ಸಲ ಭಕ್ತರ ಪ್ರಶ್ನೆಗಳಿಗೆ ಉತ್ತರವಾಗಿ ತಮಿಳಿನ ಪದ್ಯಗಳು ಅವರಿಂದ ಹರಿದುಬರುತ್ತಿದ್ದವು. ನಮಗೆ ಈಗ ದೊರಕಿರುವ ರಮಣೋಪದೇಶಗಳೆಲ್ಲವೂ ಈ ವಿಧವಾಗಿಯೇ ಅವರ ತುಟಿಗಳಿಂದ ತಪ್ಪಿಸಿಕೊಂಡು ಬಂದಂಥವು. ಅವೆಲ್ಲವನ್ನು ಸಂಗ್ರಹಿಸಿ ಸಂಪಾದಿಸಿದಾಗ ಅವು ಶ್ರೀ ರಮಣರ ಸಮಗ್ರ ಕೃತಿಗಳೆನ್ನಿಸುತ್ತವೆ. ಅವುಗಳಲ್ಲಿ ೫ ಸ್ತೋತ್ರಗಳೂ, ೩ ಶಾಸ್ತ್ರಗಳೂ ಮುಖ್ಯ ಕೃತಿಗಳು. **"ಶ್ರೀ ಅರುಣಾಚಲಸ್ತುತಿ ಪಂಚಕಂ" ಎಂಬುದು ಸ್ತೋತ್ರ ಕೃತಿ. "ಉಪದೇಶ ಉಂಧಿಯಾರ್, ಉಳ್ಳಧು ನಾರ್ಪಧು** ಮತ್ತು **ಗುರುವಾಚಕ ಕೋವೈ"** ಎಂಬಿವು ಶಾಸ್ತ್ರಗಳು.

ತಮಿಳು ಮಹಾಕವಿಯೂ ರಮಣ ಭಕ್ತಾಗ್ರೇಸರರೂ ಆದ ಶ್ರೀ ಮುರುಗನಾರರ ಬೇಡಿಕೆಯನ್ನು ಪೂರೈಸಲು ಶ್ರೀ ರಮಣರು "ಉಪದೇಶ ಉಂಧಿಯಾರ್" ಮತ್ತು "ಉಳ್ಳಧು ನಾರ್ಪಧು" ಎಂಬ ಕೃತಿಗಳನ್ನು ರಚಿಸಿದ್ದು. "ಉಳ್ಳಧು ನಾರ್ಪಧು" ಎಂಬುದೊಂದು ಅಸದೃಶವಾದ ಉಪನಿಷತ್ತು. ಅದರಲ್ಲಿ ಅವರು ತಮ್ಮ ಹಿಂದಿನ ಕೆಲ ಪದ್ಯಗಳನ್ನು ಪರಿಷ್ಕರಿಸಿದ್ದೂ ಹೊಸ ಪದ್ಯಗಳನ್ನು ರಚಿಸಿ ಸೇರಿಸಿದ್ದೂ ಉಂಟು. "ಗುರುವಾಚಕ ಕೋವೈ" ಎಂಬುದು ಮೊದಲಿನಿಂದಲೂ ಶ್ರೀ ರಮಣರು ಹೇಳುತ್ತ ಬಂದ ದಿನದಿನದ ತಮಿಳು ಸೂಕ್ತಿಗಳನ್ನು ಉಪದೇಶಗಳೆಂದು ಶ್ರೀ ಮುರುಗನಾರರು ಸಂಗ್ರಹಿಸಿ ಉಳಿಸಿ ಕಾಯ್ದಿಟ್ಟುಕೊಂಡ ಖಜಾನೆ, ರತ್ನಕೋಶ. ಶ್ರೀ ರಮಣರ ಈ ಮೂರು ಮುಖ್ಯ ಕೃತಿಗಳು

ಶ್ರೀ ಮುರುಗನಾರರನ್ನು ಉದ್ದೇಶಿಸಿ ಬರೆದ **"ಶ್ರೀ ರಮಣ ಪ್ರಸ್ಥಾನ ತ್ರಯಂ"** (ಅಥವಾ ಮೋಕ್ಷಕ್ಕೆ ದಿವ್ಯಾಧಾರವುಳ್ಳ ಮೂರು ಶ್ರೀ ರಮಣ ಕೃತಿಗಳು) ಎಂದು ಪ್ರಸಿದ್ಧವಾಗಿವೆ.

ಅರುಣಾಚಲವು ಪವಿತ್ರವಾದ ಪರ್ವತ ; ಶಿವ ಪ್ರಭುವಿನ ಆದಿಯ ಹಾಗೂ ಅಗ್ರಗಣ್ಯವಾದ ರೂಪ. ನಿಜವಾಗಿಯೂ ಅದು ಸ್ವತಃ ಶಿವನೇ ಆಗಿದೆ. ಮುನಿಗಳು ನಮಗೆ ಮಾರ್ಗದರ್ಶನ ಮಾಡುವುದಲ್ಲದೆ ತಾವೇ ಆಡಿದಂತೆ ಮಾಡಿ, ಉದಾಹರಣೆಗಳನ್ನು ತೋರಿಸಿಕೊಡುವರು. ಈ ಪ್ರಕಾರ, ಭಗವಾನ್ ಶ್ರೀ ರಮಣರೇ ಸ್ವತಃ ಅನೇಕ ಬಾರಿ ಭಕ್ತವೃಂದದೊಡನೆ ಅರುಣಾಚಲ ಪ್ರದಕ್ಷಿಣೆಯನ್ನು[೧೧] ಮಾಡುತ್ತಿದ್ದರು. ಪುರಾಣಗಳಲ್ಲಿ ಉಣ್ಣಮುಳೈ ಅಂಬಿ ಕೈ ಎಂಬ ಅರುಣಾಚಲೇಶ್ವರ ಪತ್ನಿಯು ಈ ಗಿರಿಪ್ರದಕ್ಷಿಣೆ ಮಾಡಿಯೇ (ತನ್ನ ದೇಹವು ದೇವರ ಮೂರ್ತಿಯೊಡನೆ ಕೂಡಿಕೊಂಡಾಗ) ಅರ್ಧನಾರೀಶ್ವರ ಎನಿಸಿದ್ದು ವರ್ಣಿತವಾಗಿದೆ. ಇಷ್ಟೇ ಅಲ್ಲ, ದೇಗುಲದಲ್ಲಿದ್ದ ದೇವರಾದ ಶ್ರೀ ಅರುಣಾಚಲೇಶ್ವರನೇ ಸ್ವತಃ ವರ್ಷಕ್ಕೆರಡು ಬಾರಿ ಗಿರಿಗೆ ಪ್ರದಕ್ಷಿಣೆ ಮಾಡುತ್ತಿರುವಾಗ ಅರುಣಾಚಲ ಪ್ರದಕ್ಷಿಣೆಯ ಮಹತ್ವವನ್ನು ಹೇಗೆ ನಾವು ಊಹಿಸಿಯೇವು? ಶ್ರೀ ರಮಣರು ವಿರೂಪಾಕ್ಷಿ ಗುಹೆಯಲ್ಲಿದ್ದಾಗ ಮತ್ತು ಆ ದಿನಗಳಲ್ಲಿ ಅವರು ಹಾಗೆ ಪ್ರದಕ್ಷಿಣೆ ಮಾಡುತ್ತಿದ್ದಾಗ **"ಶ್ರೀ ಅರುಣಾಚಲ ಅಕ್ಷರಮಣಮಾಲೈ"** ಎಂಬ ಐದರಲ್ಲಿ ಮೊದಲನೆಯದಾದ, ಸ್ತೋತ್ರವನ್ನು ರಚಿಸಿದ್ದು. ನೆನೆದೊಡನೆಯೇ ಮುಕ್ತಿಕೊಡುವ' ಅರುಣಾಚಲದ ಈ ಸ್ತೋತ್ರವನ್ನು ಈಗ ಅವರ ಸಾವಿರಾರು ಶಿಷ್ಯರು ಹಾಡುತ್ತಾರೆ.

ಲೋಕಮಹಾಗುರುವಿನ ಜನ್ಮಸ್ಥಳವೆನ್ನಿಸಿದ್ದು ತಮಿಳುನಾಡಿನ ಮಹಾಭಾಗ್ಯ. ಅಂಥ ಮಹಾತ್ಮರಿಗೆ ಜನ್ಮವಿತ್ತ ಶ್ರೀ ಅಳಹಮ್ಮಾಳ್ ಅವರ ಭಾಗ್ಯವು ಇನ್ನು ಹೆಚ್ಚಿನದು. ಇಡೀ ಜಗತ್ತಿಗಾಗಿ ತಮ್ಮ ಮಗನನ್ನು ಧಾರೆಯೆರೆದು ಕೊಟ್ಟದ್ದು ಅವರು ಮಾಡಿದ ಮಹಾಪುಣ್ಯಕಾರ್ಯ. ಅಂಥ ತ್ಯಾಗಧಾರೆಯು ವ್ಯರ್ಥವಾಗಿ ಹೋಗುವುದು ಹೇಗೆ? ಕೊನೆಯಲ್ಲಿ ಅದು ಅವರನ್ನು ಮುಕ್ತಿ ಮಕುಟದಿಂದ ಅಲಂಕರಿಸಿತು. ಕಾಲ ಹೋದ ಹಾಗೆ ಅಳಹಮ್ಮಾಳ್ ಅವರು ಶ್ರೀ ರಮಣರ ದಿವ್ಯಾಕರ್ಷಣೆಗೆ ತುತ್ತಾದರು. ರಮಣರು ಅತೀತಾಶ್ರಮಿಗಳಾಗಿದ್ದರು.[೧೨] ಸಂಬಂಧಿಕರ ಬಗೆಗೆ ರಾಗ–ದ್ವೇಷಗಳಿಲ್ಲದವರು. ಕ್ರಮೇಣ ಭಗವಾನ್ ರಮಣರ ಅನುಗ್ರಹವು ಅವರನ್ನು ಪರಿಪಕ್ವಮಾಡಿ, ಅವರು ಹುಟ್ಟಿದೂರು, ಮನೆ, ಕುಟುಂಬ ಮತ್ತು ಪ್ರಾಪಂಚಿಕ ಆಸಕ್ತಿಗಳೆಲ್ಲವನ್ನೂ ಬಿಡುವಂತೆಸಗಿತು. ಕೊನೆಗೆ ೧೯೧೬ರಲ್ಲಿ ತಾಯಿಯವರು ಶ್ರೀ ರಮಣರ ಪಾದಗಳೆಡೆಗೆ ಬಂದು, ಅವುಗಳ ಆಶ್ರಯವನ್ನು ಪಡೆದು, ಆಗಲೇ ಅವರಿಗೆ ಆತ್ಮ ಸಮರ್ಪಣೆ ಮಾಡಿಕೊಂಡಿದ್ದ ಶಿಷ್ಯರಲ್ಲಿ ಒಬ್ಬರಾದರು. ಶ್ರೀರಮಣರ ತಮ್ಮ ನಾಗಸುಂದರನು ಸನ್ಯಾಸಿಗಳಾಗಿ **ಶ್ರೀ ನಿರಂಜನಾನಂದ ಸ್ವಾಮಿ**ಗಳೆಂಬ ಹೆಸರನ್ನು ಧರಿಸಿದರು. ಇಂದಿನ ಶ್ರೀರಮಣಾಶ್ರಮದ ರಚನೆಗೂ ಅಭಿವೃದ್ಧಿಗೂ ಅವರೇ ಮುಖ್ಯರಾದ ಕಾರಣಕರ್ತರು. ಆ ಕಾಲದಲ್ಲಿ ಶ್ರೀ ರಮಣರ ಜೊತೆಗೆ ವಾಸಿಸಿದ್ದ ಕೆಲಭಕ್ತರು ಸಂಬಂಧಿಕರ ಗುಂಪು ಬಂದು ಸೇರಿದರೆ ಅವರು ಹೊರಟು ಹೋದಾರೆಂದು ಹೆದರಿದರು. ಅಷ್ಟೇ ಅಲ್ಲ ; ಅಳಹಮ್ಮಾಳ್

---

೧೧. ಪ್ರದಕ್ಷಿಣೆಯೆಂದರೆ ಬರಿಗಾಲಿನಿಂದ, ಬಲದಿಂದ ಎಡಕ್ಕೆ ಪವಿತ್ರ ವಸ್ತುವಿನ ಸುತ್ತಲೂ ನಡೆಯುವುದು.

೧೨. ಅತೀತಾಶ್ರಮಿ ನಾಲ್ಕು ಆಶ್ರಮಗಳನ್ನು ಮೀರಿದವನು. ಹಿಂದು ಸಮಾಜದಲ್ಲಿಯ ಜೀವನದ ಮಜಲುಗಳು ನಾಲ್ಕು.

ಅವರು ಶ್ರೀರಮಣರೊಡನೆ ವಾಸಿಸುವುದಕ್ಕೂ ಕೆಲ ತಕರಾರುಗಳು ಬಂದವು. ಆದರೆ ಸಂಬಂಧಿಕರೀಗ ಕೋಳಿ ಹೂವಿನಂತೆ ನೀರಮೇಲೆ ತೇಲಬಲ್ಲವರಾದಾರಲ್ಲದೆ, ಉಪ್ಪಿನಂತೆ ನೀರಲ್ಲಿ ಕರಗಿ ನೀರನ್ನು ಕೆಡಿಸಲಾರರು ಎಂಬುದನ್ನವರು ಅರಿಯದಾದರು. ಹೀಗೆ ಭಗವಾನ್ ಶ್ರೀ ರಮಣರು ಸಹಜಾತ್ಮ ಸ್ಥಿತಿಯ ಬಲವನ್ನು ಆಧುನಿಕ ಜಗತ್ತಿಗೆ ನಿದರ್ಶಿಸಿದರು. ಆ ಸ್ಥಿತಿಯ ಬಲದಿಂದ ಎಲ್ಲ ಸಂದರ್ಭಗಳಲ್ಲಿಯೂ ಒಬ್ಬನು ಮಾನಸಿಕ ಅಲಿಪ್ತತೆಯಿಂದ ಜೀವಿಸಬಲ್ಲನು.

ಆಮೇಲೆ, ಭಕ್ತರು ಗುಡ್ಡದ ಇನ್ನೂ ಹೆಚ್ಚು ಎತ್ತರವಾದ ಜಾಗದಲ್ಲಿ ಒಂದು ಚಿಕ್ಕದೂ ರಮಣೀಯವೂ ಆದ ಆಶ್ರಮವನ್ನು ರಚಿಸಿದರು. ಕಂದಸ್ವಾಮಿಯೆಂಬ ಹರಿಜನ ಭಕ್ತನು ಏಕಾಂಗಿಯಾಗಿ ಆ ಕಟ್ಟಡದ ಶ್ರಮದ ಬಹುಭಾರವನ್ನು ನಿರ್ವಹಿಸಿದುದರಿಂದ ಅದಕ್ಕೆ **ಸ್ಕಂದಾಶ್ರಮ** ಎಂದು ಅವನ ಹೆಸರನ್ನಾಧರಿಸಿ ಎಲ್ಲರೂ ಕರೆದರು. ೧೯೨೨ ರ ಕೊನೆಯವರೆಗೆ ಶ್ರೀ ರಮಣರು ಅಲ್ಲಿದ್ದರು. ಆ ವರ್ಷದ ಮೇ ತಿಂಗಳಲ್ಲಿ ಅಳಹಮ್ಮಾಳ್ ಅವರು ರೋಗಗ್ರಸ್ತರಾದರು. ಅವರ ಕೊನೆಯ ಗಳಿಗೆಯಲ್ಲಿ ಶ್ರೀ ರಮಣರು ಅವರ ಹತ್ತಿರ ಕುಳಿತು ತಮ್ಮ ದಿವ್ಯಶಕ್ತಿಯ ಬಲ ಹಸ್ತವನ್ನು ಅವರ ಹೃದಯದ ಮೇಲೂ ಎಡಹಸ್ತವನ್ನು ಅವರ ತಲೆಯ ಮೇಲೂ ಇಟ್ಟರು. ಆ ಸಮಯದಲ್ಲಿ ಅವರ ತಾಯಿಯಲ್ಲಿದ್ದ ಬಹುಭವ ಹೇತುಗಳಾದ ಕರ್ಮವಾಸನೆಗಳಿಗೂ ಶ್ರೀ ರಮಣರ ಹಸ್ತದಿಂದ ಹರಿಯುತ್ತಿದ್ದ ಅನುಗ್ರಹ ಶಕ್ತಿಗೂ ಬಹಳ ಉಗ್ರವಾದ ಸುದೀರ್ಘ ಆಂತರ್ಯುದ್ಧವುಂಟಾಯಿತು. ಕೊನೆಗೆ ಆ ಕರ್ಮವಾಸನೆಗಳೆಲ್ಲವೂ ಹತವೂ ನಷ್ಟವೂ ಆದವು ಮತ್ತು ಅಳಹಮ್ಮಾಳರ ಜೀವಾತ್ಮವು ತಣ್ಣಗೆ ಹಿಂದಿರುಗಿ ನಿಜಸ್ಥಿತಿಯಾದ ಬ್ರಹ್ಮದಲ್ಲಿ ಮುಳುಗಿ ಹೋದವು. ೧೯೨೨ ರ ಮೇ ೧೯ರ ರಾತ್ರಿ ದೇಹ ಅವರನ್ನು ಬಿಟ್ಟು ಹೋಯಿತು. ಆಗ ಶ್ರೀ ರಮಣರು ಅವರಿಗೆ ಮುಕ್ತಿ ದೊರಕಿತೆಂದು ಸನ್ನೆಯಿಂದ ತಿಳಿಸಿದರು. ಪಾಲಿತೀರ್ಥವೆಂಬಲ್ಲಿ ಅವರ ನಿರ್ಮಲ ಶರೀರವನ್ನು ಹೂಳಲಾಯಿತು. ಪಾಲಿತೀರ್ಥವೊಂದು ಕೆರೆ ; ಅರುಣಾಚಲದ ದಕ್ಷಿಣ ಸಾನುವಿನ ಬುಡದಲ್ಲಿ ಅದಿತ್ತು. ಅವರ "ಸಮಾಧಿ"ಯ ಮೇಲೆ ಸ್ಥಾಪಿಸಲಾದ ಶಿವಲಿಂಗದ ಹೆಸರು **ಶ್ರೀ ಮಾತೃಭೂತೇಶ್ವರ** ಎಂದು. ವರ್ಷಗಳು ಉರುಳಿದ ಮೇಲೆ ಶ್ರೀ ನಿರಂಜನಾನಂದ ಸ್ವಾಮಿಗಳು ಮಾತೃಭಕ್ತಿಯು ಭೂಮಿಯಲ್ಲಿ ಬದುಕಲು ಶ್ರೀ ರಮಣರಿಗೆ ದೇಹ ದೇವಾಲಯವನ್ನು ರಚಿಸಿಕೊಟ್ಟ ತಾಯಿಯವರಿಗೆ ಒಂದು ದೇವಾಲಯವನ್ನು ಕಟ್ಟಿಸಿ ನಿಲ್ಲಿಸಿದ್ದು ಉಚಿತವೆನ್ನಿಸಿತು (ಅದಿಂದು ಮಾತೃಭೂತೇಶ್ವರ ದೇವಸ್ಥಾನ).

ಶ್ರೀ ಅಳಹಮ್ಮಾಳವರು ದಿವಂಗತರಾದ ಮೇಲೆ ಭಗವಾನ್ ರಮಣರು ಎಷ್ಟೋ ಸಲ ಸ್ಕಂದಾಶ್ರಮದಿಂದ ಅವರ "ಸಮಾಧಿ"ಯವರೆಗೆ ನಡೆದು ಹೋಗಿಬರುತ್ತಿದ್ದರು. ದೇವಸ್ಥಾನವಾಗುವ ಪೂರ್ವದಲ್ಲಿ ಅದು ಒಂದು ಗುಡಿಸಲಾಗಿತ್ತು. ೧೯೨೨ ನೆಯ ಇಸವಿಯ ಡಿಸೆಂಬರ್ ತಿಂಗಳಲ್ಲಿ ಅರುಣಾಚಲನ ದಿವ್ಯ ಆದೇಶದ ಪ್ರಕಾರ ಶ್ರೀ ರಮಣರು ಇಳಿದು ಬಂದು ಅಲ್ಲಿಯೇ ಸ್ಥಿರವಾಗಿ ನೆಲೆಸಿದರು. ಬಹಳ ಭಕ್ತರು ಅವರ ಸನ್ನಿಧಾನದಲ್ಲಿ ವಾಸಿಸಲು ಬಂದದ್ದರಿಂದ ಅದರ ಸುತ್ತಲೂ ವಿಶಾಲ ಹಾಗೂ ಸುಂದರ ಕಟ್ಟಡಗಳಿದ್ದವು– ಅವೇ ಇಂದಿನ **ಶ್ರೀ ರಮಣಾಶ್ರಮ**.

ಶ್ರೀ ರಮಣಾಶ್ರಮದಲ್ಲಿ ಶ್ರೀ ರಮಣರು ವಾಸಿಸುತ್ತಿದ್ದುದು ಸಂಪೂರ್ಣ ಸಮತ್ವ ಎಂಬ ತತ್ವವನ್ನವಲಂಬಿಸಿ. ಕೊನೆಯವರೆಗೂ ಅವರು ಕೌಪೀನವನ್ನು ಮಾತ್ರ ಧರಿಸುತ್ತಿದ್ದರು.

ಅದು ನಮ್ಮ ದೇಶದ ಅತಿ ಬಡವನಿಗೆ ಬೇಕಾಗುವ ಬಟ್ಟೆಗಿಂತಲೂ ಕಡಿಮೆ ಅಳತೆಯದಾಗಿತ್ತು. ಅವರು ತೆಗೆದುಕೊಳ್ಳುತ್ತಿದ್ದ ಆಹಾರದ ಸೂತ್ರವೂ ಅಂಥದೇ ಆಗಿತ್ತು. ಯಾವಾಗಲೂ ಅವರು ತಮ್ಮ ಭಕ್ತರ ನಡುವೆ ಕುಳಿತು ಎಲ್ಲರೂ ಊಟ ಮಾಡುತ್ತಿದ್ದ ಸರ್ವಸಾಧಾರಣವಾದ ಆಹಾರವನ್ನು ಉಳಿದವರಿಗಿಂತ ಕಡಿಮೆ ಪ್ರಮಾಣದಲ್ಲಿ ಊಟ ಮಾಡುತ್ತಿದ್ದರು. ಭಕ್ತರು ಯಾವ ತಿನಿಸನ್ನಿತ್ತರೂ ಅದನ್ನವರು ಮಿಕ್ಕ ಎಲ್ಲರಿಗೂ ಅಲ್ಲಿಯೇ ಆಗಲೇ ಎದುರಾ ಎದುರು ಹಂಚಿ ತಿನ್ನುತ್ತಿದ್ದರು. ಮನುಷ್ಯರಷ್ಟೇ ಅಲ್ಲ–ದನ, ನಾಯಿ, ಮಂಗ, ಅಳಿಲು, ಕಾಗೆ ಮತ್ತು ನವಿಲುಗಳು ಕೂಡ ಆಶ್ರಮದಲ್ಲಿ ಸಂಪೂರ್ಣ ಸ್ವತಂತ್ರವೂ ಪರಿಪೂರ್ಣ ಹಕ್ಕುಳ್ಳವುಗಳೂ ಆಗಿದ್ದವು. **ಲಕ್ಷ್ಮಿ ಯೆಂಬ ಆಕಳು** ಮುದ್ದು ಮಗಳಂತಿದ್ದು ಕೊನೆಗಳಿಗೆಯಲ್ಲಿ ಶ್ರೀ ರಮಣರ ದಿವ್ಯಸ್ಪರ್ಶದಿಂದ ಮುಕ್ತಿಯನ್ನು ಪಡೆದದ್ದು ಒಂದು ಉದಾಹರಣೆ.

ಶ್ರೀರಮಣರಿರುತ್ತಿದ್ದ ಚಿಕ್ಕ ಪಡಸಾಲೆಯ ಬಾಗಿಲು ಹಗಲಿರುಳೂ ಎಲ್ಲರಿಗೂ ತೆರೆದಿರುತ್ತಿತ್ತು. ಅವರ ಬಾಳಿನಂಥ ಬಾಳಿನಲ್ಲಿ ಅದು ಕೇವಲ ಚೈತನ್ಯದ ವಿಶಾಲವಾದ ಆಕಾಶದಂತಿದ್ದುದರಿಂದ ಅವರಿಗೆ ಅಡಗಿಕೊಂಡಿರುವ ಅಗತ್ಯವೇನಿತ್ತು ಮತ್ತು ಹೇಗೆ ಅಡಗಿಕೊಳ್ಳಲು ಸಾಧ್ಯ? ನಟ್ಟಿರುಳೀನಲ್ಲಿಯೂ ಭಕ್ತರು ಅವರೆಡೆಗೆ ಹೋಗಿ ಅವರನ್ನು ಕಾಣಲು ಸ್ವತಂತ್ರರಾಗಿದ್ದರು. "ಕೊರತೆಗಳಿಗೆ ಮಾತ್ರ ಅಡಗಿರುವ ಅಗತ್ಯವಿದೆ, ಶುದ್ಧ ಹೃದಯ ಹಾಗೆ ಮಾಡಬೇಕಾದ ಅಗತ್ಯವಿಲ್ಲ" ಸಾಧು ಔವ್ವೆಯ್ಯಾರರ ವಿವೇಕವಾಣಿ! ಭಗವಾನ್ ರಮಣರ ದರ್ಶನ ಪಡೆಯುವುದು ಒಂದು ಮಹಾಭಾಗ್ಯವಾಗಿತ್ತು ಮತ್ತು ಅದಕ್ಕೆ ಯಾವ ಶರ್ತಗಳೂ ಇರಲಿಲ್ಲ: ಯಾವಾಗಲೂ ಎಲ್ಲರಿಗೂ ಅದು ಮುಕ್ತವಾಗಿತ್ತು. "ನೀವು ಒಳಗೆ ಬಂದು ಏನನ್ನು ಬೇಕಾದರೂ ತೆಗೆದುಕೊಂಡು ಹೋಗಬಹುದು" ಎಂದು ಅವರು ರಾತ್ರಿಯಲ್ಲಿ ಬಂದ ಕಳ್ಳರನ್ನು ಆದರದಿಂದ ಸ್ವಾಗತಿಸಿರುವಾಗ ಶ್ರೀರಮಣರ ಸಮದರ್ಶನಕ್ಕೆ ಇನ್ನಾವ ಪ್ರಮಾಣ ಬೇಕು?

೧೯೨೪ನೆಯ ಇಸವಿಯ ಜೂನ್ ೨೬ರ ನಡುರಾತ್ರಿ ೧೧ ೧/೨ ಗಂಟೆಯಾಗಿತ್ತು. ಆ ಕಾಲದಲ್ಲಿ ಶ್ರೀರಮಣಾಶ್ರಮವು ಕೆಲ ಮಡಲು ಗುಡಿಲುಗಳಿಂದ ಮಾತ್ರ ಕೂಡಿದ್ದರೂ ಅದೊಂದು ಶ್ರೀಮಂತ ಮಠವೆಂದು ತಿಳಿದುಕೊಂಡು ಅಲ್ಲಿಗೆ ಕೆಲ ಕಳ್ಳರು ಹೋದರು. ಕಿಟಕಿ ಬಾಗಿಲುಗಳನ್ನೊಡೆದು ಅವರು ಒಳ ಹೋಗಲು ಯತ್ನಿಸಿದರು. ಮತ್ತು ಎಲ್ಲ ಸಾಮಾನುಗಳನ್ನೂ ನಾಶ ಮಾಡುತ್ತೇವೆಂದು ಬೆದರಿಸಿದರು. ಸದ್ದು ಭಕ್ತರಿಗೆ ಎಚ್ಚರವನ್ನುಂಟು ಮಾಡಿತು; ಭಗವಾನ್ ಶ್ರೀರಮಣರ ಸಮೀಪದಲ್ಲಿ ಅವರು ಮಲಗಿದ್ದವರು. ಶ್ರೀರಮಣರು ಕಳ್ಳರನ್ನು ಆಮಂತ್ರಿಸಿದರು – "ಸರಿಯಾದ ಬಾಗಿಲಿನಿಂದ ಬನ್ನಿರಿ" ಎಂದರು. ಭಕ್ತರನ್ನು ಕುರಿತು "ಅವರಿಗೊಂದು ಲಾಟನ್ ಕೊಡಿರಿ, ಅವರು ತಮಗೆ ಬೇಕಾದುದೆಲ್ಲವನ್ನೂ ಹುಡುಕಲಿ" ಎಂದು ಹೇಳಿದರು. ಆದರೂ "ನೀವು ನಿಮ್ಮ ಹಣವನ್ನೆಲ್ಲಾ ಎಲ್ಲಿಟ್ಟಿದ್ದೀರಿ?" ಎಂದು ಅವರು ಸಿಟ್ಟಿನಿಂದ ಕೂಗಿದರು. "ನಾವು ಸಾಧುಗಳು, ಭಿಕ್ಷೆಯೆತ್ತಿ ಬದುಕುವವರು, ನಮ್ಮಲ್ಲಿ ಹಣವಿಲ್ಲ; ನಿಮಗಿಲ್ಲಿ ಕಂಡದ್ದನ್ನು ಬೇಕಾದ ಹಾಗೆ ಕೊಂಡೊಯ್ಯಬಹುದು; ನಾವು ಹೊರಗೆ ನಿಲ್ಲುತ್ತೇವೆ" ಎಂದು ಹೇಳಿ ಶ್ರೀರಮಣರು ಭಕ್ತರೊಡನೆ ಹೊರಗೆ ಹೋಗಿ ಕುಳಿತರು. ಗುಡಿಸಿಲಿಂದ ಹೊರಬಂದ ಆ ಕಳ್ಳರು ಕೋಲುಗಳಿಂದ ಅವರೆಲ್ಲರನ್ನು ಹೊಡೆದರು ಮತ್ತು ಒಂದು ಏಟು ಶ್ರೀರಮಣರ ತೊಡೆಯ ಮೇಲೂ ಬಿದ್ದಿತು. "ನಿಮಗಿನ್ನೂ ತೃಪ್ತಿಯಾಗದಿದ್ದರೆ ನನ್ನ ಇನ್ನೊಂದು ತೊಡೆಯ ಮೇಲೂ ಹೊಡೆಯಿರಿ" ಎಂದು ಶ್ರೀರಮಣರು ಅವರ ಬಗ್ಗೆ ಖೇದಗೊಂಡು ಹೇಳಿದರು!

ಕಳ್ಳರ ಬಗೆಗೆ ಅವರ ದಯೆಗೆ ಇದೇ ಗಡಿ ಎನ್ನಬಹುದೇ? ಅಲ್ಲ; ಶ್ರೀರಮಣರನ್ನು ಹೊಡೆಯುವುದನ್ನು ನೋಡಲಾರದ ಯುವಕ ಭಕ್ತನೊಬ್ಬನು ಕಬ್ಬಿಣದ ಸಲಾಕೆಯೊಂದನ್ನೆತ್ತಿ ಪ್ರತಿಭಟಿಸಲೆದ್ದಾಗ ಅವರು "ಅವರು ಅವರ ಧರ್ಮವನ್ನು ಮಾಡಲಿ (ಅವರ ಪಾತ್ರವನ್ನು ನಿರ್ವಹಿಸಲಿ). ನಾವು ಸಾಧುಗಳು; ನಾವು ನಮ್ಮ ಧರ್ಮವನ್ನು ಬಿಡಬಾರದು; ಭವಿಷ್ಯತ್ತಿನಲ್ಲಿ ಜಗತ್ತು ಏನಾದರೂ ತಪ್ಪಾದರೆ ನಮ್ಮನ್ನೇ ದೂರುವುದು. ನಮ್ಮ ಹಲ್ಲುಗಳು ನಮ್ಮ ನಾಲಗೆಯನ್ನು ಕಚ್ಚಿದಾಗ ಅವುಗಳನ್ನು ಮುರಿದು ದೂರ ಎಸೆಯುತ್ತೇವೆಯೇ?" ಎಂದು ಅವನಿಗೆ ಬುದ್ಧಿ ಹೇಳಿದರು.

"ಕೇಡನೆಸಗಿದ ನರಗೆ, ತತ್ಪ್ರತಿ–
ಯಾಗಿ ಕೋಪಾಟೋಪದಿ
ಕೇಡ ಮಾಡಲು ಹೋಗದಿರುವುದು
ಸಭ್ಯತೆಯ ಪರಮಾವಧಿ"

– ತಿರುಕ್ಕುರಳ್, ನುಡಿ ೧೫೭

ಕೆಲ ದಿನಗಳ ಅನಂತರ ಪೋಲೀಸರು (ಆರಕ್ಷಕರು) ಕಳ್ಳರನ್ನು ಹಿಡಿದು ಶ್ರೀ ರಮಣರೆದುರಿಗೆ ತಂದು ನಿಲ್ಲಿಸಿದರು. ಆ ರಾತ್ರಿ ನಿಮ್ಮ ತೊಡೆಗೆ ಪೆಟ್ಟು ಕೊಟ್ಟವನಾರೆಂದು ಗುರುತಿಸಿರಿ ಎಂದು ಅಧಿಕಾರಿಯೊಬ್ಬನು ಶ್ರೀ ರಮಣರನ್ನು ಕೇಳಿದನು. ಶ್ರೀ ರಮಣರು ಮುಗುಳ್ನಗೆಯಿಂದ, " (ಹಿಂದಿನ ಜನ್ಮದಲ್ಲಿ) ನಾನು ಯಾರಿಗೆ ಹೊಡೆದಿದ್ದೆನೆಂಬುದನ್ನು ಕಂಡುಹಿಡಿ. ಏಕೆಂದರೆ, ಅವನೇ ಈಗ ನನ್ನನ್ನು ಹೊಡೆದವನು !" ಎಂದು ಉತ್ತರ ಕೊಟ್ಟರು. ಅಪರಾಧಿಯನ್ನವರು ನಿಂದಿಸಲಿಲ್ಲ !

"ಅರಿಯದೊಮ್ಮೆ ನಿನಗೆ ಕೇಡ ಮಾಡಿದಂಥ ಹಗೆಯ ಗೆಲ್ಲು
ಯೋಗ್ಯವಾದ ತಾಳ್ಮೆಯಿಂದ
ಮರೆಯಬೇಕು ಮಾಡಿದಂಥ ಕೇಡನಾತನದರ ನೆನಹು
ಮರು ಕಳಿಸದ ಹಾಗೆ ಮತ್ತೆ"

'ತಿರುಕ್ಕುರಳ್', ನುಡಿ ೧೫೮

"ಕೇಡು ಮಾಡಿದ ನರನ ಕೇಡೆಲ್ಲವನು ಮರೆತು
ಮಾಡಲೊಳಿತೆನ್ನುವುದೇ ತಕ್ಕ ಶಿಕ್ಷೆ"

'ತಿರುಕ್ಕುರಳ್, ನುಡಿ ೩೧೪

ಕಾಲ ಹೋದ ಹಾಗೆ, ಜಗತ್ತಿನ ಎಲ್ಲ ಜನರಿಗೆ ಶ್ರೀ ರಮಣರು ಬೈಬಲ್, ತಿರುಕ್ಕುರಳ್, ಗೀತೆ, ಉಪನಿಷತ್ತುಗಳು ಹೇಳಿದ ಪಾಠಗಳೆಲ್ಲವುಗಳ ಜೀವಂತ ಮೂರ್ತಿಗಳೆಂಬುದು ಗೊತ್ತಾಯಿತು ಮತ್ತು ಅವರ ಪಾದಗಳತ್ತ ಆಕೃಷ್ಟರಾದರು. ಭಾರತೀಯ–ಅಭಾರತೀಯ ಎಂಬ ರಾಷ್ಟ್ರಭೇದವನ್ನು ಹಿಂದು, ಮುಸಲ್ಮಾನ್, ಕ್ರೈಸ್ತ, ಬೌದ್ಧ, ಜೈನ, ಶೀಖ ಎಂಬ ಮತಧರ್ಮ ಭೇದವನ್ನೂ ಮರೆತು ಬಹುದೂರದ ಸ್ಥಳಗಳಿಂದ ಗುಂಪು ಗುಂಪಾಗಿ ಶ್ರೀರಮಣರ ಪಾದಗಳೆಡೆಯಲ್ಲಿ ನೆರೆದು ಅವುಗಳನ್ನು ಪೂಜಿಸಿದರು. ಅವರೆಲ್ಲರಿಗೂ ಇವರು ತಮ್ಮ ಮತಧರ್ಮದ ಗುರುಗಳೇ ಆಗಿರುವರು ಎಂದೆನ್ನಿಸಿದ್ದು ಅವರು ಹಾಗೆ ಮಾಡಲು ಕಾರಣವಾಯಿತು. ಅವರಲ್ಲಿ ಅನೇಕರು ನಿಜ ಜ್ಞಾನವನ್ನು ಪಡೆದರು. ಕೆಲವರಿಗೆ

ಶ್ರೀ ರಮಣರನ್ನು ನೋಡಿದ ಮಾತ್ರದಿಂದ, ಕೆಲವರಿಗೆ ಅವರ ದಿವ್ಯ ಸನ್ನಿಧಿಯಲ್ಲಿ ವಾಸಿಸಿದ್ದರಿಂದ, ಮತ್ತೆ ಕೆಲವರಿಗೆ ಅವರ ಸೇವೆಗೆ ಹೃತ್ಪೂರ್ವಕವಾಗಿ ತಮ್ಮನ್ನು ಸಮರ್ಪಿಸಿಕೊಂಡುದರಿಂದ ಹಾಗೂ ಇನ್ನು ಕೆಲವರಿಗೆ ಅವರ ಉಪದೇಶವನ್ನು ಅನುಸರಿಸಿದುದರಿಂದ ನಿಜ ಜ್ಞಾನ ಪ್ರಾಪ್ತಿಯಾಯಿತು.

ಭಾರತದ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ರಾಜೇಂದ್ರ ಪ್ರಸಾದರು ಒಮ್ಮೆ ಮಹಾತ್ಮಾಗಾಂಧಿಯವರ ಆಶ್ರಮಕ್ಕೆ ಹೋಗಿ 'ಬಾಪೂಜಿ, ನಾನು ಶಾಂತಿಗಾಗಿ ನಿಮ್ಮ ಹತ್ತಿರ ಬಂದಿದ್ದೇನೆ' ಎಂದು ಹೇಳಿದರು. ಶಾಂತಿಧಾಮ ಎಲ್ಲಿತ್ತೆಂಬುದು ಗಾಂಧಿಯವರಿಗೆ ಗೊತ್ತಿದ್ದುದರಿಂದ ಅವರು ರಾಜೇಂದ್ರ ಪ್ರಸಾದರಿಗೆ, "ನಿಮಗೆ ಶಾಂತಿ ಬೇಕಾದರೆ ನೀವು ಶ್ರೀ ರಮಣಾಶ್ರಮಕ್ಕೆ ಹೋಗಿರಿ ; ಶ್ರೀ ರಮಣ ಮಹರ್ಷಿಗಳ ಸನ್ನಿಧಿಯಲ್ಲಿ ಕೆಲ ದಿನಗಳವರೆಗೆ ಉಳಿಯಿರಿ ; ಆಗ ನೀವು ಯಾವ ಮಾತನ್ನೂ ಆಡಬಾರದು ಮತ್ತು ಯಾವ ಪ್ರಶ್ನೆಯನ್ನೂ ಕೇಳಬಾರದು"–ಎಂದು ಬುದ್ಧಿ ಹೇಳಿದರು. ೧೯೩೮ನೆಯ ಇಸವಿಯ ಅಗಸ್ಟ್ ೧೪ ರಂದು ಗಾಂಧಿಯವರು ಹೇಳಿದ ಪ್ರಕಾರ ಅವರು ಶ್ರೀ ರಮಣಾಶ್ರಮಕ್ಕೆ ಬಂದರು. ಅವರೊಡನೆ ಬಂದ ಜನರು ಆಧ್ಯಾತ್ಮಿಕ ವಿಷಯಗಳ ಬಗ್ಗೆ ಶ್ರೀ ರಮಣರನ್ನು ಪ್ರಶ್ನಿಸಿದರೂ ಅವರಿದ್ದ ಗಿರಿಸ್ಥಳಗಳೆಲ್ಲವನ್ನೂ ಸಂಚರಿಸಿದರೂ ಶ್ರೀ ರಾಜೇಂದ್ರ ಪ್ರಸಾದರು ಮಾತ್ರ ಮಹರ್ಷಿಗಳ ಸಾನ್ನಿಧ್ಯದಿಂದ ಕದಲಲಿಲ್ಲ. ಅಲ್ಲದೆ, ಗಾಂಧಿಯವರು ಹೇಳಿದ ಪ್ರಕಾರ, ಯಾವ ಪ್ರಶ್ನೆಯನ್ನೂ ಸಂದೇಹವನ್ನೂ ಎತ್ತದೆ ಆ ಇಡೀ ವಾರವನ್ನು ಕಳೆದರು. ಶ್ರೀ ರಮಣರ ಅಪ್ಪಣೆ ಪಡೆದು ಹೊರಡುವಾಗ ರಾಜೇಂದ್ರಪ್ರಸಾದರು ಅವರ ಹತ್ತಿರ ಹೋಗಿ, "ಭಗವಂತರೇ, ಗಾಂಧಿಯವರೇ ನನ್ನನ್ನಿಲ್ಲಿಗೆ ಕಳಿಸಿದ್ದು, ಅವರಿಗೆ ನಾನು ಮುಟ್ಟಿಸಬೇಕಾದ ಯಾವುದಾದರೂ ಸಂದೇಶವಿದೆಯೇ?" ಎಂದು ಕೇಳಿದರು.

ಮಹರ್ಷಿಗಳು ಅನುಗ್ರಹಪೂರ್ವಕವಾಗಿ, "ಇಲ್ಲಿ ಯಾವ ಶಕ್ತಿಯು ಕೆಲಸ ಮಾಡುತ್ತಿದೆಯೋ ಅದೇ ಅಲ್ಲಿಯೂ ಕೆಲಸ ಮಾಡುತ್ತಿದೆ! ಹೃದಯದೊಡನೆ ಹೃದಯವು ಮಾತಾಡುತ್ತಿರುವಾಗ ಶಬ್ದಗಳ ಅಗತ್ಯವೇನು?" ಎಂದು ಹೇಳಿದರು. ಈ ಮಾತುಗಳು ಅನನ್ಯ ವಿವೇಕಪೂರ್ಣವಾದಂಥವು. ಎಲ್ಲ ಅಸಂಖ್ಯಾತ ಜೀವಾತ್ಮಗಳ ಮೂಲಕವೂ ಆವೊಂದೇ ಸರ್ವಾಧಿಕ ಪದಾರ್ಥವು ಇಡೀ ವಿಶ್ವವನ್ನು ಆಳುತ್ತಿದೆ ಎಂಬುದನ್ನವು ಪ್ರಕಟಿಸುತ್ತವೆ ! ರಾಜೇಂದ್ರಪ್ರಸಾದರು ಮತ್ತು ಗಾಂಧಿಯವರಂತೆಯೇ ನಮ್ಮ ದೇಶದಲ್ಲಿ ಆಗ ಇದ್ದ ಎಲ್ಲಾ ದೊಡ್ಡ ಕವಿಗಳೂ, ಪಂಡಿತರೂ, ರಾಜಕಾರಣಿಗಳೂ, ತತ್ವಜ್ಞಾನಿಗಳೂ ಮತಧಾರ್ಮಿಕ ಮುಖಂಡರೂ ಶ್ರೀ ರಮಣರ ಜ್ಞಾನದ ವೈಭವವನ್ನು ಹೊಗಳಿದರು. ವಿಶ್ವದ ಗುರುಗಳಾದ ಅಂಥ ಮಹಾತ್ಮರ ಸಾರವತ್ತಾದ ಉಪದೇಶಗಳಿಂದಲೇ **'ಶ್ರೀ ರಮಣಮಾರ್ಗ'** ಎಂಬ ಗ್ರಂಥದ ಎರಡು ಭಾಗಗಳು ತುಂಬಿವೆ.

ಮಾವನ ಕುಲದ ಮೋಕ್ಷಕ್ಕಾಗಿ ಶ್ರೀ ರಮಣ ಮಹರ್ಷಿಗಳು ಎರಡು ಮುಖ್ಯವಾದ ಆಧ್ಯಾತ್ಮಿಕ ಸಾಧನಗಳನ್ನು ಬೋಧಿಸಿದರು. ಅವುಗಳೆಂದರೆ (೧) **ಆತ್ಮಶೋಧದ ಮಾರ್ಗ**– ಅಂದರೆ – ತಾನು ಯಾರು? ಎಂದು ಕೇಳಿಕೊಂಡು ತನ್ನ ತಾನರಿಯುವುದು (ತನ್ನ ನಿಜ ಸ್ವಭಾವವನ್ನರಿತುಕೊಳ್ಳುವುದು) ಮತ್ತು (೨) **ಆತ್ಮಾರ್ಪಣದ ಮಾರ್ಗ**–ಅಂದರೆ– ತನ್ನನ್ನು (ಅಹಂಕಾರವನ್ನು) ಸಂಪೂರ್ಣವಾಗಿ ದೇವರಿಗೆ ಸಮರ್ಪಿಸುವುದು. ಮೊದಲಿನದು

ಜ್ಞಾನಮಾರ್ಗ ಮತ್ತು ಎರಡನೆಯದು **ಭಕ್ತಿಮಾರ್ಗ**. ಜಗತ್ತನ್ನೂ ದೇವರನ್ನೂ ಕುರಿತು ನಡೆಯುತ್ತಿರುವ ವಿವಿಧ ಸಂಶೋಧನೆಗಳ ಉದ್ದೇಶವು ಮಧ್ಯಮ-ಪ್ರಥಮ ಪುರುಷಗಳ ಕುರಿತಾಗಿವೆಯಲ್ಲದೆ, ಉತ್ತಮ ಪುರುಷವೆನ್ನಿಸಿದ ತನ್ನನ್ನು ತಾನು ಅರಿಯುವ ಕುರಿತಾಗಿ ನಡೆಯುತ್ತಿಲ್ಲವಲ್ಲವೇ? ಜಗತ್ತನ್ನೂ ದೇವರನ್ನೂ ಅರಿತುಕೊಳ್ಳಲು ಇಷ್ಟೆಲ್ಲಾ ಪ್ರಯತ್ನಗಳನ್ನು ಮಾಡುತ್ತಿರುವ ಮಾನವನು ನಿಜವಾಗಿ ತಾನಾರೆಂಬುದನ್ನು ತಿಳಿದಿಲ್ಲ ಹೇಗೆ? "ನಾನೊಬ್ಬ ಮನುಷ್ಯ" ಎಂದು ನಾವು ಹೇಳುತ್ತೇವೆ. ಇದು ನಮ್ಮ ಆತ್ಮದ ಸರಿಯಾದ ಜ್ಞಾನವಲ್ಲ; ಇದು ಕೇವಲ ಅಜ್ಞಾನ. ನಮ್ಮದಾದ ನಮ್ಮ ಶರೀರವನ್ನು ನಾವೆಂದು ತಪ್ಪಾಗಿ ಭಾವಿಸುತ್ತೇವೆ. ನಮ್ಮದೆಂಬ ವಸ್ತುವಿನಿಂದ ನಾವು ಭಿನ್ನ. ನಾನು ಯಾರೆಂಬ ಶೋಧದಿಂದ ನಮ್ಮ ವಸ್ತುವೆಂದೆನ್ನಿಸಿದ ಶರೀರದಿಂದ ನಮ್ಮನ್ನು ಪೃಥಕ್ಕರಿಸಿಕೊಂಡು, ಶರೀರದ ಒಡೆಯನಾದ ನಾನೆಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದೇ ಎಲ್ಲವುಗಳಿಗಿಂತ ಹೆಚ್ಚಿನ ಸಂಶೋಧನೆ; ಎಲ್ಲ ಜ್ಞಾನಗಳಿಗಿಂತ ಹೆಚ್ಚಿನ ಜ್ಞಾನ. 'ನಾನೀ ಶರೀರ' ಎಂಬ ಜ್ಞಾನವು (ಎಂದರೆ ಅಹಂಕಾರವೇ ನಾನೆಂದುಕೊಳ್ಳುವುದು) ನಮ್ಮಾತ್ಮದ ವಿಪರ್ಯಸ್ತ ಜ್ಞಾನ, ಮಿಥ್ಯಾಜ್ಞಾನ. ನಾವು ಅಸೀಮಾತ್ಮವೆಂಬುದನ್ನು ತಿಳಿದುಕೊಳ್ಳುವುದು ಯಾವುದರಲ್ಲಿಯೋ ಅದೇ ನಮ್ಮಾತ್ಮದ ನಿಜವಾದ ಜ್ಞಾನ.

ನಿಜವಾದ ಆತ್ಮಜ್ಞಾನವನ್ನು ಪಡೆದುಕೊಳ್ಳುವುದರಿಂದ ದೊರಕುವ ಪ್ರಯೋಜನವೇನು? ತನ್ನನ್ನು ಪ್ರತ್ಯಗಾತ್ಮನೆಂದು (ಬ್ರಹ್ಮವೆಂದು) ಮನುಷ್ಯನು ತಿಳಿದ ಮೇಲೆಯೇ ಅವನು ಎಲ್ಲ ಜೀವಿಗಳಿಗೂ ಸೃಷ್ಟಪದಾರ್ಥಗಳಿಗೂ, ನಿಜವಾದ ಒಳಿತನ್ನು ಮಾಡಬಲ್ಲವನಾಗುವನು. ಹೇಗೆ? ನಾವೇ ಎಲ್ಲ ಭಾವಪದಾರ್ಥಗಳ ಸತ್ಯತೆಯೆಂಬ ನಿಜಸಂಗತಿಯು ಆತ್ಮಜ್ಞಾನ ಉದಯಿಸಿದ ಮೇಲೆಯೇ ಗೊತ್ತಾಗುವುದು ಮತ್ತು ಆಗಲೇ ಎಲ್ಲವುಗಳ ಬಗೆಗೂ ನಮ್ಮ ಹೃದಯಲ್ಲಿ ನಿಜವಾದ ಪ್ರೀತಿಯು ಅರಳುವುದು. 'ನಿನ್ನ ನೆರೆಮನೆಯವನನ್ನು ನಿನ್ನನ್ನು ಹೇಗೋ ಹಾಗೇ ಪ್ರೀತಿಸು' ಎಂದು ವೇದಿಕೆಗಳನ್ನೇರಿ ಪ್ರಚುರಪಡಿಸುವುದರಿಂದಲೂ ಬರಿದೆ ಮಾತಾಡುವುದರಿಂದಲೂ ಎಲ್ಲ ಸೃಷ್ಟ ಪದಾರ್ಥಗಳನ್ನು ಯಾವನೂ ಪ್ರೀತಿಸಲಾರನು. ಹಾಗೆ ಪ್ರೀತಿಸಲು ಆತ್ಮಜ್ಞಾನವಾಗಿರಲೇಬೇಕು. **ಮಾನವನು ಯಾವಾಗ ಇಡೀ ಜಗತ್ತನ್ನೂ ಅದರಲ್ಲಿರುವ ಎಲ್ಲ ಜೀವಾತ್ಮಗಳನ್ನೂ ಉತ್ತಮ ಪುರುಷ ಎಂದು ಅನುಭವದಲ್ಲಿ ಅರಿಯುವನೋ ಅನನ್ಯಭಕ್ತಿಯು ಆಗ ಸಿದ್ಧಿಸುವುದು**. ಅಂಥ, ಆತ್ಮಸಾಕ್ಷಾತ್ಕಾರವೊಂದೇ ತಾಯಿಬೇರು; ಅದಿಲ್ಲದೆ ಶಾಂತಿ, ಪ್ರೀತಿ ಮತ್ತು ಸುಖಗಳು ಜಗತ್ತಿನಲ್ಲಿ ಅಭಿವೃದ್ಧಿ ಹೊಂದಲಾರವು. ಆದುದರಿಂದ ಜಗತ್ತಿಗೀಗ ಬೇಕಾದ ಒಂದೇ ಒಂದು ಮುಖ್ಯ ಅವಶ್ಯಕತೆಯೆಂದರೆ, ಅಹಮೆಂಬ ದುರ್ವಿಚಾರವನ್ನು, ದುಷ್ಟತನವನ್ನು, ನಾಶ ಮಾಡುವ ಮದ್ದು. ಪ್ರಪಂಚದ ಸೇವೆಯನ್ನು ನಿಜವಾದ ಆತ್ಮಜ್ಞಾನಿಯೊಬ್ಬ ಮಾತ್ರ ನಿಜವಾಗಿ ಮಾಡಬಲ್ಲನು ! ಇಡೀ ಜಗತ್ತಿನ ಆಧ್ಯಾತ್ಮಿಕ ಮತ್ತು ನೈತಿಕ ಯೋಗಕ್ಷೇಮಕ್ಕೆ ಅಂಥ ಜ್ಞಾನಿಯ ಅಸ್ತಿತ್ವವು ಭೂಮಿಯ ಮೇಲೆ ಇದ್ದರೆ ಸಾಕು-ಅದೇ ಒಂದು ಖಚಿತ ಭರವಸೆ.

ಸರಿಯಾಗಿ ಅರ್ಥ ಮಾಡಿಕೊಂಡರೆ, ಆತ್ಮ ಸಮರ್ಪಣೆಯೆಂದರೆ ಅಹಂಕಾರವನ್ನು ದೇವರಿಗರ್ಪಿಸುವುದು. ಆತ್ಮ ಸಮರ್ಪಣ-ಆತ್ಮಶೋಧಗಳು ಫಲಿತದಲ್ಲಿ ಒಂದೇ. ಏಕೆಂದರೆ ಅವುಗಳೆರಡರ ಪರಿಣಾಮವೂ ಅಹಂಕಾರ ನಾಶವೇ ಆಗಿದೆ- ಅಬ್ಯಾಸದಲ್ಲಿಯೂ ಅವೆರಡೂ

ಒಂದೇ ರೀತಿಯವು. ದೇವರಲ್ಲಿ ನಂಬಿಗೆ ಇರುವವರಿಗೆ ಆತ್ಮ ಸಮರ್ಪಣಮಾರ್ಗ ಹೇಗೆ? ವೈಯಕ್ತಿಕ ಅಹಂಕಾರವೂ ಜಗತ್ತೂ ದೇವರ ಆಸ್ತಿಗಳಾದುದರಿಂದ ದೇಹವನ್ನು ನಾನು ಮತ್ತು ನನ್ನದೆಂದು ಹಕ್ಕು ಸ್ಥಾಪನೆ ಮಾಡುವುದು ದೇವರ ಆಸ್ತಿಯನ್ನು ಕದ್ದಂಥ ದೊಡ್ಡ ಪಾಪ. ದೇಹಾಭಿಮಾನವನ್ನು ಸಮರ್ಪಿಸಿಬಿಟ್ಟರೆ (ಸರಿಯಾಗಿ ಹೇಳುವುದಾದರೆ– ದೇವರಿಗೆ ಬಿಟ್ಟುಕೊಟ್ಟರೆ) ಅಹಮಿಕಾಭಾವವು ಸಿದ್ಧಿಸುವುದು. ನಾನು ನನ್ನದೆಂಬವುಗಳನ್ನು ಬಿಟ್ಟ ಸ್ಥಿತಿಯೇ ಆತ್ಮಸ್ಥಿತಿ (ಪರಬ್ರಹ್ಮಸ್ಥಿತಿ).

ಆತ್ಮಶೋಧ ಮಾರ್ಗಕ್ಕೂ ಆತ್ಮಾರ್ಪಣ ಮಾರ್ಗಕ್ಕೂ ಆಭಾಸಿಕವಾದ ಭೇದವಿದ್ದೀತು: ಆತ್ಮ ಶೋಧಕನು ಬ್ರಹ್ಮಕ್ಕೂ, ಆತ್ಮ ಸಮರ್ಪಣಾರ್ಥಿಯೂ ದೇವರಿಗೂ ಶರಣಾಗುತ್ತಾರೆ. ಆದರೆ ಶ್ರದ್ಧೆಯಿಂದ ಅಭ್ಯಾಸ (ಸಾಧನ) ಮಾಡುವವನಿಗೆ ಫಲಿತ–ಆಚಾರಗಳೆರಡರಲ್ಲೂ ಇವು ಒಂದೇ ಆಗಿ ತೋರುತ್ತದೆ. ಬ್ರಹ್ಮದಲ್ಲಿ ಸಂಸ್ಥಾಪಿಸಲ್ಪಡುವುದೂ ಅಹಂಕಾರನಾಶವೂ ಫಲ. ಪ್ರಾಮಾಣಿಕ ಭಕ್ತನು ದೇವರಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕೆಂದಿದ್ದಾಗ 'ನಾನು ದೇಹ, ಅಥವಾ ಈ ದೇಹ ನನ್ನದು' ಎಂಬ ಭಾವವನ್ನಿಟ್ಟುಕೊಂಡರೆ ದತ್ತಾಪಹಾರವೆಂಬ ಪಾಪವು ಅವನಿಗೆ ತಟ್ಟುತ್ತದೆ. ಮೊದಲು ದೇವರಿಗೆ ದಾನ ಮಾಡಿದ್ದನ್ನು ಆಮೇಲೆ ತಿರುಗಿ ತೆಗೆದುಕೊಳ್ಳುವುದು ದತ್ತಾಪಹಾರವೆನ್ನಿಸುತ್ತದೆ. ಈ ಪ್ರಕಾರ, ಆತ್ಮ ಸಮರ್ಪಣವನ್ನು ಆಚರಿಸುವ ಸರಿಯಾದ ರೀತಿಯೆಂದರೆ, ದೇಹೋಽಹಂ, ಅಯಂ ದೇಹೋಮಮ (ನಾನೀದೇಹ, ಈ ದೇಹ ನನ್ನದು) ಎಂಬ ವಿಚಾರವು ಭಕ್ತನಲ್ಲಿ ಮತ್ತೆ ಉದಯವಾಗದಂತೆ ಆತನು ಬಹಳ ಜಾಗರೂಕನಾಗಿರಬೇಕು. ಆದರಿದನ್ನು ಆತ ಹೇಗೆ ಮಾಡುವನು? ನಾನೀ ದೇಹವೆಂಬ ವಿಚಾರ (ಆಲೋಚನೆ) ಮತ್ತೆ ಹುಟ್ಟೀತೆಂದು ಹೆದರಿ ಅವನು ಒಳಗಿಂದೊಳಗೇ ಎಚ್ಚತ್ತಿರಲು ಯಾವಾಗಲೂ ಪ್ರಯತ್ನಿಸುತ್ತಿರುವುದೆಂದರೇನು? ಅಹಂಭಾವದ ಮೇಲೆ ತೀಕ್ಷ್ಣ ಉನ್ಮುಖತೆಯಿಂದ (ಸಾವಧಾನನಾಗಿ) ಅವನು ಇರುವುದು ಎಂದರೇನು? ಎರಡೂ ಒಂದೇ. ಆದುದರಿಂದ ಆತ್ಮಶೋಧಕನಲ್ಲಿ ನಡೆಯುತ್ತಿರುವ ಆತ್ಮಾವಧಾನವೇ (ಬ್ರಹ್ಮಾವಧಾನವೇ) ಭಕ್ತನಲ್ಲಿಯೂ ನಡೆಯುತ್ತಿರುತ್ತದೆ ! ಹೀಗೆ. ನಮಗೆ ಸ್ಪಷ್ಟವಾಗುವ ಸಂಗತಿ ಎಂದರೆ – ಅವಧಾನವನ್ನು (ಲಕ್ಷ್ಯವನ್ನು, ಉನ್ಮುಖತೆಯನ್ನು) ಮಧ್ಯಮ–ಪ್ರಥಮ ಪುರುಷಗಳತ್ತಣಿಂದ ಹಿಂತೆಗೆದುಕೊಂಡು ಅಹಮ್ಮಿನ ಮೇಲೆ ನೆಡುವುದೇ ತನ್ನನ್ನು ದೇವರಿಗರ್ಪಿಸಿಕೊಳ್ಳುವ ಸರಿಯಾದ ವ್ಯಾವಹಾರಿಕ ಪದ್ಧತಿ. ತದ್ವಿರುದ್ಧವಾಗಿ, ಒಬ್ಬ ಭಕ್ತನು ದೇವರನ್ನು ತನ್ನಿಂದ ಹೊರಗೆ ಹುಡುಕಲು ಹೊರಟರೆ ಅದು ಮಧ್ಯಮ ಪುರುಷಾವಧಾನ ಎನ್ನಿಸುತ್ತದೆ. ದೇವರು ಯಾವಾಗಲೂ ಉತ್ತಮ ಪುರುಷವಾಚ್ಯದ ಸತ್ಯಾರ್ಥ ರೂಪದಲ್ಲಿ ಪ್ರಕಾಶಿಸುತ್ತಾನಾದುದರಿಂದ, **ಉತ್ತಮ ಪುರುಷದತ್ತ ಲಕ್ಷ್ಯವನ್ನು ಕೇಂದ್ರೀಕರಿಸುವುದು ನ್ಯಾಯವಾದ ದೇವೋನ್ಮುಖತೆ ; ಮತ್ತು ಇದೇ ಭಕ್ತಿಮಾರ್ಗ.**

ಭಗವಾನ್ ರಮಣರ ದೇಹದ ಕೊನೆಯ ದಿನಗಳು ಜ್ಞಾನಿಯ ಮಾಹಾತ್ಮ್ಯವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದ್ದವು. ಅರುಣಾಚಲದಲ್ಲಿ ಕಾಲಿಟ್ಟ ದಿನದಿಂದ ಅವರು ಒಂದು ನಿಮಿಷವೂ ದೂರ ಹೋಗದೆ ಸತತವಾಗಿ ೫೪ ವರ್ಷಗಳ ತನಕ ಅಲ್ಲೇ ಇದ್ದರು. ೧೯೪೯ರಲ್ಲಿ ಅವರ ಎಡ ತೋಳಿನಲ್ಲಿ ದುರ್ಮಾಂಸವು ಗಡ್ಡೆ ಗಟ್ಟಿಕೊಂಡು ಬೆಳೆಯತೊಡಗಿತು. ಮೊದಲು ಅದು ಬಹಳ ಸಣ್ಣದಾಗಿದ್ದರೂ ಎರಡು ಸಲ ಶಸ್ತ್ರ

ಚಿಕಿತ್ಸೆಗಳಾದ ಬಳಿಕ ಅದು ದೊಡ್ಡದಾಗುತ್ತ ಹೋಯಿತು. ಅದರಿಂದ ಪದೇಪದೇ ಬಹಳ ರಕ್ತ ಸುರಿದು ಸುರಿದು ಅದೊಂದು ಬೊಕ್ಕೆಯಾಯಿತು. ಹಲವಾರು ವಿಧದ ಚಿಕಿತ್ಸೆಯನ್ನು ಮಾಡಲಾಯಿತು. ರೇಡಿಯಂ ಪ್ರಯೋಗವೂ ನಡೆಯಿತು. ಆದರೆ ಎಲ್ಲವೂ ವ್ಯರ್ಥವಾಯಿತು. ನಾಲ್ಕನೆಯ ಶಸ್ತ್ರ ಚಿಕಿತ್ಸೆಯಾದ ಮೇಲೂ ರೋಗ ಗುಣವಾಗಲಿಲ್ಲ. ಅದಾದದ್ದು ೧೯೪೯ ನೆಯ ಡಿಸೆಂಬರ್ ೧೯ರಂದು. ಈ ಶಸ್ತ್ರ ಚಿಕಿತ್ಸೆಯು ಪ್ರಧಾನವಾದುದಾದರೂ ಕ್ಲೋರೋಫಾರಂ ಕೊಡುವುದು ಬೇಡವೆಂದು ಶ್ರೀ ರಮಣರು ಹೇಳಿದರು. ಏನಾದರೂ ನೋವಾಯಿತೇ? ಎಂದೊಬ್ಬ ಭಕ್ತ ಕೇಳಿದಾಗ "ನೋವು ಕೂಡ ನಮ್ಮಿಂದ ಭಿನ್ನವಲ್ಲ" ಎಂದರು ಮಹರ್ಷಿಗಳು. ನಮ್ಮ ನಾಲಗೆಯನ್ನು ಕಚ್ಚುವ ಹಲ್ಲುಗಳು ನಮ್ಮಿಂದ ಹೇಗೆ ಬೇರೆಯಲ್ಲವೋ ತಮ್ಮನ್ನು ಹೊಡೆದ ಕಳ್ಳನನ್ನು ಹೇಗೆ ಅವರು ತಮ್ಮಿಂದ ಬೇರೆಯಲ್ಲವೆಂದು ತಿಳಿದರೋ ಹಾಗೇ ತಮ್ಮ ದೇಹವನ್ನು ಕೆಡಿಸುತ್ತಿದ್ದ ರೋಗವೂ ತಮ್ಮಿಂದ ಭಿನ್ನವಲ್ಲವೆಂದೇ ಅವರು ತಿಳಿದರು. ಅಂದರೆ, "ಸರ್ವಂಖಲ್ವಿದಮಯಮಾತ್ಮಾ–ಆತ್ಮಾಚಬ್ರಹ್ಮ"! ಅವರ ಜ್ಞಾನವೆಂಬುದು ಅಷ್ಟು ಆಶ್ಚರ್ಯಕರವಾದದ್ದು!

ರೋಗವು ಅತ್ಯಂತ ಹೆಚ್ಚಿನ ಚಿತ್ರ ಹಿಂಸೆಯನ್ನು ಉಂಟುಮಾಡಿದಾಗಲೂ ಶ್ರೀ ರಮಣರು ತಮ್ಮ ಶಿಷ್ಯರ ಪ್ರಶ್ನೆಗಳನ್ನು ಸುಖವಾಗಿ ಉತ್ತರಿಸುತ್ತಿದ್ದರು ಮತ್ತು ಅವರ ಉತ್ತರಗಳು ಒಳ್ಳೆಯ ಪಾಠಗಳಾಗಿದ್ದವಷ್ಟೇ ಅಲ್ಲದೆ ಹಾಸ್ಯಪೂರ್ಣವಾಗಿಯೂ ಇದ್ದವು. ಅದರಿಂದ ಜ್ಞಾನಿಯ ಉದಾತ್ತತೆಯು ಪ್ರಕಟವಾಗುತ್ತಿತ್ತು. ತಮ್ಮ ಆರೋಗ್ಯದ ಬಗ್ಗೆ ಅವರು ಬಹಳ ಚಿಂತೆಗೊಳಗಾದಾಗಲೆಲ್ಲಾ ಶ್ರೀ ರಮಣರು ಅವರನ್ನು ಸಮಾಧಾನ ಮಾಡುತ್ತಿದ್ದರು. ಒಮ್ಮೆ ಅವರು, "ಈ ದೇಹವೆಂಬುದೇ ಒಂದು ರೋಗ ; ಅದು ನಮ್ಮನ್ನು ಹಿಡಿದಿದೆ. ಈ ಮೂಲರೋಗಕ್ಕೆ ಮತ್ತೊಂದು ರೋಗಹಿಡಿದರೆ ಅದರಿಂದ ನಮಗೆ ಒಳ್ಳೆಯದೇ ಆಗುವುದಿಲ್ಲವೇ?" ಎಂದು ಮಹರ್ಷಿಗಳು ಉದ್ಗರಿಸಿದರು. ಮತ್ತೊಬ್ಬ ಭಕ್ತನು ಅವರ ಕಾಹಿಲೆಗಾಗಿ ಮರುಗುತ್ತಿದ್ದಾಗ "ಓ ನಿನ್ನ ಸ್ವಾಮಿಯು ಹೊರಟೇ ಹೋಗುತ್ತಾನೆ ಎಂಬಂತೆ ನೀನು ಅಳುತ್ತೀಯಲ್ಲಾ? ಎಲ್ಲಿಗೆ ಹೋಗುವುದು? ಹೇಗೆ ಹೋಗುವುದು? ದೇಹಕ್ಕೆ ಮಾತ್ರ ಹೋಗಿಬರುವುದು ಸಾಧ್ಯ. ಆದರೆ ನಮಗೆ ಹೇಗೆ ಸಾಧ್ಯ?" ಎಂದು ಕೇಳಿದರು. ಇನ್ನೂ ಒಂದು ಸಂದರ್ಭದಲ್ಲಿ ಅವರು, "ಹಸುವಿಗೆ ಹೇಗೆ ಅದರ ಕೋಡುಗಳಿಗೆ ಕಟ್ಟಿದ ಹೂಮಾಲೆಗಳು ಈಗಲೂ ಇವೆಯೋ ಅಥವಾ ಕಳೆದು ಹೋದವೋ ಎಂಬುದು ಗೊತ್ತಾಗುವುದಿಲ್ಲವೋ, ಕುಡುಕನಿಗೆ ತನ್ನ ಪಂಚೆಯು ತನ್ನ ಮೈಮೇಲೆ ಇದೆಯೋ ಇಲ್ಲವೋ ಎಂಬುದು ಹೇಗೆ ಗೊತ್ತಾಗುವುದಿಲ್ಲವೋ ಹಾಗೆ ಜ್ಞಾನಿಗೆ ತನ್ನ ದೇಹವು ಇದೆಯೋ ಸತ್ತಿದೆಯೋ ಎಂಬುದು ಗೊತ್ತಾಗುವುದಿಲ್ಲ"–ಎಂದು ಹೇಳಿದರು.

ಭಗವಾನ್ ಶ್ರೀ ರಮಣರ ನಿರ್ದೇಶನಗಳ ಪ್ರಕಾರ, ಕೊನೆಯವರೆಗೂ ಅವರನ್ನು ನೋಡಲು ಬಂದ ಯಾರಿಗೂ ಬರಬಾರದೆಂದು ಹೇಳಲಿಲ್ಲ. ಅವರ ದೇಹವನ್ನು ಪದ್ಮಾಸನದಲ್ಲಿ ಕುಳ್ಳಿರಿಸಿದ ಮೇಲೆ ಪ್ರತಿಯೊಂದು ಶ್ವಾಸವೂ ಒಂದೇ ಸಮನಾಗಿ ಹೊರಟು ಹೋದವು ಮತ್ತು ೧೯೫೦ ನೆಯ ಇಸವಿಯ ಎಪ್ರಿಲ್ ೧೪ರಂದು ಭಗವಾನ್ ರಮಣರು ತಮ್ಮ ಮಾನವ್ಯ ಛದ್ಮವೇಷವನ್ನು ತೆಗೆದು ಹಾಕಿ ಸ್ವ ಸ್ವರೂಪದಿಂದ ಇಡಿಯಾಗಿ ಬೆಳಗಿದರು – ಅದೊಂದು ಬ್ರಹ್ಮದ ಅನಂತ ಆಕಾಶ ; ಅದರಲ್ಲಿ ಬರು–ಹೋಗುಗಳಿಲ್ಲ. ಆ ವೇಳೆಯಲ್ಲಿ

ದೇಗುಲದ ಪಾಳಿ ಭಕ್ತರಿಗೆ ಒಂದು ಪ್ರಕಾಶಮಾನವಾದ ಬೆಳಕು ಹೊಳೆದು ಶ್ರೀ ರಮಣರು ಕುಳಿತಿದ್ದ ಆ ಚಿಕ್ಕ ಕೊಠಡಿಯನ್ನೆಲ್ಲಾ ತುಂಬಿದ್ದು ಕಾಣಿಸಿತು. ಅವರು ಅದೊಂದು ಬಲವಾದ ಛಾಯಾಚಿತ್ರದ ಸೆಳೆ ಬೆಳಕೆಂದು ನಿಗಮನಿಸುವಷ್ಟರೊಳಗೆ, ಬಟ್ಟ ಬಯಲಿನಲ್ಲಿ ನಿಂತಿದ್ದ ಇತರರು "ಜ್ಯೋತಿ, ಆಕಾಶದಲ್ಲಿ ಜ್ಯೋತಿ" ಎಂದು ಉದ್ಗರಿಸಿದರು. ಏಕೆಂದರೆ, ಒಂದು ಉಜ್ವಲವಾದ ಉಲ್ಕೆಯು ಥಟ್ಟನೆ ಆಕಾಶದಲ್ಲಿ ಕಾಣಿಸಿತು ; **ಅದು ಉತ್ತರ ದಿಕ್ಕಿನಲ್ಲಿ ಅರುಣಾಚಲದತ್ತ ಸರಿದು ಅದರ ಶಿಖರದ ಹಿಂದೆ ಅದೃಶ್ಯವಾಗಿ ಹೋಯಿತು. ಅರುಣಾಚಲದ ಬೆಳಕಾದ ಶ್ರೀ ರಮಣರಿಗೆ ಜಯವಾಗಲಿ !**

ಭಗವಾನ್ ಶ್ರೀ ರಮಣರ ಪವಿತ್ರ ಶರೀರವನ್ನು ಅವರು ೨೮ ವರ್ಷಗಳವರೆಗೆ ಸತತವಾಗಿ ವಾಸಿಸುತ್ತಿದ್ದ ಕೋಣೆಗೂ ಮಾತೃಭೂತೇಶ್ವರ ದೇವಾಲಯಕ್ಕೂ ನಡುವಿನ ಸ್ಥಳದಲ್ಲಿ ಹೂಳಲಾಯಿತು. ಅವರ "ಸಮಾಧಿ"ಯ ಮೇಲೆ ಒಂದು ಶಿವಲಿಂಗವನ್ನು ಸ್ಥಾಪಿಸಲಾಯಿತು ಮತ್ತು ಅದನ್ನು **ಶ್ರೀ ರಮಣಲಿಂಗಮೂರ್ತಿ** ಎಂದು ಹೆಸರಿಸಲಾಯಿತು. ಅದರ ಮೇಲೆ ಸರಳವಾಗಿದ್ದರೂ ರಾಜಗಾಂಭೀರ್ಯವನ್ನು ಸೂಸುವ ದೇವಾಲಯವನ್ನು ಕಟ್ಟಲಾಯಿತು. ೧೯೬೭ ನೆಯ ಇಸವಿಯ ಜೂನ್ ೧೮ರಂದು ಆ ಲಿಂಗಕ್ಕೆ ಕುಂಬಾಭಿಷೇಕ ಮಾಡಲಾಯಿತು. ಆಮೇಲೆ ಆ ದೇಗುಲಕ್ಕೆ ಉತ್ಸವಗಳನ್ನು ನಡೆಸಲು ಬೇಕಾದ ಸಭಾಮಂಟಪವನ್ನು ಕಟ್ಟಿಕೊಡಲಾಯಿತು.

ಅದು **ಶ್ರೀ ಅರುಣಾಚಲ ರಮಣರ** ಅನುಗ್ರಹ ದೇವಾಲಯ. ಶ್ರೀ ರಮಣರು, "ನಾನೀ ದೇಹವಲ್ಲ, ನಾನು ನಿತ್ಯವಾಗಿ ಇರುವ ಪರಮ ಪದಾರ್ಥ" ಎಂಬ ಸತ್ಯವನ್ನು ಬದುಕಿ ತೋರಿಸಿದವರು. ಅವರ ದೇವಸ್ಥಾನವು ಮೌನರೂಪದಿಂದ ಹರಿಯುವ ಅನುಗ್ರಹಾಮೃತದಿಂದ ಜಗದ ಜ್ಞಾನಾರ್ಥಿಗಳ ಜ್ಞಾನಪಿಪಾಸೆಯನ್ನು ಯಾವಾಗಲೂ ಹಿಂಗಿಸುತ್ತಿದೆ.

ಓಂ

ನಮೋ ಭಗವತೇ ಶ್ರೀ ಅರುಣಾಚಲರಮಣಾಯ

ಶ್ರೀ ರಮಣಮಾರ್ಗ

(ಭಾಗ ೧)

ಪ್ರಾರ್ಥನೆ

ಓ ದೇವ, ಪಂಚಭುಜಗುಣಪತಿಯೇ, ವೇದ ದ್ರಷ್ಟಾರನಾದ ವ್ಯಾಸ ಮಹರ್ಷಿ ಹೇಳಿದ್ದನ್ನು ಹಿಮಾಲಯದ ಮೇಲೆ ಕುಳಿತು ಬರೆದವನು ನೀನೇ ಅಲ್ಲವೇ? ಈಗ ನಾನು ಗುರು ಶ್ರೀ ರಮಣಮಹರ್ಷಿಗಳು ಮಾಡಿದ ದಿವ್ಯೋಪದೇಶದ ಸಾರವನ್ನು ಸುಸ್ಪಷ್ಟವಾಗಿ ವಿವರಿಸಿ ಬರೆಯ ಹೊರಟಿದ್ದೇನೆ. ಅದಕ್ಕಾಗಿ ನಿನ್ನ ಅನುಗ್ರಹವನ್ನು ಬೇಡುತ್ತೇನೆ. ನೆರವಿಗೆ ನಿಲ್ಲುವ ನಿನ್ನ ಪಾದಾರವಿಂದಗಳ ಮೂಲಕ ನೀನು ನನ್ನನ್ನು ರಕ್ಷಿಸು ಮತ್ತು ನನಗೆ ಮಾರ್ಗದರ್ಶನ ಮಾಡು.

ಅಧ್ಯಾಯ ಒಂದು

ನಿತ್ಯ ಸುಖವೇ ಪರಮಪುರುಷಾರ್ಥ

ಜಗತ್ತು ಬುದ್ಧಿಯ ಮೂಲಕ ಪ್ರಗತಿ ಹೊಂದುತ್ತದೆ. ಈ ಜಗತ್ತಿನಲ್ಲಿರುವ ಮಹತ್ತಾದುದೆಲ್ಲವೂ ಕೇವಲ ಬುದ್ಧಿಯ ಅಭಿವ್ಯಕ್ತಿ. ಜಗತ್ತು ಯಾವ ಧ್ಯೇಯದತ್ತ ಸಾಗಿದೆ? ಜಗತ್ತು ಹೋರಾಡುತ್ತಿರುವುದು ಯಾವುದಕ್ಕಾಗಿ? ಜಾಗರೂಕತೆಯಿಂದ ಪರಿಶೀಲಿಸಿದರೆ ಎಲ್ಲರೂ ಸುಖಕ್ಕಾಗಿ ಹೋರಾಡುತ್ತಿರುವುದು ತಿಳಿದು ಬರುತ್ತದೆ. ಅತಿ ಚಿಕ್ಕ ಇರುವೆಯಿಂದ ಹಿಡಿದು ಅತಿದೊಡ್ಡ ಚಕ್ರವರ್ತಿಯವರೆಗೆ ಪ್ರತಿಯೊಬ್ಬರೂ ದಣಿವಿಲ್ಲದೆ ದುಡಿಯುತ್ತಿದ್ದಾರೆ. ಯಾವುದಕ್ಕಾಗಿ? ಸುಖಕ್ಕಾಗಿ – ಕೇವಲ ಸುಖಕ್ಕಾಗಿ. ಈಗ ಇರುವುದಕ್ಕಿಂತ ಹೆಚ್ಚು ಸುಖದಿಂದ ಬಾಳಬೇಕೆಂದು ಪ್ರತಿಯೊಬ್ಬರೂ ತವಕಪಡುತ್ತಾರೆ. ಈ ತವಕವೇ ಮಾನವನನ್ನು ದುಡಿಯಲು ಪ್ರೇರಿಸುತ್ತದೆ. ಹೀಗೆ ಸುಖಕ್ಕಾಗಿ ತವಕಪಡುವುದು ತಪ್ಪಲ್ಲ; ಇದು ನಿಜವಾಗಿ ಅಪೇಕ್ಷಣೀಯ. ಆದರೆ ಪ್ರತಿಕ್ಷಣವೂ ಮನುಷ್ಯರು ಹೆಚ್ಚು ಸುಖಕ್ಕಾಗಿ ಹಾತೊರೆಯುತ್ತಿರುವುದರಿಂದ ಪೂರ್ಣಸುಖವು ಅವರಾರಿಗೂ ದೊರಕಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅನ್ನ, ವಸ್ತ್ರ, ಮನೆ, ಉದ್ಯೋಗ, ಹೆಂಡತಿ, ಮಕ್ಕಳು ಮುಂತಾದವು ಆ ಸುಖದ ಆಕರಗಳೆಂದು ಭಾವಿಸಿ, ಅವುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಮನುಷ್ಯನು ಸದಾ ಪ್ರಯತ್ನಿಸುತ್ತಿರುತ್ತಾನೆ. ಅಂಥ ಆಕರಗಳಿಂದ ಸುಖ ದೊರಕುವುದೆಂದು ಅವನು ನಂಬಿರುವುದು ಅದಕ್ಕೆ ಕಾರಣ.

ಆದರೆ ಹಾಗೆ ಮನುಷ್ಯನು ಪಡೆಯುವ ಸುಖವು ಕ್ಷಣಿಕ– ಅರ್ಥಾತ್ ಅನಿತ್ಯ. ಕೆಲ ಕಾಲ ಸುಖ ಇರುವಂತೆ ತೋರುತ್ತದೆ; ಅನಂತರ ಅದು ಬಾಡಿ ಹೋಗುವುದು. ಮನುಷ್ಯ ಪಡೆಯುವ ಸುಖದ ವಿವಿಧ ಮಾರ್ಗಗಳನ್ನು ವಿಶ್ಲೇಷಿಸಿದರೆ ಒಂದು ಸಾಮಾನ್ಯ ನಿಗಮನಕ್ಕೆ ನಾವು ಬಂದು ಮುಟ್ಟುತ್ತೇವೆ. ಅವನು ಈವರೆಗೆ ಅನುಭವಿಸಿದ ಸುಖವೆಲ್ಲವೂ ತನ್ನ ಪಂಚೇಂದ್ರಿಯಗಳ ಮೂಲಕವೇ ಆಗಿದೆ. ಕಣ್ಣು, ಕಿವಿ, ನಾಲಿಗೆ, ಮೂಗು ಮತ್ತು ಚರ್ಮಗಳೇ ಆ ಪಂಚಜ್ಞಾನೇಂದ್ರಿಯಗಳು. ಹೀಗೆ ಅನೇಕ ಯುಗಗಳಿಂದಲೂ ಇಂದ್ರಿಯ ತೃಪ್ತಿಗಾಗಿಯೇ ವಿಷಯಗಳನ್ನು ಮನುಷ್ಯನು ಸಂಗ್ರಹಿಸಲು ಪ್ರಯತ್ನಿಸುತ್ತ ಬಂದಿರುವುದು ಸ್ಪಷ್ಟವಾಗುತ್ತದೆ.

ಸುಖ ವಸ್ತುಗಳನ್ನು ತನ್ನ ಕಣ್ಣುಗಳು ಕಂಡೊಡನೆಯೇ ಮನುಷ್ಯನು ಸುಖ ಹೊಂದುವನು. ಆ ವಸ್ತುಗಳು ಮಾಯವಾದೊಡನೆಯೇ ಅವನು ನಿರ್ವಿಣ್ಣನಾಗುವನು. ಅವನ ಕಿವಿಗಳು ಸುಖಕರವಾದ ಧ್ವನಿಯನ್ನೋ ಸಂಗೀತವನ್ನೋ ಕೇಳಿದಾಗ ಅವನು ಸುಖಿಯಾಗುವನು. ಆ ಸುಖಕರ ಧ್ವನಿಗಳು ಇಲ್ಲವಾದಾಗ ಅವನು ದುಃಖದಲ್ಲಿ ಮುಳುಗುವನು. ಕಣ್ಣು ಕಿವಿಗಳಂತೆ ಸ್ಪರ್ಶಶಕ್ತಿಯುಳ್ಳ ಚರ್ಮ, ರುಚಿಗ್ರಹಣ ಮಾಡುವ ನಾಲಿಗೆ ಮತ್ತು ಗಂಧಗ್ರಹಣ ಮಾಡುವ ಮೂಗು – ಇವುಗಳ ಮೂಲಕವೂ ಮಾನವನು

ಪಡೆದ ಅನುಭವವನ್ನು ಸುಖ ಅಥವಾ ದುಃಖ ಎಂದು ಗ್ರಹಿಸುವನು. ಈ ಪಂಚೇಂದ್ರಿಯಗಳು ಸುಖ ಕೊಡುವವೆಂದು ತೋರಿದರೂ ಅವು ಆ ಸುಖವನ್ನು ಅವ್ಯವಹಿತವಾಗಿ ಕೊಡುವುದಿಲ್ಲ.

ಬಹಳ ಸಿನೆಮಗಳನ್ನು ನೋಡುವುದರಿಂದ ಕಣ್ಣು ಕೆಟ್ಟು ಹೋಗುತ್ತದೆ. ಅಲ್ಲದೆ ಇತರ ವಿವಿಧ ಸುಖಕರ ದೃಶ್ಯಗಳು ಮುಗಿತಾಯಗೊಳ್ಳುವುದರಿಂದ ಅವುಗಳನ್ನು ಮನುಷ್ಯನು ಅವ್ಯಾಹತವಾಗಿ ನೋಡಲಾರ. ಕಿವಿಯಿಂದ ಪಡುವ ಸುಖ ಅಂಥದೇ ಆಗಿದೆ. ಎಷ್ಟು ಕಾಲದವರೆಗೆ ಮನುಷ್ಯನು ಮೇಳ ವಾದ್ಯದ ಸಂಗೀತವನ್ನು ಕೇಳಬಲ್ಲ? ಮೇಳ ವಾದ್ಯ ಮುಗಿಯುತ್ತದೆ; ಇಲ್ಲವೆ, ಯಾರಾದರೊಬ್ಬರಿಗೆ ಏನಾದರೊಂದು ಬೇರೆಯ ಕೆಲಸ ಮಾಡಬೇಕಾಗಿ ಬಂದು ಅವರು ಹೊರಟುಹೋಗುವರು. ಹೀಗೆ ಕಿವಿಯ ಮೂಲಕ ಪಡುವ ಸುಖಕ್ಕೆ ಕೊನೆಯಿದೆ. ಮೂಗಿನ ಮೂಲಕ ಪಡುವ ಗಂಧಾನುಭವದ ಸುಖವೂ ಅಂಥದೇ. ಒಂದೇ ಸಮನಾಗಿ ಬಿಡುವಿಲ್ಲದೆ, ಯಾವುದಾದರೊಂದು ಅಥವಾ ಹಲವು ಸುಖಕರವಾದ ತೀಕ್ಷ್ಣ ಸುವಾಸನೆಗಳನ್ನು ಅನುಭವಿಸುತ್ತ ಹೋದರೆ ತಲೆನೋವು ಉಂಟಾಗಬಹುದು; ಇಲ್ಲವೆ, ಮೂಗು ನೆತ್ತರನ್ನು ಸುರಿಸಬಹುದು. ಅಲ್ಲದೆ, ಸುಗಂಧ ಸೂಸುವ ದ್ರವ್ಯಗಳು ಬಹುಬೇಗ ತಮ್ಮ ಸುಗಂಧವನ್ನು ಕಳೆದುಕೊಳ್ಳುತ್ತ ಹೋಗುವುವು. ನಾಲಿಗೆಯ ರುಚಿಯ ಕಥೆಯೂ ಅದರಂತೆಯೇ. ಅತ್ಯಂತ ರುಚಿಕರವಾದ ಭಕ್ಷ್ಯದಿಂದೇ ಆದರೂ ಯಾವನು ಹಿಡಿಸಲಾರದಷ್ಟರ ಮಟ್ಟಿಗೆ ಹೊಟ್ಟೆಯಲ್ಲಿ ತುಂಬಿಕೊಳ್ಳಬಲ್ಲ? ಒಂದು ಮಿತಿಯನ್ನು ಮೀರಿದ ಮೇಲೆ ಅತ್ಯಂತ ರುಚಿಯಾದ ತಿನಿಸಿನಲ್ಲಿ ಕೂಡ ನಾಲಿಗೆಗೆ ಜುಗುಪ್ಸೆಯುಂಟಾಗುತ್ತದೆ. ಆದುದರಿಂದ ರುಚಿ ಕೂಡ ಶಾಶ್ವತಸುಖವನ್ನು ಕೊಡದು. ಸ್ಪರ್ಶಸುಖವನ್ನೀಗ ತೆಗೆದುಕೊಳ್ಳೋಣ. ರೇಶಿಮೆಯ ನಯವುಳ್ಳ ಮೃದುವಾದ ಹೂವೊಂದನ್ನು ಮೈಗೆ ತಾಗಿಸಿಕೊಂಡಾಗ ಅದರಿಂದ ಸುಖಾನುಭವ ಉಂಟಾಗುತ್ತದೆ. ಆದರೆ ಬಹುಬೇಗ ಆ ಹೂವು ಒಣಗಿ ಹೋಗುತ್ತದೆ. ಅಲ್ಲದೆ, ಕೆಲ ಕಾಲ ಕಳೆದ ಮೇಲೆ ನಮಗೆ ಆ ಪುಷ್ಪಸ್ಪರ್ಶವು ರೂಢಿಯಾಗಿ ಹೋಗುವುದರಿಂದ ಅದರ ಸುಖವು ಅನುಭವಕ್ಕೆ ಬಾರದು. ಆ ಹೂವಿಗೆ ಅಂಥ ಸುಖಸ್ಪರ್ಶವನ್ನು ನಮಗೆ ಕೊಡುವ ಶಕ್ತಿಯು ಹೊರಟುಹೋಗುವುದು. ತಂಗಾಳಿ ಮೊದಲಾದ ಇತರ ಪದಾರ್ಥಗಳ ಶಕ್ತಿಯು ಅದೇ ತೆರನಾದುದು. ಆದುದರಿಂದ ಚರ್ಮಗ್ರಾಹ್ಯವಾದ ಸ್ಪರ್ಶಸುಖವೂ ನಿತ್ಯವಲ್ಲ. ಪಂಚೇಂದ್ರಿಯಗಳಲ್ಲಿ ಯಾವುದರ ಮೂಲಕವೂ ನಾವು ನಿರಂತರವಾಗಿ ಸುಖವನ್ನು ಪಡೆಯಲಾರೆವು. ಮಿತಿಮೀರಿದರೆ ಇಂದ್ರಿಯ ಸುಖಗಳು ಸುಖಕರವಾಗುವುದರ ಬದಲು ದುಃಖಕರವಾಗುತ್ತವೆ. ಈ ಸೂಕ್ಷ್ಮಾವಲೋಕನದ ಫಲವಾಗಿ ಮಾನವ ಬಯಸುವ ನಿತ್ಯವೂ ಪೂರ್ಣವೂ ಆದ ಸುಖವು ಪಂಚೇಂದ್ರಿಯಗಳ ಮೂಲಕ ದೊರಕಲಾರದು ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ.

ಒಂದು ಕಣದಷ್ಟು ದುಃಖದ ಸ್ಪರ್ಶವೂ ಇಲ್ಲದ ಪೂರ್ಣ ಸುಖವನ್ನು ಪ್ರತಿಯೊಬ್ಬನೂ ಬಯಸುವುದು ಖಂಡಿತ. ಇದನ್ನು ಯಾವ ರೀತಿಯಿಂದಲೂ ಅಲ್ಲಗಳೆಯಲಾಗುವುದಿಲ್ಲ. ಆದರೆ ಇಂದ್ರಿಯ ತರ್ಪಣದ ಮೂಲಕ ಯಾರೂ ಈವರೆಗೆ ಅಂತ ಸುಖವನ್ನು ಪಡೆಯಲು ಸಮರ್ಥರಾಗಿಲ್ಲ. ಹೀಗೆ ಇಡೀ ಜಗತ್ತು ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಈವರೆಗೆ ಪೂರ್ಣ ಸುಖವನ್ನು ಪಡೆಯಲು ಶಕ್ತವಾಗಿಲ್ಲ. ಪರಿಸ್ಥಿತಿ ಹೀಗಿದ್ದರೂ ಆ ಬಗೆಯ ಪೂರ್ಣಸುಖವನ್ನು ಪಡೆಯುವುದು

ಮಾನವನಿಗೆ ಅಸಾಧ್ಯವೇ? ಖಂಡಿತವಾಗಿಯೂ ಅಸಾಧ್ಯವಲ್ಲ! ಮನಸ್ಸು ಮಾಡಿದರೆ ಯಾವ ಮನುಷ್ಯನಾದರೂ ಈಗಲೇ ಇಲ್ಲೇ ಅದನ್ನು ಪಡೆಯಬಹುದು. **ದುಃಖದಿಂದ ಕಳಂಕಿತವಾಗದ ಶಾಶ್ವತವೂ ಪೂರ್ಣವೂ ಆದ ಸುಖವನ್ನು ಜೀವಿಗಳು ಬಯಸುವುದರಲ್ಲಿ ಯಾವ ತಪ್ಪೂ ಇಲ್ಲ. ಸುಖಾಪೇಕ್ಷೆ ಇಟ್ಟುಕೊಳ್ಳುವುದು ತಪ್ಪಲ್ಲ. ಸುಖವನ್ನು ಪಡೆಯಬೇಕು! ಹಾಗೆ ನೋಡಿದರೆ ಅದು ಮಾನವರೆಲ್ಲರ ಪರಮಪುರುಷಾರ್ಥ**. ಆದರೆ ಅದನ್ನು ಪಡೆಯಲು ಈವರೆಗೆ ಜನರು ಗುರುತಿಸಿದ ಹಾಗೂ ಅನುಸರಿಸುತ್ತ ಬಂದ ದಾರಿಗಳು ಸರಿಯಾದವುಗಳಲ್ಲ. ಅದರಿಂದಲೇ ಮನುಷ್ಯನು ಭಗೀರಥ ಪ್ರಯತ್ನವನ್ನು ಮಾಡಿದರೂ ಪೂರ್ಣಸುಖವನ್ನು ಪಡೆಯಲು ಶಕ್ತನಾಗಲಿಲ್ಲ. ಎಲ್ಲ ಜನರನ್ನೂ ಅವರು ಬಯಸುವ ಪೂರ್ಣ ಸುಖಸ್ಥಿತಿಗೆ ತಲುಪಿಸುವ ಮಾರ್ಗಗಳೆಂದರೆ ಜಗತ್ತಿನಲ್ಲಿ ಹುಟ್ಟಿ ನೆಲೆನಿಂತ ಮತಧರ್ಮಗಳು. ಮತಿ ಹುಡುಕಿದ ಪಥವೇ ಮತ. ಮತಿ ಇಲ್ಲಿ ಮನಸ್ಸು – ಮನೋಬುದ್ಧಿ. ಮತಿ ಇರುವಷ್ಟು ಕಾಲ ಮತ ಇರಬಲ್ಲದು (ಮತಧರ್ಮ ಇರಬಲ್ಲದು)[೧೩].

ಪೂರ್ಣ ಸುಖವನ್ನು ಪಡೆಯಲು ಅಗತ್ಯವಾದ ಅತ್ಯುತ್ತಮ ಸಾಧನಗಳನ್ನು ತೋರಿಸಿಕೊಡುವುದೇ ಮತಧರ್ಮಗಳ ಉದ್ದೇಶ. ಆದರೆ ದುರ್ದೈವವಶಾತ್ ಇಂದಿನ ದಿನಮಾನದಲ್ಲಿ ವಿವಿಧ ಮತಧರ್ಮಗಳು ತಮ್ಮವೇ ಆದ ಪ್ರತ್ಯೇಕ ಪಂಥಗಳನ್ನು ಆ ಮಹೋದ್ದೇಶ ಸಾಧನೆಗಾಗಿ ನಿರ್ದೇಶಿಸಿದರೂ ಮಾನವನು ತನ್ನ ಪರಮಪುರುಷಾರ್ಥದ ಸಾಧನೆಯಲ್ಲಿ ವಿಘ್ನಿತ ಪ್ರಯತ್ನನಾಗಿದ್ದಾನೆ. ಅವನು ಯಾವ ಮತಧರ್ಮಾನುಯಾಯಿಯಾಗಿದ್ದರೂ ಅಷ್ಟೇ. ಧಾರ್ಮಿಕ ಶಾಠ್ಯದಿಂದ ಇಲ್ಲವೆ ಮತತತ್ವಗಳ ನಿಜವಾದ ತಿಳಿವಳಿಕೆಯಿಲ್ಲದುದರಿಂದ ಅವನಿಗೆ ನಿತ್ಯ ಸುಖವು ಸಿಕ್ಕಲಾರದಾಗಿದೆ.

ನಿಜವಾದ ಒಲವಿಂದಲೂ ಶ್ರದ್ಧೆಯಿಂದಲೂ
ನಿಮ್ಮ ಮತಧರ್ಮವನ್ನನುಸರಿಸಿರಿ
ಅಂತರ್ ಮುಖತ್ವದಲಿ ನೆಲೆ ನಿಲ್ಲಿರಿ
ಆಗದಿರಿ ನೀವ್ ಬಹಿರ್ಮುಖರು ಸ್ವಧರ್ಮದಂ–
ಧಾವೇಶದಿಂದ ಪರಧರ್ಮಗಳನು
ಖಂಡಿಸುವೆವೆಂದು ವಾದಿಸಬೇಡಿರಿ.

–ಗುರುವಾಚಕ ಕೋವೈ. ನುಡಿ ೯೯೧

ಈ ಸಂಧಿಕಾಲದಲ್ಲಿ ಮಾನವಜಾತಿಗೆ ತಕ್ಕ ಮಾರ್ಗದರ್ಶಕನೊಬ್ಬ ಬೇಕಾಗಿದ್ದಾನೆ. ಅಂಥ ಮಹಾತ್ಮರನ್ನು ಜನರು ಅವತಾರ ಪುರುಷರೆಂದು ಸಾಮಾನ್ಯವಾಗಿ ಹೇಳುವುದುಂಟು. ಅವತಾರವೆಂದರೆ ಮಾನವ ರೂಪ ತಾಳಿದ ದೇವರೆಂದರ್ಥ. ಮನುಷ್ಯರ ಪರಮಾರ್ಥವನ್ನು ಸಾಧಿಸಿ ಅದರಲ್ಲಿ ನೆಲೆನಿಂತವರೇ ಮಹಾತ್ಮರು. ಆ ಪರಮಾರ್ಥವೇ ನಿತ್ಯಸುಖ, ನಿತ್ಯಾನಂದ. ಅವರು ಇಲ್ಲಿ ಯಾವಾಗಲೂ ಅಯತ್ನತಃ ಅಂಥ ಆನಂದದಲ್ಲಿರುತ್ತಾರೆ. ಮತ್ತು ಆ ಆನಂದವನ್ನು ಪಡೆಯುವುದರಲ್ಲಿ ಇತರರಿಗೆ ನೆರವೀಯುತ್ತಾರೆ. ಅಂಥ ಜ್ಞಾನಗುರುಗಳಲ್ಲಿ ಅತ್ಯಂತ ಇತ್ತೀಚಿನವರೆಂದರೆ ಭಗವಾನ್ **ಶ್ರೀ ರಮಣ ಮಹರ್ಷಿಗಳು**. ಅವರು ಪವಿತ್ರವಾದ

---

೧೩. ಮನಸ್ಸು (ಮತಿ) ಇರುವವರೆಗೆ ಮಾತ್ರ ಧರ್ಮ (ಮತಧರ್ಮ) ಇರುತ್ತದೆ – 'ಗುರುವಾಚಕ ಕೋವೈ' ನುಡಿ ೯೯೩

ಅರುಣಾಚಲ ಎಂಬ ಗಿರಿಯ ಬಡಗಣ ತಪ್ಪಲಿನಲ್ಲಿ ಜಗದ್‌ಗುರುಗಳೆನ್ನಿಸಿ ಬೋಧಿಸಿದರು! ಅವರ ಬೋಧೆಯಿಂದ ಜಗತ್ತು ಯಾವ ಪರಮಾರ್ಥವನ್ನು ಸಾಧಿಸಲು ಶಕ್ತವಾದೀತು? ನೋಡೋಣ:

ಯಾವ ಆತ್ಯಂತಿಕ ಗುರಿಗಾಗಿ ಮಾನವನು ತನ್ನ ಬುದ್ಧಿಬಲದಿಂದ ಸತತವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಯುಗಯುಗಗಳಿಂದ ಪ್ರಯತ್ನ ಮಾಡುತ್ತ ಬಂದಿದ್ದಾನೆ? ಅದು ಸುಖಕ್ಕಾಗಿಯೇ ಅಲ್ಲವೇ? ಈ ಗುರಿಯನ್ನು ಸಾಧಿಸಿಕೊಳ್ಳಲೆಂದೇ ಭಗವಾನ್ ಶ್ರೀರಮಣ ಮಹರ್ಷಿಗಳು ಒಂದು ನೇರವಾದ ಮಾರ್ಗವನ್ನು ತೋರಿಸಿದ್ದಾರೆ. ಅದು ಅವರ ಅನನ್ಯ ಸಂಶೋಧನೆ. ಅಲ್ಲದೆ ಅದು ಅವರಿಗಿಂತ ಹಿಂದೆ ಇದ್ದ ಎಲ್ಲ ಮಹಾತ್ಮರೂ ತೋರಿಸಿಹೋದ ಮಾರ್ಗಗಳ ಸಮನ್ವಿತ ಸಾರವಾಗಿದೆ. ಅವರ ಉಪದೇಶವು ಹೇಗೆ ಸಮತ್ರಿಕೋನಭುಜದ ಕೋನದ್ವಯವನ್ನು ಜೋಡಿಸುವ ಸರಳ ರೇಖೆಯಂತೆ ನೇರವಾದ ಮಾರ್ಗವಾಗಿದೆ ಮತ್ತು ಹೇಗೆ ಅದು ಅನುಸರಿಸಲು ಬಹಳ ಸುಲಭವಾದ ಮಾರ್ಗವಾಗಿದೆ ಎಂಬುದನ್ನು ಈ ಸಂಶೋಧನೆಯ ಕೊನೆಯಲ್ಲಿ ಓದುಗರು ಕಂಡುಕೊಳ್ಳಬಹುದು.

ಈಗ ಒಂದು ಪ್ರಶ್ನೆ. ಭಗವಾನ್ ಶ್ರೀ ರಮಣರು ತೋರಿಸಿದ ಆನಂದೋನ್ಮುಖವಾದ ಈ ಮಾರ್ಗವನ್ನು ಅನುಸರಿಸಲು ಯಾರು ಅರ್ಹರು? ಬ್ರಾಹ್ಮಣರಷ್ಟೇ ಅದನ್ನನುಸರಿಸಲು ಯೋಗ್ಯತೆಯುಳ್ಳವರೇ? ಅಥವಾ ಹಿಂದುಗಳು ಮಾತ್ರ ಅದನ್ನನುಸರಿಸಲು ಅರ್ಹರೇ? ಭಗವಾನ್ ಶ್ರೀರಮಣರು ಹಿಂದುಗಳಿಗೆ ಮಾತ್ರ ಗುರುಗಳೇ? ಆಗಲೇ ಜಗತ್ತಿನಲ್ಲಿರುವ ಯಾವುದಾದರೊಂದು ವಿಶಿಷ್ಟ ಧಾರ್ಮಿಕ ನಂಬಿಗೆಯನ್ನವರು ಪ್ರಚಾರ ಮಾಡಿದರೇ? ಇಲ್ಲವೆ, ಅದು ಸಂಪೂರ್ಣವಾಗಿ ಹೊಸದೆನ್ನಿಸುವ ಒಂದು ಮಾರ್ಗವೇ? ಮತವೇ? ಇಂಥ ಪ್ರಶ್ನಾವಳಿ ವಾಚಕನ ಮನಸ್ಸಿನಲ್ಲಿ ಏಳಬಹುದು.

ಶ್ರೀರಮಣಮಾರ್ಗವನ್ನು ಸುಖ ಪಡೆಯುವುದರಲ್ಲಿ ಉತ್ಕಟವಾದ ಆಶೆಯುಳ್ಳ ಯಾರೂ ಅನುಸರಿಸಬಹುದಾಗಿದೆ. ಈ ಜಗತ್ತಿನಲ್ಲಿ ಸುಖ ಬೇಡ ಎಂಬವನು ಯಾವನಾದರೂ ಇದ್ದಾನೆಯೇ? ದೇವರಿಲ್ಲವೆಂಬ ಯಾವನೂ ಕೂಡ ತನಗೆ ಸುಖಬೇಡ ಎಂದು ಹೇಳುವುದಿಲ್ಲ. ಆದುದರಿಂದ **ನಾಸ್ತಿಕನು ಸಹ ಶ್ರೀರಮಣಮಾರ್ಗವನ್ನು ಅನುಸರಿಸಿ ಪೂರ್ಣ ಸುಖವನ್ನು ಪಡೆಯಬಲ್ಲನು**. ಈ ಮಾರ್ಗದಿಂದ ಯಾರನ್ನೂ ಹೊರಗಿಡಲಾಗಿಲ್ಲ. ಶ್ರೀರಮಣರು ಆ ಈ ಮತಧರ್ಮ ಬೋಧಕರಲ್ಲ. ಅವರು ಯಾವುದಾದರೊಂದು ದೇಶಕ್ಕಾಗಲಿ, ಮತಧರ್ಮಕ್ಕಾಗಲಿ ಸೇರಿದವರಲ್ಲ. ಪೂರ್ಣಾನಂದದ ಪ್ರಾಪ್ತಿಗೆ ಅವರು ದಾರಿ ದೋರುವುದರಿಂದ ಅದು ಇಡಿ ಜಗತ್ತಿನ ಸರ್ವಸಾಧಾರಣವಾದ ಗುರಿಯೆನ್ನಿಸಿರುವುದರಿಂದ, ಅವರು ಜಗದ್ಗುರುಗಳು[೧೪] ಮತ್ತು ಅವರು ಯಾವುದಾದರೂ ಒಂದು ಮತಧರ್ಮದ

೧೪. ಜಗದ್ಗುರು : ಪ್ರಾಚೀನ ಭಾರತಕ್ಕೆ ಜಗತ್ತಿನ ಕೊನೆ ಎಂದರೇ ಭಾರತವೇ ಆಗಿತ್ತು. ಆದುದರಿಂದ ಒಬ್ಬರು ಜಗದ್‌ಗುರುಗಳೆಂದರೆ ಪ್ರಪಂಚದ ಗುರುಗಳು ಎಂದು ಕರೆಯಲ್ಪಟ್ಟರೂ ಅವರು ಭಾರತದಲ್ಲಿಯೇ ಬೋಧಿಸುತ್ತಿದ್ದರು; ಅಲ್ಲಿಯೂ ಅವರು ಪರಿಸೀಮಿತ ಸಮಾಜವೊಂದಕ್ಕೆ ಬೋಧಿಸುತ್ತಿದ್ದರು. ಸ್ವಲ್ಪ ಜನರಿಗೆ ಮಾತ್ರ ಸೀಮಿತವಾಗಿದ್ದ ಬೋಧಕರಾದ ಆ ಮಹಾತ್ಮರಂತಲ್ಲದೆ ಶ್ರೀರಮಣರು ನಿಜವಾಗಿಯೂ ಇಡಿ ಜಗತ್ತಿಗೆ ಬೋಧಿಸುತ್ತಾರೆ. ಅವರಿಗೆ ಯಾವ ಸಾಮಾಜಿಕ ಅಥವಾ ಸಾಂಸ್ಕೃತಿಕ ಇತಿಮಿತಿಗಳ ಹಿಡಿತದ ಪರಿವೆಯೂ ಇಲ್ಲ. ಆದುದರಿಂದಲೇ ಅವರನ್ನು ಲೋಕ ಮಹಾಗುರುಗಳು ಅಥವಾ ಇಡಿ ವಿಶ್ವಕ್ಕೇ ಗುರುಗಳು ಎಂದು ಕರೆಯಲಾಗುತ್ತದೆ.

ತತ್ವಗಳಿಂದಾಗಲಿ ಸಂಪ್ರದಾಯಗಳಿಂದಾಗಲಿ ಬದ್ಧರಾಗಿಲ್ಲದುದರಿಂದ ಎಲ್ಲರಿಗೂ ಅವರು ಸರ್ವಸಾಧಾರಣ ಗುರಿಯಾದ ನಿತ್ಯಾನಂದವನ್ನು ಪಡೆಯುವ ಮಾರ್ಗವನ್ನು ಕಲಿಸುತ್ತಾರೆ. ಅವರು ನಿಜವಾಗಿಯೂ **ಲೋಕಮಹಾಗುರುಗಳು–** ಇಡಿ ಜಗತ್ತಿಗೇ ಗುರುಗಳು. ಎಲ್ಲ ಮತಧರ್ಮಗಳ ಅನುಯಾಯಿಗಳೂ ಅವರ ಸನ್ನಿಧಿಗೆ ಬಂದು ಲಾಭ ಹೊಂದಿ ಹೋಗಿದ್ದಾರೆ. ಅಷ್ಟೇ ಅಲ್ಲದೆ, ಯಾವ ಮತಧರ್ಮಕ್ಕೆ ಒಬ್ಬನು ಸೇರಿದವನಾಗಿದ್ದರೂ ಅಡ್ಡಿಯಿಲ್ಲ – ಅವನ ಹೃದಯದಲ್ಲಿ "ಶ್ರೀರಮಣರು ನನ್ನ ಮತಧರ್ಮದ ಗುರುಗಳು" ಎಂಬ ಭಾವನೆಯುಂಟಾಗುವುದಲ್ಲದೆ ಅವರ ಬಗ್ಗೆ ಭಕ್ತಿಯೂ ಉಂಟಾಗುವುದು. ಆದುದರಿಂದ ಶ್ರೀರಮಣರ ಮಾರ್ಗ ಯಾವುದೆಂಬುದನ್ನು ನೋಡೋಣ.

ಅಧ್ಯಾಯ ಎರಡು

ಸುಖವೆಂದರೇನು?

"ಮಾನವನೇ ನಿನಗೆ ಸುಖಬೇಕೋ? ನೀನು ಅದಕ್ಕಾಗಿ ದುಡಿಯುತ್ತಿರುವೆಯಾ? ಅಥವಾ ನಿನ್ನ ಪ್ರಯತ್ನವನ್ನು ತತ್ಪರವನ್ನಾಗಿ ಮಾಡಲು ಅಗತ್ಯವಾದ ದಾರಿಯನ್ನಾದರೂ ಹುಡುಕಲು ನೀನು ಬಯಸುವೆಯಾ? ಅಷ್ಟಾದರೆ ಸಾಕು – ನೀನು ಸುದೈವಿ. ಇಲ್ಲೊಂದು ಕ್ರಮವಿದೆ. ಅದನ್ನು ನೀನು ಪರಿಶೀಲಿಸಬಹುದು. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಮೇಲೆ ನಿನಗೆ ಅದರಿಂದ ಸಮಾಧಾನವಾಗುವುದೋ ಇಲ್ಲವೋ ಎಂದುನೋಡು. ನಿತ್ಯಸುಖವೆಂಬುದು ಆ ಮಾರ್ಗದಿಂದ ಲಭ್ಯವೋ ಅಲ್ಲವೋ ಪರೀಕ್ಷಿಸಿನೋಡು. ಆ ಮಾರ್ಗವು ಸರಿಯಾದುದೆಂದು ನಿನಗೆನ್ನಿಸಿದರೆ ನೀನು ಅದನ್ನು ಅನುಸರಿಸು. ನೀನು ಸರ್ವಪ್ರಯತ್ನಗಳನ್ನು ಮಾಡು. ನಿನ್ನ ಪರಿಶ್ರಮದ ಫಲವನ್ನು ಸಂಪೂರ್ಣವಾಗಿ ಅನುಭೋಗಿಸು. ನಿತ್ಯ ಸುಖದ ದಿಕ್ಕಿಗೊಯ್ಯುವ ಅಂಥ ಅನನ್ಯ ಮಾರ್ಗದ ವಿವರಣೆಯನ್ನು ಕಿವಿಗೊಟ್ಟು ಕೇಳು. ಅದರಿಂದ ನಿನಗೆ ವಿವಿಧ ಶ್ರುತಿ ವಾಕ್ಯಗಳ ಶ್ರವಣದಿಂದ ಉಂಟಾದ ಸಂದೇಹಗಳೆಲ್ಲವೂ ಪರಿಹಾರವಾಗುವುವು" – ಭಗವಾನ್ ಶ್ರೀರಮಣರು ಜಗತ್ತಿಗಾಗಿ ಸಾರಿ ಹೇಳಿದ ದಿವ್ಯಜ್ಞಾನದ ಕಹಳೆಮೊಳಗು ಇಂತಿದೆ ನೋಡು.

"ನನ್ನ ಮುದ್ದು ಮಗುವೇ, ಕಿವಿಗೊಟ್ಟು ಕೇಳು. ಸದ್ ಗುರುಗಳಲ್ಲಿ ದಿವ್ಯಕರುಣೆ ತುಂಬಿರುವುದರಿಂದ ಮಾನವರೂಪದಿಂದ ಭೂಮಿಗಿಳಿದು ಬಂದ ಅವರು ಶ್ರೀರಮಣರೆಂದೆನ್ನಿಸಿ ಪವಿತ್ರವಾದ ಅರುಣಾಚಲವೆಂಬ ಗಿರಿಯನ್ನೇರಿ ತಮ್ಮ ದಿವ್ಯಜ್ಞಾನದ ಕಹಳೆಯನ್ನು ಏರುದನಿಯಿಂದ ಊದುತ್ತಿದ್ದಾರೆ. ಅದನ್ನು ಕೇಳಿ ಸ್ವರ್ಗವು ನಡುಗುತ್ತಿದೆ; ಭೂವಾಸಿಗಳ ಸತ್ಯದೃಷ್ಟಿ ತೆರೆಯುತ್ತಿದೆ! ಈ ಛಂದೋಮಯವಾಣಿಯಿಂದ ನೀನು ಎಚ್ಚರಿಸಲ್ಪಡುತ್ತಿರುವೆ. ಇಂಥ ಎಚ್ಚರದಿಂದ ಆ ಅದ್ವಿತೀಯ ಮಹಾತ್ಮನು (ದೇವತಾಸ್ವರೂಪನು) ಪ್ರಮಾದಗಳಿಂದ ನಮ್ಮನ್ನು ಸಲಹುತ್ತಾನೆ; ಮತ್ತು ಆತನು ನಮ್ಮನ್ನು ಸ್ವಕೀಯರನ್ನಾಗಿ ಮಾಡಿಕೊಂಡಿರುವುದು ತಿಳಿದು ಬರುತ್ತದೆ. ಆದುದರಿಂದ ಮಗೂ, ಎಚ್ಚರ ಹೊಂದು. ಅವನ ಕೃಪೆಯ ಅಮೃತವನ್ನು ಕುಡಿ ಮತ್ತು ಆ ಎಚ್ಚರವು ನಿನ್ನನ್ನು ಇನ್ನೆಂದೂ ನಿದ್ರೆ ಮಾಡದಂತೆ ಮಾಡಲಿ."

–ಶ್ರೀರಮಣ ಎಂಬಾವೈ, ನುಡಿ ೬[೧೫]

ಸತತವಾಗಿ ಸುಖ, ಸುಖ, ಎಂದು ಅತ್ಯಾಶೆಪಡುವ ಮತ್ತು ಅದಕ್ಕಾಗಿ ದುಡಿದು ದಣಿಯುವ ಮಾನವಾ! ನನಗೆ ಸುಖಬೇಕು, ಸುಖಬೇಕು, ಎಂದು ಕೂಗುವ ಮನುಷ್ಯಾ!

---

೧೫. 'ಎಂಬಾವೈ' ಎಂಬುದು ತಮಿಳಿನ ಒಂದು ಛಂದಸ್ಸು. ಪರಂಪರೆಯ ಪ್ರಕಾರ ಸಾಧುಗಳು ಈ ಛಂದಸ್ಸಿನ ೨೦ ನುಡಿಗಳನ್ನು ಹಾಡುತ್ತಾರೆ. ಇಂಥ ಹಾಡುಗಳಲ್ಲಿ ದೇವರ ಪೂಜೆಗೆ ಪ್ರಾರಂಭಿಸುವ ಮೊದಲು ಸ್ನಾನ ಮಾಡಲೆಂದು ಹೆಂಗಸೊಬ್ಬಳು ಚಿಕ್ಕ ಹುಡುಗಿಯನ್ನು ಎಚ್ಚರಿಸುವ ದೃಷ್ಟಿಕೋನವಿರುತ್ತದೆ.

ಕೊನೆಯ ಪಕ್ಷ, ನಿನಗೆ ಸುಖ ಎಂದರೆ ಏನೆಂಬುದಾದರೂ ತಿಳಿದಿರುವುದೇ? ನಿನ್ನ ಜೀವನದ ಹಲವಾರು ಸಂದರ್ಭಗಳಲ್ಲಿ ಅನೇಕ ವಿಧಗಳಿಂದ ನೀನು ಸುಖವನ್ನು ಅನುಭೋಗಿಸಿರುವೆ; ಅನುಭೋಗಿಸಿಲ್ಲವೇನಯ್ಯಾ? ಹಾಗೆ ಅನುಭೋಗಿಸಿದುದು ನಿಜವಾದರೆ 'ಸುಖ' ಎಂದರೇನೆಂಬುದನ್ನು ನೀನು ನನಗೆ ಹೇಳಬೇಕು. ಹೇಳಬಲ್ಲೆಯಾ? ಇಂದ್ರಿಯಗಳ ಮೂಲಕವಾಗಿ ಮನಸ್ಸನ್ನು ತಲುಪಿದ ಅನುಭವಗಳಲ್ಲಿ ಅನುಕೂಲವಾದವುಗಳನ್ನು ಸುಖವೆಂದೂ ಪ್ರತಿಕೂಲವಾದವುಗಳನ್ನು ದುಃಖವೆಂದೂ ನೀನು ಭಾವಿಸುವುದಿಲ್ಲವೇನಯ್ಯಾ? **'ಸುಖ-ದುಃಖಗಳ ಬಗೆಗಿನ ನಿನ್ನ ಈ ಕಲ್ಪನೆಯು ತಪ್ಪು.'** ಆದುದರಿಂದಲೇ ನೀನು ಯತ್ನ ಮಾಡಲು ಹಿಡಿದವುಗಳೆಲ್ಲಾ ದುಃಖವನ್ನು ದೂರವಿಟ್ಟು ಸುಖ ಪಡೆಯುವುದರಲ್ಲಿ ನಿಷ್ಫಲವಾದವು. ನೀನು ಹಿಡಿದ ಕ್ರಮವೇ ತಪ್ಪು. ಆದ್ದರಿಂದಲೇ ದುಃಖರಹಿತ ಸುಖವು ನಿನಗೆ ದೊರಕಲಿಲ್ಲ. ನಿನ್ನ ಸುಖದ ಕಲ್ಪನೆ ತಪ್ಪೆಂದು ನಾವು ಹೇಳಿದ ಮೇಲೆ ಅದು ಏಕೆ ತಪ್ಪೆಂಬುದನ್ನೂ ನಾವು ಮೊದಲು ಹೇಳಬೇಡವೇ? ಆಮೇಲೆ 'ನಿಜಸುಖ' ಎಂದರೇನೆಂಬುದನ್ನು ಹೇಳಬೇಕಲ್ಲವೇ? ಆದುದರಿಂದ ಕಿವಿಗೊಟ್ಟು ಕೇಳು.

ನಿನ್ನ ವಿಚಾರದ ಪ್ರಕಾರ ಪಂಚೇಂದ್ರಿಯಗಳನ್ನು ತೃಪ್ತಿ ಪಡಿಸುವ ವಿಷಯಗಳು ದೊರೆತ ಕೂಡಲೇ ನೀನು ಸುಖಿಯಾಗಬೇಕು. ಅವು ದೊರಕದಿದ್ದಾಗ ದುಃಖಿಯಾಗಬೇಕು. ಆದರೆ ನೀನೇ ನೋಡು; ನೀನು ಸುಷುಪ್ತಿಯಲ್ಲಿ ಸುಖಿಯಾಗಿರುವೆ. ಅಲ್ಲಿ ಯಾವ ಇಂದ್ರಿಯಾನುಭವವೂ ಇಲ್ಲ. ಆದರೂ ಎಲ್ಲರಿಗೂ ಸುಷುಪ್ತಿಯು ಪರಮಾನಂದಕರವಾಗಿರುತ್ತದೆ. ನಿನ್ನ ಪ್ರಕಾರ, ಪಂಚೇಂದ್ರಿಯಗಳು ಕೆಲಸ ಮಾಡದಿರುವಾಗ ಕೇವಲ ದುಃಖವೇ ಉಂಟಾಗಬೇಕು. ಆದರೆ ವಸ್ತುತಃ ಹಾಗಾಗುವುದಿಲ್ಲ. ನಿನ್ನ ನಂಬಿಗೆಗೆ ವಿರುದ್ಧವಾಗಿ, ಪಂಚೇಂದ್ರಿಯಗಳು ನಿಷ್ಕ್ರಿಯವಾಗಿರುವಾಗ ಸುಖವಿರುತ್ತದೆ. ಅಂದರೆ ದೇಹಜ್ಞಾನವಿಲ್ಲದಿರುವಾಗ ಸುಖವಿರುತ್ತದೆ ಎಂದ ಹಾಗಾಯಿತು. ಇದಕ್ಕೆ ನೀನೇನೆನ್ನುವೆ? ಪಂಚೇಂದ್ರಿಯಗಳ ನೆರವಿಲ್ಲದಾಗಲೂ ಸುಖಾನುಭವ ಸಾಧ್ಯವೆಂಬುದನ್ನು ಒಪ್ಪಲೇಬೇಕಾಗುತ್ತದೆ.

ಅಷ್ಟೇ ಅಲ್ಲ: ನಿನ್ನ ವಿಚಾರಧಾರೆಯಂತೆಯೇ ಹೋದರೆ, ಐಶ್ವರ್ಯ, ಒಳ್ಳೆಯ ಮನೆ, ವಸ್ತ್ರ, ಬಟ್ಟೆ, ರುಚಿಕಟ್ಟಾದ ಆಹಾರ, ಅನುಕೂಲ ವರ್ತನೆಯ ಪತ್ನಿ ಅಥವಾ ಪತಿ, ಮಕ್ಕಳು-ಮರಿ ಮತ್ತು ಬಂಧು-ಬಾಂಧವರು ಮುಂತಾದವರನ್ನೊಳಗೊಂಡಿದ್ದರೆ ಮಾತ್ರ ಅವು ಪಂಚೇಂದ್ರಿಯಗಳನ್ನು ತಣಿಸುವುದರಿಂದ, ಸುಖಸಿಕ್ಕುತ್ತದೆ. ಅವು ರಾಶಿಗಟ್ಟಲೆಯಾಗಿದ್ದರೆ ಮಾತ್ರ ಒಬ್ಬ ಗಂಡಸು ಅಥವಾ ಹೆಂಗಸು ಸುಖ ಪಡಬಹುದು. ಅವುಗಳಲ್ಲಿ ಎಲ್ಲವೂ ಅಥವಾ ಯಾವುದಾದರೊಂದು ಇಲ್ಲವಾದಾಗ ವ್ಯಕ್ತಿಗೆ ದುಃಖವಾಗುವುದು – ಅಲ್ಲವೇ? ಆದರೆ ನಾವು ಪ್ರಪಂಚವನ್ನು ಗಮನಿಸಿದರೆ ವಸ್ತುಸ್ಥಿತಿಯು ಹಾಗಿಲ್ಲ ಎಂಬುದು ಗೊತ್ತಾಗುತ್ತದೆ. ಅತ್ಯಂತ ಶ್ರೀಮಂತನಿಗೆ ಸಹ ಅವನವೇ ಆದ ದುಃಖಗಳಿರುತ್ತವೆ. ಕೆಲ ವೇಳೆ ಅವನಿಗೆ ಇರುಳಲ್ಲಿ ಸರಿಯಾಗಿ ನಿದ್ರೆ ಬರುವುದಿಲ್ಲ. "ಬೆರಳು ದಪ್ಪವಾಗಿದ್ದಷ್ಟೂ ಬಾವು ದೊಡ್ಡದಾಗಿರುತ್ತದೆ!" ಅದಕ್ಕೆ ವಿರುದ್ಧವಾಗಿ, ಕೈಯಲ್ಲಿ ಕಾಸಿಲ್ಲದ ಹಮಾಲಿಯು ಹಗಲೆಲ್ಲಾ ದುಡಿದು ಬಳಲಿ, ರಾತ್ರಿಯಲ್ಲಿ ಒಂದು ತುತ್ತನ್ನುಂಡು ಹಾದಿಯ ಬದಿಯಲ್ಲಿ ಮಲಗಿ, ನಿರುಪದ್ರವದಿಂದ ಚೆನ್ನಾಗಿ ನಿದ್ರೆ ಮಾಡುತ್ತಾನೆ – ಎಂಬುದು ನಿನಗೆ ತಿಳಿದ ಸಂಗತಿ.

ಇಲ್ಲಿ ಇನ್ನೊಂದು ಮುಖ್ಯಾಂಶವನ್ನು ಗಮನಿಸಬೇಕು. ಸುಷುಪ್ತಿಯಲ್ಲಿ ಶ್ರೀಮಂತ ಕೂಡಾ ತನ್ನ ಬಾಹ್ಯೋಪಕರಣಗಳ ಸಂಪರ್ಕವಿಲ್ಲದವನಾಗಿರುತ್ತಾನೆ. ಅಂಥ ಸಂಪರ್ಕವಿಲ್ಲದಾಗಲೂ ಅವನು ಪೂರ್ಣಸುಖಿಯಾಗಿರುತ್ತಾನೆ. ಆದುದರಿಂದ ಸುಖವೆಂಬುದು ಪಂಚೇಂದ್ರಿಯಗಳ ಸಹಾಯವಿಲ್ಲದೆಯೇ ಪ್ರಕಟವಾಗುವ ಒಂದು ಸ್ಥಿತಿ ಎಂಬ ಸಂಗತಿಯನ್ನು ನೀನು ಒಪ್ಪಿಕೊಳ್ಳಬೇಕು. ಇಷ್ಟು ಮಾತ್ರವಲ್ಲ: ಸುಷುಪ್ತಿಯಲ್ಲಿ ನಿನಗೆ ಸುಖಾನುಭವವುಂಟಾದುದರಿಂದ, ಆ ಸ್ಥಿತಿಯಲ್ಲಿ ದೇಹಭಾನ ಪ್ರಪಂಚಭಾನಗಳಿಲ್ಲದಿರುವುದರಿಂದ, ಸುಖವೆಂಬುದು ನಿನ್ನೊಳಗೇ ಇರುತ್ತದೆ ಎಂಬುದು ಸಿದ್ಧವಾಯಿತು; ಅದು ನಿನ್ನ ಹೊರಗಿಲ್ಲವೆಂಬುದು ನಿರ್ಣೀತವಾದ ಹಾಗಾಯಿತು. ಹೊರಗಿನ ವಸ್ತುಗಳಿಂದ ನಿನಗೆ ಸುಖ ಸಿಕ್ಕುವುದೆಂದು ಈವರೆಗೂ **'ನಾನು ತಿಳಿದುಕೊಂಡದ್ದು ತಪ್ಪು'** ಎಂಬುದು ನಿನಗೀಗ ಸ್ಪಷ್ಟವಾದಂತಾಯಿತು. ನಿನ್ನ ಶರೀರ ಸಮೇತ ಜಗತ್ತಿನ ಸರ್ವವಸ್ತುಗಳು ನಿನ್ನ ಹೊರಗಿನವುಗಳು. ಆದುದರಿಂದಲೇ ಅವೆಲ್ಲಾ ಸುಷುಪ್ತಿಯಲ್ಲಿ ಮರೆತು ಹೋಗುತ್ತವೆ. ಆದರೂ ಸುಷುಪ್ತಿಯಲ್ಲಿ ಎಲ್ಲರಿಗೂ ಪೂರ್ಣಸುಖದ ಅನುಭವವಾಗುವುದರಿಂದ ನಿನ್ನಲ್ಲೇ ಸುಖ ಅಡಗಿದೆ ಎಂಬುದು ನಿರ್ವಿವಾದ ನಿಗಮನ. ನಿಜವಾಗಿಯೂ **ನೀನೇ ಸುಖ ಸ್ವರೂಪನು; ಸುಖವು ನಿನ್ನ ನಿಜವಾದ ಸ್ವಭಾವ. ನೀನು ಈ ದೇಹಾಕಾರವಲ್ಲ. ನೀನು ಪೂರ್ಣವೂ ಅನ್ಯೂನವೂ ಆದ ಆನಂದವೇ ಆಗಿರುವೆ**.

ಇನ್ನೊಂದು ಬಗೆಯಿಂದ ನಾವು ಇದೇ ನಿರ್ಣಯಕ್ಕೆ ಬರಬಹುದು– ಕಿವಿಗೊಟ್ಟು ಕೇಳು:

ನೀನು ಅನೇಕಾನೇಕ ವಸ್ತುಗಳನ್ನು ಮೆಚ್ಚುವುದಿಲ್ಲವೇ? ನೀನು ನಿನಗೆ ಪ್ರಿಯವಾದ ಪ್ರತಿಯೊಂದು ವಸ್ತುವನ್ನೂ ವಿಶ್ಲೇಷಿಸು. ಹಾಗೆ ಮಾಡಿದಾಗ ಸುಖವು ಯಾವ ಯಾವ ವಸ್ತುಗಳಿಂದ ಲಭಿಸುವುವೆಂದು ನೀನು ತಿಳಿಯುವೆಯೋ ಅವುಗಳನ್ನು ಮಾತ್ರ ನೀನು ಪ್ರೀತಿಸುವೆ ಎಂಬುದು ನಿನಗೆ ಗೊತ್ತಾಗುವುದು. **ಸುಖವಿದ್ದಲ್ಲಿ ಪ್ರೀತಿಯಿದೆ ಇದೇ ಲೋಕ ಸಾಧಾರಣವಾದ ಉತ್ಸರ್ಗ – ಅಪವಾದವಿಲ್ಲದ ಉತ್ಸರ್ಗ!** ಈ ನಿಯಮದಂತೆ ಹೋಗಲು ನೀನೀಗ ಹೇಳಬೇಕು – 'ನಿನಗೆ ಅತ್ಯಂತ ಪ್ರೀತಿಪಾತ್ರವಾದ ವಸ್ತು ಯಾವುದು? ಎಂಬುದನ್ನು. ನಿನ್ನನ್ನೇ ನೀನು ಅತ್ಯಂತ ಹೆಚ್ಚಾಗಿ ಪ್ರೀತಿಸುವೆ. ಇದು ವಾಸ್ತವಿಕ ಎಂದು ನೀನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ನಿನ್ನ ಗೆಳೆಯರು, ನೆಂಟರು, ಹೆಂಡತಿ ಅಥವಾ ಗಂಡ ಮಕ್ಕಳು, ತಂದೆ, ತಾಯಿ, ಐಶ್ವರ್ಯ ಎಂಬೀ ಹಲವಾರು ಪದಾರ್ಥಗಳೂ ನಿನ್ನ ಪ್ರೀತಿಗೆ ಪಾತ್ರವಾಗಿರಬಹುದು. ಆದರೆ ಅವೆಲ್ಲವುಗಳಿಗಿಂತಲೂ ನೀನೇ ನಿನಗೆ ಹೆಚ್ಚು ಪ್ರೀತಿ ಪಾತ್ರ. ನೀನು ಅವೆಲ್ಲವನ್ನು ಪ್ರೀತಿಸುವುದು ಅವೆಲ್ಲಾ ನಿನ್ನ ಸ್ವಂತ ಸುಖಕ್ಕೆ ಕಾರಣ ಎಂಬುದರಿಂದಲೇ. ನಿನ್ನನ್ನು ಬಿಟ್ಟು **ಅನ್ಯರಿಗೆ** ಅವು ಸುಖಕೊಡುವುದರ ಬಗೆಗೆ ನಿನಗೇನಾದರೂ ಸಾಕ್ಷಿ ಸಿಕ್ಕಿದ್ದೇ ಆದರೆ, ಆ ಕೂಡಲೇ ಅವುಗಳ ಮೇಲಿನ ನಿನ್ನ ಪ್ರೀತಿಯು ಮಾಯವಾಗಿ ಬಿಡುತ್ತದೆ! ಇದರಿಂದ ನೀನು ಇತರ ಪದಾರ್ಥಗಳನ್ನು ಪ್ರೀತಿಸುವುದು ನಿನ್ನನ್ನು ನೀನು ಪ್ರೀತಿಸುವುದರಿಂದ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ.

ಕೆಲವರು ಹೀಗೆ ಹೇಳುತ್ತಾರೆ: "ನನಗಾಗಿ ನನ್ನ ಪ್ರೀತಿಯಿಲ್ಲ. ನನ್ನ ಸುಖಕ್ಕಾಗಿ ನಾನೀ ಜಗತ್ತಿನಲ್ಲಿ ಕೆಲಸ ಮಾಡುತ್ತಿಲ್ಲ. ಅನ್ಯರ ಯೋಗಕ್ಷೇಮಕ್ಕಾಗಿಯೇ ನಾನು ದುಡಿಯುತ್ತೇನೆ. ನಿಜವಾದ ಮಾತೆಂದರೆ ನಾನು ಅನ್ಯರಿಗಾಗಿಯೇ ಬದುಕಿರುತ್ತೇನೆ. ನನ್ನ

ಸುಖದ ಕಡೆಗೆ ಮಾತ್ರ ಲಕ್ಷ್ಯಹಾಕುವುದು ಶುದ್ಧ ಸ್ವಾರ್ಥ. ಅದು ನನ್ನ ಗುರಿಯಲ್ಲ. ಅನ್ಯರ ಸುಖವೇ ನನ್ನ ಗುರಿ!" ಇದು ಮೇಲುಮೇಲಿನ ಮಾತು. ಇದರಲ್ಲಿ ಪ್ರಾಮಾಣಿಕವೂ ಗಂಭೀರವೂ ಆದ ವಿಶ್ಲೇಷಣೆಯಿಲ್ಲ ಎಂಬುದನ್ನಿದು ತಾನಾಗಿಯೇ ಸ್ಪಷ್ಟಪಡಿಸುತ್ತದೆ. ತಾವು ಸ್ವಾರ್ಥವಿಲ್ಲದೆ ಮಾಡುತ್ತೇವೆ ಎಂದು ತಾವೇ ತಿಳಿದುಕೊಂಡ ಕೆಲಸಗಳು ತಮಗೆ ಮಾತ್ರ ಸುಖಪ್ರದವಾಗುತ್ತವೆ ಎಂಬುದು ಜನರಿಗರಿಯದು. ತನ್ನ ಆವಶ್ಯಕತೆಗಳಿಗೆ ನ್ಯೂನತೆಯುಂಟಾಗದಂತೆ ತನ್ನ ಮಗನಿರಬೇಕೆಂಬ ಅಪೇಕ್ಷೆಯಿಂದ ಒಬ್ಬನು ಅವನಿಗಗತ್ಯವಾದ ಶಿಕ್ಷಣವನ್ನು ಕೊಟ್ಟು ಸಾಕಲು ಎಲ್ಲ ವಿಧದ ಕಷ್ಟನಷ್ಟಗಳನ್ನೂ ಜೀವಾವಧಿ ಅನುಭವಿಸುತ್ತಾನೆ ಎಂದಿಟ್ಟುಕೊಳ್ಳೋಣ. ಹಾಗೆ ಮಾಡುವುದರಿಂದ ಅವನೇ ತನ್ನ ಮಗನ ಅಭಿವೃದ್ಧಿಯನ್ನು ನೋಡಿ ತೃಪ್ತನಾಗತಕ್ಕವನು – ಎಂಬುದು ಒಂದು ಉದಾಹರಣೆ. ಅವನು ಮಾಡಿದ್ದೆಲ್ಲಾ ಅವನ ತೃಪ್ತಿಗಾಗಿಯೇ. **ಈ ತೃಪ್ತಿಯು ಅವನ ಸ್ವಂತದ್ದೇ ಅಲ್ಲವೇ? ಆತನು ಸ್ವಾರ್ಥರಹಿತ ಎಂದು ತಿಳಿದುಕೊಂಡು ಮಾಡಿದ ಎಲ್ಲ ಕೆಲಸಕ್ಕೂ ಅವನ ಈ ಆತ್ಮತೃಪ್ತಿಯೇ ಹಿನ್ನೆಲೆಯಾಗಿಲ್ಲವೇ?**

ಅಮೇರಿಕದ ಹಿಂದಿನ ಅಧ್ಯಕ್ಷನಾಗಿದ್ದ ಅಬ್ರಹಾಂ ಲಿಂಕನ್ನನು ಒಮ್ಮೆ ಕೆಸರಿನಲ್ಲಿ ಬಿದ್ದುಕೊಂಡಿದ್ದ ಒಂದು ಹಂದಿಯನ್ನು ಮೇಲಕ್ಕೆತ್ತಿ ಬದುಕಿಸಿದನು. ಹಾಗೆ ಮಾಡುವಾಗ ಅವನ ಮೈಯೂ ಬಟ್ಟೆಗಳೂ ಬಹಳ ಕೊಳಕಾದವು. ಅದನ್ನು ನೋಡುತ್ತಿದ್ದ ಜನರು, "ಇಷ್ಟು ದೊಡ್ಡ ದೇಶದ ಅಧ್ಯಕ್ಷನಾದವನು ಒಂದು ಸಾಮಾನ್ಯ ಹಂದಿಯನ್ನು ಬದುಕಿಸಲೆಂದು ತನ್ನನ್ನೇಕೆ ಗಲೀಜುಮಾಡಿಕೊಳ್ಳಬೇಕು?" ಎಂದು ಕೇಳಿದರು. ಆಗ ಅವನು, "ಹಂದಿಯ ಕಷ್ಟವನ್ನು ನಿವಾರಿಸಲೆಂದು ನಾನೀ ಕೆಲಸಕ್ಕಿಳಿಯಲಿಲ್ಲ. ಇದನ್ನು ಕಂಡು ನನ್ನ ಮನಸ್ಸಿಗುಂಟಾದ ಕಷ್ಟವನ್ನು ನೀಗಿಕೊಳ್ಳಲೆಂದೇ ನಾನಿದಕ್ಕೆ ಕೈಹಾಕಿದೆ. ನನ್ನ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಲೆಂದು ನಾನು ಹೀಗೆ ಮಾಡಿದೆ" ಎಂದು ಅವರಿಗೆ ಉತ್ತರ ಕೊಟ್ಟನು. ಅಂದು ಲಿಂಕನ್‌ಮಹಾಶಯ ಹೇಳಿದ್ದು ಸತ್ಯವಾದ ಸಂಗತಿ. **ಎಲ್ಲ ವಿಧದ ಸ್ವಾರ್ಥತ್ಯಾಗಕ್ಕೂ ಅವನವನ ಆತ್ಮತೃಪ್ತಿಯೇ ಗೂಢ ಹಿನ್ನೆಲೆ. ಈ ಮಾತನ್ನು ಯಾರೂ ಅಲ್ಲವೆನ್ನರು.**

ತಮ್ಮ ಮಕ್ಕಳಿಗಾಗಿ ಅಥವಾ ಸಂಬಂಧಿಕರಿಗಾಗಿ ಜನರು ಮಾಡಿದ ತ್ಯಾಗವೂ ಹೇಗೆ ಸ್ವತೃಪ್ತಿಗೇ ಸಲ್ಲುವುದೋ ಅಂಥ ತ್ಯಾಗಕ್ಕೆ "ಆತ್ಮನಸ್ತುಕಾಮಾಯ" ಎಂಬುದೇ ಕಾರಣವಾಗಿರುವುದೋ ಹಾಗೇ ದೇಶಾಭಿಮಾನ–ಭಾಷಾಭಿಮಾನಗಳಿಂದ ಜನರು ಮಾಡುವುದೆಲ್ಲವೂ ಸ್ವಾರ್ಥಕ್ಕಾಗಿಯೇ. ಏಕೆಂದರೆ, ಆ ಉದ್ದೇಶಗಳೆಲ್ಲಾ ದೇಹಾಭಿಮಾನದಲ್ಲಿ ಬೇರುಬಿಟ್ಟಿರುತ್ತವೆ. "ನನ್ನ" ಎಂಬುದರಲ್ಲಿ ಬೇರುಬಿಟ್ಟಿರುವ "ನಾನು" ಎಂಬುದನ್ನಿಲ್ಲಿ ಲಕ್ಷಿಸಬೇಕು. "ನನ್ನ ಭಾಷೆಯ ಅಭಿವೃದ್ಧಿಗಾಗಿ ನಾನು ನನ್ನ ಪ್ರಾಣವನ್ನಾದರೂ ಬಿಡಲು ಸಿದ್ಧನಾಗಿದ್ದೇನೆ" ಎಂದು ಘೋಷಿಸಿ ಕಾರ್ಯತತ್ಪರನಾಗುವವನು ಹಾಗೆ ಮಾಡುವುದು ತನ್ನ ಮೇಲೆ ತನಗಿದ್ದ ಪ್ರೀತಿಯ ದೆಸೆಯಿಂದಲೇ. ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದವನು ಹಾಗೆ ಮಾಡಿದ್ದೂ ತನ್ನ ಮೇಲಿನ ಪ್ರೀತಿಯಿಂದಲೇ. ರಾಷ್ಟ್ರೀಯತೆಯು ಸಂಕುಚಿತ ಭಾವನೆಯೆಂದು ಹೇಳಿ ಕೆಲವರು ತಮ್ಮ ಅಂತಾರಾಷ್ಟ್ರೀಯತೆಯ ವಿಶಾಲಭಾವನೆಗಾಗಿ ಹೆಮ್ಮೆಪಡುತ್ತಾರೆ: "ನನ್ನ ಮನೆ, ನನ್ನ ನಾಡು– ಎಂಬುದಕ್ಕಷ್ಟೇ ಅಂಟಿಕೊಂಡಿರುವವರಷ್ಟು

ಸ್ವಾರ್ಥಭಾವನೆ ನನ್ನಲ್ಲಿಲ್ಲ. ಇಡೀ ಜಗತ್ತೇ ಸುಖವಾಗಿರಬೇಕೆಂಬುದು ನನ್ನ ಆಶೆ. ಯಾವುದಾದರೂ ಒಂದೇ ದೇಶ ಅಥವಾ ಭಾಷೆ ಉದ್ಧಾರವಾಗಬೇಕೆಂಬ ಸಂಕುಚಿತ ಸ್ವಾರ್ಥ ನನ್ನಲ್ಲಿಲ್ಲ. ಇದು ನಿಃಸ್ವಾರ್ಥಭಾವನೆಯಲ್ಲವೇ?" ಎಂದು ಕೇಳುತ್ತಾರೆ. ಆದರೆ ಇದೂ ದೇಹಾತ್ಮ ಪ್ರೀತಿಗಾಗಿಯೇ ಹುಟ್ಟಿಕೊಂಡ ಆಶೆ. ಏಕೆಂದರೆ ಜಗತ್ತಿಡೀ ಶಾಂತಿಯಿಂದ ಇರುವುದನ್ನು ಕಂಡು ಇಂಥವರು ಮನಃಶಾಂತಿಯನ್ನು ಪಡೆಯುವರು. ಸ್ವಸುಖ ಲಾಭವೇ ಇದರ ತಾತ್ಪರ್ಯ. ಇದರಿಂದ ತಿಳಿಯುವುದೇನೆಂದರೆ ಇಂಥ ನಿಃಸ್ವಾರ್ಥವೀರರೆಂದು ಹೇಳಿಕೊಂಡವರೂ ತಮಗಾಗಿಯೇ ಜಗದ್ಧಿತವನ್ನು ಬಯಸುತ್ತಾರೆ ಎಂಬುದು ಸ್ಪಷ್ಟ! **ಇದೇ ಆತ್ಮಕಾಮ!**[೧೬] **ಆದುದರಿಂದ ಪ್ರತಿಯೊಬ್ಬನೂ ತನ್ನನ್ನೇ ತಾನು ಅತ್ಯಂತ ಹೆಚ್ಚಾಗಿ ಪ್ರೀತಿಸುತ್ತಾನೆ ಎಂಬ ಅನುಶಾಸನವು ಖಂಡನೆ ಇಲ್ಲದ್ದಾಗುವುದು.** ಈ ಪ್ರಕಾರವಾಗಿ ವಿವೇಚಿಸಿದಾಗ – ಎಲ್ಲ ಪದಾರ್ಥಗಳಲ್ಲಿ ನಿನಗೆ ಪರಮಪ್ರಿಯವಾದದ್ದು ನೀನೇ – ಎಂದು ನಿರ್ಣಯಿಸಬೇಕಾಗುವುದು. ನೀನು ಪರಮಸುಖಸ್ವರೂಪಿಯೇ ಆಗಿರುವೆ ಎಂಬ ಮಾತು ಸ್ಪಷ್ಟವಾಗಲು ಈ ಮುಂದಿನ ಎರಡು ನಿಗಮನಗಳು ಆಧಾರ: (೧) ನಿನಗೆ ನೀನೇ ಪ್ರಿಯತಮ ಮತ್ತು (೨) ಸುಖೋನ್ಮುಖವಾಗಿ ಮಾತ್ರ ಪ್ರೀತಿಯು ಚಿಮ್ಮಬಲ್ಲದು. ಸುಖವಿದ್ದಲ್ಲಿ ಪ್ರೀತಿಯಿದೆ; ನೀನು ನಿನ್ನನ್ನೇ ಅತಿಹೆಚ್ಚಾಗಿ ಪ್ರೀತಿಸುವುದರಿಂದ **ನೀನೇ ನಿತ್ಯಸುಖವಾಗಿರುವೆ.** ಹೀಗೆ ಮತ್ತೆ ನಾವು ಅದೇ ನಿಗಮನಕ್ಕೆ ಬಂದು ಮುಟ್ಟುತ್ತೇವಲ್ಲವೇ?

---

೧೬. ನಾವು ಹೀಗೆ ಹೇಳುವುದನ್ನು ಕೇಳಿ, ಸ್ವಾರ್ಥಪರತೆಯೆಂಬ ದುರ್ಗುಣವನ್ನು ಎತ್ತಿ ಹಿಡಿಯುತ್ತಿದ್ದೇವೆ ಎಂಬ ಅಪನಿಗಮನಕ್ಕೆ ಓದುಗನು ಇಳಿಯಬಾರದು. ಈವರೆಗೆ 'ಸ್ವಾರ್ಥಪರತೆ' ಎಂಬುದನ್ನು ದುರ್ಗುಣವಾಚಕವನ್ನಾಗಿ ಜನರು ಬಳಸುತ್ತ ಬಂದದ್ದು ತಪ್ಪು. "ಸ್ವ=ಆತ್ಮ=ತಾನು" ಎಂಬ ಪದವನ್ನು ದೇಹವಾಚಕವನ್ನಾಗಿ ಬಳಸುವ ಅಪಸಂಪ್ರದಾಯದ ದೆಸೆಯಿಂದ ಸ್ವಾರ್ಥ ಪರತೆಯನ್ನು ಒಂದು ದುರ್ಗುಣ ಎಂದು ತಿಳಿಯುತ್ತ ಬರಲಾಗಿದೆ. ಆದರೆ ಆತ್ಮ ಸಾಕ್ಷಾತ್ಕಾರವಾದವನಿಗೆ ಅರ್ಥಾತ್ ಆತ್ಮಜ್ಞಾನಿಗೆ ಶಬ್ದದ ನಿಜವೆಂದರೆ ಇಡಿ ವಿಶ್ವವೇ ತಾನಾಗಿ ತೋರುವ ಒಂದು ಆತ್ಮಾನುಭೂತಿ. ಆತನ ಅನುಭವವನ್ನು ನ್ಯಾಯವಾದ ತೀರ್ಮಾನವೆಂದು ತೆಗೆದುಕೊಂಡರೆ, ಸ್ವಾರ್ಥಪರತೆಯು ದುರ್‌ಗುಣವಲ್ಲವೆಂಬುದು ಸ್ಪಷ್ಟವಾಗುವುದು.

ನಿಃಸ್ವಾರ್ಥಪರತೆ ಅಥವಾ ಪರೋಪಕಾರಶೀಲ ಎಂಬುದು ಯುಗಯುಗಗಳಿಂದ ಜನರ ಹೊಗಳಿಕೆಗೆ ಪಾತ್ರವಾಗಿದೆ. ಸರ್ವೋಽಹಂ ಭಾವದ ಜ್ಞಾನಿಯ ಸ್ವಾರ್ಥಪರತೆ ಎಂಬುದು ಅದರ ಸರಿಯಾದ ಲಕ್ಷಣ. ಆತ್ಮಜ್ಞಾನಿ ಮಾತ್ರ ನಿಜವಾಗಿ ನಿಃಸ್ವಾರ್ಥಿ. ಅಸ್ತಿ, ಭಾತಿ, ಪ್ರಿಯಂ ಅಥವಾ ಸತ್–ಚಿತ್–ಆನಂದ ಎಂದು ನಮ್ಮ ಸ್ವರೂಪಕ್ಕೆ ಮೂರು ಮುಖಗಳಿವೆ. ಅವುಗಳಲ್ಲಿಯ ಆನಂದಮುಖವು ಪ್ರತಿಯೊಬ್ಬನಲ್ಲಿಯೂ ಸ್ವಾತ್ಮಪ್ರೀತಿಯ ರೂಪದಿಂದ ಪ್ರಕಾಶಿಸುತ್ತದೆ. ಆದುದರಿಂದ ಆತ್ಮರತಿಯಲ್ಲಿ ಯಾವ ಆಶ್ಚರ್ಯವೂ ಇಲ್ಲ, ತಪ್ಪೂ ಇಲ್ಲ. ಈ ಪರತಮವಾದ ಆತ್ಮವು ಅಪರಿಮಿತ ಆನಂದ ಸ್ವರೂಪವುಳ್ಳದ್ದು ಎಂದು ತಿಳಿದ ಮೇಲೆ ಅದನ್ನು ಸಂಕುಚಿತಾಕೃತಿಯ ಚಿಕ್ಕದೊಂದು ಶರೀರ ಎಂದು ಭಾವಿಸುವುದು ತಪ್ಪು. ಅದರಿಂದಲೇ ಸ್ವಾರ್ಥವನ್ನೊಂದು ದುರ್ಗುಣವೆಂದು ಗಣಿಸಲಾಗಿದೆ. ಈ ಸೂಕ್ಷ್ಮವೀಕ್ಷಣವನ್ನಿಲ್ಲಿ ಮಾಡಿದ್ದು ಆತ್ಮ ಪ್ರೀತಿ ಅಥವಾ ಆತ್ಮರತಿಯು ಪರಮ ಸತ್ಯ ಎಂಬುದನ್ನು ಪ್ರಮಾಣೀಕರಿಸಲೆಂದೇ. ಈ ವಿಷಯವನ್ನು ಇನ್ನೂ ವಿಸ್ತರಿಸಿದರೆ ಈ ಭಾಗದ ಅತಿಗಾತ್ರತೆಗೆ ಕಾರಣವಾಗುವುದರಿಂದ, ಶ್ರೀರಮಣಮಾರ್ಗದ ೨ನೆಯ ಭಾಗದಲ್ಲಿ ಶ್ರೀರಮಣ ಮಹರ್ಷಿಗಳು ಉಪದೇಶಿಸಿದ ಲೋಕಸೇವೆ ಮತ್ತು ನಿಷ್ಕಾಮ್ಯಕರ್ಮಗಳನ್ನು ವಿವರಿಸುವಾಗ ಇದನ್ನು ಪ್ರತಿಪಾದಿಸಲಾಗುವುದು.

ಸುಷುಪ್ತಿಯಲ್ಲಿ ನಿನ್ನ ಅನುಭವಕ್ಕೆ ಬಂದದ್ದು ನಿನ್ನ ಸ್ವಸ್ವರೂಪವಾದ ಈ ಸುಖವೇ! ಮನಸ್ಸು ಮತ್ತು ಅದರ ಕರಣಗಳಾದ ಪಂಚೇಂದ್ರಿಯಗಳ ನೆರವಿಲ್ಲದೆಯೇ ನಿನಗೆ ಸುಷುಪ್ತಿಯಲ್ಲಿ ಸುಖವುಂಟಾದದ್ದು **ಸುಖವು ನಿನ್ನ ನಿಜ ಸ್ವಭಾವವೇ ಆಗಿರುವುದರಿಂದ. ವಾಸ್ತವಿಕವಾಗಿ ನೀನೆ ಸುಖಿ:**

ಇಲ್ಲಿ ನೀನು ಕೇಳಬಹುದು: "ಜಾಗ್ರದವಸ್ಥೆಯಲ್ಲಿ ಪಂಚೇಂದ್ರಿಯಗಳ ಮೂಲಕ ಪಡೆಯುವ ಅನುಭವವು ಸುಖವಲ್ಲವೇ?" ಎಂದು. ಇದಕ್ಕೆ ಉತ್ತರ : ಇನ್ನೂ ಹೆಚ್ಚು ಸೂಕ್ಷ್ಮವಾಗಿ ಅವಲೋಕಿಸು. ನಿನ್ನ ಪ್ರತಿಯೊಂದು ಸುಖಾನುಭವದ ಒಳಹೊಕ್ಕು ಆ ಕಾಲದಲ್ಲಿ ನಿನ್ನಲ್ಲಿ ಯಾವ ಯಾವ ಬದಲಾವಣೆಗಳಾಗುತ್ತಿದ್ದವು ಎಂಬುದನ್ನು ಶೋಧಿಸು– ಇದಕ್ಕೊಂದು ನಿದರ್ಶನ:

ನಿನಗೊಂದು ಸಿಹಿತಿಂಡಿಯನ್ನು ತಿನ್ನಬೇಕೆಂಬ ಆಸೆಯುಂಟಾಯಿತೆಂದಿಟ್ಟುಕೊಳ್ಳೋಣ. ಈ ವಿಚಾರ ನಿನ್ನಲ್ಲಿ ಮೂಡಿದೊಡನೆಯೇ ನೀನು ಅದರ ತಯಾರಿಕೆಗೆ ಬೇಕಾದ ಸಾಮಾನುಗಳನ್ನು ತರಲು ಯತ್ನಿಸುವೆ. ಅನಂತರ ಅದನ್ನು ತಯಾರಿಸಿ ನೀನು ತಿನ್ನಲಾರಂಭಿಸುವೆ. ಆಗ ನೀನು ಸುಖವನ್ನು ಅನುಭವಿಸುವೆ. ಆ ಸುಖವು ನಿನಗೆ ಹೇಗೆ ಉಂಟಾಯಿತೆಂಬುದನ್ನು ವಿಶ್ಲೇಷಿಸಿದರೆ ಗೊತ್ತಾಗುವುದಿಷ್ಟು: ನಿನ್ನಲ್ಲಿ ಮೂಡುವ ಸುಖಸಂವೇದನೆಯನ್ನು ಲಕ್ಷಿಸಿದರೆ ಸಿಹಿ ತಿಂಡಿಯ ಆಸೆಯಿಂದ ನಿನ್ನಲ್ಲಿ ಹುಟ್ಟಿದ ವಿಚಾರ ತರಂಗಗಳು ನಿನಗೆ ಸಿಕ್ಕುತ್ತವೆ. "ನನಗೆ ಸಿಹಿತಿಂಡಿಬೇಕು" ಎಂದು ಆವರೆಗೆ ಕಾಡಿಸುತ್ತಿದ್ದ ವಿಚಾರ ತರಂಗಗಳು ನಿಂತು ಹೋಗುತ್ತವೆ. ಆದರೆ ಹಾಗೆ ನಿಂತು ಹೋಗುವುದು ಕೆಲಕಾಲ ಮಾತ್ರ. ಆದುದರಿಂದ ಆ ಸುಖಾನುಭವವೂ ಕೆಲಕಾಲ ಮಾತ್ರ. ಸಿಹಿತಿಂಡಿಯನ್ನು ತಿಂದು ಮುಗಿಸಿದ ಮೇಲೆ ಆ ವಿಚಾರತರಂಗಗಳು ಮತ್ತೆ ಉದಯಿಸುತ್ತವೆ. ಆದ್ದರಿಂದ ಸುಖವು ಮಾಯವಾಗಿ ಬಿಡುತ್ತದೆ.

ಕೆಲವರು ವಾದಿಸಬಹುದು: ಸಿಹಿ ತಿಂಡಿಯು ಸಿಹಿಯಾದದ್ದು. ಅದರಿಂದಲೇ ಅದು ಸುಖಕರವಾಗಿರುತ್ತದೆ. ವಿಚಾರತರಂಗಗಳು ನಿಂತು ಹೋಗುವುದರಿಂದಲ್ಲ. ಸಿಹಿ ತಿಂಡಿಯಲ್ಲಿರುವ ಸಿಹಿಯೇ ಸುಖಕ್ಕೆ ಕಾರಣ. ಆದರೆ ಇದು ತಪ್ಪು. ಇದು ಸಾಕಷ್ಟು ವಿಶ್ಲೇಷಣೆ ಮಾಡದೆ ಮಾಡಿದ ನಿರ್ಣಯ. ಈಗ ನೋಡೋಣ:

ರುಚಿಗ್ರಾಹಕವಾದ ನಾಲಿಗೆಯು ಯಾವುದರಲ್ಲಿ ಯಾವ ರುಚಿಯಿದೆ ಎಂಬುದಷ್ಟನ್ನು ಮಾತ್ರ ಗುರುತಿಸಬಲ್ಲದು. ಕಲ್ಲುಸಕ್ಕರೆ ಸಿಹಿ, ಬೇವು ಕಹಿ, ಹುಣಿಸೆಹಣ್ಣುಹುಳಿ, ಉಪ್ಪು ಉಪ್ಪು – ಎಂದು ಮುಂತಾಗಿ ಅದು ತಿಳಿಯಬಲ್ಲದು. ಆದರೆ ಇದು ಬೇಕು, ಅದು ಬೇಡ – ಎಂಬುದನ್ನು ನಿರ್ಣಯಿಸುವುದು ಮನಸ್ಸು. ಒಂದು ವಸ್ತು ಕಹಿಯಾಗಿದ್ದರೂ ಅದು ಬೇಕೆನ್ನಿಸಿದಾಗ ಮನಸ್ಸು ಅದರಿಂದ ಸುಖ ಹೊಂದುತ್ತದೆ. ಸಿಹಿ ಪದಾರ್ಥಗಳನ್ನು ದ್ವೇಷಿಸುವ ಮತ್ತು ಕಹಿ ಪದಾರ್ಥಗಳನ್ನು ಹೆಚ್ಚಾಗಿ ಬಯಸುವ ಜನರಿಲ್ಲವೇ? ಅದೇ ಮೇರೆಗೆ, ಒಣಮೀನು ಬೇಕೆನ್ನುವ ಮತ್ತು ಅದನ್ನು ಕಂಡಕೂಡಲೇ ಮೈಲುಗಟ್ಟಲೆ ದೂರ ಓಡುವ ಜನಗಳಿಲ್ಲವೇ! ಇಷ್ಟು ಮಾತ್ರವಲ್ಲ. ಯಾವನಾದರೂ ಜಗತ್ತಿನಲ್ಲಿಯೇ ಅತ್ಯಂತ ರುಚಿಕಟ್ಟಾದ ಮತ್ತು ಅತಿ ಚೆನ್ನಾಗಿ ಆಯ್ದ ತಿಂಡಿಯನ್ನು ತಿನ್ನುತ್ತಿದ್ದರೂ ಅವನ ಮನಸ್ಸು ಇತರ ಯಾವುದಾದರೂ ವಿಚಾರದಲ್ಲಿ ಗಾಢವಾಗಿ ಮಗ್ನವಾಗಿದ್ದರೆ ಅದಕ್ಕೆ ಆ ತಿಂಡಿಯ

ರುಚಿಯನ್ನು ತಿಳಿದುಕೊಳ್ಳಲು ಅಥವಾ ಅದರಿಂದ ಸುಖವನ್ನನುಭವಿಸಲು ಸಾಧ್ಯವಾಗದು. ಅದೇ ಪ್ರಕಾರ, ಮನಸ್ಸು ಬೇರೆ ಕಡೆಯಲ್ಲಿ ಕೇಂದ್ರೀಕೃತವಾಗಿದ್ದರೆ ಯಾವನೇ ಆದರೂ ನೀರುಚಿಯ ಆಹಾರವನ್ನೂ ಒಗಡದೆ ಉಣಬಲ್ಲನು. ಹಾಗೇ– ಒಬ್ಬನಿಗೆ ಬಲವಾದ ಹಸಿವೆಯಾದಾಗ ಅವನು ಕೇವಲ ಉಣ್ಣುತ್ತಾನೆಯೆಂಬುದಲ್ಲ; ಆ ಅಡಿಗೆಯು ಅತ್ಯಂತ ಕನಿಷ್ಠವೂ ರುಚಿಹೀನವೂ ಆಗಿದ್ದರೂ ಅವನದನ್ನು ಸವಿಯುತ್ತಾನೆ. ಈಯೆಲ್ಲ ಸಂಗತಿಗಳಿಂದ ನಾವು ಏನನ್ನು ನಿರ್ಣಯಿಸಬಹುದು? **ರುಚಿಯಲ್ಲ; ಮನಸ್ಸಿನ ವಿಚಾರ ತರಂಗಗಳೇ ಬೇಕು–ಬೇಡಗಳ ರೂಪತಾಳಿ ಮನುಷ್ಯನ ಸುಖ–ದುಃಖಗಳಿಗೆ ಕಾರಣವಾಗುತ್ತವೆ.**

> **"ಹೊಟ್ಟೆ ಸುಡುವ ಹಸಿವೆ ಬೆಂಕಿಯುರಿಯ ತೊಡಗಿದಾಗ**
> **ಹಳಸಿದಕ್ಕಿಗಂಜಿ, ಹುಳಿತ ಕಾಡುನವಣೆ ರೊಟ್ಟಿಯೂ**
> **ಭೋಜ್ಯವಾಕ್ಕು; ಮನುಜ ಸವಿವನದನ್ನಾದ್ದರಿಂದ**
> **ವಿಷಯ ಸುಖದ ಬೀಜವಲ್ಲ; ಅದು ಬೇಕೆನಿಸಿದ್ದೇ**
> **ತದುದ್ಭೂತವಾದ ಸೊಗಕೆ (ಲೋಕದಲ್ಲಿ) ಕಾರಣ."**

– ಗುರುವಾಚಕ ಕೋವೈ, ನುಡಿ ೫೮೩

ಹೀಗೆ, ಯಾವುದಾದರೂ ರುಚಿಯುಳ್ಳ ಒಂದು ವಸ್ತು ಬೇಡವೆಂಬ ವಿಚಾರ ತಲೆದೋರಿದರೆ, ಅದನ್ನತ್ತ ಎಸೆದು ಬಿಟ್ಟರೆ ಮನಸ್ಸು ತಣ್ಣಗಾಗುವುದು, ಅದನ್ನು ಕುರಿತ ವಿಚಾರವು ಹೊರಟು ಹೋಗುವದು ಅದಕ್ಕೆ ಕಾರಣ. ಆದ್ದರಿಂದ ನಿನ್ನ ನಿಜವಾದ ಸ್ವರೂಪವೆನ್ನಿಸಿದ ಸುಖವು ಆಗ ಮೂಡುವುದು. ಹಾಗಲ್ಲದೆ ವಿಶಿಷ್ಟ ರುಚಿಯ ಒಂದು ವಸ್ತುವಿನ ಬಗೆಗೆ ಬೇಕೆಂಬ ಸ್ವರೂಪದ ವಿಚಾರ ತರಂಗ ನಿನ್ನಲ್ಲಿ ಎದ್ದರೆ ಅದು ನಿನಗೆ ದೊರೆತೊಡನೆಯೇ ನಿನ್ನ ವಿಚಾರ ಮಾಯವಾಗಿ ತನ್ಮೂಲಕ ನಿನ್ನ ಮನಸ್ಸು ತಣ್ಣಗಾಗುವುದು. ಆದುದರಿಂದ ನಿನ್ನ ನಿಜಸ್ವರೂಪವಾದ ಸುಖವು ಆಗ ಕೂಡಲೇ ಉದ್ಭವಿಸುವುದು. ಇದರಿಂದ ಸೂಕ್ಷ್ಮವಿಚಾರವಂತರಿಗೆ ಅನುಭವ ವಿಶ್ಲೇಷಣೆಯಿಂದ – ಪದೇಪದೇ ಏಳುವ ವಿಚಾರಗಳ ಶಮನದಿಂದ ಸುಖವುಂಟಾಗುತ್ತದೆ. – ಎಂಬುದು ಸ್ಪಷ್ಟವಾಗುತ್ತದೆ. **ಒಂದು ವಸ್ತುವು ಸಿಹಿಯೋ ಕಹಿಯೋ ಎಂಬುದು ಮುಖ್ಯವಲ್ಲ. ವಿಷಯಗಳ ಬಗೆಗೆ ಬೇಕು–ಬೇಡ ಎಂಬ ರೂಪದಲ್ಲಿ ವಿಚಾರ ಮೂಡುವುದೇ ದುಃಖ ಮತ್ತು ಅಂಥ ವಿಚಾರ ತರಂಗಗಳು ಹೊರಟು ಹೋಗುವುದೇ ಸುಖ– ಇಷ್ಟೇ!**

ಸಿಹಿ ತಿಂಡಿಯನ್ನು ತಿನ್ನುವುದು ರುಚೀಂದ್ರಿಯಕ್ಕಷ್ಟೇ ಸಂಬಂಧಿಸಿದ್ದು. ಇತರ ನಾಲ್ಕು ಇಂದ್ರಿಯಗಳ ಪ್ರಕರಣವೂ ಮೇಲೆ ವರ್ಣಿಸಿದ ಪ್ರಕ್ರಿಯೆಯನ್ನೇ ಅವಲಂಬಿಸುತ್ತದೆ. ಆ ಇಂದ್ರಿಯಗಳೆಂದರೆ, ಸ್ಪರ್ಶೇಂದ್ರಿಯ (ಚರ್ಮ), ದರ್ಶೇಂದ್ರಿಯ (ಕಣ್ಣು), ಘ್ರಾಣೇಂದ್ರಿಯ (ಮೂಗು) ಮತ್ತು ಶ್ರವಣೇಂದ್ರಿಯ (ಕಿವಿ). ಸುಷುಪ್ತಿಯಲ್ಲಿಯೂ ತಾತ್ಕಾಲಿಕವಾಗಿ ವಿಚಾರಗಳು ಶಾಂತವಾಗಿರುತ್ತವೆ. ಆದ್ದರಿಂದ ಸುಖ ಅನುಭವಕ್ಕೆ ಬರುತ್ತದೆ. ಎಚ್ಚರವೆಂದರೆ ವಿಚಾರೋದಯ. ಮೊದಲು ಉದಯವಾಗುವುದು 'ನಾನು ದೇಹ' ಎಂಬ ವಿಚಾರ. ಎಚ್ಚೆತ್ತೊಡನೆಯೇ ಸುಷುಪ್ತಿ ಸುಖ ಮಾಯವಾಗಿ ಹೋಗುತ್ತದೆ. ಈ ಸಂಗತಿಯಿಂದ ನೀವು ಯಾವ ತೀರ್ಮಾನಕ್ಕೆ ಬಂದು ಮುಟ್ಟಬಹುದು? ವಿಚಾರಗಳು ಸುಖಶತ್ರುಗಳು! ನಿರ್ವಿಚಾರ ಸ್ಥಿತಿಯಲ್ಲಿ ಸುಖ ತನ್ನ ರಾಜ್ಯಭಾರ ನಡೆಸುತ್ತದೆ. ನಿಜವಾಗಿ ನೋಡಿದರೆ,

ವಿಚಾರಗಳು ಸುಖದ ಮೋರೆ ಮುಚ್ಚುವ ಮುಸುಕುಗಳು. ಈ ಮುಸುಕುಗಳನ್ನು ತೆರೆದಾಗ ಸುಖವು ಪ್ರಕಟವಾಗುತ್ತದೆ. **ನೀನೇ ಸ್ವತಃ ಸುಖರೂಪಿಯಾಗಿರುವುದರಿಂದ ನಿನ್ನ ಮೂಲಸ್ವರೂಪದ ಸುಖವನ್ನು ಅನುಭವಿಸಬೇಕಾದರೆ ವಿಚಾರಗಳೆಲ್ಲವನ್ನು ದೂರಸರಿಸಿ ಬಿಡುವುದೊಂದೇ ನೀನು ಮಾಡಬೇಕಾದ ಕೆಲಸ**. ಆದುದರಿಂದ ನೀನು ಅನುಭವಿಸಿದ ಸುಖವು ಸುಷುಪ್ತಿಯಲ್ಲಿ; ಸುಷುಪ್ತಿಯು ನಿರ್ವಿಚಾರ ಸ್ವರೂಪವುಳ್ಳದ್ದು. ಆ ಸುಖವನ್ನು ನಿರ್ವಿಚಾರ ಸ್ವರೂಪದ ಜಾಗರದಲ್ಲಿಯೂ ನೀನು ಅನುಭವಿಸಬಲ್ಲೆ.

ಬಾಹ್ಯ ವಸ್ತುಗಳಿಂದ ಸುಖವುಂಟಾಗುತ್ತದೆ ಎಂಬ ಅಜ್ಞಾನದ ದೃಷ್ಟಿಕೋನದಿಂದ ಮನಸ್ಸು ಬಹಿರ್ಮುಖವಾಗುತ್ತದೆ. ಸುಖ ಒಳಗಿರುತ್ತದೆ; ಪ್ರತಿಯೊಬ್ಬನೂ ನಿಜವಾಗಿ ಸುಖಸ್ವರೂಪನು – ಎಂಬ ಅಂಶವನ್ನು ಮೇಲೆ ಹೇಳಿದ ಸೂಕ್ಷ್ಮಾವಲೋಕನದಂತೆ ಸಂಪೂರ್ಣವಾಗಿಯೂ ದೃಢವಾಗಿಯೂ ಮನಸ್ಸಿಗೊಪ್ಪಿಗೆಯಾದಾಗ ಅದು ಬಹಿರ್‌ಮುಖವಾಗದು – ಅಂತರ್‌ಮುಖವಾಗುವುದು. ಇನ್ನೊಂದು ರೀತಿಯಿಂದ ಹೇಳಬಹುದಾದರೆ ಅದು ಒಳಗಿನ ಬ್ರಹ್ಮಾತ್ಮದಲ್ಲಿ ನಿಷ್ಕ್ರಿಯವಾಗಿ ನಿಲ್ಲುವುದು. **ಈ ಜ್ಞಾನವು ಸಫಲವಾಗಿ ಮನೋನಿಯಂತ್ರಣ ಮಾಡಿಕೊಳ್ಳಲು ಬೇಕಾದ ದೊಡ್ಡ ಕೈಮರ.**

ನೀನು ಸಿಹಿತಿಂಡಿಯೊಂದನ್ನು ತಿಂದಾಗ ಅದರ ಬಗ್ಗೆ ಪ್ರೀತಿಯುಳ್ಳ ವಿಚಾರತರಂಗವು ತಣಿದು ಹೋಗುವುದರಿಂದ ನೀನು ನಿನ್ನಲ್ಲಿ ಮೊದಲೇ ಇರುವ ಸುಖವನ್ನು ಅನುಭವಿಸವೆಯಲ್ಲವೇ? ಹೇಗೇ ಆದರೂ ನಿನ್ನಲ್ಲಿ ಮೊದಲೇ ಇದ್ದ ಸುಖವನ್ನು ನೀನು ಅನುಭವಿಸುತ್ತಿರುವೆ ಎಂಬುದನ್ನರಿಯದೆ ಆ ಸುಖವು ಸಿಹಿತಿಂಡಿಯಿಂದ ಸಿಕ್ಕಿತೆಂದು ನೀನು ಮೋಸ ಹೋಗುವೆ! ಅದರಿಂದಲೇ ನೀನು ಹೆಚ್ಚು ಹೆಚ್ಚು ಸಿಹಿ ತಿಂಡಿಯನ್ನು ಕಲೆಹಾಕಿಕೊಂಡು ತಿನ್ನಲು ಮತ್ತೆ ಮತ್ತೆ ಪ್ರಯತ್ನಿಸುವೆ. ಆದರೆ ಒಂದು ಗಡಿಯನ್ನು ಮುಟ್ಟಿದ ಮೇಲೆ ಸಿಹಿತಿಂಡಿಯು ವಿಷಸದೃಶವಾಗುವುದು; ಅದು ಹೊಟ್ಟೆನೋವನ್ನು ಬರಿಸಿ ನಿನಗೆ ಕಾಹಿಲೆ ತರಿಸುತ್ತದೆ. ಮಿಕ್ಕ ನಾಲ್ಕು ಇಂದ್ರಿಯಗಳ ಕತೆಯೂ ಇದೇ. ಈ ಕತೆಯನ್ನು ಕೇಳು:

ಒಂದು ನಾಯಿಯು ಶ್ಮಶಾನಕ್ಕೆ ಹೋಯಿತು. ಮಾಂಸ ಪೂರ್ತಿಯಾಗಿ ಸುಟ್ಟು ಹೋಗಿದ್ದ ಮೊನಚಾದ ಎಲುಬೊಂದನ್ನದು ಎತ್ತಿಕೊಂಡು ಜಗಿಯಲಾರಂಭಿಸಿತು. ಎಲುಬಿನ ಹರಿತವಾದ ತುದಿಗಳು ನಾಯಿಬಾಯನ್ನು ಅನೇಕ ಕಡೆಗಳಲ್ಲಿ ಚುಚ್ಚಿದ್ದರಿಂದ ರಕ್ತಸ್ರಾವ ಶುರುವಾಯಿತು. ನಾಯಿ ಅದನ್ನು ಉಗುಳಿತು. ಆದರೆ ಅದರ ತುಂಬ ನೆತ್ತರು ಬಳಿದುಕೊಂಡದ್ದನ್ನು ಕಂಡು ತಾನು ಹಸಿದು ಬಲವಾಗಿ ಜಗಿದುದರಿಂದ ಅದರೊಳಗಿನಿಂದ ರಕ್ತ ಒಸರಿತು ಎಂದು ತಿಳಿದು ಆ ರಕ್ತವನ್ನು ನೆಕ್ಕಿ ಮತ್ತೆ ಮತ್ತೆ ಗಟ್ಟಿಯಾಗಿ ಜಗಿಯಲಾರಂಭಿಸಿತು. ತತ್ಫಲವಾಗಿ ಅದರ ಬಾಯ್ತುಂಬ ಗಾಯಗಳಾದವು ಮತ್ತು ನೆತ್ತರು ಹರಿಯುವುದು ಹೆಚ್ಚಾಯಿತು. ಆ ದಡ್ಡ ನಾಯಿಯು ಮತ್ತೆ ಮತ್ತೆ ಆ ಮೂಳೆಚೂರನ್ನು ಉಗುಳುತ್ತ ನೆತ್ತರನ್ನು ನೆಕ್ಕಿದ ಮೇಲೆ ಮತ್ತೆ ಮತ್ತೆ ಕಚ್ಚಿಕೊಂಡು ಜಗಿಯುತ್ತ ಹೋಯಿತು. ಆ ಮೂಳೆಚೂರಿನಿಂದ ನೆತ್ತರು ಒಸರಲಿಲ್ಲ; ಅದರ ಬಾಯಿಂದಲೇ ರಕ್ತ ಹರಿಯಿತು – ಈ ಅಂಶ ಆ ಬೇವಕೂಫ ನಾಯಿಗೆ ಗೊತ್ತೇ ಆಗಲಿಲ್ಲ.

ಬೇವಕೂಫ ನಾಯಿಯೊಂದು ಮೂಳೆಯೆತ್ತಿಕೊಂಡಿತು
ಸುಟ್ಟು ಹೋಗಿ ಮೊದಲೆ ಮಾಂಸ ಖಾಲಿಯೆಲುಬನಿಸಿತು
ಗ್ರಾಮಸಿಂಹ ಮತ್ತೆ ಮತ್ತೆ ಜಗಿದು ಜಗಿದು ನೋಡಿತು
ನೆಕ್ಕಿ ನೆಕ್ಕಿ ತನ್ನ ನೆತ್ತರನ್ನು ತಾನೆ ಸವಿದಿತು
ಬೊಗಳಿ ಹೊಗಳ ತೊಡಗಿತಹಾ ಜಗದ ಯಾವ ವಸ್ತುವೂ
ಇದಕೆ ಸರಿಸಮಾನವಾಗದೆಂದೂ (ಇದು ಸತ್ಯವು)!

– ಗುರುವಾಚಕ ಕೋವೈ, ನುಡಿ ೫೮೫

ಈ ಪ್ರಕಾರ, ಮನುಷ್ಯನು ಬಾಹ್ಯವಸ್ತುಗಳನ್ನು ಭೋಗಿಸುವಾಗ ತನ್ನಲ್ಲೇ ಇರುವ ಸುಖದ ಅಲ್ಪಾಂಶವನ್ನು ಅನುಭವಿಸುತ್ತಾನೆ. ಆದರೆ ಅಜ್ಞಾನವಶಾತ್ ಅವನು ತನಗೆ ಸುಖವುಂಟಾದದ್ದು ಬಾಹ್ಯವಸ್ತುಗಳಿಂದ ಎಂದು ತಿಳಿದುಕೊಳ್ಳುತ್ತಾನೆ. ಅವನ ವರ್ತನೆ ಮೇಲೆ ಹೇಳಿದ ನಾಯಿಯ ಪಾಡಾಯಿತು. ನಾಯಿಯು ಮತ್ತೆ ಮತ್ತೆ ಎಲುಬನ್ನು ಜಗಿಯುತ್ತ ಹೋದಂತೆಯೇ ಮನುಷ್ಯನು ಸಾಯುವವರೆಗೂ ಪದೇ ಪದೇ ಸುಖವಸ್ತುಗಳನ್ನು ಹುಡುಕುತ್ತ ಕೂಡಿ ಹಾಕುತ್ತ ಹೋಗುತ್ತಾನೆ. ಇದರಿಂದ ಬಂದದ್ದೇನು? ಅಲ್ಲಿ ಇಲ್ಲಿ ಚೂರು, ಪಾರು ಸುಖ ಇರುವ ದುಃಖದ ರಾಶಿಯನ್ನು ತಲೆಯ ಮೇಲೆ ಹೊತ್ತುಕೊಂಡದ್ದಷ್ಟೇ ಅಲ್ಲವೇ? ಹಾಯ್! ನಿಜವಾಗಿ ನೋಡಿದರೆ ಇದೆಲ್ಲಾ ಏನು? **ಅಜ್ಞಾನ ಅಥವಾ ಮಾಯೆ!**

ಅಶ್ಮಯುಗದಿಂದ ಇಂದಿನ ಪರಮಾಣುಯುಗದವರೆಗೆ ಮನುಷ್ಯ ಮಾಡುತ್ತ ಬಂದ ಸಂಶೋಧನೆಯೂ, ಪ್ರಯತ್ನವೂ ಬೌದ್ಧಿಕ, ಸಾಮಾಜಿಕ, ವೈಜ್ಞಾನಿಕ ಎಂಬಂಥ ಯಾವ ಕ್ಷೇತ್ರದಲ್ಲಾದರೂ ಸರಿ – ದಣಿವಿಲ್ಲದೆ ಮೂಳೆಯನ್ನು ಜಗಿಯುತ್ತ ಹೊರಟ ಶುನಕನ ಪ್ರಯತ್ನಕ್ಕೆ ಸರಿಯಲ್ಲವೇ? **ಈ ಹೇಳಿಕೆಯಿಂದ ಕೆರಳಬೇಡಪ್ಪಾ! ಇದು ಸ್ಥೂಲಮಾನದ ಸಾಮಾನ್ಯ ಅನುಭವೋಕ್ತಿ ಎಂದೊಮ್ಮೆ ತೋರಿತು. ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ ಇದೇ ಸರಳವಾದ ಸತ್ಯ, ಬಟ್ಟಬಯಲಿನಂಥ ಸತ್ಯ!** ಹೇಳಪ್ಪಾ ಹೇಳು– ಮನುಕುಲವು ಪ್ರಗತಿಯ ಹೆಸರಿನಲ್ಲಿ ಇಂದ್ರಿಯತೃಪ್ತಿಗಾಗಿ ಹೊರಗಿನ ವಸ್ತುಗಳನ್ನು ಸುಧಾರಿಸುತ್ತ ಸಂಗ್ರಹಿಸುತ್ತ ಹೋಗುವುದನ್ನಲ್ಲದೆ ಈವರೆಗೆ ಇನ್ನೇನು ಮಾಡಿದೆ? **ಈಗ ಹೇಳಿದ ಮನುಷ್ಯ ಪ್ರಯತ್ನವೆಲ್ಲವೂ. ಬಾಹ್ಯವಸ್ತುಗಳಿಂದ ಸುಖ ಸಿಕ್ಕುತ್ತದೆ ಎಂಬ ತಪ್ಪು ಕಲ್ಪನೆಯನ್ನೇ ಆಧರಿಸಿದೆ.** ಹೆಚ್ಚು ಹೆಚ್ಚು ಜಗಿದಷ್ಟೂ ಹೆಚ್ಚು ಹೆಚ್ಚು ರಕ್ತವು ಒಣಮೂಳೆಯಿಂದ ಒಸರುತ್ತದೆ ಎಂದುಕೊಂಡ ನಾಯಿಗೂ ವೈಜ್ಞಾನಿಕ– ಔದ್ಯಮಿಕ ಸುಧಾರಣೆಗಳ ಮೂಲಕ ಅಧಿಕಾಧಿಕ ಬಾಹ್ಯವಸ್ತುಗಳನ್ನು ಕೂಡಿ ಹಾಕಿಕೊಂಡಷ್ಟೂ ಮಾನವರನ್ನು ಅಧಿಕಾಧಿಕ ಸುಖಿಗಳನ್ನಾಗಿ ಮಾಡಬಹುದು – ಎಂಬ ವಿಚಾರವನ್ನಿಟ್ಟುಕೊಂಡ ಮನುಷ್ಯನಿಗೂ ಏನಾದರೂ ವ್ಯತ್ಯಾಸವಿದೆಯೇ? ಖಂಡಿತವಾಗಿಯೂ ಇಲ್ಲ!

ಈ ವಿಧವಾಗಿ, ನಿತ್ಯಸುಖವನ್ನು ಪಡೆಯಲು ಬೇಕಾದ ಯುಕ್ತಮಾರ್ಗವನ್ನರಿಯದೆ – ಮಾನವಕುಲ ಬಹಳ ಮುಂಬರಿದಿದೆ, ಬಹುದೂರ ಸಾಗಿದೆ: ಅದು ಅಪದಿಕ್ಕು ಹಿಡಿದು ಇನ್ನೂ ಮುಂದೆ ಓಡತೊಡಗಿದೆ. ಅಯ್ಯಾ, ಮಾನವನ ಸುಖಾಭಿಲಾಷೆಯಲ್ಲಿ ಯಾವ ತಪ್ಪೂ ಇಲ್ಲ. ಅದು ಆತನ ಜನ್ಮಸಿದ್ಧವಾದ ಹಕ್ಕು. ಅದು ಸಕಲ ಜೀವಿಗಳ ಜನ್ಮಸಿದ್ಧವಾದ ಹಕ್ಕೆಂಬುದು ಕೂಡ ಸತ್ಯ. ಆದುದರಿಂದ, ಹೀಗೆ, ಸುಖವನ್ನು ಪಡೆಯಬೇಕಲ್ಲದೆ ಅದನ್ನು ಹತ್ತಿಕ್ಕಬಾರದು. ಆದರೆ ಮನುಷ್ಯಾ, ನೀನು ಪ್ರಾಪಂಚಿಕ

ಸುಖವಸ್ತುಗಳಿಗಾಗಿ ದುಡಿದು ದುಡಿದು ಬಳಲಬೇಡ: ಅವು ಕೊಡುವುದು ಅನಿತ್ಯವಾದ ಅಲ್ಪಸುಖವನ್ನು ಮಾತ್ರ. ಪೂರ್ಣಸುಖಕ್ಕಾಗಿ ನಿನ್ನ ಪ್ರಯತ್ನವನ್ನೆಲ್ಲಾ ಅಣಿಗೊಳಿಸು. ಕ್ಷುದ್ರವಾದ ಬಾಹ್ಯ ಸುಖ ವಸ್ತುಗಳನ್ನು ಬಯಸಿದರೆ ನಿನಗೆ ಸಿಕ್ಕುವುದು ಪರಿಮಿತ, ಕ್ಷಣಿಕ ಸುಖ ಮಾತ್ರ. **ಆದುದರಿಂದ ಚಿಕ್ಕಪುಟ್ಟ ಆಸೆಯನ್ನಿಟ್ಟುಕೊಳ್ಳಬೇಡ! ಪೂರ್ಣವಾದ ಮಹಾಪೇಕ್ಷೆಯನ್ನಿಟ್ಟುಕೋ!** ಪೂರ್ಣ ಸುಖ ಸಿಕ್ಕುವವರೆಗೆ ನಿನ್ನ ಪ್ರಯತ್ನವನ್ನು ಬಿಡಬೇಡ. ನೀನೇ ಆದ ಪೂರ್ಣಸುಖವೆಂಬ **ಆನಂದವನ್ನು** ಯಾವಾಗಲೂ ತಪ್ಪದೆ ಅನುಭವಿಸುವ ಮಾರ್ಗವನ್ನು ತಿಳಿದುಕೋ. ಅದು **ಇದೆ.** (ಸತ್), **ಹೊಳೆಯುತ್ತದೆ** (ಚಿತ್) ಮತ್ತು ನಿನ್ನೊಳಗೇ ನಿನ್ನ ನಿಜಸ್ವರೂಪ ಎನ್ನಿಸಿದೆ. ಇದು ಪರಮಪುರುಷಾರ್ಥ. ನೀನು ಹುಟ್ಟಿದ್ದೇ ಈ ಉದ್ದೇಶ ಸಾಧನೆಗಾಗಿ.

ಅಧ್ಯಾಯ ಮೂರು

ಆತ್ಮಶೋಧವೊಂದೇ ಸುಖ ಪಡೆಯುವ ಮಾರ್ಗ

ಈ ಮೊದಲು ಹೇಳಿದ ಮಾತುಗಳಿಂದ 'ನಾನು' (ಬ್ರಹ್ಮಾತ್ಮ) ಸುಖಸ್ವರೂಪಿಯಾಗಿದ್ದೇನೆ ಎಂಬ ನಿಗಮನಕ್ಕೆ ಬರಲಾಯಿತು. ಈಗ ಒಂದು ಪ್ರಶ್ನೆ: ಆ ಸುಖವನ್ನು ಪಡೆಯುವುದು ಹೇಗೆ? ಎಂದು. ಅಲ್ಲದೆ, ಅದನ್ನು ಸತತವೂ ಅನುಭೋಗಿಸುತ್ತಿರುವುದು ಹೇಗೆ? ಎಂಬುದನ್ನೂ ಕೇಳಬೇಕಾಗುತ್ತದೆ. **ವಿಚಾರಗಳು ನಿಂತು ಹೋದಾಗ ಸುಖವು ಪರಾಕಾಷ್ಠೆಗೇರುವುದು.** ಸುಖದ ಬಗೆಗಿನ ಸತ್ಯಸಂಗತಿ ಈ ಬಗೆಯದು. ನಿರ್ವಿಚಾರ ಸ್ಥಿತಿಯನ್ನು ಸಂಪಾದಿಸಿದರೂ ಒಂದು ಗಳಿಗೆ ಸುಖಾನುಭವವುಂಟಾದರೂ ಬಾಹ್ಯ ವಸ್ತು ಸಂಪರ್ಕದಿಂದುಂಟಾದ ಅಂಥ ಸುಖವು ಬಹಳ ಕಾಲ ಉಳಿಯದು. ಆದುದರಿಂದ ಪಂಚೇಂದ್ರಿಯಗಳ ಸಹಾಯದಿಂದ ಯಾವಾಗಲಾದರೂ ನಿರ್ವಿಚಾರ ಸುಖ ಸ್ಥಿತಿಯನ್ನು ನಿತ್ಯವೂ ಇರುವಂತೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದು ಸ್ಪಷ್ಟ.

ಸುಷುಪ್ತಿಯು ಸುಖಸ್ಥಿತಿಯೆಂದು ನಾವು ಆಗಲೇ ತಿಳಿದುಕೊಂಡಿಲ್ಲವೇ? ಆದುದರಿಂದ ಮನುಕುಲದ ಗುರಿ, ಒಟ್ಟಿನಲ್ಲಿ, ಸುಷುಪ್ತಿಯೇ ಆದೀತೇ? ಅದೆಂದೂ ಆಗಲಾರದು. ಏಕೆಂದರೆ, ಅದೂ ತಾತ್ಕಾಲಿಕವಷ್ಟೇ ಅಲ್ಲ, ಅದಾದ ಮೇಲೆ ಬರುವ ಜಾಗರವು ಅದಕ್ಕೆ ಅಡ್ಡಿಯುಂಟು ಮಾಡುತ್ತದೆ. ಯಾರೂ ಶಾಶ್ವತವಾಗಿ ನಿದ್ದೆಯಲ್ಲಿರಲಾರರು. ವಿಚಾರದ ರೂಪತಾಳಿ ಅವನ ವಾಸನೆಗಳು ಅವನನ್ನು ಎಚ್ಚರಿಸುತ್ತವೆ. ಮನಃಸಂಪರ್ಕ ಹೊಂದಿದ ದೇಹವು ಬಿಡುವಿಲ್ಲದೆ ಇಡಿ ದಿನವೂ ಕೆಲಸ ಮಾಡುತ್ತದೆ. ದಿನದ ಅಂಥ ಕಠಿನ ದುಡಿತದ ಅನಂತರ, ಮತ್ತೆ ಕಾರ್ಯಮಗ್ನವಾಗಲು ಮನಸ್ಸಿಗೆ ವಿಶ್ರಾಂತಿ ಬೇಕಾಗುವುದು! ಅದರಿಂದಲೇ ವಿಚಾರಗಳ ಸಮೂಹವಾಚಕವಾದ ಮನಸ್ಸು ತನ್ನಿಂದತಾನೇ ಸುಷುಪ್ತಿಯಲ್ಲಿ ಲಯ ಹೊಂದುತ್ತದೆ. ತಾತ್ಕಾಲಿಕವಾಗಿ ವಿಶ್ರಾಂತಿ ಪಡೆದ ಮನಸ್ಸು ಉತ್ಸಾಹದಿಂದ ಕಾರ್ಯರಂಗಕ್ಕೆ ಪುನಃ ಧುಮುಕದೆ ಇರದು! ಹಾದಿಯಲ್ಲಿ ಹೋಗುವಾಗ ಒಬ್ಬನು ಮಳೆಯಲ್ಲಿ ಸಿಕ್ಕಿದರೆ ಹತ್ತಿರದ ಒಂದು ಮನೆಯ ಬಳಿ ಮಾಡಿನ ಕೆಳಗೆ ನಿಂತು ರಕ್ಷಣೆ ಪಡೆದರೆ ಅವನು ಅಲ್ಲಿಯೇ ಸತತವಾಗಿ ಉಳಿದುಬಿಡುತ್ತಾನೆ ಎಂಬಂತಿಲ್ಲ. ಮಳೆ ಹೊಳವಾದ ಕೂಡಲೇ ಅವನು ಖಂಡಿತವಾಗಿಯೂ ಮುನ್ನಡೆಯುವನು. ಅದೇ ಮೇರೆಗೆ ಮನಸ್ಸಿಗೆ ಸ್ವಲ್ಪ ವಿಶ್ರಾಂತಿ ದೊರಕುತ್ತದೆ– ಅದು ನಿದ್ದೆ ಹೋಗುತ್ತದೆ. ಅದರ ಸಕ್ರಿಯ ಸ್ಥಿತಿಯನ್ನು ಜಾಗರವೆಂದೋ ಸ್ವಪ್ನವೆಂದೋ ಕರೆಯಬಹುದು. ಈ ಪ್ರಕಾರ ಯಾರೂ ನಿತ್ಯನಿದ್ರೆಯನ್ನು ಹೊಂದಿರಲಾರರು. ಆದುದರಿಂದ ನಿದ್ರೆಯೂ ತಾತ್ಕಾಲಿಕ ಸುಖವೇ. ನಿದ್ರೆ (ಸುಷುಪ್ತಿ) ಎಂಬ ಈ ಸ್ಥಿತಿಯು[೧೭] ಜಾಗರಿತಾವಸ್ಥೆಯ ಎರಡು ವೃತ್ತಿಗಳ ಅಥವಾ ವಿಚಾರಗಳೆಂಬ

---

೧೭. ನಿದ್ರೆಯನ್ನು ಎಲ್ಲರೂ ಹೀನಾವಸ್ಥೆ ಎಂದು ಬಗೆಯುತ್ತಾರೆ. ಶ್ರೀರಮಣರು ನಿದ್ರೆಯ ನಿಜಸ್ವರೂಪವನ್ನು ಹೊರಗೆಡಹಿದ್ದಾರೆ. ಅವರ ಅನುಭವವು ಪರಮಪ್ರಮಾಣ. ಅದರ ಪ್ರಕಾರ ಅದರ ನಿಜಸ್ವರೂಪವು ತೀರಾ

ಮಾನಸಿಕ ಸಕ್ರಿಯಾವಸ್ಥೆಗಳ ನಡುವಣ ಸ್ಥಿತಿ ಅಥವಾ ಅವಸ್ಥೆ. ಅದರಲ್ಲಿ ಇನ್ನೂ ಒಂದು ದೋಷವಿದೆ. ನಿದ್ರಾವಸ್ಥೆಯಲ್ಲಿ ಮನೋಬುದ್ಧಿಯು* ತಮಾಂತರ್ಗತವಾಗುತ್ತದೆ. ಅದಕ್ಕೆ ಅದರ ಮೂಲಪ್ರಕಾಶವಾದ ಸಚ್ಚಿತ್ತಿನ ಅರಿವಿರದು. ಆದರೆ ಅದನ್ನು ಎಚ್ಚರವನ್ನು ಕಳೆದುಕೊಳ್ಳದೆಯೇ ಸಚ್ಚಿತ್ತಿನಲ್ಲಿ ಮುಳುಗುವಂತೆ (ಸಮರಸವಾಗುವಂತೆ) ಮಾಡಬೇಕು. ಆದುದರಿಂದ ನಿದ್ರೆಯು ಪೂರ್ಣಸುಖಾವಸ್ಥೆಯಲ್ಲ. ಅದು ನಿರ್ದುಷ್ಟವಾದ ಸ್ಥಿತಿಯಲ್ಲ. ಹಾಗಾದರೆ (ತದ್ಭಿನ್ನವಾದ) ನಿತ್ಯಸುಖಾನುಭವಕ್ಕೆ ಮಾರ್ಗವಾದರೂ ಯಾವುದು? ಭಗವಾನ್ ಶ್ರೀ ರಮಣಮಹರ್ಷಿಗಳ ಸೂಕ್ತಿಗಳತ್ತ ತಿರುಗೋಣ:

> **"ಮನದ ತಲ್ಲೀನತೆಯು ಎರಡು ವಿಧವಾಗಿಹುದು:**
> **ತಾತ್ಕಾಲಿಕಕೆ ಮನೋಲಯವೆಂಬರು**
> **ಮತ್ತೆ ಜಾಗರ ಹೊಂದದಿರುವ ತಲ್ಲೀನತೆಗೆ**
> **ನಾಶವೆಂಬರು ಮನದ (ಮುನಿವರ್ಯರು)**
> **ಲೀನಮನ ಮತ್ತೆದ್ದು ನಿಂತೀತು, ನಷ್ಟ ಮನ**
> **ಏಳದೆಂದೂ ಮತ್ತೆ ತಾನೆಂಬರು"**

ಉಪದೇಶ ಉಂದಿಯಾರ್, ನುಡಿ ೧೩

ಮನಸ್ಸಿನ ತಲ್ಲೀನತೆ ಅಥವಾ ಅವಗೀರ್ಣತೆ ದ್ವಿವಿಧವಾಗಿದೆ : ತಾತ್ಕಾಲಿಕ ತಲ್ಲೀನತೆಯೇ **ಲಯ (ಮನೋಲಯ)**. ಮನೋಲಯವು ಮಾನಸಿಕ ಮೌನ. ಲಯದಲ್ಲಿ ಮನಸ್ಸು ಅವಗೀರ್ಣವಾದರೆ ಕಾಲಕ್ರಮೇಣ ಅದು ಮತ್ತೆ ಉದಯಿಸೀತು. **ಮನೋನಾಶವು** ಎರಡನೆಯ ಬಗೆಯ ಅವಗೀರ್ಣತೆ. ಅದು ಮನಸ್ಸಿನ ಪ್ರಧ್ವಂಸ ಅಥವಾ ಸಂಹಾರ. ಈ ಬಗೆಯ ತಲ್ಲೀನತೆಯಲ್ಲಿ ಮನಸ್ಸು ಸಾಯುವುದು. ಅದೆಂದೂ ಮತ್ತೆ ಹುಟ್ಟದು. ಮೃತವಾದುದರಿಂದ ಅದು ಯಾವ ದುಃಖದ ಹುಟ್ಟಿಗೂ ಕಾರಣವಾಗದು. ಆದುದರಿಂದ ದ್ವಿತೀಯ ವಿಧದ ತಲ್ಲೀನತೆಯಿಂದ ಪಡೆದ ಸುಖವು ಮನೋನಾಶಲಬ್ಧವಾದುದರಿಂದ ನಿತ್ಯ. ಅದು ಪರಮಾನಂದ.

ಜಾಗ್ರದವಸ್ಥೆಯಲ್ಲಿ ನಾವು ಪಂಚೇಂದ್ರಿಯಗಳ ಮೂಲಕ ಅನುಕೂಲ ಸಂವೇದನೆಗಳನ್ನು ಅನುಭವಿಸುವಾಗ ಮನೋ ಮೌನದ ಉಪಸ್ಥಿತಿಯು ಅಲ್ಲಿ ಅಲ್ಪಕಾಲಿಕ. ನಿದ್ರಾವಸ್ಥೆಯಲ್ಲಿ ಅದರ ಉಪಸ್ಥಿತಿಯು ದೀರ್ಘಕಾಲಿಕ.[೧೮] ಮರಣಾವಸ್ಥೆಯಲ್ಲಿ ಕೂಡ ಹಾಗೇ ಮನಸ್ಸು

ಭಿನ್ನ. ಅದು ಈ ಪುಸ್ತಕದ ೮ನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ. ಆದರೆ ಸದ್ಯ ನಾವು ಸಾಮಾನ್ಯರೆನ್ನುವಂತೆ ನಿದ್ರೆಯೊಂದು ನ್ಯೂನಾವಸ್ಥೆ ಮತ್ತು ಹೀನಸ್ಥಿತಿ ಎಂದಿಟ್ಟುಗೊಂಡೇ ಮುನ್ನಡೆಯೋಣ.

೧೮. ನಾವೀಗ ಹೆಚ್ಚು ದೀರ್ಘವಾಗಿ ಎಂದು ಹೇಳಬೇಕಾಗಿ ಬಂದರೂ ನಿಜವಾಗಿ ದೀರ್ಘಹ್ರಸ್ವ ಎಂಬ ಭೇದಗಳು ಸೂಕ್ಷ್ಮಾವಲೋಕನ ಮಾಡಿದಾಗ ಉಳಿಯವು. ಏಕೆಂದರೆ ಕಾಲವೇ ಒಂದು ಮಾನಸಿಕ ಕಲ್ಪನೆ .('ಗುರುವಚನ ಕೋವೈ'ಯ ೫೬೦ನೆಯ ನುಡಿಯನ್ನು ನೋಡಿರಿ)

* ಬುದ್ಧಿರುಪಲಬ್ಧಿರ್ಜ್ಞಾನಮಿತ್ಯನರ್ಥಾಂತರಂ. "ಮನೋಬುದ್ಧಿ" ಆಯುರ್ ವೇದೋಕ್ತ. ಭಾರತದಲ್ಲಿ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳನ್ನು ಪ್ರತ್ಯೇಕಿಸಿ ಹೇಳುವುದು ಸಂಪ್ರದಾಯ. ಇಂಗ್ಲೀಷಿನ "ಮೈಂಡ್" ಎಂದರೆ Cognition = ಅಭಿಜ್ಞಾನ; Conation = ಸಂಕಲ್ಪನ, ಕಾಮನ; emotion = ಭಾವನ, ಭಾವನೆ ಮತ್ತು intuition = ಪ್ರತಿಭಾನ – ಎಂಬ ಶಕ್ತಿ ಚತುಷ್ಟಯ ಸಂಪನ್ನವಾದ ಒಂದು function = ಕ್ರಿಯಾಘಟಕ. – ಬಿ.ಎಚ್.ಶ್ರೀ.

ಮೌನ ಹೊಂದಿರುವುದಷ್ಟೇ. ಈ ಅವಸ್ಥೆಗಳೆಲ್ಲವೂ ಮನೋಲಯಗಳಲ್ಲದೆ ಮನೋನಾಶ ಸ್ವರೂಪದವುಗಳಲ್ಲ. ತಾತ್ಕಾಲಿಕವಾಗಿ ದುಃಖ (ಅಂದರೆ ಮನಸ್ಸು) ಲಯಹೊಂದಿದರೆ ಸಾಲದು; ಅದು ನಾಶಹೊಂದಬೇಕು. ಇದು ಮನುಕುಲದ ಗುರಿ. **ತಾತ್ಕಾಲಿಕ ಮನೋಮೌನ (ಮನೋಲಯ) ಎಂದರೆ ದುಃಖದ ತಾತ್ಕಾಲಿನ ಮೌನ (ಶಮನ); ಶಾಶ್ವತವಾದ ಮನೋನಾಶ ಎಂದರೆ ಶಾಶ್ವತವಾದ ದುಃಖನಾಶ; ಅಂದರೆ ಮನಸ್ಸೆಂಬುದೇ ದುಃಖ!** ಆದುದರಿಂದ ಮನಃಸಂಹಾರಕ್ಕೆ ಏನು ಮಾಡಬೇಕೆಂದು ಶೋಧಿಸೋಣ.

ಮನಸ್ಸೆಂದರೇನು? "ಮನಸ್ಸು ಕೇವಲ ವಿಚಾರ ಭಂಡಾರ"
ಎಂಬುದು ಭಗವಾನ್ ಶ್ರೀರಮಣರ ನಿರ್ಣಯ.

– ಉಪದೇಶ ಉಂದಿಯಾರ್ ನುಡಿ ೧೮

ಎಲ್ಲ ವಿಚಾರಗಳನ್ನೂ ತ್ಯಜಿಸಿ ನಾವು ಮನಸ್ಸೆಂದರೇನೆಂದು ಲಕ್ಷ್ಯವಿಟ್ಟು ನೋಡಿದರೆ ಮನಸ್ಸೆಂಬ ಒಂದು ವಸ್ತು ಇಲ್ಲವೇ ಇಲ್ಲ ಎಂಬುದು ನಮಗೆ ಗೊತ್ತಾಗುತ್ತದೆ.

ತಪ್ಪು ಮಾಡದೆ ಮನದ ರೂಪವ
ಶೋಧಿಸಿದರೆಮಗರಿಯುವುದು ಇಂ–
ತಪ್ಪ ಮನಕಸ್ತಿತ್ವವೆಂಬುದೆ ಇಲ್ಲವೆಂದಿನ್ನು।

ಒಪ್ಪದಿರರಿದೆ ನೇರಮಾರ್ಗ ಸ
ಮಸ್ತ ಜನರಿಗೆ ಪಡೆಯುವೊಡೆ ನಿರ್
ಲಿಪ್ತ ಪರಮಾನಂದವನ್ನೆನೆ (ತತ್ವಕೋವಿದರು)॥

–ಉಪದೇಶ ಉಂದಿಯಾರ್, ನುಡಿ ೧೭೮

ಮನಸ್ಸಿನ ನಾಶಕ್ಕೆ ವಿಚಾರನಾಶವಾದರೆ ಸಾಕು. ಆದುದರಿಂದ ವಿಚಾರಗಳು ಎಂದರೆ ನಿಜವಾಗಿಯೂ ಎಂಥವು? ಎಂಬುದನ್ನು ಪರೀಕ್ಷಿಸೋಣ. ಈ ಸೂಕ್ಷ್ಮಾವಲೋಕನವು ಕಾಲಹರಣ ಮಾಡಲೆಂದು ಮಾಡಿದ್ದಲ್ಲ. ಇಡೀ ಜಗತ್ತು ಸುಖಕ್ಕಾಗಿ ಹೋರಾಡುತ್ತಿಲ್ಲವೇ? ಆ ಸುಖವನ್ನು ಪಡೆಯಲೆಂದೇ ಈ ಸೂಕ್ಷ್ಮಾವಲೋಕನವನ್ನು ಆರಂಭಿಸಲಾಗಿದೆ. ಹಾಗಾದರೆ ಮನುಷ್ಯ ಸಾಮಾನ್ಯರ ಪ್ರಯತ್ನಕ್ಕೂ ಆಧ್ಯಾತ್ಮಿಕ ಅಭ್ಯರ್ಥಿಯ ಈ ಪ್ರಯತ್ನಕ್ಕೂ ಇರುವ ವ್ಯತ್ಯಾಸವೇನು? ಪ್ರಾಪಂಚಿಕರ ಪ್ರಯತ್ನದಿಂದ ದೊರಕುವುದು ತಾತ್ಕಾಲಿಕವಾದ ಸುಖಾಭಾಸ ಮಾತ್ರ. ಆಧ್ಯಾತ್ಮಿಕ ಅಭ್ಯರ್ಥಿಯು ಮಾಡುವ ಈ ಆತ್ಮಶೋಧಪ್ರಯತ್ನ ಪೂರ್ಣವೂ ನಿತ್ಯವೂ ಅಸೀಮವೂ ಆದ ಸುಖಕ್ಕೆ ಮುಟ್ಟಿಸುವ ಮಾರ್ಗವನ್ನು ರೂಪಿಸುತ್ತದೆ. **ಆದುದರಿಂದ ಈ ಸಂಶೋಧನೆಯು ಇತರ ಎಲ್ಲ ವಿಧದ ಮಾನವ ಪ್ರಯತ್ನಗಳಿಗಿಂತಲೂ ಬಹಳ ಮುಖ್ಯವೂ ಯೋಗ್ಯವೂ ಆದುದು.** ಈ ಸೂಕ್ಷ್ಮಾವಲೋಕನದ ಉದ್ದಕ್ಕೂ ಸಂಶೋಧಕನು ಎಚ್ಚತ್ತಿರಬೇಕಲ್ಲದೆ ತನಗೆ ಸಾಧ್ಯವಾದ ಸರ್ವೋಚ್ಚ ಪ್ರಯತ್ನವನ್ನು ಮಾಡಬೇಕು. ಆಗ ಮಾತ್ರ ಅವನ ಶೋಧದ ಫಲವಾಗಿ ಜೀವನದ ಪರಮಾರ್ಥವು ಈಗಲೇ ಇಲ್ಲೇ ದೊರಕುವುದು. ಈ ಸತ್ಯವನ್ನು ಭಗವಾನ್ ಶ್ರೀರಮಣರ ಸ್ವಾನುಭವವು ಚೆನ್ನಾಗಿ ಪ್ರಮಾಣಿಸಿ ತೋರಿಸಿದೆ.

ನಾವು ವಿಚಾರಗಳ ಸೂಕ್ಷ್ಮಾವಲೋಕನ ಮಾಡಬೇಕೆಂಬ ಸೂಚನೆಯಿಂದ ಹೊರಟವರಲ್ಲವೇ? ಯಾವುದಕ್ಕೋಸ್ಕರ? ಸರ್ವವಿಚಾರಗಳ ನಾಶದಿಂದ ಪೂರ್ಣಸುಖವನ್ನು

ಅನುಭವಿಸಬೇಕೆಂಬ ಗುರಿಯ ಸಿದ್ಧಿಗೋಸ್ಕರ. ಲಕ್ಷೋಪಲಕ್ಷ ವಿಚಾರಗಳು ನಮ್ಮಲ್ಲಿ ಮೂಡುತ್ತವೆ. ಅವುಗಳ ನಡುವೆ ಹೊಕ್ಕು ನಾವು ಮೊಟ್ಟ ಮೊದಲನೆಯದೂ ಮೂಲಭೂತವೂ ಆದ ವಿಚಾರವನ್ನು ಶೋಧಿಸಬೇಕು. ನಾವು ಹಾಗೆ ಮಾಡಿದಾಗ ಉತ್ತಮ ಪುರುಷದಲ್ಲಿರುವ 'ನಾನೀದೇಹ' ಎಂಬ ವಿಚಾರವು ಮೊದಲನೆಯದೆಂದು ಗೊತ್ತಾಗುವುದು. ಅದು ನಿದ್ದೆಯಿಂದ ಎದ್ದ ಕೂಡಲೇ ನಮ್ಮಲ್ಲಿ ಏಳುವುದು. ಈ ನಾನೆಂಬ ವಿಚಾರವೇ ಸರ್ವವಿಚಾರಗಳ ಮೂಲ.

ಮನ ವಿಚಾರಜಾಲವದಕೆ ನಾನೆಂಬ ವಿಚಾರ
ಮೂಲವಾದ್ದರಿಂದ ಮನಸ್ಸಕ್ಕು ಬರಿ ವಿಚಾರ
ದೇಹವಹಮ್ಮೆಂದು ತಿಳಿವ ಭಾವವದರ ಸಾರ

– ಉಪದೇಶ ಉಂದಿಯಾರ್ ನುಡಿ ೧೮

ವ್ಯಾಕರಣೋಕ್ತವಾದ ಪುರುಷಗಳು ಮೂರು: ಉತ್ತಮ ಪುರುಷ, ಮಧ್ಯಮ ಪುರುಷ, ಪ್ರಥಮ ಪುರುಷ ಎಂದು; ನಾನು, ನೀನು ಮತ್ತು ಅವನು, ಅವಳು, ಅದು ಎಂಬಿವು ಅವುಗಳ ಉದಾಹರಣೆಗಳು. ಅವುಗಳಲ್ಲಿ ನಾನೆಂಬ ಉತ್ತಮ ಪುರುಷ ಹುಟ್ಟುವುದು ಮೊದಲು. ಅದು ಉದಯಿಸದಿದ್ದರೆ ಉಳಿದೆರಡು ಪುರುಷಗಳು ಉದಯಿಸಲಾರವು, ಅಸ್ತಿತ್ವಕ್ಕೆ ಬರಲಾರವು. ಉತ್ತಮ ಪುರುಷ ಎಂದರೆ 'ನಾನು' ಎಂಬ ವಿಚಾರ; ಮತ್ತಾವುದೂ ಅಲ್ಲ. ಅದೇ ಮನಸ್ಸು. ಮಧ್ಯಮ, ಪ್ರಥಮ ಪುರುಷಗಳು ಉತ್ತಮ ಪುರುಷದ ಉದಯವಾದ ಮೇಲೇ ಉದಯಿಸುವಂಥವುಗಳು. ಪ್ರಪಂಚದಲ್ಲಿ ತುಂಬಿರುವವೆಲ್ಲಾ ಮಧ್ಯಮ– ಪ್ರಥಮ ಪುರುಷಗಳಿಂದ ವಾಚ್ಯವಾದ ಪದಾರ್ಥಗಳು. ನಿದ್ದೆಯಲ್ಲಿ ದೇಹೋऽಹಂಭಾವವಿರುವುದಿಲ್ಲ. ಆದುದರಿಂದ ಪ್ರಪಂಚದ (ಮಧ್ಯಮ–ಪ್ರಥಮ ಪುರುಷ ಮಟ್ಟವಾದ ಪದಾರ್ಥಗಳ) ಭಾನ ಅಲ್ಲಿರುವುದಿಲ್ಲ.

ಅಹಮೆಂಬ ಭಾವವುತ್ತಮ ಪುರುಷ ದೇಹ ನಾ–
ನೆಂಬ ತಿಳಿವಳಿಕೆ, ಮೊದಲಿದ್ದರಷ್ಟೇ
ಮಧ್ಯಮ–ಪ್ರಥಮ ಪುರುಷಗಳಿಂದ ನಿರ್ದಿಷ್ಟ
ವಸ್ತು ಪ್ರಪಂಚ ತಾನಿರ್ಪುದಷ್ಟೆ

– ಉಳ್ಳದು ನಾರ್ಪ.ದು ನುಡಿ ೧೪

'ಅಹಮ್ಮೆಂಬುದಿಲ್ಲದಲ್ಲಿ ಮತ್ತೇನೂ ಇರದು.'

– 'ಶ್ರೀ ಅರುಣಾಚಲಾಷ್ಟಕಂ' ನುಡಿ ೭

ಸರ್ವವಿಚಾರಗಳ ಮೂಲವಾದ ನಾನೆಂಬ ವಿಚಾರವು ಏಳದಂತೆ ಮಾಡಿದರೆ ಉಳಿದ ಎಲ್ಲ ವಿಚಾರಗಳನ್ನು ಪ್ರತಿಬಂಧಿಸಿದಂತಾಗುತ್ತದೆ. ಒಬ್ಬನು ಒಂದು ಮರದ ಲಕ್ಷಾಂತರ ಎಲೆಗಳನ್ನು ನೂರಾರು ಕೊಂಬೆಗಳನ್ನು ಕಡಿಯಬೇಕೆಂದು ವಿಚಾರ ಮಾಡಿದಾಗ ಅವನು ಅದರ ಕಾಂಡವನ್ನು ಕಡಿದರೆ ಸಾಲದೇ? ಅದೇ ಮೇರೆಗೆ, ಲಕ್ಷೋಪಲಕ್ಷ ವಿಚಾರಗಳನ್ನು ನಾಶಮಾಡ ಹೊರಟ ಮನುಷ್ಯನೊಬ್ಬನು ಅವುಗಳ ಮೂಲವಾದ ಅಹಮ್ಮೆಂಬ ವಿಚಾರವನ್ನು ನಾಶ ಮಾಡಿಬಿಟ್ಟರೆ ಅವನು ಜಯಶಾಲಿಯಾಗುವನು. ವಿಚಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದನ್ನೇ ಗುರಿಯಾಗಿಟ್ಟುಕೊಂಡು ನಾವು

ಹೊರಡಲಿಲ್ಲವೇ? ನಾವು ಈ ಹಿಂದೆ ಕಂಡ ಪ್ರಕಾರ, **ಪ್ರತಿಯೊಂದು ವಿಚಾರವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಬೇಕಾಗಿಲ್ಲ – ಸರ್ವವಿಚಾರಗಳಿಗೂ ಮೂಲವಾದ ನಾನೆಂಬ ವಿಚಾರವನ್ನು ಮಾತ್ರ ಸೂಕ್ಷ್ಮಾವಲೋಕನಕ್ಕೆ ಗುರಿಪಡಿಸಿದರೆ ಸಾಕು ಎಂಬುದೀಗ ಸ್ಪಷ್ಟ.**

ಕೆಲವರು ಕೇಳಿಯಾರು – "ವಿಚಾರಗಳ ನಾಶದಿಂದ ಸುಖ ಬರುವುದಲ್ಲವೆ? ಹಾಗಾದರೆ ಯಾವ ವಿಚಾರವನ್ನೇ ಆಗಲಿ – ಸೂಕ್ಷ್ಮವಾಗಿ ಅವಲೋಕಿಸುವುದೇಕೆ? ಹಾಗೆ ಮಾಡುವುದು ನಿರರ್ಥಕವಲ್ಲವೇ?" ಅವರು ಭಗವಾನ್ ಶ್ರೀರಮಣ ಮಹರ್ಷಿಗಳು ('ನಾನು ಯಾರು?!' ಎಂಬ ಗ್ರಂಥದಲ್ಲಿ) – ಒಮ್ಮೆಲೇ ಎಸೆದು ಬಿಡಬೇಕಾದ ಕಸಕಡ್ಡಿಗಳನ್ನು ಪರಿಶೀಲಿಸ ಹೋಗುವುದು ನಿರುಪಯುಕ್ತ' ಎಂದು ಒಮ್ಮೆ ಹೇಳಿದ್ದನ್ನು ಕೂಡ ಇಲ್ಲಿ ಉದ್ಧರಿಸಿ ಬಿಟ್ಟಾರು. ಮಹರ್ಷಿಗಳ ಉಪದೇಶದ ಅನುಚಿತ ಅರ್ಥಗ್ರಹಣದಿಂದ ಅಂಥ ಅಸಂಬದ್ಧಪ್ರಶ್ನೆ ಹುಟ್ಟೀತು. ನಾವೀಗ ನೋಡೋಣ, ಅದು ಹೇಗೆ ಎಂಬುದನ್ನು; ಮಹರ್ಷಿಗಳು ಹೇಳಿದ್ದೇನೆಂದರೆ, "ಪ್ರತ್ಯಗಾತ್ಮವನ್ನು ಮುಸುಕಿನಿಂದ ಮರೆಮಾಡುವ ತದಿತರವೆನ್ನಿಸುವ (ಮಧ್ಯಮ–ಪ್ರಥಮ ಪುರುಷಗಳಿಂದ ವಾಚ್ಯವಾದ) ತತ್ವಗಳ ಧರ್ಮಗಳನ್ನು ಸೂಕ್ಷ್ಮಾವಲೋಕನ ಮಾಡಹೋಗುವುದು ವ್ಯರ್ಥ" ಎಂದು. ಮಧ್ಯಮ–ಪ್ರಥಮ ಪುರುಷಗಳಿಂದ ವಾಚ್ಯವಾದ ಪದಾರ್ಥಗಳ ಬಗೆಗಿನ ವಿಚಾರಗಳನ್ನು ಎಷ್ಟೇ ಸೂಕ್ಷ್ಮವಾಗಿ ನಾವು ಅವಲೋಕಿಸಿದರೂ ಅವು ಶಾಂತವಾಗುವುದಿಲ್ಲ; ತದ್ವಿರುದ್ಧವಾಗಿ, ಅವು ಹೆಚ್ಚುತ್ತಲೇ ಹೋಗುವುವು. "ಆತ್ಮ ಶೋಧನೆಯ ಉತ್ತಮ ಪುರುಷಕ್ಕೆ ಸೇರಿದ ನಾನೆಂಬ ವಿಚಾರವನ್ನು ಸೂಕ್ಷ್ಮವಾಗಿ ಅವಲೋಕಿಸುವುದನ್ನು ಬಿಟ್ಟು ಬಿಡಿರಿ!" ಎಂದು ಅವರು ಹೇಳಿಯೇ ಇಲ್ಲ. **ಉತ್ತಮ ಪುರುಷವಾಚ್ಯವಾದ ನಾನೆಂಬ ವಿಚಾರಕ್ಕೆ ವಿಶಿಷ್ಟವಾದ ಈ ಧರ್ಮವಿದೆ: ('ನಾನು ಯಾರು?' ಎಂದು ಕೇಳುವುದರಿಂದ) ಅದು ಏನೆಂಬುದನ್ನು ಕಂಡು ಹಿಡಿಯುವುದಕ್ಕಾಗಿ ಅದರ ಮೇಲೆ ನಾವು ಲಕ್ಷ್ಯವಿಟ್ಟ ಕೂಡಲೇ ಅದು ಶಾಂತವಾಗಿ ಬಿಡುವುದು.** ತದ್ವಿರುದ್ಧವಾಗಿ ಮಧ್ಯಮ–ಪ್ರಥಮ ಪುರುಷಗಳಿಗೆ ಸೇರಿದ ವಿಚಾರಗಳತ್ತ ನಾವು ಲಕ್ಷ್ಯ ಹಾಕಿದಷ್ಟೂ ಅವು ಹೆಚ್ಚುತ್ತಲೇ ಹೋಗುವುವು. ಚಲಚ್ಚಿತ್ರ ಮಂದಿರದಲ್ಲಿ ಪರದೆಯನ್ನು ಪ್ರಕ್ಷೇಪಕ ಯಂತ್ರದಿಂದ ದೂರ ದೂರ ಸರಿಸಿದಷ್ಟೂ ಚಿತ್ರಗಳು ದೊಡ್ಡವಾಗುತ್ತ ಹೋಗುವುವು; ಅದನ್ನು ಹತ್ತಿರ–ಹತ್ತಿರಕ್ಕೆ ಎಳೆದಷ್ಟೂ ಚಿತ್ರಗಳು ಚಿಕ್ಕವುಗಳಾಗುತ್ತ ಹೋಗಿ ಒಂದು ಚುಕ್ಕೆಯ ಗಾತ್ರಕ್ಕಿಳಿಯುವುದೂ ಉಂಟು. ಪ್ರಕ್ಷೇಪಕವು ಬೆಳಕಿನ ಆಕರ. ಅದೇ ಮೇರೆಗೆ, ಮನಸ್ಸಿನ ಲಕ್ಷ್ಯವನ್ನು ಮಧ್ಯಮ–ಪ್ರಥಮ ಪುರುಷಗಳಿಂದ ವಾಚ್ಯವಾದ ವಿಚಾರಗಳತ್ತ ಹರಿಯಿಸಿದಷ್ಟೂ ಪ್ರಪಂಚ ಚಿತ್ರಗಳು (ವಿಚಾರ ರೂಪದ ಚಿತ್ರಗಳು) ಗುಣಿತ ಸಂಖ್ಯೆಯಿಂದ ಹೆಚ್ಚುತ್ತ ಹೋಗುವುವು. ಆದರೆ ಪ್ರತ್ಯಗಾತ್ಮದ (ಶುದ್ಧಾತ್ಮದ=ಪರಬ್ರಹ್ಮದ=ಸಚ್ಚಿದಾನಂದದ) ಕಡೆಗೆ ಹರಿಯಿಸಿದರೆ ಮನಸ್ಸು ಶಮನ ಹೊಂದುವುದು. ಮನಸ್ಸು ಪ್ರಥಮ ವಿಚಾರ ಮತ್ತು ಪ್ರತ್ಯಗಾತ್ಮವು ಮನೋಜ್ಯೋತಿಯ ಆಕರ. "ಆತ್ಮಶೋಧದ ತಂತ್ರ" ಎಂಬ ಹೆಸರಿನ ಎಂಟನೆಯ ಅಧ್ಯಾಯದಲ್ಲಿ ನಾವು ಈ ವಿಷಯವನ್ನು ಇನ್ನೂ ಆಳವಾಗಿ ನೋಡೋಣ.

"ರಕ್ತ ಮಾಂಸದೀ ದೇಹ ನಾನು ಎಂಬಾಲೋಚನೆ ಸೂತ್ರ
ವಿವಿಧ ವಿಚಾರಗಳನ್ನು ಪೋಣಿಸಲು ಆಗಿದೆ ಅದು ಪಾತ್ರ

ಆದ್ದರಿಂದ ನಾವೊಳಮೊಗರಾದರೆ 'ಎಲ್ಲಿಹುದೀ ನಾನು'?
ಅಹಮಾದ್ಯಾಲೋಚನೆಗಳೆಲ್ಲವೂ ಕೊನೆಗೊಳ್ಳುವುವು ಕಾಣು
ಹೃದಯ ಗುಹೆಯೊಳುದಯಿಸುವುದಯ್ಯ ತಾ 'ನಾನು ನಾನು' ಎಂದು
ಆಗ ತಾನೆ ತಾನಾಗಿ ಪಳಚ್ಚನೆ ಪ್ರತ್ಯಗಾತ್ಮ ಬಂದು...."

'ಆತ್ಮ ವಿದ್ಯಾಕೀರ್ತನಂ', ನುಡಿ ೨

ದಾರ ತುಂಡಾದ ಕೂಡಲೇ ಜಪಮಾಲೆಯ ಎಲ್ಲ ಮಣಿಗಳೂ ಉದುರಿ ಬೀಳುವಂತೆ ಸರ್ವವಿಚಾರಗಳ ನಾಶವನ್ನು ಬಯಸುವ ನಾವು, ಸೂಕ್ಷ್ಮವಾಗಿ ಅವಲೋಕಿಸಿದ್ದೇ ಆದರೆ – ಮಣಿ ಮಧ್ಯಗಾಮಿಯಾದ ದಾರದಂತೆ ಮಧ್ಯಮ–ಪ್ರಥಮ ಪುರುಷವಾಚ್ಯವಾದ ವಿಚಾರಗಳೆಲ್ಲವುಗಳ ನಡುವೆ ಹಾಯ್ದು ಅವುಗಳನ್ನು ಉಳಿಸುವ ಉತ್ತಮ ಪುರುಷ ವಾಚ್ಯವಾದ ನಾನೆಂಬುದು ಅಪ್ರಯತ್ನತಃ ನಾಶ ಹೊಂದುತ್ತದೆ.

"ಉತ್ತಮ ಪುರುಷದ ಸತ್ಯತೆಯನು ಸೂಕ್ಷ್ಮಾವಲೋಕನಕ್ಕೆ
ತುತ್ತಾಗಿಸಿದೊಡನೆಯೇ ಶೂನ್ಯವಾದೀತದು ಅದರಿಂದ
ಮಧ್ಯಮ ಪ್ರಥಮ ಪುರುಷ ವಿಚಾರಗಳಳಿದು ಹೋಗದಿರವು."

–'ಉಳ್ಳದು ನಾರ್ಪ.ದು' ನುಡಿ ೧೪

ಈ ಪ್ರಕಾರ, ಅಹಂ ವಿಚಾರವನ್ನು ನಾಶಮಾಡುವ ಕ್ರಮವೇ ಉಳಿದೆಲ್ಲಾ ವಿಚಾರಗಳ ನಾಶದ ಕ್ರಮವೂ ಆಗಿದೆ. **ಆದುದರಿಂದ ಉತ್ತಮ ಪುರುಷದ ನಾನೆಂಬ ವಿಚಾರವನ್ನು ನಾಶಮಾಡುವುದೇ ಮುಖ್ಯ. ಅದರ ಸ್ವರೂಪವನ್ನು ಸೂಕ್ಷ್ಮಾವಲೋಕನಕ್ಕೆ ಗುರಿಪಡಿಸುವುದೊಂದೇ ಅದರ ನಾಶಕ್ಕೆ ಮಾರ್ಗ; ಅನ್ಯಮಾರ್ಗವಿಲ್ಲ!**

"ಅಹಮೆಂಬಭಾವವೆಲ್ಲಿಂದ ಹುಟ್ಟುವುದೆಂದು
ಅದರಾಕರವನಾವು ಶೋಧಿಸದಿರೆ
ಅಹಮುದಯ ವಾಗದಿಹ ನಿರಹಂತೆಯನ್ನೆಂತು
ಸಾಧಿಸಲು ಸಾಧ್ಯವಾದೀತು ನಮಗೆ?"

– 'ಉಳ್ಳದು ನಾರ್ಪ.ದು', ನುಡಿ ೨೭

ಭಕ್ತಿಯ ಆತ್ಮ ಸಮರ್ಪಣ ಮಾರ್ಗದಲ್ಲಿ ಕೂಡ ಉತ್ತಮ ಪುರುಷ ವಿಚಾರದ ನಾನೆಂಬುದನ್ನು ದೇವರಿಗೆ ಸಮರ್ಪಿಸುವುದರಿಂದಲೇ ಅದರ ನಾಶವನ್ನು ಸಾಧಿಸಲಾದೀತು. ಅದರ ಸ್ವರೂಪವು ಅಪ್ರಯೋಜಕವೆಂದೋ ನಿಜವಾದ ನಾನೆಂಬ ಪ್ರತ್ಯಗಾತ್ಮವೊಂದೇ ಸತ್ಯಪದಾರ್ಥವೆಂದೋ ತಿಳಿದ ಮೇಲೆ ಆತ್ಮಸಮರ್ಪಣ ಬುದ್ಧಿಯು ಉದಯಿಸುವುದು. ಹೀಗೆ, ಉತ್ತಮ ಪುರುಷದ ಅಹಂವಿಚಾರವನ್ನು ಸೂಕ್ಷ್ಮಾವಲೋಕನಕ್ಕೆ ಗುರಿ ಮಾಡುವುದೊಂದೇ ಎಲ್ಲವುದಕ್ಕೂ ಮುಖ್ಯವಾದ ಆವಶ್ಯಕತೆ. ಏಳನೆಯ ಅಧ್ಯಾಯದಲ್ಲಿ 'ಆತ್ಮಶೋಧ'ದ ಬಗ್ಗೆ ಹೇಳಲಾಗಿದೆ. ಅದರಲ್ಲಿ ಸೂಕ್ಷ್ಮಾವಲೋಕನದಿಂದ ಅಹಂಭಾವ ಹೇಗೆ ನಾಶ ಹೊಂದುತ್ತದೆ ಎಂಬುದನ್ನು ನೋಡುವೆವು.

ಅಧ್ಯಾಯ ನಾಲ್ಕು

ನಾನು ಯಾರು?

ಈ 'ನಾನು' ಎಂಬುದು ಏನು? ಅಥವಾ 'ನಾನು ಯಾರು?' ನಾವೆಲ್ಲರೂ ಸಾಮಾನ್ಯವಾಗಿ 'ನಾನು' 'ನಾನು' ಎನ್ನುವುದಿಲ್ಲವೇ? ಹಾಗೆ ಹೇಳಿದಾಗ ನಾವು ಸೂಚಿಸುವುದು ಏನನ್ನು? 'ನಾನು' ಎಂದು ಹೇಳಿದಾಗ ನಮ್ಮ ಅರ್ಥ ಏನೆಂದು ಕೇಳಿದರೆ, ಈ ಪ್ರಶ್ನೆಗೆ ಸರಿಯಾದ ಉತ್ತರ ನಮಗಿನ್ನೂ ಸಿಕ್ಕಿಲ್ಲ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆ? ಏಕೆಂದರೆ 'ನಾನು' ಎಂದು ಹೇಳಿದಾಗೆಲ್ಲ ನಾವು ಕೇವಲ ನಮ್ಮ ದೇಹವನ್ನು ಸೂಚಿಸುತ್ತೇವೆ. ದೇಹಕ್ಕೊಂದು ಹೆಸರು ಕೊಟ್ಟಿರುವುದಿಲ್ಲವೇ? ಆ ಹೆಸರು ಒಬ್ಬ ವಿಶಿಷ್ಟ ವ್ಯಕ್ತಿಯ ಹೆಸರೆಂದು ನಾವು ಸಾಮಾನ್ಯವಾಗಿ ಗ್ರಹಿಸುತ್ತೇವೆ. ಆ ವ್ಯಕ್ತಿಗೆ 'ನೀನು ಯಾರು?' ಎಂದು ಕೇಳಿದರೆ, 'ನಾನು ರಾಮ' ಎಂದು ಉತ್ತರಿಸುತ್ತಾನೆ. ಯಾರಾದರೂ 'ರಾಮ' ಎಂದು ಕರೆದರೆ ಆ ವ್ಯಕ್ತಿ ಮಾತ್ರ ಹಿಂತಿರುಗಿ ನೋಡುತ್ತಾನೆ. ಬೇರೆ ದೇಹಗಳಿಗೆ ಬೇರೆ ಹೆಸರುಗಳಿರುವುದರಿಂದ ಈ ದೇಹವನ್ನು ಮಾತ್ರ ರಾಮನೆಂದು ಗ್ರಹಿಸಲಾಗುತ್ತದೆ. ಆದ್ದರಿಂದ ಹೆಸರು ದೇಹವನ್ನು ಸೂಚಿಸುತ್ತದೆ. ತಾನು ದೇಹವೆಂದು ನಂಬುವುದರಿಂದ ಅವನು ತಾನು ರಾಮನೆಂದು ಭಾವಿಸುತ್ತಾನೆ. ಬೇರೆಯವರಲ್ಲ. ನಾವೆಲ್ಲ ಬರೀ ಈ ದೇಹವೆಂದು ಬಗೆದು ವರ್ತಿಸುವ ಇನ್ನೂ ಹಲವಾರು ಸಂದರ್ಭಗಳಿವೆಯಲ್ಲವೇ? ಆದ್ದರಿಂದ ನಮ್ಮಲ್ಲಿ ಪ್ರತಿಯೊಬ್ಬನಿಗೂ ಈ ದೇಹವೇ 'ನಾನು' ಎಂದು ಮನವರಿಕೆಯಾಗಿರುತ್ತದೆ ಎಂಬುದು ಸ್ಪಷ್ಟ.

ಆದರೆ ನಾವು ಒಬ್ಬ ವ್ಯಕ್ತಿಯ ಹತ್ತಿರ ಹೋಗಿ ಅವನ ಕೈಯನ್ನು ತೋರಿಸುತ್ತ 'ಇದು ಏನು?' ಎಂದು ಕೇಳಿದರೆ 'ಇದು ನನ್ನ ಕೈ' ಎಂದು ತಕ್ಷಣ ಉತ್ತರಿಸುತ್ತಾನೆ. ಇದೇ ರೀತಿ ದೇಹದ ಪ್ರತಿಯೊಂದು ಅಂಗದ ಬಗ್ಗೆ ಕೇಳಿದಾಗ 'ಇದು ನನ್ನ ಕಾಲು, ಇದು ನನ್ನ ಹೊಟ್ಟೆ, ಇದು ನನ್ನ ಎದೆ, ಇದು ನನ್ನ ಬೆನ್ನು, ಇದು ನನ್ನ ತಲೆ' ಮುಂತಾಗಿ ಹೇಳುತ್ತಾನೆ. ಹೀಗೆ 'ಈ ಇಡೀ ದೇಹ ನನ್ನದು' ಎಂದು ಆತ ಅಂತಿಮವಾಗಿ ಒಪ್ಪಿಕೊಂಡಂತಾಗುತ್ತದೆ. ಇದು ತನ್ನ ದೇಹವೆಂದು ಆತ ಹೇಳಿದಾಗ ಸ್ಪಷ್ಟವಾಗುತ್ತದೆ–ಈ ದೇಹವು ಅವನ ಒಂದು ಸ್ವಾಮ್ಯ (Possession), ಅವನು ಈ ಸ್ವಾಮ್ಯದ ಸ್ವಾಮಿ (Possessor) ಎಂದು. ಹಾಗಿದ್ದರೆ ಆತ ದೇಹ ಇರಬಹುದೇ; ತನ್ನ ಸ್ವಾಮ್ಯವೇ? ಆತ ಸ್ವಾಮಿಯಲ್ಲವೇ? "ಈ ದೇಹ ಬರೀ ನಿನ್ನ ಸ್ವಾಮ್ಯದಾದರೆ, ಇದರ ಸ್ವಾಮಿಯಾದ ನೀನು ಯಾರು? ನೀನು ಈ ದೇಹವೇ? ಸ್ವಾಮ್ಯವು ತನಗೆ ತಾನೇ ಸ್ವಾಮಿಯಾಗಬಲ್ಲದೇ?" ಎಂದು ಪ್ರಶ್ನಿಸಿದರೆ ತಾನು ದೇಹವಲ್ಲವೆಂದೂ, ದೇಹವು ತನ್ನ ಸ್ವಾಮ್ಯ ಮಾತ್ರವೆಂದೂ ಅವನು ಒಪ್ಪಿಕೊಳ್ಳುತ್ತಾನೆ.

ಸ್ವಲ್ಪ ಹೊತ್ತಿನ ಮೊದಲು ಅವನ ದೇಹದ ಹೆಸರಿನಿಂದ ಕರೆದಾಗ 'ನಾನು ಖಂಡಿತವಾಗಿ ಈ ದೇಹ' ಎಂದು ಹೇಳಿದವನೇ ಈಗ ಒಪ್ಪಿಕೊಳ್ಳುತ್ತಾನೆ–'ನಾನು ಈ ದೇಹವಲ್ಲ, ಇದು ನನ್ನ ಸ್ವಾಮ್ಯ ಮಾತ್ರ' ಎಂದು. ಇದೇ ರೀತಿ ಅವನು ತನ್ನ ಮನಸ್ಸನ್ನೂ ಸೂಚಿಸುತ್ತಾನೆ– 'ನನ್ನ ವಿಚಾರಗಳು ಹೀಗಿವೆ–ನನ್ನ ಮನಸ್ಸು ಹಾಗಿದೆ' ಎಂದು ಆದ್ದರಿಂದ ಅವನ ಸ್ವಾಮ್ಯ ಮಾತ್ರವಾಗಿರುವ ಮನಸ್ಸು ಅಥವಾ ದೇಹವೇ ಅವನಾಗುವುದು ಹೇಗೆ? ಇದೆಲ್ಲದರಿಂದ ನಾವು ಕಲಿಯುವುದೇನು? **ತಾನು ನಿಜವಾಗಿ ಯಾರೆಂಬುದು ಯಾರಿಗೂ ಇನ್ನೂ ತಿಳಿದಿಲ್ಲ.** ಇನ್ನೂ ಸಂದೇಹದಲ್ಲಿರುವ ಮನುಷ್ಯ–ತನಗೆ ತಾನೇ ಅತ್ಯಂತ ಹತ್ತಿರದವನೂ ಅತಿ ಪ್ರಿಯನೂ ಆಗಿರುವ ತಾನು ನಿಜವಾಗಿ ಏನು ಎಂದು ತಿಳಿಯಲಾಗದಿದ್ದರೂ–ಜಗತ್ತಿನಲ್ಲಿ ಎಷ್ಟೋ ದೂರವಿರುವ ವಿಷಯಗಳನ್ನು ತಿಳಿದುಕೊಳ್ಳಲು ಬಲು ಕಷ್ಟಪಡುತ್ತಿದ್ದಾನೆ. ಇದಕ್ಕಿಂತ ಹೆಚ್ಚು ಹಾಸ್ಯಾಸ್ಪದ ಯಾವುದೂ ಇಲ್ಲ! ತಾನು ಹಾಕಿಕೊಂಡಿರುವ ಕನ್ನಡಕದ ಬಣ್ಣವೇ ಗೊತ್ತಿರದ ಮನುಷ್ಯ ಆ ಬಣ್ಣದ ಕನ್ನಡಕದ ಮೂಲಕ ನೋಡುವ ಇತರ ವಸ್ತುಗಳ ಸರಿಯಾದ ಬಣ್ಣವನ್ನು ನಿರ್ಧರಿಸುವುದಾದರೂ ಹೇಗೆ? ಹಾಗೆಯೇ ಎಷ್ಟೇ ವಿದ್ವತ್ತಿರಲಿ, ಶ್ರೀಮಂತನಿರಲಿ, ಅಧಿಕಾರವಿರಲಿ, ಮನುಷ್ಯ **ತಾನು ನಿಜವಾಗಿ ಏನೆಂಬುದರ ಸ್ಪಷ್ಟ ಜ್ಞಾನ ಇರದಿದ್ದರೆ ಅವನ ವಿದ್ವತ್ತು, ಮಹಾನತೆ, ಅಧಿಕಾರ ಎಲ್ಲವೂ ಕೇವಲ ಭ್ರಾಮಕ! ಆದ್ದರಿಂದ ಕಲಿಯಬೇಕಾದ ಮೊದಲ ಪಾಠ ತನ್ನ ಬಗ್ಗೆಯೇ ಸರಿ.** ಹಾಗಾಗಿ 'ನಾನು ಯಾರು?' ಎಂದು ಶೋಧಿಸಲು ಹೊರಡೋಣ.

ಮೇಲಿನಂತೆ ಪರಿಶೋಧಿಸಿದಾಗ ತಾವು ಈ ಜಡ ದೇಹವಾಗಿರಲು ಸಾಧ್ಯವಿಲ್ಲ ಎಂದು ಒಪ್ಪಿದರೂ ಕೆಲವು ಜನ 'ನಾನು' ಎಂಬುದರ ನಿಜ ಸ್ವರೂಪವನ್ನು ಸರಿಯಾಗಿ ತಿಳಿಯದ ಕಾರಣ, 'ನಾನು' ಎಂಬುದು ದೇಹ, ಪಂಚೇಂದ್ರಿಯಗಳು, ಮನಸ್ಸು ಮತ್ತು ಉಸಿರು (ಪ್ರಾಣ)[೧೯] ಇದೆಲ್ಲದರ ಒಟ್ಟು ಮೊತ್ತ ಎಂದು ವಿಚಾರ ಮಾಡುತ್ತಾರೆ. ಆದ್ದರಿಂದ ಸಂದೇಹಾತೀತವಾಗಿ ಒಂದನ್ನು ಮತ್ತೊಂದೆಂಬ ತಪ್ಪು ಗ್ರಹಿಕೆ ಇರದಂತೆ 'ನಾನು' ಎಂಬುದು ಏನು ಎಂದು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಬರಿ ಮಾಂಸದ ಮುದ್ದೆ, ಈ ದೇಹ ತಾನಲ್ಲ ಎಂದು ತಿಳಿದರಷ್ಟೇ ಸಾಲದು. ಉಸಿರಾಟ ಮತ್ತು ರಕ್ತಪರಿಚಲನೆಗಳು ದೇಹ ಸುಮ್ಮನೆ ಬಿದ್ದುಕೊಂಡಿರುವಾಗಲೂ ನಡೆಯುತ್ತಿರುವುದರಿಂದ ಅವನ್ನು ಗಮನಿಸಿ ಕೆಲವರು 'ನಾನು' ಎಂಬುದು ಬಹುಶಃ ಪ್ರಾಣವಿರಬೇಕು ಎಂದು ಯೋಚಿಸಬಹುದು. ಯಾವುದೇ ಒಂದು ಸಂಗತಿ 'ನಾನಲ್ಲ' ಎಂದು ನಿರ್ಧರಿಸಲು ನಾವು ಬಳಸಬಹುದಾದ ಯಾವುದಾದರೂ ಪರೀಕ್ಷೆಯಿದೆಯೇ? ಹೌದು, ಇದೆ. **'ಆ ವಿಶಿಷ್ಟ ಸಂಗತಿಯ ಅನುಪಸ್ಥಿತಿಯಲ್ಲಿಯೂ ನಾವು ಇರುತ್ತೇವೋ ಇಲ್ಲವೋ?' ಎಂದು ಕಂಡು ಹಿಡಿಯುವುದೇ ಆ ಪರೀಕ್ಷೆ.** ಈ ಪರೀಕ್ಷೆಯನ್ನು ಬಳಸಿ ನಾವು ನಮ್ಮ ಶೋಧನೆಯ ಕೊನೆ ತುದಿಯವರೆಗೆ ಯಶಸ್ವಿಯಾಗಿ ಮುನ್ನಡೆಯಬಹುದು.

'ನಾನು ದೇಹ' ಎಂಬ ತಪ್ಪು ಗುರುತಿಸುವಿಕೆಯೇ ಇದೆಲ್ಲವೂ ಆಗಿದೆ: ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಅಜ್ಞಾನ, ಶೂನ್ಯ, ಮಾಯೆ, ಮುಂತಾಗಿ. ಪ್ರಾಣವು ಮನಸ್ಸಿನ

---

೧೯. ಪ್ರಾಣ ಎಂಬ ಶಬ್ದಕ್ಕೆ ಶ್ವಾಸಕೋಶಗಳಲ್ಲಿನ ಉಸಿರಾಟ ಪ್ರಕ್ರಿಯೆ ಎಂದಷ್ಟೇ ಅರ್ಥವಲ್ಲ, ಇದು ದೇಹದ ಇಡೀ ಉಪಚಯವನ್ನು (metabolism) ಒಳಗೊಳ್ಳುತ್ತದೆ.

ಸ್ಥೂಲರೂಪವಾಗಿದೆ, ಆದ್ದರಿಂದ ಇದು ಭೌತಿಕ ಶರೀರ. ಮನಸ್ಸು ಕೂಡ ಶರೀರವೇ, ಸೂಕ್ಷ್ಮವಾಗಿದೆ ಅಷ್ಟೇ. ಪ್ರಾಣವು ಮನಸ್ಸಿಗಿಂತ ಸ್ವಲ್ಪ ಸ್ಥೂಲ; ರಕ್ತ, ಮಾಂಸದ ಶರೀರ ಪ್ರಾಣಕ್ಕಿಂತ ಇನ್ನೂ ಹೆಚ್ಚು ಸ್ಥೂಲ. ಸೂಕ್ಷ್ಮ ಮನಸ್ಸು ಕೂಡ ಸೂಕ್ಷ್ಮತರ ರೂಪದಲ್ಲಿ ವಾಸನೆಗಳು ಅಥವಾ ಅಜ್ಞಾನದ ಅಂಧಕಾರವೇ ಆಗಿದೆ. ಈ ಎಲ್ಲ ರೂಪಗಳನ್ನು ನಾವು ಮೂರು ಗುಂಪಾಗಿ ವರ್ಗೀಕರಿಸೋಣ–ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳೆಂದು.[೨೦] ಪಂಚೇಂದ್ರಿಯಗಳ ಮೂಲಕ ಮನಸ್ಸು ತಿಳಿಯುವ ಶರೀರ, ರಕ್ತ ಪರಿಚಲನೆ ಮತ್ತು ಉಸಿರಾಟ ಸೇರಿದಂತೆ ಎಲ್ಲ ಸ್ಥೂಲ ರೂಪಗಳೂ ಸ್ಥೂಲ ಶರೀರವಾಗಿದೆ. ಏಕೆಂದರೆ ಇವೆಲ್ಲವನ್ನೂ ಮನಸ್ಸು ತಿಳಿದುಕೊಳ್ಳುತ್ತದೆ ಮತ್ತು ಮನಸ್ಸು ನಮ್ಮ ವರ್ಗೀಕರಣದಲ್ಲಿ ಎರಡನೆಯದಾದ ಸೂಕ್ಷ್ಮ ಶರೀರವಾಗಿದೆ. ಪ್ರಾಣಮಯ ಕೋಶವನ್ನು ಶಾಸ್ತ್ರಗಳು ಸೂಕ್ಷ್ಮ ಶರೀರದ ಗುಂಪಿನಲ್ಲಿ ಸಾಮಾನ್ಯವಾಗಿ ಸೇರಿಸುತ್ತವೆಯಾದರೂ ನಾವು ಇದನ್ನು ಸ್ಥೂಲ ಶರೀರದಲ್ಲಿ ಸೇರಿಸಿದ್ದೇವೆ. ಏಕೆಂದರೆ ಇದನ್ನು ಮನಸ್ಸು ತನ್ನಿಂದ ಹೊರತಾದ ಸಂಗತಿಯಾಗಿ ಸ್ಪಷ್ಟವಾಗಿ ಗ್ರಹಿಸುತ್ತದೆ ಮತ್ತು ನಮ್ಮ ಪರೀಕ್ಷೆಯನ್ನು ಅನ್ವಯಿಸಲು ಇದರಿಂದ ತುಂಬಾ ಅನುಕೂಲವಾಗುತ್ತದೆ. ಅಲ್ಲದೇ, ಈ ಎಲ್ಲ ಪಂಚಕೋಶಗಳನ್ನು 'ನಾನಲ್ಲ' ಎಂದು ಅಂತಿಮವಾಗಿ ಬಿಡಬೇಕಾಗಿರುವುದರಿಂದ ಈ ಎರಡು ಶರೀರಗಳಲ್ಲಿ ಯಾವುದಕ್ಕಾದರೂ ಸೇರಿಸಲು[೨೧] ಸ್ವಲ್ಪವಾದರೂ ಸಾಮಾನ್ಯ ಜ್ಞಾನವಿರುವ ಯಾರೂ ಆಕ್ಷೇಪಿಸಲಾರರು. ಈಗ ಮೇಲೆ ಸೂಚಿಸಿದ ಸರಳ ಪರೀಕ್ಷೆಯನ್ನು ಬಳಸಿ, ನಾವು ಈ ಸ್ಥೂಲ ಶರೀರವೇ ಎಂದು ನೋಡೋಣ.

ಗಾಢವಾದ ನಿದ್ದೆಯಲ್ಲಿ ನಮಗೆ ಈ ಸ್ಥೂಲ ಶರೀರದ ಅರಿವಿರುವುದಿಲ್ಲ. ಇದರಿಂದ ಏನೆಂದು ನಿರ್ಣಯಿಸಬಹುದು? ಈ ಮಾಂಸದ ಮುದ್ದೆ ಇರದಿದ್ದರೂ ನಾವು ಇರಬಹುದು ಎಂಬುದು ಸ್ಪಷ್ಟವಿಲ್ಲವೇ? ಶ್ರೀ ಭಗವಾನ್ ಅವರೊಂದಿಗೆ ಕೆಲವರು ವಾದ ಮಾಡುತ್ತಿದ್ದರು: "ಗಾಢ ನಿದ್ದೆಯಲ್ಲಿ ಈ ಶರೀರವು ಇಲ್ಲವಾಗುವುದಿಲ್ಲ. ಗಾಢ ನಿದ್ದೆಯಲ್ಲಿ ವ್ಯಕ್ತಿಗೆ ಈ ಶರೀರದ ಅರಿವು ಇಲ್ಲದಿದ್ದರೂ, ಉಸಿರಾಟ ಮತ್ತು ರಕ್ತ ಸಂಚಾರಗಳ ಎಚ್ಚರವಿರದಿದ್ದರೂ, ಇವನ್ನು ಎಚ್ಚರವಿರುವ ಇತರರು ಕಾಣುತ್ತಾರೆ". ಆದರೆ ಮಹಾನುಭಾವಿಯಾದ ಶ್ರೀ ಭಗವಾನರ ನಿರ್ಣಯವು ಇದಕ್ಕೆ ವ್ಯತಿರಿಕ್ತವಾಗಿದೆ. ಅವರ ಪ್ರಕಾರ "ಗಾಢ ನಿದ್ದೆಯಲ್ಲಿ

---

೨೦. ಪಂಚಕೋಶಗಳನ್ನು ಈ ಮೂರು ಶರೀರಗಳಲ್ಲಿ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧) ಆಹಾರದಿಂದ ವೃದ್ಧಿಯಾಗುವ ಭೌತಿಕ ಶರೀರ (ಅನ್ನಮಯಕೋಶ) ಮತ್ತು ಉಸಿರು ಅಥವಾ ಪ್ರಾಣ (ಪ್ರಾಣಮಯ ಕೋಶ) ಸೇರಿ ಸ್ಥೂಲ ಶರೀರ ರೂಪಗೊಳ್ಳುತ್ತದೆ. ೨) ಮನಸ್ಸು (ಮನೋಮಯಕೋಶ) ಮತ್ತು ಬುದ್ಧಿ (ವಿಜ್ಞಾನಮಯ ಕೋಶ) ಕೂಡಿ ಸೂಕ್ಷ್ಮ ಶರೀರ ರೂಪಗೊಳ್ಳುತ್ತದೆ ಮತ್ತು ೩) ಸಂತೋಷವಿರುವ ನಿದ್ದೆಯ ಶೂನ್ಯತ್ವ (ಆನಂದಮಯ ಕೋಶ)ವು ಕಾರಣ ಶರೀರವನ್ನು ರೂಪಿಸುತ್ತದೆ. ಕೆಳಗಿನ ಪದ್ಯವನ್ನು ಇಲ್ಲಿ ಗಮನಿಸಬಹುದು. "ಶರೀರವು ಪಂಚಕೋಶಗಳ ಒಂದು ರೂಪವಾಗಿದೆ. ಆದ್ದರಿಂದ ಶರೀರ ಪದವು ಎಲ್ಲ ಐದು ಕೋಶಗಳನ್ನು ಒಳಗೊಳ್ಳುತ್ತದೆ. ಶರೀರದ ಹೊರತಾಗಿ ಜಗತ್ತು ಇರುತ್ತದೆಯೇ? ಅಂದರೆ ಶರೀರವಿಲ್ಲದ ಯಾರಾದರೂ ಜಗತ್ತನ್ನು ಕಂಡಿರುವರೇ?

'ಉಳ್ಳದು ನಾರ್ಪದು', ಪದ್ಯ ೫

೨೧. 'ನಾನು ಯಾರು?'ವಿನಲ್ಲಿ ಶ್ರೀ ಭಗವಾನರು ಕೆಳಗಿನಂತೆ ಹೇಳಿದಾಗ ಅವರ ಅರ್ಥ ಇದೇ ಆಗಿದೆ: "ಎಲ್ಲವನ್ನೂ ಒಂದೇ ಹೊಡೆತಕ್ಕೆ ಎಸೆಯಬೇಕಾಗಿರುವ ಕಸವನ್ನು ಪರಿಶೋಧಿಸುವುದು (ಅಥವಾ ಅದರ ವರ್ಗೀಕರಣದ ಬಗ್ಗೆ ವಾದ ಮಾಡುವುದು) ನಿಷ್ಪ್ರಯೋಜಕ".

ಶರೀರ ಮತ್ತು ಜಗತ್ತು ಇರುವುದಿಲ್ಲ. ಆದರೂ ತನ್ನದೇ ಅಸ್ತಿತ್ವ, 'ನಾನು ಇದ್ದೇನೆ' ಎಂಬುದು ಎಲ್ಲರ ಅನುಭವವಾಗಿದೆ." ಈ ಚಿತ್ರ, ಅಂದರೆ ಶರೀರ ಮತ್ತು ಜಗತ್ತು, ಮನಸ್ಸು ಎದ್ದಾಗ ಏಳುತ್ತದೆ. ಮನಸ್ಸು ಇರುವವರೆಗೆ ಮಾತ್ರ ಇರುತ್ತದೆ ಮತ್ತು ಮನಸ್ಸು ಮುಳುಗಿದಾಗ ಮಾಯವಾಗುತ್ತದೆ. ಆದ್ದರಿಂದ, ಮನಸ್ಸನ್ನು ಹೊರತು ಪಡಿಸಿ ಜಗತ್ತು ಎಂಬುದೇನಾದರೂ ಇದೆಯೇ?[೨೨] ವ್ಯಷ್ಟಿಯೇ (microcosm) ಸಮಷ್ಟಿಯಾಗಿರುವುದರಿಂದ (macrocosm) ದೇಹವೇ ಜಗತ್ತು. ದೇಹವಿಲ್ಲದೇ ಜಗತ್ತಿಗೆ ಅಸ್ತಿತ್ವವಿಲ್ಲ. ಜಗತ್ತು ಎಂದು ಇರುವುದೆಲ್ಲವೂ ದೇಹದ ಮುಂಚಾಚು ಮಾತ್ರ (projected). ಈ ಕಾರಣಕ್ಕಾಗಿ ಶ್ರೀ ಭಗವಾನರು ಕೇಳುತ್ತಾರೆ (ಉಳ್ಳದು ನಾರ್ಪದುವಿನ ೫ನೇ ಪದ್ಯದಲ್ಲಿ): "ದೇಹವಿಲ್ಲದೇ ಜಗತ್ತನ್ನು ನೋಡಿದ ಯಾರೊಬ್ಬರಾದರೂ ಇದ್ದಾರೆಯೇ?" ಲೌಕಿಕ ಜನರ (ಅಜ್ಞಾನಿಗಳ) ವಾದ ಸಂಕ್ಷಿಪ್ತವಾಗಿ ಇಷ್ಟು; 'ನಿದ್ದೆ ಮಾಡಿದಾಗ ದೇಹ ಮತ್ತು ಜಗತ್ತು ಇರುತ್ತವೆ, ನಾನೆಂಬ ಅರಿವು ಇರುವುದಿಲ್ಲ'. ಆದರೆ ಶ್ರೀ ಭಗವಾನರ ನಿರ್ಣಯ ವ್ಯತಿರಿಕ್ತವಾಗಿದೆ: "ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಇರುವುದಿಲ್ಲ, ಆದರೆ ನಾನೆಂಬ ಅರಿವು ಎಲ್ಲರ ಅನುಭವವಾಗಿದೆ". ಈಗ, ಗಾಢ ನಿದ್ದೆಯಲ್ಲಿ ದೇಹವು ನಿಜವಾಗಿಯೂ ಇರುತ್ತದೆಯೇ? ಏಕೆಂದರೆ, ಗಾಢ ನಿದ್ದೆಯಲ್ಲಿ ದೇಹ ಇರುವುದಾದರೆ, ಜಗತ್ತು ಕೂಡ ಇರಬೇಕಾಗುತ್ತದೆ.[೨೩] ಮನಸ್ಸು ಎಚ್ಚರಗೊಳ್ಳದೇ ದೇಹ ಇರಲಾರದ್ದರಿಂದ ಮನಸ್ಸು ಎಚ್ಚರವಿರದ ಗಾಢ ನಿದ್ದೆಯಲ್ಲಿ ಇದು ಇರುವುದಾದರೂ ಹೇಗೆ? ದೇಹವು ಗಾಢ ನಿದ್ದೆಯಲ್ಲಿ ಇರುವುದಿಲ್ಲವಾದ್ದರಿಂದ ಜಗತ್ತು ಇರುವುದಾದರೂ ಹೇಗೆ? ಆದ್ದರಿಂದ ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಇರುವುದಿಲ್ಲ ಎಂಬ ಶ್ರೀ ಭಗವಾನರ ನಿರ್ಣಯವನ್ನು ತಿಳಿದುಕೊಳ್ಳಲು ಯತ್ನಿಸೋಣ.

ಒಂದು ವಸ್ತುವು ಇದೆ ಎಂದು ನಾವು ಹೇಳಿದಾಗ, ಆ ಇರುವಿಕೆಯ ಜೊತೆಗೆ ಅರಿವೂ ಇರಬೇಕಾಗುತ್ತದೆ. ಅಂದರೆ ಅದಕ್ಕೆ ತನ್ನ ಇರುವಿನ ಅರಿವು ತಾನಾಗಿ ಇರಬೇಕಾಗುತ್ತದೆ. ತನ್ನ ಇರುವನ್ನು ತಿಳಿಯಲು ಅಥವಾ ತನ್ನ ಇರುವನ್ನು ಸಿದ್ಧ ಮಾಡಲು ಇತರ ಯಾವುದೇ ಪ್ರಮಾಣ ಅಥವಾ ಸಹಾಯ ಬೇಕಿರಬಾರದು. ಏಕೆಂದರೆ ಇರುವು ಮತ್ತು ಇರುವಿನ ಅರಿವು (ಸತ್ ಮತ್ತು ಚಿತ್) ಎರಡೂ ಬೇರೆಯಲ್ಲ.

"ಇರುವನ್ನು (ಸತ್) ತಿಳಿಯಲು ಇರುವಿಕೆಗೆ ಹೊರತಾದ ಯಾವ ಅರಿವೂ (ಚಿತ್) ಇಲ್ಲ; ಆದ್ದರಿಂದ ಇರುವಿಕೆಯೇ ಅರಿವು.........." 'ಉಪದೇಶ ಉಂದಿಯಾರ್' (ಪದ್ಯ ೨೩)

---

೨೨. "ನಾವು ನೋಡುವ ಜಗತ್ತನ್ನು ಪಂಚೇಂದ್ರಿಯ ಜ್ಞಾನವು, ಮತ್ತೇನೂ ಅಲ್ಲ, ರೂಪಿಸುತ್ತದೆ. ಪಂಚೇಂದ್ರಿಯ ಜ್ಞಾನವು ಐದು ಇಂದ್ರಿಯಾಂಗಗಳಿಂದ ದೊರೆಯುತ್ತದೆ. ಪಂಚೇಂದ್ರಿಯಗಳ ಮೂಲಕ ಒಂದು ಮನಸ್ಸು ಜಗತ್ತನ್ನು ಗ್ರಹಿಸುತ್ತದೆ. ಹಾಗಾಗಿ ಮನಸ್ಸನ್ನು ಹೊರಪಡಿಸಿ ಜಗತ್ತು ಇರಬಲ್ಲದೇ?"
'ಉಳ್ಳದು ನಾರ್ಪದು', ಪದ್ಯ ೬

೨೩. "ದೇಹವನ್ನು ಹೊರತುಪಡಿಸಿ ಜಗತ್ತು ಇರುವುದಿಲ್ಲ; ಮನಸ್ಸನ್ನು ಹೊರತು ಪಡಿಸಿ ದೇಹ ಇರುವುದಿಲ್ಲ; ಅರಿವನ್ನು ಹೊರತುಪಡಿಸಿ ಮನಸ್ಸು ಇರುವುದಿಲ್ಲ; ಮತ್ತು ಇರುವಿಕೆಯೇ ಆದ ಆತ್ಮವನ್ನು ಹೊರತು ಪಡಿಸಿ ಅರಿವು ಇರುವುದಿಲ್ಲ".
'ಗುರು ವಾಚಕ ಕೋವೈ', ಪದ್ಯ ೯೯

ಆದ್ದರಿಂದ ಇರುವು ಇರದ ಅರಿವು ಅರಿವೇ ಅಲ್ಲ; ಹಾಗೆಯೇ, ಅರಿವು ಇರದ ಇರುವು ಇರುವೇ ಅಲ್ಲ. ನಾವು ನಿದ್ದೆ ಮಾಡಿದ್ದೆವು ಎಂಬ ಅರಿವೇ ನಮ್ಮ ಆಗಿನ ಇರುವಿಗೆ ಪ್ರಮಾಣವಾಗಿದೆ. ನಾವು ನಿದ್ದೆ ಮಾಡಿದ್ದೆವೋ ಇಲ್ಲವೋ ಎಂದು ತಿಳಿಯಲು ನಾವು ಬೇರೆಯವರನ್ನು ಕೇಳಬೇಕಾಗುತ್ತದೆಯೇ? ನಾವು ನಿದ್ದೆ ಮಾಡಿದ್ದೆವು ಎಂದು ನಮಗಷ್ಟೇ ತಿಳಿಯುವುದರಿಂದ, ಗಾಢ ನಿದ್ದೆಯಲ್ಲಿ ನಾವು ಇದ್ದೆವು ಎಂದು ನಮ್ಮ ಅರಿವೇ ಸಿದ್ಧ ಮಾಡುವುದಿಲ್ಲವೇ? ಗಾಢ ನಿದ್ದೆಯಲ್ಲಿ ನಮ್ಮ ಇರುವು ಮತ್ತು ಅರಿವು (ಸತ್...ಚಿತ್)ಗಳನ್ನು ನಿರಾಕರಿಸಲು ಸಾಧ್ಯವಿಲ್ಲವಾದಾಗ, ಅವುಗಳಿಗೆ (ದೇಹ ಮತ್ತು ಜಗತ್ತು) ಗಾಢ ನಿದ್ದೆಯಲ್ಲಿ ಅಸ್ತಿತ್ವವನ್ನು ಸಿದ್ಧಪಡಿಸಲು ಬೇರೆ ಪ್ರಮಾಣಗಳು ಏಕೆ ಬೇಕು? ದೇಹ ಮತ್ತು ಜಗತ್ತು ಗಾಢ ನಿದ್ದೆಯಲ್ಲೂ ಇದ್ದವು ಎಂದು ಸಿದ್ಧ ಮಾಡಲು ಬೇರೆ ಪ್ರಮಾಣಗಳು ಬೇಕಾಗುವುದರಿಂದ, ಅವುಗಳ ಇರುವಿಕೆ ಸ್ವತಃ ಸಿದ್ಧವಲ್ಲ ಎಂದು ಸ್ಪಷ್ಟವಿಲ್ಲವೇ? ಅರಿವು ಇರದ ಇರುವು ಇರುವೇ ಅಲ್ಲ ಎಂದು ನಾವು ಸಿದ್ಧ ಮಾಡಿರುವುದರಿಂದ, ಮತ್ತು ದೇಹ–ಜಗತ್ತುಗಳು ಗಾಢನಿದ್ದೆಯಲ್ಲಿ ಇರುವಿಕೆ ಸ್ವತಃ ಸಿದ್ಧವಲ್ಲವಾದ್ದರಿಂದ, ಅವುಗಳ ಇರುವು ಸುಳ್ಳು ಎಂದು ನಾವು ಖಂಡಿತವಾಗಿ ಪ್ರತಿಪಾದಿಸಬಹುದು. ಆದ್ದರಿಂದ, ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಇರುವುದಿಲ್ಲ ಎಂದು ತೀರ್ಮಾನಿಸೋಣ.[೨೪] ಹೀಗೆ, ತಾನು ನಿದ್ದೆಯಲ್ಲೂ ಇದ್ದೆ ಎಂಬುದನ್ನು ಯಾರೂ ನಿರಾಕರಿಸಲು ಆಗುವುದಿಲ್ಲವಾದ್ದರಿಂದ **ನಿದ್ದೆಯಲ್ಲಿ ತನ್ನ ಇರುವು ಮತ್ತು ದೇಹದ ಇಲ್ಲತನವನ್ನು ಎಲ್ಲರೂ ಒಪ್ಪಿಕೊಳ್ಳಬೇಕು.**

ಬಹಳ ಜನರಿಗೆ ತಿಳುವಳಿಕೆಯ ಪಕ್ವತೆಯ ಕೊರತೆಯ ಕಾರಣ ಶ್ರೀ ಭಗವಾನರನ್ನು ಮೊದಲ ಬಾರಿ ಭೇಟಿಯಾಗಿ ನಿಜದ ಸ್ವರೂಪವನ್ನು ಅವರು ವಿವರಿಸಿದಂತೆ ಮೇಲಿನಂತೆ ಪರಿಶೋಧಿಸಿದಾಗ ವಸ್ತು ಸ್ಥಿತಿಯನ್ನು ಅರಿಯಲು ಸಾಧ್ಯವಾಗಲಿಲ್ಲ. ಇರುವು (ಸತ್) ಮತ್ತು ಅರಿವು (ಚಿತ್) ಒಂದೇ, ಬೇರೆಯಲ್ಲ ಎಂದು ಅವರಿಗೆ ಮನವರಿಕೆಯಾಗದೇ ಶ್ರೀ ಭಗವಾನರೊಂದಿಗೆ ಮತ್ತೆ ಮತ್ತೆ ವಾದಿಸುತ್ತಿದ್ದರು. ಆದರೆ ಇತರ ಕೆಲವರಿಗೆ ತಾರತಮ್ಯ ವಿವೇಕ ಮತ್ತು ಚುರುಕಾದ ಸ್ಪಷ್ಟ ಬುದ್ಧಿಯಿದ್ದ ಕಾರಣ, ಅಭ್ಯಾಸವಿಲ್ಲದ ಶಾಸ್ತ್ರಗಳ ಬರೀ ಅಧ್ಯಯನದಿಂದ ಬಂದ ಗೊಂದಲವಿರದ ಕಾರಣ, ಶ್ರೀ ಭಗವಾನರ ಪ್ರತಿಪಾದನೆಯನ್ನು ಕೇಳಿದ ಕೂಡಲೇ (ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಇರುವುದಿಲ್ಲ) ಎಂದು ಮನವರಿಕೆಯಾಯಿತು; ಅವರೊಬ್ಬರೇ ಸರಿಯೆಂದು ತಿಳಿಯಿತು. ಆದ್ದರಿಂದ ಶೋಧ ಮಾರ್ಗದಲ್ಲಿ ಮುಂದುವರೆಯಲು ಸಾಧ್ಯವಾಯಿತು. ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಇರುವುದಿಲ್ಲವೆಂದು ಬುದ್ಧಿಯ ಅಪಕ್ವತೆಯಿಂದಾಗಿ ಒಪ್ಪಿಕೊಳ್ಳದವರು ಶೋಧದಲ್ಲಿ ಪ್ರಗತಿ ಸಾಧಿಸದೇ ನಿಲ್ಲಬೇಕಾಯಿತು.

'ದೇಹವಿರದಿದ್ದರೂ ನಾನು ಇರಬಲ್ಲೆ' ಎಂಬ ಸ್ವಾನುಭವವಿರದೇ 'ನಾನು ದೇಹವಲ್ಲ' (ದೇಹಂ ನಾಹಂ) ಎಂದು ಆಕಾಂಕ್ಷಿಯು ತಿಳಿಯದ ಕಾರಣ ಮೋಹವನ್ನು ಬಿಡಲು ಆಗುವುದಿಲ್ಲ. ಶ್ರೀ ಭಗವಾನರು ವೇದಾಂತದ 'ದೇಹಂ ನಾಹಂ ಕೋಹಂ ಸೋಹಂ' ಎಂಬ ಕಹಳೆಯ ಕರೆಯನ್ನು ತಮಿಳಿನಲ್ಲಿ ತಮ್ಮದೇ ಕೃಪಾವಚನಗಳಿಂದ ಹೇಳುತ್ತಾರೆ:

---

೨೪. ಕೆಳಗಿನ ತಾರ್ಕಿಕ ನಿಗಮನದಂತೆ: "ಒಂದು ಕಾಲದಲ್ಲಿ ಇದ್ದಂತೆ ತೋರಿ, ಇನ್ನೊಂದು ಕಾಲದಲ್ಲಿ ಇಲ್ಲವಾಗುವುದು ಇರುವಂತೆ ತೋರುವ ಕಾಲದಲ್ಲೂ ನಿಜವಾಗಿ ಇರುವುದಿಲ್ಲ". ದೇಹ ಮತ್ತು ಜಗತ್ತು ಇರುವಂತೆ ತೋರುವ ಕಾಲದಲ್ಲೂ (ಅಂದರೆ ಜಾಗ್ರತ ಮತ್ತು ಸ್ವಪ್ನದಲ್ಲಿ) ಇರುವುದಿಲ್ಲ.

"ದೇಹಂ ಘಟಂನಿಹಾರ್ ಜಡಮಿಡರ್ ಕಾಹಮೇನಮ್ ತಿಹಳ್ ವಿಲದಾಲ್ ನಾಹಮ್ ಜಡಲಮಿಲ್ ತುಯಿಲಿನಿಲ್ ದಿನಮುರುಮ್ ನಮದಿಯಲಾಲ್..."

"ದೇಹವು ಮಣ್ಣಿನ ಮಡಕೆಯಂತೆ ಅಚೇತನ (ಜಡ)ವಾಗಿರುತ್ತದೆ. ಅದಕ್ಕೆ 'ನಾನು' ಎಂಬ ಅರಿವು ಇಲ್ಲವಾದ್ದರಿಂದ, ಗಾಢ ನಿದ್ದೆಯಲ್ಲಿ ಪ್ರತಿನಿತ್ಯ ನಮ್ಮ ಇರುವಿಕೆ ಅನುಭವಕ್ಕೆ ಬರುವುದರಿಂದ, ದೇಹವು ಇಲ್ಲವಾದ ಕಾರಣ ಅದು ನಾನಲ್ಲ (ನಾಹಂ)..."

'ಉಳ್ಳದು ನಾರ್ಪದು-ಅನುಬಂಧಮ್', (ಪದ್ಯ ೧೦)

ಆದಾಗ್ಯೂ ಶ್ರೀ ಭಗವಾನರ ಕೆಲವು ಭಕ್ತರು ಕೆಲವೊಮ್ಮೆ ಮಾರುತ್ತರ ಕೊಡುತ್ತಾರೆ: "ಈ ಪದ್ಯದ ಸಂಸ್ಕೃತ ಮೂಲದಲ್ಲಿ 'ಅಪೇತ ಸುಪ್ತಿ ಸಮಯೇ' ಎಂದಿದೆ. ಅಂದರೆ ಗಾಢ ನಿದ್ದೆಯಲ್ಲಿ ದೇಹವು ಬರೀ ಗೈರುಹಾಜರಿರುತ್ತದೆ, ದೂರವಿರುತ್ತದೆ ಅಥವಾ ಅಪ್ರಕಟಿತ (unmanifest)ವಾಗಿರುತ್ತದೆ ಎಂದು ಅರ್ಥವಾಗುತ್ತದೆ. ನಿದ್ದೆಯಲ್ಲಿ ದೇಹವು ಅಸ್ತಿತ್ವವನ್ನೇ ಹೊಂದಿರುವುದಿಲ್ಲ ಎಂದು ನಾವು ಒಪ್ಪಬೇಕಾಗಿಲ್ಲ ಎಂದು ಇದರ ಅರ್ಥ ಅಲ್ಲವೇ? ನಿದ್ದೆಯಲ್ಲಿ ದೇಹವು ಇರುವುದೇ ಇಲ್ಲ ಎಂದು ಆಕಾಂಕ್ಷಿಯ ಮನಸ್ಸಿಗೆ ತೃಪ್ತಿಯಾಗುವಂತೆ ಮನವರಿಕೆಯಾಗದಿದ್ದರೆ, ನಾನೆಂಬ ಅರಿವಿನ ಹೊರತಾಗಿ ಇತರ ಸಂಗತಿಗಳು ಅಂದರೆ ದೇಹ ಮತ್ತು ಜಗತ್ತು ಸೂಕ್ಷ್ಮರೂಪದಲ್ಲಾದರೂ ನಿದ್ದೆಯಲ್ಲಿ ಇರುತ್ತವೆ ಎಂದು ಕಲ್ಪಿಸಲು ಅವಕಾಶ ಕೊಟ್ಟಂತಾಗುತ್ತದೆ. ಇವು ಭವಿಷ್ಯದಲ್ಲಿ ಬೃಹದಾಕಾರ ರೂಪದಲ್ಲಿ ವಿಕಸಿತವಾಗಬಹುದು. ಮನಸ್ಸಿಗೆ ಈ ಅವಕಾಶ ಕೊಟ್ಟಾಗ ಮಾತ್ರ ದೇಹವನ್ನು ಅಮರಗೊಳಿಸುವುದು (ಮಾನವತೆಯನ್ನು ದೈವೀಕರಿಸುವುದು) ಜಗತ್ತನ್ನು ಸ್ವರ್ಗವಾಗಿಸುವುದು ಎಂಬ ಅರ್ಥಹೀನ ಸಿದ್ಧಾಂತಗಳು ರೂಪುಗೊಳ್ಳಲು ಸಾಧ್ಯವಾಗುತ್ತದೆ! ಆದ್ದರಿಂದ ಈ ಆಕಾಂಕ್ಷಿಗಳ ಸಂದೇಹಗಳನ್ನು ದೂರಗೊಳಿಸಲು ಕೆಳಗಿನ ಘಟನೆಯನ್ನು[೨೫] ಹೇಳುವುದು ಅವಶ್ಯಕವಾಗಿದೆ.

ಶ್ರೀ ಭಗವಾನರು ೧೯೨೭ರಲ್ಲಿ ರಚಿಸಿದ ಮೂಲ ಸಂಸ್ಕೃತ ಪದ್ಯ[೨೬] ಈ ಕೆಳಗಿನಂತಿತ್ತು:

"ದೇಹಂ ಮೃಣ್ಮಯವಜ್ಜಡಾತ್ಮಕಮಹಂ ಬುದ್ಧಿ: ನಟಸ್ಯ ಸ್ತ್ಯತೋ ನಾಹಂ ತತ್ತದಭಾವ ಸುಪ್ತಿ ಸಮಯೇ ಸಿದ್ಧಾತ್ಮ ಸದ್ಭಾವತ..." ಇದರಲ್ಲಿ ಅವರು ಬಳಸಿದ ನಿರ್ದಿಷ್ಟ ಶಬ್ದ 'ಅಭಾವ' ಎಂಬುದಾಗಿದೆ. ಆದರೆ, ಅವರ ಭಕ್ತರಾದ ಕಾವ್ಯಕಂಠಗಣಪತಿ ಶಾಸ್ತ್ರಿಗಳು ಬಹುಶಃ ತಮ್ಮ ಅಂದಿನ ಅಶಕ್ತತೆಯಿಂದಾಗಿ ನಿದ್ದೆಯಲ್ಲಿ ದೇಹವು ಇರುವುದಿಲ್ಲ ಎಂದು ಒಪ್ಪಲು ಸಾಧ್ಯವಾಗಲಿಲ್ಲ ಮತ್ತು ಗಾಢ ನಿದ್ದೆಯಲ್ಲಿ ಕನಿಷ್ಠ ಅಪ್ರಕಟಿತ (ಅಪೇತ) ಸ್ಥಿತಿಯಲ್ಲಿ ಇರುತ್ತದೆ ಎಂದು ಪಾಠವನ್ನು 'ಅಪೇತ ಸುಪ್ತಿ ಸಮಯೇ' ಎಂದು ಬದಲಿಸಿದರು.[೨೭]

೨೫. ಈ ಘಟನೆಯನ್ನು ನಿರೂಪಿಸಿದವರು ಶ್ರೀ ಮುರುಗನಾರ್ ಅವರು. 'ಡೇ ಬೈ ಡೇ ವಿತ್ ಭಗವಾನ್ (ಭಗವಾನರೊಂದಿಗೆ ಪ್ರತಿದಿನ) (೨೦-೧-೧೯೪೬ ಬೆಳಿಗ್ಗೆ)ಯಲ್ಲಿಯೂ ಇದು ಉಲ್ಲೇಖಿಸಲ್ಪಟ್ಟಿದೆ.

೨೬. 'ರಿವಿಲೇಶನ್' (ಸಾಕ್ಷಾತ್ಕಾರ) ಎಂಬ ಪುಸ್ತಿಕೆಯಲ್ಲಿ 'ಶ್ರೀ ರಮಣ ಹೃದಯಂ'ದ ೫೬ನೆಯ ಪದ್ಯವಾಗಿ ಶ್ರೀ ರಮಣಾಶ್ರಮವು ಶ್ರೀ ಭಗವಾನರ ಮೂಲ ಸಂಸ್ಕೃತ ಪದ್ಯವನ್ನು ಪ್ರಕಟಿಸಿದೆ.

೨೭. ಕಾವ್ಯ ಕಂಠ ಗಣಪತಿ ಶಾಸ್ತ್ರಿಗಳು 'ಅಪೇತ ಸುಪ್ತಿ ಸಮಯೇ' ಎಂಬ ಪದವನ್ನು "ದೇಹವು ತೋರದಿರುವ ನಿದ್ದೆಯ ಅವಧಿಯಲ್ಲಿ' ಎಂಬರ್ಥದಲ್ಲಿ ಮಾತ್ರ ಬಳಸಿದಂತೆ ತೋರುತ್ತದೆ", ದೇಹವು ಇಲ್ಲದಿರುವ ನಿದ್ದೆಯ ಅವಧಿಯಲ್ಲಿ ಎಂಬ ಅರ್ಥದಲ್ಲಿ ಅಲ್ಲ. 'ಅಪೇತ' ಶಬ್ದಕ್ಕೆ ಅವರು ಕೊಡುವ ಅರ್ಥವು 'ಉಪದೇಶ ಸಾರಂ'ನ ಪದ್ಯ ೩೦ಕ್ಕೆ ಅವರ ಸಂಸ್ಕೃತ ವ್ಯಾಖ್ಯಾನವನ್ನು ಓದುವವರಿಗೆ ಸ್ಪಷ್ಟವಾಗಿ ತಿಳಿಯುತ್ತದೆ.

'ಇದು ಇರುವುದೇ ಇಲ್ಲ (ಅಭಾವ)' ಎಂಬುದು ಶ್ರೀಭಗವಾನರ ಅನುಭವ! 'ಅಪ್ರಕಟಿತ ರೂಪದಲ್ಲಾದರೂ ಕನಿಷ್ಟ ಇರುತ್ತದೆ' ಎಂಬುದು ಈ ಭಕ್ತರ ಅಭಿಪ್ರಾಯವಿರಬಹುದು.[೨೮] ಇದೇ ಪದ್ಯವನ್ನು ತಮಿಳಿಗೆ ಭಾಷಾಂತರಿಸುವಾಗ ಶ್ರೀ ಭಗವಾನರು ದೇಹ ಇರುವುದೇ ಇಲ್ಲ ಎಂಬ ಅರ್ಥದ 'ಜಡಲಮಿಲ್' ಎಂಬ ತಮಿಳು ಶಬ್ದವನ್ನು ಬಳಸಿದ್ದಾರೆ. ಬದಲೀ ಶಬ್ದವು ಕೊಡುವ ವಿಚಾರವನ್ನು ಶ್ರೀ ಭಗವಾನರು ಒಪ್ಪಿದ್ದರೆ ಅದೇ ರೀತಿ ಅವರು ಭಾಷಾಂತರಿಸುತ್ತಿದ್ದರು; ಆದರೆ ಅವರು ತಮ್ಮ ವಿಚಾರವನ್ನೇ (ಅಭಾವ) ಒತ್ತಿ ಹೇಳಿದ್ದಾರೆ, ತಮ್ಮ ಮೂಲ ಸಂಸ್ಕೃತ ರಚನೆಯ ಪದವನ್ನೇ ಅನುವಾದಿಸಿದ್ದಾರೆ. ಈಗ ಮುದ್ರಿತ ರೂಪದಲ್ಲಿರುವ ಸಂಸ್ಕೃತ ಆವೃತ್ತಿಯು ('ಶ್ರೀ ರಮಣ ಹೃದಯಂ' ಹೊರತು ಪಡಿಸಿ ಉಳಿದೆಲ್ಲ ಗ್ರಂಥಗಳಲ್ಲಿ) ಭಕ್ತರು ನೀಡಿದ ಪರ್ಯಾಯ ಪದವೇ ಹೊರತು ಶ್ರೀ ಭಗವಾನರ ಮೂಲವಲ್ಲ.

ದೇಹ ಮತ್ತು ಜಗತ್ತು ಸತ್ಯವಾಗಿಯೂ ಇವೆ ಎಂದು ನಂಬುವ ಅಪಕ್ವ ಮನಸ್ಸುಗಳ ದೌರ್ಬಲ್ಯಕ್ಕಾಗಿ ಕೊಡುವ ರಿಯಾಯಿತಿಯಾಗಿ ಮಾತ್ರ ಶಾಸ್ತ್ರಗಳು ಶಮನಗೊಳಿಸುವಂತೆ ಹೇಳುತ್ತವೆ: "ಸೃಷ್ಟಿಯು (ದೇಹ ಮತ್ತು ಜಗತ್ತು) ದೇವರಿಂದ ಅಥವಾ ಆತ್ಮನಿಂದ ಒಮ್ಮೆ ಹೊರಬಂದವು; ನಿದ್ರೆ, ಸಾವು ಮತ್ತು ಪ್ರಳಯದಲ್ಲಿ ಅಲ್ಲಿಗೇ ಮರಳುತ್ತವೆ, ಮತ್ತೆ ಪುನಃ ಹೊರಬರುತ್ತವೆ". ಆದರೆ ಈ ಶಮನಕಾರಿ ಶಬ್ದಗಳು ಕೇವಲ (ಪಾರಮಾರ್ಥಿಕ) ಸತ್ಯವಲ್ಲ, ಮತ್ತು ಆದ್ದರಿಂದ ಕೇವಲ ಸತ್ಯವನ್ನು ಮಾತ್ರ ತಿಳಿಯಲು ಆಸೆ ಪಡುವ, ಪ್ರಯತ್ನಿಸುವ ನಮಗೆ ಪೂರ್ಣ ತೃಪ್ತಿ ನೀಡಲಾರವು. ಮಹಾಗುರು ಭಗವಾನ್ ಶ್ರೀ ರಮಣರ ಸ್ವಂತ ಅನುಭವದೆದುರು ಈ ಶಾಸ್ತ್ರ ವಿವರಣೆಗಳು ನಿಲ್ಲಲಾರವು. ಅವರು ಯಾರಿಂದಲೂ ಪರಮ ಸತ್ಯವನ್ನು ಕನಿಷ್ಠ ಪ್ರಮಾಣದಲ್ಲಿಯೂ ಎಂದಿಗೂ ತಡೆಹಿಡಿಯಲಿಲ್ಲ. ಹಾಗಾಗಿ ಅವನ್ನು ಶ್ರೀ ಭಗವಾನರ ನೇರ ಉಪದೇಶವೆಂದು ಪರಿಗಣಿಸಬೇಕಾಗಿಲ್ಲ. ಶ್ರೀ ಭಗವಾನರ ಅಗ್ರಗಣ್ಯ ಭಕ್ತರಾದ ಶ್ರೀ ಮುರುಗನಾರ್ ಅವರ ಕೆಳಗಿನ ಪದ್ಯದಲ್ಲಿ ಇದೇ ವಿಚಾರ ಚೆನ್ನಾಗಿ ಅಭಿವ್ಯಕ್ತವಾಗಿದೆ:

"ತಮ್ಮ ಬಳಿ ಬಂದವರ ತಿಳುವಳಿಕೆಯ ಹಂತಕ್ಕನುಗುಣವಾಗಿ ಗುರು ರಮಣರು ವಿವಿಧ ಸಿದ್ಧಾಂತಗಳನ್ನು ಉಪದೇಶಿಸಿದರೂ ಸತ್ಯವಾಗಿ ಅವರ ಸ್ವಾನುಭವವು ತಾವು ಅಜಾತ[೨೯] ಎಂದು ಹೇಳಿದ್ದನ್ನು ಕೇಳಿದ್ದೇವೆ. ಹೀಗೆ ಇದನ್ನು ತಿಳಿದುಕೊಳ್ಳಬೇಕು" 'ಗುರು ವಾಚಕ ಕೋವೈ', (ಪದ್ಯ ೧೦೦)

ನಿದ್ದೆಯಲ್ಲೂ ನಾವು ಇರುವುದರಿಂದ, ದೇಹವು ಇಲ್ಲದಿರುವುದರಿಂದ ಹಿಂದೆ ಹೇಳಿದ ಪ್ರಾಥಮಿಕ ಪರೀಕ್ಷೆಯ ಪ್ರಕಾರ ನಾವು ಈ ಸ್ಥೂಲ ಶರೀರ (ಭೌತಿಕ ದೇಹ,

---

೨೮. ಶ್ರೀ ಭಗವಾನರು ಬಳಸಿದ 'ಅಭಾವ' ಎಂಬ ಮೂಲಪದದಲ್ಲಿ ಛಂದೋಭಂಗ ಇಲ್ಲವಾದ್ದರಿಂದ 'ಅಪೇತ' ಎಂಬ ಪದವನ್ನು ಗಣಪತಿ ಶಾಸ್ತ್ರಿಗಳು ಬದಲಿಯಾಗಿ (substitute) ಬಳಸಿರಬೇಕು, ಏಕೆಂದರೆ ಅವರ ವಿಚಾರವು ಶ್ರೀ ಭಗವಾನರದಕ್ಕೆ ವಿರುದ್ಧವಾಗಿತ್ತು. 'ಅಭಾವ' ಪದದ ಅರ್ಥವನ್ನೇ 'ಅಪೇತ' ಪದವು ಕೊಡುವುದಾದರೆ, ಪದ ಬದಲಿಸುವ ಅಗತ್ಯವಾದರೂ ಏನಿತ್ತು?

೨೯. ಅಜಾತ ಎಂದರೆ ಯಾವುದೂ (ಜಗತ್ತು, ಜೀವ ಅಥವಾ ಈಶ್ವರ) ಎಂದೂ ಅಸ್ತಿತ್ವಕ್ಕೆ ಬರುವುದಿಲ್ಲ ಮತ್ತು 'ಯಾವುದು ಇದೆಯೋ ಅದು' ಸದಾ ತಾನಿರುವಂತೆ ಇರುತ್ತದೆ ಎಂಬ ಜ್ಞಾನ.

ಉಸಿರಾಟ ಮತ್ತು ರಕ್ತಪರಿಚಲನೆ) ಇರಲಾರೆವು ಎಂದು ಅಂತಿಮ ನಿರ್ಣಯಕ್ಕೆ ಬರಬೇಕಾಗುತ್ತದೆ.

ಈಗ ನಾವು ಸೂಕ್ಷ್ಮ ಶರೀರದ ಕುರಿತು ಚಿಂತಿಸೋಣ. ಮನಸ್ಸು (ಅದೇ ವಿಚಾರಗಳು) ಮತ್ತು ಬುದ್ಧಿ ಕೂಡಿ ಈ ಸೂಕ್ಷ್ಮ ಶರೀರವಾಗುತ್ತದೆ. ಮನಸ್ಸು ಕೇವಲ ವಿಚಾರಗಳ ಸಂಗ್ರಹವೆಂದು ನಮಗೆ ತಿಳಿದಿದೆ. ಎಚ್ಚರದ ಸ್ಥಿತಿಯಲ್ಲಿ ಎಲ್ಲ ವಿಚಾರಗಳು ಶಮನಗೊಂಡ, ಯಾವುದೇ ಪ್ರಯತ್ನವಿಲ್ಲದ ಪ್ರಶಾಂತ ಗಳಿಗೆಗಳು ನಮಗೆಲ್ಲ ಬಂದಿವೆಯಷ್ಟೇ? ಅಂತಹ ವಿಚಾರಮುಕ್ತ ಅವಧಿಗಳಲ್ಲಿಯೂ ನಾವು ಇರುವುದು ನಿಲ್ಲುತ್ತದೆಯೇ? ಇಲ್ಲ, ಆಗಲೂ ನಾವು ಇರುತ್ತೇವೆ. ಆದರೂ ಕೆಲವರ ತಕರಾರು ಕೇಳುತ್ತದೆ: "ನನ್ನ ಪೂರ್ತಿ ಎಚ್ಚರದ ಸ್ಥಿತಿಯು ವಿಚಾರಗಳ ಅಲೆ-ಅಲೆಗಳು ಮಾತ್ರ. ವಿಚಾರಗಳ ಶಮನವನ್ನು ನಾನು ಎಂದೂ ಅನುಭವಿಸಿಯೇ ಇಲ್ಲ". ಒಳ್ಳೆಯದು, ಅವರ ತಕರಾರನ್ನು ಸ್ವಾಗತಿಸಿ ಉತ್ತರಿಸುವುದೇ ಸರಿ. ವಿಚಾರಗಳ ಅಲೆಗಳು ತಮ್ಮಷ್ಟಕ್ಕೆ ತಾವೇ ಎಚ್ಚರದ ಸ್ಥಿತಿಯಲ್ಲಿ ಶಮನಗೊಳ್ಳುವುದೇ 'ಸುಮ್ಮನೆ ಇರುವುದು' (ಸುಮ್ಮಾ ಇರುತ್ತಲ್) ಅಥವಾ ಆತ್ಮ ನಿಷ್ಠೆ, ಈ ಅನುಭವ ಹೊಂದಿರುವ ಆಕಾಂಕ್ಷಿಗಳು ಸತ್ಯವನ್ನು ಸುಲಭವಾಗಿ ಗ್ರಹಿಸಬಲ್ಲರು. 'ವಿಚಾರಗಳ ಗೈರು ಹಾಜರಿಯಲ್ಲಿ ನಾವು ಇರಬಲ್ಲೆವು ಮತ್ತು ಇರುತ್ತೇವೆ'. ಆದರೂ, ತಕರಾರು ಮಾಡಿದವರ ಸಲುವಾಗಿ ಇನ್ನೂ ಆಳವಾಗಿ ಪರಿಶೋಧಿಸೋಣ. ನಾವು ಮೊದಲೇ ಹೇಳಿದಂತೆ, ನಿದ್ದೆಯಿಂದ ಎದ್ದ ಕೂಡಲೇ ನಮಗೆ ಬರುವ ವಿಚಾರಗಳಲ್ಲಿ 'ನಾನು ದೇಹ' ಎಂಬ ಉತ್ತಮ ಪುರುಷ ವಿಚಾರವೇ ಮೊದಲನೆಯದಷ್ಟೇ? ಉಳಿದೆಲ್ಲ ವಿಚಾರಗಳು ಮಧ್ಯಮ ಮತ್ತು ಪ್ರಥಮ ಪುರುಷ ವಿಷಯಗಳು ಈ ಮೊದಲ ವಿಚಾರಕ್ಕೆ ಗಟ್ಟಿ ಹಿಡಿದುಕೊಂಡು ಹೆಚ್ಚುತ್ತವೆ. ಎಚ್ಚರದ ಸ್ಥಿತಿಯಲ್ಲಿ ವಿಚಾರಗಳು ಶಮನವಾಗದವರಿಗೆ ಕೂಡ ನಿದ್ದೆ ಬಂದಾಗ ಎಲ್ಲ ವಿಚಾರಗಳು ಮಾಯವಾಗುವುದಿಲ್ಲವೇ? ಏಕೆಂದರೆ ಆ ವೇಳೆಯಲ್ಲಿ 'ನಾನು ದೇಹ' ಎಂಬ ಮೊದಲ ವಿಚಾರವೇ ಶಮನಗೊಂಡಿರುತ್ತದೆ. ಹೀಗೆ, ಕನಸಿಲ್ಲದ ನಿದ್ದೆಯಲ್ಲಿ ನಮಗೆಲ್ಲರಿಗೂ ವಿಚಾರ ಮುಕ್ತ ಸ್ಥಿತಿಗೆ ಪ್ರವೇಶವಿದೆಯಷ್ಟೇ? ಆಗ ನಾವು ಇಲ್ಲವಾಗುವುದಿಲ್ಲ.

"...ಅಹಂ-ಭಾವದ ನಾನು ಇಲ್ಲವಾಗುವ ನಿದ್ದೆಯಲ್ಲೂ ಕೂಡ ನಾವು ಇಲ್ಲವಾಗುವುದಿಲ್ಲ!" 'ಉಪದೇಶ ಉಂದಿಯಾರ್', (ಪದ್ಯ ೨೧) ಎನ್ನುತ್ತಾರೆ ಶ್ರೀ ಭಗವಾನರು. ಆದ್ದರಿಂದ, ನಮ್ಮ ಪ್ರಾಥಮಿಕ ಪರೀಕ್ಷೆಯ ಪ್ರಕಾರ, ಮನಸ್ಸಿನ ಗೈರು ಹಾಜರಿಯಲ್ಲೂ ನಾವು ಇರುವುದರಿಂದ, ನಾವು ಮನಸ್ಸಲ್ಲ.

ಇಷ್ಟೇ ಅಲ್ಲ, 'ನಾನು ದೇಹ'ವೆಂಬ ಅರಿವು (ದೇಹಾತ್ಮ-ಬುದ್ಧಿ) ಸ್ಥೂಲ ಶರೀರಕ್ಕೆ 'ನಾನು' ಎಂದು ಅಂಟಿಕೊಳ್ಳುವ ರೀತಿಯಲ್ಲೇ ಇದು ಇನ್ನೂ ಅನೇಕ ಶರೀರಗಳಿಗೆ ಸೂಕ್ಷ್ಮ ರೀತಿಯಲ್ಲಿ ಅಂಟಿಕೊಳ್ಳಬಹುದು. ಉದಾಹರಣೆಗೆ, ನಮ್ಮ ಸ್ಥೂಲ ಶರೀರವು ನಿಷ್ಕ್ರಿಯವಾಗಿರುವಾಗ ಮನಸ್ಸು ಕೆಲಸ ಮಾಡುವುದಿಲ್ಲವೇ? ಕನಸಿನದು ಅಂಥದೊಂದು ಪ್ರಸಂಗ. ಕನಸಿನಲ್ಲಿ ಮನಸ್ಸು ಇನ್ನೊಂದು ಸ್ಥೂಲ ಶರೀರವನ್ನು ಪಡೆದಂತೆ ಕೆಲಸ ಮಾಡಿ ಆ ಶರೀರದ ಮೂಲಕ ಹಲವು ಸಂಗತಿಗಳನ್ನು ತಿಳಿಯುತ್ತದೆ. ಈ ಸ್ವಪ್ನ ಶರೀರವು ಬರೀ ಮನಸ್ಸಿನ ಮುಂಚಾಚು ಮಾತ್ರ. ಇದು ಮನಸ್ಸೇ ಅಲ್ಲದೇ ಮತ್ತೇನೂ ಅಲ್ಲ. ಆದ್ದರಿಂದ ಇದನ್ನೂ ಸೂಕ್ಷ್ಮ ಶರೀರವೆಂದು ಕರೆಯಬಹುದು. ಆದರೆ ಕನಸಿಲ್ಲದ

ನಿದ್ದೆಯಲ್ಲೂ ನಾವು ಇರುವುದಿಲ್ಲವೇ? ಆದ್ದರಿಂದ, ಸ್ವಪ್ನ ಶರೀರವಿಲ್ಲದೆಯೂ ನಾವು ಇರುವುದರಿಂದ ಅದು 'ನಾನು' ಅಲ್ಲ ಎಂದು ಸ್ಪಷ್ಟವಾಗಿ ತಿಳಿಯಬಹುದು. ಮನಸ್ಸು ಹೀಗೆ ಸ್ವಪ್ನದಲ್ಲಿ ಮಾತ್ರ ಸೂಕ್ಷ್ಮ ಶರೀರ ಧರಿಸಿ ಕೆಲಸ ಮಾಡುತ್ತದೆ ಎಂದು ಗ್ರಹಿಸಬಾರದು. ಎಚ್ಚರದ ಸ್ಥಿತಿಯಲ್ಲೂ ನಮಗೆ ಹಗಲುಗನಸು ಇರುವುದಿಲ್ಲವೇ? ಆಗಲೂ ಅದೇ ವಿದ್ಯಮಾನ (phenomenon) ಘಟಿಸುತ್ತದೆ. ನಾವು ನಿದ್ದೆ ಮಾಡದೇ ಒಂದೆಡೆ ಕುಳಿತು ದೂರದೇಶಕ್ಕೆ ಪಯಣಿಸಿದ ಹಾಗೆ, ಅಲ್ಲಿ ಗೆಳೆಯನನ್ನು ಭೇಟಿಯಾದ ಹಾಗೆ, ಅವನೊಂದಿಗೆ ಮಾತನಾಡಿದ ಹಾಗೆ, ಜೀವನದ ಎಲ್ಲ ಏರಿಳಿತಗಳನ್ನು ಹಾದು ಹೋದ ಹಾಗೆ, ಮುಂತಾಗಿ ಕಲ್ಪಿಸೋಣ. ಈ ಕಾಲದಲ್ಲಿ ನಾವು ಹೋದ, ಬಂದ, ಮಾತನಾಡಿದ ಮುಂತಾದವನ್ನು ಮಾಡಿದ ಶರೀರವೂ ನಮ್ಮ ಸೂಕ್ಷ್ಮ ಶರೀರವೇ ಆಗಿದೆ. ನಾವು ಹೀಗೆ ಆಗಾಗ ಧರಿಸುವ ಸೂಕ್ಷ್ಮ ಶರೀರಗಳು ಸ್ಥಿರವಲ್ಲ ಎಂದು ನಮಗೆ ತಿಳಿದಿರುತ್ತದೆ. ನಿದ್ದೆಯಿಂದ ಎಚ್ಚೆತ್ತಾಗ ಸ್ವಪ್ನ ಶರೀರವು ಹೊರಟು ಹೋಗುತ್ತದೆ. ಅದೇ ರೀತಿ, ಹಗಲುಗನಸಿನಲ್ಲಿ ಧರಿಸಿದ ಶರೀರವೂ ಸುಳ್ಳಾಗುತ್ತದೆ, ಇಲ್ಲವಾಗುತ್ತದೆ. ಅಂದರೆ, ಬಂದು ಹೋಗುವ ಈ ಶರೀರಗಳೆಲ್ಲ ಸುಳ್ಳು. ಈ ಶರೀರಗಳ ಗೈರು ಹಾಜರಿಯಲ್ಲೂ ನಾವಿರುತ್ತೇವೆ ಎಂದು ನಿರ್ಣಯಿಸಬಹುದು. ಆದ್ದರಿಂದ ಇವು ನಾವಲ್ಲ.

ಈಗ, ಮುಂದಕ್ಕೆ ಪರಿಶೋಧಿಸಿದರೆ, ಈ ಸೂಕ್ಷ್ಮ ಶರೀರಕ್ಕಿಂತಲೂ ಸೂಕ್ಷ್ಮವಾಗಿರುವ ಇನ್ನೊಂದು ಬಗೆಯ ಶರೀರವಿರುವುದು ಕಂಡು ಬರುತ್ತದೆ. ಇಲ್ಲಿಯೂ ಕೂಡ ಕನಸಿಲ್ಲದ ನಿದ್ದೆ ಎಂಬ ನಮಗೆಲ್ಲ ಸ್ವಾನುಭವವಿರುವುದೇ ಸಮರ್ಥನೆಯಾಗುತ್ತದೆ. ಆ ಕಾಲದಲ್ಲಿ ನಮಗೆ ಸ್ಥೂಲ ಅಥವಾ ಸೂಕ್ಷ್ಮ ಶರೀರವು ಇರುವುದಿಲ್ಲ. ಮನಸ್ಸು ಸಂಪೂರ್ಣ ಶಮನಗೊಂಡು ಏನೂ ತಿಳಿಯದ ಪೂರ್ಣ ಕತ್ತಲೆಗೆ ನಾವಿಳಿಯುತ್ತೇವೆ. ಮನಸ್ಸು ಈ ಕತ್ತಲೆಯಿಂದ ಮತ್ತೆ ಮೇಲೆದ್ದಾಗ ಕನಸು ಅಥವಾ ಎಚ್ಚರ ಉಂಟಾಗುತ್ತದೆ. ಗಾಢ ನಿದ್ದೆಯಿಂದ ಎದ್ದಾಗ ನಮ್ಮ ಅನುಭವವನ್ನು ಹೀಗೆ ನೆನಪಿಡುತ್ತೇವೆ; 'ಸುಖವಾಗಿ ನಿದ್ದೆ ಮಾಡಿದೆ, ಯಾವ ಕನಸೂ ಇರಲಿಲ್ಲ' ಎಂದು. ಅಂದರೆ, ಕನಸು ಕೂಡ ಇಲ್ಲದ ಕತ್ತಲೆಯಂತೆ ತೋರುವ ಅವಸ್ಥೆಯಲ್ಲಿಯೂ ನಾವಿರುತ್ತೇವೆ ಎಂದು ತಿಳಿಯುತ್ತದೆ. ಈ ಕತ್ತಲೆಯ ಸ್ಥಿತಿಗೆ ಕಾರಣ ಶರೀರ[೩೦] ಎನ್ನುತ್ತಾರೆ. **ಅಲ್ಲಿಯೂ ನಾವು ಇದ್ದೆವು ಎಂದು ತಿಳಿಯುತ್ತೇವಲ್ಲ, ಆ ತಿಳಿಯುವ ನಾವೇ ನಿಜವಾದ 'ನಾನು'.**

ಗಾಢ ನಿದ್ದೆಯಲ್ಲಿ ಅಹಂಕಾರವು (ಮೋಹರೂಪದಲ್ಲಿರುವ ಮನಸ್ಸು) ಅತಿ ಸೂಕ್ಷ್ಮವಾದ ವಾಸನೆಗಳ ರೂಪದಲ್ಲಿ ಇನ್ನೂ ಜೀವಂತವಾಗಿರುತ್ತದೆ. ಸೂಕ್ಷ್ಮ ಮತ್ತು ಸ್ಥೂಲ ಶರೀರಗಳು ಏಳಲಿಕ್ಕೆ ಅಡಿಪಾಯವೂ ಕಾರಣವೂ ಈ ರೂಪವೇ ಆಗಿದೆ. ಹಾಗಾಗಿ ಇದನ್ನು ಕಾರಣ ಶರೀರ ಎನ್ನುತ್ತಾರೆ. ಸಾವಿನಲ್ಲೂ ಕೂಡ ನಾವು ಈ ಕಾರಣ ಶರೀರದಲ್ಲಿ ಇರುತ್ತೇವೆ.

---

೩೦. ನಿದ್ದೆಯಲ್ಲಿ ಕಾರಣ ಶರೀರವು ಇನ್ನೂ ಇರುತ್ತದೆ. ಮತ್ತು ನಿದ್ದೆಯ ಕತ್ತಲೆಯೇ ಅದರ ರೂಪ ಎಂದು ಇಲ್ಲಿ ಹೇಳುವ ಕಾರಣವೆಂದರೆ–ಶ್ರೀ ಭಗವಾನರ ಅನುಭವದ ಪ್ರಕಾರ ಗಾಢ ನಿದ್ದೆಯಲ್ಲಿ ದೇಹ ಮತ್ತು ಜಗತ್ತು ಯಾವುದೇ ರೂಪದಲ್ಲಿ ಇರುವುದೇ ಇಲ್ಲ ಎಂದು ಪುಟ ೫೬ ರಿಂದ ೬೮ರಲ್ಲಿ ವಿವರಿಸಿದ್ದರೂ ಕೂಡ– ನಮ್ಮ ಪದ್ಯದ ಪರಿಶೋಧನೆಯನ್ನು ಪುಟ ೪೪ ರಿಂದ ೪೯ರಲ್ಲಿ ಕೊಡಲಾದ ಅಡಿ ಟಿಪ್ಪಣಿಯಂತೆ ಮಾಡಲಾಗಿದೆ: "ಆದರೆ ನಿದ್ದೆಯು ದೋಷಯುಕ್ತ ಮತ್ತು ಹೀನ ಸ್ಥಿತಿಯೆಂಬ ಸಾಮಾನ್ಯ ಜನರ ಗ್ರಹಿಕೆಯಂತೆ ಸದ್ಯಕ್ಕೆ ಮುಂದುವರಿಯೋಣ".

ಸ್ಥೂಲ ಶರೀರದ ಸಾವಿನೊಂದಿಗೆ ಈ ಕಾರಣ ಶರೀರವು ನಾಶವಾಗುವುದಿಲ್ಲ. ಈ ಕಾರಣ ಶರೀರವೂ 'ನಾನಲ್ಲ' ಎಂದು ಒತ್ತಿ ಹೇಳುವ ಕಾರಣವೆಂದರೆ ಈ ಸ್ಥಿತಿಯೂ ನಮಗೆ ಪರಕೀಯವಾದುದು ಎಂದು ತಿಳಿಯಲು ನಾವಿರುತ್ತೇವೆ. **ಅಲ್ಲಿ, ನಮ್ಮ ಇರುವಿಕೆಯೊಂದೇ ನಿಜ, ನಾವು ಧರಿಸುವ ರೂಪ (ಕತ್ತಲೆ ಅಥವಾ ಅಜ್ಞಾನ) ನಾವಾಗಲಾರೆವು**. 'ನಾನು' ಎಂದು ತೋರುತ್ತಿದ್ದರೂ ಕೂಡ 'ಈ ದೇಹ ನಾನಲ್ಲ' ಎಂದು ಸ್ಥೂಲಶರೀರವನ್ನು ತಿರಸ್ಕರಿಸಿದ ಹಾಗೆ, ಸ್ವಪ್ನಾವಸ್ಥೆಯ ಸೂಕ್ಷ್ಮ ಶರೀರವನ್ನು ಅದೇ ಕಾರಣಕ್ಕಾಗಿ 'ನಾನಲ್ಲ' ಎಂದು ತಿರಸ್ಕರಿಸಿದ ಹಾಗೆ, ಗಾಢ ನಿದ್ದೆಯ ಈ ಕಾರಣ ಶರೀರವನ್ನೂ (ಕತ್ತಲೆ ಅಥವಾ ಅಜ್ಞಾನ) ಈಗ ತಿರಸ್ಕರಿಸೋಣ. ಇದು ಬರೀ ಬಂದು ಹೋಗುವ ಒಂದು ರೂಪವಷ್ಟೇ ಆಗಿದೆ. ಹೀಗೆ, ಈ ಎಲ್ಲ ಮೂರು ಶರೀರಗಳನ್ನೂ 'ನಾನಲ್ಲ', 'ನಾನಲ್ಲ' ಎಂದು ಹೊರಹಾಕಿದ ಮೇಲೆ ಉಳಿಯುವ ಜ್ಞಾನ–ನಮ್ಮ ಇರುವಿಕೆಯ (ಸತ್) ಅರಿವು (ಚಿತ್)–ಅದೊಂದೇ ನಾನು.

ಈ ಮೂರು ಶರೀರಗಳನ್ನು ನಾವು ಹೊರಹಾಕಬಲ್ಲೆವೇ? ಖಂಡಿತಾ ಸಾಧ್ಯ. ಏಕೆಂದರೆ ಅವು ಕೇವಲ ನಮ್ಮ ಕೋಶಗಳು. ನಮಗೆ ಹೊರಗಿನವು. ನಮಗಿಂತ ಹೊರಗಿನದರಿಂದ ನಮ್ಮನ್ನು ನಾವು ಪ್ರತ್ಯೇಕಗೊಳಿಸಬಲ್ಲೆವು. ಹೀಗೆ ಹೊರಗಿನದಾದ ಕೋಶಗಳಿಂದ ನಮ್ಮನ್ನು ನಾವು ಪತ್ಯೇಕಗೊಳಿಸಿಕೊಂಡಾಗ ನಮ್ಮ ಸತ್ಯ ಸ್ವರೂಪವು ತಿಳಿಯುತ್ತದೆ. ನಾವು ಈಗಾಗಲೇ ಸ್ಥಾಪಿಸಿರುವ ಸತ್ಯದ ಪ್ರಕಾರ, ಅಂದರೆ **ನಮ್ಮ ಸತ್ಯಸ್ವರೂಪವೇ ಆನಂದ,** ಸತ್ಯ ರೂಪವನ್ನು ಅನುಭವಿಸುವುದೇ ಪರಿಪೂರ್ಣ ಆನಂದ. ಹೀಗೆ, ಆತ್ಮ ಸ್ವರೂಪಾನುಭವವೇ **ಆನಂದದ ಪರಾಕಾಷ್ಠೆಯಾಗಿದೆ**. ಎಲ್ಲ ಜೀವಿಗಳು ಗೊತ್ತಿದ್ದು ಅಥವಾ ಗೊತ್ತಿಲ್ಲದೇ ತಮ್ಮ ಅಸಂಖ್ಯಾತ ಪ್ರಯತ್ನಗಳಿಂದ ಹುಡುಕುತ್ತಿರುವ ಅಂತಿಮ ಗುರಿ ಇದೇ ಆಗಿದೆ. 'ನಾನು ಯಾರು' ಎಂಬ ಶೋಧದ ಮೂಲಕ ನಮ್ಮ **ನಿಜದ (ಸತ್) ಜ್ಞಾನವೇ (ಚಿತ್) ಪರಿಪೂರ್ಣ ಆನಂದ** ಎಂಬ ಸ್ಥಿತಿ ತಲುಪುವುದೇ ಮಾನವ ಕುಲದ ಪರಮ ಪುರುಷಾರ್ಥ. ನಾವು ಸದಾ ಕಾಲ ಈ ಸತ್–ಚಿತ್–ಆನಂದವಾಗಿದ್ದರೂ ಈ ಕೋಶಗಳನ್ನೇ ನಾವೆಂದು ತಪ್ಪಾಗಿ ಕಲ್ಪಿಸಿಕೊಂಡು ನಮಗೆ ನಾವೇ ಮುಸುಕು ಹಾಕಿಕೊಳ್ಳುವುದೇ ನಮ್ಮೆಲ್ಲ ಸಂಕಟಗಳ ಏಕೈಕ ಕಾರಣವಾಗಿದೆ.

ಅಧ್ಯಾಯ ಐದು

‘ನಾನು ಯಾರು?’ ಶೋಧ ಮತ್ತು ನಾಲ್ಕು ಯೋಗಗಳು

ನಮಗೆ ಹೊರಗಿನವೂ ಪರಕೀಯವೂ ಆದ ಈ ಕೋಶಗಳಿಂದ ನಮ್ಮನ್ನು ನಾವು ಪ್ರತ್ಯೇಕಿಸಿಕೊಳ್ಳುವ ಈ ಪ್ರಕ್ರಿಯೆಯೇ ಶಾಸ್ತ್ರಗಳಲ್ಲಿ ‘ಯೋಗ’ ಎಂದು ವರ್ಣಿಸಲ್ಪಟ್ಟಿದೆ. ‘ಯೋಗ’ ಶಬ್ದದ ನಿಷ್ಠುರ ಅರ್ಥ ‘ಮಿಲನ’ ಎಂದಾದರೂ ನಮ್ಮ ಈ ಮೊದಲಿನ ವಿಶ್ಲೇಷಣೆಯು ಈ ಪ್ರಕ್ರಿಯೆಯನ್ನು ‘ಪ್ರತ್ಯೇಕತೆ’ (ವಿಯೋಗ) ಎಂದು ಕರೆಯುವತ್ತ ಮುನ್ನಡೆಸಿದೆ. ಹಾಗಿದ್ದೂ ಪರಿಣಾಮದಲ್ಲಿ ಈ ಎರಡೂ (ವಿಯೋಗ ಮತ್ತು ಸಂಯೋಗ) ಒಂದೇ ಆಗಿವೆ! ಭಗವಾನ್ ರಮಣರ ಆನಂದಮಾರ್ಗದಲ್ಲಿ ಇದುವರೆಗೆ ‘ನಾವಲ್ಲದ್ದರಿಂದ ಪ್ರತ್ಯೇಕತೆ’ ಎಂದು ವರ್ಣಿಸಲ್ಪಟ್ಟದ್ದೇ ‘ದೇವರೊಂದಿಗೆ ಮಿಲನ’ ಎಂಬುದಾಗಿ ಇಲ್ಲಿಯವರೆಗೆ ಶಾಸ್ತ್ರಗಳಲ್ಲಿ ಉಳಿದು ಬಂದಿದೆ. ಹಾಗಾದರೆ ಪರಸ್ಪರ ವಿರುದ್ಧಾರ್ಥ ಕೊಡುವ ಈ ಎರಡು ಶಬ್ದಗಳ ಬಳಕೆಗೆ ಕಾರಣವಾದರೂ ಏನು? ‘ನಾನು’ ಎಂಬ ಶಬ್ದಕ್ಕೆ ಲೋಕ ಮಹಾಗುರುವಾದ ಶ್ರೀರಮಣರು ಕೊಡುವ ಪ್ರಾಥಮಿಕ ಅರ್ಥ ಸತ್ಯವಾದ, ಸಹಜವಾದ ಅರಿವು (ಆತ್ಮಭಾವ) ಎಂದು. ಆದರೆ ಇದುವರೆಗಿನ ಶಾಸ್ತ್ರಗಳು ‘ನಾನು’ ಎಂಬ ಶಬ್ದಕ್ಕೆ ಕೊಡುವ ಪ್ರಾಥಮಿಕ ಅರ್ಥ ‘ನಾನು ಈ ದೇಹ’ ಎಂಬ ಅರಿವು (ಜೀವಭಾವ) ಎಂದು.

ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸೋಣ. ‘ನಾನು ತಿರುವಣ್ಣಾಮಲೈಗೆ ಬಂದಿದ್ದೇನೆ’ ಎಂದು ಒಬ್ಬ ಹೇಳಿದರೆ ಇನ್ನೊಬ್ಬ ‘ನಾನು ತಿರುವಣ್ಣಾಮಲೈಗೆ ಹೋಗಿದ್ದೆ’ ಎಂದು ಹೇಳಿದಾಗ ಇಬ್ಬರೂ ತಿರುವಣ್ಣಾಮಲೈ ತಲುಪಿದ ಒಂದೇ ಘಟನೆಯನ್ನು ಸೂಚಿಸುತ್ತಾರೆ. ಹಾಗಾದರೆ ಪರಸ್ಪರ ವಿರುದ್ಧಾರ್ಥವುಳ್ಳ ‘ಬಂದಿದ್ದೇನೆ’ ಮತ್ತು ‘ಹೋಗಿದ್ದೆ’ ಎಂಬ ಶಬ್ದಗಳು ಒಂದೇ ಘಟನೆಯನ್ನು ಸೂಚಿಸುವುದರಿಂದ ನಾವು ಏನನ್ನು ನಿರ್ಣಯಿಸಬಹುದು? ಮೊದಲನೆಯವ ತಿರುವಣ್ಣಾಮಲೈನಲ್ಲಿ ಇದ್ದಾನೆ, ಇನ್ನೊಬ್ಬ ತಿರುವಣ್ಣಾಮಲೈನಲ್ಲಿ ಇರದೇ ಬೇರೊಂದು ಕಡೆಯಿಂದ ಮಾತನಾಡುತ್ತಿದ್ದಾನೆ ಎಂಬುದು ಸ್ಪಷ್ಟವಿಲ್ಲವೇ? ಹಾಗೆಯೇ ಪರಿಪೂರ್ಣ ಆನಂದದ ಮಾರ್ಗವಾಗಿ ಸಾಧಕನಿಗೆ ಕೊಟ್ಟಂತಹ ಪದ್ಧತಿ ‘ಪ್ರತ್ಯೇಕತೆ’ (ವಿಯೋಗ) ಅಥವಾ ‘ಮಿಲನ’ (ಯೋಗ) ಎಂದು ‘ನಾನು’ ಪದಕ್ಕೆ ಕೊಡಲಾದ ಪ್ರಾಥಮಿಕ ಅರ್ಥವನ್ನು ಅನುಸರಿಸಿ ವರ್ಣಿಸಲಾಗುತ್ತದೆ.

ಹಾಗಾಗಿ ಶಾಸ್ತ್ರಗಳು ಉಪದೇಶಿಸುವ ಯೋಗಕ್ಕೂ ಶ್ರೀ ಭಗವಾನರು ಉಪದೇಶಿಸುವ ಆತ್ಮಶೋಧಕ್ಕೂ ವ್ಯತ್ಯಾಸವಿದೆ. ‘ನಾನು ಈ ದೇಹ, ನನಗೆ ಪ್ರತ್ಯೇಕ ಅಸ್ತಿತ್ವವಿದೆ’ ಎಂಬ ಸಾಮಾನ್ಯ ಜನರ ತಪ್ಪು ತಿಳುವಳಿಕೆಯನ್ನು ಒಪ್ಪಿ ಶಾಸ್ತ್ರಗಳು ನಾಲ್ಕು ಯೋಗಗಳನ್ನು ಉಪದೇಶಿಸುತ್ತವೆ. ಅವೆಂದರೆ, ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ.

೧. ಕರ್ಮಯೋಗವು ಹೇಳುತ್ತದೆ: 'ಫಲದ ಬಗ್ಗೆ ಮೋಹವಿಲ್ಲದೇ ಕರ್ಮ ಮಾಡು'.
೨. ಭಕ್ತಿ ಯೋಗವು ಹೇಳುತ್ತದೆ: 'ಬೇರೇನನ್ನೂ ಪ್ರೀತಿಸಬೇಡ, ದೇವರನ್ನು ಮಾತ್ರ ಪ್ರೀತಿಸು'.
೩. ರಾಜಯೋಗವು ಹೇಳುತ್ತದೆ: 'ದೇವರಿಂದ ನಿನ್ನನ್ನು ನೀನೇ ಪ್ರತ್ಯೇಕಿಸಿಕೊಂಡು ಕ್ಷುಲ್ಲಕ ಜೀವಾತ್ಮವಾಗಿ ಬಿದ್ದಿದ್ದೀಯ; ಹೋಗಿ ದೇವರೊಂದಿಗೆ ಮತ್ತೆ ಒಂದಾಗು'.
೪. ಜ್ಞಾನಯೋಗವು ಹೇಳುತ್ತದೆ: 'ದೇವರನ್ನು ತಿಳಿದುಕೋ'.

ಈ ನಾಲ್ಕು ಯೋಗಗಳಲ್ಲಿ ಪ್ರತಿಯೊಂದಕ್ಕೂ 'ನಾನು' ಇರಲೇಬೇಕಾಗುತ್ತದೆ: ಫಲದ ಮೋಹವಿಲ್ಲದೇ ಕರ್ಮ ಮಾಡಲು 'ನಾನು' ಬೇಕು; ದೇವರನ್ನು ಪ್ರೀತಿಸಲು 'ನಾನು' ಬೇಕು; ದೇವರಿಂದ ಪ್ರತ್ಯೇಕಗೊಂಡಿರುವುದರಿಂದ ಮರಳಿ ಹೋಗಿ ಒಂದಾಗಲು 'ನಾನು' ಬೇಕು; ಇದುವರೆಗೆ ದೇವರ ಬಗ್ಗೆ ಅಜ್ಞಾನಿಯಾಗಿದ್ದು, ಈಗ ಅವನನ್ನು ತಿಳಿಯಲೆತ್ನಿಸಲು 'ನಾನು' ಬೇಕು. **ಹಾಗಾಗಿ ಈ ನಾಲ್ಕೂ ಯೋಗಗಳಲ್ಲಿ 'ನಾನು ಇದು' ಅಥವಾ 'ನಾನು ಹೀಗೆ, ಹೀಗೆ' ಎಂಬ ರೂಪದ 'ನಾನು' ಎಂಬ ವ್ಯಕ್ತಿಯ ಅಸ್ತಿತ್ವವು ಅತ್ಯವಶ್ಯಕವಾಗಿದೆ. ಈ 'ನಾನು' ಇಲ್ಲದೇ ಯಾವ ಯೋಗವನ್ನೂ ಮಾಡಲು ಸಾಧ್ಯವಿಲ್ಲ.**

ಅಂದ ಮೇಲೆ, ಮೊದಲು ಕಂಡು ಕೊಳ್ಳುವುದು ಅವಶ್ಯವಿಲ್ಲವೇ–"ಈ ನಾನು ಯಾರು? ಅವನು ನಿಜವಾಗಿಯೂ ಇರುತ್ತಾನೆಯೇ? ಅವನಿಗೆ ಪ್ರತ್ಯೇಕ ಅಸ್ತಿತ್ವವಿದೆಯೇ? ಅವನು ನಿಜವೇ?" ನಾಲ್ಕು ಯೋಗಗಳ ಮೂಲಕ ಬಹುವಾಗಿ ನಿರೀಕ್ಷಿಸುವ ದೈವತ್ವವನ್ನು ಪಡೆಯಲು ಪ್ರಯತ್ನಿಸುತ್ತಾ ಶಕ್ತಿಯನ್ನು ಪೋಲು ಮಾಡುವ ಬದಲು, 'ನಾನು ಯಾರು? ನನ್ನ ಸತ್ಯ ಸ್ವಭಾವ ಅಥವಾ ಅಸ್ತಿತ್ವ ಏನು?' ಎಂದು ಪರಿಶೋಧಿಸಿ ತನ್ನನ್ನು ತಾನು ಮೊದಲು ತಿಳಿದುಕೊಳ್ಳುವುದು ಹೆಚ್ಚು ಸುಲಭ, ಹೆಚ್ಚು ಮಹತ್ವದ್ದು ಮತ್ತು ಅತ್ಯುತ್ತಮವಾದುದು. ಓದುವ ಮೂಲಕ, ಕೇಳುವ ಮೂಲಕ, ಕಾಣ್ಕೆಗಳನ್ನು ಕಾಣುವ ಮೂಲಕ ದೇವರ ಬಗ್ಗೆ ಎಷ್ಟೇ ತಿಳಿದುಕೊಂಡಿದ್ದರೂ ತನ್ನ ಬಗ್ಗೆ ಸಂದೇಹ ಮುಕ್ತವಾದ ಜ್ಞಾನ ಪಡೆಯದ ಹೊರತು ಸಂದೇಹ–ಸಂಕಟಗಳು ಮತ್ತೆ ಮತ್ತೆ ಮೇಲೇಳುತ್ತಲೇ ಇರುತ್ತವೆ. ಏಕೆಂದರೆ ಅಲ್ಲೊಂದು 'ನಾನು' ಇದೆ. ನಾಲ್ಕು ಯೋಗಗಳನ್ನು ಪಾಲಿಸುವ 'ನಾನು' ಎಂಬುದೊಂದು ಪ್ರತ್ಯೇಕ ತತ್ವವಿದೆ ಎಂಬ ಪರಿಕಲ್ಪನೆಯನ್ನು ಒಪ್ಪಿಕೊಂಡ ಮೇಲಷ್ಟೇ ಶಾಸ್ತ್ರಗಳು ಅವುಗಳ ಬಗ್ಗೆ ಉಪದೇಶ ನೀಡಿದ್ದಾವೆ. ಆದರೆ **ಭಗವಾನ್ ಶ್ರೀ ರಮಣರು ಈ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲು ಬಿಡುವುದೇ ಇಲ್ಲ!** ಖಜಾನೆ ತೆರೆದು ನಿಮ್ಮ ಆಸ್ತಿಯನ್ನು ಕಂಡುಕೊಳ್ಳುವ ಮೊದಲೇ 'ನಾನೊಬ್ಬ ಬಿಡಿಗಾಸಿಲ್ಲದ ಭಿಕ್ಷುಕ' ಎಂದು ಘೋಷಿಸುತ್ತ ಅನವಶ್ಯಕವಾಗಿ ಗೋಳಾಡಲು ಪ್ರಾರಂಭಿಸಬೇಡಿ. ಮೊದಲು ಪೆಟ್ಟಿಗೆಯನ್ನು ತೆರೆಯ ಹೊರಡಿ, ನೋಡಿದ ನಂತರವಷ್ಟೇ ನೀವು ಅದರ ಬಗ್ಗೆ ಮಾತಾಡಬಲ್ಲಿರಿ. ಅಂತೆಯೇ, ನಿಮ್ಮನ್ನು ನೀವು ಶೋಧಿಸಿ ನೀವು ನಿಜಕ್ಕೂ ಯಾರೆಂದು ತಿಳಿಯುವ ಮೊದಲೇ ನೀವೊಬ್ಬ ಸೀಮಿತ, ಕ್ಷುಲ್ಲಕ ಜೀವಾತ್ಮ ಎಂದು ಅನವಶ್ಯಕವಾಗಿ ತಪ್ಪಾಗಿ ಗಣಿಸಬೇಡಿ. ಮೊದಲು ನಿಮ್ಮ ಬಗ್ಗೆ ಶೋಧಿಸಿ ತಿಳಿದುಕೊಳ್ಳಿ, ನಿಮ್ಮನ್ನು ನೀವು ತಿಳಿದ ನಂತರ, 'ನಿಮಗೆ ಏನಾದರೂ (ದೇವರು, ಮುಕ್ತಿ, ಆನಂದ, ಇತ್ಯಾದಿ) ಬೇಕಾಗಿದ್ದರೆ ಆಮೇಲೆ ನೋಡೋಣ' ಎನ್ನುತ್ತಾರೆ ಶ್ರೀ ಭಗವಾನರು!

'ನಾನು ದೇಹ' ಎಂಬ ಅರಿವೇ (ದೇಹಾತ್ಮ ಬುದ್ಧಿ) ಜೀವಾತ್ಮ. ಬೇರೆ ಶಬ್ದಗಳಲ್ಲಿ, ಜೀವದ ಸ್ವಭಾವವೇ 'ನಾನು ದೇಹ' ಎಂಬ ತಪ್ಪು ಜ್ಞಾನವೇ ಹೊರತು ಬೇರೇನಲ್ಲ.

"ಈ ಜಡ ದೇಹವು 'ನಾನು' ಎಂದು ಹೇಳಲಾಗದಿದ್ದರೂ (ಅಂದರೆ ಇದಕ್ಕೆ ನಾನೆಂಬ ಭಾವನೆ ಇರದಿದ್ದರೂ), ಇರುವು–ಅರಿವುಗಳಿಗೆ (ಸತ್–ಚಿತ್) ಉದಯ–ಅಸ್ತಗಳು ಇರದಿದ್ದರೂ, ಇವೆರಡರ ನಡುವೆ ನಮ್ಮ ದೇಹದ ಅಳತೆಯ ('ನಾನು ದೇಹ' ಎಂಬ ಗುರುತು) 'ನಾನು' ಎಂಬುದು ಏಳುತ್ತದೆ. ಅರಿವು–ಜಡಗಳ ನಡುವೆ ಇರುವುದು ಇದೊಂದೇ ಕಗ್ಗಂಟು (ಚಿತ್–ಜಡಗ್ರಂಥಿ), ಇದೇ ಬಂಧ, ಜೀವ, ಸೂಕ್ಷ್ಮ ಶರೀರ, ಅಹಂಕಾರ, ಈ ಲೌಕಿಕ ಸಂಸಾರ, ಈ ಮನಸ್ಸು, ಮುಂತಾದವು!" 'ಉಳ್ಳದು ನಾರ್ಪದು', (ಪದ್ಯ ೨೪)

ಈ 'ನಾನು ದೇಹ' ಎಂಬ ಅರಿವು ನಿದ್ದೆಯ ನಂತರ ಮೂಡುತ್ತದೆ, ಇರುತ್ತದೆ ಮತ್ತು ನಿದ್ದೆಯವರೆಗೆ ಸಕ್ರಿಯವಾಗಿದ್ದು ನಿದ್ದೆಯಲ್ಲಿ ಮುಳುಗುತ್ತದೆ. ದೇಹವು ಜಡವಾಗಿರುವುದರಿಂದ ಇದಕ್ಕೆ 'ನಾನು'–ಅರಿವು ಇರುವುದಿಲ್ಲ. ಹಾಗಾಗಿ 'ನಾನು ದೇಹ' ಎಂದು ಮೂಡುವ ಅರಿವು ದೇಹವಾಗಿರಲು ಸಾಧ್ಯವಿಲ್ಲ. ಹಾಗಾದರೆ 'ನಾನು' ಅರಿವಾದ್ದರಿಂದ ಇದನ್ನು ಆತ್ಮವೆನ್ನಬಹುದೇ? ಸಾಧ್ಯವಿಲ್ಲ. ಏಕೆಂದರೆ ಮೂಡುವುದು, ಮುಳುಗುವುದು ಆತ್ಮ ಸ್ವಭಾವವಲ್ಲ. ಉದಯಾಸ್ತಗಳಿಲ್ಲದೇ ಸದಾ ಕಾಲ 'ನಾನು ಇದ್ದೇನೆ' ಎಂದು ಹೊಳೆಯುತ್ತಿರುವ ಇರುವು–ಅರಿವು (ಸತ್–ಚಿತ್) ಆತ್ಮದ ಸ್ವಭಾವ. ಹೀಗೆ, 'ನಾನು ದೇಹ' ಎಂಬ ಅರಿವು ಉದಯಾಸ್ತಗಳಿರುವುದರಿಂದ ಆತ್ಮವೆಂದು ಕೂಡ ಹೇಳಲಾರೆವು. ಇದು ಇತ್ತ ಅರಿವಾದ ಆತ್ಮವೂ ಅಲ್ಲ, ಅತ್ತ ಜಡವಾದ ದೇಹವೂ ಅಲ್ಲ! ಇದು ದೆವ್ವದಂತೆ ಸುಳ್ಳು ತೋರಿಕೆ, ದೇಹದ ಅಳತೆಯನ್ನೇ ತನ್ನ ಅಳತೆಯಾಗಿ ತೆಗೆದುಕೊಳ್ಳುತ್ತದೆ. ಕಾಲ–ದೇಶಗಳಿಂದ ಸೀಮಿತವಾಗಿರುತ್ತದೆ. ದೇಹದ ಗುಣ (ಅಂದರೆ ಉದಯ ಅಸ್ತಗಳು) ಮತ್ತು ಆತ್ಮದ ಗುಣ (ಅಂದರೆ 'ನಾನು' ಅರಿವಾಗಿ ಹೊಳೆಯುವುದು) ಇವೆರಡರ ಮಿಶ್ರಣವಾಗಿದ್ದು ಎರಡಕ್ಕೂ ಅದೇ ವೇಳೆ ಪರಕೀಯವಾಗಿರುತ್ತದೆ. ಆತ್ಮ (ಚಿತ್) ಮತ್ತು ಜಡ ದೇಹಗಳ ನಡುವಿನ ಕಗ್ಗಂಟಾಗಿ ಮೂಡುತ್ತದೆ (ಚಿತ್–ಜಡ ಗ್ರಂಥಿ) ಇದೇ ಅಹಂಕಾರ. ಇದನ್ನೇ ಬಂಧನ, ಅಂತರಾತ್ಮ, ಸೂಕ್ಷ್ಮ ಶರೀರ, ಸಂಸಾರ (ಲೌಕಿಕ ಚಟುವಟಿಕೆಯ ಸ್ಥಿತಿ), ಮನಸ್ಸು ಮುಂತಾಗಿ ಕರೆಯುತ್ತಾರೆ.

"ರೂಪವಿಲ್ಲದ, ದೆವ್ವದಂತಹ ಈ ಅಹಂಕಾರವು (ಇದಕ್ಕೆ ತನ್ನದೇ ಆದ ರೂಪವಿಲ್ಲ) ಒಂದು ದೇಹ ರೂಪ ಹಿಡಿದುಕೊಂಡು ಅಸ್ತಿತ್ವಕ್ಕೆ ಬರುತ್ತದೆ! ಒಂದು ರೂಪ ಹಿಡಿದುಕೊಂಡು ಮುಂದುವರೆಯುತ್ತದೆ, ರೂಪಗಳನ್ನು ಆಹಾರವಾಗಿ ಸೇವಿಸುತ್ತಾ ಹಿಗ್ಗುತ್ತದೆ. ಒಂದು ರೂಪವನ್ನು ಬಿಟ್ಟು, ಇನ್ನೊಂದು ರೂಪವನ್ನು ಹಿಡಿದುಕೊಳ್ಳುತ್ತದೆ. ಹುಡುಕಿದಾಗ ಇದು ಓಡಿ ಹೋಗುತ್ತದೆ. ಎಂತಹ ಅಚ್ಚರಿ! ಹೀಗೆ ಇದನ್ನು ತಿಳಿದುಕೊಳ್ಳಬೇಕು".

'ಉಳ್ಳದು ನಾರ್ಪದು', (ಪದ್ಯ ೨೫)

"ಒಂದು ರೂಪ (ದೇಹ)ವನ್ನು 'ನಾ'ನೆಂದು ಗುರುತಿಸಿಕೊಂಡು ಮಾತ್ರ ಈ ಅಹಂಕಾರವು ಅಸ್ತಿತ್ವಕ್ಕೆ ಬರುತ್ತದೆ. ಆ ರೂಪಕ್ಕೆ ಅಂಟಿಕೊಂಡು ಮಾತ್ರ ಇದು ಇರಬಲ್ಲದು.

ಪಂಚೇಂದ್ರಿಯಗಳ ಮೂಲಕ ಆಹಾರ ಪಡೆದು ಜೀವಿಸುತ್ತ ರೂಪಗಳನ್ನು ತಳೆದು ಹೆಚ್ಚು ಹೆಚ್ಚು ಹಿಗ್ಗುತ್ತದೆ. 'ನಾನು' ಎಂದು ಗುರುತಿಸಿಕೊಂಡ ಒಂದು ರೂಪವನ್ನು ಬಿಟ್ಟು ಇನ್ನೊಂದು ರೂಪವನ್ನು ಹಿಡಿದುಕೊಂಡು 'ನಾನು' ಎಂದು ಗುರುತಿಸಿಕೊಳ್ಳುತ್ತದೆ! 'ಇದು ಏನು?' ಅಥವಾ 'ನಾನು ಯಾರು?' ಎಂದು ಹುಡುಕಿದಾಗ ಮಾತ್ರ ಅಸ್ತಿತ್ವ ಕಳೆದುಕೊಂಡು ಮಾಯವಾಗುತ್ತದೆ. 'ನಾನು ದೇಹ' ಎಂಬ ರೂಪ ತಳೆದು ಮೂಡುವ ಈ ಅಹಂಕಾರಕ್ಕೆ ರೂಪವಿಲ್ಲ, ಇದು ಕಾಲ್ಪನಿಕ, ಟೊಳ್ಳಾದ ದೆವ್ವದಂತಹ ತೋರಿಕೆ, ಇದಕ್ಕೆ ನಿಜವಾದ ಅಸ್ತಿತ್ವವೇ ಇಲ್ಲ" ಎನ್ನುತ್ತಾರೆ ಭಗವಾನ್ ಶ್ರೀ ರಮಣರು.

"ಇಲ್ಲದ್ದನ್ನು ಇದೆ ಎಂದು ಭಾವಿಸಿಕೊಂಡು, ಆ ಕಾಲ್ಪನಿಕ 'ನಾನು'ವಿಗೆ ಮುಕ್ತಿ ಬಯಸುತ್ತ ಮೇಲೆ ಹೇಳಿದ ನಾಲ್ಕು ಯೋಗಮಾರ್ಗಗಳ ಮೂಲಕ ಹಾಗೆ ಮಾಡಲು ಪ್ರಾರಂಭಿಸಿ ಪ್ರಯತ್ನಿಸಬೇಕಾಗುತ್ತದೆ. ಇಲ್ಲದ ಅಹಂಕಾರಕ್ಕೆ ನಿಮ್ಮ ಸಾಧನೆಗಳೇ ಜೀವ ತುಂಬುತ್ತಿರುವಾಗ ಅದನ್ನು ಅವು ನಾಶ ಪಡಿಸುವುದಾರೂ ಹೇಗೆ? ಆತ್ಮ ವಿಚಾರವನ್ನು ಹೊರತು ಪಡಿಸಿ ಯಾವುದೇ ಸಾಧನೆಯನ್ನು ಮಾಡಲು ಮನಸ್ಸು (ಜೀವ) ಅತ್ಯಾವಶ್ಯಕವಾಗಿದೆ. ಮನಸ್ಸೇ ಇಲ್ಲದೆ ಈ ಸಾಧನೆಗಳನ್ನು ಮಾಡುವುದಾದರೂ ಹೇಗೆ? ಆತ್ಮ ಶೋಧವನ್ನು ಹೊರತು ಪಡಿಸಿ ಬೇರೆ ಸಾಧನೆಗಳಿಂದ ಅಹಂಕಾರವನ್ನು ನಾಶಪಡಿಸಲು ಯತ್ನಿಸುವುದೆಂದರೆ ಕಳ್ಳನು ತಾನೇ ಪೊಲೀಸನಾಗಿ ತಾನೇ ಆಗಿರುವ ಕಳ್ಳನನ್ನು ಹಿಡಿಯಲೆತ್ನಿಸಿದಂತೆ. ಅಹಂಕಾರ (ಮನಸ್ಸು ಅಥವಾ ಜೀವ)ಕ್ಕೆ ಯಾವುದೇ ಅಸ್ತಿತ್ವವಿಲ್ಲ ಎಂಬ ಸತ್ಯವನ್ನು ಆತ್ಮಶೋಧವೊಂದೇ ತೋರಿಸಬಲ್ಲದು. ಆದ್ದರಿಂದ ಪರಿಶೋಧನೆಯಿಂದ ನೀವಿನ್ನೂ ಕಂಡುಕೊಳ್ಳದ ಅಹಂಕಾರವೆಂಬ ಸತ್ಯವನ್ನು ಒಪ್ಪಿಕೊಳ್ಳಲೇಬೇಡಿ; ಅದರ ಅಸ್ತಿತ್ವಕ್ಕೆ ಯಾವ ಮಹತ್ವವನ್ನೂ ಕೊಡದೇ ನಿರಾಕರಿಸಿ; ಬೇರು ಸಹಿತ ಕಿತ್ತು ಹಾಕಿ; ಇದು ಹೇಗೆ, ಎಲ್ಲಿಂದ ಮೂಡುತ್ತದೆ ಎಂದು ಗಮನಿಸಿ ನಿರ್ನಾಮವಾಗುವಂತೆ ಸುಟ್ಟು ಬಿಡಿ. ಅದರ ಬದಲು, ಇದು ಏನು ಎಂದು ವಿಚಾರಿಸಿ ಕಂಡುಕೊಳ್ಳುವ ಮೊದಲು (ಅಂದರೆ 'ನಾನು ಯಾರು' ಎಂದು ಕಂಡುಕೊಳ್ಳುವ ಮೊದಲು) ಇದನ್ನು ಒಪ್ಪಿಕೊಂಡರೆ ಇದೇ ಒಂದು ಸಂಕೋಲೆಯಾಗುತ್ತದೆ, ಇಲ್ಲದ ಅಡೆತಡೆಗಳನ್ನು (ಕಾಮ, ಕ್ರೋಧ, ಇತ್ಯಾದಿ) ಸೃಷ್ಟಿಸುತ್ತದೆ ಮತ್ತು ಅವುಗಳನ್ನು ನಿವಾರಿಸಲು ಹಿಂದೆ ಹೇಳಿದ ಅನಾವಶ್ಯಕ ಪ್ರಯತ್ನಗಳಲ್ಲಿ ತೊಡಗಿಸುತ್ತದೆ"–ಹೀಗೆ ಹೇಳುತ್ತಾರೆ ಶ್ರೀಭಗವಾನರು.[೩೧]

ಆತ್ಮವಲ್ಲದ್ದನ್ನು ಆತ್ಮ ಎಂದು ನೀವು ಮೊದಲು ಒಪ್ಪಿಕೊಂಡಾಗ ಮಾತ್ರ ನಿಜವಾದ ಇನ್ನೊಂದರ ಜೊತೆ ಒಂದಾಗಲು ಯೋಗ ಪ್ರಯತ್ನಗಳ ಅವಶ್ಯಕತೆ ಉಂಟಾಗುತ್ತದೆ. ಪರಿಶೋಧನೆಗಿಂತ ಮೊದಲೇ ಈ ರೀತಿ ತಪ್ಪಾಗಿ ಒಪ್ಪಿಕೊಳ್ಳುವುದು ತಾನೇ ಅಜ್ಞಾನವಾಗಿದೆ! ಅದೇ ಬಂಧನವಾಗಿದೆ! ಸತ್ಯ ಸರಿಯಾಗಿ ತಿಳಿಯದ್ದನ್ನು–ಇಲ್ಲದೇ ಇರುವ ಬಂಧನವನ್ನು– ಒಪ್ಪಿಕೊಂಡು, ಅದರಿಂದ ಉಂಟಾದ ಸಂಕಟಗಳನ್ನು ನಿವಾರಿಸಲು ಹೆಣಗಾಡುವ ಬದಲು, 'ಇದು ಇದೆಯೇ? ಇದು ಏನು? ನಾನು ಯಾರು, ಅದೇ?' ಎಂದ ಶೋಧಿಸಿ ಕಂಡುಕೊಳ್ಳುವುದು ಹೆಚ್ಚು ಜಾಣತನವಲ್ಲವೇ, ಹೆಚ್ಚು ಔಚಿತ್ಯಪೂರ್ಣವಲ್ಲವೇ?

---

೩೧. ನೋಡಿ 'ಮಹರ್ಷೀಸ್ ಗಾಸ್ಪೆಲ್, ಪುಸ್ತಕ ಎರಡರ 'ಸೆಲ್ಫ್ ಎನ್‌ಕ್ವಯರಿ' ಎಂಬ ಇಡೀ ಮೊದಲ ಅಧ್ಯಾಯ.

"ಈ ದೋಷವಿರುವುದು ಯಾರಿಗೆ ಎಂದು ಶೋಧಿಸಿ. ಕರ್ಮಗಳು[೩೨], ವಿಭಕ್ತಿ (ಭಕ್ತಿಹೀನತೆ), ವಿಯೋಗ (ಮಿಲನರಾಹಿತ್ಯ) ಮತ್ತು ಅಜ್ಞಾನ–ಇವೇ ಕರ್ಮ[೩೩], ಭಕ್ತಿ, ಯೋಗ ಮತ್ತು ಜ್ಞಾನ. ಹಾಗೆ ಶೋಧಿಸಿದಾಗ 'ನಾನು' ಎಂಬುದು ಇಲ್ಲವೆಂದು ತಿಳಿದು ಬರುತ್ತದೆ. ಆದ್ದರಿಂದ ಈ ದೋಷಗಳೂ ಕೂಡ ಎಂದೂ ಇರಲಿಲ್ಲವೆಂದು ತಿಳಿದು ಬರುತ್ತದೆ. ನಾವು ಎಂದೆಂದಿಗೂ ದೋಷರಹಿತವಾದ ಆತ್ಮವೆಂಬ ಸತ್ಯ ಪ್ರಕಟವಾಗುತ್ತದೆ!".
ಉಳ್ಳದು ನಾರ್ಪದು–ಅನುಬಂಧಮ್ (ಪದ್ಯ ೧೪).

ನಿಷ್ಕಾಮ್ಯ ಕರ್ಮಗಳನ್ನು ಮಾಡದಿರುವುದು, ದೇವರನ್ನು ಪ್ರೀತಿಸದಿರುವುದು (ವಿಭಕ್ತಿ), ದೇವರಿಂದ ಪ್ರತ್ಯೇಕವಾಗಿರುವುದು (ವಿಯೋಗ) ಮತ್ತು ದೇವರನ್ನು ತಿಳಿಯದಿರುವುದು (ಅಜ್ಞಾನ)–ಈ ನಾಲ್ಕು ದೋಷಗಳಿರುವುದು ಯಾರಿಗೆ ಎಂದು ಕೇಳಿದಾಗ 'ನನಗೆ' ಎಂಬ ಉತ್ತರ ಬರುತ್ತದೆ. ಆಗ 'ಈ ನಾನು ಯಾರು?' ಎಂದು ಶೋಧಿಸಿದರೆ ಅದೇ ಈ ನಾಲ್ಕು ಯೋಗಗಳನ್ನು ನಿಜವಾಗಿ ಅಭ್ಯಾಸ ಮಾಡಿದಂತೆ: ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ. ಏಕೆಂದರೆ ತಾನು ಯಾರೆಂದು ಶೋಧಿಸಿದರೆ ಈ ದೋಷಸಹಿತ 'ನಾನು' ಇಲ್ಲವೆಂದು ತಿಳಿದು ಬರುತ್ತದೆ. ಈ 'ನಾನೇ' ಇಲ್ಲವಾದಾಗ ನಾಲ್ಕು ದೋಷಗಳೂ ಎಂದೂ ಇರಲಿಲ್ಲವೆಂದು ತಿಳಿದು ಬರುತ್ತದೆ. ನಾವು ಸದಾ ಕಾಲ ಪ್ರಕಾಶಿಸುವ ದೋಷರಹಿತ ಆತ್ಮ ಮಾತ್ರ ಎಂದು ನಿಜವಾದ ಅನುಭವವಾಗುತ್ತದೆ.

'ನಾನು ಯಾರು?' ಎಂಬ ಶೋಧದಿಂದ ಈ ಸ್ಥಿತಿಯನ್ನು ತಲುಪಿದಾಗ ನಾಲ್ಕು ಯೋಗಸಾಧನೆಗಳನ್ನು ಅಭ್ಯಾಸ ಮಾಡಲು ಉಳಿಯುವುದಾದರೂ ಯಾರು, ಮತ್ತು ಅವನ್ನು ಏಕೆ ಮಾಡಬೇಕು? ಆದ್ದರಿಂದ 'ನಾನು ಯಾರು?' ಎಂಬ ಶೋಧವೇ ಎಲ್ಲ ಯೋಗಗಳ ತಿರುಳು. ಇದು ಮಹಾಯೋಗ[೩೪], ಎಲ್ಲ ಯೋಗಗಳಲ್ಲಿ ಶ್ರೇಷ್ಠವಾದುದು.

ಆತ್ಮವನ್ನು, ನಿಜವಾದ ಅಸ್ತಿತ್ವ ಸ್ಥಿತಿಯನ್ನು (ಸತ್ ಭಾವವನ್ನು) ನಮ್ಮ ಮೂಲಜ್ಞಾನವಾಗಿ ಗ್ರಹಿಸಿ ಭಗವಾನ್ ಶ್ರೀ ರಮಣರು 'ನಾನು ಯಾರು?' ಎಂಬ ಉಪದೇಶವನ್ನು ಪ್ರಾರಂಭಿಸುತ್ತಾರೆ. ಆದ್ದರಿಂದ ಇಲ್ಲದಿರುವ ಅಹಂಕಾರವನ್ನು ಜೀವಭಾವನ್ನು ಒಪ್ಪಿಕೊಳ್ಳಲು ಅವರು ನಮಗೆ ಬಿಡುವುದೇ ಇಲ್ಲ. ಆದರೆ ಇತರ ಮಾರ್ಗಗಳಲ್ಲಿ ಅಂದರೆ ಯೋಗಗಳಲ್ಲಿ, ಪರಿಶೋಧನೆಗೆ ಮೊದಲೇ ಒಪ್ಪಿಕೊಂಡ ಸುಳ್ಳು ಅಸ್ತಿತ್ವವಾದ ಜೀವಭಾವವನ್ನು

---

೩೨. ಕರ್ಮಗಳು: ಎಂದರೆ ಇಲ್ಲಿ ಕಾಮ್ಯ ಕರ್ಮಗಳು (ಅಂದರೆ ಕರ್ತೃತ್ವ ಭಾವದಿಂದ ಮಾಡಲಾದ ಕ್ರಿಯೆಗಳು).

೩೩. ಕರ್ಮ: ಎಂದರೆ ಇಲ್ಲಿ ನಿಷ್ಕಾಮ್ಯ ಕರ್ಮ (ಅಂದರೆ ಕರ್ತೃತ್ವ ಭಾವವಿಲ್ಲದೇ ಮಾಡಲಾದ ಕ್ರಿಯೆ).

ಕ್ರಿಯೆಯನ್ನು ಮಾಡುವಾಗ ಕರ್ತೃತ್ವ ಭಾವ ಇರುವವರಿಗೆ ನಿಷ್ಕಾಮ್ಯ ಕರ್ಮವನ್ನು ಮಾಡಲು ಸಾಧ್ಯವಿಲ್ಲ ಎಂದು ಶ್ರೀ ಭಗವಾನರು ಹೇಳುತ್ತಿದ್ದರು. ಕ್ರಿಯೆಯ ಫಲವನ್ನು ಬಯಸಲಿ, ಬಯಸದೇ ಇರಲಿ ಕರ್ತೃವಾಗಿ ಉಳಿಯುವುದರಿಂದ ಅದು ಫಲವನ್ನು ಕೊಟ್ಟೇ ಕೊಡುತ್ತದೆ. ಆದ್ದರಿಂದ ನಿಷ್ಕಾಮ್ಯ ಕರ್ಮ ಎನ್ನುವ ಬದಲು ಇದನ್ನು ನಿಷ್ಕರ್ತೃತ್ವ ಕರ್ಮ ಎಂದು ಸರಿಪಡಿಸಬೇಕು. ಹೀಗೆ ಕರ್ಮ ಮಾಡುವುದರ ನಿಜವಾದ ದೋಷವೆಂದರೆ ಕರ್ತೃತ್ವ ಭಾವವೇ ಹೊರತು ಫಲದ ನಿರೀಕ್ಷೆಯಲ್ಲ.

೩೪. ಆತ್ಮಶೋಧವು ಯೋಗವಲ್ಲದಿದ್ದರೂ ಇದನ್ನು ಮಹಾಯೋಗವೆಂದು ಕರೆಯಲಾಗಿದೆ. ಏಕೆಂದರೆ ಯೋಗವು ಎಂದೂ ಇರಲಿಲ್ಲವೆಂಬ ಜ್ಞಾನವನ್ನು ಇದು ತೋರಿಸುತ್ತದೆ. ಆದರೂ, ಮಹಾಯೋಗವೆಂಬ ಶಬ್ದಕ್ಕೆ ಸರಿಪಡಿಸಬೇಕಾದ ಮಹಾಯೋಗವೊಂದಿದೆ ಎಂದು ಇದು ಸೂಚಿಸುವುದೆಂದು ಅರ್ಥೈಸಬಾರದು.

ಮೂಲಜ್ಞಾನವಾಗಿ ಗ್ರಹಿಸಿ ಸಲಹೆಗಳನ್ನು ಕೊಡಲಾಗುತ್ತದೆ[೩೫]. ಇದಕ್ಕಾಗಿಯೇ ಶಾಸ್ತ್ರಗಳಲ್ಲಿ ಈ ಪ್ರಕ್ರಿಯೆಯನ್ನು 'ಮಿಲನ' ಅಥವಾ 'ಯೋಗ'ವೆಂದು ಕರೆಯುತ್ತಾರೆ. ಹೀಗಾದರೆ ಕೆಲವರು ಸಂದೇಹಿಸಬಹುದು: "ಎಲ್ಲ ವೇದಾಂತ ಶಾಸ್ತ್ರಗಳು ತಪ್ಪೇ? ಅವು ಆಕಾಂಕ್ಷಿಗಳನ್ನು ವಂಚಿಸಿವೆಯೇ? ಶಾಸ್ತ್ರ ಹೇಳಿಕೆಗಳು ಸುಳ್ಳಾಗಬಹುದೇ? ಭಗವಾನ್ ಶ್ರೀ ರಮಣರು ಶಾಸ್ತ್ರಗಳನ್ನು ತುಚ್ಛೀಕರಿಸಿದ್ದಾರೆಂಬ ನಿರ್ಣಯಕ್ಕೆ ನಾವು ಬರಬೇಕೇ?"

ಇಲ್ಲ, ಹಾಗಲ್ಲ. **ಶಾಸ್ತ್ರಗಳು ಸುಳ್ಳು ಹೇಳುವುದೂ ಇಲ್ಲ, ಭಗವಾನ್ ಶ್ರೀ ರಮಣರು ಶಾಸ್ತ್ರಗಳನ್ನು ತುಚ್ಛೀಕರಿಸುವುದೂ ಇಲ್ಲ**. ವಸ್ತು ಸ್ಥಿತಿಯ ವಿಷಯವೆಂದರೆ ಶಾಸ್ತ್ರಗಳ ಜೀವಾಳವಾಗಿರುವ ಕೇವಲ (ಪಾರಮಾರ್ಥಿಕ) ಸತ್ಯವನ್ನು ಬರೀ ಪುಸ್ತಕದ ಹುಳಗಳು ತಪ್ಪು ವಿವರಣೆಗಳಿಂದ ಕಾಲಗತಿಯಲ್ಲಿ ಜೀವರಹಿತವಾಗಿ ಪ್ರಸ್ತುತ ಪಡಿಸಿದ್ದಾರೆ. ಅವರಿಗೆ ಭಾಷೆಯ ಮೇಲೆ ಪ್ರಭುತ್ವವಿದೆ, ಆದರೆ ಶಾಸ್ತ್ರಗಳ ನಿಜವಾದ ಸಂದೇಶವನ್ನು ಅವರು ಅರಿತಿಲ್ಲ. **ಜ್ಞಾನಿಗಳ ಹೊರತಾಗಿ ಯಾರೂ ಶಾಸ್ತ್ರಗಳ ನಿಜವಾದ ಸಂದೇಶವನ್ನು ಕಲಿಯಲಾರರು. ಅವರೇ ನಿಜವಾದ ನೇರ ಅನುಭವ ಹೊಂದಿ ಅದನ್ನು ಬದುಕುವವರು. ಕೇವಲ ಭಾಷಾ ಪರಿಣತಿಯಿಂದ ಮತ್ತು ಬುದ್ಧಿಯ ಚುರುಕುತನ, ಮೇಲ್ಮೆಗಳಿಂದ ಯಾರೂ ಶಾಸ್ತ್ರಗಳ ಹಿಂದಿರುವ ನಿಜವಾದ ಸತ್ವವನ್ನು (spirit) ಅರಿಯಲು ಸಾಧ್ಯವಿಲ್ಲ**. ಈ ಅಂಶವನ್ನು ಎರಡು ಉದಾಹರಣೆಗಳಿಂದ ಸ್ಪಷ್ಟ ಪಡಿಸೋಣ.

ಮೊದಲನೆಯದಾಗಿ, 'ಅದು ನೀನೇ ಆಗಿದ್ದೀಯ' (ತತ್ ತ್ವಂ ಅಸಿ) ಎಂಬ ಮಹಾವಾಕ್ಯವನ್ನು ತೆಗೆದುಕೊಳ್ಳೋಣ. ಈ ದಿವ್ಯವಾದ ಮಹತ್ವಪೂರ್ಣ ಶಬ್ದಗಳನ್ನು ಕೇಳಿದ ಕೂಡಲೇ ಮುಮುಕ್ಷುವು ಏನು ಮಾಡಬೇಕೆಂಬುದರ ಬಗ್ಗೆ ಶ್ರೀ ಭಗವಾನರ ನಿರ್ಣಯಕ್ಕೂ, ವಿದ್ವತ್ಪೂರ್ಣ ಪಂಡಿತರದಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಶಾಸ್ತ್ರಗಳಲ್ಲಿ ಪರಿಣತಿಯನ್ನು ಹೊಂದಿ ಸಾಮಾನ್ಯರಿಗೆ ವಿಶಿಷ್ಟ ವ್ಯಾಖ್ಯಾನದ ಉಪನ್ಯಾಸ ಮಾಡುವ ಈ ಪಂಡಿತರು 'ಅದು ನೀನೇ ಆಗಿದ್ದೀಯ' (ತತ್ ತ್ವಂ ಅಸಿ), 'ನಾನು ಬ್ರಹ್ಮ' (ಅಹಂ ಬ್ರಹ್ಮಾಸ್ಮಿ), 'ಅವನೇ ನಾನು' (ಸೋಽಹಂ) ಮುಂತಾದ ಮಹಾವಾಕ್ಯಗಳನ್ನು ಜಪ ಮಾಡಲು (ಪುನರಾವರ್ತಿಸಲು) ಅಥವಾ 'ನಾನು ಬ್ರಹ್ಮ' ಎಂದು ಧ್ಯಾನ ಮಾಡಲು ತಿಳಿಸುತ್ತಾರೆ. 'ನಾನೊಬ್ಬ ಮನುಷ್ಯ ಅಥವಾ ಜೀವ' ಎಂಬ ಮೊದಲಿದ್ದ ವಿಚಾರದ ಬದಲು 'ನಾನು ಬ್ರಹ್ಮ' ಎಂಬ ಇನ್ನೊಂದು ವಿಚಾರ ಅವರಿಗಿದೆ. ಇದು ಒಂದರ ಬದಲು ಇನ್ನೊಂದು ವಿಚಾರ ಕೊಟ್ಟಂತೆಯೇ ಹೊರತು ಬೇರೆ ಏನಲ್ಲ! ಇದು ಆತ್ಮನಿಷ್ಠೆಯ ವಿಚಾರಮುಕ್ತ ಸ್ಥಿತಿಯಲ್ಲ. ಮಹಾವಾಕ್ಯಗಳನ್ನು ಕೇಳಿದಾಗ ಏನು ಮಾಡಬೇಕೆಂಬ ಸರಿಯಾದ ಅಭ್ಯಾಸವಿಲ್ಲದೇ ಅವುಗಳ ಜಪ ಅಥವಾ ಧ್ಯಾನ ಮಾಡಲಾಗುತ್ತದೆ. ಇಂತಹ ತಪ್ಪು ಅಭ್ಯಾಸಗಳನ್ನು ವರ್ಷಗಟ್ಟಲೆ ಮಾಡಿದರೂ ಕೂಡ ಸತ್ಯಜ್ಞಾನದ ಅನುಭವವನ್ನು ಕೊಡಲಾರವು ಎಂಬ ಪೂರ್ಣ ಅರಿವಿರುವ ಶ್ರೀ ಭಗವಾನರು ಮುಮುಕ್ಷುವಿಗೆ ಸರಿ ದಾರಿ ತೋರುತ್ತ ಹೀಗೆ ಉಪದೇಶಿಸುತ್ತಾರೆ: "ಪರಮವೆಂದು ಕರೆಯಲಾಗಿರುವ ಅದು ನೀನೇ ಆಗಿದ್ದೀಯ ಎಂದು ಶಾಸ್ತ್ರಗಳು ಘೋಷಿಸುವುದರಿಂದ ಮತ್ತು ಅದೇ ಆತ್ಮವಾಗಿ

---

೩೫. ಪುಟ ೨೦, ೨೧ ರಲ್ಲಿ ಹುಡುಗ ಮತ್ತು ದೆವ್ವದ ಕತೆಯನ್ನು ನೋಡಿ.

ಸದಾಕಾಲ ಪ್ರಕಾಶಿಸುವುದರಿಂದ, 'ನಾನು ಯಾರು?' ಎಂದು ಶೋಧಿಸುತ್ತ ಆತ್ಮ ನಿಷ್ಠೆಯಿಂದ ತನ್ನನ್ನು ತಾನು ತಿಳಿಯುವ ಬದಲು 'ಅದು ನಾನು, ಇದಲ್ಲ (ದೇಹ, ಮುಂತಾಗಿ) ಎಂದು ಧ್ಯಾನಿಸುವುದು (ಮನೋ) ಬಲದ ಕೊರತೆಯಿಂದಲೇ ಸರಿ!"

'ಉಳ್ಳದು ನಾರ್ಪದು', ಪದ್ಯ ೩೨

'ಅದು ನೀನೇ ಆಗಿದ್ದೀಯ' ಎಂದು ಶಾಸ್ತ್ರಗಳು ಘೋಷಿಸಿದ ಕೂಡಲೇ 'ನಾನು ಏನು? ನಾನು ಯಾರು?' ಎಂದು ಆತ್ಮಮುಖಿಯಾಗಿ ವಿಚಾರಿಸುವುದೇ ಮುಮುಕ್ಷುವಿನ ತಕ್ಷಣದ ಪ್ರತಿಕ್ರಿಯೆಯಾಗಿರಬೇಕು; 'ನಾನು ಈ ದೇಹವಲ್ಲ, ನಾನು ಆ ಬ್ರಹ್ಮ' ಎಂದು ಧ್ಯಾನ ಮಾಡಬೇಕೆಂಬುದು ಅದರರ್ಥವಲ್ಲ. 'ಅದು ನೀನೇ ಆಗಿದ್ದೀಯ' ಎಂದು ಶಾಸ್ತ್ರಗಳು ಹೇಳುವ ಉದ್ದೇಶ ಮುಮುಕ್ಷುವಿಗೆ 'ನಾನು ಯಾರು?' ಎಂದು ಆತ್ಮವಿಚಾರದತ್ತ ಗಮನ ಹರಿಸಬೇಕೆಂಬುದೇ ಆಗಿದೆ. ಅದರ ಬದಲು, 'ನಾನು ಅದು', 'ಅವನೇ ನಾನು', 'ನಾನು ಬ್ರಹ್ಮ' ಎಂಬ ಮಹಾವಾಕ್ಯಗಳನ್ನು ಜಪ ಮತ್ತು ಧ್ಯಾನವಾಗಿಸುವುದರಿಂದ ಶಾಸ್ತ್ರಗಳ ಮೂಲ ಉದ್ದೇಶವೇ ಸೋತಂತಾಗುತ್ತದೆ, ಅಷ್ಟೇ ಅಲ್ಲ, ಶಾಸ್ತ್ರಗಳಿಂದ ಮುಮುಕ್ಷುವಿಗೆ ಸಿಗಬೇಕಾದ ಸರಿಯಾದ ಪ್ರಯೋಜನವನ್ನು ಅವನು ಕಳೆದುಕೊಳ್ಳುವಂತಾಗುತ್ತದೆ, ಅಲ್ಲವೇ? ಶ್ರೀ ಭಗವಾನರು ಮುಮುಕ್ಷುವನ್ನು ನೇರವಾಗಿ ಆತ್ಮವಿಚಾರದತ್ತ ಕೊಂಡೊಯ್ಯುವುದರಿಂದ ಅವರು ಶಾಸ್ತ್ರಗಳ ಲಕ್ಷ್ಯವನ್ನು ಪೂರ್ಣಗೊಳಿಸಿದಂತಾಗುವುದಿಲ್ಲವೇ? ಅವುಗಳನ್ನು ಪುನರುಜ್ಜೀವಿಸಿದಂತಾಗುವುದಿಲ್ಲವೇ? ಹೀಗಿರುವಾಗ, ಅವರು ಅವುಗಳನ್ನು ವಿರೋಧಿಸುತ್ತಿದ್ದಾರೆ ಎಂದು ಹೇಳಬಹುದೇ? ಖಂಡಿತಾ ಅದು ಸಾಧ್ಯವಿಲ್ಲ. ಈ ಅಂಶವನ್ನು ಉದಾಹರಿಸಲು ಒಂದು ಒಳ್ಳೆಯ ಕಥೆಯಿದೆ.

ಒಂದು ಸಂಜೆ ಸಣ್ಣ ಹುಡುಗನೊಬ್ಬ ತಂದೆಯೊಂದಿಗೆ ತಿರುಗಾಡಲು ಹೋಗುತ್ತಾನೆ, ಮಬ್ಬು ಕವಿದಾಗ ಎಲೆ-ಕೊಂಬೆಗಳನ್ನು ಕಡಿದ ಒಂದು ಮರದ ಕಾಂಡವನ್ನು ಕಾಣುತ್ತಾನೆ. ಅವನಿಗೆ ಹೆದರಿಕೆಯಾಗಿ ಕಿರುಚುತ್ತಾನೆ. "ಓ ಅಪ್ಪ! ಅಲ್ಲಿ, ನೋಡು, ದೆವ್ವ!" ಅದು ಬರೀ ಮರದ ಕಾಂಡವೆಂದು ಸತ್ಯವನ್ನು ತಿಳಿದಿದ್ದ ತಂದೆ ಹುಡುಗನಿಗೆ ಧೈರ್ಯ ನೀಡುತ್ತಾನೆ: "ಓ, ಆ ದೆವ್ವ! ಅದು ನಿನಗೆ ಯಾವ ತೊಂದರೆಯನ್ನು ಮಾಡಲಾರದು. ನಾನಿದ್ದೇನೆ, ಅದನ್ನು ನೋಡಿಕೊಳ್ಳುತ್ತೇನೆ, ಬಾ" ಎಂದು ಹೇಳುತ್ತ ಹುಡುಗನನ್ನು ದೂರ ಕರೆದೊಯ್ಯುತ್ತಾನೆ. ಉತ್ಸಾಹ ತುಂಬುವ ತಂದೆಯ ಶಬ್ದಗಳನ್ನು ಕೇಳಿದ ಹುಡುಗ 'ನನ್ನ ತಂದೆ ದೆವ್ವಕ್ಕಿಂತ ಬಲಶಾಲಿ, ಹಾಗಾಗಿ ಅದು ನನಗೆ ತೊಂದರೆ ಮಾಡಲಾರದು ಎಂದು ಹೇಳಿದ್ದಾನೆ' ಎಂದು ಅರ್ಥವೆಂದುಕೊಳ್ಳುತ್ತಾನೆ. ಯೋಗ ಮತ್ತು ವೇದಾಂತ ಶಾಸ್ತ್ರಗಳ ಬಗ್ಗೆ ಪಂಡಿತರ ತಿಳುವಳಿಕೆ ಆ ಹುಡುಗನ ನಿರ್ಣಯದಂತೆ ಇದೆ.

ಮರುದಿನ ಸಂಜೆ ಅದೇ ದಾರಿಯಲ್ಲಿ ಗುರುವಿನೊಂದಿಗೆ ತಿರುಗಾಡಲು ಹೋದಾಗ ಹುಡುಗ ಉದ್ಗರಿಸುತ್ತಾನೆ: "ಗುರುಗಳೇ, ನೋಡಿ! ಅಲ್ಲೊಂದು ದೆವ್ವವಿದೆ. ನಿನ್ನೆಯೂ ಅದನ್ನು ಕಂಡೆವು". ಗುರುವು ಅವನ ಅಜ್ಞಾನಕ್ಕೆ ಮರುಗಿ ಹೇಳುತ್ತಾನೆ: "ಅದು ದೆವ್ವವಲ್ಲ". ಹುಡುಗ ಹಟ ಹಿಡಿಯುತ್ತಾನೆ, 'ಇಲ್ಲ ಗುರುಗಳೇ, ನಿನ್ನೆ ನನ್ನ ತಂದೆಯೂ ಅದನ್ನು ಕಂಡರು; ಅದು ನನಗೆ ಯಾವ ತೊಂದರೆಯನ್ನು ಮಾಡದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು; ಆದರೆ ಗುರುಗಳೇ, ಅದು ದೆವ್ವವೇ ಅಲ್ಲವೆಂದು ಹೇಳುತ್ತಿದ್ದೀರಿ".

ಗುರು ಅಷ್ಟು ಸುಲಭವಾಗಿ ಮಣಿಯುವನೇ? ಅವನು ಹೇಳುತ್ತಾನೆ, "ಹತ್ತಿರ ಹೋಗಿ ನೀನೇ ನೋಡು; ಅದರ ಮೇಲೆ ಮಿಂಚು ಬೆಳಕು ಹರಿಸುತ್ತೇನೆ. ಅದು ದೆವ್ವವೇ ಆಗಿದ್ದರೆ ನಾನು ನೋಡಿಕೊಳ್ಳುತ್ತೇನೆ!"

ಶಾಸ್ತ್ರಗಳ ವಚನಗಳು ಈ ಕಥೆಯಲ್ಲಿ ತಂದೆಯ ಮಾತುಗಳಂತೆ. ಅದು ದೆವ್ವವಲ್ಲ ಎಂದು ತಂದೆಗೆ ಚೆನ್ನಾಗಿ ಗೊತ್ತಿತ್ತು. ಹಾಗೆಯೇ, ಈ ಶಾಸ್ತ್ರಗಳನ್ನು ಕೊಟ್ಟಂತಹ ಮಹಾನ್ ಋಷಿಗಳಿಗೆ ಅಹಂಕಾರ, ದೇಹ ಅಥವಾ ಜಗತ್ತು ಎಂಬುದು ಎಂದಿಗೂ ಅಸ್ತಿತ್ವದಲ್ಲಿ ಇರಲಿಲ್ಲ ಎಂಬ ಕೇವಲ (ಪಾರಮಾರ್ಥಿಕ) ಸತ್ಯವು ಚೆನ್ನಾಗಿ ತಿಳಿದಿತ್ತು. ಹುಡುಗನು ಹೆದರಿದ ಮನಸ್ಥಿತಿಯಲ್ಲಿ ಹತ್ತಿರಕ್ಕೆ ಹೋಗಿ ಪರೀಕ್ಷಿಸಲು ಇನ್ನೂ ಅಶಕ್ತನೆಂದು ತಿಳಿದ ತಂದೆಯು ಹುಡುಗನು ಕಲ್ಪಿಸಿದಂತೆ ಸುಳ್ಳು ದೆವ್ವದ ಅಸ್ತಿತ್ವವನ್ನು ಒಪ್ಪಿಕೊಂಡಂತೆ ಮಾತನಾಡಿದನು. ಹಾಗೆ ಮಾತನಾಡುವಾಗಲೂ ಆತ ಸುಳ್ಳು ಹೇಳುತ್ತಿರಲಿಲ್ಲ; ಮಗನ ಭಯವನ್ನು ಬೇಗ ಕಡಿಮೆ ಮಾಡಲು ಆತ ಹೇಳಿದ: "ದೆವ್ವವು ನಿನಗೆ ಯಾವ ತೊಂದರೆಯನ್ನೂ ಮಾಡಲಾರದು" ಎಂದು. ಅದು ನಿಜಕ್ಕೂ ಸತ್ಯವೇ ಆಗಿದೆ! ಆದಾಗ್ಯೂ ಮರುದಿನ ಗುರುವು ಅವನಿಗೆ ಹೇಳಿದ್ದು ಕೇವಲ (ಪಾರಮಾರ್ಥಿಕ) ಸತ್ಯವನ್ನೇ. ಇದು ದೆವ್ವವಲ್ಲ ಎಂಬ ಗುರುವಿನ ಹೇಳಿಕೆ ತಂದೆಯ ಹೇಳಿಕೆಗೆ ವಿರುದ್ಧವಿರುವಂತೆ ಅನಿಸಿದರೂ, ದೆವ್ವವು ತೊಂದರೆ ಮಾಡಲಾರದು, ಇದು ಮರದ ಕಾಂಡ, ನೀನೇ ಹೋಗಿ ನೋಡು ಎಂಬುದು ತಂದೆಯ ಹೇಳಿಕೆಯ ಉದ್ದೇಶವನ್ನೇ ಬಲವಾಗಿ ಸಮರ್ಥಿಸುತ್ತದೆ, ಅಲ್ಲವೇ? ಹೀಗೆ ತಂದೆಯ ಉದ್ದೇಶವನ್ನು ಪೂರ್ಣಗೊಳಿಸುವ ಮೂಲಕ ತಂದೆಯ ಉದ್ದೇಶಕ್ಕೆ ಹೊಸ ಜೀವ ಕೊಟ್ಟಂತಾಗಲಿಲ್ಲವೇ? ಹೀಗೆ ಅರ್ಥೈಸಿಕೊಳ್ಳದೇ, 'ನನ್ನ ಗುರು ತಂದೆಯನ್ನು ತುಚ್ಛೀಕರಿಸಿದ್ದಾನೆ ಅಥವಾ ನನ್ನ ತಂದೆ ಅಪ್ಪಟ ಸುಳ್ಳು ಹೇಳಿದ್ದಾನೆ' ಎಂಬ ನಿರ್ಣಯಕ್ಕೆ ಹುಡುಗ ಬಂದರೆ ಅದು ಪೂರ್ತಿ ತಪ್ಪಾಗುತ್ತದೆ. ಹಾಗೆಯೇ, **ಶ್ರೀ ಭಗವಾನರು ಶಾಸ್ತ್ರಗಳನ್ನು ತುಚ್ಛೀಕರಿಸಿಯೂ ಇಲ್ಲ, ಅವು ಸುಳ್ಳೆಂದು ತೋರಿಸಿಯೂ ಇಲ್ಲ, ಶಾಸ್ತ್ರಗಳಾದರೂ ಅಸತ್ಯವನ್ನು ಹೇಳಿಲ್ಲ**. ಶ್ರೀ ಭಗವಾನರ ಬಗ್ಗೆ ಇಂತಹ ತಪ್ಪು ನಿರ್ಣಯಕ್ಕೆ ಯಾವುದೇ ಓದುಗ ಬಂದರೆ ಅದು ನಮ್ಮ ಕಥೆಯಲ್ಲಿ ಹುಡುಗನು ಮಾಡಿದ ತಪ್ಪಿನಂತೆಯೇ ಆಗುತ್ತದೆ.

ಎರಡನೆಯದಾಗಿ, ತಮಿಳಿನಲ್ಲಿರುವ ಅದ್ವೈತದ ಪ್ರಮಾಣ ಗ್ರಂಥ (ಜ್ಞಾನ ಶಾಸ್ತ್ರ)ವಾದ 'ಕೈವಲ್ಯ ನವನೀತಂ'ದಲ್ಲಿ ಹೀಗೆ ಹೇಳಿದೆ: "ಜ್ಞಾನಿಯಾದವನಿಗೆ ಮುಂದಿನ ಜನ್ಮಗಳಲ್ಲಿ ಫಲ ಕೊಡಬೇಕಾದ ಹಿಂದಿನ ಸಂಗ್ರಹಿತ ಕರ್ಮಗಳು (ಸಂಚಿತ ಕರ್ಮ) ಜ್ಞಾನಾಗ್ನಿಯಲ್ಲಿ ಸುಟ್ಟು ಹೋಗುತ್ತವೆ; ಈ ಜನ್ಮದಲ್ಲಿ ಮಾಡಿದ ಕರ್ಮಗಳ ಒಳ್ಳೆಯ ಮತ್ತು ಕೆಟ್ಟ ಫಲಗಳನ್ನು (ಅಗಮ್ಯ ಕರ್ಮ) ಅವನನ್ನು ಹೊಗಳುವವರು ಮತ್ತು ತೆಗಳುವವರು ಕ್ರಮವಾಗಿ ಸ್ವೀಕರಿಸುವುದರಿಂದ ಶೂನ್ಯವಾಗುತ್ತವೆ (ಅವನಿಗೆ ವಿಚಾರ, ಮಾತು ಮತ್ತು ಕ್ರಿಯೆಗಳಿಂದ ಒಳಿತನ್ನು ಅಥವಾ ಕೆಡುಕನ್ನು ಮಾಡುವವರು); ಉಳಿಯುವ ಮೂರನೆಯ ಕರ್ಮವು ಮಾತ್ರ, ಈ ಜನ್ಮದಲ್ಲಿ ಫಲ ಕೊಡಬೇಕಾದ ಕರ್ಮಭಾಗವು ಮಾತ್ರ (ಪ್ರಾರಬ್ಧ ಕರ್ಮ) ದೇಹವಿರುವ ಅವಧಿಯವರೆಗೆ ಅವನಿಂದ ಅನುಭವಿಸಲ್ಪಡಬೇಕಾಗುತ್ತದೆ, ಅವನ ದೇಹದ ಸಾವಿನೊಂದಿಗೆ ಅದು ಕೊನೆಗೊಳ್ಳುತ್ತದೆ." ಆದರೆ ಶ್ರೀ ಭಗವಾನರು ತಮ್ಮ ತೀರ್ಪು ಕೊಡುತ್ತಾರೆ:

"ಜ್ಞಾನಿಗೆ ಸಂಚಿತ ಮತ್ತು ಆಗಮ್ಯಗಳು ಅಂಟುವುದಿಲ್ಲ. ಆದರೆ ಪ್ರಾರಬ್ಧವು ಮಾತ್ರ (ಅವನಿಂದ ಅನುಭವಿಸಲ್ಪಡಲು) ಉಳಿಯುತ್ತದೆ ಎಂದು ಹೇಳುವುದು ಇತರರ ಪ್ರಶ್ನೆಗಳಿಗೆ ಕೊಡುವ (ಮೇಲ್ನೋಟದ) ಉತ್ತರ ಮಾತ್ರವಾಗಿದೆ. ಪತಿಯು ತೀರಿಕೊಂಡಾಗ ಯಾವುದೇ ಪತ್ನಿಯು ವಿಧವೆಯಾಗದೇ ಉಳಿಯುವುದಿಲ್ಲ, ಹಾಗೆಯೇ ಕರ್ತೃವು (ಅಹಂಕಾರ) ಗತಿಸಿದಾಗ ಎಲ್ಲ ಮೂರು ಕರ್ಮಗಳು ನಿರ್ನಾಮವಾಗುತ್ತವೆ. ಹೀಗೆ ತಿಳಿದುಕೊಳ್ಳಬೇಕು!"

'ಉಳ್ಳದು ನಾರ್ಪದು–ಅನುಬಂಧಮ್' (ಪದ್ಯ ೩೩)

ಶ್ರೀ ಭಗವಾನರು ತೋರಿಸುವುದು ಏನೆಂದರೆ ಜ್ಞಾನಿಗೆ ಪ್ರಾರಬ್ಧ ಉಳಿಯುತ್ತದೆ ಎಂದು ಜ್ಞಾನ ಶಾಸ್ತ್ರಗಳು ಹೇಳುವುದು ಇತರರ ಪ್ರಶ್ನೆಗಳಿಗೆ ಕೊಟ್ಟ ಉತ್ತರ ಮಾತ್ರ. ಈಗ 'ಇತರರು' ಎಂದು ಶ್ರೀ ಭಗವಾನರು ಸೂಚಿಸುವುದು ಯಾರನ್ನು? 'ಜ್ಞಾನವೇ ಜ್ಞಾನಿ' ಎಂದು ಗ್ರಹಿಸಲಾರದ ಅಜ್ಞಾನಿಗಳನ್ನು (ನಮ್ಮ ಕಥೆಯಲ್ಲಿರುವ ಹುಡುಗನಂತೆ ಅವರು ಭ್ರಾಮಕ ಸ್ಥಿತಿಯಲ್ಲಿದ್ದಾರೆ); ಅವನಿಗೆ (ಜ್ಞಾನಿಗೆ) ಮಾನವ ರೂಪವಿಲ್ಲವಾದರೂ[೩೬] ದೇಹ ರೂಪದಲ್ಲಿರುವ ವ್ಯಕ್ತಿಯಾಗಿ ಗ್ರಹಿಸುವವರನ್ನು. ಅಂತಹ ಜನ ಮತ್ತೆ ಮತ್ತೆ ಕೇಳುತ್ತಾರೆ: "ಜ್ಞಾನಿಯು ನಡೆಯುವುದು ಹೇಗೆ? ಮಾತನಾಡುವುದು ಹೇಗೆ? ಕೆಲಸ ಮಾಡುವುದು ಹೇಗೆ?" ಮುಂತಾಗಿ. 'ನಾನು ದೇಹ' ಗುರುತಿನ ಹೊರತಾದ ಅಸ್ತಿತ್ವವು ಅಂಥವರಿಗೆ ಹೊಸತೂ, ಗ್ರಹಿಕೆಗೆ ಮೀರಿದ್ದೂ ಆಗಿದೆ. ಆದ್ದರಿಂದ ಶ್ರೀ ಭಗವಾನರು. 'ಇತರರು' ಎಂದು ಸೂಚಿಸುತ್ತ ಅವರಿಗೆ ಅಂತಹ ಉತ್ತರವನ್ನೇ ಕೊಡಬೇಕಾಗುತ್ತದೆ ಎಂದು ವಿವರಿಸಿದ್ದಾರೆ. ಆದಾಗ್ಯೂ, ಅಂತಿಮ ಸತ್ಯವನ್ನು ತಿಳಿಯುವ ಧೈರ್ಯದಿಂದ ತಮ್ಮ ಬಳಿ ಬಂದ ಪಕ್ವ ಮುಮುಕ್ಷುಗಳಿಗೆ–ಅವರಷ್ಟೇ ಅವರಿಗೆ ಸೇರಿದವರು–ಶ್ರೀ ಭಗವಾನರು ಏನನ್ನೂ ಮುಚ್ಚಿಡದೇ, ಪದ್ಯದ ಉತ್ತರಾರ್ಧದಲ್ಲಿ ಸತ್ಯವನ್ನು ತೆರೆದಿಡುತ್ತಾರೆ, "...ಪತಿಯು ತೀರಿಕೊಂಡಾಗ ಯಾವುದೇ ಪತ್ನಿಯು ವಿಧವೆಯಾಗದೇ ಉಳಿಯುವುದಿಲ್ಲ. ಹಾಗೆಯೇ ಕರ್ತೃವು (ಅಹಂಕಾರವು) ಗತಿಸಿದಾಗ ಎಲ್ಲ ಮೂರು ಕರ್ಮಗಳು ನಿರ್ನಾಮವಾಗುತ್ತವೆ. ಹೀಗೆ ತಿಳಿದುಕೊಳ್ಳಬೇಕು". ಮೂರು ಪತ್ನಿಯರಿದ್ದ ಒಬ್ಬನು ತೀರಿಕೊಂಡರೆ ಮೂವರೂ ವಿಧವೆಯಾಗುತ್ತಾರೆ, ಯಾರಿಗೂ ತಪ್ಪುವುದಿಲ್ಲ. ಹಾಗೆಯೇ, ಕರ್ಮಗಳನ್ನು ಮಾಡಿದವನು (ಕರ್ತೃತ್ವ ಭಾವ) ಸತ್ಯವಾದ ಜ್ಞಾನದಲ್ಲಿ ಸತ್ತಾಗ ಮೂರೂ ಕರ್ಮಗಳ ಫಲ ಕೊನೆಗೊಳ್ಳುತ್ತದೆ. ಏಕೆಂದರೆ ಅನುಭವಿಸುವವನು[೩೭] (ಭೋಕ್ತೃತ್ವಭಾವ) ಜೀವಂತ ಇರುವುದಿಲ್ಲ. ಹೀಗಿರುವಾಗ, ಶ್ರೀ ಭಗವಾನರು 'ಕೈವಲ್ಯ ನವನೀತ'ವನ್ನು ಟೀಕಿಸಿದ್ದಾರೆ ಅಥವಾ ವಿರೋಧಿಸಿದ್ದಾರೆ ಎಂದು ಹೇಳುವುದಾದರೂ ಹೇಗೆ? 'ಕೈವಲ್ಯ ನವನೀತ'ದಲ್ಲಿ ಹಾಗೆ ಹೇಳಿರುವ ಕಾರಣವನ್ನು ಪದ್ಯದ ಪೂರ್ವಾರ್ಧದಲ್ಲಿ ಅವರು ವಿವರಿಸಿರುವುದರಿಂದ ಶ್ರೀ ಭಗವಾನರ ಹೇಳಿಕೆ ತುಚ್ಛೀಕರಣವಲ್ಲ.

ಒಂದೇ ಪರವಸ್ತುವು ವಿವಿಧ ವೇದ ಋಷಿಗಳ ರೂಪ ತಳೆದು, ಆ ಕಾಲದಲ್ಲಿ ಜನರ ಬೆಳವಣಿಗೆ ಮತ್ತು ಅವರ ತಿಳುವಳಿಕೆಯ ಶಕ್ತಿಗೆ ಅನುಗುಣವಾಗಿ ಶಾಸ್ತ್ರಗಳನ್ನು

---

೩೬. ನೋಡಿ. ಪರಿಶಿಷ್ಟ ೧(ಬ), 'ಜ್ಞಾನಿ ಯಾರು?' ಪದ್ಯ ೧೦

೩೭. ಕರ್ತೃತ್ವ ಭಾವ (ಅಂದರೆ 'ಮಾಡುವವ ನಾನು' ಎಂಬ ಅನಿಸಿಕೆ) ಮತ್ತು ಭೋಕ್ತೃತ್ವ ಭಾವ (ಅಂದರೆ 'ಅನುಭವಿಸುವವ ನಾನು' ಎಂಬ ಅನಿಸಿಕೆ ಎರಡೂ ಒಂದೇ ಆಗಿವೆ. ವಿವರವಾದ ವಿವರಣೆಗಾಗಿ ನೋಡಿ–'ಶ್ರೀ ರಮಣ ಮಾರ್ಗ: ಭಾಗ ೨', ಅಧ್ಯಾಯ ೩, ಮತ್ತು ಪರಿಶಿಷ್ಟ ೨.

ಜಗತ್ತಿಗೆ ಕೊಟ್ಟಿತು. ನಂತರ ಅದೇ ಪರವಸ್ತುವು ವಿವಿಧ ಜ್ಞಾನಗುರುಗಳ ರೂಪದಲ್ಲಿ ಕಾಣಿಸಿಕೊಂಡು ಶಾಸ್ತ್ರಗಳ ಮೂಲಕ ಈಗಾಗಲೇ ಪ್ರಕಟಿಸಿರುವ ತನ್ನದೇ ಪರಮ ಸತ್ಯವನ್ನು ಆ ವಿಶಿಷ್ಟ ಯುಗದ ಜನರ ಬೌದ್ಧಿಕ ಬೆಳವಣಿಗೆಗೆ ಹೊಂದುವಂತೆ ಹಲವಾರು ಹೊಸ ಪದ್ಧತಿಗಳ ಮೂಲಕ ಸ್ಪಷ್ಟ ಪಡಿಸುತ್ತದೆ. ಏಕೆಂದರೆ ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ವಿಕೃತ ಬುದ್ಧಿಯ ಜನರಿಂದ ಇದು ತಿರುಚಲ್ಪಟ್ಟಿತ್ತು ಮತ್ತು ನಿರ್ಜೀವವಾಗಿಸಲ್ಪಟ್ಟಿತ್ತು. (ಈ ಸಂದರ್ಭದಲ್ಲಿ ಓದುಗರು ಭಗವದ್ಗೀತೆಯ ಅಧ್ಯಾಯ ೪, ಪದ್ಯ ೧ ರಿಂದ ೩ ನೋಡಬಹುದು)

"ಬುದ್ಧಿಯ ವಿರೋಧಿಸುವುದಿಲ್ಲ, ಪೂರ್ಣಗೊಳಿಸುತ್ತದೆ. ಯಾವುದೇ ಮಹಾತ್ಮನು (sage) ವಿರೋಧಿಸಲು ಹುಟ್ಟಿ ಬಂದಿಲ್ಲ" "ನಾನು ನಾಶ ಮಾಡಲು ಬಂದಿಲ್ಲ, ಪೂರ್ಣಗೊಳಿಸಲು ಬಂದಿದ್ದೇನೆ" ಎಂದು ಏಸು ಕ್ರಿಸ್ತ ಹೇಳಿದುದರ ಅರ್ಥ ಇದೇ ಆಗಿದೆ. (ಬೆಟ್ಟದ ಮೇಲಿನ ಪ್ರವಚನ)!

ಭಗವಾನ್ ಶ್ರೀ ರಮಣರ ಕ್ರಾಂತಿಕಾರಿ ಉಪದೇಶಗಳು ಶಾಸ್ತ್ರಗಳ ಎಲ್ಲ ಸುತ್ತು ಬಳಸಿನ ಹಾದಿಗಳಲ್ಲಿ ಚುಕ್ಕಾಣಿ ಹಿಡಿದು ನಡೆಸುತ್ತಾ ಮುಮುಕ್ಷುಗಳಿಗೆ ನೇರವೂ ಸುಲಭವೂ ಆದ ದಾರಿಯನ್ನು ಸ್ಪಷ್ಟವಾಗಿ ತೋರಿಸುತ್ತವೆ. ಶಾಸ್ತ್ರಗಳ ಬೃಹದಾರಣ್ಯದ ಕತ್ತಲೆಯಿಂದ ಆಕರ್ಷಿತರೂ ಭ್ರಮಿತರೂ ಆದ ಪಂಡಿತರ ಕಣ್ಣಿಗೆ ಮಾತ್ರ ಇದು ತುಚ್ಛೀಕರಣವಾಗಿ ತೋರುತ್ತದೆ. ಅವರಿಗೆ ತಮ್ಮ ಅಧ್ಯಯನದಿಂದ ಯಾವ ಪ್ರಯೋಜನವೂ ಆಗದೆ, ಅವರು ಗ್ರಾಂಥಿಕ ಮತಾಂಧತೆಯಿಂದ ಬಳಲುತ್ತಾರೆ. ಅವರು ವೇದಿಕೆಗಳಲ್ಲಿ ತಮ್ಮ ಬೌದ್ಧಿಕ ಡೊಂಬರಾಟದ ನಿಪುಣತೆಯನ್ನು ಪ್ರದರ್ಶಿಸಲು ಮಾತ್ರ ಕಲಿಕೆಯನ್ನು ಬಳಸುತ್ತಾರೆ ಮತ್ತು ಹೆಸರು, ಕೀರ್ತಿ ಗಳಿಸಲು ಶಾಸ್ತ್ರಗಳ ಮೇಲೆ ಆಡಂಬರ ಶೈಲಿಯ ಭಾಷ್ಯಗಳನ್ನು ಬರೆಯುತ್ತಾರೆ. ಆದರೆ ಶಾಸ್ತ್ರಗಳ ನಿಜವಾದ ಪ್ರಯೋಜನ ಪಡೆಯ ಬಯಸುವ ಪ್ರಾಮಾಣಿಕ ಮುಮುಕ್ಷುಗಳು ಭಗವಾನ್ ಶ್ರೀ ರಮಣರ ಉಪದೇಶಗಳನ್ನು ಶಾಸ್ತ್ರಗಳ ಮುಕುಟಮಣಿಯಾಗಿ, ಅವುಗಳಿಗೆ ಹೊಸ ಜೀವ, ನವ ವೈಭವವನ್ನು ತುಂಬುವವಾಗಿ ನೋಡುತ್ತಾರೆ.

ಭಗವಾನ್ ಶ್ರೀ ರಮಣರ ಉಪದೇಶ ಪದ್ಧತಿಗೂ ಶಾಸ್ತ್ರಗಳದ್ದಕ್ಕೂ ವ್ಯತ್ಯಾಸವಿರುವುದು ಅವರ ಉಪದೇಶಗಳನ್ನು ಅನುಸರಿಸುವ ಅಡಿಪಾಯದಂತಹ ಮೂಲಭೂತ ದೃಷ್ಟಿಕೋನದಲ್ಲಿದೆ. ಹಾಗಾಗಿ ಶಾಸ್ತ್ರಗಳಿಂದ ಕಲಿತ ಸಾಧನೆಗಳನ್ನು ಅಭ್ಯಸಿಸುವ ಮುಮುಕ್ಷುಗಳು ತಾವು ನಿಜವಾಗಿಯೂ ತಪಸ್ಸೆಂದು ಬಗೆದ ತಮ್ಮ ಸಾಧನೆಗಳ ಬಗ್ಗೆ ಶ್ರೀ ಭಗವಾನರನ್ನು ಕೇಳಿದಾಗ ಅವರು ಶಾಸ್ತ್ರಗಳು ಅವರಿಗೆ ಕೊಟ್ಟ ಮೂಲಭೂತ ದೃಷ್ಟಿಕೋನವನ್ನು ಬದಲಿಸುವ ಏಕೈಕ ಉದ್ದೇಶದಿಂದ ಉತ್ತರಿಸಿದರು. ಚುರುಕಾದ ತಿಳಿಯಾದ ಬುದ್ಧಿಯುಳ್ಳ ಪಕ್ವ ಶಿಷ್ಯರು ಸದ್ಗುರುವಿನ ಉದ್ದೇಶವನ್ನು ಒಮ್ಮೆಲೇ ಗ್ರಹಿಸಿ, 'ನಾನು ದೇಹ' ಎಂಬ (ಜೀವಭಾವ) ತಮ್ಮ ತಪ್ಪು ದೃಷ್ಟಿಕೋನದ ಬಗ್ಗೆ ವಿಚಾರದಲ್ಲಿ ತೊಡಗಿದರು, ಮತ್ತು ಗಾಢವಾಗಿ ಮೌನವಾದರು. ಏಕೆಂದರೆ ತಪಸ್ಸಿನ ಹೆಸರಿನಲ್ಲಿ ತಾವು ಮಾಡುತ್ತಿದ್ದ ಸಾಧನೆಗಳನ್ನು ಆ ಮುಂದೆ ಮಾಡಲಿಲ್ಲ ಮತ್ತು ಅವುಗಳ ಬಗ್ಗೆ ತಮ್ಮ ಸಂದೇಹ ನಿವಾರಿಸಲು ಪ್ರಶ್ನೆ ಕೇಳುವುದನ್ನು ನಿಲ್ಲಿಸಿದರು. ಶ್ರೀ ಭಗವಾನರ ಸನ್ನಿಧಿಗೆ ಹೊಸದಾಗಿ ಬಂದ ಅನೇಕ ಮುಮುಕ್ಷುಗಳು ವರ್ಣಿಸುತ್ತಿದ್ದ ಶಾಂತಿಯ ಅನುಭವವು ಈ ಮೌನವೇ

ಆಗಿದೆ. ಈ ಮೌನವನ್ನು ಉಪಯೋಗಿಸಿಕೊಂಡ ಪ್ರಾಮಾಣಿಕ ಮುಮುಕ್ಷುಗಳು ಆತ್ಮದ ಬಗ್ಗೆ ಹೆಚ್ಚು ಹೆಚ್ಚು ಗಾಢವಾಗಿ ಗಮನ ಹರಿಸುತ್ತ ಆಳಕ್ಕಿಳಿದು ಶಾಶ್ವತ ಶಾಂತಿಯನ್ನು ತಮ್ಮದಾಗಿಸಿಕೊಂಡರು. ಆದರೆ ತಮ್ಮ ಮೂಲಭೂತ ದೃಷ್ಟಿಕೋನವನ್ನು ಬದಲಿಸುವುದೇ ಶ್ರೀ ಭಗವಾನರ ಉದ್ದೇಶವೆಂದು ಅರಿಯಲು ವಿಫಲರಾದವರು, 'ನಾನು ದೇಹ' ಎಂಬ ತಪ್ಪು ದೃಷ್ಟಿಕೋನಕ್ಕೆ ಸಹಾಯ ನೀಡಿದ ಶಾಸ್ತ್ರಗಳಿಂದ ಕಲಿತದ್ದರ ಬಗ್ಗೆ ಸಂದೇಹಗಳನ್ನು ಮತ್ತೆ ಮತ್ತೆ ಅದದೇ ಪ್ರಶ್ನೆಗಳಾಗಿ ಕೇಳುತ್ತಿದ್ದರು. ತಮ್ಮ ದಾರಿಗೆ ಬರಲಾಗದವರ ದಿಗ್ಭ್ರಮೆಯನ್ನು ಕಂಡು, ಅವರ ಬಗ್ಗೆ ಕನಿಕರದಿಂದ[೩೮] ಶ್ರೀ ಭಗವಾನರೂ ಕೂಡ ಕೆಲವು ಸಂದರ್ಭಗಳಲ್ಲಿ ಶಾಸ್ತ್ರಗಳಂತೆ ತಾವೂ 'ನಾನು ದೇಹ' ಎಂಬ ಅಭಿಪ್ರಾಯದ ಸುಳ್ಳು ಭಾವವನ್ನು ಒಪ್ಪಿಕೊಂಡಂತೆ ಶಾಸ್ತ್ರೀಯ ಪರಿಭಾಷೆಯಲ್ಲಿ ಅವರ ಸಂದೇಹಗಳಿಗೆ ಉತ್ತರಿಸುತ್ತಿದ್ದರು. ಆದ್ದರಿಂದ **ಅಂತಹ ಉತ್ತರಗಳು ಎಂದೆಂದಿಗೂ ಶ್ರೀ ಭಗವಾನರ ನೇರ ಉಪದೇಶವಾಗಲಾರವು**. ಅವರು ಮೌನವನ್ನು ಪಾಲಿಸದ ಆರಂಭಿಕ ದಿನಗಳಿಂದ ಜೀವಿತದ ಕೊನೆಯವರೆಗೆ ಭಕ್ತರೊಡನೆ ನಡೆಸಿದ ಸಂಭಾಷಣೆಗಳಲ್ಲಿ ಹಲವು ದಾಖಲಿಸಲ್ಪಟ್ಟದ್ದು, ಅಂತಹ ವಿವಿಧ ಗದ್ಯ–ಪದ್ಯಕೃತಿಗಳನ್ನು ಕೂಲಂಕುಷವಾಗಿ ಅಭ್ಯಸಿಸಿದರೆ ('ಶ್ರೀ ರಮಣ ಗೀತೆ', 'ಶ್ರೀ ರಮಣ ಮಹರ್ಷಿಗಳೊಂದಿಗೆ ಮಾತು', 'ಭಗವಾನರೊಂದಿಗೆ ದಿನದಿನವೂ', 'ಮಹರ್ಷಿಗಳ ಆಚಾರ ತತ್ವ' (Gospel) ಮುಂತಾದವು) ಅಂತಹ ಪ್ರಶ್ನೆಗಳನ್ನು ಏಕೆ ಕೇಳಿದರು ಮತ್ತು ಶ್ರೀ ಭಗವಾನರು ಅಂತಹ ಉತ್ತರಗಳನ್ನು ಏಕೆ ಕೊಟ್ಟರು ಎಂಬುದು ಸ್ಪಷ್ಟವಾಗುತ್ತದೆ.

'ನಾನು ದೇಹ' (ಜೀವಭಾವ) ಎಂಬ ಮೂಲಭೂತ ದೃಷ್ಟಿಕೋನವನ್ನು ಆಧರಿಸಿದ, ಶಾಸ್ತ್ರಗಳು ವಿಧಿಸುವ ತಪಸ್ಸಿಗೂ, 'ನಾನು ಯಾರು' ಎಂಬ ಶುದ್ಧ ಅಸ್ತಿತ್ವವನ್ನು (ಸತ್ ಭಾವ) ಆಧರಿಸಿದ, ಶ್ರೀ ಭಗವಾನರು ಸೂಚಿಸುವ ಮೂಲಭೂತ ದೃಷ್ಟಿಕೋನದ ತಪಸ್ಸಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸುವ ಘಟನೆಯೊಂದನ್ನು ನೋಡೋಣ. ಶ್ರೀ ಭಗವಾನರ ಶಿಷ್ಯರಲ್ಲಿ ಸಂಸ್ಕೃತದ ಅಗ್ರಮಾನ್ಯ ಕವಿಗಳೂ ಮಿತಾಹಾರದ ಮೇಲೆ ಇರುವ ತಪಸ್ಸಿನಲ್ಲಿ ನುರಿತವರೂ ಆಗಿದ್ದ ಕಾವ್ಯ ಕಂಠ ಗಣಪತಿ ಶಾಸ್ತ್ರಿಗಳು ಒಮ್ಮೆ ಶ್ರೀ ಭಗವಾನರಿಗೆ ಹೇಳಿದರು: "ನಾವು ಬದುಕಲು ತಿಂಗಳಿಗೆ ಕೇವಲ ಮೂರು ರೂಪಾಯಿ ಸಾಕೆಂದು ತೋರುತ್ತದೆ". ಶ್ರೀ ಭಗವಾನರ ಮಾರುತ್ತರ ಕೂಡಲೇ ಬಂದಿತು: "ನಾವು ಬದುಕಲು ದೇಹವೇ ಅಗತ್ಯವಿಲ್ಲದಿರುವಾಗ ಮೂರು ರೂಪಾಯಿಯಾದರೂ ಯಾಕೆ ಬೇಕು?" ಈ ಸಂಭಾಷಣೆಯ ಅಂತರಾರ್ಥವನ್ನು ಸ್ಪಷ್ಟವಾಗಿ ಅರಿಯಬೇಕು. ಗಣಪತಿ ಶಾಸ್ತ್ರಿಗಳು "ನಾವು ಬದುಕಲು" ಎಂದು ಹೇಳಿದಾಗ ದೇಹವು ಬದುಕಲು ಎಂದು ಅರ್ಥವಾಗಿತ್ತು; ಅಂದರೆ ಅವರ ಮೂಲಭೂತ ದೃಷ್ಟಿಕೋನ 'ದೇಹ ನಾನು' ಎಂಬುದಾಗಿತ್ತು ಎಂಬುದು ಸ್ಪಷ್ಟವಿದೆ. ಶ್ರೀ ಭಗವಾನರು ಪ್ರತ್ಯುತ್ತರದಲ್ಲಿ 'ನಾವು ಬದುಕಲು' ಎಂದು ಹೇಳಿದಾಗ ಆತ್ಮವು ಬದುಕಲು ಎಂದು ಅರ್ಥವಾಗಿತ್ತು; ಅಂದರೆ ಅವರ ಮೂಲಭೂತ ದೃಷ್ಟಿಕೋನವು ಪಂಚಕೋಶಗಳು ಇಲ್ಲದ ನಾನು ಎಂಬ ಶುದ್ಧ ಅರಿವಾಗಿತ್ತು ಎಂಬುದು ಸ್ಪಷ್ಟವಿದೆ. ಈ ಸಂಭಾಷಣೆಯಿಂದ ಇವರಿಬ್ಬರ ಅಸ್ತಿತ್ವದ ಜ್ಞಾನಾನುಭವ ಏನು ಎಂಬುದು ಓದುಗನಿಗೆ ಸ್ಪಷ್ಟವಾಗಿ ಕಾಣುವುದಿಲ್ಲವೇ?

---

೩೮. ಪುಟ ೭೨ರಲ್ಲಿ ಉಧೃತವಾದ 'ಉಳ್ಳದು ನಾರ್ಪದು–ಅನುಬಂಧಂ', ಪದ್ಯ ೩೩ರಲ್ಲಿ 'ಅನ್ಯ'ರೆಂದು (ಇತರರೆಂದು) ಉಲ್ಲೇಖಿಸಲಾದ ಜನರು ಇವರೇ.

ಶ್ರೀ ಭಗವಾನರು ಎಂತಹ ಪರಿಸ್ಥಿತಿಗಳಲ್ಲೂ ತಮ್ಮ ಸತ್ಯಸ್ಥಿತಿ, ಆತ್ಮದ ಅರಿವಿನಲ್ಲಿ ಅಲ್ಲಾಡದಂತೆ ನೆಲೆಸಿದ್ದರು ಎಂದು ಇದರಿಂದ ತಿಳಿಯುವುದಿಲ್ಲವೇ? ಅಷ್ಟೇ ಅಲ್ಲ, ತಮ್ಮನ್ನೇ ಪೂರ್ತಿಯಾಗಿ ಅವಲಂಬಿಸಿದ ಭಕ್ತರಿಗೂ ಕೂಡ 'ನಾನು ದೇಹ' (ದೇಹಾತ್ಮ ಬುದ್ಧಿ) ಎಂಬ ತಪ್ಪು ಗುರುತಿಸುವಿಕೆಗೆ ಕಿಂಚಿತ್ತೂ ಅವಕಾಶ ಕೊಡದೆ ಸಲಹೆ ನೀಡುತ್ತಿದ್ದರು. ಆದ್ದರಿಂದಲೇ ಶ್ರೀ ಭಗವಾನರ ಉಪದೇಶ ಕ್ರಾಂತಿಕಾರಿ ಗುಣದೊಂದಿಗೆ ತನ್ನದೇ ಆದ ವಿಶೇಷ ಮಹಾನತೆಯನ್ನು ಪಡೆದಿದೆ; ನಾವು ಇದುವರೆಗೆ ಸತ್ಯವೂ, ಅನನ್ಯವೂ, ಸ್ಪಷ್ಟವೂ, ವೈಚಾರಿಕವೂ ಎಂದು ಅನುಸರಿಸುತ್ತಿದ್ದ ಆಧ್ಯಾತ್ಮಿಕ ಅಭ್ಯಾಸದ ವಿವಿಧ ಪದ್ಧತಿಗಳಿಗಿಂತ ಮೇಲೆ ಇದು ಪ್ರಕಾಶಿಸುತ್ತದೆ.

ಆದರೆ ನಮ್ಮಲ್ಲಿ ಕೆಲವರು ಶ್ರದ್ಧೆಯ[೩೯] ಕೊರತೆಯಿಂದಾಗಿ ಕೆಲವೊಮ್ಮೆ ಕೆಳಗಿನಂತೆ ಆಕ್ಷೇಪ ಎತ್ತುತ್ತಾರೆ: "ಯೋಗಾಭ್ಯಾಸದ ಮೂಲಕ ಮನಸ್ಸು ಮೊದಲು ಪಕ್ವವಾಗಿ ಶಕ್ತಿಯನ್ನು ಪಡೆದ ಹೊರತು ಆತ್ಮಶೋಧಕ್ಕೆ ಸಮರ್ಥವಾಗುವುದೇ? ಅದು ವಿಚಾರದ ಅಲೆಗಳಾಗಿ ಅಲೆದಾಡುವುದಿಲ್ಲವೇ?" ವಸ್ತು ಸ್ಥಿತಿ ಹಾಗಿಲ್ಲ! ಈ ಕುರಿತು ಶ್ರೀ ಭಗವಾನರು ತಮ್ಮ ಗದ್ಯ ಕೃತಿ 'ನಾನು ಯಾರು'ವಿನಲ್ಲಿ ಸ್ಪಷ್ಟ ನಿರ್ದೇಶನ ನೀಡುತ್ತಾ ವಿವರಿಸಿದ್ದಾರೆ: "ಬೇರೆ ವಿಚಾರಗಳು ಮೇಲೆದ್ದರೆ ಯಾರಿಗೆ ಎಂದು ನೋಡಿ. 'ನನಗೆ' ಎಂಬ ಉತ್ತರ ಬರುತ್ತದೆ (ಈ 'ನನಗೆ' ಎಂಬುದು ಆತ್ಮದ ಅರಿವಿನತ್ತ ನಿಮ್ಮನ್ನು ನೆನಪಿಸುತ್ತದೆ). ಆಗ ಮನಸ್ಸು ಕೂಡಲೇ 'ನಾನು ಯಾರೆ'ಂಬ ಆತ್ಮಾವಧಾನದತ್ತ ಮರಳಬಹುದು. **ಹೀಗೆ ಮತ್ತೆ ಮತ್ತೆ ಅಭ್ಯಾಸ ಮಾಡುವುದರಿಂದ ತನ್ನ ಮೂಲದಲ್ಲಿ ಸ್ಥಿರವಾಗಿರಲು ಮನಸ್ಸಿನ ಶಕ್ತಿ ಹೆಚ್ಚುತ್ತದೆ"**.

ಇತರ ಆಧ್ಯಾತ್ಮಿಕ ಅಭ್ಯಾಸಗಳಿಂದ ಮನಸ್ಸು ಪಡೆಯುವ **ಶಕ್ತಿಯು ತನ್ನ ಮೂಲದಲ್ಲಿ ಅದು ಸ್ಥಿರವಾಗಿರಲು ಬೇಕಾದ ಶಕ್ತಿಯಲ್ಲ**. ಪವಿತ್ರ ನಾಮಗಳ ಪುನರಾವರ್ತನೆ (ಜಪ), ಧ್ಯಾನ, ದೇಹದ ಆರು ಯೋಗಿಕ ಕೇಂದ್ರಗಳಲ್ಲಿ ಯಾವುದಾದರೊಂದರ ಮೇಲೆ ಏಕಾಗ್ರತೆ (ರಾಜಯೋಗದಲ್ಲಿ ಹೇಳಲಾಗುವ ಷಟ್ಚಕ್ರಗಳು), ದಿವ್ಯವಾದ ಕಾಂತಿಯ (ಜ್ಯೋತಿ) ಮೇಲೆ ಅಥವಾ ಸದ್ದಿನ (ನಾದ) ಮೇಲೆ ಏಕಾಗ್ರತೆ–ಈ ಎಲ್ಲ ಅಭ್ಯಾಸಗಳಲ್ಲಿ ಮನಸ್ಸು ತನಗೆ ಪರಕೀಯವಾದ ವಸ್ತುವಿನ ಮೇಲೆ (ಒಂದು ಮಧ್ಯಮ ಅಥವಾ ಪ್ರಥಮ ಪುರುಷ) ಗಮನ ಹರಿಸುವಂತೆ ಮಾತ್ರ ಮಾಡಲಾಗುತ್ತದೆ. ಮೇಲೆ ಹೇಳಲಾದ ಯಾವುದೇ ಪರಕೀಯ ವಸ್ತುವನ್ನು ಗಟ್ಟಿ ಹಿಡಿದುಕೊಳ್ಳುವ ಮೂಲಕ ಗಳಿಸಿದ ಮನಶ್ಶಕ್ತಿಯು ಆತ್ಮಜ್ಞಾನಕ್ಕೆ ಪೂರಕವಾದ ಪ್ರಾಮಾಣಿಕ ಮನಶ್ಶಕ್ತಿಯಲ್ಲ. ಪೂರಕವಲ್ಲದ ಕಾರಣ ಇದನ್ನು 'ಮನಶ್ಶಕ್ತಿ'ಯೆಂದು ಕರೆಯುವ ಬದಲು 'ಮನಶ್ಶಕ್ತಿಯ ಕೊರತೆ' ಎಂದು ಕರೆಯುವುದು ಹೆಚ್ಚು ಸೂಕ್ತವಾಗಿದೆ. ('ಉಳ್ಳದು ನಾರ್ಪದು', ಪದ್ಯ ೩೨ರಲ್ಲಿ ಶ್ರೀ ಭಗವಾನರ ಮೂಲ ತಮಿಳು ಶಬ್ದಗಳು–'ಉರನ್ ಇನ್‌ಮೈಯಿ') ಹೀಗೆ ಕಲ್ಪಿಸೋಣ, ಒಬ್ಬನು ಒಂದು ಹಸುವನ್ನು ಖರೀದಿಸಿ ಹಲವು ಕಾರಣಗಳಿಗಾಗಿ ಕೆಲ ದಿನಗಳ ಮಟ್ಟಿಗೆ ಬೇರೊಬ್ಬನ ಕೊಟ್ಟಿಗೆಯಲ್ಲಿ ಕಟ್ಟುತ್ತಾನೆ ಎಂದುಕೊಳ್ಳೋಣ. ಅದು ಆ ಪರಿಸರಕ್ಕೆ ಅಭ್ಯಾಸ ಬಲದಿಂದ ಹೊಂದಿಕೊಂಡ ನಂತರ ಒಂದು ದಿನ ಅದರ ಮಾಲಿಕನು ತನ್ನದೇ ಕೊಟ್ಟಿಗೆಗೆ ಕರೆತರಲು ಯತ್ನಿಸಿದಾಗ,

---

೩೯. ಶ್ರದ್ಧೆಯೆಂದರೆ ಕೇವಲ ವಿಶ್ವಾಸವಲ್ಲ, ಉಪದೇಶವನ್ನು ಅಭ್ಯಾಸ ಮಾಡಲು ಸತತ ಪ್ರಯತ್ನಿಸುವ ಕಾತರ ಮತ್ತು ಆತ್ಮವಿಶ್ವಾಸವೂ ಹೌದು.

ಅದು ಆ ಜಾಗಕ್ಕೆ ಸುಮ್ಮನೆ ಬಂದು ಬಿಡುತ್ತದೆಯೇ? ಇಲ್ಲ, ಅದು ಮತ್ತೊಬ್ಬನ ಕೊಟ್ಟಿಗೆಗೆ ಓಡಿ ಹೋಗುತ್ತದೆ. ಆದ್ದರಿಂದ ಯಾವುದೇ ಜಾಣ ರೈತನು ಹೊಸ ಹಸುವನ್ನು ಕೊಂಡ ಮೇಲೆ ತನ್ನದೇ ಜಾಗದಲ್ಲಿ ಕಟ್ಟಿ ಹಾಕಿ ಅಲ್ಲೇ ಇರುವಂತೆ ತರಬೇತಿ ಕೊಡುತ್ತಾನೆ. ಅದೇ ರೀತಿ, ಆತ್ಮಕ್ಕೆ ಹೊರತಾದ ಮಧ್ಯಮ ಮತ್ತು ಪ್ರಥಮ ಪುರುಷ ವಸ್ತುಗಳ ಮೇಲೆ ಏಕಾಗ್ರಗೊಳಿಸಿ ಮನಶ್ಶಕ್ತಿ ಬೆಳೆಸಿಕೊಂಡ ಮುಮುಕ್ಷುಗಳು ತನ್ನದೇ ಅಸ್ತಿತ್ವವನ್ನು ತಿಳಿದುಕೊಳ್ಳುವ ಆತ್ಮಾವಧಾನ ಎಂದರೇನು, ತನ್ನದೇ ಅಸ್ತಿತ್ವವನ್ನು ಲಕ್ಷ್ಯವಾಗಿಸಿಕೊಂಡಾಗಿನ ಭಾವನೆಗಳನ್ನು ಸ್ವೀಕರಿಸುವುದು ಹೇಗೆ ಎಂದು ಅರಿಯಲು ಹೆಣಗುತ್ತಾರೆ ಮತ್ತು ಕಷ್ಟಪಡುತ್ತಾರೆ. ಕೆಲವೊಮ್ಮೆ ಹೇಳಲಾಗುತ್ತದೆ. "ಇತರ ಅಭ್ಯಾಸಗಳ ತರಬೇತಿಯಿಂದ ಮೊದಲು ಮನಶ್ಶಕ್ತಿ ಗಳಿಸುತ್ತೇನೆ. ಬಳಿಕ ಆತ್ಮಶೋಧ ಕೈಗೆತ್ತಿಕೊಳ್ಳುತ್ತೇನೆ". ಆದರೆ ಇತರ ಅಭ್ಯಾಸಗಳಿಂದ ಮನಸ್ಸಿಗೆ ದೀರ್ಘಕಾಲ ತರಬೇತಿ ನೀಡಿದ ಪ್ರತಿಯೊಬ್ಬರ ಅನುಭವವೇನೆಂದರೆ ಅಂತಹ ಮನಸ್ಸು ಯಾವ ಇತರ ಪದ್ಧತಿಯ ತರಬೇತಿಯನ್ನೂ ಪಡೆಯದ ಸಾಮಾನ್ಯ ಮನಸ್ಸಿಗಿಂತ ಆತ್ಮಮುಖಿಯಾಗಿ ತಿರುಗಲು ದುರ್ಬಲವಾಗಿರುತ್ತದೆ.

ಒಂದು ಉದಾಹರಣೆ ತೆಗೆದುಕೊಳ್ಳೋಣ. ಗಣಪತಿ ಮುನಿಗಳು ಎಂದು ಹೆಸರಾದವರೂ, ಶ್ರೀ ಭಗವಾನರ ಮಹತ್ವದ ಭಕ್ತರಲ್ಲಿ ಒಬ್ಬರೆಂದು ಪರಿಗಣಿಸಲಾದವರೂ ಆದ ಶ್ರೀ ಗಣಪತಿ ಶಾಸ್ತ್ರಿಗಳ ಅನುಭವ. ಜಪ ಮಾಡುವುದರಲ್ಲಿ ಅವರನ್ನು ಮೀರಿಸಿದವರು ಯಾರೂ ಇರಲಿಲ್ಲ. ಅವರು ಕೋಟಿಗಟ್ಟಲೆ ಜಪ ಮಾಡಿದ್ದರು. ಅವರ ಶಿಷ್ಯರು ಅವರನ್ನು 'ಮಂತ್ರೇಶ್ವರ' (ಮಂತ್ರಗಳ ಪ್ರಭು) ಎಂದು ಘೋಷಿಸಿದ್ದರು. 'ಶ್ರೀ ರಮಣ ಗೀತೆ'ಯಲ್ಲಿ (ಅಧ್ಯಾಯ ೧೮, ಪದ್ಯ ೧೫) ಅವರು ತಮಗೆ ತಾವು ಹಾಗೆ ಸೂಚಿಸಿಕೊಂಡಿದ್ದಾರೆ. ಅವರು ಆಶುಕವಿತ್ವ (ಯಾವುದೇ ಕೊಟ್ಟ ವಿಷಯದ ಮೇಲೆ ತಕ್ಷಣ ಪದ್ಯಗಳನ್ನು ರಚಿಸುವ ಸಾಮರ್ಥ್ಯ) ಮತ್ತು ಶತಾವಧಾನ (ಒಂದೇ ಕಾಲಕ್ಕೆ ನೂರು ವಿಷಯಗಳ ಮೇಲೆ ಗಮನವಿಡುವ ಸಾಮರ್ಥ್ಯ) ಮುಂತಾದ ಕೆಲವು ಅದ್ಭುತ ಮಾನಸಿಕ ಶಕ್ತಿಗಳನ್ನು ಬೆಳೆಸಿಕೊಂಡಿದ್ದರು. ಆದರೂ ಅವರು ಕೆಲವೊಮ್ಮೆ ಹೇಳುತ್ತಿದ್ದರು: "ನಾನು ಇಂದ್ರಲೋಕಕ್ಕಾದರೂ ಹೋಗಿ ಇಂದ್ರ ಏನು ಮಾಡುತ್ತಿದ್ದಾನೆ ಎಂದು ಹೇಳಬಲ್ಲೆ. ಆದರೆ ನಾನು ನನ್ನೊಳಗೆ ಹೋಗಿ 'ನಾನು'ವಿನ ಮೂಲ ಕಾಣಲಾರೆ" ಶ್ರೀ ಭಗವಾನರು ಕೂಡ ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ[೪೦]. "ನಾಯನ (ಗಣಪತಿ ಮುನಿಗಳು) ಹೇಳುತ್ತಿದ್ದರು: "ಮನಸ್ಸನ್ನು ಮುಮ್ಮುಖವಾಗಿ ಕಳಿಸುವುದು ನನಗೆ ಸುಲಭ; ಆದರೆ ಹಿಮ್ಮುಖವಾಗಿ, ಅಂದರೆ ಒಳಮುಖಿಯಾಗಿ ತಿರುಗಿಸಿ, ಹೋಗುವುದು ಅಸಾಧ್ಯ. ನಾನು ಮುಮ್ಮುಖವಾಗಿ (ಅಂದರೆ ಮಧ್ಯಮ ಮತ್ತು ಪ್ರಥಮ ಪುರುಷ ದತ್ತ) ಎಷ್ಟೇ ದೂರ ಎಷ್ಟೇ ವೇಗದಲ್ಲಾದರೂ ಹೋಗಬಲ್ಲೆ; ಆದರೆ ಹಿಮ್ಮುಖವಾಗಿ (ಅಂದರೆ ಉತ್ತಮ ಪುರುಷದತ್ತ) ಒಂದೇ ಒಂದು ಹೆಜ್ಜೆ ಹಾಕುವುದೂ ಕಷ್ಟಕರವಾಗಿದೆ".

ಇದರಿಂದ ನಾವು ಏನು ತೀರ್ಮಾನಿಸಬಹುದು? ಜಪದ ಪರಿಣಾಮಗಳ ಸೂಕ್ಷ್ಮ ಅಂಶಗಳು ಅದನ್ನು ಪೂರ್ಣ ಪ್ರಾಮಾಣಿಕವಾಗಿ ನಿಜವಾಗಿ ಅಭ್ಯಾಸ ಮಾಡಿದವರಿಗೆ

---

೪೦. ಉದಾಹರಣೆಗಾಗಿ ನೋಡಿ: 'ಶ್ರೀ ರಮಣ ಮಹರ್ಷಿಗಳೊಂದಿಗೆ ಮಾತು, (ಟಾಕ್ಸ್ ವಿತ್ ಶ್ರೀ ರಮಣಮಹರ್ಷಿ) ಸಂಖ್ಯೆ ೩೬೨, ವಿಭಾಗ ೩ ಮತ್ತು 'ಭಗವಾನರೊಂದಿಗೆ ದಿನದಿನವೂ' (ಡೇ ಬೈ ಡೇ ವಿತ್ ಭಗವಾನ್) ೯-೫-೧೯೪೬, ಎರಡನೇ ಪರಿಚ್ಛೇದ.

ಸ್ಪಷ್ಟವಾಗುತ್ತವೆಯೇ ಹೊರತು, 'ಆತ್ಮಶೋಧಕ್ಕೆ ಜಪವು ಸಹಾಯ ನೀಡುವುದು' ಎಂದು ಸುಮ್ಮನೆ ವಾದ ಮಾಡುವವರಿಗಲ್ಲ. ಶ್ರೀ ಗಣಪತಿ ಮುನಿಗಳು ಜಪ ಸಾಧನೆಯಲ್ಲಿ ಅನೇಕ ವರ್ಷ ನಿಜವಾಗಿಯೂ ಮುಳುಗಿದ್ದರು ಮತ್ತು ಅವರಿಗೆ ಅದರ ಅತ್ಯುತ್ತಮ ಅನುಭವವಿತ್ತು. ನಾವು ಮೇಲೆ ಹೇಳಿದ್ದು ಸರಿಯೆಂದು ಅವರ ಅನುಭವವು ಸ್ಪಷ್ಟವಾಗಿ ಸಿದ್ಧ ಮಾಡುವುದಿಲ್ಲವೇ?

ಇದಕ್ಕೆ ಸಂಬಂಧಿಸಿದಂತೆ ಕೆಲವರು ಕೇಳುತ್ತಾರೆ, "ಸತ್ಯ ಹೀಗಿರುವಾಗ ಶ್ರೀ ಭಗವಾನರು 'ನಾನು ಯಾರು'ವಿನಲ್ಲಿ ಹೀಗೇಕೆ ಹೇಳಿದ್ದಾರೆ? "ದೇವರ ರೂಪಗಳ ಮೇಲೆ ಧ್ಯಾನವನ್ನು (ಮೂರ್ತಿಧ್ಯಾನ) ಮತ್ತು ಪವಿತ್ರ ಶಬ್ದಗಳ ಪುನರಾವರ್ತನೆಯನ್ನು (ಮಂತ್ರಜಪ) ಮಾಡುವುದರಿಂದ ವಿಚಾರಗಳು ಹೆಚ್ಚು ಹೆಚ್ಚು ಶಮನಗೊಳ್ಳುತ್ತವೆ. ಹಾಗೆ ಏಕಾಗ್ರತೆಯನ್ನೂ ಶಕ್ತಿಯನ್ನೂ ಗಳಿಸಿದ ಮನಸ್ಸಿಗೆ ಆತ್ಮಶೋಧವು ಸುಲಭವಾಗಿ ಸಿದ್ಧಿಸುತ್ತದೆ". ಆದ್ದರಿಂದ ಜಪ ಮತ್ತು ಧ್ಯಾನ ಮಾಡುವವರಿಗೆ ಆತ್ಮಶೋಧವು ಸುಲಭವಾಗುವುದಿಲ್ಲವೇ?"

"ನಾನು ಯಾರು" ಕೃತಿಯಲ್ಲಿರುವ ನಿಜವಾದ ಅರ್ಥ ಏನೆಂದು ಆಳವಾಗಿ ಪರಿಶೋಧಿಸಬೇಕು. ಸದಾಕಾಲ ಅಲೆಯುತ್ತಲೇ ಇರುವ ಮನಸ್ಸು ಅಸಂಖ್ಯಾತ ವಿಚಾರಗಳಾಗಿ ಹಿಗ್ಗುತ್ತಲೇ ಇರುತ್ತದೆಯಾದ್ದರಿಂದ ಪ್ರತಿಯೊಂದು ವಿಚಾರವೂ ಅತಿ ದುರ್ಬಲವಾಗಿ ಬಿಡುತ್ತದೆ. ಆನೆಯ ಓಲಾಡುವ ಸೊಂಡಿಲಿಗೆ ಕಬ್ಬಿಣದ ಸರಪಣಿಯನ್ನು ಕೊಟ್ಟಾಗ, ಆನೆಯು ಅದಕ್ಕೆ ಮಾತ್ರ ಅಂಟಿಕೊಳ್ಳುತ್ತದೆ, ಸೊಂಡಿಲಿನಿಂದ ಬೇರಾವ ಚೇಷ್ಟೆಯನ್ನೂ ಮಾಡುವುದಿಲ್ಲ. ಹಾಗೆಯೇ ಮನಸ್ಸಿಗೆ ದೇವರ ಯಾವುದೇ ಒಂದು ನಾಮ ಅಥವಾ ರೂಪಕ್ಕೆ ಹಿಡಿದುಕೊಳ್ಳುವಂತೆ ತರಬೇತಿ ನೀಡಿದರೆ ಅದು ಏಕಾಗ್ರತೆಯನ್ನು ಸಾಧಿಸುತ್ತದೆ, ಅಂದರೆ ಕೇವಲ ಒಂದು ವಿಷಯಕ್ಕೆ ಅಂಟಿಕೊಳ್ಳುವ ಶಕ್ತಿ ಪಡೆಯುತ್ತದೆ. ಈ ದಾರಿಯಲ್ಲಿ ಹಲವು ವಿಚಾರಗಳಾಗಿ ಕವಲೊಡೆಯುವ ಸ್ವಭಾವವನ್ನು ಮಾತ್ರ ಮನಸ್ಸು ಕಳೆದುಕೊಳ್ಳುತ್ತದೆ.

ಮನಸ್ಸು ಆತ್ಮಾವಧಾನವನ್ನು ಸಾಧಿಸಲು ಅಡೆತಡೆಯುಂಟುಮಾಡುವ ಎರಡು ಬಗೆಯ ತೊಂದರೆಗಳಿವೆ; ಆದ್ದರಿಂದ ಅವುಗಳನ್ನು ಮೀರಲು ಎರಡು ಬಗೆಯ ಮನಶ್ಶಕ್ತಿ ಅವಶ್ಯವಾಗಿದೆ. ವಿಷಯ ವಾಸನಾ ಬಲದ ಮೂಲಕ ಅಸಂಖ್ಯಾತ ವಿಚಾರಗಳಾಗಿ ಕವಲೊಡೆಯುವುದರಿಂದ ಮನಸ್ಸನ್ನು ತಡೆಹಿಡಿಯಲು ಬೇಕಾದ ಶಕ್ತಿ ಮೊದಲನೆಯದು. ಉತ್ತಮ ಪುರುಷದತ್ತ ಅಥವಾ ಆತ್ಮಮುಖಿಯಾಗಲು, ಮನಸ್ಸಿಗೆ (ಗಮನ ಹರಿಸುವ ಶಕ್ತಿ) ಮಾರ್ಗದರ್ಶನ ಮಾಡುವ ಶಕ್ತಿ, ಅಂದರೆ ಆತ್ಮದಲ್ಲಿ ಗಮನ ಹರಿಸುವ ಶಕ್ತಿ ಎರಡನೆಯದು. ಜಪ ಮತ್ತು ಧ್ಯಾನದಂತಹ ಅಭ್ಯಾಸಗಳಿಂದ ಮೊದಲ ಅಡೆತಡೆಯಿಂದ, ಅಂದರೆ ವಿಷಯ ವಾಸನೆಗಳಿಂದ, ಮುಕ್ತವಾಗುವ ಶಕ್ತಿ ಮಾತ್ರ ಲಭಿಸುತ್ತದೆ. **ಆದರೆ ಪ್ರಾರಂಭದಿಂದಲೇ ಆತ್ಮಾವಧಾನದಲ್ಲೇ ತೊಡಗುವ ಮನಸ್ಸಿಗೆ ಎರಡೂ ಅವಶ್ಯಕ ಶಕ್ತಿಗಳು ಸಹಜವಾಗಿ ಬೆಳೆಯುತ್ತವೆ**. ಜಪ, ಧ್ಯಾನಗಳಿಂದ ಮನಸ್ಸಿಗೆ ಹಲವು ವಿಚಾರಗಳಾಗಿ ಕವಲೊಡೆದು ದುರ್ಬಲವಾಗುವುದನ್ನು ತಡೆಯುವ ಶಕ್ತಿ ಪ್ರಾಪ್ತವಾಗುತ್ತದೆ, ಆದರೂ ಇದು ಇನ್ನೂ ಮಧ್ಯಮ ಪುರುಷನಲ್ಲಿ ಮಾತ್ರ ನೆಲೆಗೊಂಡಿರುತ್ತದೆ. ಆದ್ದರಿಂದ ಜಪ ಅಥವಾ ಧ್ಯಾನದಿಂದ ಒಂದೇ ಒಂದು ಮಧ್ಯಮ ಪುರುಷನಲ್ಲಿ ಅಥವಾ ಇನ್ನೊಂದರಲ್ಲಿ ಮಹಾಮೋಹದಿಂದ ಅಂಟಿಕೊಂಡಿರಲು ಮನಶ್ಶಕ್ತಿ ಬೆಳೆಯುತ್ತದೆ. ಈ ರೀತಿಯಲ್ಲಿ

ಎರಡನೇ ಅಡ್ಡಿಯಾಗಿರುವ ಮಧ್ಯಮ ಪುರುಷದಿಂದ ಉತ್ತಮ ಪುರುಷದ ಕಡೆ ಮನಸ್ಸನ್ನು ತಿರುಗಿಸಲು ಇರುವ ಅಸಾಮರ್ಥ್ಯ ಗೊತ್ತಿಲ್ಲದೇ ಹೆಚ್ಚುತ್ತದೆ. ಹಾಗಾಗಿ ಅಂತಹ ಮನಸ್ಸು ಆತ್ಮಮುಖಿಯಾಗಿ ತಿರುಗುವಾಗ ಇದು ಬಹಳ ಕಠಿಣವಾದ ಸವಾಲಾಗಿ ಕಂಡು ಬರುತ್ತದೆ. ಶ್ರೀ ಗಣಪತಿ ಮುನಿಗಳ ವ್ಯಕ್ತಿಗತ ಅನುಭವದಿಂದ ನಾವು ಕಲಿಯಬೇಕಾದ ಸತ್ಯ ಇದೇ ಆಗಿದೆ. ಜಪ ಮತ್ತು ಧ್ಯಾನದಂತಹ ಅಭ್ಯಾಸಗಳಿಂದ ಪಡೆಯುವ ಮನಸ್ಸಿನ ಏಕಾಗ್ರತೆಯ ಶಕ್ತಿಯು ಆತ್ಮಾವಧಾನಕ್ಕೆ ಹೇಗೆ ದೊಡ್ಡ ಅಡ್ಡಿಯಾಗುತ್ತದೆ ಎಂಬುದನ್ನು ಒಂದು ಉಪಮೆಯ ಮೂಲಕ ವಿವರಿಸೋಣ.

ಸೈಕಲ್ ಬಿಡುವ ಕಲೆ ಗೊತ್ತಿಲ್ಲದ ಒಬ್ಬ ವ್ಯಕ್ತಿ ತಿರುವಣ್ಣಾಮಲೈನಿಂದ ಐವತ್ತು ಮೈಲಿ ಉತ್ತರಕ್ಕಿರುವ ವೆಲ್ಲೂರು ಪಟ್ಟಣಕ್ಕೆ ಸೈಕಲ್ ಮೇಲೆ ಹೋಗಲು ನಿರ್ಧರಿಸುತ್ತಾನೆ ಎಂದಿಟ್ಟುಕೊಳ್ಳಿ. ತಿರುವಣ್ಣಾಮಲೈನಿಂದ ದಕ್ಷಿಣಕ್ಕೆ ಇಪ್ಪತ್ತು ಮೈಲಿ ದೂರದಲ್ಲಿರುವ ತಿರುಕೊಯ್ಲೂರಿನ ರಸ್ತೆಯಲ್ಲಿ ಆತ ಸೈಕಲ್ ತರಬೇತಿ ಪಡೆದರೆ ಹಲವು ಗಂಟೆಗಳ ನಂತರ ಅವನಿಗೆ ಸೈಕಲ್ ಬಿಡುವ ಕಲೆಯೇನೋ ಬರುತ್ತದೆ. ಆದರೆ ಅಷ್ಟು ಹೊತ್ತಿಗೆ ಆತ ತಿರುವಣ್ಣಾಮಲೈನಿಂದ ದಕ್ಷಿಣಕ್ಕೆ ಇಪ್ಪತ್ತು ಮೈಲಿ ದೂರವಿರುತ್ತಾನೆ, ಅಂದರೆ ತನ್ನ ಗುರಿಯಾದ ವೆಲ್ಲೂರಿನಿಂದ ಎಪ್ಪತ್ತು ಮೈಲಿ ದೂರ. ಹಾಗಾಗಿ ಈಗ ಆತ ವೆಲ್ಲೂರು ತಲುಪಲು ಹೆಚ್ಚಿನ ಶ್ರಮದೊಂದಿಗೆ ಹೆಚ್ಚಿನ ಕಾಲವನ್ನು ವ್ಯರ್ಥವಾಗಿ ಹಾಕಬೇಕಲ್ಲವೇ? ಇದರ ಬದಲು ಪ್ರಾರಂಭದಿಂದಲೇ ವೆಲ್ಲೂರಿನ ಹಾದಿಯಲ್ಲೇ ಆತ ಸೈಕಲ್ ಬಿಡಲು ಕಲಿಯತೊಡಗಿದ್ದರೆ, ಅಷ್ಟೇ ಗಂಟೆಗಳ ಅವಧಿಯಲ್ಲಿ ವೆಲ್ಲೂರಿಗೆ ಇಪ್ಪತ್ತು ಮೈಲಿ ಹತ್ತಿರವಿರುತ್ತಿದ್ದ. ಜೊತೆಗೆ, ಇಷ್ಟು ಹೊತ್ತಿಗೆ ಸೈಕಲ್ ಬಿಡುವ ಕಲೆ ಕಲಿತಿರುವುದರಿಂದ ಉಳಿದ ಮೂವತ್ತು ಮೈಲಿಯನ್ನು ಸುಲಭವಾಗಿ ಪೂರ್ಣಗೊಳಿಸುತ್ತಿದ್ದ, ಅನವಶ್ಯಕವಾಗಿ ಸಮಯವನ್ನು ಶ್ರಮವನ್ನೂ ವೆಚ್ಚ ಮಾಡದೇ ತನ್ನ ಗುರಿಯನ್ನು ತಲುಪುತ್ತಿದ್ದ.

ಜಪ ಮತ್ತು ಧ್ಯಾನಗಳ ಅಭ್ಯಾಸದಿಂದ ಆಗುವುದೇನೆಂದರೆ ವ್ಯಕ್ತಿ ತಿರುಕೊಯ್ಲೂರು ರಸ್ತೆಯಲ್ಲಿ ಸೈಕಲ್ ಕಲಿತಂತೆ. ಜಪ, ಧ್ಯಾನಗಳಿಂದ ಪಡೆದ ಶಕ್ತಿಯು ವಿರುದ್ಧ ದಿಕ್ಕಿಗೆ, ಅಂದರೆ ಮಧ್ಯಮ ಪುರುಷದತ್ತ ಹೋಗುವುದರಿಂದ ಅವು ಆತ್ಮಾವಧಾನದಿಂದ ದೂರ ಕೊಂಡೊಯ್ಯುವ ಚಟುವಟಿಕೆಯಲ್ಲವೇ? ಅದರ ಬದಲು ಪ್ರಾರಂಭದಿಂದಲೇ ಆತ್ಮಾವಧಾನ ಅಭ್ಯಾಸ ಮಾಡಿದರೆ ವೆಲ್ಲೂರಿನ ಹಾದಿಯಲ್ಲಿ ಸೈಕಲ್ ತರಬೇತಿ ಪಡೆದಂತಾಗುತ್ತದೆ. ಆತ್ಮಾವಧಾನವು, ಅಂದರೆ ಆತ್ಮಶೋಧವು, ಹೀಗೆ ಅನಾವಶ್ಯಕ ಶ್ರಮವನ್ನು ತಡೆದು ನೇರವಾಗಿ ಆತ್ಮಸಿದ್ಧಿಯನ್ನು ದೊರಕಿಸಿಕೊಡುತ್ತದೆ. ಶ್ರೀ ಭಗವಾನರು 'ಆತ್ಮವಿದ್ಯಾ ಕೀರ್ತನ'ದ ೪ನೇ ಪದ್ಯದಲ್ಲಿ ಹೇಳುತ್ತಾರೆ: "ಎಲ್ಲ ದಾರಿಗಳಲ್ಲಿ ಈ ದಾರಿಯು (ಆತ್ಮಶೋಧ) ಅತ್ಯಂತ ಸುಲಭವಾದುದು"; 'ಉಪದೇಶ ಉಂದಿಯಾರ್'ದ ೧೭ನೆಯ ಪದ್ಯದಲ್ಲಿ ಹೇಳುತ್ತಾರೆ: "ಈ ದಾರಿಯು ಎಲ್ಲರಿಗೂ ನೇರವಾದುದು".

ವಿಷಯೇಂದ್ರಿಯ ವಸ್ತುಗಳಿಗೆ ಸಂಬಂಧಿಸಿದ ವಿವಿಧ ವಿಚಾರಗಳಾಗಿ ಕವಲೊಡೆದು ದುರ್ಬಲವಾಗುವುದರಿಂದ ಮನಸ್ಸನ್ನು ತಡೆಗಟ್ಟುವ ಕಾರಣಕ್ಕಾಗಿ ಜಪ ಅಥವಾ ಧ್ಯಾನದ ಅಭ್ಯಾಸಗಳು ಮನಸ್ಸಿಗೆ ಶಕ್ತಿ ಕೊಡುತ್ತವೆ ಎಂದು ಶ್ರೀ ಭಗವಾನರು 'ನಾನು ಯಾರು?'ವಿನಲ್ಲಿ ಹೇಳಿದ್ದಾರೆ. ಹಾಗೆ ಹೇಳುವಾಗ ಅವರು ಒಂದೇ ಒಂದನ್ನು ಪರಿಗಣಿಸಿದ್ದಾರೆ–ಅಂದರೆ

ವಿಷಯ ವಾಸನೆಗಳಿಂದ ಉಂಟಾಗುವ ಅಸಂಖ್ಯಾತ ವಿಚಾರಗಳಾಗಿ ಕವಲೊಡೆಯುವ ದುರಂತದಿಂದ ಮನಸ್ಸನ್ನು ಕಾಪಾಡುತ್ತವೆ ಎಂದು. ಅಲ್ಲದೇ, ಹಾಗೆ ಸಿಗುವ ಮನಶ್ಶಕ್ತಿಯು ಆತ್ಮಶೋಧಕ್ಕೆ ಬೇಕಾದ ಶಕ್ತಿಯಲ್ಲ ಎಂದು. ಶ್ರೀ ಭಗವಾನರು 'ನಾನು ಯಾರು?' ಕೃತಿಯಲ್ಲಿ ಮೊದಲಿಗೇ ಹೇಳಿದ್ದಾರೆ: "ಹೀಗೆ ಪುನಃ ಪುನಃ ಅಭ್ಯಾಸ ಮಾಡುವುದರಿಂದ ತನ್ನ ಮೂಲದಲ್ಲಿ ಸ್ಥಿರವಾಗಲು (ನೆಲೆಗೊಳ್ಳಲು) ಮನಶ್ಶಕ್ತಿ ಹೆಚ್ಚುತ್ತದೆ." **ಈ ಶಕ್ತಿಯು ಕೇವಲ ಆತ್ಮದಿಂದ ಅನ್ಯವಾದ ವಸ್ತುವಿನ ಮೇಲೆ (ಅಂದರೆ ಮಧ್ಯಮ ಪುರುಷದ ಮೇಲೆ) ನೆಲೆಗೊಳ್ಳುವ ಶಕ್ತಿ. ಯಾರು ಆತ್ಮಸಿದ್ಧಿಯನ್ನು ಮಾತ್ರ ಬಯಸಿ ಪ್ರಯತ್ನಿಸುತ್ತಾರೋ ಅವರಿಗೆ ಜಪ–ಧ್ಯಾನಗಳಿಂದ ಲಭಿಸುವ ಈ ರೀತಿಯ ಶಕ್ತಿಯು ಅಡ್ಡಿಯೇ ಹೊರತು ಮತ್ತೇನಲ್ಲ** ಎಂಬುದನ್ನು ಈ ಪುಸ್ತಕದಲ್ಲಿ ಗುರುತಿಸಿ ಹೇಳಲಾಗಿದೆ ಎಂದು ಓದುಗರು ಅರ್ಥೈಸಿಕೊಳ್ಳಬೇಕು.

ಜಪ–ಧ್ಯಾನಗಳಿಂದ ಆತ್ಮಶೋಧದ ಯಶಸ್ಸಿಗೆ ದೊರೆಯುವ ಸಹಾಯವೆಂದರೆ ತಿರುಕೊಯ್ಲೂರಿನ ದಾರಿಯಲ್ಲಿ ಸೈಕಲ್ ಕಲಿತು ವೆಲ್ಲೂರಿಗೆ ಹೋಗಲು ಸಿಕ್ಕ ಸಹಾಯದಂತೆ. ಹೇಗೆಂದರೆ ತಿರುಕೊಯ್ಲೂರಿನ ದಾರಿಯಲ್ಲಿ ಸೈಕಲ್ ಕಲಿಯುವುದು ದೀರ್ಘಾವಧಿಯ ನಂತರ ವೆಲ್ಲೂರಿಗೆ ಹೋಗಲು ಪರೋಕ್ಷ ಸಹಾಯವನ್ನು ನೀಡಬಹುದು. ಹಾಗೆಯೇ ಜಪ–ಧ್ಯಾನಗಳ ಅಭ್ಯಾಸ ದೀರ್ಘಾವಧಿಯಲ್ಲಿ ಆತ್ಮಸಿದ್ಧಿಗೆ ಪರೋಕ್ಷ ಸಹಾಯ ಮಾಡಬಹುದು. ಅದೇ ರೀತಿ, ಜಪ–ಧ್ಯಾನಗಳಿಂದ ಆತ್ಮಶೋಧದ ಯಶಸ್ಸಿಗೆ ಉಂಟಾಗುವ ತೊಡಕೆಂದರೆ ತಿರುಕೊಯ್ಲೂರಿನ ದಾರಿಯಲ್ಲಿ ಸೈಕಲ್ ಕಲಿಯುವುದರಿಂದ ಉಂಟಾದಂತೆ, ಏಕೆಂದರೆ ತಿರುಕೊಯ್ಲೂರಿನ ದಾರಿಯ ಕಲಿಕೆ ಲಕ್ಷ್ಯದಿಂದ ದೂರಕ್ಕೆ ಕೊಂಡೊಯ್ಯುವಂತೆ ಜಪ–ಧ್ಯಾನಾಭ್ಯಾಸಗಳು ವ್ಯಕ್ತಿಯನ್ನು ಆತ್ಮದಿಂದ ದೂರಕ್ಕೆ ಕೊಂಡೊಯ್ಯುತ್ತದೆ[೪೧].

ಇಲ್ಲಿ ಮನಸ್ಸಿನ ಏಕಾಗ್ರತಾ ಶಕ್ತಿಯನ್ನು ಸೈಕಲ್ ಬಿಡುವ ಕಲೆಗೆ ಹೋಲಿಸಲಾಗಿದೆ. ಈ ಏಕಾಗ್ರತಾ ಶಕ್ತಿಯೆನ್ನುವುದು ಹರಿತವಾದ ಚಾಕು, ಬೆಂಕಿ ಅಥವಾ ಅಣುಶಕ್ತಿಯಂತೆ ಒಂದು ಅದ್ಭುತ ಆಯುಧವಾಗಿದೆ; ಇದನ್ನು ಹೇಗೆ ಬಳಸುತ್ತೇವೆ ಎಂಬುದರ ಮೇಲೆ ಒಳಿತು ಅಥವಾ ಕೆಡುಕು ಉಂಟು ಮಾಡಬಹುದು. ಹರಿತವಾದ ಚಾಕುವಿನಿಂದ ಯಾರನ್ನಾದರೂ ಕೊಲ್ಲಬಹುದು ಅಥವಾ ಒಬ್ಬನ ಜೀವ ಉಳಿಸಲು ಶಸ್ತ್ರಚಿಕಿತ್ಸೆ ಮಾಡಬಹುದು. ಅದರಂತೆ, ಬೆಂಕಿ ಮತ್ತು ಅಣುಶಕ್ತಿಗಳನ್ನು ರಚನಾತ್ಮಕ ಅಥವಾ ವಿನಾಶಕ ಉದ್ದೇಶಗಳಿಗೆ ಬಳಸಬಹುದು. ಹಾಗೆಯೇ, ಜಪ–ಧ್ಯಾನ ಮುಂತಾದ

---

೪೧. ತಮ್ಮ ದೇವರ ದಿವ್ಯನಾಮವನ್ನು ಅವನ ಪಾದಕ್ಕೆ ಶುದ್ಧ, ಹೃದಯ ಕರಗುವ ಪ್ರೀತಿಯಿಂದ ಪುನರಾವರ್ತಿಸುವ ನಿಜವಾದ ಭಕ್ತನು ಮಾಡುವ ಜಪವನ್ನು ನಾವು ಹೀಯಾಳಿಸುತ್ತಿದ್ದೇವೆ ಎಂದು ಪ್ರಾಮಾಣಿಕ ದೈವಭಕ್ತರು ಭಾವಿಸುವುದು ಬೇಡ. ಇಲ್ಲಿ ನಿಷ್ಪ್ರಯೋಜಕವೆಂದು ಟೀಕಿಸಲ್ಪಟ್ಟಿದ್ದು ಪ್ರೀತಿಯ ಅಡಿಪಾಯವಿಲ್ಲದೇ, ಏಕಾಗ್ರತಾ ಶಕ್ತಿ ಗಳಿಸುವ ಏಕೈಕ ಉದ್ದೇಶದಿಂದ ಸಾಧನೆಯಾಗಿ ಬಳಸುವ ಮಂತ್ರ–ಜಪಗಳು ಮತ್ತು ಧ್ಯಾನಲಕ್ಷ್ಯಗಳು. ಆದರೆ, ತೀವ್ರ ಪ್ರೀತಿಯಿಂದ ತನ್ನ ಇಷ್ಟದೈವ ಅಥವ ಗುರುವಿನ ದಿವ್ಯ ನಾಮವನ್ನು ಜಪಿಸುವ ಭಕ್ತಿ ಮಾರ್ಗದ ಸಾಧಕನು 'ಶ್ರೀ ರಮಣ ಮಾರ್ಗ:ಭಾಗ ಎರಡು' ಗ್ರಂಥದ ಎರಡನೇ ಅಧ್ಯಾಯದಲ್ಲಿ ವಿವರಿಸಲಾದ ನಮ್ಮ ಭಕ್ತಿ ಪಂಥದ ಮೂರು (ಬ) ಅಥವಾ ನಾಲ್ಕನೆಯ ತರಗತಿಯ ವಿದ್ಯಾರ್ಥಿ ವರ್ಗಕ್ಕೆ ಸೇರುತ್ತಾನೆ. ಅದರಲ್ಲಿ ಆತ್ಮ ಸಮರ್ಪಣೆಯ ಮಾರ್ಗವನ್ನು ವಿವರಿಸಲಾಗಿದೆ. ಶ್ರೀ ರಮಣರು ಬೋಧಿಸಿದ ಎರಡು ಮಾರ್ಗಗಳಲ್ಲಿ (ಆತ್ಮಶೋಧ ಮತ್ತು ಆತ್ಮ ಸಮರ್ಪಣೆ) ಇದೂ ಒಂದು. ಪ್ರೀತಿಯೊಂದಿಗೆ ಮಾಡಲಾದ ಜಪವನ್ನು ಖಂಡಿಸಿಯೂ ಇಲ್ಲ, ಹಿಮ್ಮೆಟ್ಟಿಸಿಯೂ ಇಲ್ಲ. ಓದುಗರು ಪರಿಶಿಷ್ಟ ಒಂದು (ಡ)ವನ್ನು ನೋಡಬಹುದು.

ಅಭ್ಯಾಸಗಳಿಂದ ಬೆಳೆಸಿಕೊಂಡ ಏಕಾಗ್ರತಾ ಶಕ್ತಿಯು ಒಳಿತು ಅಥವಾ ಕೆಡುಕು ಮಾಡಬಹುದು. ಯಾರಿಗಾದರೂ ತಾಂತ್ರಿಕ ಸಿದ್ಧಿಗಳು ಅಥವಾ ಇಂದ್ರಿಯ ಸುಖದಲ್ಲಿ ಆಸಕ್ತಿಯಿದ್ದರೆ ಆತ ಈ ಏಕಾಗ್ರತಾ ಶಕ್ತಿಯಿಂದ ಅವನ್ನು ಪಡೆಯಲು ಸೂಕ್ಷ್ಮವಾದ, ನಿಪುಣತೆಯಿಂದ ಬಳಸಬಹುದು. ಜಪ-ಧ್ಯಾನಗಳಿಂದ ಪಡೆಯುವ ಏಕಾಗ್ರತಾ ಶಕ್ತಿಯು ಮಧ್ಯಮ ಪುರುಷದ ಮೇಲೆ ಏಕಾಗ್ರವಾಗಿರುವುದರಿಂದ ಅದು ಬಹಿರ್ಮುಖಿ ಏಕಾಗ್ರತೆಯಾಗಿರುತ್ತದೆ ಮತ್ತು ಮುಮುಕ್ಷುವನ್ನು ಅನಾತ್ಮದತ್ತ ಮುನ್ನಡೆಯಲು ಪ್ರೇರೇಪಿಸುತ್ತದೆ. ಆತನಿಗೆ ಒಳ್ಳೆಯ ನಿತ್ಯಾನಿತ್ಯ ವಸ್ತುವಿವೇಕ ಇದ್ದರೆ ಮಾತ್ರ. ಮಧ್ಯಮ ಪುರುಷ ಗಮನವನ್ನು ಉತ್ತಮ ಪುರುಷದತ್ತ ತಿರುಗಿಸುವ ಶಕ್ತಿಯಿದ್ದರೆ ಮಾತ್ರ ಅಂತಹ ಏಕಾಗ್ರತಾ ಶಕ್ತಿ ಆತ್ಮಶೋಧಕ್ಕೆ ಮುನ್ನಡೆಸುತ್ತದೆ. ದೀರ್ಘಕಾಲದ ಕಠಿಣ ಪರಿಶ್ರಮದಿಂದ (ತಿರುಕೊಯ್ಲೂರಿನ ದಾರಿಯಲ್ಲಿ ದೀರ್ಘಕಾಲದ ಕಠಿಣ ಪರಿಶ್ರಮದಿಂದ ಸೈಕಲ್ ಬಿಡುವ ಕಲೆ ಕಲಿತವನಿಗೆ ವೆಲ್ಲೂರಿನತ್ತ ಎಪ್ಪತ್ತು ಮೈಲಿ ಸಂಚಾರ ಮಾಡಬೇಕಾದ ಹಾಗೆ) ನಂತರ ನಿಜವಾದ ಆತ್ಮಜ್ಞಾನ ಪ್ರಾಪ್ತಿಯಾದ ಆತ್ಮನಿಷ್ಠೆಯನ್ನು ಗಳಿಸಲು ಶಕ್ತಿ ಕೊಡುತ್ತದೆ. ಹಾಗಿದ್ದರೂ, ಜಪ-ಧ್ಯಾನಗಳ ಮೂಲಕ ಆಧ್ಯಾತ್ಮಿಕ ದಾರಿ ಹಿಡಿದ ಸಾಧಕರು ಹೆಚ್ಚಾಗಿ ತಾಂತ್ರಿಕ ಸಿದ್ಧಿಗಳು, ಹೆಸರು ಮತ್ತು ಪ್ರಸಿದ್ಧಿ, ಮತ್ತಿತರ ಕ್ಷಣಿಕ ಸುಖಗಳತ್ತ ಒಲವು ಹೊಂದುವುದನ್ನು ನಾವು ನೋಡುವುದಿಲ್ಲವೇ? ಆದ್ದರಿಂದ ಜಪ ಅಥವಾ ಧ್ಯಾನದಿಂದ ಪಡೆದ ಏಕಾಗ್ರತಾ ಶಕ್ತಿಯು ಹೇಗಿದ್ದರೂ ಅಪಾಯಕಾರಿಯಾದುದು ಎಂದು ತಿಳಿದುಕೊಳ್ಳಬೇಕು. ಅದರ ಬದಲು ಪ್ರಾರಂಭದಿಂದಲೇ ಆತ್ಮಾವಧಾನ ಅಭ್ಯಸಿಸುತ್ತ ಏಕಾಗ್ರತಾ ಶಕ್ತಿಯನ್ನು ಪಡೆಯುವುದು ವಿವೇಕ ಎಂದು ಅರಿಯಬೇಕು.

ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವುದು ಖಂಡಿತಾ ಅವಶ್ಯವಿದೆ. ಜಪ-ಧ್ಯಾನ ಮಾಡುವಾಗಲೂ ಇತರ ವಿಚಾರಗಳತ್ತ ಅಲೆಯುವ ಮನಸ್ಸನ್ನು ಎಳೆ ತಂದು ಒಂದೇ ವಿಚಾರಕ್ಕೆ ಕಟ್ಟಿ ಹಾಕುವುದು ಅವಶ್ಯಕವಾಗಿದೆ. ಅದೇ ಪ್ರಯತ್ನವನ್ನು ಆತ್ಮಾವಧಾನ ಅಭ್ಯಸಿಸುವಾಗ ಬಳಸಿ ಅಲೆಯುವ ಮನಸ್ಸನ್ನು ನಮ್ಮ ಇರುವ-ಅರಿವಿಗೆ (ಸತ್-ಚಿತ್) ನಿಷ್ಠವಾಗಿಸಬೇಕು. ಎರಡೂ ರೀತಿಯ ಅಭ್ಯಾಸಗಳಲ್ಲಿ ಮನಸ್ಸಿನ ಏಕಾಗ್ರತೆ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಅಗತ್ಯವಿದೆ. ಹೀಗಿರುವಾಗ ಮುಮುಕ್ಷುವಾದವನು ಅಪಾಯರಹಿತವಾದ ಆತ್ಮಾವಧಾನವನ್ನು ಮೊದಲಿನಿಂದಲೇ ಅಭ್ಯಸಿಸಿ ಗಳಿಸಿಕೊಳ್ಳಬಾರದೇಕೆ? ಶ್ರೀ ಭಗವಾನರ ಸನ್ನಿಧಿಯಲ್ಲಿ ನಡೆದ ಈ ಕೆಳಗಿನ ಘಟನೆ ಈ ಅಂಶದ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತದೆ.

ಶ್ರೀ ಭಗವಾನರ ಸನ್ನಿಧಿಯಲ್ಲಿ ಸ್ವಲ್ಪ ಕುಳಿತ ನಂತರ ಭಕ್ತನೊಬ್ಬ ಅವರಿಗೆ ಕೇಳಿದನು: "ಭಗವನ್, ಆತ್ಮಶೋಧವನ್ನು ಮಾಡಲು ನನಗೆ ಸಾಧ್ಯವಾಗುತ್ತಿಲ್ಲ. ಇದು ಕಷ್ಟವಾಗಿ ಕಂಡಿದೆ. ಇದರ ಬದಲು ಧ್ಯಾನ ಮಾಡಲೇ?" ಶ್ರೀ ಭಗವಾನರು ಉತ್ತರಿಸಿದರು "ಹಾಗೇ ಮಾಡು". ಕೂಡಲೇ ಆ ಭಕ್ತ ಹಾಲಿನಿಂದ ಹೊರಗೆ ಹೋದನು. ಆಗ ಶ್ರೀ ಭಗವಾನರು ತಮ್ಮ ಬಳಿ ಇದ್ದವರತ್ತ ತಿರುಗಿ ಹೇಳಿದರು: "ಆತ್ಮಶೋಧ ಮಾಡುವುದು ತನಗೆ ಕಷ್ಟವೆಂದು ಹೇಳುತ್ತಿದ್ದಾನೆ, ಅದನ್ನು ಮಾಡಲಾರೆ ಎನ್ನುತ್ತಿದ್ದಾನೆ. ಧ್ಯಾನ ಮಾಡಲು ನನ್ನ ಅನುಮತಿ ಕೇಳುತ್ತಿದ್ದಾನೆ. ತನ್ನಿಂದ ಸಾಧ್ಯವಿಲ್ಲವೆಂದು ಅವನೇ ಹೇಳುತ್ತಿರುವಾಗ ಆತ್ಮಶೋಧ ಮಾಡುವಂತೆ ನಾನು ಅವನಿಗೆ ಹೇಗೆ ತಾನೇ ಒತ್ತಾಯ ಮಾಡಲಿ? ಆದ್ದರಿಂದ, ಅವನು

ಧ್ಯಾನ ಮಾಡಲು ಬಯಸುವಾಗ 'ಹಾಗೇ ಮಾಡು' ಎನ್ನಬೇಕಾಗುತ್ತದೆ. ಅವನು ನಾಳೆ ಬಂದು ಹೇಳಬಹುದು: "ಭಗವನ್, ಧ್ಯಾನದಲ್ಲಿ ನನ್ನ ಮನಸ್ಸು ನಿಲ್ಲುತ್ತಿಲ್ಲ. ಹಾಗಾಗಿ ಜಪ ಮಾಡಲೇ?" ಎಂದು. ಆಗ ಮತ್ತೆ ನಾನು 'ಹಾಗೇ ಮಾಡು' ಎನ್ನಬೇಕಾಗುತ್ತದೆ. ಇದೇ ರೀತಿ ಮತ್ತೊಂದು ದಿನ ತಕರಾರು ಹೇಳಬಹುದು: "ಜಪದಲ್ಲಿ ನನ್ನ ಮನಸ್ಸು ಶಾಂತವಾಗಿ ನಿಲ್ಲುತ್ತಿಲ್ಲ. ಬರೀ ನನ್ನ ನಾಲಿಗೆ ಮಂತ್ರ ಹೇಳುತ್ತದೆ, ಮನಸ್ಸು ಅನೇಕ ವಿಷಯಗಳತ್ತ ಹರಿದಾಡುತ್ತದೆ. ನಾನು ಪೂಜೆ ಮಾಡಲೇ, ಸ್ತೋತ್ರ ಪಠಿಸಲೇ, ಮುಂತಾಗಿ? ಪ್ರತಿಯೊಂದು ತಕರಾರಿಗೂ "ಹಾಗೇ ಮಾಡು", "ಹಾಗೇ ಮಾಡು" ಎನ್ನದೇ ನಾನು ಬೇರೇನು ಮಾಡಲಿ? ಸ್ತೋತ್ರ ಪಠನವಿರಲಿ, ಜಪವಿರಲಿ, ಧ್ಯಾನವಿರಲಿ, ಯಾವುದೇ ಸಾಧನೆಯಿರಲಿ, ಯಾವುದನ್ನಾದರೂ ಪ್ರಾಮಾಣಿಕ ಪ್ರಯತ್ನದಿಂದ ಮಾಡಿದರೆ, ಅದೇ ಶ್ರಮದಿಂದ ಆತ್ಮಶೋಧವನ್ನೂ ಮಾಡಬಹುದು! ಈ ಎಲ್ಲ ತಕರಾರು ಮಾಡುವವರು ಯಾವುದೇ ಸಾಧನೆಯನ್ನು ಪ್ರಾಮಾಣಿಕವಾಗಿ ಮಾಡದವರು ಮಾತ್ರ, ಅಷ್ಟೇ. ಯಾವುದೇ ಸಾಧನೆಯಲ್ಲಿ ಅಗತ್ಯವಿರುವುದು ಓಡಿ ಹೋಗುವ ಮನಸ್ಸನ್ನು ಹಿಂದಕ್ಕೆಳೆದು ತಂದು ಒಂದೇ ಒಂದರ ಮೇಲೆ ನಿಲ್ಲಿಸುವುದು. ಅಂದ ಮೇಲೆ, ಇದನ್ನು ಎಳೆತಂದು ಆತ್ಮಾವಧಾನದಲ್ಲಿ ಏಕೆ ನಿಲ್ಲಿಸಬಾರದು? ಆ ಒಂದೇ ಆತ್ಮವಿಚಾರ, ಮಾಡಬೇಕಾದ್ದು ಇಷ್ಟೇ! ಭಗವದ್ಗೀತೆಯಲ್ಲಿ ಕೂಡ ಇದನ್ನು ಹೇಳಲಾಗಿದೆ"

ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿ ಗೃಹೀತಯಾ।

ಆತ್ಮಸಂಸ್ಥಂ ಮನಃಕೃತ್ವಾ ನ ಕಿಂಚಿದಪಿ ಚಿಂತಯೇತ್॥

ಅಂದರೆ "ಅತ್ಯಂತ ಧೈರ್ಯ ಹೊಂದಿದ ಬುದ್ಧಿಯಿಂದ (ವಿವೇಕದಿಂದ) ಸ್ವಲ್ಪ ಸ್ವಲ್ಪವಾಗಿ ಮನಸ್ಸನ್ನು ನಿಶ್ಚಲವಾಗಿ ಮಾಡು; ಆತ್ಮನಲ್ಲಿ ಮನಸ್ಸನ್ನು ನಿಲ್ಲಿಸು; ಬೇರೆ ಯಾವುದರ ಬಗ್ಗೆಯೂ ಯೋಚಿಸಬೇಡ" (ಅಧ್ಯಾಯ ೬, ಶ್ಲೋಕ ೨೫) ಮತ್ತು,

ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್।

ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್॥

ಅಂದರೆ "ಚಂಚಲವಾದ ಮನಸ್ಸು ಯಾವುದರ ಕಡೆಯಾದರೂ ಹರಿದಾಡಿದಾಗ, ಆ ಪ್ರತಿಯೊಂದರಿಂದ ಹಿಂದಕ್ಕೆಳೆದು ಆತ್ಮನಲ್ಲಿ ನಿಲ್ಲಿಸು ಮತ್ತು ಅಲ್ಲೇ ಗಟ್ಟಿಯಾಗಿ ನೆಲೆಸುವಂತೆ ಮಾಡು. (ಅಧ್ಯಾಯ ೬, ಶ್ಲೋಕ ೨೬)[೪೨]

ಧ್ಯಾನರೂಪಗಳಲ್ಲೇ ಅತ್ಯುನ್ನತವೆಂದು ಪರಿಗಣಿಸಲಾಗಿರುವ 'ನಾನು ಬ್ರಹ್ಮ' (ಅಹಂಬ್ರಹ್ಮಾಸ್ಮಿ) ಎಂಬಂತಹ ವಿಚಾರಗಳ ಮೇಲೆ ಕೇಂದ್ರೀಕರಣವನ್ನು ಕೂಡ ಶ್ರೀ ಭಗವಾನರು 'ಶಕ್ತಿಯ ಕೊರತೆಯಿಂದಾಗಿ' ಎಂದು ವರ್ಣಿಸಿದ್ದಾರೆ. ('ಉಳ್ಳದು ನಾರ್ಪದು'ವಿನ ಪದ್ಯ ೩೨ರಲ್ಲಿ 'ಉರನ್ ಇನ್‌ಮೈಯಿನಾಲ್')

ಆದ್ದರಿಂದ ಜಪ, ಧ್ಯಾನ ಮುಂತಾದವುಗಳ ಲಕ್ಷ್ಯವಾಗಿರುವ ಮಧ್ಯಮ ಅಥವಾ ಪ್ರಥಮ ಪುರುಷವನ್ನು ಗುರಿಯಾಗಿಸಿಕೊಂಡು ಮನಸ್ಸು ಪಡೆಯವುದೂ ಕೂಡ **ನಿಜವಾಗಿ**

೪೨. ಈ ಎರಡು ಶ್ಲೋಕಗಳನ್ನು ಶ್ರೀ ಭಗವಾನರು 'ಭಗವದ್ಗೀತಾಸಾರ'ದ ಪದ್ಯ ೨೭ ಮತ್ತು ೨೮ ಆಗಿ ತಮಿಳಿಗೆ ಅನುವಾದಿಸಿದ್ದಾರೆ.

ಶಕ್ತಿಯನ್ನಲ್ಲ, ಬರೀ ದೌರ್ಬಲ್ಯವನ್ನು ಮಾತ್ರ! ಮುಮ್ಮುಖದ ನಾಗಾಲೋಟವು ರೂಢಿಯಾಗಿರುವ ರೇಸ್ ಕುದುರೆಯು, ಕುದುರೆಯು ಹಿಮ್ಮುಖ ಚಲನೆ ಅನಿವಾರ್ಯವಾಗಿರುವ, ಬಾವಿಯಿಂದ ನೀರೆತ್ತುವ ಕೆಲಸಕ್ಕೆ ಉಪಯೋಗ ಬಂದೀತೇ? ಇಲ್ಲ, ಅದರಿಂದ ಉಪಯೋಗವಿಲ್ಲ! 'ನಾನು ಯಾರು?'ವಿನಲ್ಲಿ ಶ್ರೀ ಭಗವಾನರು ಸೂಚಿಸಿದ ಆತ್ಮಶೋಧದ ಅಭ್ಯಾಸವೊಂದೇ, **"ಮತ್ತೆ ಮತ್ತೆ ಹೀಗೆ ಅಭ್ಯಾಸ ಮಾಡಿದಾಗ ತನ್ನ ಮೂಲದಲ್ಲಿ ನೆಲೆಸಲು ಮನಶ್ಶಕ್ತಿ ಹೆಚ್ಚುತ್ತದೆ"** ಎಂದು ಬರೆದಂತೆ, **ನಿಜವಾದ ಸಾಧನೆ, ಇದು ಮಾತ್ರ ಮನಸ್ಸಿಗೆ ಸರಿಯಾದ ಅವಶ್ಯಕ ಶಕ್ತಿಯನ್ನು ಕೊಡಬಲ್ಲದು.** ಆತ್ಮಕ್ಕೆ ಹೊರತಾದ ಇತರ ಗುರಿಗಳಲ್ಲಿ ತರಬೇತಿ ಪಡೆದು ಹಾಳಾಗದ ಮನಸ್ಸುಳ್ಳ, ಸೋಮಾರಿತನದ ಕುರುಹು ಇರದೇ ಅಗಾಧ ಉತ್ಸಾಹದಿಂದ ಮಕ್ಕಳಂತೆ ಪ್ರಶ್ನೆ ಕೇಳದ ವಿಧೇಯ ಮನಸ್ಸುಳ್ಳ ಭಕ್ತರು (ಮುಮುಕ್ಷುಗಳು) ಶ್ರೀ ಭಗವಾನರ ಬಳಿ ಬಂದ ಕೂಡಲೇ 'ನಾನು ಯಾರು?' ರೂಪದ ಆತ್ಮಾವಧಾನದ ಅಭ್ಯಾಸಕ್ಕೆ ಮನಸ್ಸು ತಿರುಗಿಸಿದರು, ಅದರಿಂದ ಮೇಲೆ ಹೇಳಿದ ನಿಜವಾದ ಅವಶ್ಯಕ ಶಕ್ತಿ ಪಡೆದರು. ತಮ್ಮ ಅನುಭವವನ್ನು ಆಧರಿಸಿ "ಓಹ್! ಆತ್ಮಜ್ಞಾನ ಎಲ್ಲಕ್ಕಿಂತ ಸುಲಭ! ಖಂಡಿತಾ ಇದು ಅತಿ ಸುಲಭ![೪೩]" ಎಂದು ಅವರು ಘೋಷಿಸಲು ಶಕ್ತರಾದರು.

ಹೀಗೆ 'ನಾನು ಯಾರು?' ಎಂಬ ಶೋಧವು ಆತ್ಮಜ್ಞಾನಕ್ಕೆ ಅಗತ್ಯವಿರುವ ನಿಜವಾದ ಮನಶ್ಶಕ್ತಿಯನ್ನು ಕೊಡುತ್ತದೆಯಾದರೂ (ನಿಜವಾಗಿ, ಬೇರಾವ ಸಾಧನೆಯೂ ಅಲ್ಲ, ಆತ್ಮಶೋಧವೊಂದೇ ಈ ಶಕ್ತಿ ಕೊಡುತ್ತದೆ) ಶ್ರೀ ಭಗವಾನರ ಭಕ್ತರಾದ ನಮ್ಮಲ್ಲಿಯೇ[೪೪] ತಪ್ಪು ಕಲ್ಪನೆಯಿದೆ ಮತ್ತು ಹರಡುತ್ತಿದೆ – ಆತ್ಮಶೋಧದ ದಾರಿ ಕಷ್ಟ, ಜಪ, ಧ್ಯಾನ, ಯೋಗ, ಮುಂತಾದ ಪದ್ಧತಿಗಳು ಸುಲಭ ಎಂದು. ಈ ವಾದವು ಸತ್ಯದಿಂದ ಎಷ್ಟು ದೂರವಿದೆ ಎಂದು ನೋಡೋಣ.

ಈಗ, ಈ ವಿಷಯದ ಬಗ್ಗೆ ಶ್ರೀ ಭಗವಾನರ ಅಭಿಪ್ರಾಯವೇನು? ಅವರದೇ ಶಬ್ದಗಳತ್ತ ಕಣ್ಣು ಹಾಯಿಸೋಣ:

> **"…..ಎಲ್ಲ ದಾರಿಗಳಲ್ಲಿ, ಈ ದಾರಿ ಅತ್ಯಂತ ಸುಲಭ![೪೫]"**
>
> **'ಆತ್ಮವಿದ್ಯಾ ಕೀರ್ತನಂ' (ಪದ್ಯ ೪)**

---

೪೩. 'ಆತ್ಮ ವಿದ್ಯಾ ಕೀರ್ತನಂ'ಗಾಗಿ ಶ್ರೀ ಮುರುಗನಾರ್ ಅವರು ರಚಿಸಿದ ಪಲ್ಲವಿ.

೪೪. 'ನಮ್ಮಲ್ಲಿ' ಪದವು ಶ್ರೀ ರಮಣರ ಎಲ್ಲ ಭಕ್ತರನ್ನು ಸೂಚಿಸುತ್ತದೆಯಾದರೂ ಶ್ರೀ ಮುರುಗನಾರ್ ಅವರು 'ಮೆಯ್ ತವ ವಿಳಕ್ಕಮ್' ಪದ್ಯ ೬೮ರಲ್ಲಿ ಕೊಟ್ಟಿರುವ ಅಳತೆಗೋಲಿನಿಂದ (ಮಾನದಂಡ) ಅಳೆದಾಗ– "ಇತರರು ಕಷ್ಟ, ನಿಜಕ್ಕೂ ಕಷ್ಟ ಎಂದು ಘೋಷಿಸುವುದು ನಮ್ಮ ಪ್ರಭು (ರಮಣ)ವಿನ ಭಕ್ತರಿಗೆ ಅತ್ಯಂತ ಸುಲಭ"–ಶ್ರೀ ಭಗವಾನರ ನಿಜವಾದ ಭಕ್ತರು ಯಾರು ಮತ್ತು ಇತರರು ಎಂದರೆ ಯಾರು ಎಂಬುದು 'ನಮ್ಮಲ್ಲಿ' ಪದದಲ್ಲಿ ಸೂಚಿಸಲ್ಪಟ್ಟಿದೆ ಎಂದು ಓದುಗರಿಗೆ ಚೆನ್ನಾಗಿ ತಿಳಿಯುತ್ತದೆ.

೪೫. "ಕರ್ಮ ಬಂಧನದಿಂದ ಬಿಡಿಸಿಕೊಳ್ಳಲು ಮುಂತಾಗಿ, ಮತ್ತು ಜನ್ಮಾಂತರವನ್ನು ನಾಶಪಡಿಸಲು ಮುಂತಾಗಿ ಎಲ್ಲ ದಾರಿಗಳಲ್ಲಿ ಈ ದಾರಿಯೇ ಅತಿ ಸುಲಭ! ನಾವು ಸುಮ್ಮನೇ ಇದ್ದರೆ (ಅಂದರೆ ನಾವು ಬರೀ 'ಇರು'ವುದು) ಮನಸ್ಸು–ಮಾತು–ದೇಹಗಳಲ್ಲಿ ಕನಿಷ್ಠ ಕ್ರಿಯೆಯೂ ಇರದಿದ್ದರೆ, ಏನದ್ಭುತ! ಇದೇ ಹೃದಯದಲ್ಲಿ ಆತ್ಮಪ್ರಭೆಯಾಗುತ್ತದೆ. ಸದಾ ಇರುವ ಅನುಭವವಾಗುತ್ತದೆ; ಎಲ್ಲ ಭಯ ನಿಲ್ಲುತ್ತದೆ; ಆನಂದಸಾಗರ ಉಕ್ಕುತ್ತದೆ".

ಆತ್ಮ ವಿದ್ಯಾ ಕೀರ್ತನಂ, ಪದ್ಯ ೪

"…..ಎಲ್ಲರಿಗೂ ಇದು ನೇರವಾದ ದಾರಿ"

'ಉಪದೇಶ ಉಂದಿಯಾರ್' (ಪದ್ಯ ೧೭)

ಹೀಗೆ ಶ್ರೀ ಭಗವಾನರ ಅಭಿಪ್ರಾಯ ಸ್ಪಷ್ಟವಿದೆ. ಈ ಆತ್ಮಶೋಧದ ದಾರಿ ಕೇವಲ ಅತ್ಯಂತ ಸುಲಭ ದಾರಿ ಮಾತ್ರವಲ್ಲ, ಎಲ್ಲ ಮುಮುಕ್ಷುಗಳಿಗೆ ಅತಿ ಸುಲಭವೂ ಅತ್ಯಂತ ನೇರವೂ ಆಗಿದೆ. 'ಭಗವಾನರು ಹೀಗೇಕೆ ಹೇಳಿದರು? ಅವರ ಅಭಿಪ್ರಾಯಕ್ಕೆ ಸಮರ್ಥನೆಯೇನಾದರೂ ಇದೆಯೇ?' ಎಂದು ಅರ್ಥೈಸಿಕೊಳ್ಳಲು ಪ್ರಯತ್ನಿಸದೇ, ನಮ್ಮಲ್ಲಿ ಕೆಲವರು 'ಓಹ್, ಇದು ಭಗವಾನರಿಗೆ ಮಾತ್ರ ಸುಲಭ, ಇತರರಿಗೆ ಕಷ್ಟ' ಎಂದು ಹಾರಿಕೆಯ ಮಾತಾಡುತ್ತಾರೆ ಮತ್ತು ಎದೆಗುಂದಿ ಧೈರ್ಯ ಕಳೆದುಕೊಳ್ಳುತ್ತಾರೆ. ಶ್ರದ್ಧೆಯೊಂದೇ ನಮ್ಮನ್ನು ಗುರಿ ತಲುಪಿಸಬಲ್ಲದ್ದಾದ್ದರಿಂದ, ಈ ಧೈರ್ಯ ಕಳೆದುಕೊಳ್ಳದೇ ಇರಲು ಶ್ರೀ ಭಗವಾನರ ಅಭಿಪ್ರಾಯಕ್ಕೆ ಪೂರಕವಾದ ಸಮರ್ಥನೆಯನ್ನು ಕಂಡುಕೊಳ್ಳಲು ಪ್ರಯತ್ನಿಸೋಣ.

ಯಾವುದನ್ನಾದರೂ ನಾವು 'ಇದು ಕಷ್ಟ', 'ಅದು ಸುಲಭ' ಎಂದು ಹೇಳಿದಾಗ ನಮ್ಮ ಅರ್ಥವೇನು? ಅಂದರೆ ಯಾವುದು ಕಷ್ಟ ಮತ್ತು ಯಾವುದು ಸುಲಭ? ನಮಗೆ ಇಷ್ಟವಿಲ್ಲದ್ದು, ನಾವು ಮಾಡಲಾರದ್ದು, ನಮಗೆ ತಿಳಿದಿಲ್ಲದ್ದು–ಅವನ್ನು ಮಾತ್ರ ನಾವು ಕಷ್ಟವೆನ್ನುತ್ತೇವೆ. ಇದರಿಂದ ಕೆಳಗಿನ ನಿರ್ಣಯಕ್ಕೆ ಬರಬಹುದು; ಈಗಾಗಲೇ ನಮ್ಮ ಪ್ರೀತಿಸುವ (ಇಚ್ಛಾ) ಶಕ್ತಿ, ಮಾಡುವ (ಕ್ರಿಯಾ) ಶಕ್ತಿ ಮತ್ತು ತಿಳಿಯುವ (ಜ್ಞಾನ) ಶಕ್ತಿಗಳ ಒಳಗಿರುವುದನ್ನು ನಾವು ಸುಲಭವೆನ್ನುತ್ತೇವೆ. **ನಮ್ಮ ಇಚ್ಛಾಶಕ್ತಿ, ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳ ಹೊರಗಿನ ಅನುಭವಗಳನ್ನು ಕಷ್ಟವೆನ್ನುತ್ತೇವೆ.** ಯಾವುದು ಕಷ್ಟ ಮತ್ತು ಯಾವುದು ಸುಲಭ ಎಂಬುದರ ಸರಿಯಾದ ವ್ಯಾಖ್ಯೆ ಇದು. ಈ ವ್ಯಾಖ್ಯೆಯೊಂದಿಗೆ ಎರಡರಲ್ಲಿ ಯಾವುದು ಸುಲಭವೆಂದು ನೋಡೋಣ: ಜಪ, ಧ್ಯಾನ, ಯೋಗ, ಮುಂತಾದ ವಿವಿಧ ಆಧ್ಯಾತ್ಮಿಕ ಅಭ್ಯಾಸಗಳಿಗೆ ಬೇಕಾದ ಶ್ರಮ ಅಥವಾ ಆತ್ಮಶೋಧಕ್ಕೆ ಬೇಕಾದ ಶ್ರಮ.

ನಾವು ಈಗಾಗಲೇ ಹೇಳಿರುವಂತೆ, ಜಪ, ಧ್ಯಾನ, ಯೋಗ ಮುಂತಾದ ದಾರಿಗಳಲ್ಲಿ ಮಾಡುವ ಪ್ರಯತ್ನವೆಂದರೆ ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯದ ಮೇಲೆ ಗಮನವಿಡುವುದೇ ಹೊರತು ಮತ್ತೇನಲ್ಲ; ಶ್ರೀ ಭಗವಾನರು ಉಪದೇಶಿಸುವ ಆತ್ಮಶೋಧಕ್ಕೆ ಬೇಕಾದ ಪ್ರಯತ್ನವೆಂದರೆ ಉತ್ತಮ ಪುರುಷದ ಮೇಲೆ ಗಮನವಿಡುವುದು. ಜಪ, ಧ್ಯಾನ, ಅಥವಾ ನಾಲ್ಕು ಯೋಗಗಳಲ್ಲಿ ಯಾವುದಾದನ್ನಾದರೂ ಅಭ್ಯಸಿಸಲು ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯದ ಮೇಲೆ ಮನಸ್ಸಿನ ಏಕಾಗ್ರತಾ ಶಕ್ತಿಯನ್ನು ಬಳಸುವುದು ಅವಶ್ಯವಾಗಿದೆ; ಈ ರೀತಿ ಮನಶ್ಶಕ್ತಿಯ ಬಳಕೆ ಬರೀ ಬಹಿರ್ಮುಖವಾಗಿರುತ್ತದೆ. ಆದರೆ ಆತ್ಮಶೋಧದಲ್ಲಿ ಮನಸ್ಸಿನ ಏಕಾಗ್ರತಾ ಶಕ್ತಿಯನ್ನು ಉತ್ತಮ ಪುರುಷದ ಮೇಲೆ ಕೇಂದ್ರೀಕರಿಸಿ

ಇಲ್ಲಿ ಗಮನಿಸಬೇಕಾದ್ದೆಂದರೆ ತಮ್ಮ ದಾರಿಯನ್ನು ವರ್ಣಿಸುವಾಗ ಶ್ರೀ ಭಗವಾನರು 'ಅತ್ಯಂತ ಸುಲಭ' (ಸುಲಭತಮ) ಎಂದು ಬಳಸಿದ್ದಾರೆ. ಇತರ ದಾರಿಗಳಲ್ಲಿ ಮನಸ್ಸು, ಮಾತು ಅಥವಾ ದೇಹದಿಂದ ಏನನ್ನಾದರೂ ಮಾಡುವ ಕೆಲಸ ವಿಧಿಸಲ್ಪಟ್ಟಿದೆ. ಆದ್ದರಿಂದ ಈ ಸಲಕರಣೆಗಳನ್ನು ಬಳಸುವಲ್ಲಿ ಸ್ವಲ್ಪ ಕಷ್ಟದ ಅನುಭವವಾಗಬಹುದು. ಆದರೆ ಆತ್ಮಶೋಧದ ಮಾರ್ಗದಲ್ಲಿ ಸಾಧನಾಪಥವೆಂದು ಯಾವ ಕೆಲಸವನ್ನೂ ಕೊಡದೇ ಇರುವುದರಿಂದ ಇದು ಎಲ್ಲ ದಾರಿಗಳಲ್ಲಿ ಅತ್ಯಂತ ಸುಲಭ!

ಗಮನಿಸುವುದು ಅಗತ್ಯವಾಗಿದೆ. ಆದ್ದರಿಂದ ಇದೊಂದೇ ನಿಜಕ್ಕೂ ಅಂತರ್ಮುಖಿ. ಸ್ವಲ್ಪ ವಿಶ್ಲೇಷಿಸಿದರೆ ಸ್ಫುಟವಾಗುತ್ತದೆ–ನಮ್ಮಲ್ಲಿ ಪ್ರತಿಯೊಬ್ಬರಿಗೂ (ತೀರಾ ಸಾಮಾನ್ಯ ಮನುಷ್ಯನಿಗೂ ಕೂಡ) ಉತ್ತಮ ಪುರುಷನನ್ನು ಪ್ರೀತಿಸುವ, ಮಾಡುವ ಮತ್ತು ತಿಳಿಯುವ ಅನುಭವಗಳು ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯಗಳಿಗಿಂತ ಸ್ವಾಭಾವಿಕವೂ ಹೆಚ್ಚಿನವೂ ಆಗಿರುತ್ತವೆ. ಹೇಗೆಂದು ನೋಡೋಣ.

ಒಂದು ದೇವರ ನಾಮವನ್ನು, ದೇವರ ರೂಪವನ್ನು, ದೇವರ ಬಗ್ಗೆ ವಿವಿಧ ಭಾವಗಳಲ್ಲಿ ಒಂದನ್ನು[೪೬], ದೇಹದಲ್ಲಿಯ ಯೋಗದ ಷಟ್ಚಕ್ರಗಳನ್ನು ಮುಂತಾದವನ್ನು–ಮಧ್ಯಮ ಅಥವಾ ಪ್ರಥಮ ಪುರುಷದ ಬಗ್ಗೆ ಗಮನ ಹರಿಸುವ ಪ್ರಯತ್ನ ಅಗತ್ಯವಿರುವ ಯಾವುದನ್ನೇ ಆದರೂ ಮೊಟ್ಟ ಮೊದಲ ಬಾರಿಗೆ ನಮಗೆ ಹೇಳಿದಾಗ, ಅವೆಲ್ಲವೂ ಹೊಸವೇ ಆಗಿರುತ್ತವೆ; ತಿಳಿಯಲು, ಪ್ರೀತಿಸಲು, ಮಾಡಲು ನಮಗೆ ಹೊಸವೇ ಹೌದು. (ಗುರುಗಳೆಂದು ನಾವು ಸ್ವೀಕರಿಸುವ) ಇತರರಿಂದ ಹೊತ್ತಿಸಲ್ಪಡುವ ಮೊದಲು ಪ್ರೀತಿಸುವ, ಮಾಡುವ, ತಿಳಿಯುವ ಈ ಎಲ್ಲ ಅನುಭವಗಳು ನಮಗೆ ಗೊತ್ತೇ ಇರುವುದಿಲ್ಲ, ಹೇಗೆ?

ಕಲ್ಪಿಸಿ. ನಮ್ಮ ಪಾಲಕರು ಅಥವಾ ಯಾವುದೋ ಹಿರಿಯರು ನಮಗೆ ದೇವರ ನಾಮವನ್ನೋ ರೂಪವನ್ನೋ ಅಥವಾ ಗಾಯತ್ರಿಯಂತಹ ಪವಿತ್ರ ಮಂತ್ರವನ್ನೋ ಪರಿಚಯಿಸುತ್ತಾರೆ. ಈ ಪರಿಚಯವಾಗುವ ಮೊದಲು ನಮಗೆ ಆ ಮಂತ್ರಗಳು, ಧ್ಯಾನಗಳು ಅಥವಾ ದೇವರ ರೂಪಗಳು ಗೊತ್ತೇ ಇರುವುದಿಲ್ಲ. ಇಂತಹ ಮಂತ್ರಗಳು, ಧ್ಯಾನಗಳು ಮುಂತಾದವು ಇವೆಯೆಂದು **ಜ್ಞಾನದ ಅನುಭವವನ್ನು** ಹೊಸದಾಗಿ ಪಡೆಯುತ್ತೇವೆ. ಇದೇ ರೀತಿ, ಜಪಗಳು, ಧ್ಯಾನಗಳ ಮಹಾನತೆ, ಅನನ್ಯತೆ ಮತ್ತು ಶಕ್ತಿಗಳ ಬಗ್ಗೆ ಗುರುಗಳಿಂದ ಕೇಳಿದ ನಂತರವಷ್ಟೇ ಅವುಗಳಲ್ಲಿ ಶ್ರದ್ಧೆ, ಪ್ರೀತಿ ಪಡೆಯುತ್ತೇವೆ. ಇದು ನಾವು ಹೊಸದಾಗಿ ಪಡೆಯುವ **ಪ್ರೀತಿಯ ಅನುಭವ**. ಅಂದರೆ, ಇದಕ್ಕಿಂತ ಮೊದಲು ಇವನ್ನು ಪ್ರೀತಿಸಿರಲಿಲ್ಲ; ಇದೇ ಪ್ರಕಾರ, ಮಂತ್ರ ಜಪ, ಧ್ಯಾನಗಳನ್ನು ಮೊದಲು ಮಾಡಿರುವುದಿಲ್ಲ, ದೇವರ ಕುರಿತು ಸಂಬಂಧದ ಭಾವಗಳನ್ನು ಬೆಳೆಸಿಕೊಂಡಿರುವುದಿಲ್ಲ. ಗುರುವಿನ ಉಪಸ್ಥಿತಿಯಲ್ಲಿ ಹಲವು ಬಾರಿ ಪುನರಾವರ್ತಿಸಿ, ಅವರ ತಿದ್ದುಪಡಿ, ಸಲಹೆಗಳನ್ನು ಪಾಲಿಸಿದ ನಂತರವಷ್ಟೇ ಮಂತ್ರವನ್ನು ಸರಿಯಾಗಿ ಉಚ್ಚರಿಸುವುದು, ದನಿ ಏರಿಳಿಸುವುದು, ಸರಿಯಾದ ಸ್ಥಳದಲ್ಲಿ ನಿಲ್ಲಿಸುವುದು ಕಲಿತು ಜಪವನ್ನು ಸರಿಯಾಗಿ ಮಾಡಲು ಶಕ್ತರಾಗುತ್ತೇವೆ. ಇದು ನಮಗೆ ಹೊಸದಾಗಿ ಪಡೆದ **ಕ್ರಿಯೆಯ ಅನುಭವ**, ಅಂದರೆ ಆ ಮೊದಲು ಇದನ್ನು ಮಾಡಿರುವುದಿಲ್ಲ. ಧ್ಯಾನ, ಪ್ರಾಣಾಯಾಮ, ಹಠಯೋಗ, ರಾಜಯೋಗ, ಮುಂತಾದವಕ್ಕೂ ಇದೇ ಅನ್ವಯಿಸುತ್ತದೆ. ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯಗಳ ಆಧ್ಯಾತ್ಮಿಕ ಅಭ್ಯಾಸಗಳಿಗೆ ಸಂಬಂಧಿಸಿದ ಪ್ರೀತಿಸುವ, ಮಾಡುವ ಮತ್ತು ತಿಳಿಯುವ ಅನುಭವಗಳು ನಮಗೆ ಮೊದಲೇ ಇರಲಿಲ್ಲ, ಇವೆಲ್ಲ ನಾವು ಹೊಸದಾಗಿ ಪಡೆದದ್ದು ಎಂದು ಇದರಿಂದ ಸಿದ್ಧವಾಗುವುದಿಲ್ಲವೇ?

---

೪೬. ದೇವರ ಕುರಿತು ಭಾವಗಳು: ದ್ವೈತ ಪೂಜೆಯಲ್ಲಿ ದೇವರೊಂದಿಗೆ ವಿಭಿನ್ನ ಬಗೆಯ ಸಂಬಂಧಗಳಲ್ಲಿ ಒಂದನ್ನು ಭಕ್ತರು ಬೆಳೆಸಿಕೊಳ್ಳುತ್ತಾರೆ–ತಂದೆ,ತಾಯಿ,ಗಂಡ, ಮಗು, ಪ್ರಭು,ಸಖ, ಸೇವಕ, ಮುಂತಾದ ಬಗೆಗಿನ ಪ್ರೀತಿ.

ಇನ್ನೊಂದು ಕಡೆ ಉತ್ತಮ ಪುರುಷದ ಬಗ್ಗೆ ಪ್ರೀತಿಸುವ, ಮಾಡುವ ಮತ್ತು ತಿಳಿಯುವ ಅನುಭವಗಳು ನಮ್ಮಲ್ಲಿ ಮೊದಲೇ ಇರುತ್ತವೆ ಸ್ವಾಭಾವಿಕವಾಗಿ, ಬೇರೊಬ್ಬರು ಹೊತ್ತಿಸುವ ಅಗತ್ಯವೇ ಇರದೇ! ಹೇಗೆ? ಅಧ್ಯಾಯ ೨, ಪುಟ ೪೦–೪೨ರಲ್ಲಿ ನಾವು ಈಗಾಗಲೇ ಸ್ಪಷ್ಟವಾಗಿ ಸಿದ್ಧ ಮಾಡಿರುವಂತೆ ಪ್ರತಿಯೊಬ್ಬನಲ್ಲಿ ತನ್ನ ಬಗ್ಗೆ ಇರುವ ಪ್ರೀತಿಯು ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯಗಳ ಬಗ್ಗೆ ಇರುವುದಕ್ಕಿಂತ ಯಾವಾಗಲೂ, ಸ್ವಾಭಾವಿಕವಾಗಿಯೇ ಬಹಳ ಹೆಚ್ಚಿರುತ್ತದೆ. ಹೀಗೆ, ಮೊದಲನೆಯದಾಗಿ, ತನ್ನ ಬಗ್ಗೆ **ಪ್ರೀತಿಸುವ ಅನುಭವವು** (ಇಚ್ಛಾನುಭವ) ನಮ್ಮಲ್ಲಿ ಅಂತರ್ಗತವಾಗಿರುತ್ತದೆ ಎಂದು ಸಿದ್ಧವಾಗುತ್ತದೆ. ಎರಡನೆಯದಾಗಿ, ಪ್ರತಿದಿನ ನಿದ್ದೆಯಲ್ಲಿ 'ನಾನು ದೇಹ' ಎಂಬ ಭಾವದಿಂದ ನಮ್ಮನ್ನು ನಾವು ಪ್ರತ್ಯೇಕಿಸಿಕೊಳ್ಳುತ್ತೇವೆ, ಸುಲಭವಾಗಿ, ಶ್ರಮರಹಿತವಾಗಿ ಮತ್ತು ಸ್ವಾಭಾವಿಕವಾಗಿ. ಇದು 'ನಾವು' ಅಲ್ಲ. ಈ ರೀತಿ ನಮ್ಮನ್ನು ನಾವು ಪ್ರತ್ಯೇಕಿಸಿಕೊಳ್ಳುವ ಶಕ್ತಿಯು ಆತ್ಮನಲ್ಲಿ **ನೆಲೆಸುವ ಅನುಭವವು** (ಕ್ರಿಯಾನುಭವ) ನಮ್ಮಲ್ಲಿ ಅಂತರ್ಗತವಾಗಿರುತ್ತದೆ ಎಂದು ಸಿದ್ಧ ಪಡಿಸುತ್ತದೆ. ಮೂರನೆಯದಾಗಿ, ವ್ಯಕ್ತಿಯೊಬ್ಬನು ತನ್ನ ದೇಹವು ತನಗೇ ಕಾಣದಂತಹ ಕಗ್ಗತ್ತಲೆಯ ಕೋಣೆಯಲ್ಲಿ, ಒಬ್ಬಂಟಿಯಾಗಿ ಕುಳಿತಿದ್ದಾನೆ ಎಂದು ಕಲ್ಪಿಸೋಣ. ಕೋಣೆಯ ಹೊರಗಿನಿಂದ ಯಾರೋ ಕೇಳುತ್ತಾರೆ: "ನನ್ನ ಪುಸ್ತಕ ನಿನ್ನ ಹತ್ತಿರ ಇದೆಯೇ?" ವ್ಯಕ್ತಿ ಉತ್ತರಿಸುತ್ತಾನೆ: "ಅದು ಇರುವುದು ನನಗೆ ಗೊತ್ತಿಲ್ಲ". ಆದರೆ "ನೀನು ಇದ್ದೀಯೋ?" ಎಂದು ಕೇಳಿದರೆ ಕೂಡಲೇ ಉತ್ತರ ಬರುತ್ತದೆ; "ಏಕೆ? ಖಂಡಿತಾ ನಾನಿದ್ದೇನೆ". ತನ್ನ ಆತ್ಮದ ಬೆಳಕಿನಿಂದಲೇ (ಆತ್ಮದ ಅರಿವು) ತನ್ನ ಅಸ್ತಿತ್ವವನ್ನು ತಿಳಿದುಕೊಳ್ಳಲು ಸಮರ್ಥನಿರುತ್ತಾನೆ. ಮಧ್ಯಮ ಮತ್ತು ಪ್ರಥಮ ಪುರುಷ ವಸ್ತುಗಳ ಅಸ್ತಿತ್ವವನ್ನು ತಿಳಿದುಕೊಳ್ಳಲು ಬೇಕಾದ ಹೊರಗಿನ ಬೆಳಕಿನ ಸಹಾಯ ಅವನಿಗೆ ಇಲ್ಲಿ ಬೇಕಿಲ್ಲ. ಅಲ್ಲದೇ, ಗಾಢ ನಿದ್ದೆಯಲ್ಲೂ ನಾನಿದ್ದೇನೆ[೪೭] ಎಂಬ ಜ್ಞಾನದ ಅನುಭವವು ದೇಹ ಮತ್ತು ಮನಸ್ಸು ಇಲ್ಲದಿದ್ದಾಗಲೂ ಪ್ರತಿಯೊಬ್ಬನಿಗೂ ಇರುವುದರಿಂದ ನಮ್ಮದೇ ಅಸ್ತಿತ್ವದ ಜ್ಞಾನವು ನಮ್ಮಲ್ಲಿ ಅಂತರ್ಗತವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಮಧ್ಯಮ ಮತ್ತು ಪ್ರಥಮ ಪುರುಷ ವಸ್ತುಗಳ ಬಗ್ಗೆ ಇದು ಸಾಧ್ಯವಿಲ್ಲ. ತೀರಾ ಸಾಮಾನ್ಯ ಮನುಷ್ಯನಲ್ಲೂ ತನ್ನ ಅಸ್ತಿತ್ವವನ್ನು **ತಾನೇ ತಿಳಿದುಕೊಳ್ಳುವ ಅನುಭವ**ವು (ಜ್ಞಾನಾನುಭವ) ಅಂತರ್ಗತವಾಗಿರುತ್ತದೆ ಎಂದು ಈ ಎರಡು ಉದಾಹರಣೆಗಳು ಸಿದ್ಧಪಡಿಸುತ್ತವೆ. ನಮಗೆ ಮೊದಲೇ ಇಷ್ಟವಿಲ್ಲದ್ದನ್ನು ಇಷ್ಟಪಡಲು ಶ್ರೀ ಭಗವಾನರು ಉಪದೇಶಿಸಿದರೆ ಅದು ಕಷ್ಟವೆಂದು ಹೇಳಬಹುದು. ಮೊದಲೇ ಗೊತ್ತಿಲ್ಲದ್ದನ್ನು ತಿಳಿದುಕೋ ಎಂದು ಹೇಳಿದರೆ ಅದು ಕಷ್ಟ ಎನ್ನಬಹುದು. ನಮಗೆ ಮೊದಲೇ ಅನುಭವ ಇಲ್ಲದ, ನಾವು ಮೊದಲೇ ತಲುಪದ ಸ್ಥಿತಿಯಲ್ಲಿ ಇರಲು ಹೇಳಿದರೆ ಕಷ್ಟವೆಂದು ಪರಿಗಣಿಸಬಹುದು. ಉತ್ತಮ ಪುರುಷನ ಬಗ್ಗೆ ಪ್ರೀತಿಸುವ, ಮಾಡುವ ಮತ್ತು ತಿಳಿಯುವ ಅನುಭವಗಳು ನಮ್ಮಲ್ಲಿ ಮೊದಲೇ ಸ್ಪಷ್ಟವಾಗಿ, ಅಂತರ್ಗತವಾಗಿ ಇರುತ್ತವೆಂದು ಹೀಗೆ ತಿಳಿದು ಬರುತ್ತದೆ. 'ಸುಲಭ' ಮತ್ತು 'ಕಷ್ಟ' ಎಂಬುದರ ಬಗ್ಗೆ ಮೇಲೆ

---

೪೭. ನಿದ್ದೆಯಲ್ಲೂ ಇರುತ್ತೇವೆಂಬುದು ಎಲ್ಲರಿಗೂ ಗೊತ್ತಿರುತ್ತದೆ ಎಂದು ಪುಟ ೫೬–೫೭ರಲ್ಲಿ ಈಗಾಗಲೇ ವಿವರಿಸಲಾಗಿದೆ. ನಿದ್ದೆಯಲ್ಲಿ ತಾನಿರುವುದಿಲ್ಲ ಎಂದಾಗಲೀ, ನಿದ್ದೆಯಲ್ಲಿ ತನ್ನ ಇರುವು ಗೊತ್ತಿಲ್ಲವೆಂದಾಗಲೀ ಹೇಳುವುದು ತಪ್ಪಾಗುತ್ತದೆ. ನೋಡಿ – 'ಮಹರ್ಷೀಸ್ ಗಾಸ್ಪೆಲ್' (ಮಹರ್ಷಿಗಳ ವಚನ) II ಅಧ್ಯಾಯ ೫, (೮ನೇ ಆವೃತ್ತಿ, ಪುಟ ೮೬ ರಿಂದ ೮೭; ೯ನೇ ಆವೃತ್ತಿ, ಪುಟ ೮೯ ರಿಂದ ೯೦

ಹೇಳಿದ ವ್ಯಾಖ್ಯೆಯ ಬೆಳಕಿನಲ್ಲಿ ನೋಡಿದಾಗ ಉತ್ತಮ ಪುರುಷನ ಬಗ್ಗೆ ಗಮನವಿಡುವ ಆತ್ಮಶೋಧದ ದಾರಿಯ ಪ್ರಯತ್ನವು ಜಪ, ಧ್ಯಾನ, ಯೋಗ ಮುಂತಾದವುಗಳಿಗಿಂತ ಹೆಚ್ಚು ಸುಲಭವೆಂದು ಸರಳವಾಗಿ ಕಂಡು ಬರುತ್ತದೆ. ಅವು ಮಧ್ಯಮ ಮತ್ತು ಪ್ರಥಮ ಪುರುಷ ಬಗ್ಗೆ ಗಮನ ಹರಿಸುವುದೇ ಹೊರತು ಬೇರೇನಲ್ಲ. ಶ್ರೀ ಭಗವಾನರ ಹೇಳಿಕೆಗಳಿಗೆ ಪೂರಕ ಸಮರ್ಥನೆ ಹೀಗೆ ಇದೆ. "ಎಲ್ಲ ದಾರಿಗಳಲ್ಲಿ ಈ ದಾರಿಯು ಅತಿ ಸುಲಭವಾದುದು" ಮತ್ತು "ಇದು ಎಲ್ಲರಿಗೂ ನೇರವಾದ ದಾರಿ". ಇದಕ್ಕೆ ಸಂಬಂಧಿಸಿದಂತೆ ಶ್ರೀ ಭಗವಾನರು ಮತ್ತೆ ಮತ್ತೆ ಹೇಳುತ್ತಿದ್ದರು: "ಆತ್ಮವು ಈಗ, ಇಲ್ಲಿ, ಸದಾ ಸಿದ್ಧವಾಗಿ ಇರುತ್ತದೆ" "ಇದು ಎಲ್ಲರಿಗೂ ನೇರವಾದ ದಾರಿ" ಎಂದು ಹೇಳುವ ಮೂಲಕ ಶ್ರೀ ಭಗವಾನರು ಸೂಚಿಸುವುದೇನೆಂದರೆ ಮನಸ್ಸು ಎಷ್ಟೇ ದುರ್ಬಲವಿರಲಿ, ಯಾರು ಬೇಕಾದರೂ ತನ್ನ ಮೂಲದಲ್ಲಿ ನೆಲೆಸಲು ಅಗತ್ಯವಿರುವ ನಿಜವಾದ ಮನಶ್ಶಕ್ತಿಯನ್ನು ಈ ದಾರಿಯಲ್ಲಿ ಗಳಿಸಬಹುದು. ಆದ್ದರಿಂದ ಆತ್ಮಾವಧಾನವನ್ನು ಪಾಲಿಸುವುದು (ಅಹಮುಖಂ), ಇದೇ ನಿಜವಾದ (ಅಂತರ್ಮುಖ) ಮನಸ್ಸಿಗೆ ಬೇರೆ ಗುರಿಗಳನ್ನು ನೀಡುವುದಕ್ಕಿಂತ ಹೆಚ್ಚು ಒಳ್ಳೆಯದು. ಶ್ರೀ ಭಗವಾನರ ಉಪದೇಶದ ಅನನ್ಯ ಮಹಾನತೆ ಇದೇ ಆಗಿದೆ!

"ಅಹಂವಿನ ಒಳಗೆ ಶೋಧ ಮಾಡುವ ದಾರಿಯ ಪ್ರಯತ್ನಗಳನ್ನು ಹೊರತು ಪಡಿಸಿ,ಕರ್ಮ, (ಯೋಗ ಮುಂತಾದ) ಮಾರ್ಗಗಳಲ್ಲಿ ವಿಧಿಸಲಾದ ಶ್ರಮವನ್ನು ಎಷ್ಟೇ ಮಾಡಿದರೂ ಹೃದಯ ಸಂಪತ್ತಾದ ಆತ್ಮದ ಸ್ಥಿತಿ ಮತ್ತು ಭೋಗ ನಿಮಗೆ ಲಭಿಸಲಾರದು!"

'ಗುರು ವಾಚಕ ಕೋವೈ', ಪದ್ಯ ೮೮೫

ಅಲ್ಲದೇ, ದೇವರು ಮಧ್ಯಮ ಮತ್ತು ಪ್ರಥಮ ಪುರುಷ ಲಕ್ಷ್ಯಗಳಲ್ಲಿ ಒಬ್ಬನಿರಬಹುದೇ? ಇಲ್ಲ, ಅವನು ಹಾಗಿರಲಾರ! ಏಕೆಂದರೆ

"ಉತ್ತಮ ಪುರುಷ (ಅಹಂ)ದ ಮೂಲದಿಂದಾಗಿ ಮಾತ್ರ ಮಧ್ಯಮ ಮತ್ತು ಪ್ರಥಮ ಪುರುಷರು ಬದುಕಿರುತ್ತಾರೆ..."

'ಆತ್ಮ ವಿಚಾರ ಪತಿಕಮ್', ಪದ್ಯ ೬[೪೮]

" 'ನಾನು ದೇಹ' ಎಂಬ ರೂಪದಲ್ಲಿ ಉತ್ತಮ ಪುರುಷ (ಅಹಂ) ಇದ್ದರೆ ಮಾತ್ರ ಮಧ್ಯಮ ಮತ್ತು ಪ್ರಥಮ ಪುರುಷರು ಅಸ್ತಿತ್ವದಲ್ಲಿರುತ್ತಾರೆ..."

'ಉಳ್ಳದು ನಾರ್ಪದು', ಪದ್ಯ ೧೪

" 'ನಾನು'–ವಿಚಾರವಿರದಿದ್ದರೆ ಬೇರೇನೂ ಇರುವುದಿಲ್ಲ..."

ಶ್ರೀ ಅರುಣಾಚಲ ಅಷ್ಟಕಂ, ಶ್ಲೋಕ ೭

–ಶ್ರೀ ಭಗವಾನರ ಅನುಭವ ಹೀಗಿದೆ. ಅಂದರೆ ಮಧ್ಯಮ ಮತ್ತು ಪ್ರಥಮ ಪುರುಷರು ಅಸ್ತಿತ್ವದಲ್ಲಿರಲು 'ನಾನು ದೇಹ' ಎಂಬ ವಿಚಾರ ರೂಪದಲ್ಲಿ ಮೇಲೇಳುವ ಉತ್ತಮ ಪುರುಷ (ಹುಸಿ ಅಹಂ)ನ ಮೇಲೆ ಅವಲಂಬಿತವಾಗಿರುತ್ತಾರೆ. ಆದ್ದರಿಂದ, ದೇವರು ಮಧ್ಯಮ ಅಥವಾ ಪ್ರಥಮ ಪುರುಷನಾಗಿದ್ದರೆ ತಾನು ಅಸ್ತಿತ್ವದಲ್ಲಿರಲು ಅಹಂನ

---

೪೮. ನೋಡಿ. ಪರಿಶಿಷ್ಟ ಒಂದು (ಅ)

ಕೃಪೆಯ ಅವಲಂಬನ ಬೇಕು! ಇರುವಿಕೆಯ (ಸತ್) ರೂಪವೇ ಆಗಿರುವ ದೇವರು ಅಸ್ತಿತ್ವದಲ್ಲಿರಲು ಬೇರೊಂದರ ಅವಲಂಬನೆ ಬೇಕಿದ್ದರೆ ಅವನಿಗೆ ದೇವತ್ವವಿಲ್ಲ ಎಂದು ಅರ್ಥವಾಗುವುದಿಲ್ಲವೇ? ಆದ್ದರಿಂದ ದೇವರು ಎಂದಿಗೂ ಮಧ್ಯಮ ಅಥವಾ ಪ್ರಥಮ ಪುರುಷನಾಗಿರಲು ಸಾಧ್ಯವಿಲ್ಲ. ಅಂದ ಮೇಲೆ ಈ ಹುಸಿ ಉತ್ತಮ ಪುರುಷದ ಉದಯದ ಮೂಲವಾಗಿ, ಅಡಿಪಾಯವಾಗಿ ಅವನಿದ್ದು ಪ್ರಕಾಶಿಸಬೇಕಾಗುತ್ತದೆ. ಅದೇ, ಉತ್ತಮ ಪುರುಷ **ನೈಜತೆಯಾಗಿ,** ಹೀಗೆ **'ನಾನು'** ಎಂಬ ನಿಜವಾಗಿ. ದೇವರು ಅಥವಾ ಬ್ರಹ್ಮ ಸದಾ ಕಾಲ ಪ್ರಕಾಶಿಸುವುದರಿಂದ ಆತ್ಮ-ಗಮನದ ಅಭ್ಯಾಸವೊಂದೇ ದೇವರ ನಿಜವಾದ ಹುಡುಕಾಟ, ಇದೊಂದೇ ಪರಿಣಾಮಕಾರಿ ಯೋಗ. **ಆತ್ಮಾವಧಾನವೇ ನಿಜವಾದ ದೇವಾವಧಾನವು.**

"ಓ ಭಗವಾನ್, ನಿನ್ನ ಧ್ಯಾನವೆಂದರೆ 'ನನ್ನ' ಚಿಂತನೆಯೇ ಹೊರತು ಬೇರೆಯಲ್ಲ. 'ನನ್ನ' ಚಿಂತನೆಯೆಂದರೆ ವಿಚಾರ ಮುಕ್ತವಾಗಿರುವುದೇ ಹೊರತು ಬೇರೆಯಲ್ಲ. ವಿಚಾರ ಮುಕ್ತವಾಗಿರುವುದೆಂದರೆ 'ನಾನು' ಎಂದು ಉದಯಿಸದ ಎಚ್ಚರದ ಗಮನವೇ ಹೊರತು ಬೇರೆಯಲ್ಲ. ಆದರೆ ನನ್ನ ಅಸ್ತಿತ್ವವೇ (ಸತ್) ತಾನಾಗಿ ಗಮನ (ಚಿತ್) ಆಗಿರುವಾಗ, ಬೇರೆ ಗಮನವಾದರೂ ಏಕೆ?**"**

–ಶ್ರೀ ರಮಣ ಸಹಸ್ರಂ, ಪದ್ಯ ೯೯೦

ಈಗಾಗಲೇ (ಮೂರನೇ ಅಧ್ಯಾಯದ ಮೊದಲನೆ ವಾಕ್ಯದಲ್ಲಿ) ನಾವು ಕಂಡಂತೆ **'ನಾನು** ಇದ್ದೇನೆ**'** (ಆತ್ಮ) ಎಂಬುದೇ ಪರಿಪೂರ್ಣ ಆನಂದವಾಗಿರುವುದರಿಂದ ಮತ್ತು ನಾವೀಗ ತಿಳಿದಂತೆ ಪರಿಪೂರ್ಣ ಆನಂದ ಸಾಗರವಾದ ದೇವರು ಉತ್ತಮ ಪುರುಷದ ನೈಜತೆಯಾಗಿ ಪ್ರಕಾಶಿಸುವುದರಿಂದ, ನಾವು ಆತ್ಮವನ್ನು ಶೋಧಿಸಿ, ನಾವು ನಿಜಕ್ಕೂ ಏನೆಂದು ತಿಳಿದು, ಅನಾತ್ಮ (ಆತ್ಮವಲ್ಲದ್ದು–ನಾವು ನಿಜಕ್ಕೂ ಅಲ್ಲದ್ದು)ವನ್ನು ನಿರಾಕರಿಸಿದರೆ ಇರುವಿಕೆಯು (ಸತ್) ತಾನೇ ಹೊಳೆಯುತ್ತದೆ (ಚಿತ್). ಅಂದ ಮೇಲೆ, ಸಂಕಟ ನಿವಾರಣೆಗಾಗಿ ಶಾಸ್ತ್ರಗಳು ವಿಧಿಸಿದಂತೆ ಮಾಡುವ ಇತರ ಆಧ್ಯಾತ್ಮಿಕ ಅಭ್ಯಾಸದ ಪ್ರಯತ್ನವೆಲ್ಲ ಅನವಶ್ಯಕವಾಗುವುದಿಲ್ಲವೇ? ಆದ್ದರಿಂದ ನಾವೀಗ ಆತ್ಮಶೋಧದ ಪದ್ಧತಿಯನ್ನು ಪರೀಕ್ಷಿಸೋಣ. ಅನಾತ್ಮದಿಂದ ನಮ್ಮನ್ನು ಬೇರ್ಪಡಿಸಿಕೊಂಡು ನಮ್ಮನ್ನು ನಾವು ತಿಳಿದುಕೊಳ್ಳಲು ಈ ಮಹಾಯೋಗದಿಂದ ಸಾಧ್ಯ.

ಅಧ್ಯಾಯ ಆರು

‘ನಾನು ಯಾರು?’ ಎಂಬುದು ಸೋऽಹಂ ಭಾವನೆ[೪೯]ಯಲ್ಲ

ನೀರಿನ ತೊಟ್ಟಿಯನ್ನು ತುಂಬುವಾಗ ತೂತುಗಳಿವೆಯೇ, ಹೊರದಾರಿಗಳಿವೆಯೇ ಎಂದು ನೋಡಿ ಮುಚ್ಚುವುದಿಲ್ಲವೇ? ಇಲ್ಲದಿದ್ದರೆ, ಅದನ್ನು ತುಂಬುವ ನಮ್ಮ ಶ್ರಮದ ಹೆಚ್ಚಿನ ಭಾಗ ವ್ಯರ್ಥವಾಗುತ್ತದೆ. ಹಾಗೆಯೇ, ಆತ್ಮಶೋಧದ ತಂತ್ರವನ್ನು ವಿವರಿಸಲು ಹೊರಡುವ ಮೊದಲು ಇದನ್ನು ಯಾವ ರೀತಿ ಅಭ್ಯಸಿಸಬಾರದು ಎಂದು ತಿಳಿದುಕೊಂಡು, ಈಗಾಗಲೇ ತಪ್ಪು ತಿಳುವಳಿಕೆಯಿಂದ ಮಾಡಲಾದ ಅಭ್ಯಾಸಗಳನ್ನು ತಳ್ಳಿ ಹಾಕುವುದು ಅವಶ್ಯವಾಗಿದೆ.

ಶ್ರೀ ಭಗವಾನರು ತೋರಿಸಿದ ಆತ್ಮಶೋಧದ ತಂತ್ರಕ್ಕೂ ಶಾಸ್ತ್ರಗಳಿಂದ ಇದುವರೆಗೆ ಕಲಿತ ಆತ್ಮಶೋಧಕ್ಕೂ ಒಂದು ವ್ಯತ್ಯಾಸವಿದೆ. ಯುಗಗಳಿಂದ ಶಾಸ್ತ್ರಗಳು ಘೋಷಿಸುತ್ತ ಬಂದಿವೆ: “ನೀನು ಯಾರು? ನೀನು ದೇಹವಲ್ಲ, ಪ್ರಾಣವಲ್ಲ, ಮನಸ್ಸಲ್ಲ, ಅಹಂ ಅಲ್ಲ ಇತ್ಯಾದಿ. ನೀನು ಆತ್ಮ, ನೀನು ಅರಿವು, ಅದೇ ಆತ್ಮ”. ಆದರೂ, ಅವು ಇದಕ್ಕಿಂತ ಮುಂದೆ ಹೇಳುವುದಿಲ್ಲ: “ನೇತಿ, ನೇತಿ (ನಾನಲ್ಲ, ನಾನಲ್ಲ) ಎನ್ನುತ್ತ ಅನಾತ್ಮವಾದ (ಆತ್ಮವಲ್ಲ) ಪಂಚಕೋಶಗಳನ್ನು ತಳ್ಳಿ ಬಿಡು”. ತಳ್ಳಿ ಹಾಕುವುದು ಯಾರು, ತಳ್ಳಿ ಹಾಕುವ ಪ್ರಾಯೋಗಿಕ ಪದ್ಧತಿ ಏನು ಎಂದು ಅವು ವಿವರಿಸುವುದಿಲ್ಲ, ಅನಾತ್ಮವನ್ನು ತಳ್ಳಿ ಹಾಕಲು ಖಚಿತ ಮತ್ತು ನೇರವಾದ ಸುಳಿವುಗಳನ್ನು ಕೊಡುವುದಿಲ್ಲ[೫೦]. ಆದ್ದರಿಂದಲೇ ವೇದಾಂತದ ವ್ಯಾಪಕ ಅಧ್ಯಯನ ಮಾಡಿದವರಲ್ಲೂ ಕೂಡ ‘ನಾನು ದೇಹ’ವೆಂಬ ಅರಿವು (ದೇಹಾತ್ಮ ಬುದ್ಧಿ)ಯ ಅಹಮಿಕೆಯ ನಾಶವೇ ಆದ ಜ್ಞಾನದ ಪ್ರಯೋಗಾನುಭವವು ಶೂನ್ಯವಾಗಿ ಕಾಣುತ್ತದೆ. ಇದು ಕೇವಲ ಶಾಸ್ತ್ರಾಧ್ಯಯನ ಮಾಡಿ ಅಭ್ಯಾಸ ಮಾಡದವರ ಕತೆಯಷ್ಟೇ ಅಲ್ಲ, ಶಾಸ್ತ್ರಗಳಿಂದ ಕಲಿತುದದನ್ನು ಪ್ರಾಮಾಣಿಕವಾಗಿ ಪ್ರಯೋಗಿಸುವ ಪ್ರಾಮಾಣಿಕ ಸಾಧಕರ ವ್ಯಥೆಯೂ ಆಗಿದೆ. ತಮ್ಮ ವಿಫಲ ಪ್ರಯತ್ನಗಳಲ್ಲಿ ಮತ್ತೆ ಮತ್ತೆ ಹೆಣಗುತ್ತಿದ್ದರೂ ಅವರಿಗೆ ಅದ್ವೈತ ಜ್ಞಾನದ ನೇರ ಸ್ವಾನುಭವ ಸಾಧ್ಯವಾಗಿಲ್ಲ. ಇನ್ನೊಂದೆಡೆ ಸಹಜವಾದ

---

೪೯. ‘ಸೋऽಹಂ ಭಾವನೆ’ ಎಂದರೆ ‘ಅವನೇ ನಾನು’ ಎಂಬ ಧ್ಯಾನ (ಅಂದರೆ ‘ನಾನು ದೇವರು’ ಅಥವಾ ಬ್ರಹ್ಮ)

೫೦. ಶಾಸ್ತ್ರಗಳು ಅಲ್ಲಿಯವರೆಗೆ ಮಾತ್ರ ಸಹಾಯ ಮಾಡಬಲ್ಲವು. ಹಿಂದಿನ ಕಾಲದಲ್ಲಿ ಶಾಸ್ತ್ರಗಳನ್ನು ಕಲಿತ ನಂತರ ಸಾಧಕರು (ಜಿಜ್ಞಾಸುಗಳು) ಜ್ಞಾನ ಗುರುವಿನ ಸತ್ಸಂಗವನ್ನು ಅರಸಿ, ಅವನನ್ನು ಅತಿ ವಿಶ್ವಾಸ, ಪ್ರೀತಿಗಳಿಂದ ಸೇವೆ ಮಾಡುತ್ತಿದ್ದರು. ಆಮೇಲೆ, ಗುರುವು ರಹಸ್ಯ ಸುಳಿವುಗಳನ್ನು ತೋರಿಸಿದ ನಂತರ, ಅನಾತ್ಮವನ್ನು (ಪಂಚಕೋಶಗಳನ್ನು) ಹೊರಹಾಕುವ ಸರಿಯಾದ ದಾರಿಯನ್ನು ತಿಳಿದುಕೊಳ್ಳಲು ಸಾಧಕರು ಶಕ್ತರಾಗುತ್ತಿದ್ದರು.

ಆತ್ಮದ ಅರಿವಿನಲ್ಲಿ ಶಾಶ್ವತವಾಗಿ ಸ್ಥಾಪಿತರಾದ ಜ್ಞಾನಿಗಳು ಒತ್ತಿ ಹೇಳುತ್ತಲೇ ಇದ್ದಾರೆ. "ಆ ಆತ್ಮಾನುಭವವು ಈಗ, ಇಲ್ಲಿ ಸದಾ ಸಿದ್ಧವಾಗಿ ಇದ್ದೇ ಇದೆ!" "ಆಹಾ! ಆತ್ಮನನ್ನು ತಿಳಿದುಕೊಳ್ಳುವುದು ಅತಿ ಸುಲಭ! ಖಂಡಿತಾ, ಅತ್ಯಂತ ಸುಲಭ!' ಎಂದು ಶ್ರೀ ಭಗವಾನರು ಮತ್ತು ಆತ್ಮಜ್ಞಾನ ಅನುಭವಿಸುವ ಏಕೈಕ ಉದ್ದೇಶದಿಂದ ಅವರ ಬಳಿ ಬಂದ ಅವರ ಶಿಷ್ಯರು ಹಿಗ್ಗಿನಿಂದ ಉದ್ಗರಿಸುವ ಕಾರಣವೇನೆಂದರೆ ಆತ್ಮಶೋಧದ ಮಾರ್ಗದಲ್ಲಿ ಸುಧಾರಿಸಿದ, ಪ್ರಯೋಗಿಸಲು (ಅಭ್ಯಸಿಸಲು) ಸುಲಭವಾದ ಯಾವುದೋ ಹೊಸ ಸುಳಿವನ್ನು ಶ್ರೀ ಭಗವಾನರು ನೀಡಿದ್ದಾರೆ. ಈ ಸುಳಿವು ಏನೆಂಬುದನ್ನು ನೋಡೋಣ.

"ದೇಹವು ನಾನಲ್ಲ; ನಾನು ಯಾರು? ಅವನೇ ನಾನು!" (ದೇಹಂ ನಾಹಂ; ಕೋಽಹಂ? ಸೋಽಹಂ!) ಇದು ಶಾಸ್ತ್ರಗಳಲ್ಲಿ ಸಿಗುವ ಆತ್ಮಶೋಧದ ಮೂಲ ತಿರುಳು. ಇದನ್ನು ಸುಗಮಗೊಳಿಸಲು ಈ ಕೆಳಗಿನ ಮುಖ್ಯ ಅಭ್ಯಾಸಗಳನ್ನು (ಸಾಧನೆಗಳು) ಮುಂದಿಡುತ್ತವೆ:

೧. ನಿತ್ಯ–ಅನಿತ್ಯಗಳ ವಿವೇಕ

೨. ಈ ಲೋಕದ ಅಥವಾ ಯಾವುದೇ ಲೋಕದ ವಿವಿಧ ಭೋಗಗಳ ಕುರಿತು ವೈರಾಗ್ಯ.

೩. ಶಾಂತತೆ (ಶಮ) ಮೊದಲಾದ ಆರು ಗುಣಗಳು[೫೧]

೪. ಮೋಕ್ಷಕ್ಕಾಗಿ ತೀವ್ರವಾದ ಹಂಬಲ (ಮುಮುಕ್ಷುತ್ವ)

ಶಾಶ್ವತವಾದದ್ದು (ನಿತ್ಯ) ಮತ್ತು ಕ್ಷಣಿಕ (ಅನಿತ್ಯ)ವಾದದ್ದರ ವಿವೇಕದಿಂದ ಸಾಧಕನಲ್ಲಿ ಮುಕ್ತಿಯೊಂದೇ ನಿತ್ಯ ವಸ್ತು ಎಂಬ ಜ್ಞಾನವು ಉಂಟಾಗಿ, ಮೋಕ್ಷಕ್ಕಾಗಿ ಗಾಢ ಹಂಬಲ ಪಡೆಯುತ್ತಾನೆ. ಆ ಮೂಲಕ ಎಲ್ಲ ಇತರ ಭೋಗಗಳ ಕುರಿತು ವೈರಾಗ್ಯವನ್ನು ಗಳಿಸಿ ಶಮವೇ ಮೊದಲಾದ ಆರು ಗುಣಗಳ ಅಭ್ಯಾಸದಲ್ಲಿ ಪ್ರಯತ್ನಿಸತೊಡಗುತ್ತಾನೆ. ಆದ್ದರಿಂದ

---

೫೧. ಷಡ್ಗುಣಗಳು:

ಅ) ಪ್ರಶಾಂತತೆ (ಶಮ) ಅಂದರೆ ಲೌಕಿಕ ವಸ್ತು (ಲಕ್ಷ್ಯ)ಗಳ ದೋಷಗಳ ಮೇಲೆ ಮತ್ತೆ ಮತ್ತೆ ಚಿಂತನೆ ಮಾಡುವ ಮೂಲಕ ಉಂಟಾಗುವ ವೈರಾಗ್ಯದ ಸಹಾಯದಿಂದ ಮನಸ್ಸು ತನ್ನ ಗುರಿಯ ಮೇಲೆ ಸ್ಥಿರವಾಗುವುದು.

ಆ) ಇಂದ್ರಿಯ ನಿಗ್ರಹ (ದಮ) ಅಂದರೆ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ನಿಯಂತ್ರಿಸುವುದು ಮತ್ತು ತನ್ಮೂಲಕ ಅವು ತಮ್ಮ ಅನುಕ್ರಮ ಸ್ಥಾನ ಬಿಡದಂತೆ ತಡೆಯುವುದು.

ಇ) ಚಟುವಟಿಕೆಗಳಿಂದ ಹಿಂತೆಗೆತ (ಉಪರತಿ) ಅಂದರೆ ಹಿಂದಿನ ವಾಸನೆಗಳ ಹಾದಿ ಹಿಡಿದು ವಸ್ತುಗಳಲ್ಲಿ ನೆಲೆಸದಂತೆ ಮನಸ್ಸನ್ನು ಗುರಿಯಲ್ಲಿ ಸ್ಥಿರವಾಗಿಸುವುದು ಮತ್ತು ತನ್ಮೂಲಕ ಎಲ್ಲ ಅನಗತ್ಯ ಚಟುವಟಿಕೆಗಳನ್ನು ಬಿಟ್ಟು ಬಿಡುವುದು.

ಈ) ಸಹಿಷ್ಣುತೆ (ತಿತೀಕ್ಷಾ) ಅಂದರೆ ಬರುವ ಎಲ್ಲ ಸಂಕಟಗಳನ್ನು ನಿವಾರಿಸಲು ಯತ್ನಿಸದೇ ಅಥವಾ ದುಃಖ ಪಡದೇ ಧೈರ್ಯದಿಂದ ಸಹಿಸಿಕೊಳ್ಳುವುದು.

ಉ) ವಿಶ್ವಾಸ (ಶ್ರದ್ಧೆ) ಎಂದರೆ ವೇದಾಂತ ಶಾಸ್ತ್ರಗಳ ಮತ್ತು ಗುರುವಿನ ಶಬ್ದಗಳು ಮಾತ್ರ ಸತ್ಯವೆಂಬ ಅಲ್ಲಾಡದ ದೃಢ ನಂಬಿಕೆ.

ಊ) ಸಮಾಧಿ ಎಂದರೆ ಮನಸ್ಸನ್ನು ತನ್ನ ಸ್ವಭಾವದಂತೆ ಅಲೆದಾಡದಂತೆ ಎಲ್ಲ ಪ್ರಯತ್ನದಿಂದ ತಡೆದು, ಕೇವಲ ಬ್ರಹ್ಮನಲ್ಲಿ ಸ್ಥಿರಗೊಳಿಸುವುದು.

ಮೂರನೆಯ ಸಾಧನೆಯಲ್ಲಿ, ಅಂದರೆ ಷಡ್ಗುಣಗಳಲ್ಲಿ, ಆತ್ಮಜ್ಞಾನ ಪ್ರಾಪ್ತಿಗೆ ಶಾಸ್ತ್ರಗಳು ನೀಡುವ ಸಹಾಯವೆಲ್ಲ ಸೇರಿಕೊಂಡಿದೆ. ಹಾಗಾಗಿ, ಈ ಮೂರನೆಯದನ್ನು ಪ್ರಯತ್ನಿಸುವವನಲ್ಲಿ ಮೊದಲನೆಯ, ಎರಡನೆಯ ಮತ್ತು ನಾಲ್ಕನೆಯ ಸಾಧನೆಗಳೆಲ್ಲ ಪೂರ್ಣಗೊಂಡಿವೆ ಎಂದು ಸ್ಪಷ್ಟವಲ್ಲವೇ?

ವೈರಾಗ್ಯ (ಆಸೆ ಇಲ್ಲದಿರುವಿಕೆ)ದ ಮೂಲಕ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ನಿಗ್ರಹ ಮತ್ತು ಚಂಚಲವಾದ ಮನಸ್ಸನ್ನು ಬ್ರಹ್ಮದ ಮೇಲೆ ಸ್ಥಿರಗೊಳಿಸಲು ಪ್ರಯತ್ನ– ಇವೆರಡೂ ಮೂರನೆಯ ಸಾಧನವಾದ ಷಡ್ಗುಣಗಳಲ್ಲಿ ಅತ್ಯಾವಶ್ಯಕವಾದ ಅಂಶಗಳು. ಆದರೆ ಅಭ್ಯಾಸ ಮಾಡುವಾಗ ಪಕ್ವನಾದ ಅಗಾಧ ಪ್ರಾಮಾಣಿಕತೆಯ ಸಾಧಕ ನಿರ್ದಿಷ್ಟವಾಗಿ ಮಾಡುವುದಾದರೂ ಏನು? ಅವನ ಮುಖ್ಯ ಅಭ್ಯಾಸ ಇಂದ್ರಿಯ ಕಾಮನೆಗಳೊಂದಿಗೆ ಹೋರಾಟ ಮತ್ತು ತಾನು 'ಬ್ರಹ್ಮ' ವೆಂದು (ಕೇವಲ ಸತ್ಯದ) ಭಾವಿಸುವ ಮಧ್ಯಮ ಅಥವಾ ಪ್ರಥಮ ಪುರುಷದ ಕುರಿತು ವಿಚಾರ ಮಾಡುವುದೇ ಆಗಿರುತ್ತದೆ. ಇದಕ್ಕೆ ಶಾಸ್ತ್ರಗಳು ನೀಡುವ ಸಹಕಾರವೆಂದರೆ 'ನಾನು ಬ್ರಹ್ಮ' (ಅಹಂ ಬ್ರಹ್ಮಾಸ್ಮಿ) 'ನಾನು ಅವನೇ' (ಸೋಽಹಂ) 'ಅದು ನೀನೇ ಆಗಿದ್ದೀಯ' (ತತ್ತ್ವಂ ಅಸಿ) ಎಂಬ ಮಹಾವಾಕ್ಯಗಳು ಮಾತ್ರ. ಮಹಾವಾಕ್ಯಗಳ ಬಗ್ಗೆ ಧ್ಯಾನ (ಭಾವನಾ)ದ ಅಭ್ಯಾಸ ಮಾಡುವಾಗ 'ಈ ನಾನು ಆ ಬ್ರಹ್ಮನೇ ಆಗಿದ್ದೇನೆ' ಎಂಬ ಮಧ್ಯಮ ಅಥವಾ ಪ್ರಥಮ ಪುರುಷ ವಿಚಾರ ರೂಪದಲ್ಲಿ ಸಾಧಕನ ಪ್ರಯತ್ನ ಹರಿಯುತ್ತಿರುತ್ತದೆ. ಈ ವಿಚಾರವು ಕೇವಲ **ಒಂದು ಮಾನಸಿಕ ಚಟುವಟಿಕೆ** (ಮನೋವೃತ್ತಿ) ಮಾತ್ರ. 'ನಾನು ಬ್ರಹ್ಮ' ಅಥವಾ 'ಅದು ನಾನು' ಎಂಬ ಧ್ಯಾನಗಳಲ್ಲಿ **ಅವನು 'ನಾನು' ಎಂದು ಭಾವಿಸುವುದು ಮನಸ್ಸಲ್ಲದೇ ಬೇರೆಯಲ್ಲ**. ಅದನ್ನೇ ತಾನೆಂದು ಸ್ವೀಕರಿಸಿರುತ್ತಾನೆ. ಏಕೆಂದರೆ, ನಿದ್ದೆ ಮುಗಿದ ಮೇಲೆದ್ದ ಮೊದಲ ವಿಚಾರವೇ ತಾನಾಗಿ ಧ್ಯಾನ ಮಾಡುತ್ತ, ತಾನೆದ್ದ ಮೇಲೆ ಅಸ್ತಿತ್ವಕ್ಕೆ ಬರುವ ಪ್ರಥಮ ಪುರುಷನು ಧ್ಯಾನಿಸಲ್ಪಡುವ ಬ್ರಹ್ಮ ವಸ್ತುವಾಗಿರುತ್ತದೆ. ಎಲ್ಲಿಯವರೆಗೆ ('ನಾನು ದೇಹ' ಎಂಬ ಅರಿವಿನ) ಅಹಂ ಇರುತ್ತದೆಯೋ ಆವರೆಗೆ 'ಬ್ರಹ್ಮ' ಎಂಬ ಶಬ್ದ ಕೇಳಿದಾಗ ಸೂಚಿಸುವುದು ಮಧ್ಯಮ ಅಥವಾ ಪ್ರಥಮ ಪುರುಷವೇ ಹೊರತು ಬೇರೇನೂ ಅಲ್ಲ. (ಉತ್ತಮ ಪುರುಷ ಭಾವವಲ್ಲ) ಏಕೆಂದರೆ 'ನಾನು ಬ್ರಹ್ಮ' ಎಂಬ ವಾಕ್ಯದಲ್ಲಿ 'ನಾನು' ಎಂಬುದು ಉತ್ತಮ ಪುರುಷವನ್ನು ಸೂಚಿಸಿದ ಮೇಲೆ 'ಬ್ರಹ್ಮ' ಎಂದಾಗ ಅರ್ಥವಾಗುವುದು ಮಧ್ಯಮ ಅಥವಾ ಪ್ರಥಮ ಪುರುಷ ಮಾತ್ರ. **ಕೂಲಂಕುಶವಾಗಿ ಪರಿಶೋಧಿಸಿದಾಗ, 'ಅವನೇ ನಾನು', 'ನಾನು ಬ್ರಹ್ಮ' ಮುಂತಾದ ಧ್ಯಾನದಲ್ಲಿ ನಡೆಯುವುದು ಮಧ್ಯಮ ಅಥವಾ ಪ್ರಥಮ ಪುರುಷದ ಮೇಲೆ ಹರಿಯುವ ಮನಸ್ಸಿನ ಚಟುವಟಿಕೆಯೇ ಹೊರತು ಮತ್ತೇನಲ್ಲ**. ಮಾನಸಿಕ ಚಟುವಟಿಕೆಗಳಾದ ಇಂತಹ ಧ್ಯಾನಗಳಿಗೂ, ಶ್ರೀ ಭಗವಾನರು ಬೋಧಿಸಿದ ಆತ್ಮಾವಧಾನಕ್ಕೂ (ಮನಸ್ಸಿನ ನಿಶ್ಯಬ್ದತೆ) (ಬೆಟ್ಟ ಮತ್ತು ಕಣಿವೆಗಳಂತಹ) ಅಗಾಧ ವ್ಯತ್ಯಾಸವಿದೆ. ಹೇಗೆಂದು ನೋಡೋಣ.

'ನಾನು ಬ್ರಹ್ಮ' ಎಂಬ ಧ್ಯಾನವನ್ನು ಅಭ್ಯಾಸ ಮಾಡುವಾಗ 'ನಾನು' ಶಬ್ದದಿಂದ ಜಾಗೃತವಾಗುವ ಉತ್ತಮ ಪುರುಷ ಭಾವವು 'ಬ್ರಹ್ಮ' ಶಬ್ದದಿಂದ ವಿಚಲಿತವಾಗಿ ಮಧ್ಯಮ ಅಥವಾ ಪ್ರಥಮ ಪುರುಷ ಭಾವದತ್ತ ದಿಕ್ಕು ಬದಲಿಸುತ್ತದೆ. ಈ ತೊಂದರೆಯನ್ನು ತಪ್ಪಿಸಲಿಕ್ಕಾಗಿಯೇ ಶ್ರೀ ಭಗವಾನರು ತಮ್ಮ 'ನಾನು ಯಾರು?' ಕೃತಿಯಲ್ಲಿ **"ಯಾರಾದರೂ ಎಡೆಬಿಡದೆ 'ನಾನು, ನಾನು' ಎಂದು ಯೋಚಿಸುತ್ತಿದ್ದರೂ ಅದು ಅವರನ್ನು ಆ ಸ್ಥಳಕ್ಕೆ (ಬ್ರಹ್ಮಸ್ಥಿತಿಗೆ)**

ತಲುಪಿಸುತ್ತದೆ" ಎಂದು ಹೇಳಿದ್ದಾರೆ. ಸೂಜಿಯಲ್ಲಿ ದಾರ ಪೋಣಿಸುವಾಗ ದಾರದ ಎರಡು ತುದಿಗಳು ದೂರವಿದ್ದರೆ, ಸೂಜಿಯ ಕಣ್ಣಿನಲ್ಲಿ ಹೋಗುವ ಒಂದು ತುದಿಯು ಮತ್ತೊಂದರಿಂದ ಹೊರ ಎಳೆಯಲ್ಪಡುತ್ತದೆ. ಹಾಗೆಯೇ, 'ನಾನು ಬ್ರಹ್ಮ' ಎಂದು ಧ್ಯಾನ ಮಾಡುವಾಗ 'ನಾನು' ಶಬ್ದದಿಂದ ಜಾಗೃತವಾದ ಉತ್ತಮ ಪುರುಷ ಭಾವವು ವಿಚಲಿತವಾಗಿ (ಆತ್ಮ ನಿಷ್ಠೆಯಲ್ಲಿ ಉಳಿಯ ಬಿಡುವ ಬದಲು) ಮಧ್ಯಮ ಅಥವಾ ಪ್ರಥಮ ಪುರುಷಭಾವವನ್ನು ಹುಟ್ಟಿಸುವ 'ಬ್ರಹ್ಮ' ಶಬ್ದದಿಂದ ಹೊರಮುಖವಾಗಿ ಎಳೆಯಲ್ಪಡುತ್ತದೆ. ಈ ಉತ್ತಮ ಪುರುಷಭಾವದಿಂದ ಮಧ್ಯಮ ಪುರುಷ ಭಾವದತ್ತ ಹೋಗುವ, ಮಧ್ಯಮ ಪುರುಷ ಭಾವದಿಂದ ಉತ್ತಮ ಪುರುಷ ಭಾವದತ್ತ ಹೋಗುವ ಸೂಕ್ಷ್ಮ ಮಾನಸಿಕ ಚಟುವಟಿಕೆಯನ್ನು ಸಾಧಕನು ಆತ್ಮ ವಿಚಾರವೆಂದು ತಪ್ಪು ತಿಳಿಯುತ್ತಾನೆ. ಈ ಸೂಕ್ಷ್ಮ ಚಟುವಟಿಕೆಯಿಂದ ಸುಸ್ತಾದ ಮನಸ್ಸು ಕೆಲವೊಮ್ಮೆ ವಿಶ್ರಾಂತಿ ಪಡೆಯುತ್ತದೆ, ಈ ಮನೋಲಯವನ್ನು ಸಾಧಕನು ಆತ್ಮಸಾಕ್ಷಾತ್ಕಾರ (ಜ್ಞಾನಸಮಾಧಿ) ಎಂದು ತಪ್ಪು ತಿಳಿಯುತ್ತಾನೆ. ಇದು ನಿಜಕ್ಕೂ ಆತ್ಮಸಾಕ್ಷಾತ್ಕಾರವಾಗಿದ್ದರೆ ಅವನು ಎಚ್ಚರವಾದಾಗ 'ದೇಹ ನಾನು' ಎಂಬ ಗುರುತಿಸುವಿಕೆ ಮತ್ತೆ ಏಳುತ್ತಿರಲಿಲ್ಲ; ದೇಹ-ಗುರುತಿಸುವಿಕೆ ಏಳದೆ 'ನಾನು ಬ್ರಹ್ಮ' ಎಂಬ ಧ್ಯಾನದ ಎಳೆಯನ್ನು ಮತ್ತೆ ಹಿಡಿಯುತ್ತಿರಲಿಲ್ಲ. ಆದರೆ ಸಾಧಕನು ಎಚ್ಚೆತ್ತ ಮೇಲೆ ಮತ್ತೆ ಧ್ಯಾನಕ್ಕೆ ಮರಳುವುದರಿಂದ ಆತ ಸಾಧಿಸಿದ್ದು ಕೇವಲ ಮನೋಲಯ, ನಿದ್ದೆಯಂತಹ ವಿಶ್ರಾಂತಿ ಎಂದು ಸಿದ್ಧವಾಗುವುದಿಲ್ಲವೇ? ಕನಸಿನಿಂದ ಎಚ್ಚೆತ್ತ ಮೇಲೆ ಸ್ವಪ್ನ ಶರೀರವು 'ನಾನು' ಎಂದು ಗುರುತಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ; ಹಾಗೆಯೇ ಆತ್ಮ ಸಾಕ್ಷಾತ್ಕಾರದಲ್ಲಿ ಎಚ್ಚೆತ್ತ ಜ್ಞಾನಿಯು 'ನಾನು ಬ್ರಹ್ಮ' ಎಂದು ಧ್ಯಾನಿಸುವುದಿಲ್ಲ ಏಕೆಂದರೆ 'ಅಹಂ' ಎಂಬುದು ಸುಳ್ಳೆಂದು ತಿಳಿದಿರುತ್ತದೆ. ಆದ್ದರಿಂದಲೇ ಶ್ರೀ ಭಗವಾನರು ಸೂಕ್ತವಾಗಿ ಕೇಳುತ್ತಾರೆ:

"ನಾವು ಸದಾ ಅದೇ ಆಗಿರುವುದರಿಂದ, ನಾವು ಅದು ಎಂದು ನಾವು ಸದಾ ಧ್ಯಾನ ಮಾಡಬೇಕೇಕೆ? ಮನುಷ್ಯ 'ನಾನು ಮನುಷ್ಯ' ಎಂದು ಧ್ಯಾನ ಮಾಡುತ್ತಾನೆಯೇ?"

'ಉಳ್ಳದು ನಾರ್ಪದು' (ಪದ್ಯ ೩೬)

'ನಾನು ಮನುಷ್ಯ, ನಾನು ಮನುಷ್ಯ' ಎಂದು ಧ್ಯಾನ ಮಾಡುವುದರಿಂದ ಮಾತ್ರ ತಾನು ಮನುಷ್ಯ ಎಂದು ಮನುಷ್ಯ ತಿಳಿಯುತ್ತಾನೆಯೇ? ಖಂಡಿತಾ ಇಲ್ಲ. ಸಾಧಕನು ಮತ್ತೆ 'ನಾನು ಬ್ರಹ್ಮ' ಎಂದು ಧ್ಯಾನ ಮಾಡುವುದರಿಂದ ಆತ ತಾತ್ಕಾಲಿಕವಾಗಿ ಪಡೆದ ಸ್ಥಿತಿ ಆತ್ಮ ಸಾಕ್ಷಾತ್ಕಾರ-ನಿಜವಾದ ಎಚ್ಚರ- ಆಗಿರಲಿಲ್ಲ ಎಂದು ಸ್ಪಷ್ಟವಾಗುವುದಿಲ್ಲವೇ?

ಈ ಸಂದರ್ಭದಲ್ಲಿ ಶ್ರೀ ರಾಮಕೃಷ್ಣರು ಮತ್ತು ಶ್ರೀ ತೋತಾಪುರಿಯರ ನಡುವಿನ ಕೆಳಗಿನ ಸಂಭಾಷಣೆಯನ್ನು ಗಮನಿಸುವುದು ಉಚಿತವಾಗುತ್ತದೆ. "ಈ ಹಿತ್ತಾಳೆ ಪಾತ್ರೆಯನ್ನು ಪ್ರತಿದಿನ ತಿಕ್ಕುತ್ತಿದ್ದರೆ ಮಾತ್ರ ಇದು ಫಳಫಳ ಹೊಳೆಯುತ್ತಿರುತ್ತದೆ; ಅದೇ ರೀತಿ (ಈ ಭಾವನೆಗಳ ಬಗ್ಗೆ) ಪ್ರತಿದಿನ ಧ್ಯಾನ ಮಾಡುವುದರಿಂದ ಮಾತ್ರ ಬ್ರಹ್ಮವನ್ನು ಕುರಿತು ಚಿಂತನೆ ಮಾಡಲು ನಮ್ಮ ಮನಸ್ಸು ಶುದ್ಧವಾಗಿ ಉಳಿಯುತ್ತದೆ" ಎಂದು ಶ್ರೀ ತೋತಾಪುರಿಯುವರು ಹೇಳಿದಾಗ ಶ್ರೀ ರಾಮಕೃಷ್ಣರು ಹೇಳಿದರಂತೆ: "ಪಾತ್ರೆ ಬಂಗಾರದ್ದಾಗಿದ್ದರೆ ತಿಕ್ಕುವುದಾದರೂ ಏಕೆ!"

ಹೀಗೆ, "ಅವನೇ ನಾನು", 'ನಾನು ಬ್ರಹ್ಮ', 'ಅದು ನಾನು' (ಸೋಽಹಂ, ಅಹಂ ಬ್ರಹ್ಮಾಸ್ಮಿ, ತತ್ ಅಹಂ) ಇತ್ಯಾದಿ ಧ್ಯಾನಗಳು ಮನಸ್ಸಿನ ಚಟುವಟಿಕೆಗಳೇ (ಪ್ರವೃತ್ತಿಗಳೇ)

ಹೊರತು ಬೇರೆಯಲ್ಲ. ಆದರೆ ಆತ್ಮ ಸಾಕ್ಷಾತ್ಕಾರಕ್ಕಾಗಿ ಈ ಮನಸ್ಸನ್ನು ಕುರುಹು ಬಿಡದಂತೆ ನಾಶಗೊಳಿಸಬೇಕು. ಈ ರೀತಿ ಧ್ಯಾನಗಳಲ್ಲಿ ತೊಡಗುವುದರಿಂದ ಮನಸ್ಸು ಯುಗಗಳವರೆಗೆ ಜೀವಿಸುತ್ತದೆ. ಏಕೆಂದರೆ ಮನಸ್ಸು ಚಟುವಟಿಕೆಯೆಂಬ ಆಹಾರದ ಮೇಲೆ ಬದುಕಿರುತ್ತದೆ. ಮಧ್ಯಮ ಮತ್ತು ಪ್ರಥಮ ಪುರುಷರ ಮೇಲಿನ ಗಮನವೇ ಮನಸ್ಸನ್ನು ಪೋಷಿಸುತ್ತದೆ. 'ಅವನೇ ನಾನು' ಎಂಬಂತಹ ಧ್ಯಾನಗಳಿಂದ ಮನಸ್ಸು ನಾಶವಾಗದೇ ಇರುವುದರಿಂದ ಈ ಧ್ಯಾನಗಳ ಮೂಲಕ ಅಥವಾ ಇಂತಹ ಚಟುವಟಿಕೆಗಳಿಂದ ಪೂರ್ತಿ ಸುಸ್ತಾದಾಗ ಲಯಕ್ಕೆ ಜಾರುವುದರಿಂದ ಮನಸ್ಸು ಸದಾ ಕಾಲ ಜೀವಿಸುವಂತಾಗುತ್ತದೆ. ಇವು ಮನೋನಾಶವನ್ನು ಸಾಧಿಸದೇ ಇರುವುದರಿಂದ, **ಈ ಧ್ಯಾನಗಳು ಶ್ರೀ ಭಗವಾನರು ಬೋಧಿಸಿದ ಆತ್ಮಶೋಧ ಆಗಲಾರವು**. ಅದೊಂದೇ ಮನಸ್ಸನ್ನು ಒಮ್ಮೆಲೇ ಅಂತಿಮವಾಗಿ ನಾಶಪಡಿಸುತ್ತದೆ.

".......ಇದನ್ನು ಹೊರತು ಪಡಿಸಿ, 'ನಾನು ಇದಲ್ಲ, ನಾನು ಅದು' ಎಂದು ಧ್ಯಾನಿಸುವುದು (ಕೆಲವು ರೀತಿಯಲ್ಲಿ) ಸಹಾಯಕವಾಗಬಹುದು, ಆದರೆ ಅದು ತನ್ನಷ್ಟಕ್ಕೆ ಶೋಧವಾಗಬಹುದೇ?"

'ಉಳ್ಳದು ನಾರ್ಪದು', ಪದ್ಯ ೨೮

ಎಂದು ಶ್ರೀ ಭಗವಾನರು ಕೇಳುತ್ತಾರೆ! ಈ ಧ್ಯಾನಗಳು ಹೇಗೆ ಸಹಾಯಕವಾಗಬಹುದು, ಆದರೆ ತಮ್ಮಷ್ಟಕ್ಕೆ ಶೋಧವಾಗಲಾರವು ಎಂಬುದನ್ನು ಈ ಅಧ್ಯಾಯದ ಕೊನೆಯಲ್ಲಿ ಉಚಿತವಾದ ಜಾಗದಲ್ಲಿ ವಿವರಿಸಲಾಗುವುದು.

ಶ್ರೀ ಭಗವಾನರು ಈ ಧ್ಯಾನಗಳನ್ನು ಆತ್ಮಶೋಧವೆಂದು ಒಪ್ಪುವುದಿಲ್ಲ. **'ನಾನು ಯಾರು?' ಎಂಬ ರೂಪದ ಆತ್ಮವಿಚಾರವೊಂದೇ ಶ್ರೀ ರಮಣರ ಬೋಧನೆ**. 'ನಾನು ಇದು' ಅಥವಾ 'ನಾನು ಅದು' ಎಂದು ಧ್ಯಾನಿಸುವ ಬದಲು ಉತ್ತಮ ಪುರುಷನ ಮೇಲೆ ಗಮನವನ್ನು ಗಾಢವಾಗಿ ಸ್ಥಿರೀಕರಿಸುವುದು ಶ್ರೀ ರಮಣರ ಶೋಧ ಪದ್ಧತಿ. (ಜಪ, ಧ್ಯಾನ, ಮುಂತಾದವುಗಳಿಂದ) ಮಧ್ಯಮ ಮತ್ತು ಪ್ರಥಮ ಪುರುಷರ ಮೇಲೆ ಗಮನ ಹರಿಸುವ ಯಾವುದೇ ಚಟುವಟಿಕೆಯು ಮನಸ್ಸನ್ನು ನಾಶಗೊಳಿಸಲಾರದು. ಆದ್ದರಿಂದ ಮಹಾವಾಕ್ಯಗಳ ಗುರಿ ಪೂರ್ಣಗೊಳಿಸಲಿಕ್ಕಾಗಿ **ಶ್ರೀ ಭಗವಾನರು 'ನಾನು ಯಾರು?' ಎಂಬ ಬೋಧೆಯಿಂದ ಶಾಸ್ತ್ರಗಳಿಗೆ ಹೊಸ ಜೀವ ನೀಡಿದ್ದಾರೆ**. ಈ ದರ್ಶನವನ್ನು ಇದಕ್ಕಿಂತ ಮೊದಲು ಶಾಸ್ತ್ರಗಳು ತೆರೆದಿಟ್ಟಿಲ್ಲ, ಇದು ದಾರಿ ತಪ್ಪದಂತೆ ಸಾಧಕನು ಆತ್ಮಶೋಧವನ್ನು ಅಭ್ಯಾಸ ಮಾಡಲು ಅತ್ಯಗತ್ಯವಾಗಿದೆ. ಇದನ್ನು ಶಾಸ್ತ್ರಗಳ ಪ್ರಪಂಚಕ್ಕೆ ಶ್ರೀ ಭಗವಾನರು ಇದೀಗ ಸೇರಿಸಿದ್ದಾರೆ. ಈ ದರ್ಶನ ಯಾವುದು? **ಉತ್ತಮ ಪುರುಷನತ್ತ ತಿರುಗಿಸಿದಾಗ ಮಾತ್ರ ಮನಸ್ಸು ನಾಶವಾಗುತ್ತದೆ.**

ದಿವ್ಯ ಜ್ಯೋತಿಗಳು, ದಿವ್ಯ ನಾದಗಳು, ಕೈಲಾಸದಂತಹ ಸ್ವರ್ಗಗಳು, ಶಿವನಂತಹ ರೂಪಗಳ ಕಾಣ್ಕೆಗಳು, ದೇಹದಲ್ಲಿ ಕಲ್ಪಿಸಲಾದ ಮೂಲಾಧಾರದಂತಹ ಯೌಗಿಕ ಷಟ್ಚಕ್ರಗಳು– ಇವು ಮತ್ತು ಇವುಗಳಂತಹ ಜ್ಞಾನೇಂದ್ರಿಯ ವಿಷಯಗಳು ಸೂಕ್ಷ್ಮವಾದ ಪಂಚೇಂದ್ರಿಗಳ ಮೂಲಕ ಸೂಕ್ಷ್ಮ ಮನಸ್ಸು ಗ್ರಹಿಸುವ ವಸ್ತುಗಳಾದ್ದರಿಂದ ಇವು ಮಧ್ಯಮ ಮತ್ತು ಪ್ರಥಮ ಪುರುಷ ಜ್ಞಾನವೇ (ದೃಶ್ಯ ಅಥವಾ ನೋಡಲ್ಪಟ್ಟಿದ್ದು) ಹೊರತು ಮತ್ತೇನಲ್ಲ; ಇವು ಯಾವುವೂ ಉತ್ತಮ ಪುರುಷವಾಗಲಾರವು (ದೃಕ್ ಅಥವಾ ನೋಡುವವ)!

ಅಲ್ಲದೇ, ವಿಚಾರಗಳ ಮೊತ್ತವೇ ಆಗಿರುವ ಮನಸ್ಸು ಸ್ವತಃ ನಾವು ಗ್ರಹಿಸುವ ಮಧ್ಯಮ ಪುರುಷವಾಗಿರುವಾಗ, ಇದರಿಂದ ಗ್ರಹಿಸಲ್ಪಟ್ಟ ವಸ್ತುಗಳು ಮಧ್ಯಮ ಅಥವಾ ಪ್ರಥಮ ಪುರುಷವಾಗದೇ ಬೇರೇನಾಗಲು ಸಾಧ್ಯ? ಆದ್ದರಿಂದ (ಮನಸ್ಸು ಇಲ್ಲದಾಗಲೂ ಕೂಡ) ಸದಾ ಪ್ರಕಾಶಮಾನವಾಗಿರುವ ಆತ್ಮನ ಮೇಲೆ ಮಾತ್ರ ಸಾಧಕನ ಗಮನವು ಕೇಂದ್ರೀಕೃತವಾಗಬೇಕು; ಯಾವುದೇ ಮಧ್ಯಮ ಅಥವಾ ಪ್ರಥಮ ಪುರುಷನ ಕಡೆಗೆ ದಿಕ್ಕು ಬದಲಿಸಲು ಅವಕಾಶ ಕೊಡದಂತೆ ಇಟ್ಟುಕೊಳ್ಳಬೇಕು.

“ಮಧ್ಯಮ ಮತ್ತು ಪ್ರಥಮ ಪುರುಷರ ಮೇಲೆ ವಿಚಾರ ಮಾಡುವುದು ಶುದ್ಧ ಮೂರ್ಖತನ. ಏಕೆಂದರೆ ಮಧ್ಯಮ ಮತ್ತು ಪ್ರಥಮ ಪುರುಷರ ಬಗ್ಗೆ ವಿಚಾರ ಮಾಡುವುದರಿಂದ ಮಾನಸಿಕ ಚಟುವಟಿಕೆಗಳು (ಮನೋವೃತ್ತಿಗಳು) ಹೆಚ್ಚುತ್ತವೆ. (ಇನ್ನೊಂದೆಡೆ) ಉತ್ತಮ ಪುರುಷದ ಮೇಲೆ ಗಮನ ಇಡುವುದು. ಆತ್ಮಹತ್ಯೆಗೆ ಸಮಾನ, ಏಕೆಂದರೆ ಉತ್ತಮ ಪುರುಷನನ್ನು ಶೋಧಿಸುವುದರಿಂದ ಮಾತ್ರ ಅಹಂಭಾವವು ತಾನಾಗಿ ಸಾಯುತ್ತದೆ”

‘ಆತ್ಮ ವಿಚಾರ ಪಥಿಕಂ’, ಪದ್ಯ ೭

ಇದು ಸಾಮಾನ್ಯ ಸುಳಿವೇನೂ ಅಲ್ಲ. ತೀವ್ರ ವೈರಾಗ್ಯವನ್ನೂ ಯಾವುದೇ ಕೆಲಸ ಕೈಗೆತ್ತಿಕೊಂಡರೂ ಏಕಾಗ್ರತೆಯ ನಿರಂತರ ಶಕ್ತಿಯನ್ನು ಹೊಂದಿರುವವರೂ ಕೂಡ ಅದೆಷ್ಟೋ ಜನನ–ಮರಣಗಳ ಮುಖಾಂತರ ಲೆಕ್ಕವಿಲ್ಲದಷ್ಟು ಯುಗಗಳಿಂದ ಯಾವ ದಿಕ್ಕಿನಲ್ಲಿ ಪ್ರಯತ್ನ ಪಡಬೇಕೆಂದು ತಿಳಿಯದೇ ನಿಷ್ಪ್ರಯೋಜಕವಾದ ಮಧ್ಯಮ ಮತ್ತು ಪ್ರಥಮ ಪುರುಷದ ಮೇಲೆ ಗಮನವಿಡುತ್ತ ಹೆಣಗಾಡುತ್ತಿದ್ದಾರೆ. ಪರಿಹಾರ ಸಿಗದೇ ಗಲಿಬಿಲಿಗೊಂಡ ಸಾಧಕರು ಭಗವಾನ್ ಶ್ರೀ ರಮಣರು ಕೊಟ್ಟ ಈ ಉತ್ತಮ ಪುರುಷ ಗಮನದ ಸುಳಿವನ್ನು ಅಮೂಲ್ಯವೆಂದು ಖಂಡಿತಾ ಭಾವಿಸುತ್ತಾರೆ, ಬಡವನ ಕೈಗೆ ಕೊಟ್ಟ ವಜ್ರರಾಶಿಯಂತೆ. ಶ್ರೀ ಭಗವಾನರು ಈ ಸುಳಿವನ್ನು ತೋರಿಸಿದ್ದಷ್ಟೇ ಅಲ್ಲ, ತಮ್ಮ ಅಮೂಲ್ಯವಾದ ಸರಳ ಸಂಕ್ಷಿಪ್ತ ‘ನಾನು ಯಾರು?’ ಕೃತಿಯಲ್ಲಿ ಆತ್ಮಶೋಧದ ಖಚಿತ ಪ್ರಾಯೋಗಿಕ ಪ್ರಕ್ರಿಯೆಯನ್ನು ನೀಡಿದ್ದಾರೆ. ಇದರಿಂದ ನೂತನಾಭ್ಯಾಸಿಗಳಿಗೂ ಕೂಡ ಮಧ್ಯಮ ಮತ್ತು ಪ್ರಥಮ ಪುರುಷರ ಮೇಲೆ ಮನಸ್ಸು ಹರಿದಾಡದಂತೆ ಆತ್ಮದ ಮೇಲೆ ಮಾತ್ರ ಮನಸ್ಸನ್ನು ಸ್ಥಿರವಾಗಿ ಇರಿಸಲು ಸಹಾಯಕವಾಗುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಈ ಪ್ರಕ್ರಿಯೆಯನ್ನು ಚೆನ್ನಾಗಿ ವಿವರಿಸಲಾಗಿದೆ.

ನಮ್ಮ ಮನೆಯ ನೆಲದಲ್ಲೇ ಅಡಗಿರುವ ಖಜಾನೆಯು ನಾವು ಆ ಬಗ್ಗೆ ತಿಳಿದುಕೊಂಡು ಅಗೆದು ತೆಗೆದು ಉಪಭೋಗಿಸುವವರೆಗೆ ನಮ್ಮ ಪಾಲಿಗೆ ಅದು ಇಲ್ಲದಂತೆಯೇ ಸರಿ– ರೋಗಿಯ ತೋಟದಲ್ಲೇ ಇರುವ ಔಷಧ ಮೂಲಿಕೆಯು[೫೨] ವೈದ್ಯನು ತೋರಿಸುವವರೆಗೆ

೫೨. ಗಿಡ ಮೂಲಿಕೆಯ ಕಥೆ: ದೀರ್ಘಕಾಲದಿಂದ ನಿವಾರಿಸಲಾಗದ ರೋಗದಿಂದ ಬಳಲಿ ಮೃತ್ಯು ಶಯ್ಯೆಯಲ್ಲಿ ಮಲಗಿದ್ದ ರೋಗಿಯ ಕೆಲವು ಗೆಳೆಯರು ಅವನ ಬಳಿ ಹೊಸ ವೈದ್ಯನನ್ನು ಕರೆತರುತ್ತಾರೆ. ರೋಗದ ಪರೀಕ್ಷೆಯ ನಂತರ ವೈದ್ಯನು ರೋಗಿಯ ತೋಟದಲ್ಲಿ ಅಲ್ಲಿಲ್ಲಿ ಓಡಾಡಿ ಒಂದು ಮೂಲಿಕೆಯನ್ನು ಕೀಳುತ್ತಾನೆ. ಅದನ್ನು ಹಚ್ಚುವುದರಿಂದ ದೀರ್ಘಕಾಲದ ಆ ರೋಗ ಕೂಡಲೇ ಗುಣವಾಗುತ್ತದೆ. ಇದರಿಂದ ಎಲ್ಲರೂ ನಿಬ್ಬೆರಗಾಗಿ ಕೃತಜ್ಞತೆಯಿಂದ ವೈದ್ಯನನ್ನು ಹೊಗಳುತ್ತಾರೆ: “ಅವನಿಗೆ ಜೀವ ಕೊಟ್ಟವರು ನೀವು

ಇಲ್ಲವಾಗಿರುವಂತೆ. ಈ ಸಂಪತ್ತಿನ ಅಸ್ತಿತ್ವದ ಬಗ್ಗೆ ಯಾರಾದರೂ ನಮಗೆ ತಿಳಿಸಿ, ಅಗೆಯಿಸಿ ತೆಗೆಯಿಸಿ, ನಮ್ಮ ಭೋಗಕ್ಕೆ ಬರುವಾಗ ಅದು ಅವನು ನಮಗೆ ಹೊಸದಾಗಿ ಕೊಟ್ಟಂತೆಯೇ ಸರಿ. ನಮ್ಮನ್ನು ಶ್ರೀಮಂತಗೊಳಿಸಿದ್ದು ಅವನೇ, ಅದಕ್ಕಿಂತ ಮೊದಲು ನಾವು ಖಂಡಿತಾ ಬಡವರಾಗಿದ್ದೆವು. ಆದರೂ ನಮ್ಮಲ್ಲಿಯೇ ಕೆಲವರು ಶಾಸ್ತ್ರಗಳಲ್ಲಿ ಆತ್ಮಶೋಧದ ಬಗ್ಗೆ ಓದಿಕೊಂಡಿದ್ದರೂ ಕೂಡ ಆತ್ಮಾನುಭವವನ್ನು ಪಡೆಯದವರಿದ್ದಾರೆ. ಶ್ರೀ ಭಗವಾನರು ಬೋಧಿಸಿದ ಆತ್ಮಶೋಧದ ತಂತ್ರದ ಅಮೂಲ್ಯ ಸಹಾಯ, ಮಹಾನತೆ ಮತ್ತು ಹೊಸತನಗಳನ್ನು ತಿಳಿಯದೇ ಮೇಲ್ಪದರಿನಲ್ಲೇ ಕೇಳುತ್ತಾರೆ: “ಆತ್ಮಶೋಧವು ಶಾಸ್ತ್ರಗಳಲ್ಲಿ ಈ ಮೊದಲೇ ಉಲ್ಲೇಖಿಸಲ್ಪಟ್ಟಿದೆ. ಶ್ರೀ ಭಗವಾನರು ಕಂಡು ಹಿಡಿದ ಹೊಸತಾದರೂ ಏನು?” ಇದು ಆ ಬಡವ ಕೇಳಿದಂತೆ: “ಈ ಸಂಪತ್ತು ನಮ್ಮ ಮನೆಯಲ್ಲೇ ಇರಲಿಲ್ಲವೇ?” ಅದರ ಬಗ್ಗೆ ಗೊತ್ತಿರದೇ ಅಗೆದು ತೆಗೆದು ಅನುಭವಿಸದಿದ್ದರೂ. ಇದು ಆ ಬಡವನ ಹೇಳಿಕೆಗೆ ಸಮಾನ. ಏಕೆಂದರೆ ಅಗಾಧ ಸಂಪತ್ತನ್ನು ಪಡೆದು, ಅದರ ಮಹತ್ವ ಅರಿತು, ಅದರ ಆನಂದ ಅನುಭವಿಸಿದ್ದರೆ ಆತ ಬಡವನಾಗಿ ಉಳಿಯುತ್ತಲೇ ಇರಲಿಲ್ಲ ಮತ್ತು ತನ್ನ ಗೆಳೆಯ ನೀಡಿದ ಸಹಾಯದ ಬಗ್ಗೆ ತುಚ್ಛೀಕರಿಸಿ ಮಾತನಾಡುತ್ತಿರಲಿಲ್ಲ! ಪ್ರಾಚೀನ ಶಾಸ್ತ್ರಗಳ ಕೇವಲ ಅಕ್ಷರಗಳ ಮೇಲೆ ಪ್ರಭುತ್ವ ಸಾಧಿಸಿದ್ದರೂ, ಅಲ್ಲಿ ಹೇಳಿದ ಆತ್ಮಶೋಧದ ಮೂಲಕ ಆತ್ಮಾನಂದದ ಅಂಚನ್ನೂ ಕೂಡ ಅನುಭವಿಸದೇ ಇರುವ ಪಂಡಿತರು ಮಾತ್ರ ಹಾಗೆ ಹೇಳಬಲ್ಲರು. ಏಕೆಂದರೆ ಆತ್ಮಶೋಧದ ಮಾರ್ಗದಲ್ಲಿ ಸದ್ಗುರು ಶ್ರೀ ರಮಣರು ಕಂಡು ಹಿಡಿದ ಸುಳಿವಿನ ಮಹಾನತೆಯನ್ನು ಜಗತ್ತಿಗೆ ಅವರು ನೀಡಿದ ಕೊಡುಗೆಯನ್ನು ಅವರು ತಿಳಿದಿಲ್ಲ. ಇಷ್ಟು ವರ್ಷದವರೆಗೆ ಶಾಸ್ತ್ರಾಧ್ಯಯನ ಮಾಡಿ ಆತ್ಮಶೋಧದ ಸರಿಯಾದ ಪದ್ಧತಿಯಲ್ಲಿ ಅಭ್ಯಾಸ ಮಾಡುತ್ತಿದ್ದರೆ ಅವರು ಈಗ ಆತ್ಮಾನುಭವ ಪಡೆಯದೇ ಹೆಣಗಾಡುತ್ತಿದ್ದರೇ? ಇದಕ್ಕೆ ಪ್ರತಿಯಾಗಿ ಶ್ರೀ ಭಗವಾನರು ಕೊಟ್ಟ ಸುಳಿವಿನ ಮಹಾನ್ ಸಹಾಯದಿಂದ ಸತ್ಯವನ್ನು ತಿಳಿದವರೆಲ್ಲರೂ ಬಹುತೇಕ ಪ್ರಾಚೀನ ಶಾಸ್ತ್ರಗಳ ಬಗ್ಗೆ ಅಜ್ಞಾನಿಗಳಾಗಿದ್ದರು!

‘ನಾನು ಇಂತಿಂಥವನು’ ಎಂಬ ವಿಶೇಷಣ (ಉಪಾಧಿ)ದೊಂದಿಗೆ ಭಾವಿಸಿದಾಗ ‘ನಾನು ಇದ್ದೇನೆ’ ಎಂಬ ಅರಿವು ಒಂದು ವಿಚಾರವಾಗುತ್ತದೆ. ಎಲ್ಲ ವಿಚಾರಗಳಲ್ಲಿ ಇದೇ ಮೊದಲ ವಿಚಾರ. ಆದರೆ ಯಾವುದೇ ವಿಶೇಷಣವಿಲ್ಲದೇ ಏಕಾಕಿಯಾಗಿ ಪ್ರಕಾಶಿಸುವ ‘ನಾನು’ ಎಂಬ ಅರಿವು ಆತ್ಮ ಅಥವಾ ಬ್ರಹ್ಮ. ಇದು ಒಂದು ವಿಚಾರವಲ್ಲ. ಇದು ನಮ್ಮ ‘ಇರುವಿಕೆ’ (ಅಂದರೆ, ನಮ್ಮ ನಿಜವಾದ ಅಸ್ತಿತ್ವ)[೫೩]. ಆದ್ದರಿಂದ ಶಾಸ್ತ್ರಗಳು ಬೋಧಿಸುವ ‘ನಾನು ಬ್ರಹ್ಮ’ ಎಂಬ ಮಹಾವಾಕ್ಯದ ಉದ್ದೇಶವು ಬ್ರಹ್ಮವೇ ನಮ್ಮ ಶುದ್ಧ ಅಸ್ತಿತ್ವ ಎಂಬ

ಮಾತ್ರ!” ಆ ಮೂಲಿಕೆಯು ರೋಗಿಯ ತೋಟದಲ್ಲೇ ಸದಾಕಾಲ ಇದ್ದರೂ ಕೂಡ, ಅವನ ನೋವು ಕೊನೆಗೊಳ್ಳಲಿಲ್ಲ. ವೈದ್ಯನ ಶೋಧ ಮತ್ತು ಒಳ್ಳೆಯದೆಂದು ಅವನಿತ್ತ ಮೂಲಿಕೆಯ ಲೇಪನಗಳು ರೋಗಿಗೆ ಜೀವ ಕೊಟ್ಟಂತೆಯೇ ಅಲ್ಲವೇ? ವೈದ್ಯನ ಸಹಾಯವನ್ನು ಪೂರ್ಣವಾಗಿ ತಿಳಿದುಕೊಳ್ಳದೇ ರೋಗಿ ಅಥವಾ ಅವನ ಕೆಲವು ಗೆಳೆಯರು “ಇಷ್ಟಕ್ಕೂ ಅವನು ಮಾಡಿದ್ದೇನು? ಆ ಮೂಲಿಕೆ ಯಾವಾಗಲೂ ನಮ್ಮ ತೋಟದಲ್ಲೇ ಇತ್ತು” ಎಂದು ಹೇಳಿದರೆ “ಆತ್ಮಶೋಧದ ಬಗ್ಗೆ ಶಾಸ್ತ್ರಗಳಲ್ಲಿ ಈ ಮೊದಲೇ ಉಲ್ಲೇಖವಿದೆ. ಭಗವಾನ್ ಶ್ರೀ ರಮಣರು ಹೊಸತಾಗಿ ಕಂಡು ಹಿಡಿದಿದ್ದಾದರೂ ಏನು” ಎಂದು ಹೇಳಿದಂತಾಗುತ್ತದೆ.

೫೩. ಇದನ್ನು ಮುಂದಿನ ಅಧ್ಯಾಯ ‘ಆತ್ಮವಿಚಾರ’ದಲ್ಲಿ ಪೂರ್ಣತಃ ವಿವರಿಸಲಾಗುವುದು.

ಅಂತಿಮ ಅನುಭವದ ಬಗ್ಗೆ ಪೂರ್ವಭಾವಿಯಾಗಿ ಕೊಡುವ ಮಾಹಿತಿಯೇ ಹೊರತು ಬ್ರಹ್ಮವನ್ನು ನಮ್ಮ ಒಂದು ವಿಚಾರವಾಗಿ ಪರಿವರ್ತಿಸುವುದಲ್ಲ. ಆದ್ದರಿಂದ ‘ನಾನು ಬ್ರಹ್ಮ’ ಎಂಬುದು ನಾವಿನ್ನೂ ತಲುಪಬೇಕಾಗಿರುವ ನಮ್ಮ ನಿಜವಾದ ಸ್ಥಿತಿಯ ಬಗ್ಗೆ ಮುಂಚಿತವಾದ ಮಾಹಿತಿ ಮಾತ್ರ. ವಿಚಾರಕ್ಕೆ ಅತೀತವಾದ ನಮ್ಮ ಅಸ್ತಿತ್ವವನ್ನು ವಿಚಾರದ ಮೂಲಕ ತಲುಪಬಹುದೇ? ಅದು ಸಾಧ್ಯವಿಲ್ಲದ ಕಾರಣ, ‘ನಾನು ಯಾರು?’ ಎಂಬ ಶೋಧದ ಮೂಲಕ (ಅಂದರೆ ಆತ್ಮಾವಧಾನದ ಮೂಲಕ) ‘ನಾನು’ ಎಂಬ ವಿಚಾರ ಉದಯಿಸುವುದನ್ನು ನಿಲ್ಲಿಸುವುದು ಮತ್ತು ಉಳಿದದ್ದರಲ್ಲಿ ನೆಲೆಸುವುದು ‘ನಾನು ಬ್ರಹ್ಮ’ ಎಂಬ ಮಹಾವಾಕ್ಯದ ನಿಜವಾದ ಅಳವಡಿಕೆ.

“(ನಾನು ಎಂಬ) ನಿಜವು ವಿಚಾರಾತೀತವಾಗಿ ಒಳಗೆ ಇರುವುದರಿಂದ ಹೃದಯ ಎಂದು ಕರೆಯಲಾಗುವ ನಿಜದ ಬಗ್ಗೆ ಯಾರು ತಾನೇ, ಹೇಗೆ ತಾನೇ ಧ್ಯಾನಿಸಬಹುದು? ಅದು ಇದ್ದಂತೆ (ಅಂದರೆ ವಿಚಾರವಿಲ್ಲದೇ) ಹೃದಯದಲ್ಲಿ ನೆಲೆಸುವುದೇ ಅದರ ಬಗ್ಗೆ ನಿಜವಾದ ಧ್ಯಾನ. ಇದನ್ನು ಹೀಗೆ ತಿಳಿದುಕೊಳ್ಳಬೇಕು”

‘ಉಳ್ಳದು ನಾರ್ಪದು’, ನಾಂದಿ ಪದ್ಯ ೧

ಬ್ರಹ್ಮಭಾವದ ನಿಜವಾದ ಅನುಭವವನ್ನು ಗಳಿಸುವವರೆಗೆ ಬ್ರಹ್ಮದ ಬಗ್ಗೆ ಯಾವುದೇ ರೀತಿ ಧ್ಯಾನಿಸಿದರೂ ಅದು ಮಧ್ಯಮ ಅಥವಾ ಪ್ರಥಮ ಪುರುಷರ ಬಗ್ಗೆ ಮಾಡಿದ ವಿಚಾರ ಮಾತ್ರವಾಗಿರುತ್ತದೆ. ಅದರ ಬದಲು, ಸರಳವಾಗಿ ‘ನಾನು, ನಾನು’ ಎಂದಷ್ಟೇ ಧ್ಯಾನಿಸಿದರೆ ಅದು ಉತ್ತಮ ಪುರುಷದ ಅವಧಾನವಾದ್ದರಿಂದ ಧ್ಯಾನಿಸುವ ‘ನಾನು’ ಎಂಬ ವಿಚಾರವು ತನ್ನ ಮೂಲದಲ್ಲಿ ತಾನೇ ಮುಳುಗಿ ಹೋಗುತ್ತದೆ. ಚಿತಾಗ್ನಿಯ ಕಟ್ಟಿಗೆಗಳನ್ನು ಕೆದಕಲು ಬಳಸಿದ ಕೋಲಿನಂತೆ, ಸೂರ್ಯನ ಪ್ರತಿಬಿಂಬವನ್ನು ಸೂರ್ಯನತ್ತಲೇ ತಿರುಗಿಸುವ ಕನ್ನಡಿಯಂತೆ. ಅದು ತನ್ನ ಆಕಾರ, ಪ್ರತ್ಯೇಕ ಅಸ್ತಿತ್ವಗಳನ್ನು ಕಳೆದುಕೊಳ್ಳುತ್ತದೆ. ‘ನಾನು ಶಿವ’ (ಶಿವೋಽಹಂ) ಅಥವಾ ‘ಅವನೇ ನಾನು’ (ಸೋಽಹಂ) ಮುಂತಾಗಿ ಧ್ಯಾನ ಶುರು ಹಚ್ಚಿದರೆ ಅಹಮಿಕೆಯು ಹಿಗ್ಗಿ ಬಲಿಷ್ಟವಾಗಿ[೫೪] ಬೆಳೆಯುತ್ತದೆ. ಅದೇ ‘ನಾನು ಯಾರು?’ ಎಂದು ಆತ್ಮ ವಿಚಾರದಲ್ಲಿ ತೊಡಗಿದರೆ ಅಹಮಿಕೆಯು ಸಾಯುತ್ತದೆ. **ಆದ್ದರಿಂದಲೇ ಭಗವಾನ ಶ್ರೀ ರಮಣರು ‘ಅವನೇ ನಾನು’ (ಸೋಽಹಂ) ಎಂಬುದನ್ನು ಅಭ್ಯಾಸ (ಸಾಧನ)ವಾಗಿ ಬೋಧಿಸಲಿಲ್ಲ**. ನಾವು ತಲುಪಬೇಕಾಗಿರುವ ಊರಿನ ಕೆಲವು ವಿವರಗಳು ನಮಗೆ ಮುಂಚಿತವಾಗಿಯೇ ಕೊಡಲ್ಪಟ್ಟಿದ್ದರೆ, ಅದರಿಂದ ಒಳ್ಳೇ ಸಹಾಯವಾಗುತ್ತದೆ; ಹಾಗೆಯೇ (‘ನಾನು ಬ್ರಹ್ಮ’ ಮುಂತಾದ ಮಹಾವಾಕ್ಯಗಳಿಂದ ನಮಗೆ ಕೊಡಲ್ಪಟ್ಟ) ನಮ್ಮ ಅಂತಿಮ ಸತ್ಯ ಬ್ರಹ್ಮ ಎಂಬ ಪೂರ್ವಭಾವಿ ಮಾಹಿತಿ ಸಹಾಯಕವಾಗಬಹುದು, ಆದರೆ ಅದೇ ಅಭ್ಯಾಸ–ಶೋಧ ಆಗಬಹುದೇ? ಇಲ್ಲ, ಸಾಧ್ಯವಿಲ್ಲ. ಊರಿನ ಬಗ್ಗೆ ವಿವರ ಅಭ್ಯಸಿಸಿ, ನೆನಪಿಡಲು ಮತ್ತೆ ಮತ್ತೆ ಓದಿ, ಕಂಠಪಾಠ ಮಾಡಿ ಅದನ್ನೇ ಧ್ಯಾನಿಸಿದರೆ ಅದು ಎಂದೂ

---

೫೪. ‘ನಾನು ಈ ಕ್ಷುಲ್ಲಕ ದೇಹ’ ಎಂದು ಕಲ್ಪಿಸಿಕೊಂಡಾಗಲೇ ಮನುಷ್ಯ ನಿಯಂತ್ರಣ ತಪ್ಪಿ ಮನಬಂದಂತೆ ನಡೆದುಕೊಳ್ಳುತ್ತಾನೆ. ಇನ್ನು ‘ನಾನು ಸ್ವತಃ ಬ್ರಹ್ಮ’ ಎಂದು ಕಲ್ಪಿಸಿಕೊಂಡು ಬಿಟ್ಟರೆ ಎಂತೆಂಥ ಕೇಡು ಮಾಡಲು ಆತ ಶಕ್ತನಾಗುತ್ತಾನೆ!”

ಗುರು ರಮಣ ವಚನ ಮಾಲಾ, ಪದ್ಯ ೧೪೯

ಆ ಊರಿಗೆ ಪ್ರಯಾಣ ಮಾಡಿದಂತಲ್ಲ. ಮಹಾವಾಕ್ಯಗಳ ಪ್ರಕರಣವೂ ಅದೇ. ಶ್ರೀ ಭಗವಾನರು ಬರೆದಾಗ ಇದೇ ಅವರ ಅರ್ಥ:

"ನಾನು ಇದಲ್ಲ, ನಾನು ಇದು" ಎಂಬ ಧ್ಯಾನವು (ಕೆಲವು ರೀತಿಯಲ್ಲಿ) ಸಹಾಯವಾಗಬಹುದು, ಆದರೆ ಅದು ತಾನೇ ಶೋಧವಾಗುವುದೇ?"

'ಉಳ್ಳದು ನಾರ್ಪದು', ಪದ್ಯ ೨೯

ಮತ್ತು ".....ಆತ್ಮನಲ್ಲಿ ನೆಲೆಸಲು (ನೆನಪಿಸುತ್ತ) 'ನಾವು ಅದು' ಎಂಬ ಧ್ಯಾನವು ಒಳ್ಳೇ ಸಹಾಯವಾಗಬಹುದು....."

'ಉಳ್ಳದು ನಾರ್ಪದು', ಪದ್ಯ ೩೬

ಆದ್ದರಿಂದ 'ನಾನು ಯಾರು?' ಎಂಬ ಶೋಧ ಮಾರ್ಗವು 'ಅವನೇ ನಾನು' ಮುಂತಾದ ಮಹಾವಾಕ್ಯಗಳ ಬಗ್ಗೆ ಧ್ಯಾನ ಮಾಡುವುದಲ್ಲ.

ಕೆಲವೊಮ್ಮೆ ನಾವು ಕೆಲವು ಉಪನ್ಯಾಸಕರ ಬಗ್ಗೆ ಕೇಳುತ್ತೇವೆ. ಸುಲಭವಾಗಿ ಈ ಸತ್ಯದರ್ಶನವನ್ನು ಮಾಡಿಸುವ ಎರಡು ಜ್ಞಾನಜ್ಯೋತಿಯಂತಿರುವ ಶ್ರೀ ಭಗವಾನರ ಕೃಪಾದೃಷ್ಟಿಯಿಂದ ಬೋಧಿಸಲ್ಪಡುವ ಅದೃಷ್ಟವೂ ಅವರಿಗಿದ್ದಿಲ್ಲ, ಅವರ ಬೋಧೆಯನ್ನು ಕೂಲಂಕುಶವಾಗಿ ಪರಿಶೋಧಿಸುವ ಇಚ್ಛೆಯೂ ಅವರಿಗಿಲ್ಲ. ಆದರೂ 'ಉಪದೇಶ ಸಾರಂ' ಕೃತಿಯನ್ನು ಓದಿಕೊಂಡು, "ಅವನೇ ನಾನು" ಎಂಬುದು ಉಳಿದೆಲ್ಲ ಧ್ಯಾನಗಳಿಗೆ ಮಿಗಿಲಾದದ್ದು ಎಂಬ ಎಂಟನೇ ಪದ್ಯದ ಉತ್ತರಾರ್ಧವನ್ನು ಮಾತ್ರ ತೆಗೆದುಕೊಂಡು, ಭಗವಾನ್ ರಮಣರೂ ಕೂಡ "ಅವನೇ ನಾನು" ಎಂಬ ಧ್ಯಾನವನ್ನು ಬೋಧಿಸುತ್ತಾರಷ್ಟೇ ಎಂದು ಪ್ರಚಾರ ಮಾಡತೊಡಗುತ್ತಾರೆ. ಆದ್ದರಿಂದ ಈ ವಿಷಯವನ್ನು ಇನ್ನೂ ಸ್ವಲ್ಪ ಆಳವಾಗಿ ಪರಿಶೋಧಿಸುವ ಅಗತ್ಯವಿದೆ. 'ಉಪದೇಶ ಸಾರಂ' ಎಂಬ ಸಂಸ್ಕೃತ ಭಾಷಾಂತರದ ಮೂಲ ತಮಿಳಿನ 'ಉಪದೇಶ ಉಂದಿಯಾರ್[೫೫]' ಎಂಬುದಾಗಿದೆ. ಯಾವ ಸಂದರ್ಭದಲ್ಲಿ ಮತ್ತು ಯಾವ ಉದ್ದೇಶದಿಂದ ಶ್ರೀ ಭಗವಾನರು 'ಉಪದೇಶ ಉಂದಿಯಾರ್' ಅನ್ನು ರಚಿಸಿದರು ಎಂದು ತಿಳಿದುಕೊಂಡರೆ ಎಂಟನೇ ಪದ್ಯದ ಸರಿಯಾದ ಅರ್ಥ ಸ್ಪಷ್ಟವಾಗುತ್ತದೆ.

---

೫೫. ಈ ಕೃತಿಯನ್ನು ಯಾವ ಸಂದರ್ಭದಲ್ಲಿ ಯಾವ ಗುರಿಯಿಟ್ಟುಕೊಂಡು ರಚಿಸಲಾಯಿತು ಎಂದು ನೋಡಿದರೆ ಮಾತ್ರ ಇದನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯ. ಇದನ್ನು 'ಉಪದೇಶ ಉಂದಿಯಾರ್' ಎಂದು ಹೆಸರಿಸಲು ಕಾರಣವೆಂದರೆ ಇದು 'ಉಂದಿಯಾರ್' ಎಂಬ ತಮಿಳು ಛಂದಸ್ಸಿನಲ್ಲಿ ರಚಿಸಲ್ಪಟ್ಟಿರುವ ಉಪದೇಶ. ಶ್ರೀ ಭಗವಾನರು ತಮ್ಮ ಮೂಲ ತಮಿಳಿನಿಂದ ಸಂಸ್ಕೃತಕ್ಕೆ ಈ ಕೃತಿಯನ್ನು ಅನುವಾದಿಸಿದಾಗ ಇದಕ್ಕೆ 'ಉಪದೇಶ ಸಾರಂ' ಎಂದು ಹೆಸರಿಡಲಾಯಿತು. ಈ ಶೀರ್ಷಿಕೆಯಲ್ಲೇ 'ಉಪದೇಶ ಉಂದಿಯಾರ್'ನ ಇಂಗ್ಲೀಷ್ ಭಾಷಾಂತರಗಳನ್ನು ಪ್ರಕಟಿಸಲಾಗಿದೆ.

ಈ ಕೃತಿಯನ್ನು ಮೂಲತಃ ಯಾವ ಸಂದರ್ಭದಲ್ಲಿ ಶ್ರೀ ಭಗವಾನರು ರಚಿಸಿದರು ಎಂದು ಗೊತ್ತಿಲ್ಲದೇ ಶೀರ್ಷಿಕೆಯನ್ನು ಮೊದಲ ಬಾರಿ ಓದಿದ ಬಹಳ ಜನ ಈ ಕೃತಿಯು ಶ್ರೀ ರಮಣರ ಉಪದೇಶಗಳ ಸಾರವೆಂದು, ಜಗತ್ತಿನ ಪ್ರಯೋಜನಕ್ಕಾಗಿ ಅವರು ತಾವಾಗಿ ಇದನ್ನು ರಚಿಸಿದರೆಂದು ಗ್ರಹಿಸುತ್ತಾರೆ. ಆದರೆ ಮುಂದಿನ ಪರಿಚ್ಛೇದವನ್ನು ಓದಿದ ನಂತರ ಶ್ರೀ ಭಗವಾನರು ಇದನ್ನು ಏಕೆ, ಯಾವ ಸಂದರ್ಭದಲ್ಲಿ ರಚಿಸಿದರೆಂದು ಓದುಗರಿಗೆ ತಿಳಿಯುತ್ತದೆ. ಅವರು ಇದನ್ನು ತಮ್ಮದೇ ಉಪದೇಶದ ಸಾರ (ಅಂದರೆ, ಆತ್ಮಶೋಧ)ವೆಂದು ರಚಿಸತೊಡಗಲಿಲ್ಲ; ಪ್ರಾಚೀನ ಕಾಲದಲ್ಲಿ ಶಿವನು ನೀಡಿದ ಉಪದೇಶದ ಸಾರವೆಂದು ರಚಿಸಿದರು. ಅವರ ಇತರ ಎಲ್ಲ ಕೃತಿಗಳಂತೆ 'ಉಪದೇಶ ಉಂದಿಯಾರ್' ಕೂಡ ತಾವಾಗಿ ರಚಿಸಿದ್ದಲ್ಲ, ಭಕ್ತನ ಬೇಡಿಕೆಯಂತೆ ರಚಿಸಿದ್ದು ಎಂದು ಸ್ಪಷ್ಟವಾಗುತ್ತದೆ.

ಶ್ರೀ ಭಗವಾನರ ತುಂಬು ಹೃದಯದ ಶಿಷ್ಯರೂ, ತಮಿಳಿನ ಕವಿಗಳೂ ಆಗಿದ್ದ ಶ್ರೀ ಮುರುಗನಾರ್ ಅವರು ‘ಉಂದಿಯಾರ್’ ಎಂಬ ಛಂದಸ್ಸಲ್ಲಿ ‘ಶ್ರೀ ರಮಣ ಸನ್ನಿಧಿ ಮುರೈ’ ಎಂಬ ಕೃತಿಯನ್ನು ರಚಿಸುತ್ತಿದ್ದರು. ಅದರಲ್ಲಿ ತನ್ನ ಭಕ್ತರೊಂದಿಗೆ ಶಿವನ ಲೀಲೆಯ ವರ್ಣನೆಯಿದೆ. ಪುರಾತನ ದಿನಗಳಲ್ಲಿ ದಾರುಕಾರಣ್ಯದ ನಿವಾಸಿಗಳು ಧಾರ್ಮಿಕ ವಿಧಿಕಾಂಡಗಳನ್ನು ಆಚರಿಸುತ್ತಿದ್ದರು ಮತ್ತು ಕಾಮ್ಯಕರ್ಮಗಳ[೫೬] ಹೊರತಾಗಿ ಬೇರಾವ ದೇವರೂ ಇಲ್ಲವೆಂದು ಭಾವಿಸುತ್ತ ತಮ್ಮ ವಂಚಕ ಅಹಮಿಕೆಯಿಂದ ತುಂಬಾ ಜಂಬ ಪಡುತ್ತಿದ್ದ ಕತೆಯಿದೆ. ಇದನ್ನು ಬರೆಯುತ್ತ ಶಿವನು ಅವರಿಗೆ ಉಪದೇಶ ನೀಡಿ ಸರಿಯಾದ ದಾರಿ ತೋರುವ ಸಂದರ್ಭಕ್ಕೆ ಶ್ರೀ ಮುರುಗನಾರ್ ತಲುಪಿದರು. ಆಗ ಅವರಿಗೆ ಹೊಳೆದದ್ದೆಂದರೆ ಅರುಣಾಚಲ ಶಿವನೇ ಸ್ವಯಂ ತಾನಾಗಿರುವ ಭಗವಾನ್ ಶ್ರೀ ರಮಣರಷ್ಟೇ ಶಿವನ ಆಧ್ಯಾತ್ಮಿಕ ಬೋಧೆಯನ್ನು ತಿಳಿಸಲು ಸೂಕ್ತ ಅಧಿಕಾರಿ ಎಂಬುದು. ಹಾಗಾಗಿ ಕೃತಿಯಲ್ಲಿ ಮೀಸಲಿಟ್ಟ ಉಳಿದ ಮುವತ್ತು ಪದ್ಯಗಳಲ್ಲಿ ಉಪದೇಶ ನೀಡಿ ಕೃತಿಯನ್ನು ಪೂರ್ಣಗೊಳಿಸಲು ಬಿನ್ನವಿಸಿದರು. ಹೀಗೆ ಕತೆಯ ಮುಂದುವರಿಕೆಯಾಗಿ ಭಗವಾನ್ ರಮಣರು ಆ ಕಾಲದಲ್ಲಿ ದಾರುಕಾರಣ್ಯದ ವಾಸಿಗಳಿಗೆ ಶಿವನ ಉಪದೇಶವಾಗಿ ‘ಉಪದೇಶ ಉಂದಿಯಾರ್’ ಅನ್ನು ರಚಿಸತೊಡಗಿದರು. ಮೊದಲಿನ ಎರಡು ಪದ್ಯಗಳಲ್ಲಿ ಆಸೆಯಿಂದ ಆಚರಿಸುವ ಕ್ರಿಯೆಗಳನ್ನು (ಕಾಮ್ಯಕರ್ಮಗಳನ್ನು) ಖಂಡಿಸಲಾಗಿದೆ. ನಂತರ ೩ ರಿಂದ ೧೫ನೇ ಪದ್ಯದವರೆಗೆ (ಒಟ್ಟು ೧೩ ಪದ್ಯಗಳು) ಇದುವರೆಗೆ ಶಾಸ್ತ್ರಗಳಲ್ಲಿ ಹೇಳಲಾದ ನಿಷ್ಕಾಮ್ಯಕರ್ಮ, ಭಕ್ತಿ ಮತ್ತು ರಾಜಯೋಗಗಳೆಂಬ ಮೂರು ಮಾರ್ಗಗಳ ಸಾರಾಂಶವನ್ನು ನೀಡಲಾಗಿದೆ. ಈ ೧೫ ಪದ್ಯಗಳಲ್ಲಿ ಜ್ಞಾನಮಾರ್ಗವನ್ನು ಶ್ರೀ ಭಗವಾನರು ಉಲ್ಲೇಖಿಸಿಯೇ ಇಲ್ಲ. ೩ ರಿಂದ ೬ನೇ ಪದ್ಯದವರೆಗೆ ಪೂಜೆ ಮತ್ತು ಜಪಗಳ ಬಗ್ಗೆ ಸೂಚನೆ ನೀಡಿದ ನಂತರ, ೭ ಮತ್ತು ೮ನೇ ಪದ್ಯಗಳಲ್ಲಿ ಶ್ರೀ ಭಗವಾನರು ಪ್ರಾಚೀನ ಧ್ಯಾನ ಪದ್ಧತಿಗಳನ್ನು ಆದ್ಯತೆಯ ಅನುಕ್ರಮದಲ್ಲಿ ವರ್ಣಿಸಿದ್ದಾರೆ. ಈ ಸಂದರ್ಭದಲ್ಲಿ ಮಾತ್ರ ೮ನೇ ಪದ್ಯದಲ್ಲಿ ಹೇಳಲಾಗಿದೆ: “ಅವನೇ ನಾನು” ಎಂಬ ಧ್ಯಾನವು ದೇವರನ್ನು ಅನ್ಯವನ್ನಾಗಿ ಧ್ಯಾನಿಸುವುದಕ್ಕಿಂತ ಮಿಗಿಲು”. ದಾರುಕಾರಣ್ಯದ ನಿವಾಸಿಗಳಿಗೆ ಶಿವನು ನೀಡಿದ ಉಪದೇಶಗಳ ಸಾರವನ್ನು ತಿಳಿಸಬೇಕೆಂದು ಬಿನ್ನವಿಸಲಾದ ಕಾರಣ ಶ್ರೀ ಭಗವಾನರು ಪ್ರಾಚೀನ ಮಾರ್ಗಗಳ ಸಾರಾಂಶ ನೀಡುವದು ಅವಶ್ಯಕವಾಯಿತು. ಆದ್ದರಿಂದ (ಶಿವನ ಉಪದೇಶವಿರುವ) ೩ ರಿಂದ ೧೫ವರೆಗಿನ ಪದ್ಯಗಳನ್ನು ಶ್ರೀ ಭಗವಾನರ ನೇರ ಅನುಭವವನ್ನು ಆಧರಿಸಿದ ಉಪದೇಶವೆಂದು ಪರಿಗಣಿಸಬಾರದು. ಆತ್ಮಶೋಧವೊಂದೇ ಶ್ರೀ ಭಗವಾನರ ನೇರ ಉಪದೇಶವಾಗಿದೆ.

ಕೆಲವರು ಕೇಳಬಹುದು, “ಆಗಲಿ, ‘ಅವನೇ ನಾನು’ ಎಂಬ ಧ್ಯಾನವು ಶ್ರೀ ಭಗವಾನರ ವಾಸ್ತವ ಉಪದೇಶವಿರಲಿಕ್ಕಿಲ್ಲ. ಆದರೆ ೯ನೇ ಪದ್ಯದಲ್ಲಿ ಹೇಳಿದ್ದಾರಲ್ಲ, “ಅಂತಹ ಧ್ಯಾನ ಬಲದಿಂದ, ಧ್ಯಾನದ ವ್ಯಾಪ್ತಿ ಮೀರಿದ, ತನ್ನ ನಿಜ ಅಸ್ತಿತ್ವದಲ್ಲಿ ನೆಲೆಸುವುದು ಪರಮ ಭಕ್ತಿಯ ಸ್ವಭಾವವೇ ಆಗಿದೆ”. ಅಂದರೆ ಪರಮ ಭಕ್ತಿಯೇ ಆಗಿರುವ ಮುಕ್ತಿಯನ್ನು

---

೫೬. ಕಾಮ್ಯ ಕರ್ಮಗಳು: ಕಾಮನಾ ಪೂರ್ತಿಗಾಗಿ ಮಾಡುವ ಯಾವುದೇ ಕ್ರಿಯೆ. ಪ್ರಸ್ತುತ ಸಂದರ್ಭದಲ್ಲಿ ಇದು ವೇದಗಳ ಭಾಗವಾದ ಪೂರ್ವಮೀಮಾಂಸೆಯಲ್ಲಿ ಕಂಡು ಬರುವ ಉಪದೇಶಗಳಿಗೆ, ಧಾರ್ಮಿಕ ವಿಧಿಗಳ ಆಚರಣೆಗೆ ಅನ್ವಯಿಸುತ್ತದೆ.

ಅಂತಹ ಧ್ಯಾನಬಲದಿಂದ ಪಡೆಯಬಹುದು ಎಂದು ಅರ್ಥವಲ್ಲವೇ?" ಈಗ, ಅಂತಹ ಧ್ಯಾನಬಲವು ಜಿಜ್ಞಾಸುವಿನ ಅಭ್ಯಾಸಕ್ರಮದಲ್ಲಿ ನಿಜವಾಗಿಯೂ ಏನು ಮತ್ತು ಆ ಬಲದಿಂದ ಅವನಲ್ಲಿ ಯಾವ ಬದಲಾವಣೆಗಳು ಉಂಟಾಗುತ್ತವೆ ಎಂದು ನೋಡೋಣ. ಪದ್ಯ ೩ ರಿಂದ ೭ರವರೆಗೆ ವರ್ಣಿಸಲಾದ ಪೂಜೆ, ಧ್ಯಾನ ಮುಂತಾದ ಪ್ರಾಚೀನ ಪದ್ಧತಿಗಳನ್ನು ಜಿಜ್ಞಾಸುವು ಅಭ್ಯಸಿಸುವಾಗ, ದೇವರೆಂಬುದು ಮಧ್ಯಮ ಅಥವಾ ಪ್ರಥಮ ಪುರುಷ ವಸ್ತುವೆಂದು ಅವನ ಮನಸ್ಸು ಕಲ್ಪಿಸುತ್ತಿತ್ತು. 'ಅವನೇ ನಾನು' ಎಂಬ ಧ್ಯಾನವನ್ನು ವಿಧಿಸಿದ್ದರ ಕಾರಣವೆಂದರೆ ಅವನ ಅಜ್ಞಾನವನ್ನು ತೊಲಗಿಸಿ ಈ ಮಹಾವಾಕ್ಯದಲ್ಲಿ ಜಿಜ್ಞಾಸುವಿಗೆ ಪೂರ್ಣ ಶ್ರದ್ಧೆಯನ್ನು ಬೆಳೆಸಲು ಸಹಾಯ ಮಾಡುವುದು ಮತ್ತು ತನ್ಮೂಲಕ 'ದೇವರು ನಿಜಕ್ಕೂ ಉತ್ತಮ ಪುರುಷನ ಸತ್ಯ' ಎಂಬ ದೃಢ ನಂಬಿಕೆ ನೀಡುವುದು. **ಇಂತಹ ನಂಬಿಕೆಯ ಬಲವೇ ಪದ್ಯ ೯ರಲ್ಲಿ ಉಲ್ಲೇಖಿಸಿದ ಧ್ಯಾನಬಲವಾಗಿದೆ (ಭಾವಬಲ).** ಆದರೂ, ದೇವರು ಅಥವಾ ಬ್ರಹ್ಮ ಉತ್ತಮ ಪುರುಷನ ಸತ್ಯವೆಂದು ನಂಬಿಕೆ ಪಡೆಯಲು ಈ ಸುತ್ತು ಬಳಸಿನ ದಾರಿ ಏಕೆ ಹಿಡಿಯಬೇಕು! ದಾರುಕಾರುಣ್ಯದ ವಿಧಿಕಾಂಡವಾದಿಗಳು ಮುಚ್ಚಿದ ದಾರಿಯ ಕೊನೆ ತಲುಪಿದ್ದರಿಂದ ಶಿವನು ಅವರಿಗೆ ದಾರಿ ಹಿಡಿಸಲು ಸುತ್ತು ಬಳಸಬೇಕಾಯಿತು. ಆದರೆ 'ಉಳ್ಳದು ನಾರ್ಪದು'ವಿನ ೧೪ನೇ ಪದ್ಯದಲ್ಲಿ ಶ್ರೀ ಭಗವಾನರ ಉಪದೇಶವಿದೆ: "ಉತ್ತಮ ಪುರುಷ ಇದ್ದರೆ ಮಾತ್ರ ಮಧ್ಯಮ ಮತ್ತು ಪ್ರಥಮ ಪುರುಷರು ಇರುತ್ತಾರೆ". ಇದನ್ನು ಕೇಳಿದಾಕ್ಷಣ "ಮಧ್ಯಮ ಮತ್ತು ಪ್ರಥಮ ಪುರುಷರು ಜೀವಿಸುವುದು ಉತ್ತಮ ಪುರುಷನೆಂಬ ಮೂಲಬೇರಿನಿಂದಾಗಿ"[೫೭] ಎಂದು ಒಪ್ಪಿಕೊಂಡು ನೇರವಾಗಿ ಆತ್ಮನತ್ತ ತಿರುಗುವುದಿಲ್ಲವೇಕೆ? ತಮ್ಮ ದಾರಿಗೆ ಬಾರದೇ ಮಧ್ಯಮ ಮತ್ತು ಪ್ರಥಮ ಪುರುಷರತ್ತ ಶ್ರಮ ಹಾಕುವವರನ್ನು ಮರಳುವಂತೆ ಮಾಡಲು ಶ್ರೀ ಭಗವಾನರು ಪ್ರಾಚೀನ ಧ್ಯಾನ ಪದ್ಧತಿಗಳಲ್ಲಿ ಇದು ಶ್ರೇಷ್ಠವೆಂದು ಶಿಫಾರಸು ಮಾಡಿದ್ದಾರೆ. ಏಕೆಂದರೆ ಪೂರ್ವಭಾವಿ ಮಾಹಿತಿಯಾಗಿ ಉತ್ತಮ ಪುರುಷನತ್ತ ಗಮನ ತಿರುಗಿಸಲು ಇದು ಸಹಾಯಕವಾಗುತ್ತದೆ. ಬೇರೊಬ್ಬನ ಕೊಟ್ಟಿಗೆಯಲ್ಲಿ ಕಟ್ಟಿದ ತನ್ನ ಆಕಳನ್ನು ಮಾಲಿಕನು ಮತ್ತೆ ಮತ್ತೆ ಬಂದು ಮುದ್ದು ಮಾಡಿ ತಿನ್ನಿಸಿ ಪರಿಚಯ, ಆತ್ಮೀಯತೆ ಬೆಳೆಸಿಕೊಂಡಿದ್ದರೆ, ಆಕಳಿಗೆ ಇವನೇ ತನ್ನ ಮಾಲಿಕನೆಂದು ನಂಬಿಕೆ ಬರುತ್ತದೆ ಮತ್ತು ಅಂತಹ ಭಾವಬಲ ಪಡೆದ ನಂತರ ತನ್ನದೇ ಕೊಟ್ಟಿಗೆಗೆ ಕರೆ ತಂದಾಗ ಮಾಲಿಕನೊಂದಿಗಿನ ಪೂರ್ವಭಾವಿ ಆತ್ಮೀಯತೆಯಿಂದಾಗಿ ಅಲ್ಲೇ ಉಳಿಯಲು ಒಪ್ಪುತ್ತದೆ.

ಶಾಸ್ತ್ರಗಳಲ್ಲಿ ಉಲ್ಲೇಖಿತವಾದ ಭ್ರಮರ ಕೀಟಕ ನ್ಯಾಯವು[೫೮] ಜಿಜ್ಞಾಸುವು ತನ್ನ ಅಭ್ಯಾಸದ ಅವಧಿಯಲ್ಲಿ ಅಂತಹ ಭಾವಬಲವನ್ನು ಪಡೆಯುವ ಪ್ರಕ್ರಿಯೆಗೆ ದೃಷ್ಟಾಂತವಾಗಿ ಮಾತ್ರ ಬಂದಿದೆ. ವಿಚಾರ ಮಾಡುವ ಮೂಲಕ ಜೀವಾತ್ಮವು ಬ್ರಹ್ಮವಾಗುತ್ತದೆ ಎಂದು

---

೫೭. ಇಲ್ಲಿ ಓದುಗನ ನೆನಪು ಹೊಸತಾಗಿಸಲು ಐದನೇ ಅಧ್ಯಾಯದ ಕೊನೆಯ ಪರಿಚ್ಛೇದ ನೋಡಲು ಸೂಚಿಸಲಾಗಿದೆ. ಪರಿಚ್ಛೇದದ ಪ್ರಾರಂಭ 'ಅಲ್ಲದೇ, ದೇವರು...' ಪುಟ ೮೬, ೮೭.

೫೮. ಭ್ರಮರ ಕೀಟಕ ನ್ಯಾಯ: ಭಾರತೀಯ ಭ್ರಮರಗಳ ಒಂದು ಪ್ರಭೇದವು ಕೀಟವನ್ನು ತಂದು ತನ್ನ ಗೂಡಿನಲ್ಲಿ ಇಡುತ್ತದೆ. ಭ್ರಮರವು ಗೂಡಿಗೆ ಬಂದಾಗಲೆಲ್ಲ ಕೀಟಕ್ಕೆ ಕಚ್ಚುತ್ತದೆ. ಕಾಲಕ್ರಮದಲ್ಲಿ ಈ ಕೀಟ ಭ್ರಮರವಾಗುತ್ತದೆ. ಕೀಟವು ಭಯದಿಂದ ಸತತವಾಗಿ ಭ್ರಮರದ ಬಗ್ಗೆ ಯೋಚಿಸುವುದರಿಂದ ಅದು ಭ್ರಮರವೇ ಆಗುತ್ತದೆ ಎಂದು ನಂಬಲಾಗಿದೆ.

ಇದರ ಅರ್ಥವಲ್ಲ. ಏಕೆಂದರೆ ಬ್ರಹ್ಮಸ್ಥಿತಿಯು ಬೇರೊಂದರಿಂದ ಹೊಸದಾಗಿ ಸೃಷ್ಟಿಯಾದದ್ದಲ್ಲ (ಕೀಟವು ಭ್ರಮರವಾದಂತೆ). ಇದು ಬದಲಾವಣೆಯಾಗದ ನಮ್ಮ ಸಹಜ ಸ್ಥಿತಿ.

"ಓ ರಮಣ, ನಿನ್ನ ಪಾದ–ಈ ಅಸ್ತಿತ್ವವು ಹೋಗಿ ಇನ್ನೊಂದರೊಡನೆ ಒಂದಾಗುವುದಲ್ಲ, ತಾನೇ ಇನ್ನೊಂದಾಗುವುದಲ್ಲ, ತಳ್ಳಿ ಹಾಕಬೇಕಾದದ್ದಲ್ಲ, ನಾಶ ಮಾಡಬೇಕಾದ್ದಲ್ಲ, ಯಾವುದೇ ಕಾರಣಕ್ಕೆ ಮೂಡಿ ಮುಳುಗುವುದಲ್ಲ!..."

–ಶ್ರೀ ರಮಣ ಸಹಸ್ರಂ, ಪದ್ಯ ೨೩೩

ಆದ್ದರಿಂದ ಬ್ರಹ್ಮನ ಪರಿಪೂರ್ಣ ಸ್ಥಿತಿಯ ಶಾಶ್ವತ ಸ್ವಭಾವಕ್ಕೆ ಅನುಗುಣವಾಗಿ ಯಾವುದೋ ಹೊಸದಾಗಿ ಅದಾಗುತ್ತದೆ ಎಂದು ಹೇಳಲು ಸಾಧ್ಯವೇ?

"ಅಭ್ಯಾಸ ಮಾಡುವಾಗ ದ್ವೈತವಿದ್ದು, ಸಿದ್ಧಿಯ ನಂತರ ಅದ್ವೈತವಿರುತ್ತದೆ ಎಂಬ ವಾದವೂ ಸತ್ಯವಲ್ಲ......"

–'ಉಳ್ಳದು ನಾರ್ಪದು', ಪದ್ಯ ೩೭

'ನನ್ನ ನಿಜವಾದ ಇರುವು–ಅರಿವು ದೇವರು ಅಥವಾ ಬ್ರಹ್ಮ' ಎಂಬ ನಂಬಿಕೆ ಅಂತಹ ಧ್ಯಾನಬಲದಿಂದ ದೃಢವಾದ ನಂತರ ಒಂದು ಶುಭಗಳಿಗೆಯಲ್ಲಿ "ನಾನು ಯಾವಾಗಲೂ ಇಲ್ಲವೇ? ಹಾಗಾದರೆ ಇರಲಿಕ್ಕೆ ನಾನೇಕೆ ಧ್ಯಾನ ಮಾಡಬೇಕು?" ಎಂಬ ಜ್ಞಾನ ಹೊಳೆಯುತ್ತದೆ ಮತ್ತು ಹೀಗೆ ಅವನ ಗಮನವು ಅಚಾನಕ್ಕಾಗಿ ಅವನ ಇರುವು–ಅರಿವಿನ ಮೇಲೆ ನೆಲೆಸುತ್ತದೆ. ಈ ಆತ್ಮಾವಧಾನವೇ ನಿಜವಾಗಿಯೂ ಆತ್ಮಶೋಧದ ತಂತ್ರ. ಈ ಆತ್ಮಾವಧಾನದಿಂದಾಗಿ 'ನಾನು ಬ್ರಹ್ಮ' ಎಂಬ ಧ್ಯಾನವು ಅನವಶ್ಯಕವಾಗುವುದರಿಂದ ಜಿಜ್ಞಾಸುವು ತನ್ನ ನಿಜವಾದ ಅಸ್ತಿತ್ವದಲ್ಲಿ ನೆಲೆಸುತ್ತಾನೆ. 'ನಾನು ಇದ್ದೇನೆ' (ಅಹಮಸ್ಮಿ) ಎಂಬುದು ವಿಚಾರಮುಕ್ತವಾದ ಅರಿವಿನ ಸ್ಥಿತಿ. ಪದ್ಯ ೯ರಲ್ಲಿ ಉಲ್ಲೇಖಿಸಲ್ಪಟ್ಟಿದ್ದು ಇದೇ. ಏನೇ ಇದ್ದರೂ ಜಿಜ್ಞಾಸುವಿನಲ್ಲಿ ಅಂತಿಮವಾಗಿ ನಡೆಯಬೇಕಾದದ್ದು ಆತ್ಮಾವಧಾನವೇ, ಇದೇ ಶ್ರೀ ಭಗವಾನರು ಬೋಧಿಸಿದ ಆತ್ಮಶೋಧ ಈ ತನ್ನ ಬಗೆಗಿನ ಪ್ರೀತಿಯು (ಸ್ವಾತ್ಮ ಭಕ್ತಿ) ಪರಾಭಕ್ತಿಯ ತತ್ವವಾಗಿದೆ (ಪದ್ಯ ೯ರಲ್ಲಿ ಕಾಣಿಸಿದಂತೆ) ಮತ್ತು ಅದೇ ಮುಕ್ತಿ.

ಅಲ್ಲಿಂದ ಮುಂದೆ ಪದ್ಯ ೧೬ ರಿಂದ ೨೯ರವರೆಗೆ ಶ್ರೀ ಭಗವಾನರು ಜ್ಞಾನಮಾರ್ಗವನ್ನು ಮಂಡಿಸುತ್ತಾರೆ. ಇಲ್ಲಿಯೂ ಕೂಡ ಶಾಸ್ತ್ರಗಳ ಉಪದೇಶದ ರೀತಿಗೂ ಶ್ರೀ ಭಗವಾನರದಕ್ಕೂ ಒಂದು ಸೂಕ್ಷ್ಮ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಮೊದಲು, ಪದ್ಯ ೧೬ ರಿಂದ ೨೦ರವರೆಗೆ ಶ್ರೀ ಭಗವಾನರು 'ನಾನು ಯಾರು?' ಎಂಬ ಶೋಧ ಮಾಡುವ (ಆತ್ಮಾವಧಾನದ) ಬಗೆಯನ್ನು ವಿವರಿಸುತ್ತಾರೆ. ನಂತರ ೨೧ನೇ ಪದ್ಯದಲ್ಲಿ[೫೯] 'ನಾನು' ಎಂಬ ಪದ ಸೂಚಿಸುವುದು ತನ್ನನ್ನೇ (ಆತ್ಮವನ್ನೇ) ಎಂದು ತಿಳಿಸಿದ ಬಳಿಕ ತಮ್ಮ ನಿರ್ಣಯವನ್ನು ಪ್ರತಿಪಾದಿಸುತ್ತಾರೆ. 'ನಾನು' ಎಂಬ ಸತ್ಯವೇ ಆತ್ಮವಾದ್ದರಿಂದ,

---

೫೯. "ಇದು ('ನಾನು, ನಾನು' ಅಂದರೆ ಆತ್ಮ) ಯಾವಾಗಲೂ (ಮೂರೂ ಅವಸ್ಥೆಗಳಲ್ಲಿ, ಕಾಲದ ಮೂರೂ ಭಾಗಗಳಲ್ಲಿ) 'ನಾನು' ಪದದ ನಿಜವಾದ ಅರ್ಥ. ಏಕೆಂದರೆ ಅಹಂ ಇಲ್ಲದ ನಿದ್ದೆಯಲ್ಲೂ, ಕೂಡ ನಾವು ಇಲ್ಲವಾಗುವುದಿಲ್ಲ"

'ಉಪದೇಶ ಉಂದಿಯಾರ್', ಪದ್ಯ ೨೧

"ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಜ್ಞಾನದ ಅಂಧಕಾರ ಈ ಐದೂ (ಪಂಚಕೋಶಗಳೂ) ಜಡವೂ ಇಲ್ಲದವೂ (ಅಸತ್) ಆಗಿರುವುದರಿಂದ ಇರುವ (ಸತ್) 'ನಾನು' ಅಲ್ಲ"

–'ಉಪದೇಶ ಉಂದಿಯಾರ್' ಪದ್ಯ ೨೨

ಪ್ರಾಚೀನ ಶಾಸ್ತ್ರಗಳಲ್ಲಿ ಆತ್ಮಶೋಧದ ಪ್ರಕ್ರಿಯೆಯನ್ನು 'ನೇತಿ' 'ನೇತಿ' ಎನ್ನುತ್ತ (ನಾನಲ್ಲ, ನಾನಲ್ಲ) ಪಂಚಕೋಶಗಳನ್ನು ನಿರಾಕರಿಸುವುದಾಗಿ ವರ್ಣಿಸಲಾಗಿದೆ. ಆದರೂ ಹಾಗೆ ಮಾಡುವುದು ಹೇಗೆ ಎಂದು ತಿಳಿಯದೇ ಜಿಜ್ಞಾಸುಗಳು ಹೆಣಗಾಡುತ್ತಾರೆ. ಆದ್ದರಿಂದಲೇ ಶ್ರೀ ಭಗವಾನರು ಮೊದಲು (ಪದ್ಯ ೧೬ ರಿಂದ ೨೦ರವರೆಗೆ) ಆತ್ಮಾವಧಾನದ ತಂತ್ರವನ್ನು, ಅಂದರೆ ನಿಜವಾಗಿಯೂ 'ನಾನು' ಏನೆಂದು ತಿಳಿಯುವುದನ್ನು, ತೋರಿಸಿ ಕೊಡುತ್ತಾರೆ. ಬಳಿಕ ೨೨ನೇ ಪದ್ಯದಲ್ಲಿ ಪಂಚಕೋಶಗಳ ನಿರಾಕರಣೆಯು ನಿಜವಾದ 'ನಾನು' (ಆತ್ಮ) ಜ್ಞಾನದ ಪರಿಣಾಮ ಎಂದು ತಿಳಿಸುತ್ತಾರೆ. ಹೀಗೆ 'ನಾನು', ಆತ್ಮವನ್ನು ಗಮನಿಸುವುದೇ ಅನಾತ್ಮವಾದ ಪಂಚಕೋಶಗಳ ನಿರಾಕರಣೆಯ ಪದ್ಧತಿ ಎಂದು ಸೂಚಿಸಿದ್ದಾರೆ. ಆದ್ದರಿಂದ 'ಉಪದೇಶ ಉಂದಿಯಾರ್'ನಲ್ಲಿ ಶ್ರೀ ಭಗವಾನರು ಜ್ಞಾನಮಾರ್ಗಕ್ಕೆ ತಿದ್ದುಪಡಿ ತಂದಿದ್ದಾರೆ. ಪ್ರಾಚೀನ ಶಾಸ್ತ್ರಗಳಲ್ಲಿ ಹಿಂದು ಮುಂದಾದ ಪ್ರಕ್ರಿಯೆಯನ್ನು ಪುನರ್ಜೋಡಣೆ ಮಾಡಿ ಹೊಸ ವ್ಯಾವಹಾರಿಕ ಶಿಸ್ತು ತಂದಿದ್ದಾರೆ. ಅಂದರೆ ಯಾವುದನ್ನು ಅಭ್ಯಾಸ ಎಂದು ಹೇಳಲಾಗಿತ್ತೋ (ನೇತಿ, ನೇತಿ) ಅದನ್ನು ಪರಿಣಾಮವೆಂದು ಎತ್ತಿ ತೋರಿಸಿದ್ದಾರೆ! ಹೀಗೆ, ಪದ್ಯ ೧೬ರಿಂದ ೨೯ರವರೆಗೆ ಶ್ರೀ ಭಗವಾನರು 'ನಾನು ಯಾರು?' ಎಂಬ ಶೋಧವನ್ನು ಅದೇ ಸರಿಯಾದ ಜ್ಞಾನಮಾರ್ಗವೆಂದು ಬೋಧಿಸುತ್ತಾರೆ ಮತ್ತು 'ಉಪದೇಶ ಉಂದಿಯಾರ್'ನ ೩೦ನೇ ಪದ್ಯದಲ್ಲಿ 'ಸರಿಯಾದ ಒಂದೇ ಒಂದು ತಪಸ್ಸೆಂದರೆ ಆತ್ಮವನ್ನು ತಿಳಿದು ಅದರಲ್ಲಿ ನೆಲೆಸುವುದೇ ಹೊರತು ಬೇರೆ ಏನಲ್ಲ' ಎಂದು ಘೋಷಿಸುತ್ತಾರೆ.

ಅಧ್ಯಾಯ ಏಳು

ಆತ್ಮ ವಿಚಾರ

'ಆತ್ಮ ವಿಚಾರ' ಎಂಬ ಪದವನ್ನು ಕೇಳಿದಾಗ ಜನ ಸಾಮಾನ್ಯವಾಗಿ ತಿಳಿದುಕೊಳ್ಳುವುದು ಏನೆಂದರೆ ಆತ್ಮದ ಬಗ್ಗೆ ವಿಚಾರ ಮಾಡುವುದು ಅಥವಾ ಆತ್ಮದ ಒಳಗೆ ಶೋಧಿಸುವುದು. ಆದರೆ ಹಾಗೆ ಮಾಡುವುದು ಹೇಗೆ? ಆತ್ಮದೊಳಗೆ ಹುಡುಕುವವರು ಯಾರು ಅಥವಾ ಆತ್ಮದ ಬಗ್ಗೆ ವಿಚಾರ ಮಾಡುವುದು ಯಾರು? ವಿಚಾರ ಮಾಡುವುದು/ಹುಡುಕುವುದು ಎಂದರೆ ವಾಸ್ತವವಾಗಿ ಏನು? ಇಂತಹ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ, ಅಲ್ಲವೇ?

'ಆತ್ಮವಿಚಾರ' ಅಥವಾ 'ಬ್ರಹ್ಮವಿಚಾರ' ಎಂಬ ಪದಗಳನ್ನು ಕೇಳಿದಾಕ್ಷಣ ನಮ್ಮಲ್ಲಿ ಅನೇಕರು ಭಾವಿಸುವುದೇನೆಂದರೆ ನಮ್ಮದೇ ದೇಹದೊಳಗೆ ಎಂತಹುದೋ ಒಂದು ಪ್ರಭೆಯಿದೆ ಅಥವಾ ಆಕಾರರಹಿತ ಶಕ್ತಿಯಿದೆ, ಅದು ಏನು, ಎಲ್ಲಿದೆ, ಹೇಗಿದೆ ಎಂದು ಹುಡುಕುವುದು. ಈ ಕಲ್ಪನೆ ಸರಿಯಲ್ಲ. ಏಕೆಂದರೆ, ಆತ್ಮವು ತಿಳಿಯಬಯಸುವ ನಾವು ತಿಳಿಯಬೇಕಾದ ವಸ್ತುವಲ್ಲ! ಇದು ತಿಳಿಯಹೊರಡುವವರ ಸ್ವಭಾವವೇ ಆಗಿ ಪ್ರಕಾಶಿಸುತ್ತದೆ! ಆತ್ಮವಿಚಾರವೆಂದರೆ ಮಧ್ಯಮ ಅಥವಾ ಪ್ರಥಮ ಪುರುಷ ವಸ್ತುಗಳನ್ನು ಹುಡುಕುವುದಲ್ಲ. ಪ್ರಾರಂಭದಿಂದಲೇ ಇದನ್ನು ತಿಳಿಸುವ ಸಲುವಾಗಿ ಭಗವಾನ್ ರಮಣರು ಆತ್ಮವಿಚಾರವನ್ನು 'ನಾನು ಯಾರು?' ಎಂದು ಕರೆದು ನೇರವಾಗಿ ಉತ್ತಮ ಪುರುಷನತ್ತ ನಮ್ಮ ಗಮನ ಸೆಳೆದಿದ್ದಾರೆ. 'ನಾನು ಯಾರು?' ಎಂಬ ಪ್ರಶ್ನೆಯಲ್ಲಿ 'ನಾನು' ಎಂಬುದು ಆತ್ಮವನ್ನೂ 'ಯಾರು?' ಎಂಬುದು ವಿಚಾರ (ಶೋಧ)ವನ್ನೂ ಸೂಚಿಸುತ್ತವೆ.

ಆತ್ಮನೊಳಗೆ ಹುಡುಕಬೇಕಾದವರು ಯಾರು? ಈ ಹುಡುಕಾಟ ಯಾರಿಗೆ ಅಗತ್ಯವಿದೆ? ಆತ್ಮಕ್ಕೇ? ಇಲ್ಲ, ಏಕೆಂದರೆ ಆತ್ಮವು ನಿತ್ಯಸಿದ್ಧವೂ, ನಿತ್ಯಶುದ್ಧವೂ, ನಿತ್ಯ ಮುಕ್ತವೂ, ನಿತ್ಯಾನಂದಮಯವೂ ಆದ ಪೂರ್ಣವಾಗಿರುವುದರಿಂದ ಇದು ಯಾವುದೇ ಶೋಧ (ವಿಚಾರ) ಮಾಡುವುದಿಲ್ಲ, ಅದರ ಅಗತ್ಯವೂ ಅದಕ್ಕಿಲ್ಲ. ಆಗಲಿ, ಹಾಗಾದರೆ ಶೋಧ (ವಿಚಾರ)ದ ಅಗತ್ಯವಿರುವುದು ಅಹಂಗೆ ಮಾತ್ರ. ಈ ಅಹಮಿಕೆಯು ಆತ್ಮವನ್ನು ತಿಳಿದುಕೊಳ್ಳಬಹುದೇ? ಹಿಂದಿನ ಅಧ್ಯಾಯಗಳಲ್ಲಿ ಹೇಳಿರುವಂತೆ ಈ ಅಹಂ ಎನ್ನುವುದು ತನ್ನದೇ ಅಸ್ತಿತ್ವ ಹೊಂದಿರದ ಹುಸಿ ತೋರಿಕೆ ಮಾತ್ರ. ನಿದ್ದೆಯ ಸಮಯದಲ್ಲಿ ಕರಗಿ, ಆಕಾರ ಕಳೆದುಕೊಳ್ಳುವ ಕ್ಷುಲ್ಲಕ ಅಣುರೂಪದ 'ನಾನು' ಭಾವವು ಮಾತ್ರ. ಹಾಗಾಗಿ, ಆತ್ಮವು ಅಹಂನಿಂದ ತಿಳಿದುಕೊಳ್ಳಬೇಕಾದ ವಸ್ತುವೇ? ಇಲ್ಲ, ಅಹಂ ಆತ್ಮವನ್ನು ತಿಳಿಯಲಾರದು. **ಆತ್ಮವಿಚಾರವು ಆತ್ಮಕ್ಕೆ ಅನಗತ್ಯ, ಆತ್ಮಜ್ಞಾನವು ಅಹಂಗೆ ಅಸಾಧ್ಯ** ಎಂದಾದಾಗ ಪ್ರಶ್ನೆಗಳು ಏಳುತ್ತವೆ. ಹಾಗಿದ್ದರೆ ಆತ್ಮವಿಚಾರದ ಪ್ರಾಯೋಗಿಕ ವಿಧಾನ ಎಂತಹದು? ಶಾಸ್ತ್ರಗಳಲ್ಲಿ 'ಆತ್ಮವಿಚಾರ' ಎಂಬ ಪದ ಏಕೆ ಬಂದಿದೆ? ಹೀಗೆ ಪರಿಶೋಧಿಸಿ ತಿಳಿಯಬೇಕಲ್ಲವೇ? ಹಾಗೇ ಮಾಡೋಣ.

'ವಿಚಾರ' ಎಂಬ ಪದವನ್ನು ಶ್ರೀ ಭಗವಾನರು ಬಳಸುವುದಕ್ಕೂ ಶಾಸ್ತ್ರಗಳು ಬಳಸುವ ರೀತಿಗೂ ಒಂದು ವ್ಯತ್ಯಾಸವಿದೆ. ದೇಹ, ಪ್ರಾಣ, ಮನ, ಬುದ್ಧಿ ಮತ್ತು ಅಜ್ಞಾನದ ಅಂಧಕಾರ– ಈ ಪಂಚಕೋಶಗಳನ್ನು 'ನಾನಲ್ಲ', 'ನಾನಲ್ಲ' (ನೇತಿ, ನೇತಿ) ಎಂದು ನಿರಾಕರಿಸುವುದನ್ನು ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಆದರೆ ನಿರಾಕರಿಸುವುದಾದರೆ ಯಾರು, ಮತ್ತು ಹೇಗೆ? ಮನಸ್ಸು (ಅಥವಾ ಬುದ್ಧಿ) ಅವನ್ನು ನಿರಾಕರಿಸುವುದಾದರೆ ಇದು ಹೆಚ್ಚೆಂದರೆ ತನಗೆ ಕಾಣುವ ವಸ್ತುಗಳಾದ ಭೌತಿಕ ಜಡದೇಹ ಮತ್ತು ಪ್ರಾಣಗಳನ್ನು ಮಾತ್ರ ನಿರಾಕರಿಸಬಹುದು. ಇದನ್ನು ಮೀರಿ, ಮನವು ತನ್ನನ್ನು ತಾನು, ತನ್ನದೇ ಸ್ವರೂಪವನ್ನು ನಿರಾಕರಿಸುವುದು ಹೇಗೆ ಸಾಧ್ಯ? ತನ್ನನ್ನೇ ನಿರಾಕರಿಸಿಕೊಳ್ಳಲಾಗದ ಮನವು ತನ್ನ ವ್ಯಾಪ್ತಿ ಮೀರಿದ ಉಳಿದೆರಡು ಕೋಶಗಳನ್ನು–ಬುದ್ಧಿ (ವಿಜ್ಞಾನಮಯ ಕೋಶ) ಮತ್ತು ಅಜ್ಞಾನದ ಅಂಧಕಾರ (ಆನಂದಮಯ ಕೋಶ) ನಿರಾಕರಿಸುವುದು ಹೇಗೆ? ವಿಚಾರ ಮಾಡುವಾಗ ಆತ್ಮನಲ್ಲಿ ನೆಲೆಸಲು ಮನವು 'ನಾನು ಈ ದೇಹವಲ್ಲ', 'ನಾನು ಈ ಪ್ರಾಣವಲ್ಲ' ಎಂದು ಮಾನಸಿಕವಾಗಿ ಮತ್ತೆ ಮತ್ತೆ ನೆನೆಸುವುದರ ಹೊರತಾಗಿ ಮತ್ತೇನು ಮಾಡಬಲ್ಲದು? 'ವಿಚಾರ'ವೆಂದರೆ ಒಂದು ಇನ್ನೊಂದರ ಬಗ್ಗೆ ವಿಚಾರ ಮಾಡುವುದೆಂದಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಶ್ರೀ ಭಗವಾನರು ಬೋಧಿಸಿದ 'ನಾನು ಯಾರು?' ಎಂಬ ವಿಚಾರವನ್ನು ಆತ್ಮಾವಧಾನ (ನಾನು–ಭಾವದ ಉತ್ತಮ ಪುರುಷನ ಬಗ್ಗೆ ಗಮನ) ಎಂಬ ಅರ್ಥದಲ್ಲಿ ಸ್ವೀಕರಿಸಬೇಕು.

ತನಗೆ ಹೊರತಾದ ವಸ್ತುಗಳನ್ನು ಗಮನಿಸುವುದೇ, ಅಂದರೆ ಮಧ್ಯಮ ಮತ್ತು ಪ್ರಥಮ ಪುರುಷರನ್ನು ಮಾತ್ರ ತಿಳಿಯುವುದು ಮನಸ್ಸಿನ ಸ್ವಭಾವ. ಮನಸ್ಸು ಯಾವುದನ್ನಾದರೂ ಹೀಗೆ ಗಮನಿಸುವುದೆಂದರೆ ಅದಕ್ಕೆ ಅಂಟಿಕೊಳ್ಳುವುದು (ಹಚ್ಚಿಕೊಳ್ಳುವುದು, ವ್ಯಾಮೋಹ) **ಗಮನಿಸುವುದೇ ವ್ಯಾಮೋಹ**. 'ಇದಲ್ಲ, ಇದಲ್ಲ' ಎಂದು ತೀರ್ಮಾನಿಸುವ ಉದ್ದೇಶದಿಂದಾದರೂ ದೇಹ ಮತ್ತು ಪ್ರಾಣಗಳ ಬಗ್ಗೆ ಮನಸ್ಸು ವಿಚಾರ ಮಾಡುವುದು ಅಂದರೆ ಅಂತಹ ಗಮನದಿಂದ ಅದಕ್ಕೆ ಅಂಟಿಕೊಳ್ಳುವುದು, ಆದ್ದರಿಂದ ಅವುಗಳನ್ನು ನಿರಾಕರಿಸುವುದು ಸಾಧ್ಯವಿಲ್ಲ. ಯಾವುದೇ ಪ್ರಾಮಾಣಿಕ ಜಿಜ್ಞಾಸುವಿಗೆ ಅಭ್ಯಾಸದಲ್ಲಿ ಉಂಟಾಗುವ ಅನುಭವವೇ ಇದು. ಅಂದ ಮೇಲೆ ಇದರ ಹಿಂದಿನ ರಹಸ್ಯವಾದರೂ ಏನು?

ನಮಗೆ ಗೊತ್ತಿರಲಿ ಅಥವಾ ಬಿಡಲಿ, ನಾವು ತಿಳಿದಿಲ್ಲವೆಂದು ತಪ್ಪಾಗಿ ಭಾವಿಸಿರುವ ಆತ್ಮವು ನಿಜಕ್ಕೂ ನಮ್ಮ ಸತ್ಯ. ನಮ್ಮ (ಪರಮ ಆತ್ಮನ) ಗಮನದ ಸ್ವಭಾವವೇ ಅನುಗ್ರಹ. ಅಂದರೆ ನಾವು ಯಾವುದನ್ನಾದರೂ ಗಮನಿಸಿದರೆ, ಸಾಕ್ಷಿಯಾದರೆ*, ನೋಡಿದರೆ ಅದು

---

* ಇತ್ತೀಚೆಗೆ ಉಪನ್ಯಾಸಕರು ಮತ್ತು ಲೇಖಕರು ಹೆಚ್ಚಾಗಿ ಶಿಫಾರಸು ಮಾಡುವ, ವಿಚಾರ ಮತ್ತು ಘಟನೆಗಳ ಸಾಕ್ಷಿಯಾಗುವ ಅಭ್ಯಾಸವನ್ನು ಶ್ರೀ ಭಗವಾನರು ಕನಿಷ್ಠವಾಗಿಯೂ ಶಿಫಾರಸು ಮಾಡಿಲ್ಲ. ಸಾಧನೆಯ ಅವಧಿಯಲ್ಲಿ ವಿಚಾರಗಳು ಉದಯಿಸಿದಾಗ (ಅಂದರೆ, ಮಧ್ಯಮ ಮತ್ತು ಪ್ರಥಮ ಪುರುಷದತ್ತ ಗಮನ ಹರಿದಾಗ) ಏನು ಮಾಡಬೇಕೆಂದು ಕೇಳಿದಾಗೆಲ್ಲ ಶ್ರೀ ಭಗವಾನರು 'ನಾನು ಯಾರು?'ವಿನಲ್ಲಿ ಶ್ರೀ ಶಿವಪ್ರಕಾಶಂ ಪಿಳ್ಳೈ ಅವರಿಗೆ ಹೇಳಿದಂತೆಯೇ ಉತ್ತರಿಸುತ್ತಿದ್ದರು. ಅದರಲ್ಲಿ ಅವರು ಹೇಳುತ್ತಾರೆ: "ಇತರ ವಿಚಾರಗಳು ಉದಯಿಸಿದರೆ ಅವುಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸದೇ ಅವು ಯಾರಿಗೆ ಉದಯಿಸುತ್ತವೆ? ಎಂದು ಶೋಧಿಸಬೇಕು. ಎಷ್ಟು ವಿಚಾರಗಳು ಉದಯಿಸುತ್ತವೆ ಎಂಬುದು ಮುಖ್ಯವಲ್ಲ. ಪ್ರತಿಯೊಂದು

ಪೋಷಿತವಾಗುತ್ತದೆ, ಬೆಳೆಯುತ್ತದೆ ಅನುಗ್ರಹದಿಂದಾಗಿ. ಯಾರಾದರೂ ತಮ್ಮನ್ನು ಜೀವಾತ್ಮವೆಂದು ತಿಳಿದರೆ ಅವಧಾನ ಶಕ್ತಿಯೇ ಆತ್ಮದ ಚಿತ್ ಶಕ್ತಿಯ ಪ್ರತಿಬಿಂಬವಾದ್ದರಿಂದ ಅದರ ಕೇಂದ್ರವು ಅನುಗ್ರಹದಿಂದ ಪೋಷಿಸಲ್ಪಟ್ಟು ದಪ್ಪಪುಷ್ಟವಾಗಿ ಬೆಳೆಯುತ್ತದೆ. ಆದ್ದರಿಂದ ಅವಧಾನ ಶಕ್ತಿಯು ಮಧ್ಯಮ ಮತ್ತು ಪ್ರಥಮ ಪುರುಷಗಳ ಮೇಲೆ ಹೆಚ್ಚೆಚ್ಚು ಹರಿದಾಗ, ಅವನ್ನು ಗಮನಿಸುವ ಕ್ರಿಯಾಬಲ ಮತ್ತು ಅಜ್ಞಾನ–ತಮ್ಮ ವಿಚಾರರೂಪಿ ಪಂಚೇಂದ್ರಿಯ ಜ್ಞಾನಗಳು–ಹೆಚ್ಚು ಹೆಚ್ಚು ಬೆಳೆಯುತ್ತವೆ ಎಂದಿಗೂ ಕರಗುವುದಿಲ್ಲ! ನಮ್ಮೆಲ್ಲ ವಿಚಾರಗಳು ಮಧ್ಯಮ ಮತ್ತು ಪ್ರಥಮ ಪುರುಷರತ್ತ ಹರಿಸುವ ಗಮನವೇ ಹೊರತು ಮತ್ತೇನಲ್ಲ ಎಂದು ಈಗಾಗಲೇ ಹೇಳಿದ್ದೇವಷ್ಟೇ? ಅದರಂತೆ, ನಾವು ಮನಸ್ಸನ್ನು ಹೆಚ್ಚು ಗಮನಿಸಿದಂತೆ ಪ್ರಾಪಂಚಿಕ ರೂಪಗಳೇ ಆಗಿರುವ (ಮಧ್ಯಮ ಮತ್ತು ಪ್ರಥಮ ಪುರುಷರ) ವಿಚಾರಗಳು ಗುಣಿತವಾಗಿ ವೃದ್ಧಿಯಾಗುತ್ತವೆ. ಇದು ನಿಜಕ್ಕೂ ಒಂದು ತೊಡಕು. ನಮ್ಮ (ಅನುಗ್ರಹ ದೃಷ್ಟಿಯಾದ) ಗಮನವು ಅದರ ಮೇಲೆ ಹೆಚ್ಚೆಚ್ಚು ಬಿದ್ದಂತೆ ಮನಸ್ಸಿನ ಚಂಚಲತೆ, ಆರೋಹಣ ಹೆಚ್ಚುತ್ತದೆ. ಈ ಕಾರಣಕ್ಕಾಗಿ 'ಇದು ನಾನಲ್ಲ, ಇದು ನಾನಲ್ಲ' ಎಂದು ವಿಚಾರ ಮಾಡುತ್ತ ಯಾವುದನ್ನಾದರೂ ನಿರಾಕರಿಸುವುದು ಮನಸ್ಸಿಗೆ ಸಾಧ್ಯವಿಲ್ಲ.[೬೦] ಅದರ ಬದಲು, ನಮ್ಮ (ಆತ್ಮದ) ಗಮನವು ನಮ್ಮ ಕಡೆಗೆ ಹರಿದಾಗ ನಮ್ಮ ಅಸ್ತಿತ್ವದ ಜ್ಞಾನವೇ ವರ್ಧಿಸುತ್ತದೆ. ಮನಸ್ಸಿನತ್ತ ಗಮನ ನೀಡದ ಕಾರಣ, ಅದರ ಶಕ್ತಿ, ನಮ್ಮ ಅನುಗ್ರಹದ ಸಹಕಾರ ವಂಚಿತವಾಗಿ ಕ್ಷೀಣವಾಗುತ್ತದೆ. ತಮಿಳಿನಲ್ಲಿರುವ ಗಾದೆಯಂತೆ 'ಬಳಸದೇ ಬಿಟ್ಟಾಗ ಕಬ್ಬಿಣ ಮತ್ತು ಚೇಷ್ಟೆ ತುಕ್ಕು ಹಿಡಿಯುತ್ತವೆ.' ಗಮನ ಹರಿಸದ ಕಾರಣ ಕದ್ದು ಬೆಳೆಯುವ ಸ್ವಭಾವದ ವಾಸನಾಬೀಜಗಳು ಸುಮ್ಮನೇ ಕೂಡಬೇಕಾಗುತ್ತದೆ, ಆಗ ಅವು ನೀರಿಲ್ಲದ ಬೀಜಗಳಂತೆ ಒಣಗುತ್ತವೆ ಮತ್ತು ವಿಚಾರ ಸಸಿಯಾಗಿ ಮೊಳಕೆಯೊಡೆಯದಷ್ಟು ದುರ್ಬಲವಾಗುತ್ತವೆ. ನಂತರ ಆತ್ಮಜ್ಞಾನಾಗ್ನಿಯು ಪ್ರಜ್ವಲಿಸಿದಾಗ ಒಣ ಕಟ್ಟಿಗೆಯಂತೆ ವಾಸನೆಗಳೆಲ್ಲ ಬಲಿಯಾಗುತ್ತವೆ. ಇದೊಂದೇ ರೀತಿಯಲ್ಲಿ ಸಂಪೂರ್ಣವಾದ ವಾಸನಾಕ್ಷಯವನ್ನು ಸಾಧಿಸಬಹುದು.

'ಪೂರ್ವ ದಿಕ್ಕನ್ನು ಬಿಟ್ಟು ಬಿಡು' ಎಂದು ನಮಗೆ ಹೇಳಿದರೆ ಹಾಗೆ ಮಾಡುವ ಪ್ರಾಯೋಗಿಕ ವಿಧಾನವೆಂದರೆ 'ಪಶ್ಚಿಮಕ್ಕೆ ಹೋಗು' ಎಂದು ಹೇಳಿದಂತೆ ಮಾಡುವುದು. ಅದೇ ರೀತಿ

ವಿಚಾರವೂ ಉದಯಿಸಿದ ಕ್ಷಣದಲ್ಲೇ 'ಇದು ಯಾರಿಗೆ ಉದಯಿಸಿದೆ?' ಎಂದು ಜಾಗರೂಕವಾಗಿ ಶೋಧಿಸಿದರೆ 'ನನಗೆ' ಎಂಬ ಉತ್ತರ ಸಿಗುತ್ತದೆ. ಆಗ 'ನಾನು ಯಾರು?' ಎಂದು ಶೋಧಿಸಿದರೆ ಮನಸ್ಸು (ನಮ್ಮ ವಿಚಾರ ಶಕ್ತಿ) ತನ್ನ ಮೂಲಕ್ಕೆ (ಆತ್ಮಕ್ಕೆ) (ವಿಚಾರಗಳಿಂದ) ಮರಳುತ್ತದೆ. ಅಲ್ಲದೇ, ಅದೇ ಕೃತಿಯಲ್ಲಿ ನಂತರ ಹೇಳಿದಂತೆ "ಅನ್ಯವಾದುದನ್ನು (ಇತರ) ಗಮನಿಸದೇ (ಅಂದರೆ ಯಾವುದೇ ಮಧ್ಯಮ ಮತ್ತು ಪ್ರಥಮ ಪುರುಷರನ್ನು) ಇರುವುದೇ ವೈರಾಗ್ಯ ಅಥವಾ ನೀರಸ". ಹೀಗೆಂದಾಗ ಸ್ಪಷ್ಟವಾಗಿ ನಾವು ತಿಳಿಯಬೇಕಾದ್ದೆಂದರೆ ಆತ್ಮವನ್ನು ಹೊರತು ಪಡಿಸಿ ಮತ್ತೇನನ್ನಾದರೂ ಗಮನಿಸುವುದೇ (ಸಾಕ್ಷಿಯಾಗುವುದು, ನೋಡುವುದು) ವ್ಯಾಮೋಹ. ಹೀಗೆ ಅರ್ಥವಾದಾಗ, 'ಎಲ್ಲ ವಿಚಾರ–ಘಟನೆಗಳನ್ನು ನಿರ್ಲಿಪ್ತವಾಗಿ ಗಮನಿಸಿ' ಅಥವಾ 'ನಿಮ್ಮ ವಿಚಾರಗಳನ್ನು ಗಮನಿಸಿ, ಆದರೆ ಅವಕ್ಕೆ ಅಂಟಿಕೊಳ್ಳಬೇಡಿ' ಎಂಬಂತಹ ಇಂದಿನ ಗುರುಗಳೆನ್ನಲಾದವರ ಬೋಧನೆ ಎಷ್ಟು ಅರ್ಥಹೀನ ಮತ್ತು ಅಪ್ರಾಯೋಗಿಕ ಎಂದು ಅರಿವಾಗುತ್ತದೆ.

೬೦. ಇದಕ್ಕಾಗಿಯೇ ಕಾಮ, ಕ್ರೋಧ ಮುಂತಾದ ಕೆಟ್ಟ ವಿಚಾರಗಳನ್ನು ನಾಶ ಮಾಡಲಿಕ್ಕಾಗಿ ಅವುಗಳ ವಿರುದ್ಧ ಹೋರಾಡುತ್ತ ಅವುಗಳ ಬಗ್ಗೆ ಯೋಚಿಸುವ ಸಾಧಕರು ತಮ್ಮ ಪ್ರಯತ್ನದಲ್ಲಿ ವಿಫಲರಾಗುತ್ತಾರೆ. ಅದೇ ಆತ್ಮಶೋಧವನ್ನು ಅಭ್ಯಸಿಸುವ ಸಾಧಕರು ಆತ್ಮದಲ್ಲಿ ಪೂರ್ಣ ಗಮನ ಹರಿಸಿ, ತಮ್ಮ ವಿಚಾರಗಳತ್ತ ಉದಾಸೀನರಾಗಿ, ಸುಲಭವಾಗಿ ಒಳಹಾದಿಯಲ್ಲಿ (bypass) ಸಾಗುತ್ತಾರೆ.

'ಅನಾತ್ಮವಾದ ಪಂಚಕೋಶಗಳನ್ನು ತಳ್ಳಿಬಿಡು' ಎಂದು ಹೇಳಿದರೆ ಅನಾತ್ಮವನ್ನು ತಳ್ಳಿ ಹಾಕುವ ಪ್ರಾಯೋಗಿಕ ವಿಧಾನವೆಂದರೆ ನಮ್ಮ ಮೇಲೇ ಗಮನವನ್ನು ಕೇಂದ್ರೀಕರಿಸುವುದು. 'ಈ ನಾನು ಏನು?' ಅಥವಾ 'ನಾನು ಯಾರು?' 'ನಾನು ಇದಲ್ಲ, ಇದಲ್ಲ' (ನೇತಿ, ನೇತಿ) ಎಂದು ವಿಚಾರ ಮಾಡುವುದು ನಕಾರಾತ್ಮಕ ಪದ್ಧತಿ. ಈ ನಕಾರಾತ್ಮಕ ಪದ್ಧತಿಯು 'ಮಂಗನ ಬಗ್ಗೆ ವಿಚಾರ ಮಾಡದೇ ಔಷಧಿ ಕುಡಿ'[೬೧] ಎಂದು ಹೇಳಿದಂತೆ ಅಪ್ರಾಯೋಗಿಕವಾಗಿದೆ ಎಂದು ತಿಳಿದ ಶ್ರೀ ಭಗವಾನರು ಮಂಗನ ಬಗ್ಗೆ ವಿಚಾರ ಮಾಡದೇ ಔಷಧಿ ಕುಡಿಯುವ ಪ್ರಾಯೋಗಿಕ ವಿಧಾನದ ಸುಳಿವು ಕೊಟ್ಟಿದ್ದಾರೆ, 'ಆನೆಯ ಬಗ್ಗೆ ವಿಚಾರ ಮಾಡುತ್ತ ಔಷಧಿ ಕುಡಿ' ಎಂದು ಹೇಳುವ ಮೂಲಕ. ಅಂದರೆ ಅವರು ಪ್ರಾಚೀನ ನಕಾರಾತ್ಮಕ ಪದ್ಧತಿಯನ್ನು ಸುಧಾರಿಸಿ 'ನಾನು ಯಾರು?' ಎಂಬ ಸಕಾರಾತ್ಮಕ ಪದ್ಧತಿಯನ್ನು ನೀಡಿದ್ದಾರೆ.

"....ನಿಜಕ್ಕೂ ಎಲ್ಲವೂ ಅಹಂ! ಅದಕ್ಕಾಗಿ ವಿಚಾರ 'ಇದು ಏನು?' (ಬೇರೆ ಶಬ್ದಗಳಲ್ಲಿ 'ಈ ಅಹಂ, ನಾನು ಯಾರು?') ಇದೇ ಎಲ್ಲದರ ನಿಜವಾದ ಪರಿತ್ಯಾಗ. ಹೀಗೆ ತಿಳಿದುಕೊಳ್ಳಬೇಕು!"

'ಉಳ್ಳದು ನಾರ್ಪದು', ಪದ್ಯ ೨೮

ನಿಜಕ್ಕೂ ಎಲ್ಲವೂ (ಅಂದರೆ ಪಂಚಕೋಶಗಳು ಮತ್ತು ಅವುಗಳ ಮುಂಚಾಚು ಆಗಿರುವ ಈ ಎಲ್ಲ ಪ್ರಪಂಚ) ಅಹಂ. ಹಾಗಾಗಿ 'ನಾನು'–ಭಾವವನ್ನು ಗಮನಿಸುವುದು, 'ಇದು ಏನು?' ಅಥವಾ 'ಈ ನಾನು ಯಾರು?' ಎಂಬುದಷ್ಟೇ ಪಂಚಕೋಶಗಳ ಪರಿತ್ಯಾಗ, ಅವನ್ನು ತಳ್ಳಿ ಬಿಡುವುದು, ಹೊರಹಾಕುವುದು, ನಿರಾಕರಿಸುವುದು. ಹೀಗೆ ಆತ್ಮಾವಧಾನವೊಂದೇ ಪಂಚಕೋಶಗಳನ್ನು ಹೊರತಳ್ಳುವ ಸರಿಯಾದ ತಂತ್ರ ಎಂದು ಭಗವಾನ್ ರಮಣರು ಖಡಾಖಂಡಿತವಾಗಿ ಘೋಷಿಸಿದ್ದಾರೆ.

ಹೀಗಿದ್ದರೆ, 'ನೇತಿ, ನೇತಿ' ಪದ್ಧತಿಯನ್ನು ಸೂಚಿಸಲು ಶಾಸ್ತ್ರಗಳು 'ವಿಚಾರ' ಎಂಬ ಪದ ಬಳಸಿದ ಉದ್ದೇಶವಾದರೂ ಏನು? 'ನೇತಿ, ನೇತಿ'ಯ ಮೂಲಕ ನಾವು ಈ ಗ್ರಂಥದ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಪರಿಚ್ಛೇದದಲ್ಲಿ ತಿಳಿಸಿದ ಪರೀಕ್ಷೆಯನ್ನು ಬೌದ್ಧಿಕವಾಗಿ ಸೂತ್ರೀಕರಿಸಲು (ಅಂದರೆ ಪರೋಕ್ಷವಾಗಿ) ಸಾಧ್ಯವಿಲ್ಲವೇ? "ಒಂದು ವಸ್ತು ಇರದಿದ್ದರೂ 'ನಾನು ಇದ್ದೇನೆ' ಎಂಬ ಅನುಭವ ಸಾಧ್ಯವಿದ್ದರೆ ಅದು ಖಂಡಿತಾ ನಾನಲ್ಲ". ಹಿಂದೆ ಹೇಳಿದ ಪಂಚಕೋಶಗಳು ಅಥವಾ ಮೂರು ಶರೀರಗಳಿಗೆ ಸಂಬಂಧಿಸಿದಂತೆ 'ನಾನು ದೇಹ' ಎಂಬ ತಪ್ಪು ತಿಳುವಳಿಕೆ ಇರುವವರೆಗೆ ಉತ್ತಮ ಪುರುಷನ ಮೇಲೆ ಹರಿಸುವ ಗಮನ ಸ್ವಯಂಚಾಲಿತವಾಗಿ ಒಂದು ಕೋಶ ಅಥವಾ ಶರೀರ–ಮಧ್ಯಮ ಪುರುಷನ ಗಮನವಷ್ಟೇ ಆಗುವುದಿಲ್ಲವೇ? ಆದರೆ ಈ ಪರೀಕ್ಷೆಯನ್ನು ಬಳಸಿದರೆ ಈ ಎಲ್ಲ ಗಮನಗಳು ನಿಜವಾದ ಉತ್ತಮ ಪುರುಷನ ಗಮನವಲ್ಲ ಎಂದು ಕಾಣಲಾರೆವೇ?

---

೬೧. ಒಂದು ಸಾಂಪ್ರದಾಯಿಕ ಕಥೆಯಿದೆ. ವೈದ್ಯನೊಬ್ಬ ತನ್ನ ರೋಗಿಗೆ ಔಷಧಿ ಕೊಡುತ್ತ ಒಂದು ನಿಬಂಧನೆ ಇಡುತ್ತಾನೆ. ಏನೆಂದರೆ ಮಂಗನ ಬಗ್ಗೆ ಯೋಚಿಸದಿದ್ದಾಗ ಮಾತ್ರ ಇದನ್ನು ಸೇವಿಸಬೇಕು. ಆದರೆ ಈ ನಿಬಂಧನೆಯಂತೆ ಔಷಧಿ ಸೇವಿಸಲು ರೋಗಿಗೆ ಸಾಧ್ಯವೇ ಆಗಲಿಲ್ಲ. ಏಕೆಂದರೆ ಪ್ರತಿಬಾರಿ ಅದನ್ನು ಕುಡಿಯಲು ಯತ್ನಿಸಿದಾಗ, ಮಂಗನ ವಿಚಾರ ಖಂಡಿತಾ ಮೇಲೇಳುತ್ತಿತ್ತು.

ಆದ್ದರಿಂದ ನಮ್ಮ ನೆಲೆ ಕಳೆದುಹೋಗದಂತೆ ಮುಂಚಿತವಾಗಿ ಈ ಯಾವುದೂ ನಾನಲ್ಲವೆಂಬ ಬೌದ್ಧಿಕ ದೃಢನಂಬಿಕೆ ಇದ್ದರೆ ಆತ್ಮಾವಧಾನ ಸಾಧ್ಯವಿದೆ. ಶಾಸ್ತ್ರಗಳು 'ವಿಚಾರ'ವೆಂದು ಕರೆದದ್ದು ಇಂತಹ ತಾರತಮ್ಯದ[೬೨] ದೃಢನಂಬಿಕೆಯನ್ನು. ಹೀಗೆ ತರ-ತಮ ತಿಳಿದ ನಂತರ ಜಿಜ್ಞಾಸು ಮಾಡಬೇಕಾದ್ದೇನು? ತಳ್ಳಿ ಹಾಕುವುದಕ್ಕೇ ಆದರೂ ಈ ಪಂಚಕೋಶಗಳ ಮೇಲಿನ ಗಮನ ಆತ್ಮಾವಧಾನವಾಗುವುದು ಹೇಗೆ? ಆದ್ದರಿಂದ ಆತ್ಮವಿಚಾರ ಅಭ್ಯಸಿಸುವಾಗ ಈ ಪಂಚಕೋಶಗಳಲ್ಲಿ ಯಾವುದೇ ಒಂದರ ಮೇಲೆ ಗಮನ ಹರಿಸುವ ಬದಲು ನಮ್ಮ ಗಮನವನ್ನು 'ನಾನು'-ಅರಿವಿನ ಮೇಲೆ ಸ್ಥಿರವಾಗಿಸಬೇಕು. ಇದು ತಾನಾಗಿ, ಸ್ವಯಂ ಪ್ರಕಾಶದಿಂದ, ಏಕಾಕಿಯಾಗಿ, ಸಾಕ್ಷಿಯಾಗಿ, ಕೋಶಗಳಿಂದ ನಿರ್ಲಿಪ್ತವಾಗಿ ಇರುತ್ತದೆ.

ಮಧ್ಯಮ ಅಥವಾ ಪ್ರಥಮ ಪುರುಷರತ್ತ ಹರಿಯುವ ಬದಲು, ಇದುವರೆಗೆ ಮನಸ್ಸು ಅಥವಾ ಬುದ್ಧಿ ಎಂದು ಕರೆಯಲಾಗುತ್ತಿದ್ದ ನಮ್ಮ ಅವಧಾನ ಶಕ್ತಿಯು ಈಗ ಕೇವಲ ಉತ್ತಮ ಪುರುಷನತ್ತ ಹರಿಯುವುದಿಲ್ಲವೇ? 'ಹರಿಯುವುದು' ಎಂದು ನಾವು ಔಪಚಾರಿಕವಾಗಿ ಕರೆದರೂ ನಿಜಕ್ಕೂ ಇದು ಹರಿಯುವ ಅಥವಾ ಹರಿಸುವ ಕ್ರಿಯಾರೂಪವಲ್ಲ. ಇದು ಇರುವುದರ ಸ್ವಭಾವ-ಸತ್ ರೂಪ. ಮಧ್ಯಮ ಮತ್ತು ಪ್ರಥಮ ಪುರುಷರು ನಮಗೆ ಅನ್ಯ ಅಥವಾ ಬಾಹ್ಯವಾಗಿರುವುದರಿಂದ ಅವರತ್ತ ನೀಡಿದ ಗಮನ ಕ್ರಿಯಾರೂಪವಾಗಿತ್ತು. ಆದರೆ ಇದೇ ಗಮನವು ಅನನ್ಯವಾದ ಉತ್ತಮ ಪುರುಷನಲ್ಲಿ ಸ್ಥಿರವಾದಾಗ 'ಹರಿಯುವ' ಗುಣ ಕಳೆದುಕೊಂಡು 'ಇರುವ' ರೂಪದಲ್ಲಿ ನೆಲೆಸುತ್ತದೆ. ಆದ್ದರಿಂದ ಇದರ ಸ್ವಭಾವ 'ಅಕ್ರಿಯ' ಅಥವಾ 'ನಿಷ್ಕ್ರಿಯ'ವಾಗಿದೆ. **ಮಧ್ಯಮ ಮತ್ತು ಪ್ರಥಮ ಪುರುಷರಲ್ಲಿ ನೆಲೆಸಿದ್ದವರೆಗೆ ನಮ್ಮ ಅವಧಾನ ಶಕ್ತಿಯು ಮನಸ್ಸು ಅಥವಾ ಬುದ್ಧಿ ಎಂದು ಕರೆಯಲ್ಪಡುತ್ತಿತ್ತು ಮತ್ತು ಇದರ ಗಮನವು ಕ್ರಿಯೆ ಅಥವಾ ಕರ್ಮ ಎನಿಸುತ್ತಿತ್ತು. ಮನಸ್ಸಿನಿಂದ ಮಾಡುವುದು ಮಾತ್ರ ಕರ್ಮ**. ಆದರೆ ಗಮನವನ್ನು ಉತ್ತಮ ಪುರುಷನಲ್ಲಿ ಸ್ಥಿರಗೊಳಿಸಿದಾಗ ಇದು ಮನಸ್ಸು, ಬುದ್ಧಿ ಅಥವಾ ಅಹಂಪ್ರಜ್ಞೆ ಎಂಬ ಹೀನ ನಾಮಗಳನ್ನು ಕಳೆದುಕೊಳ್ಳುತ್ತದೆ. ಅಲ್ಲದೇ, ಈ ಗಮನವು ಕ್ರಿಯೆಯೂ ಅಲ್ಲ. ಇದು ಅಕರ್ಮ ಅಥವಾ ಸುಮ್ಮನೆ ಇರುವುದು. **ಹಾಗಾಗಿ ಆತ್ಮವನ್ನು ಗಮನಿಸುವ ಮನಸ್ಸು ಮನಸ್ಸಲ್ಲ, ಇದು ಆತ್ಮದ ಚಿತ್-ರೂಪ. ಹಾಗೆಯೇ ಮಧ್ಯಮ ಮತ್ತು ಪ್ರಥಮ ಪುರುಷರನ್ನು ಗಮನಿಸುವುದು ಆತ್ಮದ ಚಿತ್-ರೂಪವಲ್ಲ, ಇದು ಮನಸ್ಸು, ಚಿತ್-ಆಭಾಸ-ರೂಪ**. ಆದ್ದರಿಂದ ಆತ್ಮಾವಧಾನವು ಕ್ರಿಯೆಯಲ್ಲದ ಕಾರಣ ಕರ್ಮವಲ್ಲ. ಅಂದರೆ, ಆತ್ಮವು ಮಾತ್ರ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತದೆ, ಅಹಂಗೆ ಸಾಧ್ಯವಿಲ್ಲ.

ಆತ್ಮಶೋಧವೇ ಆಗಿರುವ ಆತ್ಮಾವಧಾನದ ಬಗ್ಗೆ ಉತ್ಕಟಾಪೇಕ್ಷೆ ಹೊಂದಿರುವ ಮನಸ್ಸೇ ಪೂರ್ಣತಃ ಪಕ್ವ ಮನಸ್ಸು. ಮಧ್ಯಮ ಮತ್ತು ಪ್ರಥಮ ಪುರುಷರನ್ನು ಗಮನಿಸುವ ಯಾವುದೇ ಸೆಳೆತ ಇಲ್ಲದಿರುವುದರಿಂದ ಇದು ವೈರಾಗ್ಯದ ಶಿಖರ ಎಂದು ಹೇಳಬಹುದು. ಏಕೆಂದರೆ ಎಲ್ಲ ಆಸೆಗಳು, ಅಂಟು-ನಂಟುಗಳು ಮಧ್ಯಮ ಮತ್ತು ಪ್ರಥಮ ಪುರುಷರಿಗೆ

---

೬೨. ಈ ಪುಸ್ತಕದ ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಿದ ತಾರತಮ್ಯವನ್ನು ಇದೇ ಗುರಿಯಿಟ್ಟುಕೊಂಡು ಮಾಡಲಾಗಿದೆ. ಆದರೂ ಇದು ನಿಜವಾದ ಶೋಧ ಪ್ರಕ್ರಿಯೆಯಲ್ಲ. ಈ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಹೇಳಿದ್ದು ಮಾತ್ರ ಆತ್ಮಶೋಧದ ವಾಸ್ತವ ಪದ್ಧತಿಯಾಗಿದೆ.

ಸಂಬಂಧಿಸಿಲ್ಲವೇ? (ಹಿಂದಿನ ಅಧ್ಯಾಯಗಳಲ್ಲಿ ನೋಡಿದಂತೆ) 'ನಾನು' ಎಂಬ ಅರಿವಿನ ಪ್ರಕಾಶವೇ ಪೂರ್ಣವಾದ ಮತ್ತು ನಿಜವಾದ ಸಂತೋಷವೆಂದು ಮನಸ್ಸಿಗೆ ಮನವರಿಕೆಯಾಗಿರುವುದರಿಂದ ಆತ್ಮನನ್ನು ಗಮನಿಸುವ ಉತ್ಕಟ ಅಪೇಕ್ಷೆಯೇ ಭಕ್ತಿಯ ಪರಾಕಾಷ್ಠೆ. **ಇಂತಹ ಭಕ್ತಿ-ವೈರಾಗ್ಯಗಳಿಂದ ಪೂರ್ಣಪಕ್ವವಾದ ಆತ್ಮಾವಧಾನವೇ ಭಗವಾನ್ ಶ್ರೀ ರಮಣರು ಬೋಧಿಸಿದ ಆತ್ಮಶೋಧ, 'ನಾನು ಯಾರು?'**. ಇರಲಿ, ಹೀಗೆ ಶ್ರೀ ರಮಣರ ದಾರಿಗೆ ಬಂದ ಪಕ್ವ ಮನಸ್ಸು ಆತ್ಮಾವಧಾನಕ್ಕೆ ಸ್ವ-ಇಚ್ಛೆಯಿಂದ ಒಪ್ಪಿದಾಗ ಆತ್ಮ ಸಾಕ್ಷಾತ್ಕಾರವಾಗದೇ? ಇಲ್ಲ, ಇಲ್ಲ. ಇದು ತನ್ನ ವಿಧಿಯತ್ತ ಹೊರಟಿದೆ. ಆತ್ಮಹತ್ಯೆ ಮಾಡಿಕೊಳ್ಳಲು ಒಪ್ಪಿಕೊಂಡು, ಆತ್ಮಾವಧಾನದ ಮೂಲಕ, ಬಲಿ ಕೊಡಬೇಕಾದಲ್ಲಿ ಗಲ್ಲುಗಂಬಕ್ಕೆ ಕೊರಳೊಡ್ಡುತ್ತದೆ! ಏಕೆ? ಮಧ್ಯಮ ಮತ್ತು ಪ್ರಥಮ ಪುರುಷರನ್ನು ಗಮನಿಸುವವರೆಗೆ ಇದಕ್ಕೆ ಮನಸ್ಸೆಂಬ ಹೆಸರಿತ್ತು. ಆದರೆ ಆತ್ಮಾವಧಾನ ಶುರುವಾದಮೇಲೆ ಇದು ತನ್ನ ನಾಮ-ರೂಪಗಳನ್ನು (ಮನಸ್ಸು ಎಂಬ ನಾಮ ಮತ್ತು ವಿಚಾರಗಳು ಎಂಬ ರೂಪಗಳನ್ನು) ಕಳೆದುಕೊಳ್ಳುತ್ತದೆ. ಹಾಗಾಗಿ ಮನಸ್ಸು ಆತ್ಮಾವಧಾನ ಅಥವಾ ಆತ್ಮಶೋಧ ಮಾಡುತ್ತದೆ ಎಂದು ಹೇಳಲಾಗದು. ಮನಸ್ಸು ಆತ್ಮವನ್ನು ಗಮನಿಸುವುದೂ ಇಲ್ಲ, ಆತ್ಮ-ಚಿತ್-ರೂಪದ ಸಹಜ ಸ್ಫೂರ್ತ ಆತ್ಮಾವಧಾನವು ಮನಸ್ಸಿನ ಚಟುವಟಿಕೆಯೂ ಅಲ್ಲ.

"ಯಾವ ಪ್ರಯೋಜನಕ್ಕೂ ಬಾರದ ಅಹಮಿಕೆಯ ಅರ್ಹತೆ ಸಾಯಲಿಕ್ಕೆ ಎಂದು ತಿಳಿಯದೇ ಸೂಕ್ತ ಶೋಧದ ಮೂಲಕ ಒಳಗೆ ಧುಮುಕಿ ಆತ್ಮ ಸಾಕ್ಷಾತ್ಕಾರ ಪಡೆದೆನೆಂದು ಯಾರಾದರೂ ಹೇಳಿದರೆ ಅದು ಪಕ್ಕಾ ಸುಳ್ಳಾಗುತ್ತದೆ. ಇದನ್ನು ಅರುಣಾಚಲ ಮಾತ್ರವಾದ ಆತ್ಮದಿಂದ ಆತ್ಮವೇ ತಿಳಿಯುತ್ತದೆ".

'ಶ್ರೀ ಅರುಣಾಚಲ ವೆಣ್ ಬಾ', ಪದ್ಯ ೩೯

'ನಾನು ಇದ್ದೇನೆ' ಎಂಬ ಭಾವದ ಅನುಭವ ಎಲ್ಲರಿಗೂ ಸಮಾನವಾಗಿರುತ್ತದೆ. ಇದರಲ್ಲಿ 'ಇದ್ದೇನೆ' ಎಂಬುದು ಅರಿವು ಅಥವಾ ಜ್ಞಾನ. ಈ ಜ್ಞಾನವು ಯಾವುದೇ ಹೊರಗಿನದಲ್ಲ. ಇದು ತನ್ನದೇ ಜ್ಞಾನವಾಗಿದೆ. ಇದೇ ಚಿತ್. ಇದೇ 'ನಾವು' ಎಂಬ ಅರಿವು. 'ನಾವು ನಿಜಕ್ಕೂ ಅರಿವು' ಎಂದಿದ್ದಾರೆ ಶ್ರೀ ಭಗವಾನರು 'ಉಪದೇಶ ಉಂದಿಯಾರ್'ನ ಪದ್ಯ ೨೩ರಲ್ಲಿ. ಇದು ನಮ್ಮ 'ಇರುವಿಕೆ' (ಅಂದರೆ ನಮ್ಮ ನಿಜವಾದ ಅಸ್ತಿತ್ವ) ಅಥವಾ ಸತ್. ಇದನ್ನು **'ಇರುವಂಥಾದ್ದು'** ಎನ್ನಲಾಗುತ್ತದೆ. ಹೀಗೆ 'ನಾನು ಇದ್ದೇನೆ' ಎಂಬುದರಲ್ಲಿ 'ನಾನು' ಎಂಬುದು ಅಸ್ತಿತ್ವ (ಸತ್) ಮತ್ತು 'ಇದ್ದೇನೆ' ಎಂಬುದು ಅರಿವು (ಚಿತ್). ನಮ್ಮ ಸತ್-ಚಿತ್-ಸ್ವರೂಪವಾದ ಆತ್ಮವು 'ನಾನು ಇದ್ದೇನೆ' ಎಂಬ ಶುದ್ಧ ಅರಿವಿನಲ್ಲಿ ಪ್ರಕಾಶಿಸುವ ಬದಲು, 'ನಾನು ಮನುಷ್ಯ', 'ನಾನು ರಾಮ', 'ನಾನು ಇಂತಿಂಥವನು' 'ನಾನು ಇದು ಅಥವಾ ಅದು' ಎಂಬ ವಿಶೇಷಣ (ಉಪಾಧಿ)ಗಳ ಜೊತೆಗೆ ಮಿಶ್ರವಾದಾಗ, **ಈ ಸಮ್ಮಿಶ್ರ ಅರಿವೇ ಅಹಂ**. ಈ ಸಮ್ಮಿಶ್ರ ಅರಿವು ಯಾವುದಾದರೂ ನಾಮ ರೂಪಗಳನ್ನು ಹಿಡಿದುಕೊಂಡು ಮಾತ್ರ ಉದಯಿಸಬಲ್ಲದು. 'ನಾನು ಮನುಷ್ಯ', 'ನಾನು ರಾಮ', 'ನಾನು ಕುಳಿತಿದ್ದೇನೆ', 'ನಾನು ಮಲಗಿದ್ದೇನೆ' ಎಂದು ಭಾವಿಸಿದಾಗ ನಾವು ದೇಹವನ್ನು 'ನಾನು' ಎಂದು ತಪ್ಪು ತಿಳಿದಿರುತ್ತೇವೆ, ಇದರ ಹೆಸರು, ಭಂಗಿಗಳನ್ನು 'ನಾನು ಇದು ಅಥವಾ ಹೀಗೆ' ಎಂದು ಗ್ರಹಿಸಿರುತ್ತೇವೆ ಎಂಬುದು ಸ್ಪಷ್ಟವಿಲ್ಲವೇ? 'ನಾನು ಇದ್ದೇನೆ' (ಸತ್-ಚಿತ್) ಎಂಬ ಶುದ್ಧ

ಅರಿವಿನೊಂದಿಗೆ ಈಗ ತಾನೇ ಉದಯಿಸಿದ 'ಇದು, ಹೀಗೆ' ಎಂಬ ಭಾವವು ಮಿಶ್ರವಾದಾಗ **ವಿಚಾರ** ಎನ್ನುತ್ತೇವೆ. **ಇದು ಮೊಟ್ಟ ಮೊದಲನೆ ವಿಚಾರ.**

'ನಾನು ಮನುಷ್ಯ', 'ನಾನು ಇಂತಿಂಥವನು' ಎಂಬ ಭಾವವು ಕೇವಲ ವಿಚಾರ ಮಾತ್ರ. **ಆದರೆ 'ನಾನು ಇದ್ದೇನೆ' ಎಂಬ ಅರಿವು ವಿಚಾರವಲ್ಲ; ಇದು ನಮ್ಮ 'ಇರುವಿಕೆ'ಯ ಸ್ವರೂಪ.** 'ನಾನು ಇದು ಅಥವಾ ಅದು' ಎಂಬ ಮಿಶ್ರ ಅರಿವು ನಮ್ಮ 'ಇರುವಿಕೆ'ಯಿಂದ ಉದಯಿಸುವ ವಿಚಾರ. ಈ ವಿಚಾರ, ಸಮ್ಮಿಶ್ರ ಅರಿವು (ಉತ್ತಮ ಪುರುಷ) ಉದಯಿಸಿದ ನಂತರವಷ್ಟೇ ಮಧ್ಯಮ ಮತ್ತು ಪ್ರಥಮ ಪುರುಷರ ಜ್ಞಾನದ ವಿಚಾರಗಳೆಲ್ಲ ಅಸ್ತಿತ್ವವಾಗಿ ಉದಯಿಸುತ್ತವೆ.

"ಉತ್ತಮ ಪುರುಷವು ಇದ್ದರೆ ಮಾತ್ರ ಮಧ್ಯಮ ಮತ್ತು ಪ್ರಥಮ ಪುರುಷರು ಇರುತ್ತಾರೆ...."

'ಉಳ್ಳದು ನಾರ್ಪದು', ಪದ್ಯ ೧೪

ಈ ಸಮ್ಮಿಶ್ರ ಅರಿವು, ಉತ್ತಮ ಪುರುಷವು, ಇದನ್ನು ನಮ್ಮ 'ಉದಯ' ಅಥವಾ ಅಹಮಿನ ಉದಯ ಎನ್ನಲಾಗುತ್ತದೆ. ಇದು ಆದಿ ವೃತ್ತಿ! ಆದ್ದರಿಂದ "ವಿಚಾರ ಮಾಡುವುದು ಒಂದು ವೃತ್ತಿ; ಇರುವಿಕೆ ವೃತ್ತಿಯಲ್ಲ!..."

'ಆತ್ಮವಿಚಾರ ಪತಿಕಂ', ಪದ್ಯ ೧

ಶುದ್ಧವಾದ ಸತ್-ಚಿತ್, 'ನಾನು ಇದ್ದೇನೆ' ಎಂಬುದು ವಿಚಾರವಲ್ಲ; ಈ ಅರಿವು ನಮ್ಮ ಸ್ವರೂಪ. 'ನಾನು ಮನುಷ್ಯ' ಎಂಬುದು ಶುದ್ಧ ಅರಿವಲ್ಲ. ಇದು ಕೇವಲ ಒಂದು ವಿಚಾರ ಮಾತ್ರ! ಹೀಗೆ ನಮ್ಮ 'ಇರುವಿಕೆ' ಮತ್ತು 'ಉದಯ'ಗಳ (ಅಂದರೆ ಅಸ್ತಿತ್ವ ಮತ್ತು ವಿಚಾರ) ವ್ಯತ್ಯಾಸ ತಿಳಿದುಕೊಳ್ಳುವುದು 'ನಾನು ಯಾರು?' ಎಂಬ ಶೋಧಕ್ಕೆ ಹೊರಡುವ ಜಿಜ್ಞಾಸುವಿಗೆ ಮೊಟ್ಟ ಮೊದಲಿನ ಅವಶ್ಯಕತೆಯಾಗಿದೆ.

ಭಗವಾನ್ ಶ್ರೀ ರಮಣರು ಬೋಧಿಸಿದ್ದಾರೆ, ಆತ್ಮಶೋಧವನ್ನು 'ನಾನು ಯಾರು?' ಎಂಬ ರೂಪದಲ್ಲಿ ಅಥವಾ 'ನಾನು ಎಲ್ಲಿಂದ?' ಎಂಬ ರೂಪದಲ್ಲಿ ಮಾಡಬಹುದೆಂದು. ಈ ಎರಡು ಪ್ರಶ್ನಾರ್ಥಕ ವಾಕ್ಯಗಳನ್ನು ಕೇಳಿ ಅನೇಕ ಜಿಜ್ಞಾಸುಗಳು ಅವುಗಳ ಬಗ್ಗೆ ಇದುವರೆಗೆ ವಿಭಿನ್ನ ಅಭಿಪ್ರಾಯ ತಳೆದಿದ್ದಾರೆ ಮತ್ತು ಅವುಗಳಲ್ಲಿ ಯಾವುದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಗೊಂದಲದಲ್ಲಿದ್ದಾರೆ. ಎರಡೂ ಒಂದೇ ಎಂದು ಭಾವಿಸುವವರದೂ ಮೇಲ್ಪದರಿನ ತಿಳುವಳಿಕೆಯಾಗಿದ್ದು, ಎರಡೂ ಹೇಗೆ ಒಂದು ಎಂದು ಅವರು ಪರಿಶೋಧಿಸಿಲ್ಲ. 'ನಾನು ಯಾರು?' ಎಂಬ ಮೊದಲಿನದನ್ನು ಅನುಸರಿಸುವವರು ಗಟ್ಟಿಯಾಗಿ ಅಥವಾ ಮನಸ್ಸಿನಲ್ಲಿ 'ನಾನು ಯಾರು?' 'ನಾನು ಯಾರು?' ಎಂದು ಗಿಳಿಯಂತೆ ಉಚ್ಚರಿಸುತ್ತಾರೆ, ಮಂತ್ರ ಜಪದಂತೆ. ಇದು ಶುದ್ಧ ತಪ್ಪು! ಈ ರೀತಿ 'ನಾನು ಯಾರು?' ಎಂದು ಜಪ ಮಾಡುವುದು 'ನಾನು ಬ್ರಹ್ಮ' ಮುಂತಾದ ಮಹಾವಾಕ್ಯಗಳನ್ನು ಧ್ಯಾನ ಅಥವಾ ಜಪ ಮಾಡುವಷ್ಟೇ ತಪ್ಪು. ಅವು ಆ ದರ್ಶನಗಳ ಮೂಲ ಉದ್ದೇಶವನ್ನೇ ಹಾಳು ಮಾಡುತ್ತವೆ. ಶ್ರೀ ಭಗವಾನರೇ ಮತ್ತೆ ಮತ್ತೆ ಹೇಳಿದ್ದಾರೆ: 'ನಾನು ಯಾರು?' ಎಂಬುದು ಜಪಕ್ಕಾಗಿ ಅಲ್ಲ. ಇನ್ನು ಕೆಲವರು ಎರಡನೇ ಪ್ರಶ್ನಾರ್ಥಕ ವಾಕ್ಯ ಅನುಸರಿಸುತ್ತೇವೆಂದು ಭಾವಿಸಿ ಎದೆಯ ಬಲಭಾಗದ ಮೇಲೆ ಗಮನ ಕೇಂದ್ರೀಕರಿಸಲು ಪ್ರಯತ್ನಿಸುತ್ತಾರೆ. (ಅಲ್ಲಿ ಒಂದು

ಆಧ್ಯಾತ್ಮಿಕ ಹೃದಯವಿದೆ ಎಂದು ಅವರ ಕಲ್ಪನೆ) ಪ್ರಾಚೀನ ಧ್ಯಾನ ಪದ್ಧತಿಗಳಲ್ಲಿ ಯೋಗದ ಷಟ್ಚಕ್ರಗಳಲ್ಲಿ ಒಂದರ ಬಗ್ಗೆ ಕೇಂದ್ರೀಕರಿಸುವುದಕ್ಕಿಂತ ಇದು ಬೇರೆಯಲ್ಲ!! ಏಕೆಂದರೆ ದೇಹದ ಯಾವುದೇ ಭಾಗದ ಬಗ್ಗೆ ವಿಚಾರ ಮಾಡುವುದು ಮಧ್ಯಮ ಪುರುಷ ಅವಧಾನವಷ್ಟೇ ಅಲ್ಲವೇ? (ವಸ್ತುವಿನ ಮೇಲೆ ಗಮನ) ಆತ್ಮಶೋಧದ ತಂತ್ರವನ್ನು ವಿವರಿಸಲು ಹೊರಡುವ ಮೊದಲು ಇಂತಹ ತಪ್ಪು ಕಲ್ಪನೆಗಳ ನಿವಾರಣೆ ತೀರಾ ಅಗತ್ಯವಾಗಿದೆಯಲ್ಲವೇ? ಆದ್ದರಿಂದ, ಅವುಗಳನ್ನು ಹೇಗೆ ನಿವಾರಿಸುವುದೆಂದು ನೋಡೋಣ.

ಸಂಸ್ಕೃತದಲ್ಲಿ, 'ಆತ್ಮ' ಮತ್ತು 'ಅಹಂ' ಎರಡೂ ಪದಗಳ ಅರ್ಥ 'ನಾನು' ಎಂದು. ಆದ್ದರಿಂದ 'ಆತ್ಮವಿಚಾರ' ಎಂದರೆ 'ಈ ನಾನು ಯಾರು?' ಎಂದು ಹುಡುಕುವ ಅವಧಾನ. ಇದನ್ನು 'ನಾನು–ಅವಧಾನ', 'ಆತ್ಮಾವಧಾನ' ಅಥವಾ 'ಆತ್ಮನಿಷ್ಠೆ' ಎಂದು ಕರೆಯಬಹುದು. ಹೀಗೆ ಗುರುತಿಸುವ 'ನಾನು' ಅರಿವು ಉತ್ತಮ ಪುರುಷ ಭಾವವಾಗಿದೆ. ಆದರೆ ನಾವು ಈಗಾಗಲೇ ಹೇಳಿರುವಂತೆ 'ನಾನು ಇದು' ಅಥವಾ 'ನಾನು ಅದು' ಎಂಬ ವಿಶೇಷಣಗಳೊಂದಿಗೆ ಮಿಶ್ರವಾದದ್ದು ಅಹಂಕಾರ ಅಥವಾ ಜೀವಾತ್ಮ. ವಿಶೇಷಣರಹಿತವಾಗಿ 'ನಾನು, ನಾನು' ಎಂದು (ಅಥವಾ ನಾನು ಅದು ನಾನೇ) ತಾನಾಗಿ, ಏಕೈಕವಾಗಿ ಪ್ರಕಾಶಿಸುವ ಮಿಶ್ರವಲ್ಲದ ಅರಿವು ಆತ್ಮ, ಬ್ರಹ್ಮ ಅಥವಾ ಈಶ್ವರ. ಅಂದರೆ ಉತ್ತಮ ಪುರುಷದ ಅರಿವು ಅಹಂಕಾರ ಅಥವಾ ಆತ್ಮವಾಗಿರಬಹುದು ಎಂದು ಹೇಳಿದಂತಾಯಿತಲ್ಲವೇ? ಸಾಮಾನ್ಯವಾಗಿ ಎಲ್ಲರೂ ('ನಾನು ದೇಹ'ವೆಂಬ) ಅಹಂಭಾವವನ್ನೇ 'ನಾನು' ಎಂದು ಗ್ರಹಿಸುವುದರಿಂದ ಅಹಮಿಗೂ ಕೂಡ ಆತ್ಮವೆಂದು ಕರೆದು ಈಗಲೂ ಕೆಲವು ಶಾಸ್ತ್ರಗಳು 'ಜೀವಾತ್ಮ' ಎನ್ನುತ್ತವೆ. ಈ ಕಾರಣದಿಂದಾಗಿ 'ಇದು ಏನು?' ಅಥವಾ 'ಇದು ಯಾರು?' ಎಂಬ ಅಹಂ–ಅವಧಾನವನ್ನು ಶಾಸ್ತ್ರಗಳು ಆತ್ಮವಿಚಾರವೆಂದು ಕರೆದಿವೆ. ಆದರೂ, ಆತ್ಮಕ್ಕೆ, ಸತ್–ಚಿತ್‌ಗೆ ಯಾವುದೇ ವಿಚಾರದ ಅಗತ್ಯವಿಲ್ಲ, ಇದನ್ನು ವಿಚಾರಕ್ಕೆ ಅಳವಡಿಸುವುದೂ ಸಾಧ್ಯವಿಲ್ಲ. ಈ ದೋಷವನ್ನು ಸರಿಪಡಿಸಲಿಕ್ಕಾಗಿ ಭಗವಾನ್ ರಮಣರು 'ಆತ್ಮವಿಚಾರ' ಎಂಬ ಹಳೆಯ ಶಬ್ದದ ಬದಲು 'ನಾನು ಯಾರು?' ಎಂದು ಕರೆದರು. ಉತ್ತಮ ಪುರುಷನ ಅರಿವೆಂದು ಸಾಮಾನ್ಯವಾಗಿ ಜನ ಗ್ರಹಿಸುವ 'ನಾನು' ಎಂಬ ಭಾವ (ಅಹಂಭಾವ) ನಿಜವಾಗಿ ಉತ್ತಮ ಪುರುಷನ ಭಾವವಲ್ಲ. ಆತ್ಮವೊಂದೇ ನಿಜವಾದ ಉತ್ತಮ ಪುರುಷ ಅರಿವು. ಇದರ ಬರೀ ನೆರಳಾಗಿರುವ ಅಹಂಭಾವವು ಸುಳ್ಳು ಉತ್ತಮಪುರುಷ ಅರಿವಾಗಿದೆ. ಇದು ಏನೆಂದು ಅಹಂ ಅನ್ನು ಶೋಧಿಸಿದಾಗ ಇದು ಮಾಯವಾಗುತ್ತದೆ. ಏಕೆಂದರೆ ಇದು ನಿಜಕ್ಕೂ ಇಲ್ಲವೇ ಇಲ್ಲ. ಆಗ ಶೋಧಕನು ಬೇರೇನೂ ಮಾಡಲು ಇಲ್ಲವಾದ್ದರಿಂದ ಆತ್ಮನಲ್ಲಿ ಆತ್ಮನಾಗಿ ಸ್ಥಿರವಾಗಿ ಇರುತ್ತಾನೆ.

ಆತ್ಮನಿಂದ ಹೊರಟು ಉದಯಿಸುವುದರಿಂದ ಮೇಲೆ ಹೇಳಿದ ಈ ಸುಳ್ಳು ಉತ್ತಮ ಪುರುಷ ಅರಿವಿಗೆ ಉದಯಿಸುವ ದೇಶ ಮತ್ತು ಕಾಲಗಳ ಅಗತ್ಯವಿದೆ. ಆದ್ದರಿಂದ 'ನಾನು ಎಲ್ಲಿಂದ?' ಎಂಬ ಪ್ರಶ್ನೆಗೆ 'ಅಹಂ ಎಲ್ಲಿಂದ ಉದಯಿಸುತ್ತದೆ?' ಎಂದೇ ಅರ್ಥ. ಉದಯಿಸುವ ಸ್ಥಳವು ಅಹಮಿಗೆ ಮಾತ್ರ ಇರಬಲ್ಲದು. ಆತ್ಮಕ್ಕೆ ಉದಯ–ಅಸ್ತಗಳು ಇಲ್ಲವಾದ್ದರಿಂದ ಇದಕ್ಕೆ ವಿಶಿಷ್ಟವಾದ ಸ್ಥಳ–ಕಾಲಗಳು ಇರಲಾರವು.

"ಪರಿಶೋಧಿಸಿದಾಗ, ನಾವು–ನಿತ್ಯ ಅಸ್ತಿತ್ವದ ಅರಿವು, ಮಾತ್ರ ಇರುತ್ತದೆ. ಆಗ ಕಾಲವೆಲ್ಲಿದೆ, ದೇಶವೆಲ್ಲಿದೆ? ನಾವು ದೇಹವಾಗಿದ್ದರೆ (ಹಾಗೆಂದು ತಪ್ಪು ತಿಳಿದಿದ್ದರೆ)

ನಾವು ಕಾಲ–ದೇಶಗಳಲ್ಲಿ ಒಳಗೊಂಡಿರುತ್ತೇವೆ. ಆದರೆ ನಾವು ದೇಹವೇ? ನಾವು ಏಕೈಕವಾಗಿ ಈಗ, ಆಗ, ಸದಾ, ಇಲ್ಲಿ, ಅಲ್ಲಿ, ಎಲ್ಲೆಲ್ಲೂ[೬೩] ಕಾಲರಹಿತ ದೇಶ ರಹಿತ ಆತ್ಮವಾಗಿ ಇರುತ್ತೇವೆ!"

'ಉಳ್ಳದು ನಾರ್ಪದು', ಪದ್ಯ ೧೫

ಎನ್ನುತ್ತಾರೆ ಶ್ರೀ ಭಗವಾನರು. ಹಾಗಾಗಿ 'ನಾನು ಎಲ್ಲಿಂದ?' ಎಂಬ ಶೋಧ 'ಅಹಂ ಎಲ್ಲಿಂದ?' ಎಂಬ ಶೋಧವಾಗಿದೆ. ದೇಶ ಕಾಲಬದ್ಧವಾದ ಅಹಮಿನ ಉದಯಕ್ಕೆ ಮಾತ್ರ 'ನಾನು ಎಲ್ಲಿಂದ?' ಎಂಬ ಪ್ರಶ್ನೆ ಅನ್ವಯಿಸುತ್ತದೆ. 'ಎಲ್ಲಿಂದ?' ಎಂಬ ಪದಕ್ಕೆ ನಾವು ತಿಳಿಯಬೇಕೆಂದು ಶ್ರೀ ಭಗವಾನರು ಬಯಸುವ ಅರ್ಥ 'ಯಾವುದರಿಂದ?' ಎಂದು. ಈ ಅರ್ಥದಲ್ಲಿ ತೆಗೆದುಕೊಂಡಾಗ ಯಾವುದೋ ದೇಶ ಅಥವಾ ಕಾಲಗಳು ಉತ್ತರವಾಗುವ ಬದಲು 'ನಾವು' ಎಂಬ ಸ್ವ–ಅಸ್ತಿತ್ವದ ವಸ್ತು ಉತ್ತರವಾಗಿ ಅನುಭವಕ್ಕೆ ಬರುತ್ತದೆ. 'ಎಲ್ಲಿಂದ?' ಎಂಬುದಕ್ಕೆ ನಾವು ಕಾಲ–ದೇಶಬದ್ಧವಾದ ಸ್ಥಳವನ್ನು ಉತ್ತರವಾಗಿ ನಿರೀಕ್ಷಿಸಿದರೆ 'ಎದೆಯ ಕೇಂದ್ರದಿಂದ ಎರಡಂಕಿ ಬಲಭಾಗ' ಎಂಬ ದೇಹಾನುಭವವಾಗುತ್ತದೆ. ('ಉಳ್ಳದು ನಾರ್ಪದು–ಅನುಬಂಧಂ'ವಿನ ಪದ್ಯ ೧೮ರಲ್ಲಿ ಹೇಳಿದಂತೆ) ಆದರೆ ಈ ಅನುಭವವು ಅಂತಿಮವಾಗಲೀ, ಕೇವಲವಾಗಲೀ (ಪಾರಮಾರ್ಥಿಕ) ಅಲ್ಲ. ಏಕೆಂದರೆ ಕಾಲಾತೀತ, ದೇಶಾತೀತ, ರೂಪಾತೀತ, ನಾಮಾತೀತವಾದ ಆತ್ಮವಿಚಾರವೇ ಹೃದಯ ಎಂದು ಶ್ರೀ ಭಗವಾನರು ಸಕಾರಾತ್ಮಕವಾಗಿ ಪ್ರತಿಪಾದಿಸಿದ್ದಾರೆ.

"ಜಡದೇಹದೊಳಗೆ ಆತ್ಮ (ಅಥವಾ ಹೃದಯ) ಇದೆಯೆಂದು ಭಾವಿಸುತ್ತಾರೆ. ಆದರೆ ಆತ್ಮದಲ್ಲಿ ದೇಹವಿದೆ. ಇದು ಹೇಗೆಂದರೆ ಚಲನಚಿತ್ರಕ್ಕೆ ಬೆಂಬಲವಾಗಿರುವ ಪರದೆಯು ಚಲನಚಿತ್ರದಲ್ಲಿಯೇ ಇದೆ ಎಂದು ಭಾವಿಸಿದಂತೆ".

ಏಕಾತ್ಮ ಪಂಚಕಂ, ಪದ್ಯ ೩

"ಎಲ್ಲಿಂದ" ಎಂಬ ಪ್ರಶ್ನೆಗೆ ಅಹಮಿನ ಉದಯಸ್ಥಳವನ್ನು ದೇಹದಲ್ಲಿ ಗುರುತಿಸಿ ಉತ್ತರಿಸುವುದು ಶ್ರೀ ಭಗವಾನರ ಬೋಧೆಯ ಉದ್ದೇಶವಲ್ಲ; ಇದು ಆತ್ಮಶೋಧದಿಂದ ಪಡೆಯಬೇಕಾದ ಫಲವೂ ಇಲ್ಲ. ತಮ್ಮ ಬೋಧೆಯ ಉದ್ದೇಶ ಮತ್ತು ಅಹಮಿನ ಉದಯದ ಶೋಧದ ಫಲ ಏನೆಂದು ಶ್ರೀ ಭಗವಾನರು ಸ್ಪಷ್ಟವಾಗಿ ಘೋಷಿಸಿದ್ದಾರೆ.

'ನಾನು' ಎಂಬುದು ಉದಯಿಸುವುದು ಎಲ್ಲಿಂದ ಎಂದು ಒಳಗೆ ಹುಡುಕಿದಾಗ 'ನಾನು' (ಅಹಂ) ಸಾಯುತ್ತದೆ! ಇದೇ ಆತ್ಮ (ಜ್ಞಾನ) ವಿಚಾರ".

ಉಪದೇಶ ಉಂದಿಯಾರ್, ಪದ್ಯ ೧೯

ಆದ್ದರಿಂದ ಅಹಮಿನ ಉದಯಸ್ಥಳವನ್ನು ಹುಡುಕುವುದರ ಉದ್ದೇಶಿತ ಪರಿಣಾಮವೆಂದರೆ ಅಹಂ–ಭಾವದ ನಾಶವೇ ಹೊರತು ದೇಹದೊಳಗಿನ ಒಂದು ಸ್ಥಳದ ಅನುಭವವಲ್ಲ. ಇದು ಅಪಕ್ವ ಜನರಿಗೆ ಕೊಟ್ಟ ಉತ್ತರ ಮಾತ್ರ. ಏಕೈಕವಾಗಿ, ಅದ್ವೈತವಾಗಿ,

---

೬೩. ಕಾಲ ಮತ್ತು ದೇಶಗಳು ತೋರಿಕೆಗೆ ನಮ್ಮಲ್ಲೇ (ಆತ್ಮನಲ್ಲೇ) ಇರುತ್ತವೆ; ಆದರೆ ನಾವು ಅವುಗಳಲ್ಲಿ ಇಲ್ಲ, ಅವುಗಳಿಂದ ಬದ್ಧವಾಗಿಲ್ಲ. ಜ್ಞಾನಿಯ ಅನುಭವವು 'ನಾನು ಇದ್ದೇನೆ' ಎಂಬುದು ಮಾತ್ರ, 'ಎಲ್ಲ ಕಡೆ ಮತ್ತು ಎಲ್ಲ ಕಾಲದಲ್ಲಿ ನಾನಿದ್ದೇನೆ' ಎಂಬುದಲ್ಲ.

ಕಾಲದೇಶಾತೀತವಾಗಿ (ಆದರೊಂದಿಗೆ ಸಂಬಂಧವಿಲ್ಲದೇ) 'ಸರ್ವತ್ರ ಬ್ರಹ್ಮವಾಗಿ, ಸರ್ವದಾ ಬ್ರಹ್ಮವಾಗಿ, ಸರ್ವಂ ಬ್ರಹ್ಮವಾಗಿ' ನಿಸ್ಸೀಮವಾಗಿ ಪ್ರಕಾಶಿಸುವ ಆತ್ಮಸ್ವಭಾವದ ಬೌದ್ಧಿಕ ತಿಳುವಳಿಕೆಯೂ (ಪರೋಕ್ಷ ಜ್ಞಾನ) ಇಲ್ಲದ ಅವರು ಯಾವಾಗಲೂ ಪ್ರಶ್ನೆ ಎತ್ತುತ್ತಾರೆ: 'ದೇಹದಲ್ಲಿ ಆತ್ಮವಿರುವ ಸ್ಥಾನ ಯಾವುದು?' ಅವರಿಗೆ ಶಾಸ್ತ್ರಗಳು ಮತ್ತು ಕೆಲವೊಮ್ಮೆ ಶ್ರೀ ಭಗವಾನರು ಕೂಡ ಹೇಳಬೇಕಾಯಿತು: 'ಎದೆಯ ಕೇಂದ್ರದಿಂದ ಎರಡಂಕಿ ಬಲಕ್ಕಿರುವ ಹೃದಯ'[೬೪]. ಆದ್ದರಿಂದ ಈ ಹೃದಯ ಸ್ಥಾನವು ಅಂತಿಮ ಅಥವಾ ಕೇವಲ ಸತ್ಯವಲ್ಲ. ಓದುಗರು ನೋಡಬಹುದು.

'ಮಹರ್ಷೀಸ್ ಗಾಸ್ಪೆಲ್; II ಅಧ್ಯಾಯ ೪, 'ದಿ ಹಾರ್ಟ್ ಈಸ್ ದ ಸೆಲ್ಫ್'

(೮ನೇ ಆವೃತ್ತಿ ೧೯೬೯, ಪುಟ ೬೮ ರಿಂದ ೭೨; ೯ನೇ ಆವೃತ್ತಿ ೧೯೭೯, ಪುಟ ೭೨ ರಿಂದ ೭೬)

ಹೀಗೆ, 'ಎಲ್ಲಿಂದ ನಾನು?' ರೂಪದಲ್ಲಿ ತನ್ನನ್ನು ಗಮನಿಸುವುದೆಂದರೆ 'ಉದಯಿಸುವ ನಾನು'ವನ್ನು, ಅಹಂ ಅನ್ನು ಶೋಧಿಸುವುದು. ಆದರೆ 'ನಾನು ಯಾರು?' ಎಂದು ಶೋಧಿಸುವಾಗ ಕೆಲವು ಜಿಜ್ಞಾಸುಗಳು 'ನಾನು' ಎಂಬುದನ್ನು **'ಇರುವುದು'** ಎಂದು ಗ್ರಹಿಸುತ್ತಾರೆ, 'ಉದಯಿಸುವುದು' ಎಂದಲ್ಲ! ಆ ರೀತಿ ಗ್ರಹಿಸಿದರೆ ಅದು ಆತ್ಮಾವಧಾನ. 'ಉದಯಿಸುವ' ಮತ್ತು 'ಇರುವ' ದರ ನಡುವಿನ ವ್ಯತ್ಯಾಸಾಧಾರಿತ ಎರಡು ರೀತಿಯ ಶೋಧವನ್ನು ಸ್ಪಷ್ಟವಾಗಿ ತಿಳಿಸಲಿಕ್ಕಾಗಿ ಮಾತ್ರ. ಈ ಅಧ್ಯಾಯದಲ್ಲಿ ಈ ಹಿಂದೆ ನಮ್ಮ 'ಉದಯ' ಮತ್ತು 'ಇರುವು'ಗಳನ್ನು ವಿವರಿಸಲಾಗಿದೆ. ಶಾಸ್ತ್ರಗಳಲ್ಲಿ ಇದುವರೆಗೆ ವಿವರಿಸಿದಂತೆ ಬ್ರಹ್ಮಧ್ಯಾನ ಎಂಬುದರ ಅರ್ಥವು 'ಅದು ಇದ್ದಂತೆ ಹೃದಯದಲ್ಲಿ ನೆಲೆಸುವುದು' ಎಂದು ಶ್ರೀ ಭಗವಾನರು 'ಉಳ್ಳದು ನಾರ್ಪದು'ವಿನ ಮೊದಲ ನಾಂದಿ ಪದ್ಯದ ಕೊನೆಯ ಎರಡು ಸಾಲುಗಳಲ್ಲಿ ಹೇಳಿದ್ದಾರೆ. (ಅಂದರೆ ಆತ್ಮನಿಷ್ಠೆಯಿಂದ ಇರುವುದೇ ಈ ಧ್ಯಾನದ ಸರಿಯಾದ ರೀತಿ.) ಹಾಗೆಯೇ 'ಆತ್ಮ ವಿಚಾರ' ಪದದ ಸರಿಯಾದ ಅರ್ಥ **'ಆತ್ಮಮುಖಿಯಾಗಿ ತಿರುಗುವುದು'** ಎಂದು ಇಲ್ಲಿ ವಿವರಿಸಲಾಗಿದೆ.

---

೬೪. ಇಲ್ಲಿ ಗಮನಿಸುವುದು ಸೂಕ್ತ. 'ಎದೆಯ ಕೇಂದ್ರದಿಂದ ಎರಡಂಕಿ ಬಲಕ್ಕೆ' ಹೃದಯಕ್ಕೆ ಸ್ಥಾನವಿದೆ ಎಂಬ ಉಲ್ಲೇಖ 'ಉಳ್ಳದು ನಾರ್ಪದು' (ಮುಖ್ಯ ನಲವತ್ತು ಪದ್ಯಗಳು)ವಿನಲ್ಲಿ ಸೇರಿಲ್ಲ. ಇದರಲ್ಲಿ ಶ್ರೀ ಭಗವಾನರ ಮೂಲ, ನೇರ ಬೋಧೆಗಳನ್ನು ಮಾತ್ರ ಕೊಡಲಾಗಿದೆ. ಅದೇ 'ಉಳ್ಳದು ನಾರ್ಪದು–ಅನುಬಂಧಂ' (ಪೂರಕ ನಲವತ್ತು ಪದ್ಯಗಳು) ವಿನಲ್ಲಿ ಮಾತ್ರ ಇದು ಸೇರಿದೆ. ಅದರಲ್ಲಿ ಅಪಕ್ವ ಸಾಧಕರ ದುರ್ಬಲತೆ ಗಮನಿಸಿ ಶಾಸ್ತ್ರಗಳು ಕೆಳಗಿಳಿದು ರಿಯಾಯಿತಿಗಾಗಿ ಸತ್ಯವನ್ನು ನೀರಾಗಿಸಿ (ತೆಳ್ಳಗೆ ಮಾಡಿ) ಉತ್ತರಿಸಲಾಗಿದೆ. ಅಲ್ಲದೇ ಈ ಎರಡು ಪದ್ಯಗಳು, ೧೮ ಮತ್ತು ೧೯, ಶ್ರೀ ಭಗವಾನರ ಮೂಲ ರಚನೆಗಳಲ್ಲ. 'ಅಷ್ಟಾಂಗ ಹೃದಯಂ' ಎಂಬ ಮಲೆಯಾಳಿ ಕೃತಿಯ ಭಾಷಾಂತರ ಮಾತ್ರ ಆಗಿದೆ. ಅದು ಆಧ್ಯಾತ್ಮಿಕ ಪಠ್ಯ ಕೂಡ ಅಲ್ಲ, ವೈದ್ಯಕೀಯ ಕೃತಿ. ಈ ಎರಡು ಪದ್ಯಗಳು ಎದೆಯ ಕೇಂದ್ರದಿಂದ ಎರಡಂಕಿ ಬಲಕ್ಕೆ ಇರುವ ದೇಹದ ಬಿಂದುವಿನಲ್ಲಿ ವಿಚಾರವನ್ನು ಕೇಂದ್ರೀಕರಿಸುವ ಅಭ್ಯಾಸವನ್ನು ಶಿಫಾರಸು ಮಾಡುವುದಿಲ್ಲ, ಉಲ್ಲೇಖಿಸುವುದೇ ಇಲ್ಲ. ಶ್ರೀ ಭಗವಾನರ ಮೂಲ ಕೃತಿಗಳಲ್ಲಾಗಲೀ, ಇತರರ ಕೃತಿಗಳ ಭಾಷಾಂತರಗಳಲ್ಲಾಗಲೀ, ಭಕ್ತರು ದಾಖಲಿಸಿರುವ ಯಾವುದೇ ಸಂಭಾಷಣೆಯಲ್ಲಾಗಲೀ, ಈ ಅಭ್ಯಾಸವನ್ನು ಅವರು ಶಿಫಾರಸು ಮಾಡಿಲ್ಲ. (ಏಕೆಂದರೆ ಎದೆಯ ಬಲಭಾಗದ ಮೇಲೆ ಅಥವಾ ಅಸ್ಥಿರವಾದ, ಜಡವಾದ, ಅನ್ಯವಾದ ದೇಹದ ಯಾವುದೇ ಭಾಗದ ಮೇಲೆ ಮಾಡುವ ಧ್ಯಾನವು ಮಧ್ಯಮ ಪುರುಷ ಅನಾತ್ಮ ವಸ್ತುವಿನ ವಿಚಾರ ಮಾತ್ರ ಆಗುತ್ತದೆ. ವಾಸ್ತವವಾಗಿ ಅವರು ಇದನ್ನು ಖಂಡಿಸಿದ್ದಾರೆ. (ನೋಡಿ: 'ಶ್ರೀ ರಮಣ ಮಹರ್ಷಿಗಳೊಂದಿಗೆ ಮಾತು (ಟಾಕ್ಸ್ ವಿತ್ ಶ್ರೀ ರಮಣ ಮಹರ್ಷಿ) ಸಂಖ್ಯೆ ೨೭೩)

ಈ ಎರಡೂ ರೀತಿಯ ಶೋಧಗಳಲ್ಲಿ ('ನಾನು ಯಾರು?' ಅಥವಾ 'ಎಲ್ಲಿಂದ ನಾನು?') ಜಿಜ್ಞಾಸುವಿನ ಗಮನವು ತನ್ನ ಮೇಲೇ ಕೇಂದ್ರೀಕೃತವಾಗುವುದರಿಂದ, ಆತ್ಮಕ್ಕೆ ಹೊರತಾದದ್ದು ('ನಾನು' ಪದದ ಸರಿಯಾದ ಅರ್ಥ ಇದೇ) ಅಂತಿಮವಾಗಿ ಅನುಭವವಾಗುವುದಿಲ್ಲ. 'ಎಲ್ಲಿಂದ ನಾನು?' ಮತ್ತು 'ನಾನು ಯಾರು?' ಎರಡೂ ಶೋಧಗಳ ಅಂತಿಮ ಪರಿಣಾಮ ಒಂದೇ! ಹೇಗೆ? 'ಎಲ್ಲಿಂದ ನಾನು?' ಎಂದು ಹುಡುಕುವವನು 'ನಾನು ಇಂತಿಂಥವನು' ಎಂಬ ರೂಪದಲ್ಲಿ ಅಹಮನ್ನು ಅನುಸರಿಸುತ್ತಾನೆ. ಹಾಗೆ ಮಾಡುವಾಗ 'ಇಂತಿಂಥವನೆ'ಂಬ ವಿಶೇಷಣಕ್ಕೆ ನಿಜವಾದ ಅಸ್ತಿತ್ವ ಇಲ್ಲದಿರುವುದರಿಂದ ಅದು ದಾರಿಯಲ್ಲೇ ಸಾಯುತ್ತದೆ ಮತ್ತು ಅವನು ಆತ್ಮನಲ್ಲಿ ನೆಲೆಸುತ್ತಾನೆ, ಇದೇ ಕಡೆಗೆ ಉಳಿದದ್ದು. ಇನ್ನೊಂದು ಕಡೆ, 'ನಾನು ಯಾರು?' ಎಂದು ಹುಡುಕುವವನು ಯಾವುದೇ ಶ್ರಮವಿಲ್ಲದೇ ತನ್ನ 'ಇರುವಿಕೆ'ಯಲ್ಲಿ (ಆತ್ಮನಲ್ಲಿ) ಮುಳುಗಿ ಬಿಡುತ್ತಾನೆ. ಇದು ಸದಾ 'ನಾನು ಇದ್ದೇನೆ ಅದು ನಾನು' ಎಂದು ಪ್ರಕಾಶಿಸುತ್ತದೆ. ಆದ್ದರಿಂದ 'ಎಲ್ಲಿಂದ ನಾನು?' ಅಥವಾ 'ನಾನು ಯಾರು?' ಯಾವ ರೂಪದಲ್ಲಿ ಶೋಧ ಮಾಡಿದರೂ ಅನಿವಾರ್ಯವಾಗಿ ಬೇಕಾಗಿರುವುದು ಕೊನೆಯವರೆಗಿನ ಆತ್ಮಾವಧಾನ. ಅಲ್ಲದೇ, ಪ್ರಾಮಾಣಿಕ ಜಿಜ್ಞಾಸುಗಳಿಗೆ ಪೂರ್ವಭಾವಿಯಾಗಿ ಅಹಂ ಅಥವಾ ಆತ್ಮದ ಬಗ್ಗೆ ಹೇಳುವ ಅವಶ್ಯಕತೆಯಿಲ್ಲ. ಜಿಜ್ಞಾಸುವಿನಲ್ಲಿ ಇಬ್ಬರಿದ್ದಾರೆಯೇ–ಅಹಂ ಮತ್ತು ಆತ್ಮ? ಇದನ್ನು ಹೇಳಿದ ಕಾರಣವೆಂದರೆ 'ನಾನು ಏಕೈಕ, ಎರಡಲ್ಲ' ಎಂಬ ಅನುಭವ ಪ್ರತಿಯೊಬ್ಬರಿಗೂ ಇರುತ್ತದೆ; ಒಂದು 'ನಾನು' ಇನ್ನೊಂದು 'ನಾನು'ವನ್ನು ಹುಡುಕುತ್ತದೆ ಎಂಬ ಕಾಲ್ಪನಿಕ ದ್ವೈತ ಭಾವಕ್ಕೆ ಅವಕಾಶ ಕೊಡಬಾರದು. ಅಹಂ ಮತ್ತು ಆತ್ಮ ಎಂಬ ಎರಡಿಲ್ಲ. 'ಕೆಳಮಟ್ಟದ' ಆತ್ಮ, 'ಮೇಲ್ಮಟ್ಟದ' ಆತ್ಮ ಎಂದಿಲ್ಲ. ಶ್ರೀ ಭಗವಾನರು ಕೇಳುತ್ತಾರೆ:

"…..ಎರಡು ಆತ್ಮಗಳಿವೆಯೇ–ತಿಳಿಯುವ ಮತ್ತು ತಿಳಿಯಲ್ಪಡುವ ವಸ್ತುವೆಂದು? ಏಕೆಂದರೆ 'ನಾನು ಏಕೈಕ' ಎಂಬುದೇ ಎಲ್ಲರ ನಿಜವಾದ ಅನುಭವ!

'ಉಳ್ಳದು ನಾರ್ಪದು', ಪದ್ಯ ೩೩

ಆದ್ದರಿಂದ 'ನಾನು'–ಭಾವಕ್ಕೆ ತಡೆಯಿಲ್ಲದಂತೆ ಕೊನೆಯವರೆಗೆ ಅಂಟಿಕೊಂಡರೆ ಸಾಕು. ಪ್ರತಿಯೊಬ್ಬರ ದಿನನಿತ್ಯದ ಅನುಭವವಾದ 'ನಾನು'. ಭಾವಕ್ಕೆ ಈ ರೀತಿ ಗಮನ ನೀಡುವುದೇ ಆತ್ಮಾವಧಾನದ ಅರ್ಥ. ಯಾರಿಗೆ 'ನಾನು ದೇಹ'ವೆಂಬ ಅರಿವಿನ (ಜೀವಭಾವದ) ಪ್ರಾಥಮಿಕ ಜ್ಞಾನವು ಒಪ್ಪಿಗೆಯಾಗಿರುತ್ತದೆಯೋ ಅದರ (ಅಹಮಿನ) ಅಸ್ತಿತ್ವವನ್ನು ಅನುಮಾನಿಸಲಾಗದ ಕಾರಣ ಅವರು 'ಎಲ್ಲಿಂದ ನಾನು?'–ರೂಪದ ಆತ್ಮಾವಧಾನ (ಅಂದರೆ ಆತ್ಮಶೋಧ) ಮಾಡುವುದು ಸೂಕ್ತ. ಯಾರಿಗೆ 'ನಾನು ಇಂತಿಂಥವನು' ಅಥವಾ 'ಇದು ನಾನು' ರೂಪದ ವೈಯಕ್ತಿಕತೆ (ಜೀವಭಾವ) ಗೃಹೀತವಲ್ಲವೊ, 'ನಾನೆಂದು ಪ್ರಕಾಶಿಸುವ ಈ ಭಾವ ಏನು?' ಎಂದು ಗಮನಿಸುವವರು 'ನಾನು ಯಾರು?'–ರೂಪದ ಆತ್ಮಾವಧಾನ ಮಾಡುವುದು ಸೂಕ್ತ. ಸಾಧನೆಯ ಅವಧಿಯಲ್ಲಿ ಮುಖ್ಯವಾಗಿ ಇರಲೇಬೇಕಾದ್ದೇನೆಂದರೆ ನಮ್ಮ ಗಮನವು ಉತ್ತಮ ಪುರುಷ ಏಕವಚನ ಭಾವವಾದ 'ನಾನು'ವಿನ ಬಗ್ಗೆ ಮಾತ್ರ ತಿರುಗಿರಬೇಕು ಎಂಬುದು.

ಅಧ್ಯಾಯ ಎಂಟು

ಆತ್ಮ ಶೋಧದ ತಂತ್ರ

"ಬ್ರಹ್ಮಾನುಭವವನ್ನು ನೇರವಾಗಿ ಕರುಣಿಸುವ ಆತ್ಮಶೋಧದ ಸಾಧನೆಯೇ ಇದು" ಎಂಬ ವಾಸ್ತವವೂ ಗೊತ್ತಿಲ್ಲದೇ, ಯಾವ ಪೂರ್ವೋದ್ದೇಶವೂ ಇಲ್ಲದೇ ಭಗವಾನ್ ಶ್ರೀ ರಮಣರು ತಮ್ಮ ಹದಿನಾರನೇ ವಯಸ್ಸಿನಲ್ಲಿ ಒಂದು ದಿನ ಈ ಅಪರೂಪ ಸಾಧನೆ ಕೈಗೊಂಡರು! ಆ ದಿನ ತಾನು ಸತ್ತೇ ಬಿಡುತ್ತೇನೆ ಎಂಬಂತೆ ಇದ್ದಕ್ಕಿದ್ದಂತೆ ಸಾವಿನ ಮಹಾಭಯ ಅವರನ್ನು ಆವರಿಸಿತು. ಅದರಿಂದಾಗಿ, ಸಾವನ್ನು ಪರಿಶೋಧಿಸುವ ಪ್ರವೃತ್ತಿಯೂ ಸಹಜ ಸ್ಫೂರ್ತವಾಗಿ ಅವರಲ್ಲಿ ಉದಯಿಸಿತು. ವೇಗವಾಗಿ ಹತ್ತಿರ ಬರುತ್ತಿರುವ ಸಾವನ್ನು ಕಂಡು ಅವರು ವಿಚಲಿತರಾಗಲಿಲ್ಲ! ಶಾಂತವಾಗಿ ಇದನ್ನು ಸ್ವಾಗತಿಸಿ ಸಮಸ್ಯೆಯನ್ನು ಒಬ್ಬಂಟಿಯಾಗಿ ಬಗೆಹರಿಸಲು ನಿರ್ಧರಿಸಿದರು. ಕೆಳಗೆ ಮಲಗಿಕೊಂಡು ಶವದಂತೆ ಕೈಕಾಲು ಚಾಚಿ ಮುಖಾಮುಖಿಯಾಗಿ ಸಾವನ್ನು ಪರಿಶೋಧಿಸಲು ಪ್ರಾರಂಭಿಸಿದರು. ಶ್ರೀ ಭಗವಾನರು ಬಳಸಿದ ಆತ್ಮಶೋಧದ ತಂತ್ರವನ್ನು ತಿಳಿಯುವುದು ಓದುಗರಿಗೆ ಪ್ರಾಥಮಿಕ ಮಹತ್ವದ್ದಾದ್ದರಿಂದ ಅವರು ತಮ್ಮ ಅನುಭವವನ್ನು ನಂತರ ಕಥಿಸಿದ ಅವರೇ ಶಬ್ದಗಳಲ್ಲಿ ನೋಡೋಣ.

"ಸರಿ, ಸಾವು ಬಂದಿದೆ! 'ಸಾವು' ಎಂದರೆ ಏನು? ಸಾಯುತ್ತಿರುವುದು ಏನು? ಸಾಯುತ್ತಿರುವುದು ಈ ದೇಹ; ಸಾಯಲಿ!" ಎಂದು ನಿರ್ಧರಿಸಿ ತುಟಿ ಬಿಗಿ ಹಿಡಿದು, ಮಾತು ಅಥವಾ ಉಸಿರು ಇಲ್ಲದ ಶವದಂತೆ ಇದ್ದು ನನ್ನೊಳಗೆ ನಾನು ನೋಡಿದಾಗ ತಿಳಿದು ಬಂದದ್ದೆಂದರೆ 'ಈ ದೇಹ ಸತ್ತಿದೆ. ಈಗ ಇದನ್ನು ಸುಡುಗಾಡಿಗೆ ಕೊಂಡೊಯ್ದು ಸುಡುತ್ತಾರೆ; ಇದು ಬೂದಿಯಾಗುತ್ತದೆ. ಸರಿ. ಆದರೆ ಈ ದೇಹದ ನಾಶದೊಂದಿಗೆ ನಾನೂ ನಾಶವಾಗುತ್ತೇನೆಯೇ? ನಾನು ನಿಜಕ್ಕೂ ಈ ದೇಹವೇ? ಮಾತಿಲ್ಲದ, ಉಸಿರಿಲ್ಲದ ಶವದಂತೆ ಈ ದೇಹ ಬಿದ್ದುಕೊಂಡಿದ್ದರೂ ಸಾವು ಸ್ಪರ್ಶಿಸದಂತೆ ನಿಸ್ಸಂದೇಹವಾಗಿ ನಾನು ಇದ್ದೇನೆ! ನನ್ನ ಇರುವಿಕೆಯು ಸ್ಪಷ್ಟವಾಗಿ ಅಡೆತಡೆಯಿಲ್ಲದೇ ಪ್ರಕಾಶಿಸುತ್ತಿದೆ! ಆದ್ದರಿಂದ ನಶಿಸುವ ಈ ದೇಹ ನಾನಲ್ಲ! ನಾನು ನಿಜಕ್ಕೂ ಅಮರವಾದ ನಾನು (ಆತ್ಮ)! ಎಲ್ಲದರಲ್ಲಿ ನಾನೊಬ್ಬನೇ ನಿಜ! ಈ ದೇಹವು ಸಾವಿಗೆ ಒಳಪಡುತ್ತದೆ, ಆದರೆ ದೇಹವನ್ನು ಮೀರಿದ ನಾನು ಶಾಶ್ವತವಾಗಿ ಜೀವಿಸಿದ್ದೇನೆ! ದೇಹಕ್ಕೆ ಬಂದ ಸಾವೂ ಕೂಡ ನನ್ನನ್ನು ಸ್ಪರ್ಶಿಸಲು ಆಗಲಿಲ್ಲ! ಹೀಗೆ ನೇರವಾಗಿ ಹೊಳೆಯಿತು, ಅದರ ಜೊತೆಗೆ ಮೊದಲು ಬಂದಿದ್ದ ಸಾವಿನ ಭಯ ಮಾಯವಾಯಿತು, ಮತ್ತೆಂದೂ ಕಾಣಿಸಿಕೊಳ್ಳಲಿಲ್ಲ! ಇದೆಲ್ಲವೂ ಪ್ರತ್ಯಕ್ಷ ಜ್ಞಾನವಾಗಿ ಕ್ಷಣಾರ್ಧದಲ್ಲಿ ಅನುಭವವಾಯಿತು, ಬರೀ ತಾರ್ಕಿಕ ವಿಚಾರವಾಗಿ ಅಲ್ಲ. ಅಂದಿನಿಂದ ದೇಹವನ್ನು ಮೀರಿದ ನನ್ನ ಇರುವಿಕೆಯ (ಸತ್) ಅರಿವು (ಚಿತ್) ನಿರಂತರವಾಗಿ ಹಾಗೇ ಉಳಿದಿದೆ"–ಹೀಗೆ ಶ್ರೀ ರಮಣರು ಕಥಿಸಿದರು.

ಇದೆಲ್ಲವನ್ನೂ ಶ್ರೀ ಭಗವಾನರು ನಂತರ ನಮಗೆ ಇಷ್ಟೊಂದು ಶಬ್ದಗಳಲ್ಲಿ ವಿವರಿಸಿದರೂ ಎಲ್ಲಕ್ಕಿಂತ ಮುಖ್ಯ ಸಂಗತಿಯನ್ನು ಒತ್ತಿ ಹೇಳಿದರು: “ಇದೆಲ್ಲವೂ ಮನಸ್ಸು ಮತ್ತು ಮಾತಿನ ಕ್ರಿಯೆಯಿಲ್ಲದೇ ನೇರ ಅನುಭವವಾಗಿ ಒಂದೇ ಕ್ಷಣದಲ್ಲಿ ನಡೆಯಿತು”.

ಈ ಸಾವಿನ ಭಯದಿಂದಾಗಿ ‘ನನ್ನ ಅಸ್ತಿತ್ವವೇನು? ಈ ಸಾಯವುದು ಏನು?” ಎಂದು ಕಂಡು ಹಿಡಿಯಲು ಶ್ರೀ ಭಗವಾನರ ಏಕಾಗ್ರತೆಯು ಆತ್ಮವಿಚಾರದಲ್ಲಿ ಸ್ಥಿರವಾಗಿ, ಆಳವಾಗಿ ತಲ್ಲೀನವಾಗಿತ್ತು. ಶ್ರೀ ಭಗವಾನರು ಮಾಡಿದ್ದರಿಂದ ಸಿದ್ಧವಾಗುವುದೇನೆಂದರೆ, ನಾವು ಇದುವರೆಗೆ ವಿವರಿಸುತ್ತ ಬಂದ ಹಾಗೆ, ಅಂತಹ ದೃಢವಾದ ಸ್ಥಿರವಾದ ಆತ್ಮಗಮನವೇ ‘ಆತ್ಮವಿಚಾರ’ ಎನಿಸಿಕೊಳ್ಳುತ್ತದೆ. ಇದೇ ವಿಚಾರದಲ್ಲಿ ಅವರು ತಮ್ಮ ಕೃತಿ ‘ನಾನು ಯಾರು?’ವಿನಲ್ಲಿ ದೃಢೀಕರಿಸುತ್ತ ಹೇಳುತ್ತಾರೆ: “ಮನಸ್ಸನ್ನು (ಗಮನವನ್ನು) ಆತ್ಮನಲ್ಲಿ (ನಾನು–ಭಾವದಲ್ಲಿ) ಸದಾ ಸ್ಥಿರವಾಗಿ ಇಡುವುದು ಮಾತ್ರ ‘ಆತ್ಮವಿಚಾರ’ ಎನಿಸಿಕೊಳ್ಳುತ್ತದೆ...” ಆತ್ಮವಿಚಾರದ ಹೊರತಾಗಿ ಬೇರೆ ಯಾವುದೇ ವಿಚಾರಕ್ಕೆ ಕಿಂಚಿತ್ತೂ ಆಸ್ಪದ ಕೊಡದೇ (ಅಂದರೆ, ಯಾವುದೇ ಮಧ್ಯಮ ಅಥವಾ ಪ್ರಥಮ ಪುರುಷವನ್ನು ಗಮನಿಸದೇ) ಆತ್ಮನಿಷ್ಠೆಯಲ್ಲಿ ಗಟ್ಟಿಯಾಗಿ ನೆಲೆಸುವುದೇ ತನ್ನನ್ನು ತಾನು ದೇವರಿಗೆ ಸಮರ್ಪಿಸಿಕೊಳ್ಳುವುದು (ಇದನ್ನು ಮಾತ್ರ ಪರಾಭಕ್ತಿ ಎಂದು ಕರೆಯುತ್ತಾರೆ)[೬೫] “ನಾನು–ಅರಿವಿನ ಮೇಲೆ ನಿರಂತರವಾಗಿ ನೆಲೆಗೊಳ್ಳುವ ದಾರಿ, ತಂತ್ರ ಯಾವುದು?” ಎಂದು ಕೇಳಿದಾಗ ಶ್ರೀ ಭಗವಾನರು ತಮ್ಮ ಕೃತಿಗಳಲ್ಲಿ ಆತ್ಮವಿಚಾರದ ತಂತ್ರವನ್ನು, ಮೇಲೆ ಹೇಳಿದಂತೆ ಚಿಕ್ಕ ವಯಸ್ಸಿನಲ್ಲೇ ಮಾಡಿದ್ದನ್ನು, ಹೆಚ್ಚು ವಿವರವಾಗಿ ಕೆಳಗಿನಂತೆ ಅನಾವರಣಗೊಳಿಸಿದ್ದಾರೆ.

“ಆತ್ಮವೆಂದರೆ ‘ನಾನು ಇದ್ದೇನೆ ಅದು ನಾನು’ ರೂಪದಲ್ಲಿ ಸ್ವಯಂಪ್ರಕಾಶವಾದದ್ದು. ಇದನ್ನು ಯಾರೂ ಇದು ಅಥವಾ ಅದು (ಬೆಳಕು ಅಥವಾ ಶಬ್ದ) ಎಂದು ಕಲ್ಪಿಸಬಾರದು. ಇಂತಹ ಕಲ್ಪನೆ ಅಥವಾ ವಿಚಾರ ಸ್ವಯಂ ಬಂಧನವಾಗಿದೆ. ಆತ್ಮವು ಬೆಳಕು ಅಥವಾ ಕತ್ತಲೆ ಅಲ್ಲದ ಅರಿವಾಗಿರುವುದರಿಂದ, ಇದನ್ನು ಯಾವುದೇ ರೀತಿಯ ಬೆಳಕೆಂದು ಕಲ್ಪಿಸುವುದು ಬೇಡ. ಆ ವಿಚಾರವೇ ಬಂಧನವಾಗುತ್ತದೆ. (ಮೂಲ ವಿಚಾರವಾದ) ಅಹಮಿನ ಸರ್ವನಾಶ ಮಾತ್ರವೇ ಮುಕ್ತಿ. ಪಂಚಕೋಶಗಳ ಮೂರೂ ಶರೀರಗಳು ‘ನಾನು ದೇಹ’ ಎಂಬ ಭಾವದಲ್ಲಿ ಒಳಗೊಂಡಿವೆ. ಆದ್ದರಿಂದ ‘ಈ ನಾನು ಯಾರು?’ ಎಂಬ ಶೋಧದಿಂದ (ಅಂದರೆ ಆತ್ಮವಿಚಾರದಿಂದ) ಸ್ಥೂಲ ಶರೀರದೊಂದಿಗೆ ಗುರುತಿಸುವಿಕೆಯನ್ನು (ಅಂಟಿಕೊಳ್ಳುವುದನ್ನು) ತೆಗೆದು ಹಾಕಿದರೆ ಉಳಿದೆರಡು ಶರೀರಗಳೊಂದಿಗೆ ಗುರುತಿಸುವಿಕೆಯೂ ಸ್ವಯಂಚಾಲಿತವಾಗಿ ನಿಲ್ಲುತ್ತದೆ. ಸೂಕ್ಷ್ಮ ಮತ್ತು ಕಾರಣ ಶರೀರಗಳು ಇಂತಹ ಗುರುತಿಸುವಿಕೆಯಿಂದಾಗಿ ಮಾತ್ರ ಜೀವಿಸುವುದರಿಂದ ಇವನ್ನು ಪ್ರತ್ಯೇಕವಾಗಿ ನಾಶಗೊಳಿಸುವ ಅಗತ್ಯವಿಲ್ಲ.

---

೬೫. ‘ನಾನು ಯಾರು?’ ಎಂಬ ಜಿಜ್ಞಾಸೆ (ಜ್ಞಾನ ಮಾರ್ಗ) ಮತ್ತು ಆತ್ಮಸಮರ್ಪಣೆ (ಭಕ್ತಿ ಮಾರ್ಗ) ಈ ಎರಡೂ ಮಹಾನ್ ರಾಜಮಾರ್ಗಗಳನ್ನು ಭಗವಾನ್ ಶ್ರೀ ರಮಣರು ತಮ್ಮ ಸ್ವಂತ ಅನುಭವದಿಂದ ಕಂಡು ಹಿಡಿದು ಮಾನವ ಕುಲದ ಮುಕ್ತಿಗಾಗಿ ಬೋಧಿಸಿದ್ದಾರೆ. ‘ಶ್ರೀ ರಮಣ ಮಾರ್ಗ–ಭಾಗ ಒಂದು’ ಎಂಬ ಈ ಪುಸ್ತಕದಲ್ಲಿ ಶುದ್ಧ ಅದ್ವೈತ ಜ್ಞಾನಮಾರ್ಗದ ‘ನಾನು ಯಾರು?’ ಎಂಬ ಜಿಜ್ಞಾಸೆಯನ್ನು ಮಾತ್ರ ಚರ್ಚಿಸಲಾಗಿದೆ. ‘ಶ್ರೀ ರಮಣ ಮಾರ್ಗ–ಭಾಗ ಎರಡು’ದ ಎರಡನೇ ಅಧ್ಯಾಯದಲ್ಲಿ ಈ ಪರಾಭಕ್ತಿ ಸ್ವರೂಪವನ್ನು ಪೂರ್ಣವಾಗಿ ವಿವರಿಸಲಾಗಿದೆ.

"ಶೋಧಿಸುವುದು ಹೇಗೆ? ಮರದ ದಿಮ್ಮಿಯಂತೆ, ಅಂತಹ ವಸ್ತುಗಳಂತೆ ಜಡವಾಗಿರುವ ದೇಹವು 'ನಾನು' ಎಂದು ಸ್ವಯಂಪ್ರಕಾಶಿತವಾಗಿ ಕೆಲಸ ಮಾಡಬಲ್ಲದೇ? ಅದರಿಂದ ಸಾಧ್ಯವಿಲ್ಲ.

"ದೇಹವು 'ನಾನು' ಎಂದು ಹೇಳಲಾರದು..."

'ಉಳ್ಳದು ನಾರ್ಪದು', ಪದ್ಯ ೨೩

ಆದ್ದರಿಂದ ಶವದಂತಿರುವ ಈ ದೇಹವನ್ನು ನಿಜವಾದ ಶವದಂತೆ ಬಿಸಾಡಿ 'ನಾನು' ಎಂಬ

ಶಬ್ದವನ್ನು ಬಾಯಿಯಲ್ಲೂ ಹೇಳದೇ ಇರುವುದೇ–

"ದೇಹವನ್ನು ಶವದಂತೆ ಬಿಸಾಡಿ, 'ನಾನು' ಎಂದು ಬಾಯಿಯಲ್ಲೂ ಹೇಳದೇ 'ಈ ನಾನು ಉದಯಿಸುವುದು ಎಲ್ಲಿಂದ?' ಎಂದು ಮನಸ್ಸು ಒಳಮುಖವಾಗಿ ಧುಮುಕುವುದು ಮಾತ್ರ ಜ್ಞಾನಮಾರ್ಗ..."

'ಉಳ್ಳದು ನಾರ್ಪದು', ಪದ್ಯ ೨೯

–ನಾನು ಎಂದು ಈಗ ಹೊಳೆಯುವ ಭಾವ ಯಾವುದು ಎಂದು ಸೂಕ್ಷ್ಮವಾಗಿ ಗಮನಿಸಿದರೆ, ಹೃದಯದಲ್ಲಿ 'ನಾನು, ನಾನು' ಎಂಬ ಶಬ್ದವಿಲ್ಲದೇ ಒಂದು **ಸ್ಫುರಣವು**[೬೬] ಮಾತ್ರ ಅನುಭವಕ್ಕೆ ಬರುತ್ತದೆ.

"ನಾನು ಯಾರು? ಎಂದು ಒಳಗೇ ಶೋಧಿಸುತ್ತ ಮನಸ್ಸು ಹೃದಯವನ್ನು ತಲುಪಿದಾಗ ಆ 'ನಾನು' (ಅಹಂ) ಪೆಚ್ಚಾಗಿ ಕೆಳಗೆ ಬೀಳುತ್ತದೆ. ಏಕೈಕವು (ಸತ್ಯವು) ಸಹಜವಾಗಿ 'ನಾನು–ನಾನು' ಎಂದು ('ನಾನು ಇದ್ದೇನೆ ಅದು ನಾನು' ಎಂದು) ಕಾಣಿಸಿಕೊಳ್ಳುತ್ತದೆ...."

'ಉಳ್ಳದು ನಾರ್ಪದು', ಪದ್ಯ ೩೦

"ನಾನು ಎಂದು ಉದಯಿಸುವುದು ಯಾವ ಸ್ಥಳದಿಂದ? ಎಂದು ಒಳಗೇ ಹುಡುಕಿದಾಗ 'ನಾನು' (ಅಹಂ) ಸಾಯುತ್ತದೆ. ಇದೇ ಆತ್ಮಶೋಧ"

'ಉಪದೇಶ ಉಂದಿಯಾರ್', ಪದ್ಯ ೧೯

"ಈ 'ನಾನು' ಸತ್ತಲ್ಲಿ ಅಲ್ಲೇ ಈಗಲೇ ಏಕೈಕವು 'ನಾನು, ನಾನು' ಎಂದು ಸಹಜವಾಗಿ ಪ್ರಕಾಶಿಸುತ್ತದೆ. ಅದೊಂದೇ ಪೂರ್ಣವು."

'ಉಪದೇಶ ಉಂದಿಯಾರ್', ಪದ್ಯ ೨೦

"ಇದನ್ನು ಬಿಡದೇ ನಾವು ಕೇವಲ ಸ್ಫುರಣವಾಗಿ ವ್ಯಕ್ತಿಗತಭಾವವನ್ನು ಸಂಪೂರ್ಣವಾಗಿ ನಾಶಗೊಳಿಸಿದರೆ 'ನಾನು ದೇಹ' ಎಂಬ ಅಹಂ ಕರ್ಪೂರದ ಜ್ವಾಲೆ ಆರಿಹೋಗುವಂತೆ ಕೊನೆಗೊಳ್ಳುತ್ತದೆ. ಋಷಿಗಳು ಮತ್ತು ಪವಿತ್ರ ಗ್ರಂಥಗಳು ಮುಕ್ತಿಯೆಂದು ಘೋಷಿಸುವುದು ಇದನ್ನು ಮಾತ್ರ.

---

೬೬. ಸ್ಫುರಣ: ತನ್ನದೇ ಅಸ್ತಿತ್ವದ ಹೊಸದಾದ, ಸ್ಪಷ್ಟವಾದ, ತಾಜಾ ಜ್ಞಾನಾನುಭವ

"ಯುಗಾಂತರಗಳಿಂದ ಮತ್ತೆ ಮತ್ತೆ ಮರುಕಳಿಸುತ್ತಿರುವ ವಿಷಯವಾಸನೆಗಳಿಂದಾಗಿ ಪ್ರಾರಂಭದಲ್ಲಿ ಸಮುದ್ರದ ಅಲೆಗಳಂತೆ ಅಸಂಖ್ಯಾತ ವಿಚಾರಗಳು ಉದಯಿಸುತ್ತವೆಯಾದರೂ ಮೇಲೆ ಹೇಳಿದ ಆತ್ಮವಿಚಾರವು ಹೆಚ್ಚು ಹೆಚ್ಚು ತೀವ್ರವಾದಂತೆ ಅವು ನಾಶವಾಗುತ್ತವೆ. 'ಅವೆಲ್ಲವನ್ನೂ ನಾಶಪಡಿಸಿ ಆತ್ಮನಾಗಿ ಒಬ್ಬಂಟಿ ಇರಲು ಸಾಧ್ಯವೇ?' ಎಂಬ ಸಂದೇಹ ಕೂಡ ಬರೀ ಒಂದು ವಿಚಾರವಾದ್ದರಿಂದ ಆ ವಿಚಾರಕ್ಕೂ ಅವಕಾಶ ಕೊಡದೇ ಆತ್ಮವಿಚಾರಕ್ಕೆ ಸತತವಾಗಿ ಗಟ್ಟಿ ಅಂಟಿಕೊಂಡಿರಬೇಕು. ಎಂತಹ ಮಹಾಪಾಪಿಯಾಗಿದ್ದರೂ 'ಓ, ನಾನೊಬ್ಬ ಪಾಪಿ! ನನಗೆ ಮೋಕ್ಷ ಸಿಗುವುದು ಹೇಗೆ?' ಎಂದು ಗೋಳಾಡದೇ ತಾನು ಪಾಪಿಯೆಂಬ ವಿಚಾರವನ್ನೂ ಬಿಟ್ಟು **ಆತ್ಮವಿಚಾರದಲ್ಲಿ ನಿರಂತರವಾಗಿ ಸ್ಥಿರವಾಗಿದ್ದರೆ ಅವನೂ ಕೂಡ ಖಂಡಿತಾ ಉದ್ಧಾರವಾಗುತ್ತಾನೆ**. "ಆದ್ದರಿಂದ ಪ್ರತಿಯೊಬ್ಬರೂ ವೈರಾಗ್ಯದಿಂದ ತನ್ನೊಳಗಿನ ಆಳಕ್ಕೆ ಧುಮುಕಿದರೆ ಆತ್ಮವೆಂಬ ಮುತ್ತು ನಿಲುಕುತ್ತದೆ".

"ಮನಸ್ಸಿನಲ್ಲಿ ವಿಷಯವಾಸನೆಗಳು ಇರುವವರೆಗೆ (ಅವು ಸೂಕ್ಷ್ಮ ಅಥವಾ ಸ್ಥೂಲ ಜಗಾಭಾಸವನ್ನು ಸದಾ ಹುಟ್ಟಿಸುತ್ತಲೇ ಇರುವುದರಿಂದ) 'ನಾನು ಯಾರು?' ಎಂಬ ಶೋಧ ಅಗತ್ಯವಿದೆ. ವಿಚಾರಗಳು ತಮ್ಮಷ್ಟಕ್ಕೆ ಉದಯಿಸಿದ ಕೂಡಲೇ ಆಗಲೇ ಅಲ್ಲೇ **ಅವುಗಳ ಮೂಲಸ್ಥಳದಲ್ಲೇ** ಅವೆಲ್ಲವನ್ನೂ ನಾಶಗೊಳಿಸಬೇಕು. ಅವನ್ನು ನಾಶಗೊಳಿಸಲು ಸಾಧನ ಯಾವುದು? ಆತ್ಮವಿಚಾರಕ್ಕೆ ಅಡ್ಡಿ ಉಂಟು ಮಾಡುವ ಬೇರೆ ವಿಚಾರಗಳು ಉದಯಿಸಿದರೆ ಅವುಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸದೇ 'ಅವು ಯಾರಿಗೆ ಉದಯಿಸುತ್ತದೆ?' ಎಂದು ಶೋಧಿಸಬೇಕು. ಆಗ 'ನನಗೆ' ಎಂದು ತಿಳಿದು ಬರುತ್ತದೆ. ತಕ್ಷಣ 'ವಿಚಾರ ಮಾಡುತ್ತಿರುವ ಈ ನಾನು ಯಾರು?' ಎಂದು ಗಮನಿಸಿದರೆ, (ಇದುವರೆಗೆ ಮಧ್ಯಮ ಮತ್ತು ಪ್ರಥಮ ಪುರುಷರ ಬಗ್ಗೆ ವಿಚಾರ ಮಾಡುವುದರಲ್ಲಿ ನಿರತವಾಗಿದ್ದ ನಮ್ಮ ಏಕಾಗ್ರಶಕ್ತಿಯಾದ) ಮನಸ್ಸು ತನ್ನ ಮೂಲದತ್ತ ತಿರುಗುತ್ತದೆ. ಆದ್ದರಿಂದ (ಗಮನಿಸಲು ಯಾರೂ ಇಲ್ಲದ ಕಾರಣ) ಉದಯಿಸಿದ್ದ ಇತರ ವಿಚಾರಗಳೂ ಮುಳುಗಿ ಹೋಗುತ್ತವೆ. **ಹೀಗೆ ಮತ್ತೆ ಮತ್ತೆ ಅಭ್ಯಾಸ ಮಾಡಿದರೆ ತನ್ನ ಮೂಲದಲ್ಲೇ ನೆಲೆಸುವ ಮನಶ್ಶಕ್ತಿಯು ಹೆಚ್ಚುತ್ತದೆ.** ಹೀಗೆ ಮನಸ್ಸು ಹೃದಯದಲ್ಲಿ ನೆಲೆಸಿದಾಗ ಎಲ್ಲ ಇತರ ವಿಚಾರಗಳ ಮೂಲ ಬೇರಾಗಿರುವ 'ನಾನು' ಎಂಬ ಮೊದಲ ವಿಚಾರವು ('ನಾನು ದೇಹ', 'ಉದಯಿಸುವ ನಾನು') ತಾನೇ ಮಾಯವಾಗಿರುವುದರಿಂದ ಸದಾ ಇರುವ ಆತ್ಮವು ('ನಾನು' ಇರುವಿಕೆ) ಏಕೈಕವಾಗಿ ಪ್ರಕಾಶಿಸುತ್ತದೆ. ('ನಾನು ಇದು, ಅದು, ದೇಹ, ಬ್ರಹ್ಮ, ಮುಂತಾದ) ನಾನು–ವಿಚಾರದ ಸಣ್ಣ ಕುರುಹೂ ಇಲ್ಲವಾಗುವ ಸ್ಥಳವೇ (ಅವಸ್ಥೆಯೇ) ಆತ್ಮ. ಇದನ್ನು ಮಾತ್ರ **ಮೌನ** ಎನ್ನುತ್ತಾರೆ".

"ಇಂತಹ ಮನೋನಾಶವೇ ಮುಕ್ತಿ ಎಂಬುದು ಎಲ್ಲ ಶಾಸ್ತ್ರಗಳ ಅಂತಿಮ ನಿರ್ಣಯ ಎಂದು ತಿಳಿದ ಬಳಿಕ ಶಾಸ್ತ್ರಗಳನ್ನು ಅಪರಿಮಿತವಾಗಿ ಓದುವುದು ನಿಷ್ಫಲ. ಮನಸ್ಸನ್ನು ನಾಶ ಮಾಡಲು ತಾನು ಯಾರೆಂದು ಶೋಧಿಸುವುದು ಅಗತ್ಯವಿದೆ. ಹೀಗೆ ತನ್ನೊಳಗೆ ಶೋಧಿಸದೇ ಶಾಸ್ತ್ರಗಳಲ್ಲಿ ತನ್ನನ್ನು ಹುಡುಕಿ ತಿಳಿಯುವುದು ಹೇಗೆ? ರಾಮನು ತಾನು ರಾಮನೆಂದು ತಿಳಿಯಲು ಕನ್ನಡಿಯ ಅಗತ್ಯವಿದೆಯೇ? (ಅಂದರೆ, ಆತ್ಮವಿಚಾರದಿಂದ 'ನಾನು ಇದ್ದೇನೆ' ಎಂದು ತನ್ನನ್ನು ತಾನು ತಿಳಿಯಲು ಶಾಸ್ತ್ರಗಳ ಅಗತ್ಯವಿದೆಯೇ?) ತಾನಿರುವುದು ಪಂಚಕೋಶದ ಒಳಗೆ, ಶಾಸ್ತ್ರಗಳು ಹೊರಗಿನವು. ಪಂಚಕೋಶಗಳನ್ನೂ

ಬದಿಗೆ ತಳ್ಳಿ ತನ್ನೊಳಗೆ ತಾನು ಗಮನಿಸಬೇಕಾದದ್ದು ಶಾಸ್ತ್ರಗಳಲ್ಲಿ ಸಿಗುವುದು ಹೇಗೆ? ಶಾಸ್ತ್ರ ಶೋಧವು ವ್ಯರ್ಥವಾಗಿರುವುದರಿಂದ ಅದನ್ನು ಬಿಟ್ಟು ಆತ್ಮಶೋಧವನ್ನು ಕೈಗೊಳ್ಳಬೇಕು" ಎನ್ನುತ್ತಾರೆ ಭಗವಾನ್ ಶ್ರೀ ರಮಣರು.[೬೭]

ಶ್ರೀ ಭಗವಾನರಿಂದ ಮೇಲಿನಂತೆ ಶಬ್ದಗಳಲ್ಲಿ ವರ್ಣಿಸಲಾದ, ಕೇವಲ ಆತ್ಮದ ಮೇಲೆ ಗಮನವನ್ನು ಸ್ಥಿರೀಕರಿಸುವ ಸಾಧನ (ತಂತ್ರ)ವನ್ನೂ ಒಂದು ಉದಾಹರಣೆಯ ಮೂಲಕ ಇನ್ನಷ್ಟು ಸ್ಪಷ್ಟಪಡಿಸೋಣ. ಒಂದು ವಿಷಯವನ್ನು ಮಾತ್ರ ಮೊದಲೇ ಒಪ್ಪಿಕೊಳ್ಳಬೇಕು, ಏನೆಂದರೆ ಆತ್ಮದ ಸ್ವರೂಪವು ಅನನ್ಯವೂ ಅನುಪಮವೂ ಆಗಿರುವುದರಿಂದ ಇದನ್ನು ಯಾರೂ ಯಾವುದೇ ಉದಾಹರಣೆಯಿಂದ ಪೂರ್ಣವಾಗಿ, ಖಚಿತವಾಗಿ ವಿವರಿಸಲಾಗದು. ಜನರ ಬೌದ್ಧಿಕ ಬೆಳವಣಿಗೆ ಮತ್ತು ಅವರ ವಿಭಿನ್ನ ಸಂದರ್ಭಗಳ ಪ್ರಕಾರ ಬಹುತೇಕ ಹೊಂದುವಂತೆ ಬಹಳಷ್ಟು ಉದಾಹರಣೆಗಳನ್ನು ಕೊಡಲಾಗಿದ್ದರೂ (ಚಿತ್ ರೂಪದ) ಆತ್ಮವನ್ನು (ಜಡರೂಪದ) ಉದಾಹರಣೆಗಳು ಪೂರ್ಣತಃ ವಿವರಿಸಲಾರವು. ಶ್ರೀ ಭಗವಾನರು ನೀಡಿರುವ ಸಿನೇಮಾ ಪ್ರೊಜೆಕ್ಟರಿನ ಉದಾಹರಣೆ ಮತ್ತು ಕೆಳಗೆ ನೀಡಲಾದ ಕನ್ನಡಿಯಲ್ಲಿ ಪ್ರತಿಫಲಿತವಾದ ಸೂರ್ಯಕಿರಣದ ಉದಾಹರಣೆಗಳನ್ನು ಓದುಗರ ಸಂದೇಹ ನಿವಾರಿಸಿ ಸ್ಪಷ್ಟವಾಗಿ ತಿಳಿಸಲು ಮಾತ್ರ ಕೊಡಲಾಗಿದೆ. ಆದರೆ ಯಾರೂ ಉದಾಹರಣೆಗಳನ್ನು ಅತಿಯಾಗಿ ಎಳೆಯುವ ತಪ್ಪು ಮಾಡಬಾರದು. ಕುರುಡನಿಗೆ[೬೮] 'ಹಾಲು ಬೆಳ್ಳಗಿರುತ್ತದೆ' ಎಂದು ಹೇಳಿದಾಗ 'ನನ್ನ ಮಗು ಕೊಕ್ಕರೆಯನ್ನು ನುಂಗಿತು' ಎಂದು ನಿರ್ಣಯಿಸಿದಂತೆ ಆಗಬಾರದು.

ಸೂರ್ಯನ ಬೆಳಕಿನಲ್ಲಿ ಬಯಲಿನಲ್ಲಿ ನೆಲದ ಮೇಲೆ ಕನ್ನಡಿಯ ಒಂದು ಒಡಕು ಚೂರು ಬಿದ್ದಿದೆ. ಕನ್ನಡಿಯ ಚೂರಿನ ಮೇಲೆ ಬಿದ್ದ ಸೂರ್ಯಕಿರಣವು ಪ್ರತಿಫಲಿತವಾಗುತ್ತದೆ

---

೬೭. ನೋಡಿ: 'ವಿಚಾರ ಸಂಗ್ರಹ'ದ ಮೊದಲನೇ ಅಧ್ಯಾಯ ಮತ್ತು ಇಡೀ 'ನಾನು ಯಾರು?' ಇವುಗಳಿಂದ ಮೇಲಿನ ಆರು ಪರಿಚ್ಛೇದಗಳನ್ನು (ಪ್ರಾರಂಭ ೧೧೪ನೇ ಪುಟ) ಸಂಗ್ರಹಿಸಲಾಗಿದೆ.

೬೮. ಕುರುಡನ ಕತೆ: ಒಮ್ಮೆ ಹುಟ್ಟಾ ಕುರುಡನಿಗೆ ಅವನಿಗೊಬ್ಬ ಮಗ ಹುಟ್ಟಿದ್ದಾನೆಂದು ತಿಳಿಸಲಾಯಿತು. ಸಂತೋಷದ ಘಟನೆಯನ್ನು ಅವನು ಆನಂದಿಸುತ್ತಿರುವಾಗಲೇ, ಮರುದಿನ ಅವನ ಮಗುವಿನ ಸಾವಿನ ಬೆಚ್ಚಿಸುವ ಸುದ್ದಿ ತಲುಪಿತು. ನೋವಿನಿಂದ ಅವನು ಕೇಳಿದ:

'ನನ್ನ ಮಗು ಹೇಗೆ ಸತ್ತಿತು?'

'ಹಾಲು ಕುಡಿದಿದ್ದರಿಂದ'

'ಹಾಲು ಹೇಗಿರುತ್ತದೆ'

'ಹಾಲು ಬೆಳ್ಳಗಿರುತ್ತದೆ'

'ಬೆಳ್ಳಗೆ ಹೇಗಿರುತ್ತದೆ?'

'ಬೆಳ್ಳಗೆ ಕೊಕ್ಕರೆಯಂತಿರುತ್ತದೆ'

'ಕೊಕ್ಕರೆ ಹೇಗಿರುತ್ತದೆ?'

ಸಹನೆ ಕಳೆದುಕೊಂಡ ದೂತ ತನ್ನ ಕೈಯನ್ನು ಕೊಕ್ಕರೆಯಂತೆ ಬಾಗಿಸಿ ಕುರುಡನಿಗೆ ಮುಟ್ಟಿಸಿ ಹೇಳಿದ: 'ಕೊಕ್ಕರೆ ಹೀಗಿರುತ್ತದೆ'. ಆ ಕ್ಷಣವೇ ಗೋಳಾಡುತ್ತ ಕುರುಡ ಉದ್ಗರಿಸಿದ: 'ಆಹ! ಇಷ್ಟು ದೊಡ್ಡದ್ದನ್ನು ತೆಗೆದುಕೊಂಡು ನನ್ನ ಸಣ್ಣ ಮಗು ಸತ್ತಿದ್ದು ಅಚ್ಚರಿಯೇನಲ್ಲ!'

ಮತ್ತು ಪ್ರತಿಫಲಿತ ಕಿರಣವು ಹತ್ತಿರದ ಕತ್ತಲೆಯ ಕೋಣೆಯಲ್ಲಿ ಪ್ರವೇಶಿಸಿ ಒಳಗಿನ ಗೋಡೆಯ ಮೇಲೆ ಬೀಳುತ್ತದೆ. ಕತ್ತಲ ಕೋಣೆಯ ಒಳಗೋಡೆಯ ಮೇಲೆ ಬಿದ್ದ ಕಿರಣವು ಪ್ರತಿಫಲಿತ ಸೂರ್ಯಕಿರಣ. ಈ ಪ್ರತಿಫಲಿತ ಕಿರಣದಿಂದಾಗಿ ಕತ್ತಲ ಕೋಣೆಯಲ್ಲಿರುವ ವ್ಯಕ್ತಿಯು ಕೋಣೆಯೊಳಗಿನ ವಸ್ತುಗಳನ್ನು ನೋಡಲು ಸಾಧ್ಯವಾಗುತ್ತದೆ. ಗೋಡೆಯ ಮೇಲೆ ಕಾಣುವ ಪ್ರತಿಫಲಿತ ಕಿರಣವು ಕನ್ನಡಿಯ ಚೂರಿನ ರೂಪ ಅಥವಾ ಆಕಾರ (ತ್ರಿಕೋನ, ಚಚ್ಚೌಕ ಅಥವಾ ವರ್ತುಲಾಕೃತಿ) ಹೊಂದಿರುತ್ತದೆ. ಆದರೆ ಪ್ರತಿಫಲಿತ ಕಿರಣದ ಮೂಲವಾದ ನೇರವಾದ ಸೂರ್ಯಕಿರಣವು ಮುಕ್ತ ಬಯಲಿನಲ್ಲಿ ಅವಿಭಾಜ್ಯವಾಗಿ, ಏಕೈಕವಾಗಿ, ಸರ್ವವ್ಯಾಪಿಯಾಗಿ, ಯಾವುದೇ ನಿರ್ದಿಷ್ಟರೂಪ ಅಥವಾ ಆಕೃತಿಗೆ ಮೀರಿದ್ದಾಗಿ ಪ್ರಕಾಶಿಸುತ್ತಿರುತ್ತದೆ. ಆತ್ಮವು, ನಮ್ಮ ಸತ್-ಚಿತ್, ಮುಕ್ತ ಬಯಲಿನ ನೇರ ಸೂರ್ಯಕಿರಣದಂತಿದೆ. 'ನಾನು ದೇಹ' ಎಂಬ ಅರಿವಿನ ಅಹಂಭಾವವು, ಮನೋಜ್ಞಾನವು ಕೋಣೆಯ ಒಳಗೋಡೆಯ ಮೇಲೆ ಬಿದ್ದ, ಕನ್ನಡಿಯಿಂದ ಪ್ರತಿಫಲಿತವಾದ ಕಿರಣದಂತಿದೆ. ಆತ್ಮದರಿವು ನೇರ ಕಿರಣದಂತೆ ವಿಶಾಲವೂ, ಸರ್ವವ್ಯಾಪಿಯೂ, ನಿಸ್ಸೀಮವೂ ಆಗಿರುವುದರಿಂದ ಅದಕ್ಕೆ ಯಾವುದೇ ರೂಪ, ಉಪಾಧಿ (ವಿಶೇಷಣ) ಇಲ್ಲ. ಅದೇ, ಪ್ರತಿಫಲಿತ ಕಿರಣವು ಕನ್ನಡಿ ಚೂರಿನ ಇತಿಮಿತಿ, ಅಳತೆಗಳನ್ನು ಪಡೆಯುವಂತೆ ಅಹಂಭಾವವು 'ನಾನು' ಎಂಬುದನ್ನು ದೇಹದ ಅಳತೆ, ಆಕಾರದಂತೆ ಅನುಭವಿಸುತ್ತದೆ, ಇದಕ್ಕೆ ಉಪಾಧಿಗಳಿವೆ. ಪ್ರತಿಫಲಿತ ಬೆಳಕಿನಿಂದ ಕೋಣೆಯೊಳಗಿನ ವಸ್ತುಗಳು ಕಾಣುವಂತೆ ಮನೋಜ್ಞಾನದ ಮೂಲಕ ದೇಹ ಮತ್ತು ಜಗತ್ತು ಗುರುತಿಸಲ್ಪಡುತ್ತವೆ.

"ಜಗತ್ತು ಮತ್ತು ಮನಸ್ಸು ಜೊತೆಜೊತೆಯಾಗಿ ಉದಯಿಸಿ ಅಸ್ತಮಿಸಿದರೂ ಜಗತ್ತು ಹೊಳೆಯುವುದು ಮನಸ್ಸಿನಿಂದ ಮಾತ್ರ....."

'ಉಳ್ಳದು ನಾರ್ಪದು', ಪದ್ಯ ೭

ಈಗ ಕಲ್ಪಿಸೋಣ. ಕತ್ತಲ ಕೋಣೆಯೊಳಗಿರುವ ವ್ಯಕ್ತಿಯು ಪ್ರತಿಫಲಿತ ಕಿರಣದಿಂದ ಕಂಡು ಬರುವ ಕೋಣೆಯೊಳಗಿನ ವಸ್ತುಗಳನ್ನು ಗಮನಿಸುವುದನ್ನು ನಿಲ್ಲಿಸಿ, 'ಈ ಬೆಳಕು ಎಲ್ಲಿಂದ ಬರುತ್ತದೆ?' ಎಂದು ಅದರ ಮೂಲವನ್ನು ನೋಡುವ ತೀವ್ರ ಬಯಕೆಯನ್ನು ಹೊಂದುತ್ತಾನೆ ಎನ್ನೋಣ. ಹಾಗೆ ಮಾಡಲು ಆತ ಪ್ರತಿಫಲಿತ ಕಿರಣವು ಗೋಡೆಯ ಮೇಲೆ ಬೀಳುವ ಸ್ಥಳಕ್ಕೇ ಹೋಗಬೇಕು, ಕಣ್ಣು ತಿರುಗಿಸಿ ಕಿರಣದ ಗುಂಟ ನೋಡಬೇಕು. ಅವನಿಗೆ ಕಾಣುವುದೇನು? ಸೂರ್ಯ! ಆದರೆ ಅವನೀಗ ನೋಡುವುದು ನಿಜವಾದ ಸೂರ್ಯನಲ್ಲ, ಅದರ ಪ್ರತಿಫಲನ ಮಾತ್ರ. ಅಲ್ಲದೇ, ಸೂರ್ಯನು ಕೋಣೆಯ ಹೊರಗೆ ನೆಲದ ಮೇಲೆ ಒಂದು ಕಡೆ ಬಿದ್ದಿರುವಂತೆ ಅವನಿಗೆ ಕಾಣುತ್ತದೆ. ಹೀಗೆ ಹೊರಗೆ ಬಿದ್ದಿರುವ ಸೂರ್ಯನು ಕೋಣೆಯಿಂದ ಬಲಕ್ಕೆ ಅಥವಾ ಎಡಕ್ಕೆ ಇಂತಿಷ್ಟು ಅಡಿ ದೂರವಿದ್ದಾನೆ ಎಂದೂ ಗುರುತಿಸಬಹುದು. ("ಎದೆಯ ಕೇಂದ್ರದಿಂದ ಬಲಕ್ಕೆ ಎರಡಂಕಿಯಲ್ಲಿ ಹೃದಯವಿದೆ" ಎಂದಂತೆ) ಆದರೆ ನಿಜಕ್ಕೂ ಸೂರ್ಯನು ನೆಲದ ಮೇಲಿನ ಆ ಜಾಗದಲ್ಲಿ ಬಿದ್ದಿದ್ದಾನೆಯೇ? ಇಲ್ಲ. ಅದು ಪ್ರತಿಫಲಿತ ಕಿರಣ ಉದಯಿಸುವ ಸ್ಥಳ ಮಾತ್ರ! ನಿಜವಾದ ಸೂರ್ಯನನ್ನು ನೋಡಲು ಅವನೇನು ಮಾಡಬೇಕು? ಪ್ರತಿಫಲಿತ ಕಿರಣವು ಬರುವ ಸರಳರೇಖೆಯ ಗುಂಟ ಕಣ್ಣುಗಳನ್ನು ಹೊಂದಿಸಿ ಅತ್ತಿತ್ತ ಅಲುಗದೇ ತನಗೆ ಕಾಣುತ್ತಿರುವ ಪ್ರತಿಫಲಿತ ಸೂರ್ಯನತ್ತ ಅನುಸರಿಸಬೇಕು.

ಕತ್ತಲೆ ಕೋಣೆಯಲ್ಲಿರುವ ವ್ಯಕ್ತಿ ಕೋಣೆಯೊಳಗೆ ಬಂದ ಪ್ರತಿಫಲಿತ ಕಿರಣದ ಮೂಲ ನೋಡಲು ನಿಶ್ಚಯಿಸಿ ಅಲ್ಲಿರುವ ವಸ್ತುಗಳನ್ನು ಭೋಗಿಸುವ ಅಥವಾ ಅವುಗಳ ಬಗ್ಗೆ ಸಂಶೋಧನೆ ಮಾಡುವ ಹಂಬಲವನ್ನು ಬಿಟ್ಟು ಬಿಡುವಂತೆ ನಿಜವಾದ ಬೆಳಕನ್ನು (ಆತ್ಮವನ್ನು) ತಿಳಿಯಬಯಸುವವನು ಮನೋಜ್ಞಾನವು ಪಂಚೇಂದ್ರಿಯಗಳ ಮೂಲಕ ಮಾತ್ರ ಪ್ರಕಾಶಿಸುವ ವಿವಿಧ ಲೋಕಗಳನ್ನು ಭೋಗಿಸುವ ಮತ್ತು ತಿಳಿಯುವ ಎಲ್ಲ ಪ್ರಯತ್ನವನ್ನು ಬಿಟ್ಟು ಬಿಡಬೇಕು. ಏಕೆಂದರೆ (ಲೌಕಿಕ ಮನುಷ್ಯನಂತೆ) ಬಾಹ್ಯ ವಸ್ತುಗಳನ್ನು ಗುರುತಿಸಿ ಆಸೆ ಪಡುವ ಭ್ರಮಿತನಾದರೆ ಅಥವಾ (ನಮ್ಮ ಆಧುನಿಕ ವಿಜ್ಞಾನಿಗಳಂತೆ) ಅವುಗಳ ಕುರಿತು ಸಂಶೋಧನೆ ಮಾಡುತ್ತ ಅದರಲ್ಲಿ ನಿರತನಾದರೆ ಆತ್ಮವನ್ನು ತಿಳಿಯಲು ಸಾಧ್ಯವಿಲ್ಲ. ಬಾಹ್ಯ ಪಂಚೇಂದ್ರಿಯ ವಿಷಯಗಳ ಬಗ್ಗೆ ವಿಚಾರ ಮಾಡುವುದನ್ನು ಬಿಡುವುದೇ ವೈರಾಗ್ಯ ಅಥವಾ ಆಂತರಿಕ ಪರಿತ್ಯಾಗ. ಪ್ರತಿಫಲಿತ ಕಿರಣವು ಕೋಣೆಯೊಳಗೆ ಎಲ್ಲಿಂದ ಉದಯಿಸುತ್ತದೆ ಎಂಬ ಕಾತರವೂ ಇದೆ. ಈ ಕಾತರವೇ ಸ್ವಾತ್ಮಭಕ್ತಿ. ಅತ್ತಿತ್ತ ಹರಿದಾಡದಂತೆ ಕಿರಣದ ಸರಳರೇಖೆಯ ಗುಂಟ ಕಣ್ಣುಗಳನ್ನು ಹೊಂದಿಸುವಂತೆ 'ನಾನು'-ಅರಿವಿನಿಂದ ವಿಚಲಿತವಾಗದಂತೆ ಗಮನವು ಏಕಾಗ್ರವಾಗಿರಬೇಕು. ಈಗ ಕತ್ತಲ ಕೋಣೆಯ ಮನುಷ್ಯ ಪ್ರತಿಫಲಿತ ಕಿರಣದ ಸರಳ ರೇಖೆಯ ಗುಂಟ ಹೊರಗೆ ಬಿದ್ದಿರುವ ಕನ್ನಡಿ ಚೂರಿನತ್ತ ಚಲಿಸುತ್ತಾನಲ್ಲವೇ? ಈ ಚಲನೆಯು ಹೃದಯದತ್ತ ತನ್ನೊಳಗೆ ಧುಮುಕುವುದಕ್ಕೆ ಸಮಾನವಾಗಿದೆ.

"ನೀರಿನಲ್ಲಿ ಬಿದ್ದ ಏನನ್ನೋ ಹುಡುಕಲು ಧುಮುಕುವಂತೆ ಏಕಾಗ್ರ (ಅಂತರ್ಮುಖಿ) ಮನಸ್ಸಿನಿಂದ ತನ್ನೊಳಗೆ ಧುಮುಕಬೇಕು. ಉಸಿರು ಮತ್ತು ಮಾತುಗಳನ್ನು ನಿಯಂತ್ರಿಸುತ್ತ ಉದಯಿಸುವ ಅಹಮಿನ ಉಗಮ ಸ್ಥಳವನ್ನು ತಿಳಿಯಬೇಕು. ಹೀಗೆ ತಿಳಿಯಿರಿ!"

'ಉಳ್ಳದು ನಾರ್ಪದು', ಪದ್ಯ ೨೮

"ಉಸಿರು ಮತ್ತು ಮಾತುಗಳನ್ನು ನಿಯಂತ್ರಿಸುತ್ತ ತನ್ನೊಳಗೆ ಧುಮುಕಬೇಕು" ಎಂಬ ಪದಗಳನ್ನು ಮಾತ್ರ ಸ್ವೀಕರಿಸಿ ಕೆಲವರು ಉಸಿರು ನಿಯಂತ್ರಣದ (ಪ್ರಾಣಾಯಾಮದ) ಅಭ್ಯಾಸ ಮಾಡತೊಡಗುತ್ತಾರೆ. ಶೋಧದ ಪ್ರಕ್ರಿಯೆಯಲ್ಲಿ ಉಸಿರಾಟವು ನಿಲ್ಲುತ್ತದೆ ಎಂಬುದು ನಿಜವಾದರೂ ಪ್ರಾಣಾಯಾಮದ ಮೂಲಕ ಇದನ್ನು ಸುತ್ತು ಬಳಸಿ ಮಾಡುವುದರ ಅಗತ್ಯವಿಲ್ಲ. ತನಗೆ ಬೆಳಕು ಕೊಡುವ ಮೂಲವನ್ನು ತಿಳಿಯಲು **ಮನಸ್ಸು ಅತ್ಯಂತ ತೀವ್ರ ಹಪಹಪಿಕೆಯಿಂದ ಅಂತರ್ಮುಖಿಯಾಗಿ ತಿರುಗಿದಾಗ ಉಸಿರಾಟವು ಸ್ವಯಂಚಾಲಿತವಾಗಿ ನಿಲ್ಲುತ್ತದೆ.**[೬೯] ಹೊರಗಿನ ವಿಷಯಗಳನ್ನು ಅರಿಯುವುದನ್ನು ಮನಸ್ಸು ಬಿಟ್ಟುಕೊಟ್ಟು ತನ್ನ ಬೆಳಕಿನ ಮೂಲ ರೂಪ (ಆತ್ಮ)ವನ್ನು ಗಮನಿಸತೊಡಗಿದಾಗ ಉಸಿರನ್ನು ಹೊರಗೆ ಬಿಟ್ಟರೆ ಒಳಗೆ ಬಾರದೇ ಹೊರಗೇ ನಿಲ್ಲುತ್ತದೆ. ಹಾಗೆಯೇ ಒಳಗೆ ಎಳೆದಾಗ ಮತ್ತೆ ಹೊರಗೆ ಬಾರದೇ ಒಳಗೇ ಉಳಿಯುತ್ತದೆ! ಇವನ್ನು ಅನುಕ್ರಮವಾಗಿ ಬಾಹ್ಯ ಕುಂಭಕ ಮತ್ತು ಅಂತರಕುಂಭಕ ಎಂದು ಗ್ರಹಿಸಬೇಕು. ಆತ್ಮವಿಚಾರದಲ್ಲಿ ಪ್ರಮಾದದಿಂದಾಗಿ ವಿಚಾರವು

---

೬೯. "ಆದ್ದರಿಂದ ಶುದ್ಧ ಅರಿವಾದ ಹೃದಯ (ಆತ್ಮ)ದಲ್ಲಿ ಮನಸ್ಸನ್ನು (ಗಮನವನ್ನು) ಸ್ಥಿರವಾಗಿಸುವ ಅಭ್ಯಾಸದಿಂದ ವಾಸನಾಕ್ಷಯ ಮತ್ತು ಉಸಿರು ನಿಯಂತ್ರಣ ಎರಡನ್ನೂ ಸ್ವಯಂಚಾಲಿತವಾಗಿ ಸಾಧಿಸಬಹುದು"

'ಉಳ್ಳದು ನಾರ್ಪದು-ಅನುಬಂಧಂ', ಪದ್ಯ ೨೪

ಉದಯಿಸುವವರೆಗೆ ಜಿಜ್ಞಾಸುವಿನಲ್ಲಿ ಈ ಕುಂಭಕವು ಶ್ರಮವಿಲ್ಲದೇ ನಡೆದಿರುತ್ತದೆ. ನಮ್ಮ ದಿನನಿತ್ಯದ ಜೀವನದಲ್ಲಿ ಏನಾದರೂ ನಿಬ್ಬೆರಗಿನ ಸುದ್ದಿ ಇದ್ದಕ್ಕಿದ್ದಂತೆ ಗಮನಕ್ಕೆ ಬಂದಾಗ ಅಥವಾ ಪೂರ್ಣ ಏಕಾಗ್ರತೆಯಿಂದ ಮರೆತ ಸಂಗತಿಯನ್ನು ನೆನಪಿಸಿಕೊಳ್ಳಲು ಪ್ರಯತ್ನಿಸುವಾಗ ಏಕಾಗ್ರತೆಯ ತೀವ್ರತೆಯಿಂದಾಗಿ ಆಗ ಉಸಿರಾಟ ತಾನಾಗಿ ನಿಲ್ಲುವುದನ್ನು ಸ್ವಲ್ಪ ಪರಿಶೋಧಿಸಿದರೆ ಯಾರಿಗೂ ಸ್ಪಷ್ಟವಾಗುವುದಿಲ್ಲವೇ? ಹಾಗೆಯೇ ಮನಸ್ಸು ತನ್ನ ಮೂಲವಾದ ಬೆಳಕಿನ ರೂಪವನ್ನು ನೋಡಲು ತೀವ್ರ ಬಯಕೆಯಿಂದ, ಪ್ರಾಮಾಣಿಕ ಏಕಾಗ್ರತೆಯಿಂದ ತನ್ನೊಳಗೆ ಮಗ್ನವಾಗಿ ಒಳಗೇ ಉಳಿದಾಗ ಉಸಿರಾಟ ತಾನಾಗಿ ನಿಲ್ಲುತ್ತದೆ. ಈ ಕುಂಭಕ ಸ್ಥಿತಿಯಲ್ಲಿ, ಅದು ಎಷ್ಟು ಹೊತ್ತಾದರೂ ಸರಿ, ಜಿಜ್ಞಾಸುವಿಗೆ ಉಸಿರುಗಟ್ಟಿದ (ಅಂದರೆ ಉಸಿರು ಹೊರಗೆ ಬಿಡುವ ಅಥವಾ ಒಳಗೆ ಎಳೆಯುವ ಸೆಳೆತ) ಅನುಭವವಾಗುವುದಿಲ್ಲ. ಆದರೆ ಪ್ರಾಣಾಯಾಮವನ್ನು ಅಭ್ಯಸಿಸುವಾಗ ಕುಂಭಕದ ಕಾಲಮಾತ್ರೆಗಳನ್ನು ಹೆಚ್ಚಿಸಿದರೆ ಉಸಿರುಗಟ್ಟಿದ ಅನುಭವವಾಗುತ್ತದೆ. ತನ್ನ ಉಸಿರಾಟ ನಿಂತಿದೆಯೋ ಇಲ್ಲವೋ ಎಂಬುದಕ್ಕೂ ಲಕ್ಷ ಕೊಡದೇ ಆತ್ಮವಿಚಾರದಲ್ಲಿ ತಲ್ಲೀನನಾಗಿದ್ದರೆ ಆ ಜಿಜ್ಞಾಸುವಿನ ಕುಂಭಕವು ಅನೈಚ್ಛಿಕವೂ ಹೆಣಗಾಟರಹಿತವೂ ಆಗಿರುತ್ತದೆ. ಆದರೂ ಕೆಲವು ಸಾಧಕರು ಆ ಹೊತ್ತಿನಲ್ಲಿ ಉಸಿರು ನಿಂತಿದೆಯೋ ಎಂದು ತಿಳಿಯಲು ಯತ್ನಿಸುತ್ತಾರೆ. ಇದು ತಪ್ಪು. ಏಕೆಂದರೆ ಉಸಿರಾಟದ ಮೇಲೆ ಗಮನ ಹರಿದು ಆತ್ಮವಿಚಾರವು ಕಳೆದು ಹೋಗುತ್ತದೆ, ಅನೇಕ ವಿಚಾರಗಳು ಸಿಡಿದೆದ್ದು ಸಾಧನೆಯ ಧಾರೆಗೆ ಅಡ್ಡಿಯುಂಟಾಗುತ್ತದೆ. ಅದಕ್ಕಾಗಿಯೇ ಶ್ರೀ ಭಗವಾನರು ಬೋಧಿಸಿದ್ದು: "ಏಕಾಗ್ರ (ಅಂತರ್ಮುಖಿ) ಮನಸ್ಸಿನಿಂದ ಉಸಿರು ಮತ್ತು ಮಾತುಗಳನ್ನು ನಿಯಂತ್ರಿಸಿ." ಈ ಪದ್ಯದಲ್ಲಿ 'ಏಕಾಗ್ರ ಮನಸ್ಸಿನಿಂದ' ಎಂದು ಮೂರು ಬಾರಿ ಬಳಸಿ ತಿಳಿದುಕೊಳ್ಳುವುದು ಉತ್ತಮ. 'ಏಕಾಗ್ರ ಮನಸ್ಸಿನಿಂದ ಉಸಿರಾಟ ನಿಯಂತ್ರಿಸಿ, ಏಕಾಗ್ರ ಮನಸ್ಸಿನಿಂದ ಒಳಗೆ ಧುಮುಕಿ, ಏಕಾಗ್ರ ಮನಸ್ಸಿನಿಂದ ಉದಯಸ್ಥಾನ ತಿಳಿಯಿರಿ".

ಪ್ರತಿಫಲಿತ ಕಿರಣದ ಗುಂಟ ತನ್ನ ಕಣ್ಣುಗಳನ್ನು ಹೊಂದಿಸಿ ನಡೆಯುವಾತ ಕಿರಣದ ಉದ್ದ (ಅಂತರ)ವನ್ನು ಕಡಿಮೆ ಮಾಡುವುದಿಲ್ಲವೇ? ಆತ ಮುಂದುವರೆದಂತೆ ಕಿರಣದ ಉದ್ದ ಕಡಿಮೆಯಾಗುವಂತೆ ಜಿಜ್ಞಾಸುವು ಮನಸ್ಸಿನ ಮೂಲವನ್ನು ಪ್ರಾಮಾಣಿಕವಾಗಿ ಹುಡುಕುತ್ತ ಮುಂದುವರೆದಂತೆ ಮನಸ್ಸಿನ ಹಿಗ್ಗುವ ವೃತ್ತಿಯು ಹೆಚ್ಚೆಚ್ಚು ಕುಗ್ಗುತ್ತದೆ.

"...(ಪ್ರತಿಫಲಿತ) ಕಿರಣದ ಗುಂಟ ವಿಚಾರವು ಹೆಚ್ಚೆಚ್ಚು ಆಳ ಒಳಗೆ ಹೋದಂತೆ ಅದರ ಉದ್ದವು ಹೆಚ್ಚೆಚ್ಚು ಕಡಿಮೆಯಾಗುತ್ತದೆ. 'ನಾನು' ಎಂಬ ಕಿರಣ ಸತ್ತಾಗ ಪ್ರಕಾಶಿಸುವುದೇ 'ನಾನು' ಎಂಬ ಜ್ಞಾನ".

'ಆತ್ಮ ವಿಚಾರ ಪತಿಕಂ', ಪದ್ಯ ೯

ವ್ಯಕ್ತಿಯು ಕನ್ನಡಿ ಚೂರಿನ ತೀರ ಹತ್ತಿರಕ್ಕೆ ಅಂತೂ ತಲುಪಿದಾಗ, ಆತ ಪ್ರತಿಫಲಿತ ಕಿರಣದ ಉಗಮ ಸ್ಥಾನವನ್ನೇ ತಲುಪಿದ್ದಾನೆ ಎನ್ನಬಹುದು. ಜಿಜ್ಞಾಸುವು ತನ್ನೊಳಗೆ ಧುಮುಕಿ ತಾನು ಉದಯಿಸಿದ ಮೂಲ (ಹೃದಯ)ವನ್ನು ತಲುಪುವುದಕ್ಕೆ ಇದು ಸಮಾನವಾಗಿದೆ. ಈಗ ಪ್ರತಿಫಲಿತ ಕಿರಣದ ಉದ್ದ ಏನೂ ಇಲ್ಲವಾದ ಸ್ಥಿತಿಗೆ ವ್ಯಕ್ತಿ ತಲುಪುವುದಿಲ್ಲವೇ? ಈ ಸ್ಥಿತಿಯಲ್ಲಿ ಆತ ಕನ್ನಡಿಗೆ ತೀರಾ ಹತ್ತಿರವಿರುವುದರಿಂದ ಪ್ರತಿಫಲನವೇ ಸಾಧ್ಯವಾಗುವುದಿಲ್ಲ. ಅದೇ ರೀತಿ, ಆತ್ಮವಿಚಾರದ ತೀವ್ರ ಪ್ರಯತ್ನದಿಂದ ಜಿಜ್ಞಾಸುವು ತನ್ನೊಳಗೆ ಆಳಕ್ಕೆ ಇನ್ನೂ ಆಳಕ್ಕೆ ಧುಮುಕುವುದರಿಂದ ಮೂಲಕ್ಕೆ ಎಷ್ಟು

ಹತ್ತಿರವಿರುತ್ತಾನೆಂದರೆ ಅಹಮಿನ ಉದಯದ ಸಾಧ್ಯತೆ ಅಣುವಷ್ಟೂ ಸಾಧ್ಯವಾಗುವುದಿಲ್ಲ. ತನ್ನ ದೇಹಾತ್ಮಬುದ್ಧಿಯ **ಮಹಾವಿಸರ್ಜನೆ (ಕರಗುವಿಕೆ)ಯಲ್ಲಿ ಆತ ತನ್ಮಯನಾಗುತ್ತಾನೆ.** ಅದು ಇದುವರೆಗೆ ಅವನ ವಿಚಾರದ ಗುರಿಯಾಗಿತ್ತು. ಶ್ರೀ ಭಗವಾನರು 'ಉಪದೇಶ ಉಂದಿಯಾರ್'ನ ಪದ್ಯ ೧೯ರಲ್ಲಿ 'ನಾನು ಸಾಯುವುದು' ಎಂದು ಉಲ್ಲೇಖಿಸಿದುದು ಇದೇ ವಿಸರ್ಜನೆ.

ಸೂರ್ಯನ ಪ್ರತಿಫಲಿತ ಕಿರಣದ ಬರೀ ಮೂಲವನ್ನು ಅರಸುತ್ತ ಹೊರಟ ವ್ಯಕ್ತಿ ಕತ್ತಲ ಕೋಣೆಯನ್ನು ಬಿಟ್ಟ ನಂತರ ಈಗ ಮುಕ್ತ ಬಯಲಿನಲ್ಲಿ ಪ್ರತಿಫಲಿತ ಕಿರಣದ ಅಭಾವದಿಂದ ಉಂಟಾದ ಶೂನ್ಯ ಸ್ಥಿತಿಯಲ್ಲಿ ನಿಲ್ಲುವುದಿಲ್ಲವೇ? ಹೃದಯಾಕಾಶದಲ್ಲಿ ಅಹಮಿನ ಅಭಾವದಿಂದಾಗಿ ಬರೀ ಆತ್ಮವಿಚಾರದ ಮೂಲಕ ಉಂಟಾದ ಮಹಾಶೂನ್ಯದ ಸ್ಥಿತಿಯಲ್ಲಿ ಇರುವುದೆಂದರೆ ಇದೇ. ಕೋಣೆಯಿಂದ ಮುಕ್ತ ಬಯಲಿಗೆ ಬಂದ ವ್ಯಕ್ತಿಯ ಕಣ್ಣು ಕುಕ್ಕಿದಂತಾಗಿ ಗೋಳಾಡುತ್ತಾನೆ. 'ಇಷ್ಟು ದೂರ ನನಗೆ ದಾರಿ ತೋರಿದ ಸೂರ್ಯ (ಪ್ರತಿಫಲಿತ ಸೂರ್ಯ) ಈಗ ಕಳೆದುಹೋಗಿದ್ದಾನೆ". ಈ ಗಳಿಗೆಯಲ್ಲಿ ಮುಕ್ತ ಬಯಲಿನಲ್ಲಿ ಇರುವ ಅವನ ಗೆಳೆಯ ಸಮಾಧಾನದ ನುಡಿ ಆಡುತ್ತಾನೆ: "ಇದುವರೆಗೆ ನೀನು ಎಲ್ಲಿದ್ದೆ? ಕತ್ತಲ ಕೋಣೆಯಲ್ಲಿ ಇರಲಿಲ್ಲವೇ? ಈಗ ಎಲ್ಲಿದ್ದೀಯ? ಮುಕ್ತ ಬಯಲಿನಲ್ಲಿ ಇಲ್ಲವೇ? ಕತ್ತಲ ಕೋಣೆಯಲ್ಲಿದ್ದಾಗ ನಿನಗೆ ದಾರಿ ತೋರಿದ್ದು ಬೆಳಕಿನ ಒಂದು ತೆಳು ಕಿರಣವಷ್ಟೇ ಅಲ್ಲವೇ? ಆದರೆ ಇಲ್ಲಿ (ಈ ವಿಶಾಲವಾದ ಮುಕ್ತ ಬಯಲಿನಲ್ಲಿ) ಬೆಳಕಿನ ಕಿರಣಗಳು ಅಸಂಖ್ಯಾತವಾಗಿ ನಿಸ್ಸೀಮ ರಾಶಿಯಾಗಿ ಇಲ್ಲವೇ? ನೀನು ಹಿಂದೆ ನೋಡಿದ್ದು ಪ್ರತಿಫಲಿತ ಕಿರಣವೇ ಹೊರತು ನೇರ ಸೂರ್ಯಕಿರಣವನ್ನಲ್ಲ. ಈಗ ನಿನ್ನ ಅನುಭವಕ್ಕೆ ಬರುತ್ತಿರುವುದು ನೇರ (ಸಾಕ್ಷ) ಸೂರ್ಯಕಿರಣ. ಈಗ ನೀನಿರುವುದು ಬೆಳಕಿನ ನಿಸ್ಸೀಮ ಆಕಾಶವಾದ್ದರಿಂದ, ಪ್ರತಿಫಲಿತ ಕಿರಣ ಮಾಯವಾಗಿ ಉಂಟಾದ ಶೂನ್ಯದಿಂದಾಗಿ ಕತ್ತಲೆಯು ಅಸ್ತಿತ್ವಕ್ಕೆ ಬರುವುದು ಸಾಧ್ಯವೇ? ಈ ಮಾಯವಾಗುವಿಕೆಯಿಂದ ಹಾನಿಯಾಯಿತೇ? ಈ ಮಾಯವಾಗುವಿಕೆಯೇ ನಿಜವಾದ ಬೆಳಕು, ಇದು ಕತ್ತಲೆಯಲ್ಲ ಎಂದು ತಿಳಿ".

ಅದೇ ರೀತಿ, ಅಹಮಿಕೆಯ ನಾಶದಿಂದ ಉಂಟಾದ ಮಹಾಶೂನ್ಯದ ಅನುಭವದಿಂದಾಗಿ ಜಿಜ್ಞಾಸುವು ಸ್ವಲ್ಪ ಹಿಮ್ಮೆಟ್ಟುತ್ತಾನೆ: "ಅಯ್ಯೋ! ಇದುವರೆಗೆ ನನ್ನ ಸಾಧನೆಯಲ್ಲಿ ದಾರಿದೀಪವಾಗಿ ಗಮನಿಸುತ್ತಿದ್ದ 'ನಾನು'–ಅರಿವೂ ಕೂಡ (ಅಹಂ) ಕಳೆದು ಹೋಯಿತು! ಹಾಗಾದರೆ ಆತ್ಮನೆಂಬ ವಸ್ತುವೇ ಇಲ್ಲವೇ?" ಇದೇ ಗಳಿಗೆಯಲ್ಲಿ, ಅವನ ಹೃದಯದಲ್ಲಿ ಸದಾ ಪ್ರಕಾಶಿಸುವ ಸದ್ಗುರುವು ಹೀಗೆ ತೋರಿಸಿಕೊಡುತ್ತಾನೆ: "ಕೇವಲ ಅಣುರೂಪಿಯಾದ ಪ್ರತಿಫಲಿತ ಅರಿವು ಮಾತ್ರವಾಗಿರುವ ಅಹಮಿನ ನಾಶ ನಿಜಕ್ಕೂ ಒಂದು ಹಾನಿಯಾಗಬಹುದೇ? ಅದರ ಮೊದಲಿನ ಅಸ್ತಿತ್ವವಷ್ಟೇ ಅಲ್ಲ, ಅದು ಮಾಯವಾಗಿರುವುದರಿಂದ ಉಂಟಾದ ಈಗಿನ ಮಹಾಶೂನ್ಯದ ಬಗ್ಗೂ ನಿನಗೆ ಸ್ಪಷ್ಟ ಅರಿವಿಲ್ಲವೇ? ಆದ್ದರಿಂದ ಶೂನ್ಯವನ್ನು 'ಇದು ಶೂನ್ಯ'–ವೆಂದು ತಿಳಿಯುವ **ನೀನು ಮಾತ್ರ ಸತ್ಯವಾದ ಜ್ಞಾನ, ನೀನು ಶೂನ್ಯವಲ್ಲ**[೨೦] ಎಂದು ತಿಳಿ". ಕ್ಷಣ ಮಾತ್ರದಲ್ಲಿ ಹೃದಯದಲ್ಲಿ

೨೦. "...ನಾನು (ಆತ್ಮ) ಎಂಬುದೇ ಸತ್ಯ ಜ್ಞಾನ; ಇದು ಶೂನ್ಯವಲ್ಲ ಎಂದು ತಿಳಿಯಿರಿ"
'ಉಳ್ಳದು ನಾರ್ಪದು', ಪದ್ಯ ೧೨

ಹೃದಯವಾಗಿ (ಸ್ಫುರಣವಾಗಿ ಹೊಳೆದು) ಮುಟ್ಟಿ ತನ್ನದೇ ಇರುವು–ಅರಿವಿನ ಪ್ರಕಾಶದ ನೇರ ಅನುಭವ ಉಂಟಾಗುತ್ತದೆ. 'ಎಲ್ಲಿಂದ ನಾನು?' ಅಥವಾ 'ನಾನು ಯಾರು?' ಎಂಬ ಹುಡುಕಾಟದಿಂದ ಪ್ರಾರಂಭಿಸಿದ ಜಿಜ್ಞಾಸುವು ಈಗ ಅದ್ವೈತವಾದ ಆತ್ಮಜ್ಞಾನವನ್ನು, **'ನಾನು ಇದ್ದೇನೆ ಅದೇ ನಾನು'** ಎಂಬ ಸತ್ಯಜ್ಞಾನವನ್ನು, ಯಾವುದೇ ನಿರ್ದಿಷ್ಟ ದೇಶ ಕಾಲದ ಇತಿಮಿತಿಯಿರದಂತೆ ಪಡೆಯುತ್ತಾನೆ.

'ನಾನು' ಅರಿವಿಗೆ ಅಂಟಿಕೊಂಡು ತನ್ಮೂಲಕ ಅದರ ಮೇಲೆ ಏಕಾಗ್ರತೆಯ ತೀವ್ರತೆ ಹೆಚ್ಚಿಸಿಕೊಳ್ಳುವುದೇ ಒಳಗಿನ ಆಳಕ್ಕೆ ಧುಮುಕುವುದು. ಹೀಗೆ ಒಳಗೆ ಧುಮುಕದೇ ಅನೇಕ ಜನ ಆತ್ಮಶೋಧದಲ್ಲಿ ತೊಡಗಿದ್ದೇವೆಂದು ಭಾವಿಸಿಕೊಂಡು 'ನಾನು ಯಾರು?' ಅಥವಾ 'ಎಲ್ಲಿಂದ ನಾನು?' ಎಂದು ಮಾನಸಿಕವಾಗಿ ಅಥವಾ ಶಾಬ್ದಿಕವಾಗಿ ಬರೀ ಪುನರುಚ್ಚರಿಸುತ್ತ ಗಂಟೆಗಟ್ಟಲೆ ಕುಳಿತುಕೊಳ್ಳುತ್ತಾರೆ. ಇನ್ನು ಕೆಲವರು ಆತ್ಮಶೋಧಕ್ಕೆ ಕುಳಿತಾಗ ವಿಚಾರಗಳನ್ನು ಎದುರಿಸುತ್ತ ಶ್ರೀ ಭಗವಾನರು ಬೋಧಿಸಿದ ಕೆಳಗಿನ ಪ್ರಶ್ನೆಗಳನ್ನು ಕೊನೆಯಿಲ್ಲದಂತೆ ಮಾನಸಿಕವಾಗಿ ಪುನರಾವರ್ತಿಸುತ್ತಾರೆ: "ಈ ವಿಚಾರಗಳು ಯಾರಿಗೆ ಬರುತ್ತವೆ? ನನಗೆ; ನಾನು ಯಾರು?" ಕೆಲವೊಮ್ಮೆ ಮುಂದಿನ ವಿಚಾರ ಯಾವಾಗ ಬಂದು ತಾವು ಈ ಪ್ರಶ್ನೆಗಳನ್ನು ಅದರತ್ತ ತೂರಿಬಿಟ್ಟೇವೆಂದು ಕಾಯುತ್ತಾರೆ! ಇದೂ ಕೂಡ ಅರ್ಥಹೀನ. ಒಂದು ವಿಚಾರದ ನಂತರ ಇನ್ನೊಂದನ್ನೂ ಕರೆಯುತ್ತಾ ನಾವೇನು ನ್ಯಾಯಾಲಯ ನಡೆಸಲು ಕುಳಿತಿದ್ದೇವೆಯೋ! ಒಳಗೆ ಧುಮುಕುವ ಸಾಧನೆ ಇದೇ ಏನು! ಆದ್ದರಿಂದ 'ಮುಂದಿನ ವಿಚಾರ ಯಾವುದೆಂದು" ನಾವು ಕಾಯುತ್ತ ಇರಬಾರದು. ಸುಮ್ಮನೇ ಈ ರೀತಿ ಪ್ರಶ್ನೆ ಕೇಳುತ್ತಿರುವುದು ಆತ್ಮವಿಚಾರವಲ್ಲ. ಹೀಗೆ ವಿಚಾರದ ಅಲೆಗಳ ಮೇಲ್ಮೈ ಮೇಲೆ ತೇಲುತ್ತ, ಈ ಪ್ರಶ್ನೆಗಳ ಮೇಲೆ ಮನಸ್ಸು ನೆಲೆಗೊಳಿಸುವ (ಏಕಾಗ್ರ ಮನಸ್ಸಿನಿಂದ ಇರುವು–ಅರಿವಿನ ವಿಚಾರದಲ್ಲಿ ಒಳಗೆ ಧುಮುಕಿ, ಅದರ ಮೂಲಕ ಮನಸ್ಸು, ಉಸಿರಾಟ ಮತ್ತು ದೇಹ ಇಂದ್ರಿಯಗಳ ಚಟುವಟಿಕೆ ನಿಯಂತ್ರಿಸುವ ಬದಲು) ಸಾಧಕರ ಬಗ್ಗೆ ಶ್ರೀ ಭಗವಾನರು ಹೇಳುತ್ತಾರೆ: "ತಾನು ತಾನಾಗಿ ಸದಾ ಕಾಲ ಆತ್ಮವಾಗಿ ಇದ್ದರೂ 'ನಾನು ಯಾರು?' ಅಥವಾ 'ಎಲ್ಲಿಂದ ನಾನು?' ಎಂದು ತನಗೆ ತಾನೇ ಕೇಳುವವನನ್ನು 'ನಾನು ಯಾರು?' 'ನಾನು ಎಲ್ಲಿದ್ದೇನೆ?' ಎಂದು ಗಳಹುವ ಕುಡುಕನೊಂದಿಗೆ ಹೋಲಿಸಿ".

'ಏಕಾತ್ಮ ಪಂಚಕಂ', ಪದ್ಯ ೨

ಮತ್ತೂ ಮುಂದೆ, ಅವರು ಕೇಳುತ್ತಾರೆ:

" 'ನಾನು' ಉದಯಿಸದ ಸ್ಥಿತಿಯನ್ನು, ಅಹಂಕಾರರಹಿತ ಸ್ಥಿತಿಯನ್ನು (ಮಹಾಶೂನ್ಯವನ್ನು) ಪಡೆಯುವುದು ಹೇಗೆ?–(ಹೀಗೆ ಮೇಲೆ ತೇಲುವ ಬದಲು) 'ನಾನು' ಉದಯಿಸುವ ಸ್ಥಳವನ್ನು ಹುಡುಕದಿದ್ದರೆ, ಅಹಂಕಾರ ರಹಿತತೆಯನ್ನು ಪಡೆಯದಿದ್ದರೆ 'ಸೋಽಹಂ' (ನಾವು ಅದೇ) ಭಾವದ ಆತ್ಮಸ್ಥಿತಿಯಲ್ಲಿ ನೆಲೆಸುವುದಾದರೂ ಹೇಗೆ?"

'ಉಳ್ಳದು ನಾರ್ಪದು', ಪದ್ಯ ೨೭

ಆದ್ದರಿಂದ **ನಾವು ಅಭ್ಯಾಸ ಮಾಡಬೇಕಾದ ಸಾಧನೆ ಇಷ್ಟೇ–'ನಾನು'–ಭಾವವನ್ನು ನೆನಪಿಟ್ಟುಕೊಂಡು ಸುಮ್ಮನೆ ಇರುವುದು.** ಆತ್ಮವಿಚಾರದ ಅವಧಿಯಲ್ಲಿ ಎಚ್ಚರ ಸಡಿಲವಾದಾಗ ಮಾತ್ರ ವಿಚಾರಗಳು ಉದಯಿಸುತ್ತವೆ. ಇದು ಅದರ ಸೂಚನೆ. ಬೇರೆ ಶಬ್ದಗಳಲ್ಲಿ,

ವಿಚಾರಗಳು ಉದಯಿಸುತ್ತವೆ ಎಂದರೆ ಆತ್ಮವಿಚಾರ ಕಳೆದಿದೆ ಎಂದರ್ಥ. ವಿಚಾರ–ಗಮನದಿಂದ ಆತ್ಮವಿಚಾರದತ್ತ ಪುನಃ ಚಲಿಸಲು ಸಹಾಯವಾಗಲಿ ಎಂದು ಮಾತ್ರ ಶ್ರೀ ಭಗವಾನರು 'ಈ ವಿಚಾರಗಳು ಯಾರಿಗೆ ತೋರುತ್ತವೆ?' ಎಂದು ಪ್ರಶ್ನಿಸಲು ಬೋಧಿಸಿದ್ದಾರೆ. ಉತ್ತರವಾದ 'ನನಗೆ' ಎಂಬುದು 'ನಾನು' ಎಂಬುದರ ಚತುರ್ಥಿ ವಿಭಕ್ತಿ ರೂಪವಾದ್ದರಿಂದ ಇದು ನಮಗೆ ಸುಲಭವಾಗಿ 'ನಾನು'–ಭಾವದ ಪ್ರಥಮಾ ವಿಭಕ್ತಿಯನ್ನು ನೆನಪಿಸುತ್ತದೆ. 'ಈ ವಿಚಾರ ಮಾಡುವುದು ಯಾರು?' ಎಂದು ಪ್ರಶ್ನಿಸಿದರೂ 'ನಾನು'–ಭಾವದ ಪ್ರಥಮಾ ವಿಭಕ್ತಿಯೇ ಉತ್ತರವಾಗುವುದರಿಂದ, ಗಮನಕ್ಕೆ ಬಾರದೇ ಕಳೆದು ಹೋದ, ಆತ್ಮವಿಚಾರ ನೇರವಾಗಿ ಮರಳುವುದಲ್ಲವೇ? ಆತ್ಮವಿಚಾರವನ್ನು ಮರಳಿ ಪಡೆಯುವುದೇ ಆತ್ಮನಾಗಿ ಇರುವುದು (ನೆಲೆಸುವುದು). ಇಂತಹ 'ಇರುವಿಕೆ' ಮಾತ್ರ ಸರಿಯಾದ ಸಾಧನೆ![೭೧] **ಸಾಧನೆ ಎಂದರೆ ಮಾಡುವುದಲ್ಲ, ಇರುವುದು!**

ಕೆಲವರು ತಕರಾರು ಮಾಡುತ್ತಾರೆ: "ನಿದ್ದೆಯಿಂದ ಅಹಮಿನ ಉದಯವೇ ನಮ್ಮ ಗಮನ ತಪ್ಪಿಸುವಷ್ಟು ನಿಗೂಢವಾಗಿರುವಾಗ, ಅದು ಎಲ್ಲಿಂದ ಉದಯಿಸುತ್ತದೆ ಎಂದು ನೋಡುವುದಾದರೂ ಹೇಗೆ? ಇದು ಅಸಾಧ್ಯವೆಂದು ತೋರುತ್ತದೆ!" ನಿಜ, ನಿದ್ದೆಯಲ್ಲಿ ಮನಸ್ಸೇ ಇಲ್ಲದಿರುವಾಗ, ಗಮನ ಹರಿಸುವ ಮನಸ್ಸಿನ ಪ್ರಯತ್ನವೂ ಇರುವುದಿಲ್ಲ! ಸಾಮಾನ್ಯ ಜನರಿಗೆ 'ಇರುವಿಕೆ'ಯ ಜ್ಞಾನದ ಪರಿಚಯವೇ ಇರುವುದಿಲ್ಲ, 'ಮಾಡುವಿಕೆ'ಯ (ಅಂದರೆ, ತಾವು ಪ್ರಯತ್ನ ಪಡುವ) ಜ್ಞಾನ ಮಾತ್ರ ಇರುತ್ತದೆ. ಅಂಥವರಿಗೆ ನಿದ್ದೆಯಿಂದ ಅಹಮಿನ ಉದಯ ತಿಳಿಯುವುದು ಅಸಾಧ್ಯ. ಅವರು ಅತ್ಯಗತ್ಯವೆಂದು ಭಾವಿಸುವ ಪ್ರಯತ್ನವೇ ನಿದ್ದೆಯಲ್ಲಿ ಇಲ್ಲದಿರುವಾಗ ನಿದ್ದೆಯಿಂದಲೇ ಶೋಧ ಪ್ರಾರಂಭಿಸುವುದಕ್ಕೆ ಅವರು ಅಶಕ್ತರು! ಆದರೆ, ಇಡೀ ಜಾಗೃತ ಸ್ಥಿತಿಯೇ ಅಹಮಿನ ಬರೀ ಆಟವಾಗಿರುವುದರಿಂದ, ಮತ್ತು ಇಲ್ಲಿ ಮನಸ್ಸು ಪ್ರಯತ್ನ ಪಡುವುದು ಪ್ರತಿಯೊಬ್ಬರ ಅನುಭವವಾಗಿರುವುದರಿಂದ; ಕನಿಷ್ಠ ಜಾಗೃತ ಸ್ಥಿತಿಯಲ್ಲಾದರೂ 'ನಾನು ಇಂತಿಂಥವನು' ಎಂಬ ರೂಪದಲ್ಲಿ ಪ್ರಕಾಶಿಸುವ ಹುಸಿ–'ನಾನು'ವಿನತ್ತ ತಿರುಗಿ ಗಮನಿಸುವುದು ಸಾಧ್ಯ. "ಒಳಮುಖವಾಗಿ ತಿರುಗಿ, ನಿನ್ನನ್ನು ನೀನೇ ಪ್ರತಿದಿನ ನೋಡುತ್ತಿರು. ಸತ್ಯವು ತಿಳಿಯುತ್ತದೆ. ಓ ನನ್ನ ಅರುಣಾಚಲ, ತಾವು ನನಗೆ ಹೀಗೆ ಹೇಳಿದಿರಿ".

'ಶ್ರೀ ಅರುಣಾಚಲ ಅಕ್ಷರಮಣಮಾಲೈ', ಪದ್ಯ ೪೪

ಅಭ್ಯಾಸಕ್ಕೆ ಕುಳಿತಾಗ ಜಾಗೃತ ಸ್ಥಿತಿಯ ವಿಶ್ರಾಂತಿ ಅವಧಿಯಲ್ಲಿ ಮಾತ್ರ ಶೋಧ ಶುರುವಾಗುತ್ತದೆ. ಯಾವುದಾದರೂ ವಸ್ತುವನ್ನು ಹೆಸರಿಸಿದಾಗ ಆ ವಸ್ತುವು ನೆನಪಾಗುವಂತೆ, 'ನಾನು' ಎಂದು (ಸರ್ವನಾಮವನ್ನು) ಹೆಸರಿಸಿ ವಿಚಾರ ಮಾಡಿದಾಗ ಉತ್ತಮ ಪುರುಷ ಭಾವವು ಪ್ರತಿಯೊಬ್ಬರಿಗೆ ನೆನಪಾಗುವುದಿಲ್ಲವೇ? ಈ ಉತ್ತಮ ಪುರುಷ ಭಾವವು ಕೇವಲ ಅಹಂ, ಹುಸಿ–'ನಾನು' ಅರಿವು, ಆಗಿದ್ದರೂ ತೊಂದರೆಯಿಲ್ಲ. ಮಧ್ಯಮ ಮತ್ತು

---

೭೧. "ನಮ್ಮ ರಮಣ ಪ್ರಭುಗಳು ಅತಿ ದೊಡ್ಡ, ಅತಿ ಶಕ್ತಿಯುತ ತಪಸ್ಸೆಂದು ನಮಗೆ ಸ್ಥಿರವಾಗಿ ಬೋಧಿಸುವುದು ಇಷ್ಟು ಮಾತ್ರ, 'ಸುಮ್ಮನೆ ಇರಿ', (ಧ್ಯಾನ, ಯೋಗ, ಮುಂತಾದ) ಬೇರೇನೂ ಅಲ್ಲ. ಮನಸ್ಸು ಮಾಡಬೇಕಾದ ಕರ್ತವ್ಯ ಇದೇ".

'ಗುರು ವಾಚಕ ಕೋವೈ', ಪದ್ಯ ೭೭೩

ಪ್ರಥಮ ಪುರುಷಗಳಿಂದ ವಿಚಾರವನ್ನು ಹಿಂತೆಗೆದುಕೊಂಡು ಉತ್ತಮ ಪುರುಷಕ್ಕೆ ಅಂಟಿಕೊಳ್ಳುವುದು ಇದು ಮಾತ್ರ ಸಾಧನೆ. ಉತ್ತಮ ಪುರುಷ ಭಾವದ ಮೇಲೆ ಗಮನ ತಿರುಗಿದಾಗ ಇತರ ವಿಚಾರಗಳು ಮಾಯವಾಗುವುದು ಮಾತ್ರವಲ್ಲ, ಉದಯಿಸಿ ವಿಸ್ತರಿಸುವ ಹುಸಿ–'ನಾನು' ಅರಿವೂ ಕೂಡ ಕುಗ್ಗ ತೊಡಗುತ್ತದೆ.

"(ಮಧ್ಯಮ ಮತ್ತು ಪ್ರಥಮ ಪುರುಷದ) ಇತರ ವಸ್ತುಗಳನ್ನು ಮಾತ್ರ ತಿಳಿಯುತ್ತ ಹೊರಗೆ ಅಲೆದಾಡುವ ಮನಸ್ಸು, ಅಹಂ ತನ್ನದೇ ಸ್ವರೂಪವನ್ನು ಗಮನಿಸತೊಡಗಿದಾಗ ಇತರ ಎಲ್ಲ ವಸ್ತುಗಳು ಮಾಯವಾಗುತ್ತವೆ ಮತ್ತು ತನ್ನ ನಿಜಸ್ವರೂಪ (ಆತ್ಮ)ವನ್ನು ಅನುಭವಿಸಿ ಹುಸಿ–'ನಾನು' ಕೂಡ ಸಾಯುತ್ತದೆ".

ಗುರು ವಾಚಕ ಕೋವೈ, ಪದ್ಯ ೧೯೩

"ಚಂಚಲವಾದ ಮನಸ್ಸು ಉತ್ತಮ ಪುರುಷದತ್ತ ತಿರುಗಿದಾಗ, ಉತ್ತಮ ಪುರುಷವು (ಅಹಂ) ಇಲ್ಲವಾಗುತ್ತದೆ, ಮತ್ತು ಆಗ ನಿಜವಾಗಿಯೂ ಇರುವುದು ಪ್ರಕಾಶಿಸುತ್ತದೆ..."

'ಆತ್ಮ ವಿಚಾರ ಪತಿಕಂ', ಪದ್ಯ ೬

"ಉತ್ತಮ ಪುರುಷದತ್ತ ಗಮನ ಹರಿಸುವುದು ಆತ್ಮಹತ್ಯೆಗೆ ಸಮಾನ..."

'ಆತ್ಮ ವಿಚಾರ ಪತಿಕಂ', ಪದ್ಯ ೭

ಶ್ರೀ ಭಗವಾನರು ಮಾಡಿದ ಮಹಾದರ್ಶನವು ಇದೇ. ವೇದಾಂತವನ್ನು ಸುಲಭವಾಗಿ ಪ್ರಾಯೋಗಿಕ ಅನುಭವಕ್ಕೆ ಬರುವಂತೆ ಅಧ್ಯಾತ್ಮ ಸಾಧಕರ ಲೋಕಕ್ಕೆ ಅವರು ಅನುಗ್ರಹಿಸಿದ ಅಮೂಲ್ಯ ವರದಾನ ಇದೇ.

ರಬ್ಬರಿನ ಚೆಂಡು[೨೨] ಮೆಟ್ಟಿಲುಗಳಿಂದ ಕೆಳಗೆ ಕುಪ್ಪಳಿಸುವಾಗ ವೇಗ ಹೆಚ್ಚುವಂತೆ, ಉತ್ತಮ ಪುರುಷದ ಅರಿವಿಗೆ ಅಂಟಿಕೊಳ್ಳುವ ಏಕಾಗ್ರತೆಯ ತೀವ್ರತೆ ಹೆಚ್ಚಾದಂತೆ ಮೊದಲ ವಿಚಾರವು (ಅಹಂ) ಕುಗ್ಗುವ ವೇಗವೂ ಹೆಚ್ಚುತ್ತದೆ, ಕಡೆಗೆ ತನ್ನ ಮೂಲದಲ್ಲಿ ವಿಲೀನವಾಗುತ್ತದೆ. ಈಗ ವಿಲೀನವಾಗುವುದು 'ನಾನು ಇಂತಿಂಥವನು' ಭಾವದ ಉಪಾಧಿ (ವಿಶ್ಲೇಷಣ) ಮಾತ್ರ. ಇದು ಜಾಗೃತವಾಗುವ ವೇಳೆಯಲ್ಲಿ, 'ನಾನು ಇದ್ದೇನೆ' ಭಾವದಲ್ಲಿ ನಿದ್ದೆಯಲ್ಲೂ ಇರುವ ಶುದ್ಧ ಇರುವು–ಅರಿವಿನೊಂದಿಗೆ 'ನಾನು ಇಂತಿಂಥವನು', 'ನಾನು ಇದು' ಅಥವಾ 'ನಾನು ಅದು' ರೂಪದಲ್ಲಿ ಮಿಶ್ರವಾಗಿರುತ್ತದೆ (ಬೆರಕೆಯಾಗಿರುತ್ತದೆ). ಅಭ್ಯಾಸದ ಪ್ರಾರಂಭದಲ್ಲಿ ಸಾಧಕನ ಅನುಭವಕ್ಕೆ ಬರುವುದು ಈ ಅಹಮಿನ ಜಾರುವಿಕೆ ಮಾತ್ರ. ಜಿಜ್ಞಾಸುವು ಅಹಮಿನ ಆಟವೇ ಆದ ಜಾಗೃತ ಸ್ಥಿತಿಯಿಂದ ಅಹಮಿನ ಮೂಲಕ್ಕೆ ಇಳಿಯುವುದರಿಂದ ಪ್ರಾರಂಭಿಕ ಹಂತದಲ್ಲಿ ಅದರ ನಿವಾರಣೆ ಮಾತ್ರ ಅವನಿಗೆ ಗುರುತು

---

೨೨. ರಬ್ಬರ್ ಚೆಂಡಿನ ಉಪಮೆ: ಒಂದು ಅಡಿ ಎತ್ತರದ ಮೆಟ್ಟಿಲಿರುವ ಸೋಪಾನದಿಂದ ರಬ್ಬರ್ ಚೆಂಡು ಕುಪ್ಪಳಿಸುತ್ತ ಕೆಳಗೆ ಬೀಳುತ್ತಿದೆ ಎಂದುಕೊಳ್ಳೋಣ. ಎರಡನೇ ಮೆಟ್ಟಿಲಿಗೆ ಬಿದ್ದ ಮೇಲೆ ಅದು ಅರ್ಧ ಅಡಿ ಜಿಗಿಯುತ್ತದೆ. ಈಗ ಅದು ಮೂರನೆಯ ಮೆಟ್ಟಿಲಿಗೆ ಬೀಳುವಾಗ ಒಂದೂವರೆ ಅಡಿ ಜಿಗಿದಂತಾಗುವುದಿಲ್ಲವೇ? ಆಮೇಲೆ ಅದು ಮುಕ್ಕಾಲು ಅಡಿ ಎತ್ತರ ಜಿಗಿಯುತ್ತದೆ. ಮುಂದಿನ ಮೆಟ್ಟಲಿಗೆ ಅದು ಬೀಳುವುದು ಒಂದೂ ಮುಕ್ಕಾಲು ಅಡಿ ಆಗುತ್ತದೆ. ಇದು ಹೆಚ್ಚೆಚ್ಚು ವೇಗ ಪಡೆಯುವುದಿಲ್ಲವೇ? ಹಾಗೆಯೇ, ಮೊದಲ ವಿಚಾರ 'ನಾನು' ಕುಗ್ಗುವಾಗ ವೇಗ ಹೆಚ್ಚುತ್ತ ಕಡೆಗೆ ಮೂಲದಲ್ಲಿ ವಿಲೀನವಾಗುತ್ತದೆ.

ಸಿಗುತ್ತದೆ. ಆದರೆ ನಿದ್ದೆಯಿಂದ ಅದರ ಉಗಮವನ್ನು ಗುರುತಿಸುವುದು (ಅದು ಉದಯಿಸಿ 'ನಾನು ಇದ್ದೇನೆ'ಗೆ ಹಿಡಿದುಕೊಳ್ಳುವುದು) ಈ ಹಂತದಲ್ಲಿ ಅವನಿಗೆ ಹೆಚ್ಚು ಕಷ್ಟಕರವಾಗಿರುತ್ತದೆ.

ಜಾಗ್ರತ ಸ್ಥಿತಿಯ 'ನಾನು ಇಂತಿಂಥವನು' ಅರಿವಿನಿಂದ ಆತ್ಮವಿಚಾರ ಪ್ರಾರಂಭಿಸಿದಾಗ 'ಇಂತಿಂಥವನು' ಭಾವವು ಜಾರಿ ಹೋಗುವ ಕೇವಲ ಉಪಾಧಿ (ವಿಶೇಷಣ) ಯಾಗಿರುವುದರಿಂದ (ಏಕೆಂದರೆ ಇದು ಇಲ್ಲದ, ನಿಜವಲ್ಲವಾಗಿರುವುದರಿಂದ ಅಸತ್ಯವು ಸತ್ತು ಸತ್ಯವೊಂದೇ ಉಳಿಯುತ್ತದೆ ಸತ್ಯಮೇವ ಜಯತೇ) ಈಗಲೂ ಕೂಡ ಜಿಜ್ಞಾಸುವು ('ಇಂತಿಂಥವನು' ಎಂಬುದು ಕಳಚಿ ಕೊಂಡಾಗ) 'ನಾನು ಇದ್ದೇನೆ' ಎಂಬ ಜಾಗ್ರತ ಸ್ಥಿತಿಯ ಅನುಭವಕ್ಕೆ ಹಾನಿಯಾಯಿತೆಂದು ಭಾವಿಸುವುದಿಲ್ಲ. ಈಗ ಅವನು ತಲುಪುವ ಸ್ಥಿತಿಯು ಹಿಂದೆ ಪ್ರತಿದಿನ ಅನುಭವಿಸಿದ ನಿದ್ದೆಗೆ ಸಮಾನವಾಗಿರುತ್ತದೆ. ಅಲ್ಲಿ ಏನೂ ಇರುವುದಿಲ್ಲ (ಏಕೆಂದರೆ 'ಅಹಮ್ಮೇ ನಿಜಕ್ಕೂ ಎಲ್ಲವೂ-ಸರ್ವಂ'[೭೩], ಇಡೀ ವಿಶ್ವವು ವಿಚಾರ ಮಾತ್ರ, ಅಹಮಿನ ವಿಸ್ತಾರವಷ್ಟೇ). ಆದರೆ ಇದುವರೆಗೆ ದೇಹ, ಮನಸ್ಸುಗಳು ಪೂರ್ತಿ ಸುಸ್ತಾಗಿ ಅವನಿಗೆ ಅರಿವಿಲ್ಲದಂತೆ ಬಂದು ಆವರಿಸುತ್ತಿದ್ದ ನಿದ್ದೆಗೂ ಈಗಿನ ಜಾಗ್ರತ ಸ್ಥಿತಿಯ ಪೂರ್ಣ ಅರಿವಿನೊಂದಿಗೆ ಐಚ್ಛಿಕವಾಗಿ ತಂದುಕೊಂಡು ಅನುಭವಿಸುವ ನಿದ್ದೆಗೂ ಒಂದು ಮಹಾವ್ಯತ್ಯಾಸ ಅವನ ಅನುಭವಕ್ಕೆ ಬರುತ್ತದೆ. ಹೇಗೆ?

"ಅರಿವಿರುವುದರಿಂದ ಇದು ನಿದ್ದೆಯಲ್ಲ; ವಿಚಾರಗಳು ಇಲ್ಲವಾದ್ದರಿಂದ ಜಾಗ್ರತ ಸ್ಥಿತಿಯಲ್ಲ. ಆದ್ದರಿಂದ ಇದು ಇರುವಿನ ಅರಿವು (ಸತ್ ಚಿತ್), ಅಖಂಡ ಶಿವಸ್ವರೂಪವು. ಇದನ್ನು ಬಿಡದೇ ಅಗಾಧ ಪ್ರೇಮದಿಂದ ಇದರಲ್ಲಿಯೇ ನಿಷ್ಠೆಯಿಂದ ನೆಲೆಸಿರಿ".

'ಸಾಧನೈ ಸಾರಮ್'[೭೪]

ಹೀಗೆ ಐಚ್ಛಿಕವಾಗಿ ತಂದುಕೊಂಡ ನಿದ್ದೆಯಂತಹ ಸ್ಥಿತಿಯಿಂದ ಸಾಧನೆಯ ಅವಧಿಯಲ್ಲಿ ಸಾಧಕನು ಬಹಿರ್ಮುಖಿಯಾದಾಗಲೆಲ್ಲ 'ನಾನು ನಿದ್ದೆ ಮಾಡುತ್ತಿರಲಿಲ್ಲ, ನನ್ನ ಬಗ್ಗೆ ನನಗೆ ಪೂರ್ಣ ಅರಿವಿತ್ತು' ಎಂಬುದು ಖಾತ್ರಿಯಿರುತ್ತದೆ. ಆದರೆ ಅವನ ನಿಜ ಸ್ವರೂಪವು (ಇರುವು-ಅರಿವು) ನಿದ್ದೆಯಲ್ಲಿ 'ನಾನು ಇದ್ದೇನೆ' ಆಗಿ ತನ್ನ ಇರುವಿಕೆಯಲ್ಲಿ ಕನಿಷ್ಠ ಸಂದೇಹವೂ ಇಲ್ಲದಂತೆ ತಿಳಿದಿರುವುದರಿಂದ, ಪ್ರತಿದಿನದ ನಿದ್ದೆಯಿಂದ ಬಹಿರ್ಮುಖನಾದಾಗ, ಜಾಗ್ರತಾವಸ್ಥೆಯಲ್ಲಿ 'ನಾನು ಇದ್ದೇನೆ' ಎಂಬ ಅರಿವು ಮನಸ್ಸಿಗೆ ಒಮ್ಮೆಯೂ ಅನುಭವವಾಗದ ಕಾರಣ, 'ನಾನು ನಿದ್ರಿಸಿದೆ, ಆಗ ನನಗೆ ನಾನು ಗೊತ್ತಿರಲಿಲ್ಲ' ಎಂದಷ್ಟೇ ಹೇಳಬಲ್ಲ. ಸತ್ಯ ಸಂಗತಿಯೆಂದರೆ 'ಇಂತಿಂಥವನು' ಎಂಬ ಉಪಾಧಿಯಿಲ್ಲದೇ ತನ್ನ ಇರುವ ಸ್ಥಿತಿಯನ್ನು ಪತ್ತೆ ಮಾಡಿ, ಜಾಗ್ರತ ಸ್ಥಿತಿಯ ಮುಂದುವರಿಕೆಯಾಗಿ ಪೂರ್ಣಪ್ರಜ್ಞೆಯೊಂದಿಗೆ ಐಚ್ಛಿಕವಾಗಿ ತಂದುಕೊಂಡ ನಿದ್ದೆಯಲ್ಲಿ ಹಿಡಿದಿರುವುದರಿಂದ, ಈ ನಿದ್ದೆಯಲ್ಲೂ ಶುದ್ಧ ಇರುವು-ಅರಿವಿನ (ಸತ್ ಚಿತ್) 'ನಾನು ಇದ್ದೇನೆ' ಎಂಬ ಸ್ಪಷ್ಟ

೭೩. ನೋಡಿ, 'ಉಳ್ಳದು ನಾರ್ಪದು' ಪದ್ಯ ೨೬

೭೪. 'ಸಾಧನೈ ಸಾರಮ್' ಎಂಬುದು ಈ ಪುಸ್ತಕದ ಲೇಖಕನ ಒಂದು ತಮಿಳು ಪುಸ್ತಕ. ಇದರಲ್ಲಿ ಪ್ರಶ್ನಿಸುವವರ ಸಂದೇಹಗಳಿಗೆ ಉತ್ತರಗಳನ್ನು ಪದ್ಯ ರೂಪದಲ್ಲಿ ಕೊಡಲಾಗಿದೆ. ಇದನ್ನು ಇಂಗ್ಲೀಷಿನಲ್ಲಿ 'A Light on the Teaching of Bhagavan Shri Ramana Maharshi' ಎಂಬುದಾಗಿ ಈಗ ಅಹಂ ಟ್ರಸ್ಟಿನಿಂದ ಪ್ರಕಟಿಸಲಾಗಿದೆ.

ಜ್ಞಾನವಿರುತ್ತದೆ. ಹಾಗಾಗಿ ಜಿಜ್ಞಾಸು ಈಗ ಹೇಳುತ್ತಾನೆ: "ನಾನು ಸತತವಾಗಿ ಇದ್ದೆ, ನಿದ್ದೆ ಮಾಡಲಿಲ್ಲ"! ತನ್ನ ಸಾಧನೆಗಿಂತ ಮೊದಲು ಅವನು ಜಾಗ್ರತ ಸ್ಥಿತಿಯಲ್ಲಿ **'ನಾನು' ಎಂದು ಮನಸ್ಸಿನೊಂದಿಗೆ** ಗುರುತಿಸಿಕೊಳ್ಳುತ್ತಿದ್ದನು, ಇದು 'ಇಂತಿಂಥವನು' ಎಂಬ ಉಪಾಧಿ ರೂಪವಾಗಿತ್ತು. ಸಾಮಾನ್ಯ ದಿನನಿತ್ಯದ ನಿದ್ದೆಯಿಂದ ಎದ್ದ ಮೇಲೆ (ಆಗ ಮನಸ್ಸು ಇರಲಿಲ್ಲ) ಈ ಮನಸ್ಸು ಹೇಳುತ್ತದೆ: **'ನಿದ್ದೆಯಲ್ಲಿ ನಾನು ಇರಲಿಲ್ಲ'**. ಅಷ್ಟೇ!

ಅಭ್ಯಾಸದಿಂದ ಈ ಅಹಮಿನ ನಿವಾರಣೆಯನ್ನು ಅನೇಕ ಬಾರಿ ಅನುಭವಿಸಿದವರಿಗೆ 'ನಾನು ಇದ್ದೇನೆ' ಎಂಬ ಶುದ್ಧ ಇರುವು-ಅರಿವಿನ ಅನುಭವದ ಪರಿಚಯವಿರುವುದರಿಂದ ನಿದ್ದೆಯಿಂದ ಏಳುವ ಗಳಿಗೆಯಲ್ಲೇ 'ಇಂತಿಂಥವನು' ಎಂಬ ಉಪಾಧಿ ಹೇಗೆ ಒಂದು ಮಿಶ್ರವಾಗುತ್ತದೆ ಎಂಬುದನ್ನು ಅವರು ಸೂಕ್ಷ್ಮವಾಗಿ ಪರಿಶೋಧಿಸಬಲ್ಲರು. ಅಂತಹ ಅಭ್ಯಾಸಬಲ ಇಲ್ಲದವರು ನಿದ್ದೆಯಿಂದಲೆ ಅಹಮಿನ ಉದಯ ಸ್ಥಳವನ್ನು ಗುರುತಿಸಲಾರರು. ಅಂಥವರು ಜಾಗೃತ ಸ್ಥಿತಿಯ ಪ್ರಯತ್ನದ ಮೂಲಕ ಅಹಮಿನ ಅಸ್ತಮಾನ ಸ್ಥಳವನ್ನು (ಇದೇ ಉದಯದ ಸ್ಥಳವೂ ಹೌದು) ಮಾತ್ರ ಕಂಡುಕೊಳ್ಳಬಹುದು. ಎರಡೂ ಸಂದರ್ಭದಲ್ಲಿ ಗುರಿ ಮತ್ತು ಸಾಧನೆ ಒಂದೇ ಆಗಿರುತ್ತದೆ. 'ನಾನು ಇದ್ದೇನೆ' ಭಾವದತ್ತ ವಿಚಾರವು ಹೆಚ್ಚೆಚ್ಚು ಆಳವಾಗಿ ಒಳಗೆ ಕೇಂದ್ರಿಕರಿಸಲ್ಪಟ್ಟಾಗ, ತನ್ಮೂಲಕ ಅಹಂ ಶೂನ್ಯದತ್ತ ಹೆಚ್ಚೆಚ್ಚು ಮುದುಡಿದಾಗ, ನಮ್ಮ ವಿಚಾರ ಬಲವು ಸೂಕ್ಷ್ಮಾಣುವಿಗಿಂತಲೂ ಸೂಕ್ಷ್ಮವಾಗುತ್ತದೆ, ಆ ಮೂಲಕ ಹೆಚ್ಚು ಚುರುಕಾಗುತ್ತದೆ, ಹೆಚ್ಚು ಉಜ್ವಲವಾಗುತ್ತದೆ. ನಿದ್ದೆಯ ಮುಕ್ತಾಯ ಮತ್ತು ಜಾಗೃತಿಗೆ ಮೊದಲು (ಅಂದರೆ ಮೊದಲ ವಿಚಾರ ಆವರಿಸುವ ಮೊದಲು) ಈ ಎರಡೂ ಅವಸ್ಥೆಗಳ ನಡುವೆ ನೆಲೆಸುವ ಸಮತೋಲನದ **ನಿಷ್ಠಾಬಲವು** ಈಗ ಸಿದ್ಧಿಸುತ್ತದೆ. ಬಂದು ಮಿಶ್ರವಾಗುವ 'ಇಂತಿಂಥವನು' ಎಂಬ ಉಪಾಧಿಯು ಕೇವಲ ಮಧ್ಯಮ ಪುರುಷ ಎಂದು ಕಂಡು ಹಿಡಿಯುವ ಕೌಶಲವನ್ನು ಜಿಜ್ಞಾಸುವು ಈ ನಿಷ್ಠಾಬಲದಿಂದ ಪಡೆಯುತ್ತಾನೆ. (ಅಂದರೆ, ಇದು ಇದುವರೆಗೆ ತಾನೇ ಉತ್ತಮ ಪುರುಷನೆಂದು ತೋರುತ್ತಿದ್ದರೂ ಈಗ ಇದು ಬರೀ ನೆರಳು, ಅನಾತ್ಮ, ಆದಿಕೋಶ, ತನಗೆ ಅನ್ಯ ಎಂದು ಸ್ಪಷ್ಟವಾಗಿ ಕಾಣುತ್ತದೆ) ರಾಜರ್ಷಿ ಜನಕ ಹೇಳಿದ್ದರ ಅರ್ಥ ಇದೇ: "ನನ್ನನ್ನು ಇಲ್ಲಿಯವರೆಗೆ ಹಾಳುಗೆಡುವುತ್ತಿದ್ದ ಕಳ್ಳನನ್ನು ಕಂಡು ಹಿಡಿದಿದ್ದೇನೆ, (ಆತ ಬರುವ ವೇಳೆ-ಅಹಮಿನ ಉದಯದ ಕಾಲ ಮತ್ತು ಸ್ಥಳ); ಅವನಿಗೆ ಸರಿಯಾದ ಶಿಕ್ಷೆ ವಿಧಿಸುತ್ತೇನೆ. ಇದುವರೆಗೆ ಉತ್ತಮ ಪುರುಷವಾಗಿ ನಟಿಸುತ್ತಿದ್ದ ಅಹಮಿಕೆಯು ಈಗ ನಮಗೆ ಅನ್ಯವಾದ ಮಧ್ಯಮ ಪುರುಷ ಎಂದು ತಿಳಿದ ಕಾರಣ, ಸರಿಯಾದ ಶಿಕ್ಷೆಯೆಂದರೆ ನಿಜವಾದ ಉತ್ತಮ ಪುರುಷಕ್ಕೆ ಅಂಟಿಕೊಳ್ಳುವ ಮೂಲಕ ('ನಾನು' ಪದದ ನಿಜವಾದ ಅರ್ಥ) ಅಹಮನ್ನು ಅದರ ಉದಯ ಸ್ಥಳದಲ್ಲೇ (ಪ್ರತಿಫಲಿತ ಕಿರಣವನ್ನು ಅದರ ಉದಯ ಸ್ಥಳದಲ್ಲೇ ನಾಶಗೊಳಿಸಿದ ಹಾಗೆ) ನಾಶ ಪಡಿಸುವುದು. ಇರುವು-ಅರಿವಿನ ಆತ್ಮವಿಚಾರವನ್ನು ಮರು ಪಡೆಯುವುದು ಭಗವಾನ್ ಶ್ರೀ ರಮಣರು ಬೋಧಿಸಿದ ಪದ್ಧತಿಯಿಂದ ಸಾಧ್ಯ. (ಯಾರಿಗೆ? ನನಗೆ; ನಾನು ಯಾರು?)

"ಈ ಇರುವು-ಅರಿವಿನಲ್ಲಿ ನೆಲೆಸುವುದನ್ನು ಹೆಚ್ಚೆಚ್ಚು ಅಭ್ಯಾಸ ಮಾಡಿದಂತೆ (ನಿದ್ದೆ-ಎಚ್ಚರಗಳ ನಡುವಿನ ಸ್ಥಿತಿಯಲ್ಲಿ ಇರುವುದು) ಹಿಂದೆ ನಿಮ್ಮನ್ನು ಆವರಿಸುತ್ತಿದ್ದ ಸಾಮಾನ್ಯ

ನಿದ್ದೆಯು ಕರಗಿ ಹೋಗುತ್ತದೆ; ವಿಷಯಗಳು ತುಂಬಿದ ಜಾಗೃತಿಯು ಒಳಗೆ ಸುಳಿಯುವುದಿಲ್ಲ. ಆದ್ದರಿಂದ ಮತ್ತೆ ಮತ್ತೆ, ಸುಸ್ತಾಗದಂತೆ ಇದರಲ್ಲಿ ನೆಲೆಸಿ"

'ಸಾಧನ್ಯೈ ಸಾರಂ'

ಈ ಇರುವು–ಅರಿವಿನಲ್ಲಿ ನೆಲೆಸುವುದನ್ನು ಹೆಚ್ಚೆಚ್ಚು ಅಭ್ಯಾಸ ಮಾಡುವುದರಿಂದ ಈ ಸ್ಥಿತಿಯು ನಾವು ದೈನಂದಿನ ಕೆಲಸದಿಂದ ಮುಕ್ತರಾದಾಗ ತನ್ನಷ್ಟಕ್ಕೆ ಬಂದು ಆವರಿಸಿಕೊಳ್ಳುವುದು ಅನುಭವಕ್ಕೆ ಬರುತ್ತದೆ. **ಆದರೆ, ಈ ಇರುವು–ಅರಿವಿನ ಸ್ಥಿತಿಯು ವಾಸ್ತವವಾಗಿ 'ನಾವು' ಎಂಬುದೇ ಹೊರತು ಬೇರೆಯಲ್ಲ,** ಆದ್ದರಿಂದ ಈ ಸ್ಥಿತಿ ಬಂದು ಆವರಿಸುತ್ತದೆ ಎಂದು ಯೋಚಿಸುವುದು ತಪ್ಪಾಗುತ್ತದೆ. ಕೆಲಸ ಮಾಡುವಾಗ ನಾವು ಇತರ (ಅನ್ಯ) ವಸ್ತುಗಳನ್ನು ಗಮನಿಸುತ್ತೇವೆ, ಈ ಕೆಲಸ ಮುಗಿದ ಮೇಲೆ ಬೇರೊಂದು ಮಧ್ಯಮ ಅಥವಾ ಪ್ರಥಮ ಪುರುಷರನ್ನು ಗಮನಿಸುವ ಮೊದಲು, ನಾವು ಸಹಜವಾಗಿ ಇರುವು–ಅರಿವಿನ **ನಮ್ಮ ನಿಜವಾದ ಸ್ಥಿತಿಯಲ್ಲಿ ನೆಲೆಸುತ್ತೇವೆ**. ಇದು ಎಲ್ಲರಿಗೂ ಪ್ರತಿದಿನ ಆಗುತ್ತಿದ್ದರೂ, ಹಿಂದೆ ಹೇಳಿದ ಅಭ್ಯಾಸದಿಂದ ಆತ್ಮದರಿವನ್ನು ಅನುಭವಿಸಿದವರಿಗೆ ಮಾತ್ರ, ಒಂದು ಮಧ್ಯಮ ಪುರುಷ ವಿಚಾರ ಬಿಟ್ಟ ನಂತರ ಇನ್ನೊಂದನ್ನು ಹಿಡಿಯುವ ಮೊದಲು (ಅಂದರೆ, ಎರಡು ವಿಚಾರಗಳ ನಡುವೆ) ಆತ್ಮನಿಷ್ಠೆಯ ಸ್ಥಿತಿಯು ಸ್ಪಷ್ಟವಾಗಿ ಎದ್ದು ಕಾಣುತ್ತದೆ.

"(ನಮ್ಮ ಇರುವು–ಅರಿವಿನ) ಸ್ಥಿತಿಯಲ್ಲಿ ಇರಲು ಮತ್ತೆ ಮತ್ತೆ ಪ್ರಯತ್ನಿಸಬೇಕು, ಹೆಚ್ಚೆಚ್ಚು ಪ್ರೀತಿಯಿಂದ ನೆಲೆಸಬೇಕು ಎಂದು ಏಕೆ ಹೇಳಿದ್ದಾರೆ? ('ಸಾಧನ್ಯೈ ಸಾರಂ'ನ ಮೇಲಿನೆರಡು ಪದ್ಯಗಳಲ್ಲಿ). ಏಕೆಂದರೆ ಈ ಸ್ಥಿತಿಯಿಂದ ನಮ್ಮನ್ನು ಹೊರಹಾಕುವ ಎಲ್ಲ ವಾಸನೆಗಳು ಪೂರ್ಣತಃ ಖಾಲಿಯಾಗುವವರೆಗೆ ಈ ಸ್ಥಿತಿಯು ಬಂದು ಹೋಗುವುದು[೭೫] ಎಂದು ತೋರುತ್ತದೆ. ಅದಕ್ಕಾಗಿ ಸತತ ಪ್ರಯತ್ನ ಮತ್ತು ಪ್ರೀತಿ ಆತ್ಮ ನಿಷ್ಠೆಗೆ ಬೇಕು".

"ಈ ಅಭ್ಯಾಸದಿಂದ ಇರುವು–ಅರಿವಿನ ಸ್ಥಿತಿಯು ಎಂದೂ ತಪ್ಪದಂತೆ ಸಹಜವಾಗಿ ಅನುಭವಕ್ಕೆ ಬಂದರೆ ಆಗ ಜಾಗ್ರತಿ, ಸ್ವಪ್ನ, ಸುಷುಪ್ತಿಗಳು ಬಂದು ಹೋದರೂ ತೊಂದರೆಯಿಲ್ಲ".

"(ಎಚ್ಚರ, ಕನಸು, ನಿದ್ದೆ ಎನ್ನಲಾಗುವ) ಮೂರೂ ಸ್ಥಿತಿಗಳನ್ನು ವ್ಯಾಪಿಸಿಯೂ ಮೀರಿರುವ ಅನಂತ ಆತ್ಮದರಿವಿನಲ್ಲಿ ಚೆನ್ನಾಗಿ ಪ್ರತಿಷ್ಠಿತರಾದವರಿಗೆ ಇರುವುದೊಂದೇ ಸ್ಥಿತಿ, ಅದೇ ಪೂರ್ಣ, ಅದೇ ಸರ್ವ, ಅದೊಂದೇ ಸತ್ಯ! 'ನಾನು ಪ್ರಯತ್ನ ಪಡುತ್ತಿದ್ದೇನೆ' ಎಂಬ ಭಾವವೂ ಇಲ್ಲವಾಗಿರುವ ಈ ಸ್ಥಿತಿಯು ನಿಮ್ಮ ಇರುವಿಕೆಯ ಸಹಜ ಸ್ಥಿತಿ! ಇರಿ!!"

'ಸಾಧನ್ಯೈ ಸಾರಂ'

---

೭೫. ಚಲಿಸುವ ಮೋಡಗಳು ವಿರುದ್ಧ ದಿಕ್ಕಿನಲ್ಲಿ ಚಂದ್ರನೇ ಚಲಿಸುತ್ತಿರುವಂತೆ ಭ್ರಮೆಯನ್ನು ಹುಟ್ಟಿಸುವಂತೆ ವಾಸನೆಗಳ ಬರುವಿಕೆ–ಹೋಗುವಿಕೆಯಿಂದ ನಮ್ಮ ಇರುವು–ಅರಿವಿನ ಸಹಜ ಸ್ಥಿತಿಯು ತಾನಾಗಿ ಆಗಾಗ ಬಂದು ನಮ್ಮನ್ನು ಹಿಡಿದುಕೊಳ್ಳುತ್ತದೆ ಮತ್ತು ಆಮೇಲೆ ಹೋಗುವಾಗ ಬಿಟ್ಟು ಬಿಡುತ್ತದೆ ಎಂಬ ಭ್ರಮೆ ಉಂಟಾಗುತ್ತದೆ.

ಕತ್ತಲೆ ಕೋಣೆಯಿಂದ ಹೊರಬಂದು ಮುಕ್ತ ಬಯಲಿನಲ್ಲಿ ಪ್ರತಿಫಲಿತ ಕಿರಣದ ಗುಂಟ ಅದರತ್ತ ನಡೆದ ವ್ಯಕ್ತಿಯಂತೆ ಸಾಧಕನು (ಜಿಜ್ಞಾಸುವು) ನಾಡಿಗಳ ಮೂಲಕ ದೇಹಕ್ಕೆ ಅಂಟಿಕೊಳ್ಳುವ ಮೋಹ–ಎಂಬ ಸೆರೆಮನೆಯಿಂದ ಹೊರಬಂದು ಹೃದಯದ ಮುಕ್ತಾಕಾಶ ತಲುಪುತ್ತಾನೆ. 'ನಾನು ಇದ್ದೇನೆ' ಭಾವವನ್ನು ಗಟ್ಟಿ ಹಿಡಿದುಕೊಳ್ಳುವುದರಿಂದ ಇದು ಸಾಧ್ಯ. ಮುಂದುವರೆದ ಜಿಜ್ಞಾಸುವಿನ ದೇಹದಲ್ಲಿ ಈ ಪ್ರಕ್ರಿಯೆ ಹೇಗೆ ಜರುಗುತ್ತದೆ ಎಂದು ಈಗ ನೋಡೋಣ.

ನಿದ್ದೆಯಿಂದ ಎದ್ದ ಕೂಡಲೇ 'ನಾನು' ಅರಿವು ಹೃದಯದಿಂದ ಮಿದುಳಿಗೆ ಮಿಂಚಿನಂತೆ ಹೊಳೆದು ಮೇಲೆಳುತ್ತದೆ. ಮಿದುಳಿನಿಂದ ನಾಡಿಗಳ ಗುಂಟ ಇಡೀ ದೇಹಕ್ಕೆ ಹರಡುತ್ತದೆ. ಈ 'ನಾನು' ಅರಿವು ವಿದ್ಯುಚ್ಛಕ್ತಿಯಂತಿದೆ. ದೇಹವನ್ನು 'ನಾನು' ಎಂದು ಗುರುತಿಸುವ ಅಭಿಮಾನ ವೇಗವೇ ಇದರ ರಭಸ ಅಥವಾ ವೋಲ್ಟೇಜ್. ಇಂತಹ ಅಗಾಧ ರಭಸ ಮತ್ತು ವೇಗದೊಂದಿಗೆ 'ನಾನು' ಭಾವವಾಗಿ ಇಡೀ ದೇಹವನ್ನು ವ್ಯಾಪಿಸುವ ಈ ಅರಿವು ಹೃದಯದಿಂದ ಮಿದುಳು ತಲುಪುವವರೆಗೆ ಯಾವುದೇ ಉಪಾಧಿಯಿಲ್ಲದೇ ಶುದ್ಧವಾಗಿರುತ್ತದೆ. ಆದರೆ ಹೃದಯದಿಂದ ಮಿದುಳಿನಲ್ಲಿ ಮೇಲೇಳುವ ಇದರ ಅಭಿಮಾನ ವೇಗವು ತೀವ್ರವಾಗಿರುವುದರಿಂದ (ಒಂದು ಸೆಕೆಂಡಿನ ದಶಲಕ್ಷ ಭಾಗ ಎನ್ನಬಹುದು) ಸಾಮಾನ್ಯ ಜನರು ವಿಶೇಷಣವಿಲ್ಲದ ಇದರ ಶುದ್ಧ ಸ್ಥಿತಿಯನ್ನು ಗುರುತಿಸಲಾರರು. 'ನಾನು' ಅರಿವು ಉದಯಿಸುವ ಈ ಶುದ್ಧ ಸ್ಥಿತಿಯನ್ನೇ ಬೆರಳು ಮಾಡಿ ಶ್ರೀ ಭಗವಾನರು ಸೂಚಿಸಿದ್ದಾರೆ: "ಎರಡು ಸ್ಥಿತಿ ಅಥವಾ ವಿಚಾರಗಳ ನಡುವಿನ ಜಾಗದಲ್ಲಿ ಶುದ್ಧ ಅಹಂ (ಅಹಮಿನ ನಿಜಸ್ವಭಾವ) ಅನುಭವಕ್ಕೆ ಬರುತ್ತದೆ"

ಮಹರ್ಷೀಸ್ ಗಾಸ್ಪೆಲ್, ಪುಸ್ತಕ ಒಂದು, ಅಧ್ಯಾಯ ೫ ಶೀರ್ಷಿಕೆ 'ಆತ್ಮ ಮತ್ತು ಅಹಂ'.

ಮಿದುಳಿನಿಂದ ದೇಹದ ತುಂಬ ಅಗಾಧ ವೇಗದಲ್ಲಿ ಹರಡುವ ಈ 'ನಾನು' ಅರಿವಿಗೆ ನಾಡಿಗಳೇ ಸಂದೇಶವಾಹಿನಿಗಳು, ವಿದ್ಯುಚ್ಛಕ್ತಿಗೆ ತಂತಿಗಳು ಇದ್ದಂತೆ (ಎಷ್ಟೆಂಬುದು ಇಲ್ಲಿ ಮುಖ್ಯವಲ್ಲ) ಮಿದುಳನ್ನು ತಲುಪಿದ ಮೇಲೆ 'ನಾನು ಇದ್ದೇನೆ' ಎಂಬ ಶುದ್ಧ ಅರಿವು 'ನಾನು ಇದು, ನಾನು ಇಂತಿಂಥವನು, ನಾನು ದೇಹ' ಎಂಬ ಉಪಾಧಿಯೊಂದಿಗೆ ಮಿಶ್ರಣವಾಗುವುದನ್ನು ಬಂಧ ಅಥವಾ ಗ್ರಂಥಿ ಎಂದು ಕರೆಯುತ್ತಾರೆ. ಈ ಗ್ರಂಥಿಗೆ ಎರಡು ರೂಪಗಳಿವೆ: **ನಾಡಿ–ಬಂಧ–ಗ್ರಂಥಿ ಮತ್ತು ಅಭಿಮಾನ–ಗ್ರಂಥಿ**. 'ನಾನು' ಅರಿವಿನ ಶಕ್ತಿಯು ಸ್ಥೂಲ ನರಮಂಡಲದೊಂದಿಗೆ ಸಂಪರ್ಕಿಸುವುದು ನಾಡಿ–ಬಂಧ ಗ್ರಂಥಿ ಮತ್ತು ಅಡಗಿದ ವಾಸನೆರೂಪದ ಕಾರಣ ಶರೀರದೊಂದಿಗೆ ಸಂಪರ್ಕವು (ದೇಹಾಭಿಮಾನ) ಅಭಿಮಾನ ಗ್ರಂಥಿ. ನಾಡಿ–ಬಂಧ–ಗ್ರಂಥಿಯು ಉಸಿರಿಗೆ (ಪ್ರಾಣಕ್ಕೆ) ಸಂಬಂಧಿಸಿದೆ, ಅಭಿಮಾನ–ಗ್ರಂಥಿಯು ಮನಸ್ಸಿಗೆ ಸಂಬಂಧಿಸಿದೆ.

"ವಿಚಾರ ಮತ್ತು ಕ್ರಿಯೆಗಳನ್ನು ಅನುಕ್ರಮ ಚಟುವಟಿಕೆಯಾಗಿ ಹೊಂದಿರುವ ಮನಸ್ಸು ಮತ್ತು ಉಸಿರು (ಪ್ರಾಣ)ಗಳು ಒಂದೇ ಮರದ ಎರಡು ಕೊಂಬೆಗಳಂತಿವೆ, ಆದರೆ ಅವುಗಳ ಬೇರು (ಚಾಲಕ ಶಕ್ತಿ) ಒಂದೇ ಆಗಿದೆ".

'ಉಪದೇಶ ಉಂದಿಯಾರ್' ಪದ್ಯ ೧೨

ಮನಸ್ಸು ಮತ್ತು ಪ್ರಾಣಗಳ ಮೂಲ (ಉಗಮ ಸ್ಥಾನ) ಒಂದೇ (ಹೃದಯ) ಆಗಿರುವುದರಿಂದ ಆತ್ಮಶೋಧದ ಮೂಲಕ ಮನೋನಾಶವನ್ನು ಸಾಧಿಸಿ ಅಭಿಮಾನ ಗ್ರಂಥಿಯನ್ನು ಪ್ರತ್ಯೇಕಿಸಿದಾಗ (ಕತ್ತರಿಸಿದಾಗ) ನಾಡಿ–ಬಂಧ–ಗ್ರಂಥಿಯೂ ಕೂಡ ಪ್ರತ್ಯೇಕಿಸಲ್ಪಡುತ್ತದೆ. ರಾಜಯೋಗದಲ್ಲಿ ಉಸಿರಾಟ ನಿಯಂತ್ರಣದ ಮೂಲಕ ನಾಡಿ–ಬಂಧ–ಗ್ರಂಥಿಯನ್ನು ನಿವಾರಿಸಿದ ನಂತರ ಹಾಗೆ ನಿಯಂತ್ರಿತವಾದ ಮನಸ್ಸನ್ನು ಮಿದುಳಿನಿಂದ (ಸಹಸ್ರಾರದಿಂದ) ಹೃದಯಕ್ಕೆ ಹೋಗುವಂತೆ ಮಾಡಿದರೆ ಅದು ಮೂಲ ತಲುಪುವುದರಿಂದ ಅಭಿಮಾನಗ್ರಂಥಿಯೂ ಪ್ರತ್ಯೇಕಿಸಲ್ಪಡುತ್ತದೆ.

“ಉಸಿರು ನಿಯಂತ್ರಣದಿಂದ ವಿನೀತವಾದ ಮನಸ್ಸನ್ನು ಇರುವ ಒಂದೇ ದಾರಿಯ ಮೂಲಕ (ಆತ್ಮಜ್ಞಾನದ ಮಾರ್ಗ)[೭೬] (ಹೃದಯದತ್ತ) ಕಳಿಸಿದರೆ ಅದರ ರೂಪವು ಸಾಯುತ್ತದೆ”.

‘ಉಪದೇಶ ಉಂದಿಯಾರ್’ ಪದ್ಯ ೧೪

ಆದಾಗ್ಯೂ, ಅಭಿಮಾನ ಗ್ರಂಥಿಯು ಪ್ರಾಥಮಿಕವಾದ್ದರಿಂದ, ಆತ್ಮಜ್ಞಾನದ ಮೂಲಕ ಅಭಿಮಾನನಾಶ ಆಗುವವರೆಗೆ, ನಿದ್ದೆ–ಮೂರ್ಛೆ–ಸಾವು ಅಥವ ಅರಿವಳಿಕೆಯ ಬಳಕೆಯಿಂದ ನಾಡಿ–ಬಂಧ–ಗ್ರಂಥಿಯು ತಾತ್ಕಾಲಿಕವಾಗಿ ನಿವಾರಣೆಯಾದಾಗಲೂ ಅಭಿಮಾನ ಗ್ರಂಥಿಯು ವಾಸನಾರೂಪದಲ್ಲಿ ಅಪ್ರಭಾವಿತವಾಗಿ ಉಳಿದಿರುತ್ತದೆ. ಇದು ಕಾರಣ ಶರೀರದ ಸಾಮಗ್ರಿಯಾದ್ದರಿಂದ ಪುನರ್ಜನ್ಮಗಳನ್ನು ತಪ್ಪಿಸಲಾಗುವುದಿಲ್ಲ. ಈ ಕಾರಣಕ್ಕಾಗಿ ಶ್ರೀ ಭಗವಾನರು ಒತ್ತು ಕೊಟ್ಟು ಹೇಳುವುದೆಂದರೆ ರಾಜಯೋಗದಿಂದ ಕಾಷ್ಠ–ನಿರ್ವಿಕಲ್ಪ–ಸಮಾಧಿಯನ್ನು[೭೭] ತಲುಪಿದರೂ ಅಲ್ಲಿಗೇ ನಿಲ್ಲಬಾರದು (ಏಕೆಂದರೆ ಇದು ಬರೀ ಮನೋಲಯ, ಮನಸ್ಸಿನ ತಾತ್ಕಾಲಿಕ ತಲ್ಲೀನತೆ) ಹೀಗೆ ಲೀನವಾದ ಮನಸ್ಸನ್ನು ಸಹಜ–ನಿರ್ವಿಕಲ್ಪ–ಸಮಾಧಿ ಪಡೆಯಲು ಹೃದಯದತ್ತ ಕಳಿಸಬೇಕು. ಇದೇ ಮನೋನಾಶ, ದೇಹಾಭಿಮಾನ ನಾಶ. ಅಭಿಮಾನ ಗ್ರಂಥಿಯ ನಾಶದ ನಂತರವೂ ಸಹಜ ಜ್ಞಾನಿಯ ದೇಹದಲ್ಲಿ ನರಗಳ ಗುಂಟ ‘ನಾನು’–ಅರಿವು ಹರಿಯುವುದು ಕಮಲದ ಎಲೆಯ ಮೇಲೆ ನೀರಿನಂತೆ ಅಥವಾ ಸುಟ್ಟ ಹಗ್ಗದಂತೆ ಇರುತ್ತದೆ, ಹಾಗಾಗಿ ಇದು ಬಂಧಕ್ಕೆ ಕಾರಣವಾಗುವುದಿಲ್ಲ. ಸಹಜಸ್ಥಿತಿಯ, ವಾಸನಾಕ್ಷಯದ ಪ್ರಾಪ್ತಿಗೆ ಅಭಿಮಾನ ಗ್ರಂಥಿಯ ನಾಶ ಯಾವ ರೀತಿಯಲ್ಲಾದರೂ ಅನಿವಾರ್ಯವಾಗಿದೆ.

ನಾಡಿಗಳು ಸ್ಥೂಲ, ಆದರೆ ಅವುಗಳಲ್ಲಿ ಹರಿಯುವ ಚೈತನ್ಯ ಶಕ್ತಿಯು ಸೂಕ್ಷ್ಮ. ನಾಡಿಗಳೊಂದಿಗೆ ‘ನಾನು’–ಅರಿವಿನ ಸಂಪರ್ಕವು ತಂತಿಯೊಂದಿಗೆ ವಿದ್ಯುಚ್ಛಕ್ತಿಗಿದ್ದಂತೆ, ಅಂದರೆ ಕ್ಷಣ ಮಾತ್ರದಲ್ಲಿ ಸಂಪರ್ಕ ಸೇರಬಹುದು ಅಥವಾ ಕಳಚಬಹುದು. ಪ್ರತಿದಿನ

೭೬. ಈ ಪದ್ಯದ ತಮಿಳು ಮೂಲದಲ್ಲಿ ಶ್ರೀ ಭಗವಾನರು ಬಳಸಿದ ಶಬ್ದ ‘ಓರ್ ವಳಿ’. ಅದಕ್ಕೆ ‘ಏಕೈಕ ಮಾರ್ಗ’ ಮತ್ತು ‘ಜ್ಞಾನ ಮಾರ್ಗ’ ಎರಡೂ ಅರ್ಥವಾಗುತ್ತದೆ. ಇಲ್ಲಿ ಸೂಚಿಸಿದ ‘ಏಕೈಕ ಮಾರ್ಗ’ವು ಆತ್ಮಶೋಧವಾಗಿದೆ, ಯಾವುದೇ ಧ್ಯಾನ ಮಾರ್ಗಗಳಲ್ಲ. ಇದನ್ನು ‘ಗುರುವಾಚಕ ಕೋವೈ’ ಪದ್ಯ ೩೯೨ರಲ್ಲಿ ಸ್ಪಷ್ಟ ಪಡಿಸಲಾಗಿದೆ. ಅದರಲ್ಲಿ ಶ್ರೀ ಭಗವಾನರು ಒತ್ತು ಕೊಟ್ಟು ಹೇಳುತ್ತಾರೆ: “ಉಸಿರು ನಿಯಂತ್ರಣದಿಂದ ಮನೋಲಯವನ್ನು ಪಡೆದಾಗ ಸೂಕ್ಷ್ಮ ಶೋಧದಿಂದ ದೇಹವಲ್ಲದ ಇರುವು–ಅರಿವು (ಸತ್ ಚಿತ್)ನ್ನು ತಿಳಿದುಕೊಳ್ಳಬೇಕು.

೭೭. ಕಾಷ್ಠ–ನಿರ್ವಿಕಲ್ಪ–ಸಮಾಧಿ: ದೇಹವು ಮರದ ಕಟ್ಟಿಗೆ (ದಿಮ್ಮಿ)ಯಂತೆ ಜಡವಾಗಿ ಉಳಿಯುವ ನಿದ್ದೆಯಂತಹ ಸ್ಥಿತಿ.

ನಿದ್ದೆಯಲ್ಲಿ ಈ ಸಂಪರ್ಕ ಕಡಿದು ಬಿದ್ದು ಜಾಗ್ರತ ಸ್ಥಿತಿಯಲ್ಲಿ ಮತ್ತೆ ಕೂಡಿಕೊಳ್ಳುವುದು ಎಲ್ಲರ ಸಾಮಾನ್ಯ ಅನುಭವವಲ್ಲವೇ? ಈ ಸಂಪರ್ಕ ಕೂಡಿದಾಗ ದೇಹದ ಅರಿವು ಉದಯಿಸುತ್ತದೆ. ಇದು ಕಡಿದು ಬಿದ್ದಾಗ ದೇಹದ ಅರಿವು ಕಳೆದು ಹೋಗುತ್ತದೆ. ಆದ್ದರಿಂದ ನೆನಪಿಡಬೇಕಾದ್ದೆಂದರೆ, ಹಿಂದೆ ಹೇಳಿರುವಂತೆ, ದೇಹದ ಅರಿವು ಮತ್ತು ಲೋಕದ ಅರಿವು ಒಂದೇ ಆಗಿದೆ. ನಾವು ಪ್ರತಿದಿನ ತೆಗೆದು ಹಾಕಿಕೊಳ್ಳುವ ಬಟ್ಟೆ–ಒಡವೆಗಳಂತೆ, ಈ ಗ್ರಂಥಿಯೂ ನಮಗೆ ಅನ್ಯವಾಗಿದೆ, ನಮ್ಮ ಮೇಲೆ ಸಡಿಲವಾಗಿ ತೂಗಾಡುವ ತಾತ್ಕಾಲಿಕ ಮತ್ತು ಮಿಥ್ಯಾ ವಿದ್ಯಮಾನವಾಗಿದೆ! ಶ್ರೀ ಭಗವಾನರು ಹೇಳಿದ್ದು ಇದನ್ನೇ: "ನಾವು ಅಲ್ಲದ್ದರಿಂದ ನಮ್ಮನ್ನು ಕಳಚಿಕೊಳ್ಳಬಹುದು!" ಗ್ರಂಥಿಯನ್ನು ಮತ್ತೆ ಸಂಪರ್ಕಕ್ಕೆ ಬಾರದಿರುವಂತೆ ಕಡಿದು ಹಾಕುವುದನ್ನು 'ಗ್ರಂಥಿ–ಭೇದ', 'ಮನೋನಾಶ' ಮುಂತಾದ ಹಲವು ಹೆಸರುಗಳಿಂದ ಕರೆಯುತ್ತಾರೆ. 'ಮತ್ತೆ ಸಂಪರ್ಕಕ್ಕೆ ಬಾರದಿರುವಂತೆ' ಎಂದರೆ ಇದು: 'ಇದು ನಿಜವಾಗಿಯೂ ಈಗ ಇದೆಯೇ?' ಎಂದು ಶೋಧಿಸುವ ಮೂಲಕ 'ಇದು ಎಂದಾದರೂ ನಿಜವಾಗಿ ಇತ್ತೇ' ಎಂದು ತಿಳಿಯಲಿಕ್ಕಾಗಿ ಅಹಮನ್ನು ಗಮನಿಸಿದರೆ ಜ್ಞಾನೋದಯ, ನಿಜವಾದ ಜಾಗೃತಿ ಉಂಟಾಗುತ್ತದೆ. ಅಲ್ಲಿ ಸ್ಪಷ್ಟವಾಗಿ, ಖಡಾಖಂಡಿತವಾಗಿ ತಿಳಿಯುತ್ತದೆ: ಅಂಥ ಗ್ರಂಥಿ ಎಂದೂ ಇರಲಿಲ್ಲವೆಂದು, ಅಂಥ ಅಹಂ ಎಂದೂ ಉದಯಿಸಿರಲಿಲ್ಲ ಎಂದು, 'ಇರುವುದು' ಮಾತ್ರ ಸದಾ ಇರುತ್ತದೆ ಎಂದು, 'ನಾನು ಇದ್ದೇನೆ' ಆಗಿ ಹಿಂದೆ ಇದ್ದದ್ದೇ ಈಗಲೂ ಇದೆ ಎಂದು! ಗ್ರಂಥಿ ಅಥವಾ ಬಂಧ ಯಾವ ಕಾಲಕ್ಕೂ ಇರಲಿಲ್ಲ, ಉದಯಿಸಿರಲಿಲ್ಲ ಎಂಬ ಆತ್ಮಜ್ಞಾನ ಪ್ರಾಪ್ತಿಯೇ ಗ್ರಂಥಿಯ ಶಾಶ್ವತ ಕಡಿದುಕೊಳ್ಳುವಿಕೆ. ಇದನ್ನು ಒಂದು ಸಣ್ಣ ಕತೆಯ ಮೂಲಕ ವಿವರಿಸೋಣ.

"ಅಯ್ಯೋ! ನಾನು ಬಂಧಿಸಲ್ಪಟ್ಟಿದ್ದೇನೆ! ಈ ತ್ರಿಕೋನಾಕಾರ ಕೋಣೆಯೊಳಗೆ ನಾನು ಸಿಕ್ಕಿ ಬಿದ್ದಿದ್ದೇನೆ! ನನ್ನ ಬಿಡುಗಡೆ ಹೇಗೆ?"–ಎಂದು ಒಬ್ಬ ವ್ಯಕ್ತಿ ದೂರುತ್ತಿದ್ದ, ಅಳುತ್ತಿದ್ದ. ಎರಡು ಗೋಡೆಗಳ ಅಂಚು ಕೂಡುವ ಮೂಲೆಯಲ್ಲಿ ಅವನು ನಿಂತಿದ್ದ. ತನ್ನೆದುರಿನ ಎರಡು ಗೋಡೆಗಳನ್ನು ಎರಡೂ ಕೈಗಳಿಂದ ತಡವುತ್ತ ಆತ ಗೋಳಾಡುತ್ತಿದ್ದ: "ಬಾಗಿಲೇ ಇಲ್ಲ, ಇಲ್ಲಿಂದ ಪಾರಾಗಲು ನನಗೆ ಹೊರದಾರಿಯೇ ಇಲ್ಲ! ನಾನು ಹೊರಹೋಗುವುದು ಹೇಗೆ?"

ದೂರದಲ್ಲಿ ಬಯಲಿನಲ್ಲಿ ನಿಂತಿದ್ದ ಅವನ ಗೆಳೆಯ ಇವನ ಗೋಳಾಟ ಕೇಳಿ ಆ ದಿಕ್ಕಿಗೆ ತಿರುಗಿ ತನ್ನ ಗೆಳೆಯನ ಅವಸ್ಥೆ ಗಮನಿಸಿದ. ಮುಕ್ತ ಬಯಲಿನಲ್ಲಿ ಎರಡೇ ಗೋಡೆಗಳಿದ್ದವು. ಎರಡರ ಒಂದೊಂದು ಅಂಚು ಒಂದೆಡೆ ಕೂಡಿ, ಎರಡು ಪಕ್ಕಗಳನ್ನು ಮಾತ್ರ ಅವು ಮುಚ್ಚುತ್ತಿದ್ದವು. ಮುಕ್ತ ಬಯಲಿನ ಗೆಳೆಯನಿಗೆ ಕೂಡಲೇ ತಿಳಿಯಿತು. ಎರಡೇ ಗೋಡೆಗಳಿಗೆ ಎದುರಾಗಿ ನಿಂತಿದ್ದ ವ್ಯಕ್ತಿ ತನ್ನ ಹಿಂದೆ ಮೂರನೆಯ ಗೋಡೆಯೊಂದಿದೆ ಎಂಬ ತಪ್ಪು ತಿಳುವಳಿಕೆಯಿಂದಾಗಿ, ತಾನು ತ್ರಿಕೋನಾಕಾರದ ಕೋಣೆಯೊಳಗೆ ಬಂಧಿಸಲ್ಪಟ್ಟಿದ್ದೇನೆ ಎಂದು ನಿರ್ಣಯಿಸಿದ್ದ. ಹಾಗಾಗಿ ಗೆಳೆಯ ಕೇಳಿದ: 'ಗೋಡೆ ತಡವುತ್ತ ನೀನೇಕೆ ಗೋಳಾಡುತ್ತಿದ್ದೀಯ?" ವ್ಯಕ್ತಿ ಉತ್ತರಿಸಿದ: "ಈ ತ್ರಿಕೋನಾಕಾರದ ಕೋಣೆಯ ಸೆರೆಮನೆಯಿಂದ ಪಾರಾಗಲು ನಾನು ದಾರಿ ಹುಡುಕುತ್ತಿದ್ದೇನೆ. ಆದರೆ ಹೊರಬರಲು ಯಾವ ದಾರಿಯೂ ಕಾಣುತ್ತಿಲ್ಲ".

ಗೆಳೆಯ: "ಸರಿ, ನಿನ್ನ ಹಿಂದಿರುವ ಮೂರನೆಯ ಗೋಡೆಯಲ್ಲಿ ಹೊರಬರುವ ದಾರಿಯನ್ನು ನೀನೇಕೆ ಹುಡುಕುತ್ತಿಲ್ಲ!"

ವ್ಯಕ್ತಿ (ಹಿಂದೆ ತಿರುಗಿ ನೋಡುತ್ತ): "ಓಹ್, ಇಲ್ಲಿ ಯಾವ ಅಡಚಣೆಯೂ ಇಲ್ಲ. ಈ ದಾರಿಯಲ್ಲಿ ಓಡಿ ಹೋಗುತ್ತೇನೆ" (ಹೀಗೆ ಹೇಳಿ ಓಡತೊಡಗುತ್ತಾನೆ)

ಗೆಳೆಯ: "ಏನು! ನೀನು ಓಡುವುದೇಕೆ? ಹಾಗೆ ಮಾಡುವ ಅಗತ್ಯವಿದೆಯೇ? ನೀನು ಓಡದಿದ್ದರೆ, ಸೆರೆಮನೆಯಲ್ಲಿ ಇರುತ್ತೀಯ?"

ವ್ಯಕ್ತಿ: "ಓಹೋ! ಹೌದು, ಹೌದು! ನಾನು ಸೆರೆಮನೆಯಲ್ಲಿರಲಿಲ್ಲ! ನನ್ನ ಹಿಂದೆ ಗೋಡೆಯೇ ಇಲ್ಲದಿದ್ದಾಗ ನಾನು ಸೆರೆಮನೆಯಲ್ಲಿ ಇದ್ದುದಾದರೂ ಹೇಗೆ? ನಾನು ಸೆರೆಮನೆಯಲ್ಲಿ ಇದ್ದೆನೆಂಬುದು ನನ್ನದೇ ಭ್ರಮೆಯಾಗಿತ್ತು. ನಾನು ಎಂದೂ ಸೆರೆಮನೆಯಲ್ಲಿರಲಿಲ್ಲ, ಈಗ ಬಿಡುಗಡೆಯೂ ಇಲ್ಲ! ನಾನು ಈಗಿರುವ ಗೋಡೆ ಬಳಿಯ ಸ್ಥಳದಿಂದ ಓಡಿ ಹೋಗುವ ಅಗತ್ಯವೂ ಇಲ್ಲ! ನಾನು ಹಿಮ್ಮುಖವಾಗಿ ನೋಡದೇ ಇದ್ದುದೇ ನನ್ನ ತಥಾಕಥಿತ ಬಂಧನಕ್ಕೆ ಕಾರಣ. ಹಾಗೆಯೇ ಹಿಂತಿರುಗಿ ಗಮನ ಹರಿಸುವುದೇ ನನ್ನ ತಥಾಕಥಿತ ಬಿಡುಗಡೆಗೆ ನಿಜವಾದ ಸಾಧನ. ಸತ್ಯವಾಗಿ, ನಾನು ಯಾವಾಗಲೂ ಇರುವಂತೆ ಇದ್ದೇನೆ, ಬಂಧನವೂ ಇಲ್ಲ, ಬಿಡುಗಡೆಯೂ ಇಲ್ಲ!"

ಹೀಗೆ ಸತ್ಯಜ್ಞಾನದಿಂದ ಅವನು ಸುಮ್ಮನಾದ (ಶಾಂತನಾದ).

ಈ ಕತೆಯ ಎರಡು ಗೋಡೆಗಳೆಂದರೆ ಮಧ್ಯಮ ಮತ್ತು ಪ್ರಥಮ ಪುರುಷಗಳು. ವ್ಯಕ್ತಿಯ ಹಿಂದೆ ಇದೆಯೆಂದು ಹೇಳಲಾದ ಮೂರನೆಯ ಗೋಡೆ ಉತ್ತಮ ಪುರುಷ. ಮಧ್ಯಮ ಮತ್ತು ಪ್ರಥಮ ಪುರುಷ ವಿಚಾರ/ಗಮನಗಳ ಸಹಾಯದಿಂದ ಬಿಡುಗಡೆಗೆ ಯಾವ ದಾರಿಯೂ ಇಲ್ಲ. 'ನಾನು ಯಾರು?' ಎಂಬ ಉತ್ತಮ ಪುರುಷ ವಿಚಾರದಿಂದ ಮಾತ್ರ ಸರಿಯಾದ ಜ್ಞಾನ ದೊರೆಯುತ್ತದೆ, ಉತ್ತಮ ಪುರುಷವಾದ ಅಹಂ ಎಂದೂ ಇರಲಿಲ್ಲ ಎಂದು. ಹೀಗೆ ಉತ್ತಮ ಪುರುಷವನ್ನು ನಾಶಗೊಳಿಸಿದ ಮೇಲೆ ಮಾತ್ರ ಈ ಬಂಧ–ಮುಕ್ತಿಗಳು ಸುಳ್ಳು ಎಂಬ ಸತ್ಯ ತಿಳಿಯುತ್ತದೆ.

"'ನಾನು ಬಂಧಿತನಾಗಿದ್ದೇನೆ' ಎಂದು ಹುಚ್ಚನಂತೆ ಯೋಚಿಸುತ್ತಿರುವವರೆಗೆ ಬಂಧನ ಮತ್ತು ಬಿಡುಗಡೆ ಇರುತ್ತವೆ. 'ಈ ಬಂಧಿತನು ಯಾರು?' ಎಂದು ತನ್ನೊಳಗೇ ನೋಡಿಕೊಂಡಾಗ ನಿತ್ಯಮುಕ್ತವೂ, ನಿತ್ಯಪ್ರಕಾಶಮಾನವೂ ಆದ ಆತ್ಮವೊಂದೇ ಇದೆ ಎಂದು ತಿಳಿಯುತ್ತದೆ. ಹೀಗೆ ಬಂಧನದ ವಿಚಾರ ಇಲ್ಲದಿದ್ದಾಗಲೂ ಬಿಡುಗಡೆಯ ವಿಚಾರ ಉಳಿಯಬಲ್ಲದೇ!"

'ಉಳ್ಳದು ನಾರ್ಪದು', ಪದ್ಯ ೩೯

ಮೂರು ಗೋಡೆಗಳನ್ನು ಮೂರು ಸ್ಥಳ (ಪುರುಷ) ವೆಂದು[೭೮]–ಉತ್ತಮ, ಮಧ್ಯಮ ಮತ್ತು ಪ್ರಥಮ ಪುರುಷ ಎಂದು–ವಿವರಿಸಿದ ಹಾಗೆ ಅವುಗಳನ್ನು ಮೂರು ಕಾಲಗಳೆಂದು

---

೭೮. ಸಂಸ್ಕೃತವೂ ಸೇರಿದಂತೆ ಹಲವು ಭಾಷೆಗಳ ವ್ಯಾಕರಣದಲ್ಲಿ 'ನಾನು', 'ನೀನು' ಮತ್ತು 'ಅವನು, ಅವಳು, ಅದು' ಮುಂತಾದವನ್ನು 'ಪುರುಷ' ಎಂದು ಕರೆಯಲಾಗಿದೆ. ಆದರೆ ತಮಿಳು ವ್ಯಾಕರಣದಲ್ಲಿ ಅವನ್ನು ಅನುಕ್ರಮವಾಗಿ 'ಸ್ಥಳ'ಗಳೆಂದು ಹೆಸರಿಲಾಗಿದೆ. ಸ್ಥಳಗಳೆಂಬ ವರ್ಗೀಕರಣದಿಂದ ಸಾಧಕರಿಗೆ ಸಹಾಯಕ

ವರ್ತಮಾನ, ಭೂತ ಮತ್ತು ಭವಿಷ್ಯ–ಕೂಡ ವಿವರಿಸಬಹುದು. ವರ್ತಮಾನದ ಸತ್ಯ ಏನೆಂದು ತಿಳಿಯುವ ಸಲುವಾಗಿ, ಭೂತ–ಭವಿಷ್ಯಗಳ ಎಲ್ಲ ವಿಚಾರಗಳನ್ನು ತಡೆದು, ವರ್ತಮಾನದ ಮೇಲೆ ಗಮನ ಹರಿಸುವುದರಿಂದ, ಎಲ್ಲ ವಿಚಾರಗಳು ವರ್ತಮಾನವೂ ಕೂಡ ಮಾಯವಾಗುತ್ತದೆ. ಹೇಗೆ? "ಈಗ" ಕ್ಕಿಂತ ಒಂದು ಕ್ಷಣ ಮೊದಲು ನಡೆದದ್ದೂ ಕೂಡ ನಮ್ಮ ಪ್ರಕಾರ ಭೂತ, ಮತ್ತು "ಈಗ"ದ ಒಂದು ಕ್ಷಣ ನಂತರ ನಡೆಯುವುದೂ ಕೂಡ ಭವಿಷ್ಯ. ಆದ್ದರಿಂದ ಇದಕ್ಕಿಂತ ಒಂದು ಕ್ಷಣ ಮೊದಲು ಅಥವಾ ನಂತರದ ಯಾವುದೇ ಕಾಲಕ್ಕೆ ಗಮನ ಹರಿಸದೇ ಈಗ ಇರುವ ಒಂದು ಕ್ಷಣ ಯಾವುದೆಂದು ತಿಳಿಯಲು ಯತ್ನಿಸಿದರೆ, ತಥಾಕಥಿತ ವರ್ತಮಾನ ಕ್ಷಣದ ದಶಲಕ್ಷದೊಂದು ಭಾಗವೂ ಕೂಡ ಭೂತ ಅಥವಾ ಭವಿಷ್ಯವೆಂದು ತಿಳಿಯುತ್ತದೆ. ಇಂತಹ ಸೂಕ್ಷ್ಮ ಭೂತ, ಭವಿಷ್ಯ ಕ್ಷಣಗಳಿಗೂ ಗಮನ ಹರಿಸಿದರೆ ಮತ್ತು ಈ ಎರಡರ (ಭೂತ–ಭವಿಷ್ಯಗಳ) ನಡುವೆ ಏನಿದೆ ಎಂದು ತಿಳಿಯಲೆತ್ನಿಸಿದರೆ ಖಚಿತವಾದ ವರ್ತಮಾನವೆಂದು ಕಾಣುವುದು ಏನೂ ಇಲ್ಲ ಎಂದು ತಿಳಿಯತ್ತದೆ. ಅಸ್ತಿತ್ವವೇ ಇಲ್ಲದ ವರ್ತಮಾನ ಕಾಲದ ಪರಿಕಲ್ಪನೆ ಹೀಗೆ ಮಾಯವಾಗುತ್ತದೆ ಮತ್ತು ಕಾಲ–ದೇಶಗಳನ್ನು ಮೀರಿದ ಆತ್ಮದಸ್ತಿತ್ವ ಮಾತ್ರ ಆಗ ಉಳಿಯುತ್ತದೆ.

"ಭೂತ ಮತ್ತು ಭವಿಷ್ಯಗಳು ನಿತ್ಯ ಅನುಭವಿಸುವ ವರ್ತಮಾನಕ್ಕೆ ಸಂಬಂಧಿಸಿ ಮಾತ್ರ ಅಸ್ತಿತ್ವದಲ್ಲಿರುತ್ತವೆ. ಅವೂ ಕೂಡ ಘಟಿಸುವಾಗ ವರ್ತಮಾನವಿರುತ್ತವೆ ಮತ್ತು ಆಗುತ್ತವೆ. ಆದ್ದರಿಂದ (ಮೂರು ಕಾಲಗಳಲ್ಲಿ) ವರ್ತಮಾನ ಮಾತ್ರ ಇರುತ್ತದೆ. ವರ್ತಮಾನದ ಸತ್ಯ ತಿಳಿದುಕೊಳ್ಳದೇ (ಅದರ ಇಲ್ಲದಿರುವಿಕೆಯನ್ನು) ಭೂತ–ಭವಿಷ್ಯಗಳನ್ನು ತಿಳಿಯಲು ಯತ್ನಿಸುವುದೆಂದರೆ ಒಂದು (ಒಂದೆಂಬ ಘಟಕದ ಮೌಲ್ಯ) ತಿಳಿಯದೇ ಲೆಕ್ಕ ಮಾಡಲು ಪ್ರಯತ್ನಿಸಿದಂತೆ!"

ಸುಳಿವು ಸಿಗುತ್ತದೆ. ಹೇಗೆ? ಸತ್ಯಮಾರ್ಗದಲ್ಲಿ ಪ್ರಾಮಾಣಿಕ ಸಾಧಕನ ಏಕೈಕ ಗುರಿ ಮಾಯೆಯನ್ನು ಮೀರಿ ಬ್ರಹ್ಮವನ್ನು ತಲುಪುವುದಲ್ಲವೇ? ಹಾಗಾದರೆ ಮಾಯೆಯನ್ನು ದಾಟುವುದು ಅಥವಾ ಮೀರುವುದು ಹೇಗೆ?

ಕಾಲ ಮತ್ತು ಸ್ಥಳ ಎಂಬೆರಡು ಅಗ್ರಮಾನ್ಯ ಪರಿಕಲ್ಪನೆಗಳು ಮಾಯೆಯ ಮುಂಚಾಚಾಗಿವೆ. ಈ ಎರಡು ಪರಿಕಲ್ಪನೆಗಳ ರೂಪದಲ್ಲಿ ಮಾಯೆಯಿಂದ ಬಂಧಿತವಾಗದೇ ಇರುವ ಯಾವೊಂದು ವಿಚಾರವೂ ಇಲ್ಲ. ಪ್ರತಿಯೊಂದು ವಿಚಾರವೂ ಭೂತ ಮತ್ತು ಭವಿಷ್ಯ ಕಾಲಗಳನ್ನು ಒಳಗೊಂಡಿರಲೇಬೇಕು. (ಏಕೆಂದರೆ ಪ್ರತಿಯೊಂದು ವಿಚಾರವೂ ಕಾಲದ ಕ್ಷಣದಲ್ಲಿ ರೂಪುಗೊಂಡಿರುತ್ತದೆ ಮತ್ತು ಪ್ರತಿಯೊಂದು ಕ್ಷಣವೂ ಭೂತದಿಂದ ಭವಿಷ್ಯವಾಗುವ ಬದಲಾವಣೆ ಮಾತ್ರ) ಮತ್ತು ಮಧ್ಯಮ, ಪ್ರಥಮ ಪುರುಷ ಗಮನವನ್ನು ಒಳಗೊಂಡಿರಲೇಬೇಕು. ಇನ್ನೊಂದು ಕಡೆ, ಯಾರಾದರೂ ವರ್ತಮಾನ ಕಾಲ ಅಥವಾ ಉತ್ತಮ ಪುರುಷವನ್ನು ರೂಪವಾಗಿಸಲು ಪ್ರಯತ್ನಿಸಿದರೆ (ಅಂದರೆ, ಇವೆರಡರಲ್ಲಿ ಒಂದನ್ನು ಗಮನಿಸಿದರೆ) ಎಲ್ಲ ವಿಚಾರಗಳು ನಿಲ್ಲುತ್ತವೆ. ಏಕೆಂದರೆ ಮೂರು ಕಾಲಗಳಲ್ಲಿ ವರ್ತಮಾನವೂ, ಮೂರು ಸ್ಥಳ (ಪುರುಷ)ಗಳಲ್ಲಿ ಉತ್ತಮ ಪುರುಷವೂ ಮೂಲ ಪರಿಕಲ್ಪನೆಗಳು ಮತ್ತು ಇವೆರಡರ ಮುಖ್ಯ ಲಕ್ಷಣವೆಂದರೆ ಇವನ್ನು ಗಮನಿಸತೊಡಗಿದರೆ ತಮ್ಮ ಅಸ್ತಿತ್ವ ಕಳೆದುಕೊಂಡು ಮಾಯವಾಗುತ್ತವೆ. ಹೀಗೆ ಆದಿಕಾಲ (ವರ್ತಮಾನ) ಮತ್ತು ಆದಿಸ್ಥಳ (ಉತ್ತಮ ಪುರುಷ) ತಮ್ಮ ಅಸ್ತಿತ್ವ ಕಳೆದುಕೊಂಡಾಗ ಇವುಗಳ ಮೂಲಮಾಯೆಯೂ ತೊಲಗಿಹೋಗುತ್ತದೆ (ಮಾಯೆಯೆಂದರೆ 'ಇಲ್ಲದ್ದು) ಏಕೆಂದರೆ ಅದಕ್ಕೆ ತನ್ನದೇ ಆದ ನಿಜವಾದ ಅಸ್ತಿತ್ವವಿಲ್ಲ. ಮಾಯೆಯನ್ನು ಮೀರಿದ ಸ್ಥಿತಿ ಇದೇ ಆಗಿದೆ. ಆದ್ದರಿಂದಲೇ ನಿತ್ಯ ಇರುವುದೂ, ಏಕೈಕವೂ, ಪೂರ್ಣವೂ ಅನಂತವೂ ಆದ ಆತ್ಮವು ಪ್ರಕಾಶಿಸುತ್ತದೆ.

'ಉಳ್ಳದು ನಾರ್ಪದು', ಪದ್ಯ ೧೫

"ಪರಿಶೋಧಿಸಿದಾಗ, ನಾವು–ಯಾವಾಗಲೂ ಇರುವುದು–ಮಾತ್ರ ಇದ್ದೇವೆ. ಆಗ ಕಾಲ ಎಲ್ಲಿದೆ ಮತ್ತು ದೇಶ ಎಲ್ಲಿದೆ? ನಾವು ದೇಹವಾಗಿದ್ದರೆ (ಎಂದು ತಪ್ಪು ತಿಳಿದಿದ್ದರೆ) ನಾವು ದೇಶ–ಕಾಲಗಳಲ್ಲಿ ತೊಡಗಿರುತ್ತೇವೆ. ಆದರೆ ನಾವು ದೇಹವೇ? ನಾವು ಒಂದು, ಈಗ, ಆಗ, ಯಾವಾಗಲೂ ಮತ್ತು ದೇಶದಲ್ಲಿ ಒಂದು, ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಇದ್ದೇವೆ. ನಾವು ಕಾಲಾತೀತ, ದೇಶಾತೀತ ಆತ್ಮ–ಮಾತ್ರ ಇದ್ದೇವೆ!

'ಉಳ್ಳದು ನಾರ್ಪದು', ಪದ್ಯ ೧೬

ಆದ್ದರಿಂದ ಮೂರು ಸ್ಥಳಗಳಲ್ಲಿ (ಪುರುಷರಲ್ಲಿ) ಉತ್ತಮ ಪುರುಷದ ಮೇಲೆ, ಮೂರು ಕಾಲಗಳಲ್ಲಿ ವರ್ತಮಾನ ಕಾಲದ ಮೇಲೆ ಗಮನ ಹರಿಸುವುದು ಮಾತ್ರ ಮುಕ್ತಿಯ ದಾರಿ. ಈ ಶ್ರೀ ರಮಣರ ದಾರಿಯೂ ಕೂಡ ನಿಜವಾಗಿ ಬಂಧನದ ನಿವಾರಣೆ ಅಥವಾ ಮೋಕ್ಷ ಪ್ರಾಪ್ತಿಗಾಗಿ ಇಲ್ಲ! ನಾವು ಸದಾ ಕಾಲ ನಮ್ಮ ನಿತ್ಯ ಸ್ಥಿತಿಯಾದ ಶುದ್ಧ ಆನಂದದಲ್ಲಿ ನೆಲೆಸುವುದು ಮಾತ್ರ ಶ್ರೀ ರಮಣರ ದಾರಿಯ ಉದ್ದೇಶ. ಇದಕ್ಕಾಗಿ ನಾವು ಎಂದೂ ಬಂಧನದಲ್ಲಿ ಇರಲಿಲ್ಲವೆಂಬ ಸರಿಯಾದ ಜ್ಞಾನೋದಯದ ಮೂಲಕ ಮೋಕ್ಷದ ವಿಚಾರವನ್ನು ಬಿಟ್ಟು ಬಿಡಬೇಕು.

"ಉತ್ತಮ ಪುರುಷ ಅಥವಾ ವರ್ತಮಾನ ಕಾಲದ ಮೇಲೆ ಮಾತ್ರ ಗಮನ ಹರಿಸಬೇಕು ಎಂದು ಬೋಧಿಸಲಾಗಿದೆ. ಇದನ್ನೇ ಸೂಕ್ಷ್ಮವಾಗಿ ಮಾಡಿದರೆ ನೀವು ಆತ್ಮಾನಂದವನ್ನು ಭೋಗಿಸುತ್ತೀರಿ. ಎಲ್ಲ ಯೋಗಗಳೂ ಮುಗಿದಿರುತ್ತವೆ, ಪರಮ ಸಿದ್ಧಿ ಪಡೆದಿರುತ್ತೀರಿ. ತಿಳಿದು, ಇದರ ಹಬ್ಬದೂಟ ಮಾಡಿರಿ'.

'ಸಾಧನೈ ಸಾರಂ'

ಈಗ ಮತ್ತೆ ಮೂಲ ವಿಷಯವನ್ನು ಎತ್ತಿಕೊಳ್ಳೋಣ. ಮಧ್ಯಮ ಮತ್ತು ಪ್ರಥಮ ಪುರುಷಗಳತ್ತ ಸಾಧಕನ ವಿಚಾರ ಹರಿದಾಗ 'ನಾನು' ಅರಿವು ಮಿದುಳಿನಿಂದ ನಾಡಿಗಳ ಮೂಲಕ ಇಡೀ ದೇಹದಲ್ಲಿ ವ್ಯಾಪಕ ಶಕ್ತಿರೂಪದಲ್ಲಿ ಹರಡುತ್ತದೆ; ಆದರೆ ಅದೇ ವಿಚಾರವನ್ನು ಉತ್ತಮ ಪುರುಷದ ಮೇಲೆ ಹರಿಸಿದಾಗ, ವಿರುದ್ಧ ದಿಕ್ಕಿನಲ್ಲಿ ಬಳಸಿರುವುದರಿಂದ, 'ನಾನು' ಅರಿವು ವ್ಯಾಪಕ ಶಕ್ತಿ ರೂಪದ ಚಟುವಟಿಕೆಯ ಬದಲು ಆತ್ಮವಿಚಾರದ ಶಕ್ತಿ ರೂಪ ತಳೆಯುತ್ತದೆ. (ಅಂದರೆ 'ಮಾಡುವ' ಶಕ್ತಿಯು 'ಇರುವ' ಶಕ್ತಿಯಾಗಿ ರೂಪಾಂತರವಾಗುತ್ತದೆ) **ನಾಡಿ ಮಂಥನ ಎಂದು ಕರೆಯುವುದು ಇದನ್ನೇ**. ನಾಡಿಗಳಲ್ಲಿ ಹೀಗೆ ಮಂಥನ (ಕಡೆಯುವಿಕೆ) ನಡೆಯುವುದರಿಂದ ನಾಡಿಗಳ ಮೂಲಕ ಎಲ್ಲೆಲ್ಲು ಹಂಚಿಹೋದ 'ನಾನು' ಅರಿವು ಹಿಂದಕ್ಕೆ ತಿರುಗಿ, ಹಿಂದೆ ಬಂದು ಮಿದುಳಿನಲ್ಲಿ ಶೇಖರವಾಗುತ್ತದೆ. ಇದೇ ಅದರ ಹರಡುವಿಕೆಯ ಆರಂಭ ಬಿಂದು, ಅಲ್ಲಿಂದ ಇದು ಹೃದಯವನ್ನು, ಶುದ್ಧ ಅರಿವನ್ನು, ಅದರ ಮೂಲವನ್ನು ತಲುಪಿ, ಮುಳುಗಿ ಹೋಗಿ, ಸ್ಥಾಪಿಸಲ್ಪಡುತ್ತದೆ.

ರಾಜಯೋಗದಲ್ಲಿ ಎಲ್ಲ ನಾಡಿಗಳಲ್ಲಿ ವ್ಯಾಪಿಸಿದ 'ನಾನು' ಅರಿವನ್ನು ಪ್ರಾಣಕುಂಭಕದ (ಉಸಿರಾಟ ನಿಯಂತ್ರಣ) ಒತ್ತಡದಿಂದ ಹುಟ್ಟಿದ ಶಕ್ತಿಯ ಮೂಲಕ ಅದರ ಆರಂಭ ಬಿಂದುವಿಗೆ ಬಲವಂತವಾಗಿ ಹಿಂದಕ್ಕೆ ತಳ್ಳಲಾಗುತ್ತದೆ. ಆದರೆ ಇದು ಹಿಂಸಾ ಪದ್ಧತಿಯಾಗಿದೆ.

ಶ್ರೀ ಭಗವಾನರು ಹೀಗೆ ಹೇಳುತ್ತಿದ್ದರು: 'ರಾಜಯೋಗದಲ್ಲಿ ಮಾಡುವಂತೆ ಉಸಿರು ನಿಯಂತ್ರಣದಿಂದ 'ನಾನು' ಅರಿವನ್ನು ಬಲವಂತವಾಗಿ ಹಿಂದೆ ತಳ್ಳುವುದು ಹಿಂಸಾ ಪದ್ಧತಿ. ಇದು ಹೇಗೆಂದರೆ ಓಡಿಹೋದ ಹಸುವನ್ನು ಬೆನ್ನಟ್ಟಿ, ಹೊಡೆದು, ಹಿಡಿದು, ಬಲವಂತವಾಗಿ ಕೊಟ್ಟಿಗೆಗೆ ಎಳೆದು ತಂದು ಕಡೆಗೆ ಅಲ್ಲಿ ಕಟ್ಟಿ ಹಾಕಿದಂತೆ. ಅದೇ 'ನಾನು' ಅರಿವನ್ನು ಶೋಧದ ಮೂಲಕ ತನ್ನ ಮೂಲಕ್ಕೆ ವಾಪಸ್ಸು ತರುವುದು ಸೌಜನ್ಯದ, ಶಾಂತಿಯ ಪದ್ಧತಿ. ಹೇಗೆಂದರೆ ಆಕಳಿಗೆ ಹಿಡಿಯಲ್ಲಿ ಹಸಿರು ಹುಲ್ಲು ತೋರಿಸಿ, ಆಸೆ ತರಿಸಿ, ಸವರಿ, ಮುದ್ದಾಡಿ, ತಾನಾಗಿ ನಮ್ಮ ಹಿಂದೆ ಬರುವಂತೆ ಮಾಡಿ ಕೊಟ್ಟಿಗೆಗೆ ತಂದು ಕಡೆಗೆ ಅಲ್ಲಿ ಕಟ್ಟಿ ಹಾಕಿದಂತೆ". ಇದು ಸುರಕ್ಷಿತವಾದ ಸಂತೋಷದಾಯಕ ಮಾರ್ಗ. ರಾಜಯೋಗದಲ್ಲಿ ಉಸಿರು ನಿಯಂತ್ರಣ ಪದ್ಧತಿಯ ಮೂಲಕ ಮಾಡಿದ ನಾಡಿ ಮಂಥನವನ್ನು ತಡೆದುಕೊಳ್ಳಲು ದೇಹಕ್ಕೆ ಯೌವನ ಬೇಕು, ಗಟ್ಟಿತನಬೇಕು. ಇದೇ ಮಂಥನವನ್ನು ದುರ್ಬಲವಾದ ಅಥವಾ ವಯಸ್ಸಾದ ದೇಹದಲ್ಲಿ ಮಾಡಿದರೆ, ಅದನ್ನು ತಡೆದುಕೊಳ್ಳಲು ದೇಹದಲ್ಲಿ ಶಕ್ತಿ ಇಲ್ಲವಾದ್ದರಿಂದ ನರರೋಗಗಳು, ಭೌತಿಕ ರೋಗಗಳು, ಹುಚ್ಚು, ಮುಂತಾದ ಹಲವು ತೊಂದರೆಗಳು ಉಂಟಾಬಹುದು. ಆದರೆ ಮಂಥನವು ಶೋಧದ ಮೂಲಕ ನಡೆಯುವಂತೆ ಮಾಡಿದರೆ ಈ ಯಾವ ಅಪಾಯಕ್ಕೂ ಆಸ್ಪದವಿರುವುದಿಲ್ಲ.

"ಆತ್ಮದ ಮೇಲೆ, ಅರಿವಿನ ಮೇಲೆ, ವಿಚಾರ ಮಾಡುವುದರಿಂದ ಮತ್ತು ಅಲ್ಲಿ ನೆಲೆಸುವ ಅಭ್ಯಾಸ ಮಾಡುವುದರಿಂದ ಅವನು ಹುಚ್ಚನಾದ ಎಂದು ಹೇಳುವುದೆಂದರೆ 'ಅಮರತ್ವದ ಅಮೃತ ಕುಡಿಯುವುದರಿಂದ ಅವನು ಸತ್ತ' ಎಂದು ಹೇಳಿದಂತೆ".

'ಗುರು ವಾಚಕ ಕೋವೈ', ಪದ್ಯ ೭೪೫

ಶೋಧ ಮಾರ್ಗದಲ್ಲಿ ನಾಡಿಗಳಿಂದ ಹಿಂಬರುವಿಕೆಯು ಸೆಳೆತ, ಒತ್ತಡವಿಲ್ಲದೇ ನಿದ್ದೆ ಬಂದಷ್ಟೇ ಶಾಂತವಾಗಿ ನಡೆಯುತ್ತದೆ. ಆದ್ದರಿಂದ ಮೂವತ್ತು ವಯಸ್ಸಿನ ಒಳಗೆ ಗುರಿ ತಲುಪಬೇಕೆಂದು ಕೆಲವು ಶಾಸ್ತ್ರಗಳಲ್ಲಿ ಇರುವ ನಿಯಮವು ರಾಜಯೋಗದ ಮಾರ್ಗಕ್ಕೆ ಮಾತ್ರ ಅನ್ವಯಿಸುತ್ತದೆ, ಶ್ರೀ ರಮಣರ ಮಾರ್ಗ, ಶೋಧಪಥಕ್ಕೆ[೭೯] ಅಲ್ಲ!

ಹೃದಯದಲ್ಲಿ ಉದಯಿಸಿ, ದೇಹದ ತುಂಬ ವ್ಯಾಪಿಸಿದ 'ನಾನು'-ಅರಿವು ಹಿಂದಕ್ಕೆ ಹರಿಯುವ ಅನುಭವವು ಬರುವ ನಾಳೆಗೆ ಸುಷುಮ್ನಾ ನಾಡಿ ಎನ್ನುತ್ತಾರೆ. ಆನುಷಂಗಿಕ ಅಂಗಗಳಾದ್ದರಿಂದ ಕಾಲು, ಕೈಗಳನ್ನು ಪರಿಗಣಿಸದೇ ದೇಹದ ಮುಖ್ಯ ಭಾಗದಲ್ಲಿ ಮೂಲಾಧಾರದಿಂದ ಸಹಸ್ರಾರಕ್ಕೆ **'ನಾನು' ಅರಿವು ಹರಿಯುವ ಅನುಭವವು ಬರುವ ನಾಳೆಯೊಂದೇ ಸುಷುಮ್ನಾ ಆಗಿದೆ.**

'ನಾನು' ಅರಿವು ಸುಷುಮ್ನಾ ಮೂಲಕ ಹಿಂತಿರುಗುವಾಗ ಸಾಧಕನಿಗೆ ದಾರಿಯಲ್ಲಿ ಷಟ್ಚಕ್ರ ಸ್ಥಳಗಳ ಅನುಭವವಾಗಬಹುದು ಅಥವಾ ಅನುಭವವಾಗದೇ ನೇರವಾಗಿ ಹೃದಯ ತಲುಪಬಹುದು. ರೈಲಿನಲ್ಲಿ ದಿಲ್ಲಿಗೆ ಪ್ರಯಾಣಿಸುವಾಗ ದಾರಿಯಲ್ಲಿ ನಿಲ್ದಾಣಗಳನ್ನು ಮತ್ತು ದೃಶ್ಯಗಳನ್ನು ಯಾರಾದರೂ ನೋಡಲೇಬೇಕೆಂದಿಲ್ಲ. ಅವುಗಳಿಗೆ ಗಮನಕೊಡದೇ

೭೯. ಇಂಗ್ಲೀಷ್ ಪುಸ್ತಕದ ಪುಟ ೧೬೬ರಲ್ಲಿ ಸಂಖ್ಯೆ ಇದೆ, ಅಡಿ ಟಿಪ್ಪಣಿ ಇಲ್ಲ.

ಹಾಯಾಗಿ ನಿದ್ರಿಸುತ್ತ ದಿಲ್ಲಿ ತಲುಪಲಾರನೇ? ಆದರೂ, ದೇವರ ವಿಭಿನ್ನ ನಾಮ, ರೂಪಗಳ ಬಗ್ಗೆ ಹಿಂದಿನ ಭಕ್ತಿ ವಾಸನೆಗಳಿಂದಾಗಿ (ಇವೆಲ್ಲವೂ ಕಾಲ, ದೇಶ ಬದ್ಧ) ಕೆಲವು ಸಾಧಕರು ಷಟ್ಚಕ್ರಗಳು, ದಿವ್ಯ ದೃಶ್ಯಗಳು (ಕಾಣ್ಕೆಗಳು), ನಾದಗಳು ಮುಂತಾದವನ್ನು ಅನುಭವಿಸಬಹುದು. ಆದರೆ ಈ ರೀತಿ ವಾಸನೆಗಳ ಅಡಚಣೆ ಇಲ್ಲದವರಿಗೆ ಪ್ರಯಾಣವು ಸುಖಕರವೂ ನಿರ್ವಿಶೇಷವೂ ಆಗಿರುತ್ತದೆ. ಮೊದಲ ಪ್ರಸಂಗದಲ್ಲಿ ಈ ಅನುಭವಗಳಾಗುವುದು ಆತ್ಮವಿಚಾರದಲ್ಲಿ ಪ್ರಮಾದದಿಂದಾಗಿ, ಏಕೆಂದರೆ ಅಲ್ಲಿ ನಡೆಯುವುದು ಮಧ್ಯಮ ಪುರುಷದ ಗಮನ! ಆತ್ಮವಿಚಾರವು ಬಿಟ್ಟು ಹೋದುದನ್ನು ಇದೇ ಎತ್ತಿ ತೋರಿಸುತ್ತದೆ. ಆತ್ಮವಿಚಾರದಲ್ಲಿ ಪ್ರಮಾದಕ್ಕೆ ಆಸ್ಪದ ಕೊಡದ ಅಗಾಧ ಪ್ರಾಮಾಣಿಕ ಸಾಧಕರಿಗೆ ಈ ವಸ್ತುಗತ ಅನುಭವಗಳು ಎಂದೂ ಉಂಟಾಗುವುದಿಲ್ಲ! ಈ ಸಂದರ್ಭದಲ್ಲಿ ಶ್ರೀ ರಾಮಕೃಷ್ಣರ ಕೆಳಗಿನ ಉತ್ತರಗಳನ್ನು ಗಮನಿಸುವುದು ಸೂಕ್ತವಾಗಿದೆ. ಸ್ವಾಮಿ ವಿವೇಕಾನಂದರು ಅವರಿಗೆ ವರದಿ ಮಾಡಿದರಂತೆ: "ತಮಗೆ ಕಾಣ್ಕೆಗಳಾಗಿವೆ" ಎಂದು ಎಲ್ಲರೂ ಹೇಳುತ್ತಾರೆ, ಆದರೆ ನನಗೇನೂ ಕಂಡಿಲ್ಲ!" ಗುರುಗಳು ಹೇಳಿದರಂತೆ, "ಅದು ಒಳ್ಳೆಯದು!" ಇನ್ನೊಮ್ಮೆ ಸ್ವಾಮಿ ವಿವೇಕಾನಂದರು ತಮ್ಮ ಸಾಧನಾ ಮಾರ್ಗದಲ್ಲಿ ತಮಗೆ ಕಾಲಜ್ಞಾನದಂತಹ ತಾಂತ್ರಿಕ ಸಿದ್ಧಿಗಳು ದೊರೆತಂತೆ ಅನಿಸುತ್ತದೆ ಎಂದು ವರದಿ ಮಾಡಿದಾಗ, ಗುರುಗಳು ಎಚ್ಚರಿಸಿದರು: "ಸ್ವಲ್ಪ ಕಾಲ ಸಾಧನೆ ನಿಲ್ಲಿಸು, ಅವು ಬಿಟ್ಟು ಹೋಗಲಿ!" ಆದ್ದರಿಂದ ಇದರಿಂದ ಸ್ಪಷ್ಟವಾಗುವುದೇನೆಂದರೆ ಈ ಅನುಭವಗಳಾಗುವುದು ಆತ್ಮವಿಚಾರದಲ್ಲಿ ಪ್ರಮಾದದಿಂದಾಗಿ ಅಡ್ಡಿಯುಂಟಾಗಿ ದಾರಿಯಲ್ಲಿ ನಿಂತು ವಿಳಂಬ ಮಾಡುವವರಿಗೆ ಮಾತ್ರ.

ಸುಷುಮ್ನಾ ನಾಡಿಯ ಮುಖಾಂತರ ಮಾತ್ರ 'ನಾನು' ಅರಿವು ಹಿಮ್ಮುಖ ಹರಿಯುವಾಗಲೂ ತನ್ನ ತೀಕ್ಷ್ಣ ಪ್ರಖರತೆಯಿಂದಾಗಿ ಸುಷುಮ್ನಾ ಹತ್ತಿರವಿರುವ ಪಂಚ ಜ್ಞಾನೇಂದ್ರಿಯಗಳು ಉದ್ದೀಪ್ತವಾಗಿ ಮೇಲಿನಂತಹ ಅನುಭವಗಳಾಗುತ್ತವೆ. ಹೇಗೆ? ಸುಷುಮ್ನಾದಲ್ಲಿ ಇರುವ 'ನಾನು' ಅರಿವಿನ ಬೆಳಕು ಕಣ್ಣನ್ನು ಉದ್ದೀಪಿಸಿದಾಗ ದೇವರ ಮತ್ತು ಹಲವು ದಿವ್ಯಲೋಕಗಳ ಕಾಣ್ಕೆ ಉಂಟಾಗುತ್ತದೆ; ಇದು ಕಿವಿಯನ್ನು (ಶ್ರವಣೇಂದ್ರಿಯ) ಉದ್ದೀಪಿಸಿದಾಗ ದೇವದುಂದುಭಿನಾದ, ದಿವ್ಯ ಘಂಟಾನಾದ, ಓಂಕಾರ, ಮುಂತಾದ ದಿವ್ಯ ಸದ್ದುಗಳು ಕೇಳುತ್ತವೆ; ಇದು ಮೂಗನ್ನು ಉದ್ದೀಪಿಸಿದಾಗ ಖುಷಿ ಹುಟ್ಟಿಸುವ ದಿವ್ಯ ಸುವಾಸನೆಗಳ ಅನುಭವವಾಗುತ್ತದೆ; ಇದು ನಾಲಿಗೆಯನ್ನು ಉದ್ದೀಪಿಸಿದಾಗ ರುಚಿಕರವಾದ ದಿವ್ಯ ಅಮೃತದ ಅನುಭವವಾಗುತ್ತದೆ; ಇದು ಚರ್ಮ (ಸ್ಪರ್ಶೇಂದ್ರಿಯ)ವನ್ನು ಉದ್ದೀಪಿಸಿದಾಗ ಅತ್ಯಂತ ಸಂತೋಷದ ಭಾವವು ಇಡೀ ದೇಹದಲ್ಲಿ ಹಬ್ಬುತ್ತದೆ ಅಥವಾ ಆನಂದ ಸಾಗರದಲ್ಲಿ ತೇಲುತ್ತಿರುವ ಭಾವ ಉಂಟಾಗುತ್ತದೆ. ಈ ಅನುಭವಗಳು ಸಾಮಾನ್ಯ ಜಾಗೃತ ಸ್ಥಿತಿಯ ಇಂದ್ರಿಯಾನುಭವಗಳಿಗಿಂತ ಹೆಚ್ಚು ಸ್ಪಷ್ಟವೂ ಹೆಚ್ಚು ವಾಸ್ತವವೂ ಆಗಿರುವಂತೆ ತೋರುವುದರಲ್ಲಿ ಅಚ್ಚರಿಯೇನಿಲ್ಲ, ಏಕೆಂದರೆ ಜಾಗ್ರತ ಸ್ಥಿತಿಯ ಅನುಭವಗಳು ಸ್ಥೂಲ ಪಂಚೇಂದ್ರಿಯಗಳಿಂದ ಉಂಟಾಗುತ್ತವೆ, ಇವು ಅಶುದ್ಧ 'ನಾನು' ಅರಿವಿನಿಂದ ದೇಹದ ತುಂಬ ಹರಡಿಕೊಂಡಿರುತ್ತವೆ. ಆದರೆ ದಿವ್ಯ ಲೋಕಗಳ ಅನುಭವಗಳು ಸೂಕ್ಷ್ಮ ಪಂಚೇಂದ್ರಿಯಗಳ ಮೂಲಕ ಉಂಟಾಗುತ್ತವೆ, ಇವು ಶುದ್ಧ, ಕೇಂದ್ರೀಕೃತ 'ನಾನು' ಅರಿವಿನಿಂದ ಉಂಟಾಗುತ್ತವೆ. **ಆದರೂ ಇವೆಲ್ಲವೂ ಕೇವಲ ವಿಶೇಷ–ಮನ–ಅನುಭವಗಳು, ನಿರ್ವಿಶೇಷ ಏಕಾತ್ಮಾನುಭವವಲ್ಲ.**

ಮನಸ್ಸನ್ನು ಉಳಿದೆಲ್ಲ ನಾಡಿಗಳಿಂದ ಸುಷುಮ್ನೆಗೆ ಹಿಂತೆಗೆದುಕೊಂಡ ಕಾರಣ ಮನಸ್ಸು ಹೆಚ್ಚು ಸೂಕ್ಷ್ಮವೂ, ಉಜ್ವಲವೂ ಆಗಿರುವುದರಿಂದ ಮತ್ತು ಲೌಕಿಕ ಕಾಮನೆಗಳಿಂದ ಮುಕ್ತವಾದ ಕಾರಣ ಅತ್ಯಂತ ಶುದ್ಧವಾಗಿರುವುದರಿಂದ ಸೂಕ್ಷ್ಮ ಪಂಚೇಂದ್ರಿಯಗಳ ಮೂಲಕ ಪೂರ್ವ ಶುಭ ವಾಸನೆಗಳನ್ನು ಮಾತ್ರ ಮೇಲೆ ಹೇಳಿದಂತೆ ಬಿಂಬಿಸುವುದು ಮನಸ್ಸಿಗೆ ಸಾಧ್ಯವಾಗುತ್ತದೆ. ಆದಾಗ್ಯೂ, ಈ ಕಾಣ್ಕೆ ಮತ್ತಿತರ ಅನುಭವಗಳಿಂದ ಮನಸ್ಸು ಆತ್ಮವಾಗಿ ರೂಪಾಂತರವಾಯಿತೆಂದು ನಿರ್ಣಯಿಸಬಾರದು. ಮನೋನಾಶವಾಗುವುದು ಇನ್ನೂ ಬಾಕಿ ಇದೆ. ಶುಭ ವಾಸನೆಗಳಿಂದ ಇನ್ನೂ ಜೀವಂತವಾಗಿರುವುದರಿಂದ ಇದು ಹೆಚ್ಚೆಚ್ಚು ಸೂಕ್ಷ್ಮವಾದ, ಪ್ರಖರವಾದ ಮಧ್ಯಮ ಮತ್ತು ಪ್ರಥಮ ಪುರುಷ ವಸ್ತುಗಳನ್ನು ಸೃಷ್ಟಿಸಿ ಗ್ರಹಿಸುತ್ತದೆ ಮತ್ತು ಅವುಗಳಲ್ಲಿ ಸಂತೋಷ ಪಡುತ್ತದೆ. **ಆದ್ದರಿಂದ ಇದು ನಿರ್ವಿಶೇಷ ಜ್ಞಾನಾನುಭವ ಅಲ್ಲವೇ ಅಲ್ಲ, ಅದರಲ್ಲಿ ವಾಸನಾಕ್ಷಯ ಬೇಕಾಗುತ್ತದೆ**. ತೋರಿ ಅನುಭವಿಸುವುದೆಲ್ಲವೂ ಮಧ್ಯಮ ಪುರುಷ ಜ್ಞಾನ. ಅಂದರೆ ಸಾಧನೆಯಾದ ಉತ್ತಮ ಪುರುಷ ವಿಚಾರವು ಆ ವೇಳೆಗೆ ಕಳೆದು ಹೋಯಿತು ಎಂದು ಅರ್ಥ. ಹಲವರು ರುಚಿ, ಬೆಳಕು, ನಾದ ಮುಂತಾದ ಈ ವಿಶೇಷ ಅನುಭವಗಳನ್ನು ಬ್ರಹ್ಮಜ್ಞಾನದ ಅಂತಿಮ ಸಿದ್ಧಿಯೆಂದು ಭಾವಿಸುತ್ತಾರೆ; ಈ ಅನುಭವಗಳಾದ್ದರಿಂದ ಮೋಕ್ಷ ಪ್ರಾಪ್ತಿಯಾಯಿತೆಂದು ತಿಳಿಯುತ್ತಾರೆ; ಹೀಗೆ ಮಧ್ಯಮ ಮತ್ತು ಪ್ರಥಮ ಪುರುಷಗಳ ಗಮನದಿಂದ ಹೆಚ್ಚೆಚ್ಚು ಗೋಜಲಾಗುತ್ತಾರೆ; ಆತ್ಮವಿಚಾರದ ಹಿಡಿತ ಕಳೆದುಕೊಳ್ಳುತ್ತಾರೆ. ಇಂತಹ ಸಾಧಕರನ್ನು ಯೋಗಭ್ರಷ್ಟರು ಎಂದು ಕರೆಯುತ್ತಾರೆ. ಇದು ಹೇಗೆಂದರೆ ದಿಲ್ಲಿಗೆ ಹೊರಟ ವ್ಯಕ್ತಿ ಮಧ್ಯದ ಯಾವುದೋ ನಿಲ್ದಾಣದಲ್ಲಿ ರೈಲಿನಿಂದ ಇಳಿದು ನಿಜಕ್ಕೂ ಇದೇ ದಿಲ್ಲಿ ಎಂದು ಯೋಚಿಸುತ್ತ ಆಕರ್ಷಕ ವೈಭವದಿಂದ ಭ್ರಮಿತನಾದಂತೆ! **ಸಾಧನೆಯ** ಪ್ರಕ್ರಿಯೆಯಲ್ಲಿ ಬರಬಹುದಾದ ಅತಿ ಮಾನುಷ ಶಕ್ತಿಗಳು, **ಸಿದ್ಧಿಗಳೂ** ಕೂಡ ಬರೀ ನಮ್ಮ **ಭ್ರಮೆ**ಯಾಗಿವೆ. ಇವು ಮುಕ್ತಿದಿಶೆಯಲ್ಲಿ ನಮ್ಮ ಪ್ರಗತಿಯನ್ನು ತಡೆದು ಯಾವುದೋ ಗೊತ್ತಿಲ್ಲದ ಸ್ಥಳದಲ್ಲಿ ಇಳಿಸುತ್ತವೆ.

ಇಂತಹ ಅಪಾಯುಗಳಿಗೆ ಸಿಕ್ಕಿ ಬೀಳುವುದನ್ನು ತಪ್ಪಿಸಿಕೊಳ್ಳಲು ನಾವು ಮಾಡಬೇಕಾದ್ದೇನು? ಇಂತಹ ಕಷ್ಟ ಸ್ಥಿತಿಯಲ್ಲೂ ಭಗವಾನ್ ಶ್ರೀ ರಮಣರು ಕೊಟ್ಟ ಸೂಚನೆ ಸೂಕ್ತ ಔಷಧಿಯಾಗಿ ಪರಿಣಮಿಸುತ್ತದೆ! ಹೇಗೆ? ಇಂತಹ ವಿಶೇಷ ಅನುಭವಗಳಿಂದ ಆವೃತವಾದಾಗ 'ಯಾರಿಗೆ ಈ ಅನುಭವಗಳು?' ಎಂಬ ರಮಣಾಸ್ತ್ರವನ್ನು ಬಳಸಬೇಕು. 'ನನಗೆ' ಎಂದು ಪ್ರತಿಸ್ಪಂದನ ಬರುತ್ತದೆ. ಇದರಿಂದ, 'ನಾನು ಯಾರು?' ಶೋಧಿಸುತ್ತ ತಕ್ಷಣ ಆತ್ಮವಿಚಾರದ ಎಳೆ ಮರಳಿ ಹಿಡಿದುಕೊಳ್ಳಬಹುದು. ಹೀಗೆ ಆತ್ಮವಿಚಾರವು ಮರಳಿದಾಗ ಆ ಮಧ್ಯಮ ಮತ್ತು ಪ್ರಥಮ ಪುರುಷಗಳ ಅನುಭವಗಳು ತಾವಾಗಿ ಮಾಯವಾಗುತ್ತವೆ, ಏಕೆಂದರೆ ಅವನ್ನು ಗಮನಿಸಲು ಯಾರೂ ಇರುವುದಿಲ್ಲ. (ಹೇಗೆಂದರೆ, ಮೈಮೇಲೆ ಆವೇಶ ಬಂದ ವ್ಯಕ್ತಿಯು ಇತರರು ಗಮನಿಸಿ ಹಿಡಿಯಲು ಯತ್ನಿಸುತ್ತಿದ್ದರೆ ಹೆಚ್ಚೆಚ್ಚು ಹಾರಿ ಕುಣಿಯತ್ತಾನೆ. ಯಾರೂ ಗಮನಿಸದಿದ್ದರೆ ಬಿಟ್ಟು ಹೋಗುತ್ತದೆ) **ಈ ವಿಶೇಷ ಬಾಹ್ಯ ಇಂದ್ರಿಯ ವಿಷಯಗಳನ್ನು ತಿಳಿಯುವುದನ್ನು ಬಿಟ್ಟು ಮನಸ್ಸು ತನ್ನ ಬೆಳಕಿನ ರೂಪಕ್ಕೆ (ನಾನು ಅರಿವಿಗೆ)**[೮೦] **ಮರಳಿದಾಗ,** ಅದು ತನ್ನ ಮೂಲವಾದ ಹೃದಯದಲ್ಲಿ ಮುಳುಗುತ್ತದೆ

೮೦. "ಬಾಹ್ಯ ವಿಷಯಗಳನ್ನು ತಿಳಿಯುವುದನ್ನು ಮನಸ್ಸು ಬಿಟ್ಟು ಕೊಟ್ಟಾಗ ತನ್ನದೇ ಬೆಳಕಿನ (ಪ್ರಕಾಶದ) ರೂಪ ತಿಳಿಯುತ್ತದೆ". ನೋಡಿ, 'ಉಪದೇಶ ಉಂದಿಯಾರ್', ಪದ್ಯ ೧೬

ಮತ್ತು ಆ ರೂಪವನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತದೆ. ಆದ್ದರಿಂದ ರಾಜಯೋಗ ಮಾರ್ಗದ ಸಾಧಕರಿಗೂ 'ನಾನು ಯಾರು?' ಶೋಧನೆಯು ಅತ್ಯುತ್ತಮ ಸಾಧನವಾಗಿದೆ. ಇದು ನಮ್ಮನ್ನು ಕೊನೆಯವರೆಗೆ ಸುರಕ್ಷಿತವಾಗಿ, ದಾರಿ ತೋರಿಸಿ ಉದ್ಧರಿಸುತ್ತದೆ. ಇದು ಶ್ರೀ ರಮಣ ಸದ್ಗುರುವಿನ ಕೃಪಾನುಗ್ರಹದಿಂದ ಸಿಕ್ಕಿರುವ **ಬ್ರಹ್ಮಾಸ್ತ್ರ!** ಇಡೀ ಜಗತ್ತಿನ ಗುರಿಯಾದ ಶಾಶ್ವತ ಆನಂದಮಾರ್ಗದಿಂದ ನಾವು ವಿಚಲಿತವಾಗದಂತೆ ಕಾಪಾಡುವ ದಾರಿದೀಪ ಇದೇ ಆಗಿದೆ. ನಮ್ಮನ್ನು ಆತ್ಮವಾಗಿ, 'ನಾನು ಇದ್ದೇನೆ ಅದು ನಾನು' ಅರಿವಾಗಿ, ಪರಿವರ್ತಿಸುವುದು ಈ ಶ್ರೀ ರಮಣಮಾರ್ಗವೊಂದೇ!

ಸಾಧನೆಯ ದಾರಿಯಲ್ಲಿ ಅಭ್ಯಾಸ ಬಲದಿಂದ ಅಹಂ ಕರಗುವ ಸ್ಥಿತಿ ಮತ್ತು ಇದುವರೆಗೆ ತನ್ನ ಗುರಿಯಾಗಿದ್ದ ಆತ್ಮದರಿವು ಎಂದರೇನೆಂದು ಅರಿಯಲು ಸಾಧಕನು ಈಗ ಶಕ್ತನಾಗುತ್ತಾನೆ. ದೇಹದ ಅರಿವು ಅಥವಾ ಇನ್ನಾವ ವಿಶೇಷಣವೂ ಇಲ್ಲದ ಶುದ್ಧಾತ್ಮದ ಅಸ್ತಿತ್ವವು ಹಲವು ಬಾರಿ ಅವನ ಅನುಭವಕ್ಕೆ ಬಂದರೂ, ಇದು ಇನ್ನೂ ಅಭ್ಯಾಸದ ಹಂತ, ಅಂತಿಮ ಸಿದ್ಧಿಯಲ್ಲ! ಏಕೆ? ಕೆಲವೊಮ್ಮೆ ಬಹಿರ್ಮುಖವಾದ, ಕೆಲವೊಮ್ಮೆ ಅಂತರ್ಮುಖವಾದ ಎರಡು ವಿಕಲ್ಪ ಭಾವಗಳಿರುವುದರಿಂದ ಮತ್ತು ಅಂತರ್ಮುಖಿಯಾಗಲು ಪ್ರಯತ್ನಿಸುವ, ಬಹಿರ್ಮುಖಿಯಾದಾಗ ಆ ಪ್ರಯತ್ನ ಬಿಟ್ಟು ಹೋಗುವ ಭಾವವಿರುವುದರಿಂದ ಈ ಹಂತವನ್ನು 'ಅಂತಿಮ ಸಿದ್ಧಿಯಲ್ಲ' ಎನ್ನಲಾಗಿದೆ. ಇದಕ್ಕೆ ಸಂಬಂಧಿಸಿ ಶ್ರೀ ಭಗವಾನರು ತೋರಿಸುವುದೆಂದರೆ, "ಹೀಗೆ ಸಾಧನೆಯಲ್ಲಿ (ಆತ್ಮವಿಚಾರದಲ್ಲಿ) ಮನಸ್ಸು (ಗಮನವು) ಸ್ಥಿರವಾಗಿದ್ದರೆ ಒಳಗಿನಿಂದ ದಿವ್ಯಾನುಗ್ರಹದ ಶಕ್ತಿಯೊಂದು ತಾನಾಗಿ ಉದಯಿಸುತ್ತದೆ ಮತ್ತು ಮನಸ್ಸನ್ನು ಅಧೀನಗೊಳಿಸಿ ಅದನ್ನು ಹೃದಯಕ್ಕೆ ಕೊಂಡೊಯ್ಯುತ್ತದೆ." ಈ ದಿವ್ಯಾನುಗ್ರಹ ಶಕ್ತಿ ಯಾವುದು? **ಇದು ನಮ್ಮ ಅಸ್ತಿತ್ವದ ಪರಿಪೂರ್ಣ ಸ್ಪಷ್ಟತೆ, ಹೃದಯದಲ್ಲಿ 'ನಾನು, ನಾನು' ಎಂದು ಸಮೃದ್ಧ ಅನುಗ್ರಹದಿಂದ ಸದಾ ಪ್ರಕಾಶಿಸುವ ಪರಮಾತ್ಮ ರೂಪವೇ ಹೊರತು ಮತ್ತೇನಲ್ಲ!**

ಅಯಸ್ಕಾಂತ ಕ್ಷೇತ್ರದಲ್ಲಿ ಬಿದ್ದಿರುವ ಸೂಜಿಯು ತನಗೆ ಹಿಡಿದ ತುಕ್ಕನ್ನು ತೆಗೆದು ಹಾಕಿದಾಗ ಮಾತ್ರ ಆಕರ್ಷಣೆಯಿಂದ ಎಳೆಯಲ್ಪಡುವುದು ಅದರ ಸ್ವಭಾವ. ತುಕ್ಕು ತೆಗೆದ ಮೇಲಷ್ಟೇ ಅಯಸ್ಕಾಂತ ಶಕ್ತಿ ಅಸ್ತಿತ್ವಕ್ಕೆ ಬಂದಿದೆ ಎಂದು ನಾವು ಇದರಿಂದ ನಿರ್ಣಯಿಸಬಹುದೇ? ಆ ಕ್ಷೇತ್ರದಲ್ಲಿ ಅಯಸ್ಕಾಂತ ಶಕ್ತಿ ಸದಾ ಸಹಜವಾಗಿ ಇರಲಿಲ್ಲವೇ? ಅಯಸ್ಕಾಂತ ಕ್ಷೇತ್ರದಲ್ಲಿ ಮೊದಲೆ ಬಿದ್ದಿದ್ದರೂ ಸೂಜಿಯು ತನ್ನ ತುಕ್ಕನ್ನು ಕಳೆದುಕೊಂಡಷ್ಟು ಪ್ರಮಾಣದಲ್ಲಿ ಮಾತ್ರ ಅಯಸ್ಕಾಂತದ ಆಕರ್ಷಣೆಗೆ ಒಳಗಾಗುತ್ತದೆ. ಮಧ್ಯಮ ಮತ್ತು ಪ್ರಥಮ ಪುರುಷ ವಿಚಾರಗಳನ್ನು ಬಿಟ್ಟು ಆತ್ಮವಿಚಾರಕ್ಕೆ ಅಂಟಿಕೊಳ್ಳುವ ನಮ್ಮೆಲ್ಲ ಪ್ರಯತ್ನ ತುಕ್ಕು ಉಜ್ಜಿ ತೆಗೆದಂತೆ ಅಷ್ಟೇ. ನಮ್ಮೆಲ್ಲ ಪ್ರಯತ್ನದ ಪರಿಣಾಮವೆಂದರೆ ಶುದ್ಧ ಅರಿವಿನ (ಹೃದಯದ) ಅಯಸ್ಕಾಂತದ ಆಕರ್ಷಣೆಗೆ ಬಲಿಯಾಗಲು ನಮ್ಮನ್ನು ನಾವು ಸಜ್ಜು ಗೊಳಿಸುವುದು. ಶುದ್ಧ ಅರಿವು ನಿತ್ಯ ಪ್ರಕಾಶದಿಂದ ಎಲ್ಲವನ್ನೂ ಮುಳುಗಿಸಿ (ಅಂದರೆ ಇಡೀ ವಿಶ್ವವನ್ನು ಇಲ್ಲಗೊಳಿಸಿ) **ಆತ್ಮಪ್ರಭೆಯ ಕಿರಣ**[೮೧]**ಗಳಿಂದ ಹರಡುತ್ತದೆ**. ಪಕ್ವ ಸಾಧಕರು

೮೧. "ಹರಡುವ ಕಿರಣಗಳಿಂದ ಎಲ್ಲವನ್ನು ಮುಳುಗಿಸಿ..." ನೋಡಿ. 'ಶ್ರೀ ಅರುಣಾಚಲ ಪಂಚರತ್ನಂ', ಪದ್ಯ ೧

ಸ್ವ–ಇಚ್ಛೆಯಿಂದ, ಬಂಡಾಯವಿಲ್ಲದೇ ಆತ್ಮಪ್ರಭೆಯ ಅನುಗ್ರಹದ ಅಯಸ್ಕಾಂತ ಶಕ್ತಿಗೆ ಶರಣಾಗುತ್ತಾರೆ. ಇತರರು ಈ ಶಕ್ತಿಯ ಆಕರ್ಷಣೆಗೆ ಹೆದರಿ ಬಹಿರ್ಮುಖಿಯಾಗುತ್ತಾರೆ. (ಅಂದರೆ ತಮ್ಮ ಗಮನವನ್ನು ಹೊರಗೆ ಹರಿಸುತ್ತಾರೆ). ಆದ್ದರಿಂದ ನಾವು ಆತ್ಮವನ್ನು ತಿಳಿಯಲು ತೀವ್ರ ಭಕ್ತಿಯಿಂದ ಮತ್ತು ಮಧ್ಯಮ ಅಥವಾ ಪ್ರಥಮ ಪುರುಷಗಳನ್ನು ಗಮನಿಸುವ ಕಾಮನೆಯಿಲ್ಲದೇ ಅಗಾಧ ವೈರಾಗ್ಯದಿಂದ ನಮ್ಮನ್ನು ನಾವು ಸಜ್ಜುಗೊಳಿಸಬೇಕು. ಆಗ ನಮ್ಮ (ಸಾಧಕತನದ) ವ್ಯಕ್ತಿತನವೇ ಆ ಶಕ್ತಿಯಿಂದ ಕಬಳಿಸಲ್ಪಟ್ಟು 'ನಮ್ಮ ಪ್ರಯತ್ನ' ಎನ್ನುವುದೂ ಕೂಡ ಸೊನ್ನೆಯಾಗುತ್ತದೆ. ಹೀಗೆ, ಇಡೀ ದೇಹದಲ್ಲಿ ಹರಡಿದ್ದ 'ನಾನು' ಅರಿವು ಹೃದಯದಲ್ಲಿ ಮುಳುಗುವಂತೆ ಮಾಡಿದಾಗ ನಿಜವಾದ ಎಚ್ಚರ, ಜ್ಞಾನೋದಯ ಉಂಟಾಗುತ್ತದೆ. ಇದು ಕ್ಷಣಾರ್ಧದಲ್ಲಿ ಜರುಗುತ್ತದೆ.

"ಸಾವು ಕ್ಷಣಾರ್ಧದ ಸಂಗತಿ! ನಿದ್ದೆ ಬಿಡುವುದು ಕ್ಷಣಾರ್ಧದ ಸಂಗತಿ! ಹಾಗೆಯೇ 'ನಾನೊಂದು ಜೀವ' ಎಂಬ ಭ್ರಮೆ ದೂರವಾಗುವುದು ಕೂಡ ಕ್ಷಣಾರ್ಧದ ಸಂಗತಿ! ನಿಜವಾದ ಜ್ಞಾನೋದಯವು ಪಡೆದು, ಕಳೆದು ಹೋಗುವ ಮಿಂಚು ನೋಟಗಳಲ್ಲ! ಇದು ತೋರಿ ಮಾಯವಾಗುತ್ತದೆ ಎಂದು ಸಾಧಕನಿಗೆ ಅನಿಸಿದರೆ, ಇದು ಇನ್ನೂ ಸಾಧನೆಯ ಅವಸ್ಥೆ ಮಾತ್ರ, ಅವನಿಗೆ ಸತ್ಯಜ್ಞಾನ ಪ್ರಾಪ್ತಿಯಾಗಿದೆ ಎಂದು ಹೇಳಲಾಗದು. ಪರಿಪೂರ್ಣ ಜ್ಞಾನೋದಯವು ಕ್ಷಣಾರ್ಧದ ಸಂಗತಿ! ಅದರ ಪ್ರಾಪ್ತಿ ದೀರ್ಘಕಾಲದ ಪ್ರಕ್ರಿಯೆಯಲ್ಲ. ಯುಗ ಯುಗದ ಅಭ್ಯಾಸಗಳಿರುವುದು ಪಕ್ವತೆ ಪಡೆಯಲಿಕ್ಕಾಗಿ. ಒಂದು ಉದಾಹರಣೆ ಕೊಡೋಣ. ಒಂದು ದೇವಾಲಯದ ತೋಫನ್ನು ಸಿದ್ಧಗೊಳಿಸಲು ದೀರ್ಘಕಾಲ ಬೇಕು. ಮೊದಲು ಕೊಳವೆಯಲ್ಲಿ ಸುಡುಮದ್ದು ತುಂಬಬೇಕು, ಬತ್ತಿ ಇಡಬೇಕು, ಕೆಲವು ಕಲ್ಲು ಸೇರಿಸಬೇಕು, ಜಜ್ಜಿಗಿಡಿಯಬೇಕು. ಆದರೆ ಬೆಂಕಿ ಹೊತ್ತಿಸಿದಾಗ ಕ್ಷಣಾರ್ಧದಲ್ಲಿ ಗುಡುಗಿನಂತೆ ಸ್ಫೋಟಗೊಳ್ಳುತ್ತದೆ. ಹಾಗೆಯೇ ಆಲಿಸುವುದು ಮತ್ತು ಓದುವುದು (ಶ್ರವಣ), ಮನನ, ನಿದಿಧ್ಯಾಸ ಮತ್ತು ಪ್ರಾರ್ಥನೆಯಲ್ಲಿ ಅಳುವುದರ (ಏಕೆಂದರೆ ಕೇಳಿದ್ದನ್ನು ಅಭ್ಯಸಿಸಲಾಗದ ಅಶಕ್ತತೆಯಿಂದ) ಯುಗದೀರ್ಘ ಅವಧಿಯ ನಂತರ, ಮನಸ್ಸು ಪರಿಪೂರ್ಣವಾಗಿ ಶುದ್ಧವಾದಾಗ, ಆಗ ಮತ್ತು ಆಗಲೇ ಕ್ಷಣಾರ್ಧದಲ್ಲಿ 'ನಾನು ಇದ್ದೇನೆ ಅದು ನಾನು' ಎಂಬ ಆತ್ಮಜ್ಞಾನೋದಯವು ಉಂಟಾಗುತ್ತದೆ! ಈ ಉದಯವಾದಾಗ ಆತ್ಮದರಿವಿನ ಅವಕಾಶ ಸಿಗುವುದರಿಂದ ಸತ್ಯವು ಅನಾದಿ, ಸಹಜ ಮತ್ತು ನಿತ್ಯವೆಂಬ ಸ್ಪಷ್ಟ ಜ್ಞಾನದ ಮೂಲಕ ಆತ್ಮವಿಚಾರದ ಯತ್ನವೂ ಆಗ ನಿಲ್ಲುತ್ತದೆ! ಮಾಡಲು ಮತ್ತೇನೂ ಇಲ್ಲದೆ, ಸಾಧಿಸಲು ಮತ್ತೇನೂ ಇಲ್ಲದೇ ಹೀಗೆ ನೆಲೆಸುವುದು ಮಾತ್ರ ನಿಜವಾದ ಪರಮ ಸ್ಥಿತಿ".

'ಸಾಧನೈ ಸಾರಂ'

ಈಗ ನಾವು ಜಾಗೃತ ಸ್ಥಿತಿಯೆಂದು ಅನುಭವಿಸುತ್ತಿರುವುದು ಕೂಡ ನಿಜವಾದ ಜಾಗ್ರತ ಸ್ಥಿತಿಯಲ್ಲ. ಈ ಜಾಗ್ರತ ಸ್ಥಿತಿಯೂ ಒಂದು ಕನಸು! ಈ ಜಾಗ್ರತ ಸ್ಥಿತಿಗೂ ಕನಸಿಗೂ ಯಾವುದೇ ವ್ಯತ್ಯಾಸವಿಲ್ಲ. ಈ ಎರಡೂ ಸ್ಥಿತಿಗಳಲ್ಲಿ 'ನಾನು ಇದ್ದೇನೆ' ಭಾವವು 'ನಾನು ಇದು' ಎಂದು ದೇಹವನ್ನು ಹಿಡಿದುಕೊಳ್ಳುತ್ತದೆ ಮತ್ತು ಬಾಹ್ಯ ವಸ್ತುಗಳನ್ನು ನೋಡಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತದೆ. ಈ ಜಾಗ್ರತ ಸ್ಥಿತಿಯ ಕನಸಿನಿಂದ ಮೇಲೆ

ವರ್ಣಿಸಿದಂತೆ ಎಚ್ಚರಗೊಳ್ಳುವುದೇ ಜ್ಞಾನೋದಯ. ನಮ್ಮ ನಿಜವಾದ ಸ್ಥಿತಿ ಅಥವಾ **ನಿಜವಾದ ಜಾಗೃತಿ.**

ಇದಕ್ಕೆ ಸಂಬಂಧಿಸಿ ಕೆಲವರು ಕೆಳಗಿನಂತೆ ಸಂದೇಹ ವ್ಯಕ್ತಪಡಿಸುತ್ತಾರೆ: "ನಾವು ಒಂದು ಕನಸಿನಿಂದ ಎಚ್ಚೆತ್ತು ಇನ್ನೊಂದು ಕನಸಿಗೆ (ಈಗಿನ ಜಾಗ್ರತ ಸ್ಥಿತಿಗೆ) ಬಂದಿದ್ದೇವೆ ಎಂದು ಹೇಳುವುದಾದರೆ ಈ ಜಾಗ್ರತ ಸ್ಥಿತಿಯಿಂದಲೂ ಎಚ್ಚೆತ್ತಾಗ ಅದೂ ಕೂಡ ಇದರಂತೆ ಇನ್ನೊಂದು ಕನಸಾಗುವುದಿಲ್ಲವೇ? 'ಇನ್ನೊಂದು ಎಚ್ಚರದ ಅವಶ್ಯಕತೆಯಿಲ್ಲ, **ಇದೇ ನಿಜವಾದ ಎಚ್ಚರ'** ಎಂದು ನಿರ್ಧರಿಸುವುದು ಹೇಗೆ?" ಜಾಗ್ರತವೆಂದು ಅನಿಸುವ ಯಾವುದೇ ಸ್ಥಿತಿಯಿರಲಿ, **ಯಾವುದೇ ಮಧ್ಯಮ ಅಥವಾ ಪ್ರಥಮ ಪುರುಷರ ಅಸ್ತಿತ್ವ (ಇವು ತನಗೆ ಹೊರತಾದವು)ದ ಅನುಭವವಿದ್ದರೆ ಇದು ನಿಜವಾದ ಎಚ್ಚರ ಅಲ್ಲವೇ ಅಲ್ಲ. ಇದು ಬರೀ ಕನಸು ಮಾತ್ರ!** ತಾಳೆ ನೋಡಿ, ನಮ್ಮ ನಿಜವಾದ ಎಚ್ಚರ (ನಮ್ಮ ನಿಜಸ್ಥಿತಿ) ಎಂದರೆ ಅಲ್ಲಿ ಯಾವುದೇ ದೇಹಕ್ಕೆ ಅಂಟಿಕೊಳ್ಳದ ನಮ್ಮ ಅಸ್ತಿತ್ವವೊಂದೇ ಪರಸಹಾಯವಿಲ್ಲದೇ, ನಮಗೆ ಹೊರತಾದ ಏನನ್ನೂ ಗುರುತಿಸದೇ ಪ್ರಕಾಶಿಸುತ್ತದೆ. **ಸರಿಯಾದ ಜಾಗ್ರತಿಯ ವ್ಯಾಖ್ಯೆಯೆಂದರೆ ಈ ಸ್ಥಿತಿಯಲ್ಲಿ ಪರಿಪೂರ್ಣ ಆತ್ಮದರಿವು ಮತ್ತು ಆತ್ಮದಿರುವು ಏಕೈಕವಾಗಿ ಇರುತ್ತದೆ. ಆತ್ಮಕ್ಕೆ ಹೊರತಾದ ಯಾವುದರ ಅಸ್ತಿತ್ವದ ಜ್ಞಾನವೂ ಇರುವುದಿಲ್ಲ. ಇದರಿಂದ ನಿಜವಾದ ಜಾಗೃತಿಯನ್ನು ನಿರ್ಧರಿಸಬಹುದು.**

ಕೆಳಗಿನ ಪದ್ಯದಲ್ಲಿ ಶ್ರೀ ಭಗವಾನರು ಸೂಚಿಸಿರುವುದು ಈ ಜಾಗೃತಿಯನ್ನೇ "ಆತ್ಮವನ್ನು ಮರೆತು, ದೇಹವನ್ನೇ ಆತ್ಮವೆಂದು ತಪ್ಪು ತಿಳಿದು, ಅಸಂಖ್ಯಾತ ಜನ್ಮ ತಳೆದು, ಕಡೆಗೆ ಆತ್ಮವನ್ನು ತಿಳಿದು ಆತ್ಮವಾಗಿ ಇರುವುದು ಎಂದರೆ ಜಗತ್ತಿನ ತುಂಬ ಅಲೆದಾಡಿದ ಕನಸಿನಿಂದ ಎಚ್ಚರಗೊಂಡಂತೆ. ಹೀಗೆ ತಿಳಿಯಿರಿ".

'ಏಕಾತ್ಮ ಪಂಚಕಂ', ಪದ್ಯ ೧

ದೊಡ್ಡದಾದ ಕೋಣೆಯಲ್ಲಿ ಎರಡು ಗೋಡೆಗಳನ್ನು ಹೊಸದಾಗಿ ಕಟ್ಟಿದಾಗ ಮೂರು ಕೋಣೆಗಳಾಗುವಂತೆ ನಮ್ಮ ನಿತ್ಯ, ಅದ್ವೈತ, ಸಹಜ ಮತ್ತು ನಿರ್ವಿಶೇಷ ಅಸ್ತಿತ್ವದರಿವು (ಸತ್‌ಚಿತ್) ಜಾಗೃತಿ, ಸ್ವಪ್ನ ಮತ್ತು ನಿದ್ರೆ ಎಂಬ ಮೂರು ಸ್ಥಿತಿಗಳಲ್ಲಿ ತೋರುತ್ತವೆ. ಜಾಗೃತಿ ಮತ್ತು ಸ್ವಪ್ನವೆಂಬ ಎರಡು ಕಾಲ್ಪನಿಕ ಗೋಡೆಗಳು ಎರಡು ದೇಹ ಉಪಾಧಿಗಳಿಂದಾಗಿ (ಜಾಗೃತಿ ದೇಹ ಮತ್ತು ಸ್ವಪ್ನ ದೇಹ) ವಾಸನೆಗಳ ಕಾರಣದಿಂದ ಮೇಲೇಳುತ್ತವೆ. ಈ ಎರಡು ಹೊಸದಾದ ಕಾಲ್ಪನಿಕ ಉದಯಗಳು (ಜಾಗೃತಿ ಮತ್ತು ಸ್ವಪ್ನ) ಇಲ್ಲವಾದರೆ ಉಳಿಯುವುದು ಏಕೈಕವಾದ ಆತ್ಮದರಿವು ಮಾತ್ರ. ಶಾಸ್ತ್ರಗಳು ನಮ್ಮ ಸಹಜ ನೈಜ ಸ್ಥಿತಿ, ಜ್ಞಾನಜಾಗೃತಿಯನ್ನು ನಾಲ್ಕನೆಯ ಸ್ಥಿತಿ (ತುರೀಯಾವಸ್ಥೆ) ಎಂದು ಕರೆದಿರುವುದು ಮೂರು ಸ್ಥಿತಿಗಳನ್ನು ನಿಜವೆಂದು ಭಾವಿಸುವ ಅಪಕ್ವ ಸಾಧಕರ ಸಲುವಾಗಿ ಮಾತ್ರ. ಆದರೆ ಇತರ ಮೂರು ಸ್ಥಿತಿಗಳು ನಿಜಕ್ಕೂ ನಿಜವಲ್ಲದ ಕಾರಣ, ಇದೊಂದೇ ಸ್ಥಿತಿಯು (ನಾಲ್ಕನೆಯದು) ವಾಸ್ತವವಾಗಿ ಇರುವ ಸ್ಥಿತಿ, ಮೊದಲನೆಯದು. ಆದ್ದರಿಂದ ಇದನ್ನು 'ನಾಲ್ಕನೆಯದು' (ತುರೀಯ) ಎಂದು ಅಥವಾ 'ಸ್ಥಿತಿ' (ಅವಸ್ಥೆ) ಎಂದು ಕರೆಯುವ ಅಗತ್ಯವಿಲ್ಲ. ಆದ್ದರಿಂದ ಇದು ಸ್ಥಿತಿಗಳನ್ನು ಮೀರಿದ್ದು (ಅವಸ್ಥಾತೀತ). ಇದನ್ನು ನಾಲ್ಕನೆಯದನ್ನು ಮೀರಿದ್ದು

(ತುರೀಯಾತೀತ) ಎಂದು ಕೂಡ ಕರೆಯುತ್ತಾರೆ. ಆದ್ದರಿಂದ ತುರೀಯಾತೀತವನ್ನು ಐದನೆಯ ಸ್ಥಿತಿಯೆಂದು ಎಣಿಸಬಾರದು. ಶ್ರೀ ಭಗವಾನರು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ:

"ಜಾಗೃತಿ, ಸ್ವಪ್ನ ಮತ್ತು ಸುಷುಪ್ತಿ (ನಿದ್ರೆ) ಎಂಬ ಸ್ಥಿತಿಗಳನ್ನು ಅನುಭವಿಸುವವರಿಗಾಗಿ ಮಾತ್ರ ಇವನ್ನು ಮೀರಿದ ಎಚ್ಚರದ ನಿದ್ದೆಯನ್ನು ತುರೀಯ ಎಂದು ಹೆಸರಿಸಲಾಗಿದೆ. ತುರೀಯವೊಂದೇ ನಿಜವಾಗಿಯೂ ಇರುವುದರಿಂದ, ಮತ್ತು ತೋರುವ ಮೂರು ಸ್ಥಿತಿಗಳು ಇಲ್ಲವಾದ್ದರಿಂದ ತುರೀಯವೇ ತುರೀಯಾತೀತ. ಹೀಗೆ ಧೈರ್ಯದಿಂದ ತಿಳಿದುಕೊಳ್ಳಿರಿ!"

'ಉಳ್ಳದು ನಾರ್ಪದು' ಅನುಬಂಧ, ಪದ್ಯ ೩೨

"ನಿದ್ದೆಯ ಕತ್ತಲೆಯ ಅಜ್ಞಾನದಲ್ಲಿ ತೂರಿ ಹೋಗಿ ಪ್ರಕಾಶಿಸುವ ತುರೀಯದಲ್ಲಿ (ಆತ್ಮಸ್ಥಿತಿಯಲ್ಲಿ) ಯಾರು ಮುಳುಗಿ ನೆಲೆಸಲಾರರೋ ಅವರಿಗಾಗಿ ಮಾತ್ರ ಮೊದಲಿನ ಮೂರು ದಟ್ಟ ಸ್ಥಿತಿಗಳನ್ನು ಮತ್ತು ನಾಲ್ಕನೆಯ, ಐದನೆಯ ಸ್ಥಿತಿಗಳ ವ್ಯತ್ಯಾಸವನ್ನು (ಶಾಸ್ತ್ರಗಳಲ್ಲಿ) ಒಪ್ಪಿಕೊಳ್ಳಲಾಗಿದೆ".

'ಗುರು ವಾಚಕ ಕೋವೈ', ಪದ್ಯ ೫೬೭

ಹಿಂದೆ ಹೇಳಿದ ಆತ್ಮವಿಚಾರದ ಮೂಲಕ ನಮ್ಮ ಇರುವು–ಅರಿವಿನಲ್ಲಿ (ಸತ್ ಚಿತ್) ಹೆಚ್ಚೆಚ್ಚು ಗಟ್ಟಿಯಾಗಿ ಸ್ಥಿರವಾಗಿದ್ದಾಗ ಗಮನಿಸುವವರು ಇಲ್ಲವಾದ ಕಾರಣ ವಾಸನೆಗಳು ನಾಶವಾಗುತ್ತವೆ. ಹೀಗೆ ಈ ಕಾಲ್ಪನಿಕ ವಾಸನೆಗಳಿಂದ ತೋರಿಕೆಗೆ ಸೃಷ್ಟಿಸಲ್ಪಟ್ಟ ಜಾಗೃತಿ ಮತ್ತು ಸ್ವಪ್ನ ಸ್ಥಿತಿಗಳೂ ಕೂಡ ನಾಶವಾಗುತ್ತವೆ. ಆಗ ಉಳಿಯುವ ಒಂದೇ ಸ್ಥಿತಿಯನ್ನು 'ನಿದ್ರೆ' (ಸುಷುಪ್ತಿ) ಎಂಬ ಹೆಸರಿನಿಂದ ಕರೆಯಲಾಗದು.

"ಜಾಗೃತಿ ಮತ್ತು ಸ್ವಪ್ನಕ್ಕೆ ಕಾರಣವಾದ ಅನಾದಿ, ಅಶುದ್ಧ ವಾಸನೆಗಳು ನಾಶವಾದಾಗ, ಕೆಟ್ಟ ಪರಿಣಾಮದೆಡೆ (ಅಂದರೆ ತಮಸ್ಸಿನತ್ತ) ಕರೆದೊಯ್ಯುತ್ತದೆ ಎನ್ನಲಾದ ಮತ್ತು ಶೂನ್ಯವೆಂದು ಕರೆದು ಅಂಧಕಾರವೆಂದು ಹಂಗಿಸಲಾದ ನಿದ್ದೆಯೇ ತುರೀಯಾತೀತ ಎಂದು ತಿಳಿದು ಬರುತ್ತದೆ!"

'ಗುರು ವಾಚಕ ಕೋವೈ', ಪದ್ಯ ೪೬೦

ನಿದ್ದೆಯೆಂದು ಸಾಮಾನ್ಯರು ಇದುವರೆಗೆ ಅನುಭವಿಸಿದ ಸ್ಥಿತಿಯು ಜಾಗೃತಿ ಮತ್ತು ಸ್ವಪ್ನಗಳಿಂದ ವಿಚಲಿತವಾಗಿ ನಿವಾರಿಸಲ್ಪಡುತ್ತಿದ್ದರಿಂದ, ಅದು ಸಣ್ಣದೆಂದು, ತಾತ್ಕಾಲಿಕವೆಂದು ತೋರುತ್ತಿತ್ತು. ಆದ್ದರಿಂದಲೇ ಈ ಗ್ರಂಥದ ಪುಟ ೪೮, ೪೯ರಲ್ಲಿ ನಿದ್ದೆಯು ದೋಷಸ್ಥಿತಿಯೆಂದು ಹೇಳಲಾಗಿದೆ ಮತ್ತು ಅವೇ ಪುಟಗಳ ಅಡಿ ಟಿಪ್ಪಣಿಯಲ್ಲಿ ನಿದ್ದೆಯ ನಿಜಸ್ವರೂಪವನ್ನು ಮುಂದೆ ಎಂಟನೆಯ ಅಧ್ಯಾಯದಲ್ಲಿ ವಿವರಿಸುವುದಾಗಿ ಹೇಳಲಾಗಿದೆ. ಆದ್ದರಿಂದ ನಮ್ಮ ಸಹಜ ಸ್ಥಿತಿಯೇ, ನಿಜವಾದ ಎಚ್ಚರ, ಪರಮ ಸತ್ಯವಾಗಿದೆ.

ಈ ನಿಜವಾದ ಎಚ್ಚರವು ಹೊಸದಾಗಿ ಪಡೆದ ಸ್ಥಿತಿಯಾಗಿ ಅನುಭವಕ್ಕೆ ಬಾರದಿರುವುದರಿಂದ ಜೀವನ್ಮುಕ್ತನಿಗೆ ಮುಕ್ತ ಸ್ಥಿತಿಯು ಒಂದು ವಿಚಾರವಾಗಿ ಬರುವುದಿಲ್ಲ! ಬಂಧನವು ಅವನಿಗೆ ನಿಜವಲ್ಲದ ಕಾರಣ ಮುಕ್ತಿಯ ವಿಚಾರವೂ ಬರಲಾರದು. ತಾನು ಬಂಧಿತನೆಂದು ಭಾವಿಸುವ ಅಜ್ಞಾನಿಗೆ ಮಾತ್ರ ಬಂಧನ ಮತ್ತು ಮುಕ್ತಿ ಎಂಬ ವಿಚಾರಗಳು ಬರಬಹುದು. ಪರಮಾನಂದವನ್ನು (ಅಧ್ಯಾಯ ೧ರಲ್ಲಿ ಹೇಳಿದಂತೆ ಎಲ್ಲ ಜೀವಿಗಳ

ಏಕೈಕ ಗುರಿಯಾದ ನಿತ್ಯ ಸಂತೋಷ)ಪಡೆದು ಈ ಆತ್ಮ ಸ್ಥಿತಿಯಲ್ಲಿ, ಬಂಧನ–ಮುಕ್ತಿ ಎರಡೂ ಇಲ್ಲದೇ ಇರುವುದೇ ಭಗವಾನ್ ರಮಣರು ವಿಧಿಸಿದಂತೆ ನಿಜವಾಗಿ ಪ್ರಭುವಿನ ಸೇವೆಯಲ್ಲಿ ಇರುವುದು. ಇದೊಂದೇ ನಮ್ಮ ಕರ್ತವ್ಯ. ಇದೊಂದೇ ಶ್ರೀ ರಮಣ ಮಾರ್ಗ.

"ಬಂಧನ–ಮುಕ್ತಿ ಎರಡೂ ಇಲ್ಲದ ಪರಮಾನಂದವನ್ನು ಪಡೆದು ಆತ್ಮಸ್ಥಿತಿಯಲ್ಲಿ ನೆಲೆಸುವುದೇ ಪ್ರಭುವಿನ ಸೇವೆಯಲ್ಲಿ ನಿಜವಾಗಿ ಇರುವುದು".

'ಉಪದೇಶ ಉಂದಿಯಾರ್', ಪದ್ಯ ೨೯

ಶ್ರೀ ರಮಣಾರ್ಪಣಮಸ್ತು

ಅನುಬಂಧ–೧

ನಾನು ಯಾರು?

(‘ನಾನ್‌ಯಾರ್’ ಎಂಬ ತಮಿಳು ಇಂಗ್ಲಿಷ್ ಭಾಷಾಂತರದ ಹಿನ್ನೆಲೆ)

ಉಪೋದ್ಘಾತ

ವರ್ಷ ೧೯೦೧ರಿಂದ ೧೯೦೨ರವರೆಗೆ – ಅಂದರೆ ಭಗವಾನ್ ಶ್ರೀ ರಮಣರು ದಿವ್ಯ ಪರ್ವತವಾದ ಅರುಣಾಚಲದ ಮೇಲಿರುವ ವಿರೂಪಾಕ್ಷ ಗುಹೆಯಲ್ಲಿ ವಾಸಿಸುತ್ತಿದ್ದಾಗ – ಶ್ರೀ ಎಂ. ಶಿವಪ್ರಕಾಶಂ ಪಿಳ್ಳೈ ಎಂಬ ಭಕ್ತರೊಬ್ಬರು ಅವರತ್ತ ಆಕೃಷ್ಟರಾಗಿ ಅವರ ಹತ್ತಿರ ಹೋಗಿ ಅನೇಕ ಪ್ರಶ್ನೆಗಳನ್ನು ಕೇಳಿದರು. ಆ ಕಾಲದಲ್ಲಿ ಶ್ರೀ ರಮಣ ಮಹರ್ಷಿಗಳು ಹೆಚ್ಚು ಮಾತುಗಳನ್ನಾಡುತ್ತಿರಲಿಲ್ಲ. ಅವರಿಗಾಗ ಮಾತಾಡಬೇಕೆಂದೆನ್ನಿಸುತ್ತಲೇ ಇರಲಿಲ್ಲ. ಅದೇನೂ ಅವರು ಹಿಡಿದ ವ್ರತವಾಗಿರಲಿಲ್ಲ. ಆದ್ದರಿಂದ ಅವರು ಆ ಭಕ್ತರ ಪ್ರಶ್ನೆಗಳಿಗೆ ಉತ್ತರಗಳನ್ನು ಮಳಲಿನಲ್ಲಿ ಬಳಪದಲ್ಲಿ ಅಥವಾ ಕಾಗದದ ಚೂರಿನಲ್ಲಿ ಬರೆದು ಕೊಡುತ್ತಿದ್ದರು. ಈ ಪ್ರಕಾರ ಶ್ರೀ ಶಿವಪ್ರಕಾಶ ಪಿಳ್ಳೆಯವರು ಪಡೆದ ಉಪದೇಶಗಳನ್ನು ಪ್ರಶ್ನೋತ್ತರ ಮಾಲೆಯ ರೂಪದಿಂದ ೧೯೨೩ನೆಯ ಇಸವಿಯಲ್ಲಿ ಮೊಟ್ಟಮೊದಲು ಪ್ರಕಟಿಸಲಾಯಿತು. ಅದರ ಹೆಸರು ‘ನಾನು ಯಾರು?’ ಎಂಬುದಾಗಿತ್ತು. ಆ ಕೂಡಲೇ ಭಗವಾನ್‌ಶ್ರೀ ರಮಣ ಮಹರ್ಷಿಗಳೇ ಸ್ವತಃ ಈ ಪ್ರಶ್ನೆಗಳನ್ನು ಪ್ರಬಂಧ ರೂಪದಲ್ಲಿ ಪುನರ್ವರ್ಗೀಕರಣ ಮಾಡಿ ಪುನಃ ಬರೆದುಕೊಟ್ಟದ್ದು ಒಂದು ಸುಸಂಬದ್ಧವೂ ಸಮನಿತ್ವವೂ ಆದ ಪ್ರತಿಪಾದನೆ ಎನ್ನಿಸಿತು.

೨೮ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೋತ್ತರ ಮಾಲಾರೂಪವು ಪ್ರತ್ಯೇಕವಾಗಿ ಈಗ ಪ್ರಕಟಿತ ಪುಸ್ತಕದ ರೂಪದಲ್ಲಿ ಸಿಕ್ಕುತ್ತದೆ. ಅಂಥ ಇನ್ನೊಂದು ಪುಸ್ತಕವು ೧೪ ಪ್ರಶ್ನೆಗಳನ್ನೊಳಗೊಂಡಿರುತ್ತದೆ. ಅದೂ ಈಗ ಸಿಕ್ಕುತ್ತದೆ : ಅದು ‘ಶ್ರೀ ರಮಣ ವಿಜಯ’ವೆಂಬ ತಮಿಳು ಗ್ರಂಥದಲ್ಲಿ ಮುದ್ರಿತವಾಗಿದೆ ; ಉಕ್ತ ಗ್ರಂಥವು ಶ್ರೀ ರಮಣರ ಜೀವನ ಚರಿತ್ರೆ ; “ಆತ್ಮಸಾಕ್ಷಾತ್ಕಾರ” ಎಂಬ ಹೆಸರಿನಲ್ಲಿ ಅದರ ಆಂಗ್ಲಾನುವಾದವೂ ದೊರಕುತ್ತದೆ. ಹೀಗಿದ್ದರೂ ಈ ಕೃತಿಯ ಪ್ರಬಂಧ ರೂಪವು “ಶ್ರೀರಮಣ ನುತ್ರಿರತ್ತು” (ತಮಿಳಿನಲ್ಲಿರುವ ಶ್ರೀ ರಮಣರ ಸಂಗೃಹೀತ ಕೃತಿಗಳು) ಎಂಬುದರಲ್ಲಿ ಅಡಕವಾಗಿದೆ. ಮತ್ತು ಭಗವಾನ್ ರಮಣರೇ ಪ್ರಬಂಧ ರೂಪದ ಗ್ರಂಥವನ್ನು ರಚಿಸಿದುದರಿಂದ ಅದೇ ಮುಖ್ಯವೂ ಪ್ರಾಮಾಣಿಕವೂ ಅಧಿಕೃತವೂ ಆದ ಪಾಠವೆಂದು ಗಣಿಸಲ್ಪಟ್ಟಿದೆ.

ಪ್ರಬಂಧ ಪಾಠವು ಹೆಚ್ಚಾಗಿ ೨೮ ಪ್ರಶ್ನೆ ಹಾಗೂ ಉತ್ತರಗಳನ್ನೇ ಆಧರಿಸಿದೆ. ಆದರೆ ಅದನ್ನು ಸಿದ್ಧ ಮಾಡುವಾಗ ಭಗವಾನ್ ಶ್ರೀ ರಮಣರು (ಮೊದಲನೆಯ ಇಡೀ ಅನುಚ್ಛೇದದಂಥ) ಹೊಸದಾಗಿ ಬರೆದು ಸೇರಿಸಿದರು, (೮ನೆಯ ಮತ್ತು ೫ನೆಯ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಂಥ) ಕೆಲಭಾಗಗಳನ್ನು ಬಿಟ್ಟರು. ಬಿಟ್ಟವುಗಳ ಸಾಲಿಗೆ ೬ನೆಯ ಪ್ರಶ್ನೆಗೆ

ಕೊಟ್ಟ ಉತ್ತರದ ಮೊದಲ ವಾಕ್ಯವನ್ನು, ೨೦ನೆಯ ಪ್ರಶ್ನೆಗೆ ಕೊಟ್ಟ ಉತ್ತರದ ಕೆಲಭಾಗಗಳನ್ನು, ಇನ್ನೂ ಕೆಲವನ್ನು ಸೇರಿಸಬಹುದು. ಇತರ ಕೆಲಭಾಗಗಳನ್ನವರು ತಿದ್ದಿದರು, ವಿಸ್ತರಿಸಿದರು ಮತ್ತು ಸುಧಾರಿಸಿದರು (೨೭ನೆಯ ಪ್ರಶ್ನೆಗೆ ಕೊಟ್ಟ ಉತ್ತರದಂಥವುಗಳನ್ನು ತಿದ್ದಿದ್ದು ನಿದರ್ಶನ). ಹೀಗಿದ್ದರೂ ಬಹುಸಂಖ್ಯಾತ ವಾಕ್ಯಗಳನ್ನವರು ಬದಲಾಯಿಸಲೇ ಇಲ್ಲ ; ಅವುಗಳ ಭಾವಗಳನ್ನು ಹೆಚ್ಚು ತರ್ಕಶುದ್ಧವೂ ಸುಸಮನ್ವಿತವೂ ಆಗುವಂತೆ ಅವರು ಪುನರ್ವರ್ಗೀಕರಿಸಿದರು ಮಾತ್ರ.

ಶ್ರೀ ಶಿವಶಂಕರ ಪಿಳ್ಳೆಯವರು ಕೇಳಿದ ಪ್ರಥಮ ಪ್ರಶ್ನೆ

ಪ್ರಥಮ ಪ್ರಶ್ನೆ : ನಾನು ಯಾರು? ಎಂದು. ಅದಕ್ಕೆ ಶ್ರೀ ರಮಣರಿತ್ತ ಉತ್ತರವು: "ಅರಿವೆ ನಾನ್" ಜ್ಞಾನವೇ ನಾನು ಎಂದು ; ಅಥವಾ ಜ್ಞಾನವೇ ನಾನು ಇಲ್ಲವೆ ಜ್ಞಾನವು ನಿಜವಾಗಿ ನಾನಾಗಿದ್ದೇನೆ–ಎಂದು. ತಮಿಳಿನ ಅರಿವೆಂಬ ಶಬ್ದವು ಹೆಚ್ಚು ಕಡಿಮೆ ಸಂಸ್ಕೃತದ ಜ್ಞಾನ ಶಬ್ದಕ್ಕೆ ಅಥವಾ ಇಂಗ್ಲಿಷಿನ 'ನಾಲೆಜ್' ಶಬ್ದಕ್ಕೆ ಸಮಾನಾರ್ಥಕವಾಗಿದೆ. ಆಮೇಲೆ ಶಿವಪ್ರಕಾಶ ಪಿಳ್ಳೆಯವರು ಕೇಳಿದರು. (ಈ) ಜ್ಞಾನದ ಸ್ವರೂಪವೆಂಥದು?" ಎಂದು. ಅದಕ್ಕೆ ಭಗವಾನ್ ರಮಣರು : "ಅರಿವಿನ್ ಸ್ವರೂಪಂ ಸಚ್ಚಿದಾನಂದಂ (ಅರಿವಿನ ಸ್ವರೂಪವು ಸಚ್ಚಿದಾನಂದಾತ್ಮಕ") ಎಂದು ಉತ್ತರ ಕೊಟ್ಟರು. ಈ ಎರಡು ಉತ್ತರಗಳನ್ನು ಬಿಟ್ಟರೆ ಎರಡನೆಯ ಇಡೀ ಅನುಚ್ಛೇದವು ಶ್ರೀ ರಮಣರು ಸಾಕ್ಷಾತ್ತಾಗಿ ಕೊಟ್ಟ ಉತ್ತರಗಳ ಭಾಗವಾಗಿಲ್ಲ. ಆದುದರಿಂದ ಶ್ರೀ ಶಿವಪ್ರಕಾಶ ಪಿಳ್ಳೆಯವರ ಭಕ್ತರಾದ ಶ್ರೀ ಮಾಣಿಕ್ಕಂ ಪಿಳ್ಳೆಯವರು ಈ ಪುಸ್ತಕದ ಹಸ್ತಪ್ರತಿಯನ್ನು ಮೊಟ್ಟಮೊದಲು ತಮ್ಮ ಗುರುಗಳೆದುರಿಟ್ಟಾಗ ಅವರು ಆಶ್ಚರ್ಯದಿಂದ, "ನಾನೀ ಭಾಗವನ್ನು ಕೊಟ್ಟಿರಲಿಲ್ಲ. ಇದಿಲ್ಲಿ ಹೇಗೆ ಬಂತು?" ಎಂದು ಕೇಳಿದರು.[೧] "ತಮ್ಮ ಲೇಖ್ಯ ಪುಸ್ತಕದಲ್ಲಿ ಶಿವಪ್ರಕಾಶ ಪಿಳ್ಳೆಯವರು ಭಗವಾನ್ ಶ್ರೀ ರಮಣರ ಉತ್ತರಗಳನ್ನು ಬರೆದುಕೊಳ್ಳುತ್ತಿದ್ದಾಗ ಅವರು, ಆ ಪ್ರಥಮೋತ್ತರವನ್ನು ಇನ್ನೂ ಚೆನ್ನಾಗಿ ತನಗೆ ಅರ್ಥಮಾಡಿಕೊಳ್ಳಲು ಸಹಾಯಕವಾದೀತೆಂದು ಭಾವಿಸಿ, ಈ ಭಾಗವನ್ನು ಅದಕ್ಕೆ ಸೇರಿಸಿದರು – ಎಂದು ಮಾಣಿಕ್ಕಂ ಪಿಳ್ಳೆಯವರು ವಿವರಿಸಿದರು. "ಸರಿ, 'ನೇತಿ ನೇತಿ' ಎಂಬ ಶಾಸ್ತ್ರೀಯ ಉಪದೇಶವು ಅವರಿಗೆ ಆಗಲೇ ಸುಪರಿಚಿತವಾಗಿತ್ತು. ಮತ್ತು ಆ ಕಾರಣಕ್ಕಾಗಿಯೇ ಅವರು ಹಾಗೆ ಆಲೋಚಿಸಿರಬೇಕು" ಎಂದು ಭಗವಾನ್ ಶ್ರೀ ರಮಣರೆಂದರು. ಅನಂತರ, ಪ್ರಬಂಧ ಪಾಠವನ್ನು ಸಿದ್ಧ ಮಾಡುವಾಗ ಮಹರ್ಷಿಗಳು ಈ ಭಾಗವನ್ನೂ ಬಿಡಲಿಲ್ಲ ಆದರೆ ತಮ್ಮ ಉತ್ತರಗಳನ್ನು ಎದ್ದು ಕಾಣುವ ಅಕ್ಷರಗಳಿಂದ ಗುರುತು ಮಾಡಿದರು ಮಾತ್ರ.

ಶ್ರೀ ರಮಣರ ಗದ್ಯ ಕೃತಿಗಳಲ್ಲೆಲ್ಲಾ "ನಾನ್ ಯಾರ್" (ನಾನು ಯಾರು) ಎಂಬ ಕೃತಿಯು ನಿರಾತಂಕವಾಗಿಯೂ ನಿರುಪಮವಾಗಿಯೂ ಪ್ರಮುಖ ಸ್ಥಾನವನ್ನು ಪಡೆದಿದೆ. ನಿಜವಾಗಿಯೂ ಅದನ್ನು ಶ್ರೀ ರಮಣರ ಉಪದೇಶ ಸಾರದ ಕೋನಶಿಲೆ ಎಂದು

---

೧. ಶಾಸ್ತ್ರಗಳಲ್ಲಿರುವ ಅಸ್ಪಷ್ಟಾರ್ಥದ ಪಾರಿಭಾಷಿಕ ಪದಗಳ ಬಳಕೆಯನ್ನು ಬಿಡುವುದು ಶ್ರೀ ರಮಣ ಮಹರ್ಷಿಗಳ ಸ್ವಭಾವವಾದುದರಿಂದ, ಅಂಥ ಬಳಕೆಯಿಂದ ಓದುಗನನ್ನು ಗೊಂದಲಕ್ಕೀಡು ಮಾಡದಿರುವ ಸ್ವಭಾವ ಅವರದಾದುದರಿಂದ –ಈ ಭಾಗದಲ್ಲಿ ಕೊಡಲಾಗಿದ್ದ ಅನಾತ್ಮದ (ಬ್ರಹ್ಮೇತರ ಪದಾರ್ಥಗಳ) ಶಾಸ್ತ್ರೀಯ ವರ್ಗೀಕರಣವನ್ನು ಅವರು ಹೇಳಲು ಬಯಸುತ್ತಿರಲಿಲ್ಲವೆಂದು ತೋರುತ್ತದೆ.

ಹೇಳಬಹುದು. ಏಕೆಂದರೆ, ಸಂಕ್ಷಿಪ್ತವಾದ ಈ ೨೦ ಅನುಚ್ಛೇದಗಳೊಳಗೆ ಸ್ಪಷ್ಟವಾಗಿಯೂ ಅಮಿಶ್ರವಾಗಿಯೂ ಅವರ, ಮೂಲಭೂತ ಉಪದೇಶಗಳನ್ನು ಸಂಗ್ರಹಿಸಲಾಗಿದೆ. ಆದುದರಿಂದ, ಈ ಗ್ರಂಥದ ಪ್ರಾಮುಖ್ಯದಿಂದ ಅದರ ಇಂಗ್ಲಿಷು ಭಾಷಾಂತರವನ್ನಿಲ್ಲಿ ಕೊಡಲಾಗಿದೆ. ಅದಕ್ಕೆ ನಾವು ಶ್ರೀ ಶಿವಪ್ರಕಾಶ ಪಿಳ್ಳೆಯವರಿಗೆ[೨] ಬಹಳ ಋಣಿಗಳಾಗಿದ್ದೇವೆ.

ಈ (ಇಂಗ್ಲಿಷು)ಭಾಷಾಂತರವನ್ನು ತಯಾರಿಸುವಾಗ ಆದಷ್ಟು ಮಟ್ಟಿಗೆ ಇದು ತಮಿಳಿನ ಮೂಲಕ್ಕೆ ಹತ್ತಿರವೂ ನಿಷ್ಕೃಷ್ಟವೂ ಆಗುವಂತೆ ಪ್ರಯತ್ನಿಸಲಾಗಿದೆ. ಕೆಲವೊಮ್ಮೆ ಆಕರ್ಷಕ ಆಂಗ್ಲ ಶೈಲಿ ಕೆಟ್ಟರೂ ಅಡ್ಡಿಯಿಲ್ಲವೆಂದು ಈ ಕಾರ್ಯವನ್ನು ಮಾಡಲಾಗಿದೆ. ಪದ್ಯದ ವಿಭಜನೆ ಹಾಗೂ ವಾಕ್ಯಗಳ ಅನುಕ್ರಮಗಳನ್ನು ಮೂಲಕ್ಕೆ ಸರಿಯಾಗಿ ಹೊಂದುವಂತೆ ಮಾಡಲಾಗಿದೆ ; ಮತ್ತು ವಾಕ್ಯಗಳ ರಚನೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಮೂಲದಂತೆಯೇ ಮಾಡಲಾಗಿದೆ. ಎದ್ದು ಕಾಣುವಂತೆ ಮುದ್ರಿಸಲಾದ ಮೂಲ ತಮಿಳಿನ ಭಾಗಗಳನ್ನು ಇಲ್ಲಿಯೂ (ಈ ಇಂಗ್ಲಿಷು ಭಾಷಾಂತರದಲ್ಲಿಯೂ) ಎದ್ದು ಕಾಣುವ ದಪ್ಪಕ್ಷರಗಳಲ್ಲಿ ಮುದ್ರಿಸಲಾಗಿದೆ. ಇತರ ಮಾರ್ಮಿಕ ವಾಕ್ಯಗಳನ್ನು, ಮೂಲದಲ್ಲಿ ದಪ್ಪಕ್ಷರಗಳಲ್ಲಿ ಮುದ್ರಿತವಾಗಿರದಲ್ಲಿ, (ಇಟಾಲಿಕ್) ವಾಲಿದ ಅಕ್ಷರಗಳಲ್ಲಿ ಮುದ್ರಿಸಲಾಗಿದೆ. ಮೂಲದ ಇಡೀ ಪದ್ಯದಲ್ಲಿ ಒಂದೇ ಒಂದು ಶಬ್ದವು ಕಂಸ ಚಿಹ್ನದೊಳಗಿದೆ : ಅದೆಂದರೆ ನಾಲ್ಕನೆಯ ಅನುಚ್ಛೇದದ (ಶೈನ್ಸ್) ಪ್ರಕಾಶಿಕ್ಕುಂ' ಎಂಬುದು, ಅದು 'ಬ್ರಹ್ಮಾತ್ಮವು ತೋರುತ್ತದೆ' ಎಂಬುದರ ಮುಂದೆ ಬರುತ್ತದೆ. ಕಂಸದಲ್ಲಿರುವ ಇತರ ಎಲ್ಲ ಭಾಗಗಳನ್ನೂ ಈ ಭಾಷಾಂತರದಲ್ಲಿ ತಮಿಳಿನ ಅಥವಾ ಸಂಸ್ಕೃತದ ಮೂಲ ಪದಗಳನ್ನು ಸೂಚಿಸಲು ಅಥವಾ ಪದ್ಯದ ಅರ್ಥವನ್ನು ಹೆಚ್ಚು ಸ್ಪಷ್ಟಪಡಿಸಲು ಅಥವಾ ಅಕ್ಷರಾರ್ಥದಂತೆ ಭಾಷಾಂತರಿಸಿದರೆ ಅರ್ಥವನ್ನು ಪೂರ್ಣಗೊಳಿಸದಿರಬಹುದಾದ, ಇಂಗ್ಲಿಷಿನಲ್ಲಿ ಸ್ಪಷ್ಟವಾಗಿ ಅರ್ಥವಾಗುವ ವಾಕ್ಯರೂಪವನ್ನು ತಾಳದಿರಬಹುದಾದ ವಾಕ್ಯಗಳನ್ನು ಹಾಗೆ ಪೂರ್ಣಗೊಳಿಸಲು ಮತ್ತು ಅರ್ಥವಾಗುವಂತೆ ಮಾಡಲು ಸೇರಿಸಿಕೊಳ್ಳಲಾಗಿದೆ. ಅಡೀ ಟಿಪ್ಪಣಿಗಳಲ್ಲಿ ಒಂದೂ ಮೂಲದಲ್ಲಿಲ್ಲ ; ಅವನ್ನು ಹಾಗೇ ಇಲ್ಲಿ ಸೇರಿಸಿಕೊಳ್ಳಲಾಗಿದೆ. ಭಾಷಾಂತರ ಮಾಡುವಾಗ ಈ ಕೃತಿಯ ಉಪಲಬ್ಧ ಭಾಷಾಂತರಗಳೆಲ್ಲವನ್ನೂ ಸೂಕ್ಷ್ಮವಾಗಿ ತುಲನೆ ಮಾಡಿ ಅವುಗಳಲ್ಲಿಯ ಸದಂಶವೊಂದನ್ನೂ ಬಿಡದೆ (ಯುಕ್ತ ಪದಗಳನ್ನು, ವಾಕ್ಯ ರೂಪಗಳನ್ನು ಮುಂತಾದವುಗಳನ್ನು ಬಿಡದೆ) ಸೇರಿಸಿಕೊಳ್ಳಲಾಗಿದೆ.[೩]

---

೨. ಓದುಗನು ಈ ಕೆಳಗಿನ ಸಂಗತಿಯನ್ನು ಕೇಳಲು ಉತ್ಸುಕನಾಗಿರಬಹುದು. ಪ್ರಾಮಾಣಿಕರೂ ಹೃತ್‌ಪೂರ್ವಕರೂ ಆದ ಈ ಶಿಷ್ಯರು ತಾವು ಅಷ್ಟು ನಿಃಸಂದಿಗ್ಧವಾಗಿ ಪಡೆಯಲೆಳಸಿದ ಗುರಿಯನ್ನು ಮುಟ್ಟಿದ್ದನ್ನು ಉಕ್ತ ಸಂಗತಿ ಸೂಚಿಸುತ್ತದೆ.

೧೯೪೮ನೆಯ ಇಸವಿಯಲ್ಲಿ ಶ್ರೀ ಶಿವಪ್ರಕಾಶ ಪಿಳ್ಳೆಯವರು ಸ್ವರ್ಗಸ್ಥರಾದುದನ್ನು ತಿಳಿಸುವ ತಂತಿಯೊಂದನ್ನು ಶ್ರೀ ರಮಣರೆದುರು ತರಲಾಯಿತು. ಅವರು, "ಶಿವಪ್ರಕಾಶಂ ಶಿವ ಪ್ರಕಾಶಮನಾರ್=ಶಿವಪ್ರಕಾಶರು ಶಿವಪ್ರಕಾಶರಾದರು–ಶಿವನ ಬೆಳಕಾದರು" ಎಂದು ನುಡಿದರು.

೩. ಈ ಕನ್ನಡ ಭಾಷಾಂತರದಲ್ಲಿ ಇಂಗ್ಲಿಷು ಭಾಷಾಂತರದ ಅಪಾರ್ಥ ಯಾರಿಗೂ ಎಳ್ಳಷ್ಟೂ ಆಗದಂತೆ ನೋಡಿಕೊಳ್ಳಲಾಗಿದೆ ; ವೇದಾಂತ ಪರಿಭಾಷೆಯ ಉಲ್ಲಂಘನೆಯಾಗದಂತೆಯೂ ಎಚ್ಚರಿಕೆಯನ್ನು ವಹಿಸಲಾಗಿದೆ ; ತಾತ್ಪರ್ಯನಿಷ್ಕೃಷ್ಟತೆ ಇಲ್ಲಿ ಅಬಾಧಿತ. – **ಬಿ.ಚ್.ಶ್ರೀ.**

ಮೂಲ ಪಾಠ

ಜೀವಗಳೆಲ್ಲಾ ದುಃಖವಿಲ್ಲದೆ ಯಾವಾಗಲೂ ಸುಖದಲ್ಲಿರಲು ಬಯಸುತ್ತವೆ ; ಪರಾ ಪ್ರೀತಿಯು ಪ್ರತಿಯೊಂದರಲ್ಲೂ ಅದದಕ್ಕೇ ನಿಷ್ಠವಾಗಿರುತ್ತದೆ. ಸುಖವೊಂದೇ ಪ್ರೀತಿಗೆ ಕಾರಣ. ಆ ಸುಖವು ಪ್ರತಿ ಜೀವದ ಸ್ವರೂಪ. ಅದನ್ನು ಪ್ರತಿಯೊಂದು ಜೀವವೂ ನಿದ್ರೆಯಲ್ಲಿ ಅನುಭವಿಸುತ್ತದೆ ; ಆಗ ಅಲ್ಲಿ ಮನಸ್ಸಿರದು. ಈ ಕಾರಣಗಳಿಂದ ಪ್ರತಿಯೊಂದು ಜೀವಕ್ಕೂ ಆತ್ಮಜ್ಞಾನವು ಅಗತ್ಯ. ಅದಕ್ಕೆ 'ಕೋಽಹಂ?' ಎಂಬ ರೂಪದ (ನಾನು ಯಾರೆಂಬ ರೂಪದ) ಆತ್ಮಶೋಧವೊಂದೇ ಮುಖ್ಯ ಸಾಧನ.

ನಾನು ಯಾರು? ಸ್ಥೂಲ ಶರೀರವಾದದ್ದು ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ರಗಳಿಂದ – ಈ ಏಳು 'ಸಪ್ತಧಾತು'ಗಳ ಸ್ಥೂಲ ಶರೀರವು ನಾನಲ್ಲ, ಬ್ರಹ್ಮವಲ್ಲ ಆತ್ಮವಲ್ಲ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬಿವು ಜ್ಞಾನಗ್ರಾಹಕ ಪಂಚೇಂದ್ರಿಯಗಳು. ಅವು ವೈಯಕ್ತಿಕವಾಗಿ ಅನುಕ್ರಮದಂತೆ ರೂಪ, ಶಬ್ದ, ಗಂಧ, ರಸ, ಸ್ಪರ್ಶಗಳೆಂಬ ಐದು ಗುಣಗಳನ್ನು (ಬಾಹ್ಯ ಪದಾರ್ಥಗಳಲ್ಲಿ) ಗ್ರಹಿಸಬಲ್ಲವು. ಅವುಗಳಲ್ಲಿ ಒಂದೂ 'ನಾನು' (ಪರಬ್ರಹ್ಮ=ಸತ್=ಪರಮಾತ್ಮ=ಆತ್ಮ) ಅಲ್ಲ. ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಕರ್ಮಕಾರಕ ಪಂಚೇಂದ್ರಿಯಗಳ ಮೂಲಕ ನಾವು ಮಾತಾಡುತ್ತೇವೆ, ಕೆಲಸ ಮಾಡುತ್ತೇವೆ, ನಡೆಯುತ್ತೇವೆ, ಮಲವನ್ನು ವಿಸರ್ಜಿಸುತ್ತೇವೆ ಮತ್ತು ಕಾಮೋಪಭೋಗವನ್ನು ಮಾಡುತ್ತೇವೆ. ಇವುಗಳಲ್ಲಿ ಯಾವುದೂ ನಾನಲ್ಲ (ಸಚ್ಚಿದಾನಂದ ವಸ್ತುವಲ್ಲ, ಸತ್ಯ–ಜ್ಞಾನ–ಅನಂತ ಪದಾರ್ಥವಲ್ಲ). ಪ್ರಾಣ, ಅಪಾನ ವ್ಯಾನ, ಉದಾನ, ಸಮಾನಗಳೆಂಬ ಪಂಚ ಪ್ರಾಣಗಳು ಉಸಿರಾಟವೇ ಮುಂತಾದ ಜೈವಿಕ ಕರ್ತವ್ಯಗಳನ್ನು ನಿರ್ವಹಿಸುತ್ತವೆ. ಅವಾವುವೂ ನಾನಲ್ಲ (ಏಕಮೇವಾದ್ವಿತೀಯ ಬ್ರಹ್ಮವಲ್ಲ). ಸುಷುಪ್ತಿಯ ಅಜ್ಞಾನಾಂಧಕಾರ ಕೂಡಾ ನಾನಲ್ಲ (ಉಕ್ತ ಪರಮೋಚ್ಚ ನಿತ್ಯ ನಿರ್ವಿಕಾರ ಪದಾರ್ಥವಲ್ಲ) ; ವಿಚಾರ ಮಾಡುವ ಮನಸ್ಸು ಕೂಡಾ ನಾನಲ್ಲ (ಮುಕ್ತಾತ್ಮವಲ್ಲ). ಸುಷುಪ್ತಿಯಲ್ಲಿ (ನಿದ್ರೆಯಲ್ಲಿ) ವಿಷಯ ವಾಸನೆಗಳತ್ತ ಲಕ್ಷ್ಯವಿರುವ ಗುಪ್ತ ಪ್ರವೃತ್ತಿಗಳಷ್ಟೇ ಇರುತ್ತವೆ. ಅದರಲ್ಲಿ ನಾನಿಲ್ಲ ; ಅದರಲ್ಲಿ ವಿಷಯ ಜ್ಞಾನವೊಂದೂ ಇರದು ; ಯಾವ ಕರ್ಮಜ್ಞಾನವೂ ಇರದು ಮೇಲೆ ಹೇಳಿದ ಸ್ಥೂಲ ಶರೀರಾದಿ ಯಾವ ಒಂದೂ ನಾನಲ್ಲವೆಂದು ನಿಷೇಧಿಸಿದ ಮೇಲೆ ಉಳಿಯುವ ಜ್ಞಾನವೊಂದೇ 'ನಾನು' ಎಂಬ ಪರವಸ್ತು. ಈ ಜ್ಞಾನ ಸ್ವರೂಪವು ಸಚ್ಚಿದಾನಂದ ಅಸ್ತಿತ್ವದ ಜಾಗರದ (ಸುಖ ದುಃಖಾತೀತ) ಆನಂದ ; ನಿತ್ಯ ನಿರ್ವಿಕಲ್ಪ ಅಪರೋಕ್ಷಾನುಭೂತಿ ; ಸಹಜ ಸಮಾಧಿ ; ಮೋಕ್ಷ.

ಲೌಕಿಕವಾದ ಎಲ್ಲ ಜ್ಞಾನಗಳಿಗೂ ಕರ್ಮಗಳಿಗೂ ಮನಸ್ಸು ಅಧಿಕರಣರೂಪದ ಕಾರಣವಾಗಿರುವುದರಿಂದ ಅದು ಗುಣ ಹೊಂದಿದೊಡನೆಯೇ (ಶಾಂತವಾದ ಕೂಡಲೇ, ನಷ್ಟವಾದಾಗ) ಜಗದ್ದರ್ಶನವು (ವಿಶ್ವರೂಪದರ್ಶನವು) ನಿಂತು ಹೋಗುತ್ತದೆ ; ಜಗತ್ತು ಕಾಣದಾಗುತ್ತದೆ ; ಜಗತ್ತಿನ ಪರಿವೆ ಇಲ್ಲವಾಗುತ್ತದೆ. ಹಗ್ಗದ ಜ್ಞಾನವು ಆಧಾರ. ಅದರ ಮೇಲೆ ಅಧ್ಯಾರೋಪಿಸಿದ ಹಾವಿನ ರೂಪದ ಜ್ಞಾನ ಅಳಿಯುವವರೆಗೆ ಹಗ್ಗದ ಜ್ಞಾನ ಹೇಗೆ ಆಗುವುದಿಲ್ಲವೋ ಹಾಗೇ ಜಗದ್ದರ್ಶನವೆಂಬ ಅಧ್ಯಾರೋಪವು ಅಳಿಯುವವರೆಗೆ

ಸ್ವರೂಪದರ್ಶನ (ಸ್ವ ಸ್ವರೂಪಜ್ಞಾನ ; ಪರಬ್ರಹ್ಮಜ್ಞಾನ ; ಆತ್ಮಜ್ಞಾನ) ಎಂಬ ಆಧಾರಭೂತವಾದ ಅಪರೋಕ್ಷಾನುಭೂತಿಯುಂಟಾಗುವುದಿಲ್ಲ.

ಮನಸ್ಸೆಂಬುದು ಬ್ರಹ್ಮಾತ್ಮ ಸ್ವರೂಪದಲ್ಲಿ ಅಡಗಿರುವ ಒಂದು ಅದ್ಭುತ ಶಕ್ತಿ. ಅದು ಎಲ್ಲ ವಿಚಾರಗಳನ್ನೂ (ತನ್ನೊಳಗಿಂದ) ಹೊರದೂಡುತ್ತದೆ, ಬಿತ್ತರಿಸುತ್ತದೆ. ನಾವು ಎಲ್ಲ ವಿಚಾರಗಳನ್ನೂ ಬದಿಗಿಟ್ಟಾಗ ನಮಗೆ ಮನಸ್ಸಿನ ಪ್ರತ್ಯೇಕ ಅಸ್ತಿತ್ವವು ಗೋಚರವಾಗುವುದಿಲ್ಲ; ಆದುದರಿಂದ ವಿಚಾರವೆಂಬುದೇ ಮನಸ್ಸಿನ ಸ್ವಭಾವ ಅಥವಾ ಸ್ವರೂಪ. ವಿಚಾರಗಳನ್ನು ಬಿಟ್ಟರೆ ಜಗತ್ತೆಂಬುದಿಲ್ಲ. (ವಿಚಾರ=ಆಲೋಚನೆ+ಸಂಕಲ್ಪನೆ; ಜಾಗರ–ಸ್ವಪ್ನಗಳಲ್ಲಿ ವಿಚಾರಗಳಿರುತ್ತವೆ. ಆದುದರಿಂದ ಅವುಗಳಲ್ಲಿ ಜಗತ್ತಿರುತ್ತದೆ. ಹೇಗೆ ಜೇಡರ ಹುಳುವು (ಊರ್ಣನಾಭವು) ತನ್ನೊಳಗಿನಿಂದಲೇ ನೂಲುಗಳನ್ನು ತೆಗೆದು ಹೊರಹಾಕಿ ಮತ್ತೆ ತನ್ನೊಳಗೆ ಎಳೆದುಕೊಳ್ಳುವುದೋ ಹಾಗೇ ಮನಸ್ಸು ಜಗತ್ತನ್ನು ಹೊರಗೆ ವಿಸ್ತರಿಸಿ ಪುನಃ ತನ್ನೊಳಗೇ ಎಳೆದುಕೊಳ್ಳುತ್ತದೆ, ಹೀರಿಕೊಳ್ಳುತ್ತದೆ, ಗರ್ಭೀಕರಿಸಿಕೊಳ್ಳುತ್ತದೆ. ಬ್ರಹ್ಮಾತ್ಮದಿಂದ ಮನಸ್ಸು ಹೊರಬಿದ್ದೊಡನೆಯೇ (ಸ್ವರ್ಗ–ಪಾತಾಳಾದಿ) ಜಗತ್ತೂ ಭಾಸವಾಗುತ್ತದೆ (ಇಂದ್ರಿಯಗ್ರಾಹ್ಯ ಅಥವಾ ಷಟ್ಕರಣ ಗ್ರಾಹ್ಯ) ಅನುಭವಕ್ಕೆ (ಪ್ರತ್ಯಕ್ಷಕ್ಕೆ) ಬರುತ್ತದೆ. ಆದುದರಿಂದ (ಲೋಕ ಸಮುದಾಯವಾದ) ಜಗತ್ತು ದೃಶ್ಯವಾದಾಗ ಬ್ರಹ್ಮಾತ್ಮದರ್ಶನವಾಗದು; ಬ್ರಹ್ಮಾತ್ಮದರ್ಶನ (ಪ್ರಕಾಶ)ವಾದಾಗ ಜಗತ್ತು ತೋರದು, ಭಾಸವಾಗದು. ಮನಸ್ಸಿನ ಸ್ವರೂಪವನ್ನೊಬ್ಬ ಸೂಕ್ಷ್ಮಾವಲೋಕನ ಮಾಡುತ್ತ ಹೋದ ಹಾಗೆ ತಾನೇ (ಈಗ ತಪ್ಪಾಗಿ ತಿಳಿದುಕೊಳ್ಳಲಾದ) ಮನಸ್ಸು ಎಂದು ಕೊನೆಗೆ ಗೊತ್ತಾಗುತ್ತದೆ. ಇಲ್ಲಿ ತಾನೆಂದು ಕರೆಯಲ್ಪಟ್ಟದ್ದು ಸತ್ಯವಾಗಿಯೂ ಆತ್ಮಸ್ವರೂಪವೇ ಪರಬ್ರಹ್ಮವೇ ಆಗಿದೆ. ಯಾವಾಗಲೂ ಸ್ಥೂಲವಾದ ನಾಮರೂಪಾತ್ಮಕ ವಸ್ತುವನ್ನು ಆಧರಿಸಿ ಮಾತ್ರ ಮನಸ್ಸಿರಬಲ್ಲದು. ಉದಾಹರಣೆಗಾಗಿ, ದೇಹವನ್ನು ನಾನೆಂದು ಅದು ತಿಳಿಯುವುದು. ಅದು ತನ್ನಷ್ಟಕ್ಕೇ ತಾನಿರಲಾರದು. ಮನಸ್ಸನ್ನೇ ಸೂಕ್ಷ್ಮ ಶರೀರ ಅಥವಾ ಜೀವ ಎನ್ನಲಾಗುತ್ತದೆ.

ತಾನೇ ಶರೀರವೆಂದು ಹುಟ್ಟಿಕೊಳ್ಳುವುದು ಮನಸ್ಸು. ಯಾರಾದರೂ ನಾನೆಂಬ ವಿಚಾರವು ಶರೀರದ ಯಾವ ಸ್ಥಳದಲ್ಲಿ ಮೊದಲು ಹುಟ್ಟುತ್ತದೆ? ಎಂದು ಕೇಳಿದರೆ, ಹೃದಯದಲ್ಲಿ[೪] ಅದು ಹುಟ್ಟುತ್ತದೆ ಎಂದು ಗೊತ್ತಾಗುತ್ತದೆ. ಅದೇ ಮನಸ್ಸಿನ ಆಕರ

೪. ಶ್ರೀ ರಮಣರು ಯಾವಾಗ 'ಸ್ಥಳ' (ಇದಂ) ಎಂಬ ಪದವನ್ನು ಬಳಸಿದರೂ ನಮ್ಮ ನಿಜಸ್ಥಿತಿಯಾದ ಬ್ರಹ್ಮಾತ್ಮವನ್ನಲ್ಲದೆ ದೇಶಕಾಲಾವಚ್ಛಿನ್ನವಾದ ಇನ್ನಾವುದನ್ನೂ ಅಲ್ಲ ಎಂಬುದು ಸಾಮಾನ್ಯ ನಿಯಮ. ಈ ಕೃತಿಯ ಮುಂದಿನ ಅನುಚ್ಛೇದವು ಇದನ್ನು ದೃಢಪಡಿಸುತ್ತದೆ. ಅದರಲ್ಲಿ ಅವರು "ನಾನೆಂಬ ವಿಚಾರದ ಅಲ್ಪಚ್ಛಾಯೆ ಕೂಡ ಇಲ್ಲದ ಸ್ಥಳ (ಇದಂ) ಎಂದರೆ ಬ್ರಹ್ಮಾತ್ಮ (ಸ್ವರೂಪ)"–ಎಂದು ಹೇಳಿದ್ದಾರೆ. ಆದುದರಿಂದ ಈ ವಾಕ್ಯದಲ್ಲಿ ಅವರು "ಯಾರಾದರೊಬ್ಬರು ಶೋಧಿಸಿದರೆ ದೇಹದ ಯಾವ ಸ್ಥಳದಲ್ಲಿ...." ಎಂದು ಹೇಳಿದಾಗ "ಯಾವುದರಿಂದ?" ಎಂದು ಸಾರತಃ ನಾವು ಶೋಧಿಸಬೇಕೆಂಬುದು ಅವರ ನಿರೀಕ್ಷೆ. ಆಗ ದೇಹದಲ್ಲಿಯ ಯಾವುದಾದರೊಂದು ಸ್ಥಳವೆಂದಾಗದೆ, "ನಾವು (ಬ್ರಹ್ಮಾತ್ಮ) ನಿಜವಾಗಿಯೂ ಇರುವ ವಸ್ತು" ಎಂದೇ ಅರ್ಥವಾಗುತ್ತದೆ. ಆದುದರಿಂದ ಶ್ರೀ ರಮಣರು ಅನೇಕ ಬಾರಿ, 'ಹೃದಯ'ದ ನಿಜವಾದ ಅರ್ಥವೇನೆಂದರೆ – ದೇಹದಲ್ಲಿಯ ಯಾವುದಾದರೊಂದು ಸೀಮಿತ ಪ್ರದೇಶವಲ್ಲ–ಅಸೀಮ ಬ್ರಹ್ಮಾತ್ಮವೇ ಎಂದಿದ್ದಾರೆ ('ಉಪದೇಶ ಮಂಜರಿ'ಯ ಎರಡನೆಯ ಅಧ್ಯಾಯದ ೯ನೆಯ ಪ್ರಶ್ನೆಗೆ ಕೊಟ್ಟ ಉತ್ತರವನ್ನು ನೋಡಿರಿ). ಹೀಗಿದ್ದರೂ ಒಂದು ದೇಹದೊಡನೆ ತಾದಾತ್ಮ್ಯ ಸಂಬಂಧ ಹೊಂದಿಯೇ ಮನಸ್ಸು ಅಥವಾ ಅಹಂಕಾರವು ಹುಟ್ಟಬಲ್ಲದುದರಿಂದ ಎದೆಯಿಂದ ಬಲಗಡೆಗೆ ಎರಡಂಗುಲದಷ್ಟು ದೂರದ ಸ್ಥಳದಲ್ಲಿ ಎಂದು ತೋರಿಸಬಹುದು: ಆ ಸ್ಥಳವೆಂದೂ ನಿರಪೇಕ್ಷ ಸತ್ಯವೆಂದು ಯಾವಾಗಲೂ ಹೇಳಲು ಸಾಧ್ಯವಾಗದಿದ್ದರೂ ಪರವಾಯಿಲ್ಲ.

(ಅಕ್ಷರಶಃ ಜನ್ಮಸ್ಥಳ). ಯಾರಾದರೂ ಸತತವಾಗಿ 'ನಾನು ನಾನೆಂದು ವಿಚಾರ ಮಾಡಿದರೂ ಆ ವಿಚಾರವು ಅವನನ್ನು ಆ ಸ್ಥಳಕ್ಕೇ (ನಮ್ಮ ನಿಜ ಸ್ಥಿತಿಯಾದ ಬ್ರಹ್ಮಾತ್ಮಪದಕ್ಕೆ) ಒಯ್ದು ಮುಟ್ಟಿಸುತ್ತದೆ. ಮನಸ್ಸಿನಲ್ಲಿ ಮೂಡುವ ಎಲ್ಲ ವಿಚಾರಗಳಲ್ಲಿ ನಾನೆಂಬ ವಿಚಾರವು (ನಾನು ದೇಹವೆಂಬ ಅನುಭವವು) ಮೊಟ್ಟಮೊದಲನೆಯ ವಿಚಾರ. ಇದೆದ್ದ ಮೇಲೆಯೇ ಮಿಕ್ಕೆಲ್ಲಾ ವಿಚಾರಗಳೂ ಏಳುವುವು. ಉತ್ತಮ ಪುರುಷ ವಿಚಾರವು (ಕರ್ತ=ನಾನು) ಹುಟ್ಟಿದ ಮೇಲೆಯೇ–ನಾನೇದೇಹ ಅಥವಾ ನಾನಿಂಥವನು ಎಂಬ ವಿಚಾರ ಉದಿಸಿದ ಮೇಲೆಯೇ – ಮಧ್ಯಮ–ಪ್ರಥಮ ಪುರುಷ ವಿಚಾರಗಳು (ಕರ್ಮಪದ ವಾಚ್ಯಗಳಾದ ನೀನು, ಅವನು, ಅವಳು, ಅದು, ಇದು–ಅದು ಎಂಬಂತಹ ವಿಚಾರಗಳು) ಹುಟ್ಟುತ್ತವೆ; ಉತ್ತಮ ಪುರುಷವಿಲ್ಲದೆ ಮಧ್ಯಮ–ಪ್ರಥಮ ಪುರುಷಗಳಿರಲಾರವು.

'ನಾನು ಯಾರು?' ಎಂಬ ಶೋಧದಿಂದ ಮಾತ್ರ ಮನಸ್ಸು ಶಮನ ಹೊಂದುವುದು. ನಾನು ಯಾರೆಂಬ ವಿಚಾರವು (ಬ್ರಹ್ಮಾತ್ಮದತ್ತ ನಮ್ಮ ಲಕ್ಷ್ಯವನ್ನು ತಿರುಗಿಸುವ ಸಾಧನ ಮಾತ್ರವಾಗಿದೆ ಅದು) ಉಳಿದೆಲ್ಲಾ ವಿಚಾರಗಳನ್ನು ನಾಶಗೊಳಿಸಿ, ಚಿತಾಗ್ನಿಯನ್ನು ಕೆದಕಲು ಬಳಸುವ ಕೋಲಿನಂತೆ, ತಾನೇ ಕೊನೆಗೆ ನಷ್ಟವಾಗುವುದು. ಇತರ ವಿಚಾರಗಳೆದ್ದರೆ (ಅವು ಬ್ರಹ್ಮಾತ್ಮಾವಧಾನ ಹೊರಟು ಹೋದುದನ್ನು ಸೂಚಿಸುತ್ತದೆ) ಅವುಗಳನ್ನು ಪೂರ್ತಿಗೊಳಿಸಲು ಯತ್ನಿಸದೆ 'ಅವು ಯಾರಿಗೆ ಹುಟ್ಟಿದವು?' ಎಂದು ಶೋಧಿಸಬೇಕು. ಬಹಳ ಆಲೋಚನೆಗಳೆದ್ದರಾದರೂ ಏನಾಗುವುದು? (ವಿಚಾರೋನ್ಮುಖತೆಯನ್ನು ಬದಿಗಿರಿಸಿ ಬ್ರಹ್ಮಾತ್ಮೋನ್ಮುಖತೆಯನ್ನು ಪುನಃ ಪಡೆಯುವ ಸಾಧನ ಈ ಮುಂದೆ ಹೇಳುವಂತಿದೆ). ಪ್ರತಿಯೊಂದು ವಿಚಾರವೂ ಏಳುವ ಕ್ಷಣದಲ್ಲಿ ಎಚ್ಚರಿಕೆಯಿಂದೊಬ್ಬ 'ಇದು ಯಾರಿಗೆ ಹುಟ್ಟಿದೆ?' ಎಂದು ಶೋಧಿಸಿದರೆ, 'ನನಗೆ' ಎಂದು ಗೊತ್ತಾಗುವುದು. ಆಗ 'ನಾನು ಯಾರು?' ಎಂದು ಅವನನ್ನು ಶೋಧಿಸಿದರೆ ಮನಸ್ಸು (ನಮ್ಮ ಅವಧಾನ ಶಕ್ತಿಯು) (ಆ ವಿಚಾರವನ್ನು ಬಿಟ್ಟು) ತನ್ನ ಮೂಲವಾದ ಬ್ರಹ್ಮಾತ್ಮದತ್ತ ಹಿಂದಿರುಗುವುದು ; (ಆಗ ಅದರತ್ತ ಲಕ್ಷ್ಯ ಹಾಕುವವರಾರೂ ಇಲ್ಲದುದರಿಂದ) ಎದ್ದ ವಿಚಾರವು ಅಲ್ಲೇ ಶಮನ ಹೊಂದುವುದು. ಪುನಃ ಪುನಃ ಇದನ್ನು ಅನುಷ್ಠಿಸಿದರೆ ಅದರಿಂದ ತನ್ನ ಮೂಲದಲ್ಲಿಯೇ ನಿಲ್ಲುವ ಮನಃಶಕ್ತಿಯು ಹೆಚ್ಚುತ್ತದೆ. ಸೂಕ್ಷ್ಮವಾದ ಮನಸ್ಸು (ಉನ್ಮುಖತೆ, ಅವಧಾನ ಯಾ ಲಕ್ಷ್ಯ ಹಾಕುವುದು) ಸ್ಥೂಲವಾದ ಮಿದುಳು ಮತ್ತು ಇಂದ್ರಿಯಗಳ ಮೂಲಕ ಹೊರ ಹೊರಟಾಗ (ಜಗತ್ತಿನ ವಿಷಯಗಳಾದ, ವಸ್ತುಗಳಾದ, ಪದಾರ್ಥಗಳಾದ) ಸ್ಥೂಲವಾದ ನಾಮರೂಪಗಳು ತೋರುವುವು– ಅದು ಹೃದಯದಲ್ಲಿ ನೆಲೆನಿಂತಾಗ (ಹೃದಯ=ಬ್ರಹ್ಮಾತ್ಮ=ತನ್ಮೂಲ) ನಾಮ–ರೂಪಗಳು ಲುಪ್ತವಾಗುವುವು. ನಮ್ಮ ಅವಧಾನವನ್ನು ನಮ್ಮ ಬ್ರಹ್ಮಾತ್ಮದಲ್ಲಿಟ್ಟು (ಪೂರ್ವೋಕ್ತವಾದ ಬ್ರಹ್ಮಾತ್ಮಾವಧಾನ ನಿಷ್ಠೆಯ ಸಾಧನದಿಂದ), ಅದನ್ನತ್ತಲಿತ್ತ ಹೋಗಗೊಡದೆ ಇರುವುದೇ ಅಹಂಮುಖತೆ (ಬ್ರಹ್ಮಾತ್ಮೋನ್ಮುಖತೆ) ಯಾ ಅಂತರ್ಮುಖತೆ. ಹೃದಯದಿಂದ ಅದನ್ನು ಹೊರ ಹೋಗಬಿಡುವುದೇ ಬಹಿರ್ಮುಖತೆ. ಈ ಪ್ರಕಾರ ಮನಸ್ಸು ಹೃದಯದಲ್ಲಿ ನೆಲೆನಿಂತಾಗ ನಾನೆಂಬುದು (ನಾನೆಂಬ ವಿಚಾರ ಅಥವಾ ಅಹಂಕಾರವು) ಸರ್ವ ವಿಚಾರಗಳಿಗೂ ಮೂಲವಾಗಿರುವ ಅದು–ಅದೃಶ್ಯವಾಗುವುದು ಮತ್ತು ಅನಂತರ ನಿತ್ಯವಾಗಿರುವ ಬ್ರಹ್ಮಾತ್ಮವೊಂದೇ ಪ್ರಕಾಶಿಸುತ್ತದೆ. ಅಹಂಕಾರ ರೂಪದ ವಿಚಾರದ ಅಲ್ಪಚ್ಛಾಯೆ ಕೂಡ ಉಳಿದಿರದ ಸ್ಥಳವೇ (ಯಾ

ಸ್ಥಿತಿಯೇ) ಬ್ರಹ್ಮಾತ್ಮ (ಸ್ವರೂಪಂ). ಅದೇ ಮೌನ. (ಸುಮ್ಮಾ ಇರುಪ್ಪದು) ಹೀಗೆ ಸುಮ್ಮನಿರುವುದೆಂದರೆ ಮನಸ್ಸು ಬ್ರಹ್ಮಾತ್ಮದಲ್ಲಿ ಶಮನ ಹೊಂದುವುದು. (ಬ್ರಹ್ಮಾತ್ಮಾವಧಾನದಿಂದ ಶಾಂತವಾಗುವುದು). ಇದರಿಂದ ಭಿನ್ನವಾದ, ಇನ್ನೊಬ್ಬರ ವಿಚಾರಗಳನ್ನು ತಿಳಿದುಕೊಳ್ಳುವುದು, ಭೂತ–ವರ್ತಮಾನ–ಭವಿಷ್ಯತ್ತೆಂಬ ಕಾಲತ್ರಯವನ್ನರಿತುಕೊಳ್ಳುವುದು, ದೂರದಲ್ಲಿರುವ ಘಟನೆಗಳನ್ನು ತಿಳಿದುಕೊಳ್ಳುವುದು– ಮುಂತಾದ ಈ ಯಾವುದೂ ಎಂದೂ ಜ್ಞಾನ ದೃಷ್ಟಿಯಲ್ಲ.

ಬ್ರಹ್ಮಾತ್ಮವೊಂದೇ ನಿಜವಾಗಿ ಇರುವಂಥ ಪದಾರ್ಥ. ಜಗಜ್ಜೀವದೇವರುಗಳು ಶುಕ್ತಿ ರಜತನ್ಯಾಯದಂತೆ ಅಧ್ಯಾರೋಪಿತವಾದಂಥವುಗಳು. ಈ ಮೂರೂ ಒಟ್ಟಿಗೇ ತೋರಿ ಒಟ್ಟಿಗೆ ಅಡಗುವುವು. ಏಕಕಾಲದಲ್ಲಿ ಎದ್ದು ಏಕಕಾಲದಲ್ಲಿ ಅಳಿದು ಹೋಗುವಂಥವು. ಬ್ರಹ್ಮಾತ್ಮವೇ ಜಗತ್ತು ಯಾ ಪ್ರಪಂಚ ; ಬ್ರಹ್ಮಾತ್ಮವೇ ನಾನೆಂಬ ಜೀವಾತ್ಮ. ಬ್ರಹ್ಮಾತ್ಮವೇ ದೇವರು ಯಾ ಈಶ್ವರ – ಈಯೆಲ್ಲವೂ ಶಿವಸ್ವರೂಪ.

ಮನಸ್ಸು ಉಪಶಮನ ಹೊಂದಲು ಆತ್ಮಶೋಧಕ್ಕಿಂತ ಹೆಚ್ಚು ಸಮರ್ಪಕವಾದ ಸಾಧನವಿಲ್ಲ. ಇತರ ಸಾಧನಗಳಿಂದ ನಿಗೃಹೀತವಾದರೆ, ಮನಸ್ಸು ಶಮನಗೊಂಡಂತಿರುತ್ತದೆ ಆದರೆ ಪುನಃ ಉದಯವಾಗುತ್ತದೆ. ಪ್ರಾಣಾಯಾಮದಿಂದಲೂ ಮನಸ್ಸು ಶಾಂತವಾಗುತ್ತದೆ ; ಆದರೆ ಉಸಿರು ಶಾಂತವಾಗಿರುವಷ್ಟು ಕಾಲ ಮಾತ್ರ ಮನಸ್ಸು ಶಾಂತವಾಗಿರುತ್ತದೆ (ಉಸಿರೆಂದರಿಲ್ಲಿ ಪ್ರಾಣ) ; ಉಸಿರು ಹೊರಬಿದ್ದ ಕೂಡಲೇ ಮನಸ್ಸೂ ಹೊರಬಿದ್ದು ವಾಸನೆಗಳ ಪ್ರಭಾವಕ್ಕೆ ಸಿಕ್ಕಿ ಅಲೆದಾಡುವುದು. ಮನಃಪ್ರಾಣಗಳ ಮೂಲವೊಂದೇ. ವಿಚಾರವೇ ಮನಃ ಸ್ವರೂಪ. ನಾನೆಂಬುದೇ ಮನಸ್ಸಿನ ಪ್ರಥಮ ವಿಚಾರ ; ಅದೇ ಅಹಂಕಾರ (ದೇಹೋಽಹಂಭಾವ).

ಅಹಂಕಾರ ಹುಟ್ಟುವಲ್ಲಿಯೇ ಉಸಿರು ಯಾ ಪ್ರಾಣ ಹುಟ್ಟುತ್ತದೆ. ಆದುದರಿಂದ ಮನಃ ಶಮನವಾದೊಡನೆಯೇ ಪ್ರಾಣ ಶಮನವಾಗುವುದು. ಸುಷುಪ್ತಿಯಲ್ಲಿ ಮನಸ್ಸು ಶಾಂತವಾದರೂ ಪ್ರಾಣ ಶಾಂತವಾಗದು. ದೇಹರಕ್ಷಣೆಗಾಗಿ ದೇವರು ಉಳಿದವರು ಆ ದೇಹ ಸತ್ತು ಹೋಗಿದೆಯೆಂದು ತಿಳಿದುಕೊಳ್ಳಬಾರದೆಂದು ಹಾಗೆ ಯೋಜಿಸಿದ್ದಾರೆ. ಮನಸ್ಸು ಜಾಗ್ರದವಸ್ಥೆಯಲ್ಲಿಯೇ ಶಾಂತವಾದರೆ, ಬ್ರಹ್ಮಾತ್ಮದಲ್ಲಿ ಹೀರಿ (ಮುಳುಗಿ) ಹೋದರೆ ಪ್ರಾಣವು ಶಾಂತವಾಗುವುದು. ಪ್ರಾಣವು ಮನಸ್ಸಿನ ಸ್ಥೂಲರೂಪ. ಸಾಯುವವರೆಗೆ ಮನಸ್ಸು ಪ್ರಾಣವನ್ನು ಶರೀರದಲ್ಲಿ ಇಟ್ಟಿರುತ್ತದೆ ; ಶರೀರ ಸತ್ತಾಗ ಅದು ಪ್ರಾಣವನ್ನು ಬಲಾತ್ಕಾರದಿಂದ ಹೊರಗೆಳೆದೊಯ್ಯುತ್ತದೆ. ಆದುದರಿಂದ ಪ್ರಾಣಾಯಾಮವು ಕೇವಲ ಮನೋನಿಯಂತ್ರಣ ಸಾಧನವಲ್ಲದೆ ಮನೋವಿನಾಶವನ್ನದೆಂದೂ[೫] ಮಾಡಲಾರದು.

---

೫. ಸಾಯುವ ಕಾಲದಲ್ಲಿ ಮನಸ್ಸು ಬಲಾತ್ಕಾರದಿಂದ ಪ್ರಾಣವನ್ನು ತೆಗೆದುಕೊಂಡು ಹೋಗಬಲ್ಲುದಾದುದರಿಂದ ಪ್ರಾಣವು ಮನಸ್ಸಿಗಿಂತ ದುರ್ಬಲವಾದುದೆಂದು ತಿಳಿದುಕೊಳ್ಳಬೇಕು. ಅದರಿಂದಲೇ ಪ್ರಾಣಾಯಾಮವು ಕೇವಲ ಮನೋ ನಿಯಂತ್ರಣ ಸಾಧನವೆಂದೂ ಅದೆಂದೂ ಮನೋನಾಶವನ್ನು ಮಾಡಲಾರದೆಂದೂ ಶೀ ರಮಣ ಮಹರ್ಷಿಗಳು ಹೇಳಿದ್ದಾರೆ. ಹಾಗಲ್ಲದೆ, ಆತ್ಮಶೋಧದ ಹಾಗೂ ಸರಿಯಾದ ಜ್ಞಾನದ ಮೂಲಕ ಮನಸ್ಸನ್ನು ನಿಯಂತ್ರಿಸಿಕೊಂಡರೆ (ಶಮನಗೊಳಿಸಿಕೊಂಡರೆ) ಅದಷ್ಟೇ ಸಾಕಾಗುವುದು ಮತ್ತು ಆಗ ನಾವು ಪ್ರಾಣನಿಯಂತ್ರಣದ ಗೊಡವೆಗೆ ಹೋಗುವುದೇ ಬೇಡವಾಗುತ್ತದೆ.

ಪ್ರಾಣಾಯಾಮದಂತೆಯೇ ಮೂರ್ತಿಧ್ಯಾನ, ಮಂತ್ರ ಜಪ ಮತ್ತು ಆಹಾರನಿಯಮ ಎಂಬೀಯೆಲ್ಲವೂ ಕೇವಲ ಮನೋನಿಯಂತ್ರಣ ಸಾಧನಗಳು ; (ಆದರೆ ಅವೇ ಎಂದೂ (ಸ್ವಬಲದಿಂದ) ಮನೋನಾಶವನ್ನುಂಟು ಮಾಡಲಾರವು). ಮೂರ್ತಿಧ್ಯಾನ–ಮಂತ್ರಜಪಗಳ ಮೂಲಕ ಮನಸ್ಸು ಏಕಾಗ್ರತೆಯನ್ನು ಪಡೆಯುತ್ತದೆ. ತನ್ನ ಸೊಂಡಿಲಿನಲ್ಲಿಟ್ಟುಕೊಳ್ಳಲು ಆನೆಗೊಂದು ಸರಪಳಿಯನ್ನಿತ್ತರೆ – ಯಾವಾಗಲೂ ಎತ್ತಲೆಂದರತ್ತ ಆ ಈ ವಸ್ತುಗಳನ್ನು ಹಿಡಿದುಕೊಳ್ಳಲು ಅಲೆದಾಡುವ–ಅದು ಸರಪಳಿಯನ್ನಷ್ಟೇ ಹಿಡಿದುಕೊಂಡು ಇರುವುದಲ್ಲದೆ, ಇತರ ವಸ್ತುಗಳನ್ನು ಹಿಡಿಯ ಹೋಗದು. ಅಂತೆಯೇ ಯಾವಾಗಲೂ ಅಲೆದಾಡುವ ಮನಸ್ಸಿಗೆ ದೇವರ ಯಾವುದಾದರೂ ಒಂದು ನಾಮಕ್ಕೆ ಅಥವಾ ರೂಪಕ್ಕೆ ಅಂಟಿಕೊಂಡಿರುವ ತರಬೇತನ್ನಿತ್ತರೆ ಅದಕ್ಕಷ್ಟೇ ಅದು ಅಂಟಿಕೊಂಡಿರುತ್ತದೆ. ಅಸಂಖ್ಯಾತ ವಿಚಾರಗಳಿರುವ ಮನಸ್ಸು ಶಾಖೋಪಶಾಖೆಗಳಾಗಿ ಹರಡಿ ಹೋಗುವುದರಿಂದ ಪ್ರತಿಯೊಂದು ವಿಚಾರವೂ ಬಹಳ ದುರ್ಬಲವಾಗುತ್ತದೆ. ವಿಚಾರಗಳು ಹೆಚ್ಚು ಹೆಚ್ಚಾಗಿ ಶಮನ ಹೊಂದುತ್ತ ಹೋದ ಹಾಗೆ ಏಕಾಗ್ರತೆ ಸಿದ್ಧಿಸುವುದು ; ಆ ಮೂಲಕ ಸಾಮರ್ಥ್ಯ ಪಡೆದ ಮನಸ್ಸಿಗೆ ಆತ್ಮಶೋಧವು ಸುಲಭ ಸಾಧ್ಯವಾಗುವುದು.[೬] ಮಿತ ಸಾತ್ವಿಕಾಹಾರ, ನಿಯಮದ ಮೂಲಕ[೭]–ಅದು ಎಲ್ಲ ನಿಯಮಗಳಿಗಿಂತಲೂ ಉತ್ತಮವಾಗಿರುವುದರಿಂದ–ಮನಸ್ಸಿನ ಸಾತ್ವಿಕ ಗುಣ ಹೆಚ್ಚಿ ಅದು ಆತ್ಮಶೋಧಕ್ಕೆ ಸಹಾಯಕವಾಗುವುದು.

ಅನೇಕ ವರ್ಷಗಳಿಂದ ಪುನರಾವರ್ತಿಸುತ್ತ ಬಂದ ವಿಷಯವಾಸನೆಗಳು ಅಸಂಖ್ಯಾತವಾಗಿ ಕಡಲಲೆಗಳಂತೆ ಎದ್ದರೂ ಸ್ವರೂಪಧ್ಯಾನವು (ಆತ್ಮಾವಧಾನ) ಹೆಚ್ಚು ಹೆಚ್ಚು ಸಾಂದ್ರವಾಗುತ್ತ ಹೋದಂತೆ ಅವೆಲ್ಲವೂ ನಾಶವಾಗಿ ಹೋಗುತ್ತವೆ. ಸಂದೇಹ ಪಡುವ ವಿಚಾರಕ್ಕೂ ಅವಕಾಶ ಕೊಡದೆ ಬ್ರಹ್ಮಾತ್ಮ ಮಾತ್ರವಾಗಿರಲು ಎಲ್ಲ ವಾಸನೆಗಳನ್ನೂ ನಾಶಮಾಡಲು ಸಾಧ್ಯವೇ? ಮುಮುಕ್ಷುವು ಎಡೆಬಿಡದೆ ಆತ್ಮಾವಧಾನಕ್ಕೆ ದೃಢವಾಗಿ ಅಂಟಿಕೊಳ್ಳಬೇಕು. 'ನಾನು ಪಾಪಿ! ನಾನೆಂತು ಮೋಕ್ಷವನ್ನು ಪಡೆಯಬಲ್ಲೆ?' ಎಂದು ಗೋಳಾಡದೆ ಎಂಥ ಪಾಪಿಷ್ಠನಾದರೂ ತಾನು ಪಾಪಿ ಎಂಬ ವಿಚಾರವನ್ನೂ

೬. ಓದುಗನಿಲ್ಲಿ ಪುಟ...... ರಿಂದ...... ರವರೆಗೆ ನೋಡಬಹುದು. ಅಲ್ಲಿ ಬ್ರಹ್ಮಾತ್ಮನಿಷ್ಠೆಯೆಂಬ ಬ್ರಹ್ಮಾತ್ಮ ಶೋಧವನ್ನು ಸುಲಭಗೊಳಿಸಿ ಕೊಡುವುದರಲ್ಲಿ ಜಪದ ಯಾ ಧ್ಯಾನದ ಅಭ್ಯಾಸವು ಯಾವ ರೀತಿಯಿಂದ ನೆರವೀಯಬಲ್ಲದೆಂಬುದನ್ನು ನಿಷ್ಕೃಷ್ಟವಾಗಿ ವಿವರಿಸಲಾಗಿದೆ. ಈ ಸಂದರ್ಭದಲ್ಲಿ ಶ್ರೀ ರಮಣರ ಉಪದೇಶವನ್ನು ನೆನೆದುಕೊಳ್ಳಬಹುದು. "ಯಾಂತ್ರಿಕವಾಗಿ ಮೇಲಿಂದ ಮೇಲಕ್ಕೆ ಭಕ್ತಿಯಿಲ್ಲದೆ ದೇವರ ನಾಮವನ್ನು (ರೂಪವನ್ನು) ಯಾರೂ ಬಳಸಬಾರದು. ದೇವರ ಹೆಸರನ್ನು ಬಳಸಲು ಗಾಢಾಸಕ್ತಿಯಿಂದ ಅವನನ್ನು ಕೂಗಿ ಕರೆದು ನಿಃಶೇಷವಾಗಿ, ಆತ್ಮಸಮರ್ಪಣೆ ಮಾಡಿಕೊಳ್ಳಬೇಕು. ('ಮಹರ್ಷಿಗಳ ಅಮೃತವಾಣಿ, ಸಂಪುಟ–೧, ಅಧ್ಯಾಯ –೪) ಅನುಬಂಧ ಒಂದರ 'ಡ' ವನ್ನೂ ನೋಡಿರಿ.

೭. ಮಿತ ಸಾತ್ವಿಕಾಹಾರನಿಯಮ ಎಂದರೆ ಮಿತಾಹಾರದಿಂದ ಮುಮುಕ್ಷುವು ಊಟವನ್ನು ನಿಯತಗೊಳಿಸಿಕೊಳ್ಳುವುದು ಮತ್ತು ಪಟ್ಟು ಹಿಡಿದು ಅಸಾತ್ವಿಕಾಹಾರವನ್ನು ಬಿಡುವುದು – ಅಂದರೆ ತತ್ತಿ, ಮೀನು, ಮಾಂಸ ಮುಂತಾದ ಅಸಸ್ಯಹಾರ ಪದಾರ್ಥಗಳನ್ನೂ ಅಮಲೇರಿಸುವಂಥ ಮದ್ಯ–ಹೊಗೆಸೊಪ್ಪುಗಳನ್ನೂ ಅತಿಖಾರ, ಅತಿಹುಳಿ, ಅತಿ ಉಪ್ಪು ಎನ್ನಿಸುವ ಮೇಲೋಗರಗಳನ್ನೂ ನೀರುಳ್ಳಿ, ಬೆಳ್ಳುಳ್ಳಿ ಮುಂತಾದವುಗಳನ್ನೂ ತ್ಯಜಿಸುವುದು. ಅಷ್ಟೇ ಅಲ್ಲದೆ ಸಂಸ್ಕೃತದ ಆಹಾರವೆಂಬ ಪದಕ್ಕೆ ಒಳಗೆ ತೆಗೆದುಕೊಂಡದ್ದು ಎಂಬ ಅರ್ಥವೂ ಇರುವುದರಿಂದ ಊಟವನ್ನು ನಿಯತಗೊಳಿಸಿಕೊಳ್ಳುವುದಲ್ಲದೆ, ಪಂಚೇಂದ್ರಿಯಗಳ ಮೂಲಕ ಮನಸ್ಸು ತೆಗೆದುಕೊಳ್ಳುವ ಎಲ್ಲವನ್ನೂ ನಿಯಮಕ್ಕೊಳಪಡಿಸಬೇಕು ಎಂದೂ ಅರ್ಥ.

ಸಂಪೂರ್ಣವಾಗಿ ತ್ಯಜಿಸಿ ಆತ್ಮಾವಧಾನದಲ್ಲಿ ದೃಢನಾಗಿದ್ದರೆ ಅವನು ಖಂಡಿತವಾಗಿಯೂ ರಕ್ಷಿಸಲ್ಪಡುವನು.[೮]

ವಿಷಯ ವಾಸನೆಗಳು ಮನದಲ್ಲಿರುವವರೆಗೆ 'ನಾನು ಯಾರು?' ಎಂಬ ಶೋಧನೆಯು ಅಗತ್ಯ. ವಿಚಾರಗಳು ಉದಯವಾದಾಗ ಆ ಎಲ್ಲವನ್ನೂ ಅವು ಹುಟ್ಟಿದಲ್ಲಿಯೇ ಆಗಲೇ ಅಲ್ಲಿಂದಲ್ಲೇ ಆತ್ಮಶೋಧದ ಮೂಲಕ ನಾಶ ಗೊಳಿಸಬೇಕು. ಅನ್ಯ ಪದಾರ್ಥವನ್ನು ಅವಧಾನಿಸದೆ (ಅನ್ಯ=ಮಧ್ಯಮ ಯಾ ಪ್ರಥಮ ಪೌರುಷೇಯ ಪದಾರ್ಥದತ್ತ ಲಕ್ಷ್ಯ ಹಾಕದೆ) ಇರುವುದೇ ವೈರಾಗ್ಯ ಯಾ ನಿರಾಶೆ, ನಿಃಸ್ಪೃಹತೆ. ಬ್ರಹ್ಮಾತ್ಮವನ್ನು ಬಿಡದಿರುವುದೇ ಜ್ಞಾನ. ನಿಜವಾಗಿ ನೋಡಿದರೆ, ಇವೆರಡೂ (ನಿರೀಹತೆ ಮತ್ತು ಜ್ಞಾನ) ಒಂದೇ. ಮುತ್ತಿಗಾಗಿ ಕಡಲಾಳಕ್ಕಿಳಿಯುವವನು ಸೊಂಟಕ್ಕೆ ಕಲ್ಲೊಂದನ್ನು ಕಟ್ಟಿಕೊಂಡು ಕಡಲೊಳಗಿಳಿದು ಅದರ ತಳದಲ್ಲಿರುವ ಮುತ್ತನ್ನು ತೆಗೆದುಕೊಳ್ಳುವಂತೆ ಎಲ್ಲರೂ ತಮ್ಮೊಳಗೇ ಆಳವಾಗಿ ಹೊಕ್ಕು ವೈರಾಗ್ಯದಿಂದ ಇದ್ದರೆ ಬ್ರಹ್ಮಾತ್ಮವೆಂಬ ಮುಕ್ತಾಫಲವನ್ನು ಪಡೆಯಬಹುದು. ಬ್ರಹ್ಮದ ಯಾ ಆತ್ಮದ ಸಿದ್ಧಿ ಆಗುವವರೆಗೆ ಸತತವಾಗಿ ಸ್ವರೂಪ ಸ್ಮರಣೆಗೇ ಒಬ್ಬನಿಳಿದರೆ ನಾನೆಂಬ ಕೇವಲ ಭಾವನೆಯನ್ನು ಅವಧಾನಿಸುತ್ತಿದ್ದರೆ ಅಥವ ಸ್ಮರಿಸಿಕೊಳ್ಳುತ್ತಿದ್ದರೆ ಅದೇ ಸಾಕು. ಕೋಟೆಯೊಳಗೆ ಹಗೆಗಳಿರುವ ತನಕ ಅವರು ಹೊರಗೆ ಬರುತ್ತಲೇ ಇರುವರು. ಅವರೆಲ್ಲರನ್ನೂ ಬಂದ ಬಂದ ಹಾಗೆ ಒಬ್ಬ ಕತ್ತರಿಸಿ ಒಗೆದರೆ ಕೋಟೆಯು ನಮ್ಮ ವಶವಾಗುವುದು.

ದೇವರೂ ಗುರುಗಳೂ ವಸ್ತುಶಃ ಭಿನ್ನರಲ್ಲ. ಹುಲಿಯ ದವಡೆಯಲ್ಲಿ ಸಿಕ್ಕಿದ ಪ್ರಾಣಿ ಹೇಗೆ ತಪ್ಪಿಸಿಕೊಳ್ಳಲಾರದೋ ಹಾಗೇ ಗುರುವಿನ ಅನುಗ್ರಹದೊಳಗಿಳಿದವರು ರಕ್ಷಿಸಲ್ಪಡುವರು ಮತ್ತು ಎಂದೂ ಅವರಿಂದ ಪರಿತ್ಯಕ್ತರಾಗರು. ಹೀಗಿದ್ದರೂ ಸಾಧಕನು ತಪ್ಪದೆ ಗುರುಗಳು ತೋರಿಸಿದ ಮಾರ್ಗದಲ್ಲೇ ಹೋಗಬೇಕು.

ಆತ್ಮಚಿಂತನೆಯನ್ನು[೯] ಬಿಟ್ಟು ಮಿಕ್ಕ ಯಾವ ವಿಚಾರಕ್ಕೂ ಏಳಲು ಅಲ್ಪಾವಕಾಶವನ್ನೂ ಕೊಡದೆ ಆತ್ಮನಿಷ್ಠೆಯಲ್ಲೇ ದೃಢವಾಗಿ ಉಳಿಯುವುದೆಂದರೇ ತನ್ನನ್ನು ಸಾಧಕನು ದೇವರಿಗೆ ಅರ್ಪಿಸಿಕೊಳ್ಳುವುದೆಂದರ್ಥ. ನಾವು ಎಷ್ಟೇ ಭಾರವನ್ನು ದೇವರ ಮೇಲೆ ಹಾಕಿದರೂ

---

೮. 'ಉರುಪ್ಪಡುವನ್' ಎಂಬುದೇ ಇಲ್ಲಿ ಬಳಸಿದ ತಮಿಳು ಶಬ್ದ. ಸಾಮಾನ್ಯ ಪ್ರಯೋಗದಲ್ಲಿ ಚೆನ್ನಾಗಿ ರೂಪುಗೊಳಿಸಲ್ಪಡುವನು. ಎಂದು ಅದರ ಅರ್ಥ ; 'ಸುಧಾರಿಸಲ್ಪಡುವನು' ಯಾ 'ಸ್ವ ಪ್ರಯತ್ನದಲ್ಲಿ ಗೆಲ್ಲುವನು' ಎಂದೂ ಅರ್ಥಗಳಿವೆ. ಆದರೆ, ಆಳವಾದ ಅರ್ಥದಲ್ಲಿ ಅದನ್ನು 'ಬ್ರಹ್ಮಾತ್ಮವನ್ನು ಸಾಧಿಸಿಕೊಳ್ಳುವನು' (ಉರು=ಆತ್ಮ ಯಾ ಸ್ವರೂಪ ; ಪಡುವನ್ = ಪಡೆಯುವನು ಯಾ ಇಂಥದರಲ್ಲಿ ಪ್ರತಿಷ್ಠಾಪಿತನಾಗುವನು–ಎಂದು ಗ್ರಹಿಸಿಕೊಳ್ಳಬೇಕು.

೯. 'ಆತ್ಮಚಿಂತನೆ'=ಬ್ರಹ್ಮಾತ್ಮ ವಿಚಾರ–ಎಂದರೆ ಆತ್ಮಾವಧಾನ. ಇಲ್ಲಿ ಭಗವನ್ ಶ್ರೀ ರಮಣರು 'ಚಿಂತನೆ' ಎಂಬ ಪದವನ್ನು ಆತ್ಮಾವಧಾನಾರ್ಥದಲ್ಲಿ ಬಳಸಿದರೂ ಆತ್ಮಾವಧಾನವೆಂಬುದೊಂದು ಮಾನಸಿಕ ಕ್ರಿಯೆ ಎಂದು ಯಾರೂ ತಿಳಿಯಬಾರದು. ಆತ್ಮವಧಾನವೆಂದರೇ, ಆತ್ಮನಿಷ್ಠೆ ;ಆದುದರಿಂದ ಅದು ಮಾಡುವ ಕೆಲಸವಲ್ಲ–ಬರಿದೆ ಇರುವುದು : ಅಂದರೆ, ಅದು ನಮ್ಮ ಒಂದು ಮನಃಕ್ರಿಯೆಯಲ್ಲ. ಆದರೆ ಸ್ವಾಭಾವಿಕ ಸ್ಥಿತಿಯಾದ ಕೇವಲಾಸ್ತಿತ್ವ 'ಉಳ್ಳದು ನಾರ್ಪದು'ವಿನ ಮೊದಲಿನ ಆಶೀಃಶ್ಲೋಕವನ್ನು ನೋಡಿರಿ. (ಈ ಪುಸ್ತಕದ ..... ನೆಯ ಪುಟದಲ್ಲಿ ಅದನ್ನು ಉದ್ಧರಿಸಿ ಹೇಳಲಾಗಿದೆ.) ಅದರಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳು, "ಬ್ರಹಾತ್ಮದ ಚಿಂತನೆ ಅಥವಾ ಧ್ಯಾನದ ಸರಿಯಾದ ರೀತಿಯೆಂದರೆ ಬ್ರಹ್ಮಾತ್ಮದಲ್ಲಿ ಬ್ರಹ್ಮಾತ್ಮವಾಗಿ ನೆಲೆನಿಂತಿರುವುದೇ ಆಗಿದೆ, ಎಂದು ಶ್ರುತ್ಯುದ್ಗಾರವನ್ನೆತ್ತಿದ್ದಾರೆ.

ಅವನದೆಲ್ಲವನ್ನೂ ಹೊರುವನು. ಪರಮೇಶ್ವರ ಶಕ್ತಿಯೇ ಎಲ್ಲ ಕ್ರಿಯೆಗಳನ್ನೂ ಮಾಡುತ್ತಿರುವುದರಿಂದ ಅದಕ್ಕೆ ಸೋಲದೆ ನಾವು ಏಕೆ ಪದೇ ಪದೇ 'ನಾನಿಂತು ನಡೆದುಕೊಳ್ಳಬೇಕು', ನಾನಂತು ನಡೆದುಕೊಳ್ಳಬೇಕು' ಎಂದು ಆಲೋಚಿಸಬೇಕು? ರೈಲು ಎಲ್ಲ ಭಾರವನ್ನು ಹೊರುತ್ತದೆ ಎಂಬುದು ನಮಗೆ ಗೊತ್ತಿರುವಾಗ–ನಮ್ಮ ಸಾಮಾನಿನ ಚಿಕ್ಕ ಗಂಟನ್ನು, ಪ್ರಯಾಣಿಕರಾದ ನಾವು, ಅದರಲ್ಲಿಟ್ಟು ಸುಖವಾಗಿ ತಲೆ ಹಗುರ ಮಾಡಿಕೊಂಡಿರದೆ ನಾವೇಕೆ ಅದನ್ನು ತಲೆಯ ಮೇಲೆ ಹೊತ್ತುಕೊಂಡಿರಬೇಕು?

ಸುಖ ಎಂಬುದು ಬ್ರಹ್ಮಾತ್ಮದ ಸ್ವರೂಪ. ಸುಖವೂ ಬ್ರಹ್ಮಾತ್ಮವೂ ಭಿನ್ನವಲ್ಲ. ಆತ್ಮಸುಖವೊಂದೇ ಇರುತ್ತದೆ. ಆ ಬ್ರಹ್ಮಾತ್ಮಸುಖವೇ ನಿಜವಾದದ್ದು. ಜಗತ್ತಿನ ಯಾವ ಒಂದು ವಸ್ತುವಿನಲ್ಲೂ ಸುಖವಿಲ್ಲ. ಅವುಗಳಿಂದ ಸುಖ ಸಿಕ್ಕುತ್ತದೆ ಎಂದು ನಾವು ಆಲೋಚಿಸುತ್ತೇವೆ. ಹಾಗೆ ನಾವು ತಿಳಿಯಲು ನಮ್ಮ ಅವಿವೇಕವೇ ಕಾರಣ. ಮನಸ್ಸು ಹೊರಬಿದ್ದ ಕೂಡಲೇ ದುಃಖವನ್ನದು ಅನುಭವಿಸುತ್ತದೆ. ನಿಜವಾಗಿ ನೋಡಿದರೆ ನಮ್ಮ ಆಶೆಗಳೆಲ್ಲಾ ಪೂರ್ತಿಯಾದಾಗ ನಮ್ಮ ಮನಸ್ಸು ತನ್ನ ಮೂಲವಾದ ಬ್ರಹ್ಮಾತ್ಮದತ್ತ ತಿರುಗಿ ಅಲ್ಲಿ ಆತ್ಮಾನಂದವನ್ನು ಅನುಭವಿಸುತ್ತದೆ. ಅದೇ ರೀತಿಯಿಂದ ನಿದ್ರೆಯ ಕಾಲದಲ್ಲಿ, ಸಮಾಧಿಯಲ್ಲಿ ಮತ್ತು ಮೂರ್ಛೆಯಲ್ಲಿ – ನಾವು ಇಷ್ಟಪಡುವ ವಸ್ತುಗಳೆಲ್ಲಾ ದೊರಕಿದಾಗ ಮತ್ತು ನಮಗೆ ಅನಿಷ್ಟವಾದ ವಸ್ತುಗಳೆಲ್ಲವುಗಳಿಗೂ ಕೇಡುಂಟಾದಾಗ–ಮನಸ್ಸು ಅಂತರ್ಮುಖವಾಗಿ ಅಲ್ಲಿ ಆತ್ಮಾನಂದವನ್ನೇ ಅನುಭವಿಸುತ್ತದೆ. ಸುಖ=ಆನಂದ=ಇಂದ್ರಿಯಾತೀತವಾದ ತೃಪ್ತಿ. ಈ ಮೇರೆಗೆ ಮನಸ್ಸು ವಿಶ್ರಾಂತಿಯಿಲ್ಲದೆ ಅಲೆದಾಡುತ್ತದೆ ; ಬ್ರಹ್ಮಾತ್ಮವನ್ನು ಬಿಟ್ಟು ಅದು ಹೊರ ಹೊರಡುತ್ತದೆ ; ಅನಂತರ ಮತ್ತೆ ಅದು ಒಳಹೋಗುತ್ತದೆ. ಮರದ ಕೆಳಗೆ ನೆರಳು ಆಹ್ಲಾದಕರ ; ಹೊರಗೆ ಸೂರ್ಯನ ಬಿಸಿಲು ಮೈ ಸುಡುತ್ತದೆ. ಹೊರಗೆ ಅಲೆದಾಡುತ್ತಿದ್ದ ಒಬ್ಬನು ನೆರಳನ್ನು ತಲುಪಿ ತಣಿಯುತ್ತಾನೆ. ಕೆಲ ಕಾಲಾನಂತರ ಅವನು ಹೊರಡುತ್ತಾನೆ, ಆದರೆ, ಬಿಸಿಲು ಮೈ ಸುಡುವುದನ್ನು ತಾಳಲಾರದೆ, ಪುನಃ ಮರದ ಕೆಳಗೆ ಬರುತ್ತಾನೆ. ಈ ಪ್ರಕಾರ, ನೆರಳಿನಿಂದ ಬಿರುಬಿಸಿಲಿಗೂ ಬಿರುಬಿಸಿಲಿನಿಂದ ನೆರಳಿಗೂ ಹೋಗಿ ಬರುತ್ತಿರುತ್ತಾನೆ. ಹೀಗೆ ನಡೆದುಕೊಳ್ಳುವವನು ಅವಿವೇಕಿ. ಆದರೆ ವಿವೇಕಿಯು ನೆರಳನ್ನೆಂದೂ ಬಿಟ್ಟು ಹೋಗನು. ಹಾಗೇ ಜ್ಞಾನಿಯ ಮನಸ್ಸು ಬ್ರಹ್ಮವನ್ನು (ಅಂದರೆ ಆತ್ಮವನ್ನು) ಎಂದೂ ಬಿಟ್ಟು ಹೋಗದು. ಆದರೆ ಅಜ್ಞಾನಿಯ ಮನಸ್ಸು ಪ್ರಪಂಚದಲ್ಲಿ ಅಲೆದಾಡಿ ನರಳುತ್ತದೆ ಮತ್ತು ಬ್ರಹ್ಮದ ಕಡೆಗೆ ಮರಳಿ ಕೆಲಕಾಲ ಸುಖವನ್ನು ಅನುಭವಿಸುತ್ತದೆ. ಜಗತ್ತೆಂಬುದು ಕೇವಲ ಒಂದು ವಿಚಾರ. ಪ್ರಪಂಚ ಅದೃಶ್ಯವಾದಾಗ–ಅಂದರೆ ವಿಚಾರವಾವುದೂ ಇಲ್ಲದಾಗ–ಮನಸ್ಸು ಆನಂದವನ್ನು ಅನುಭವಿಸುತ್ತದೆ. ಪ್ರಪಂಚ ತೋರಿದಾಗ ಅದಕ್ಕೆ ದುಃಖಾನುಭವವುಂಟಾಗುತ್ತದೆ.

ಇಚ್ಛೆ, ಸಂಕಲ್ಪ ಅಥವಾ ಪ್ರಯತ್ನವಿಲ್ಲದೆ ಸೂರ್ಯಕಾಂತ ಶಿಲೆಯು, ಸೂರ್ಯನ ಬರಿ ಉಪಸ್ಥಿತಿಯಲ್ಲಿ, ಬೆಂಕಿಯನ್ನು ಕಾರುತ್ತದೆ ; ಕಮಲ ಅರಳುತ್ತದೆ ; ನೀರು ಆವಿಯಾಗುತ್ತದೆ; ಜನರು ಕೆಲಸವನ್ನಾರಂಭಿಸುತ್ತಾರೆ, ಮಾಡುತ್ತಾರೆ ಮತ್ತು ನಿಲ್ಲಿಸುತ್ತಾರೆ. ಲೋಹ ಚುಂಬಕದೆದುರು ಸೂಜಿ ಚಲಿಸುತ್ತದೆ. ಹಾಗೇ ದೇವರ ಉಪಸ್ಥಿತಿಯ ಪ್ರಭಾವ ಮಾತ್ರದಿಂದ, ಅವನಿಗೆ ಯಾವ ಸಂಕಲ್ಪವೂ ಇಲ್ಲದಿದ್ದರೂ ಮೂರು ದಿವ್ಯ ಕರ್ತವ್ಯಗಳಿಂದ (ಮುತ್ತೊಝಿಲ್)

ಅಥವಾ ಐದು ದಿವ್ಯಕ್ರಿಯೆಗಳಿಂದ (ಪಂಚಕ್ರಿಯೆಗಳಿಂದ)[೧೦] ಆಳಲ್ಪಡುತ್ತಿರುವ ಜೀವಾತ್ಮಗಳು ತಮ್ಮ ಕಾರ್ಯಗಳನ್ನು ತಮ್ಮ ಕರ್ಮಾನುಸಾರ (ಅಂದರೆ ಪ್ರಾರಬ್ಧ ಕರ್ಮದ ಅಥವಾ ಅದೃಷ್ಟದ ಪ್ರಕಾರ) ಮಾಡುತ್ತವೆ ಹಾಗೂ ನಿಲ್ಲಿಸುತ್ತವೆ. ಅಲ್ಲದೆ, ತಮ್ಮ ಪೂರ್ವಕರ್ಮವಾಸನೆಗಳಿಂದ ಅಥವಾ ಪ್ರಾಚೀನ ಕರ್ಮವಾಸನೆಗಳಿಂದ ತಮ್ಮ ಕಾರ್ಯಗಳನ್ನು ಮಾಡುತ್ತವೆ ಮತ್ತು ನಿಲ್ಲಿಸುತ್ತವೆ. ಹೀಗಿದ್ದರೂ ದೇವರೊಬ್ಬನಿಗೆ ಯಾವ ಸಂಕಲ್ಪವೂ ಇರದು. ಯಾವ ಒಂದು ಕರ್ಮವೂ ಅವನಿಗೆ ಹತ್ತದು (ಅಕ್ಷರಶಃ ಅವನನ್ನು ಮುಟ್ಟದು). ಇದು ಜಗತ್ತಿನ ಕಾರ್ಯಗಳು ಸೂರ್ಯನನ್ನು ಮುಟ್ಟದಿರುವ ಹಾಗೆ ಮತ್ತು ನಾಲ್ಕು ಭೂತದ್ರವ್ಯಗಳಾದ ಪೃಥ್ವಿ, ಅಪ್ಪು, ತೇಜಸ್ಸು ಹಾಗೂ ವಾಯುಗಳ ಕಾರ್ಯಗಳು ಐದನೆಯದೂ ಸರ್ವವ್ಯಾಪಕವೂ ಆದ ಆಕಾಶ (ಸ್ಥಳ, ಅವಕಾಶ)ವನ್ನು ಮುಟ್ಟದಿರುವ ಹಾಗೆ (ದೇವರನ್ನು ಜಗತ್ತಿನ ಯಾವ ಕರ್ಮವೂ ಸ್ಪರ್ಶಿಸದು).

ಎಲ್ಲ ಶಾಸ್ತ್ರಗಳಲ್ಲೂ ಮುಕ್ತಿಯನ್ನು ಪಡೆಯಲು ಮನಸ್ಸನ್ನು ನಿಯಂತ್ರಿಸಿಕೊಳ್ಳಬೇಕೆಂದು[೧೧] ಹೇಳಿರುವುದರಿಂದ, ಮನೋ ನಿಗ್ರಹವೇ ಶಾಸ್ತ್ರಗಳ ಕೊನೆಯ ನಿರ್ಣಯ (ಆದೇಶ) ಎಂಬುದನ್ನು ಮನಸ್ಸು ತಿಳಿದ ಮೇಲೆ ಶಾಸ್ತ್ರಗಳನ್ನು ಅಂತಪಾರವಿಲ್ಲದಂತೆ ಓದುತ್ತ ಹೋಗುವುದು ನಿಷ್ಫಲ. ಮನಸ್ಸನ್ನು ನಿಯಂತ್ರಿಸಿಕೊಳ್ಳಲು ತಾನು ಯಾರೆಂಬುದನ್ನು ಶೋಧಿಸುವುದು ಅಗತ್ಯ. (ಅನಂತರ) (ಹಾಗೆ ತನ್ನೊಳಗೇ ತನ್ನನ್ನು ಶೋಧಿಸುವುದನ್ನು ಬಿಟ್ಟು) ಅದರ ಬದಲು ಶೋಧಿಸುವುದು (ಮತ್ತು ತಾನು ಯಾರೆಂಬುದನ್ನು ತಿಳಿಯುವುದು) ಶಾಸ್ತ್ರಗಳಲ್ಲಿಯೇ? ತನ್ನ ಅರಿವಿನ ಕಣ್ಣಿನಿಂದಲೇ ಸಾಧಕನು ತನ್ನ ತಾನರಿತುಕೊಳ್ಳಬೇಕು. ತಾನು ರಾಮನೆಂಬುದನ್ನು ರಾಮನು ತಿಳಿದುಕೊಳ್ಳಬೇಕಾದರೆ ಕನ್ನಡಿ ಬೇಕೆ? ತಾನು[೧೨] ಇರುವುದು ಪಂಚಕೋಶಗಳಲ್ಲಿ, ಆದರೆ

೧೦. ಶಾಸ್ತ್ರಗಳಲ್ಲಿ ಕೊಟ್ಟ ಬಿನ್ನ ವರ್ಗೀಕರಣಗಳ ಪ್ರಕಾರ ದಿವ್ಯ ಕಾರ್ಯಗಳು (ಕರ್ತವ್ಯಗಳು ಯಾ ಕರ್ಮಗಳು) ಮೂರು (ಸೃಷ್ಟಿ, ಸ್ಥಿತಿ, ಸಂಹಾರ) ಅಥವಾ ಐದು (ಈ ಮೂರು ಮತ್ತುತಿರೋಧಾನ ಹಾಗೂ ಅನುಗ್ರಹ.)

೧೧. 'ಅಡಕ್ಕು' ಎಂಬುದೆ ನಿಯಂತ್ರಣ ಎಂಬುದಕ್ಕೆ ಶ್ರೀ ರಮಣರು ಬಳಸಿದ ತಮಿಳು ಶಬ್ದ. ಅದರ ಅಕ್ಷರಾರ್ಥವು 'ಶಮನಗೊಳಿಸು' ಅಥವಾ 'ಕರ್ಮ ಮುಕ್ತವಾಗು' ಎಂದು. ಅಂಥ ನಿಯಂತ್ರಣವು (ಅಡಕ್ಕಂ) ಅಥವಾ ಶಮನವು (ಒಡಕ್ಕಂ) ಎಂಬುದು ತಾತ್ಕಾಲಿಕ (ಮನೋಲಯ ಯಾ ತಾತ್ಕಾಲಿಕ ಮನಃಶಮನ) ಅಥವಾ ನಿತ್ಯ ಮನೋನಾಶ ಯಾ ಮನಸ್ಸಿನ ಸಂಪೂರ್ಣ ನಾಶ) ಎಂದು ಭಗವಾನ್ ಶ್ರೀ ರಮಣರು 'ಉಪದೇಶ ಉಂಧಿಯಾರಿ'ನ ೧೩ನೆಯ ಪದ್ಯದಲ್ಲಿ ಹೇಳಿದಂತೆ ಆದೀತು. ಈ ಸಂದರ್ಭದಲ್ಲಿ ನಿಯಂತ್ರಣವೆಂಬ ಪದವು (ಅಡಕ್ಕು) ನಾಶವೆಂಬ ಅರ್ಥವನ್ನಷ್ಟೇ ಉಳ್ಳದ್ದು. ಏಕೆಂದರೆ, 'ಉಳ್ಳಾಡು ನರಪಾಡು'ವಿನ ೪೦ನೆಯ ನುಡಿಯಲ್ಲಿ ಭಗವಾನ್ ರಮಣರು ಮನೋನಾಶವೇ (ಅಹಂಕಾರನಾಶವೇ) ಮೋಕ್ಷವೆಂದು ಕಂಡು ಹೇಳಿದ್ದಾರೆ.

೧೨.ಈ ಸಂದರ್ಭದಲ್ಲಿ ತಾನೆಂಬ ಶಬ್ದಕ್ಕೆ ಅಹಂಕಾರವೆಂದರ್ಥ. ಅದು ಪಂಚಕೋಶಗಳನ್ನು ತಾನೆಂದು ಗುರುತಿಸಿಕೊಳ್ಳುತ್ತದೆ. ಮತ್ತು ಅವನ್ನೇ ತನ್ನ ಸ್ಥಳ ಎಂದು ತಿಳಿದುಕೊಳ್ಳುತ್ತದೆ. ಬ್ರಹ್ಮಾತ್ಮವನ್ನು ಅದು ಹಾಗೆಂದು ತಿಳಿಯುವುದಿಲ್ಲ. ಬ್ರಹ್ಮಾತ್ಮವು ಅಂತರ್ಬಾಹ್ಯಗಳೆಂಬಂಥ ಎಲ್ಲ ಅವಚ್ಛೇದಕಗಳಿಂದಲೂ (ಮಿತಿಕರಣ ಸಾಧನಗಳಿಂದಲೂ) ಆಚೆಗಿದೆ. ರಾಮನೆಂದು ಕರೆಯಲ್ಪಡುವ ದೇಹವನ್ನು ತಾನೇ ಎಂದು ತಿಳಿದುಕೊಳ್ಳಲು ಅವನಿಗೆ ಕನ್ನಡಿ ಬೇಡ ; ಏಕೆಂದರೆ 'ನಾನು ರಾಮ, ಈ ಶರೀರ' ಎಂಬ ಭಾವನೆಯು ಆ ಶರೀರದೊಳಗೇ ಇದೆ. ಹಾಗೇ ನಮಗೆ ನಾವು ಇರುವೆವೆಂಬುದನ್ನರಿಯಲು ಶಾಸ್ತ್ರಗಳು ಬೇಡ. ಏಕೆಂದರೆ, ನಮ್ಮ ಅಸ್ತಿತ್ವದ ಭಾವನೆ ಅಥವಾ ಅನುಭವವು ಶಾಸ್ತ್ರಗಳಲ್ಲಿ ಪಂಚಕೋಶಗಳಲ್ಲೇ ಇರುವುದರಿಂದ–ಅವೇ ಈಗ ನಾನೆಂಬ ಅನುಭವ ಉಂಟಾಗಿರುವುದರಿಂದ – ನಾವು ಅದನ್ನು ತಿಳಿಯಲು ಶಾಸ್ತ್ರಗಳನ್ನು ಓದಲೇಬೇಕಾಗಿಲ್ಲ. ಆದುದರಿಂದ ನಾವು ಯಾರೆಂಬುದನ್ನು ತಿಳಿದುಕೊಳ್ಳಲು ನಾವು ಶಾಸ್ತ್ರಾವಧಾನ ಮಾಡಬೇಕಾಗಿಲ್ಲ –

ಶಾಸ್ತ್ರಗಳು ಅವುಗಳ ಹೊರಗಿವೆ. ಆದುದರಿಂದ ತನ್ನ ಬಗ್ಗೆ (ತನ್ನ ಆತ್ಮದ ಬಗ್ಗೆ) ಶಾಸ್ತ್ರಗಳಲ್ಲಿ ಶೋಧ ಮಾಡುವುದು ವ್ಯರ್ಥ. ಎಂದರೆ ಪಂಚಕೋಶಗಳನ್ನು ಕೂಡಾ ಬದಿಗಿಟ್ಟು ಆತ್ಮವನ್ನು ಶೋಧಿಸಬೇಕಾಗಿರುವುದರಿಂದ–ಅವಧಾನಿಸಬೇಕಾಗಿರುವುದರಿಂದ, ಶಾಸ್ತ್ರಗಳಲ್ಲಿ ಆತ್ಮಶೋಧ ಮಾಡುವುದು ನಿಷ್ಫಲ. ಬಂಧದಲ್ಲಿರುವ ನಾನು ಯಾರು? ಎಂದು ಶೋಧಿಸುವುದೂ ಸ್ವ ಸ್ವರೂಪವನ್ನು ತಿಳಿದುಕೊಳ್ಳುವುದೂ ಮಾತ್ರ ಮುಕ್ತಿ. "ಯಾವಾಗಲೂ ಮನಸ್ಸನ್ನು ಬ್ರಹ್ಮಾತ್ಮದಲ್ಲಿಟ್ಟು (ಅವಧಾನವನ್ನು ದೃಢಗೊಳಿಸಿ ಇಟ್ಟು) (ನಾನೆಂಬ ಅನುಭವದಲ್ಲಿ ನೆಟ್ಟು) ಇರುವುದೇ ಆತ್ಮಶೋಧ." ಹಾಗಲ್ಲದೆ ಧ್ಯಾನಿಸುವುದೆಂದರೆ ತಾನು ಬ್ರಹ್ಮನೆಂದು ಆಲೋಚಿಸುವುದು; ಅದು ಸಚ್ಚಿದಾನಂದ. ಒಂದು ಕಾಲದಲ್ಲಿ ತಾನು ಕಲಿತದ್ದೆಲ್ಲವನ್ನು ಸಾಧಕನು ಮರೆತು ಬಿಡಬೇಕಾಗುವುದು.

ಒಟ್ಟಿಗೆ ತೆಗೆದು ಹೊರಗೆಸೆಯಬೇಕಾದ ಕಸವನ್ನು ಸೂಕ್ಷ್ಮಾವಲೋಕನ ಮಾಡುವುದು ಹೇಗೆ ವ್ಯರ್ಥವೋ ಹಾಗೆ ತತ್ವಗಳ (ಜಗತ್ತಿನ, ಜೀವಾತ್ಮದ ಅಥವಾ ದೇವರ ರಚನೆಗೆ ಕಾರಣವಾದ ಸೂತ್ರಗಳ) ಲಕ್ಷ್ಯತಾವಚ್ಛೇದಕಗಳನ್ನು (ಅವು ಸಾಧಕನನ್ನು ಮುಸುಕಿರುತ್ತವೆ) ಎಣಿಸುವುದು ಆತ್ಮಜಿಜ್ಞಾಸುವಿಗೆ ವ್ಯರ್ಥ. ಅವೆಲ್ಲವುಗಳನ್ನೂ ಅವನು ಒಟ್ಟಿಗೆ ದೂರಕ್ಕೆ ಎಸೆಯಬೇಕು.[೧೩] ಅವನು (ಜಗತ್ತಿನಲ್ಲಿಯ ತನ್ನ ಇಡೀ ಜೀವನವನ್ನು) ಸ್ವಪ್ನಸದೃಶವೆಂದು ಎಣಿಸಬೇಕು.

ಜಾಗರ ದೀರ್ಘಕಾಲಿಕ, ಸ್ವಪ್ನ ಅಲ್ಪಕಾಲಿಕ[೧೪] ಎಂಬುದನ್ನು ಬಿಟ್ಟರೆ ಅವೆರಡರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಜಾಗರದ ಅವಸ್ಥೆಯಲ್ಲಿ ಉಂಟಾಗುವ ಘಟನೆಗಳೆಲ್ಲವೂ ನಿಜವಾದವುಗಳೆಂದು ತೋರುವಷ್ಟರ ಮಟ್ಟಿಗೆ ಸ್ವಪ್ನದಲ್ಲಿ ಸಂಭವಿಸುವ ಘಟನೆಗಳೂ ಆ ಅವಧಿಯಲ್ಲಿ ನಿಜವೆಂದೇ ತೋರುವುವು. ಸ್ವಪ್ನದಲ್ಲಿ ಮನಸ್ಸು ಇನ್ನೊಂದು ದೇಹವನ್ನು ಧರಿಸುವುದು. ಜಾಗ್ರತ್ ಸ್ವಪ್ನಾವಸ್ಥೆಗಳೆರಡಲ್ಲಿಯೂ ವಿಚಾರಗಳೂ ನಾಮಗಳೂ ರೂಪಗಳೂ

ಅವು ಪಂಚಕೋಶಗಳ ಹೊರಗಿವೆ–ಆದರೆ ನಾನೆಂಬ ಭಾವನೆಯು ಪಂಚಕೋಶಾಂತರ್ಗವಾಗಿದೆ.ಅಷ್ಟೇ ಅಲ್ಲದೆ ಪಂಚಕೋಶಗಳು ನಮ್ಮ ನಿಜಸ್ವರೂಪಕ್ಕೆ ಮುಸುಕು ಹಾಕಿರುವುದರಿಂದ ಅವುಗಳನ್ನೂ ದೂರ ಸರಿಸಿಡಬೇಕು (ಅನವಧಾನ ಪಾತ್ರಗಳನ್ನಾಗಿ ಮಾಡಬೇಕು). ಯಾವಾಗ? ನಾವು ಹೀಗೆ ನಮ್ಮೊಳಗೆ ಶೋಧಿಸುವಾಗ (ಆತ್ಮಾವಧಾನ ಮಾಡುವಾಗ).

೧೩. ಈ ವಾಕ್ಯದಲ್ಲಿ ಹೇಳಿದ ಮಹರ್ಷಿಗಳ ಅಭಿಪ್ರಾಯದಿಂದ ಉಪೋದ್ಘಾತದ ಪುಟ....ನ್ನು ನೋಡಿರಿ. ಮೊದಲ ಅಡಿಟಿಪ್ಪಣಿಯಲ್ಲಿ (.....ನೆಯ ಪುಟವನ್ನು ನೋಡಿರಿ) "..... ಈ ಭಾಗದಲ್ಲಿ ಕೊಟ್ಟ ಆತ್ಮೇತರ ಪದಾರ್ಥಗಳ ಎಲ್ಲ ಶಾಸ್ತ್ರೀಯ ವರ್ಗೀಕರಣಗಳನ್ನು ಹೇಳಲು ಅವರಿಗೆ ಇಷ್ಟವಾಗುತ್ತಿರಲಿಲ್ಲ (ನಮ್ಮ ನಿಜಸ್ವರೂಪವನ್ನು ಮುಚ್ಚಿರುವ ತತ್ವಗಳನ್ನು ಹೇಳಲು ಅವರಿಗೆ ಅಪೇಕ್ಷೆಯುಂಟಾಗುತ್ತಿರಲಿಲ್ಲ)" ಎಂದು ಏಕೆ ಹೇಳಲಾಯಿತೆಂಬುದನ್ನು ಓದುಗನೀಗ ತಿಳಿದುಕೊಳ್ಳಬಲ್ಲನು.

೧೪. ಶ್ರೀ ರಮಣ ಮಹರ್ಷಿಗಳಿಲ್ಲಿ ಎಚ್ಚರ ದೀರ್ಘಕಾಲಿಕ ಮತ್ತು ಸ್ವಪ್ನ ಅಲ್ಪಕಾಲಿಕ ಎಂದು ಹೇಳಿದರೂ "ಗುರುವಾಚಕಕೋವೈ" ದ ೫೬೨ನೆಯ ನುಡಿಯಲ್ಲಿ ಅವರು ದ್ರಷ್ಟಾರರಾಗಿ ಹೇಳುವ ವಾಸ್ತವಿಕ ಸತ್ಯವೇನೆಂದರೆ, "ಜಾಗರ ಉದ್ದ, ಸ್ವಪ್ನ ಕುಳ್ಳ" ಎಂಬ ಉತ್ತರವನ್ನು ಪ್ರಾಶ್ನಿಕನಿಗೆ ಕೇವಲ (ಔಪಚಾರಿಕ) ಉತ್ತರವೆಂದು ಕೊಡಲಾಯಿತು. (ವಾಸ್ತವಿಕವಾಗಿ ಹಾಗಲ್ಲದೆ, ಅಂಥ ಯಾವ ವ್ಯತ್ಯಾಸವೂ ಅಲ್ಲಿಲ್ಲ – ಅವುಗಳಲ್ಲಿಲ್ಲ– ಏಕೆಂದರೆ, ಕಾಲವೆಂಬುದೇ ಮಾನಸಿಕ ಕಲ್ಪನೆಯಾಗಿರುವುದರಿಂದ ಕಾಲದಲ್ಲಿರುವ ವ್ಯತ್ಯಾಸಗಳ ಕಲ್ಪನೆಯು (ಉದ್ದ, ಕುಳ್ಳ ಎಂದು ಮುಂತಾಗಿ ಹೇಳುವ ಕಲ್ಪನೆಯು) ನಿಜವೆಂದು ತೋರುವುದು ಮನಸ್ಸೆಂಬ ಮಾಯೆಯ ಕಪಟಲೀಲೆಯ ದೆಸೆಯಿಂದ ಮಾತ್ರ.

(ಆಕೃತಿಗಳೂ) (ವಿಷಯಗಳು, ವಸ್ತುಗಳು) ಏಕಕಾಲದಲ್ಲಿ ಅಸ್ತಿತ್ವಕ್ಕೆ ಬರುವುವು (ಮತ್ತು ಆದುದರಿಂದ ಈ ಎರಡು ಸ್ಥಿತಿಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.)

ಒಂದು ಒಳಿತು ಇನ್ನೊಂದು ಕೆಟ್ಟದು ಎಂಬ ಎರಡು ಮನಸ್ಸುಗಳಿಲ್ಲ. ಮನಸ್ಸು ಒಂದೇ ಒಂದು. ವಾಸನೆಗಳು ಮಾತ್ರ ಇಬ್ಬಗೆಯವು – ಶುಭ, ಅಶುಭ–ಎಂದು. ಶುಭವಾಸನೆಗಳ ಪ್ರಭಾವದಲ್ಲಿ ಮನಸ್ಸಿದ್ದಾಗ ಅದನ್ನು ಒಳ್ಳೆಯ ಮನಸ್ಸು ಎನ್ನುತ್ತಾರೆ; ಅಶುಭವಾಸನೆಗಳ ಪ್ರಭಾವದಲ್ಲದು ಇರುವಾಗ ಅದನ್ನು ಕೆಟ್ಟ ಮನಸ್ಸು ಎನ್ನುತ್ತಾರೆ. ಇತರರು ಎಷ್ಟೇ ಕೆಟ್ಟವರೆಂದು ತೋರಲಿ, ಅವರನ್ನು ಯಾರೂ ದ್ವೇಷಿಸಬಾರದು. ರಾಗ–ದ್ವೇಷಗಳೆರಡನ್ನೂ ದ್ವೇಷಿಸಬೇಕು. ಪ್ರಾಪಂಚಿಕ ವಿಷಯಗಳಲ್ಲಿ ಬಹಳವಾಗಿ ತೊಡಗಿರಲು ಮನಸ್ಸಿಗೆ ಬಿಡಬಾರದು. ಸಾಧ್ಯವಿದ್ದ ಮಟ್ಟಿಗೆ ಇತರರ ವ್ಯವಹಾರಗಳಲ್ಲಿ ಯಾವನೂ ಕೈ ಹಾಕಬಾರದು. ಇನ್ನೊಬ್ಬರಿಗೆ ಕೊಟ್ಟದ್ದೆಲ್ಲವೂ ಒಬ್ಬನು ತನಗೇ ಕೊಟ್ಟು ಕೊಂಡದ್ದಾಗುತ್ತದೆ. ಈ ಸತ್ಯ ತಿಳಿದರೆ ಯಾರು ನಿಜವಾಗಿಯೂ ಅನ್ಯರಿಗೆ ಕೊಡುವುದಿಲ್ಲ?

ತಾನು (ಅಹಂಕಾರ) ಉದಯವಾದರೆ ಎಲ್ಲವೂ ಉದಯವಾಗುವುದು, ತಾನು ಅಸ್ತವಾದರೆ ಎಲ್ಲವೂ ಅಸ್ತವಾಗುತ್ತದೆ. ನಾವು ನಮ್ರತೆಯಿಂದ ನಡೆದುಕೊಳ್ಳುವಷ್ಟರ ಮಟ್ಟಿಗೆ ಮಾತ್ರ ಒಳಿತು ಫಲಿಸುವುದು. ಒಬ್ಬನು ಮನಸ್ಸನ್ನು ನಿಯಂತ್ರಿಸಿ ಇಟ್ಟುಕೊಳ್ಳಬಲ್ಲವನಾದರೆ (ಮನಸ್ಸನ್ನು ಸುಮ್ಮನಿರಿಸಿಕೊಳ್ಳಬಲ್ಲವನಾದರೆ) ಆತನು ಎಲ್ಲಿಯೂ ಇರಬಲ್ಲನು.

ಅನುಬಂಧ–೨

ಆತ್ಮವಿಚಾರ ಪಥಿಕಮ್, ಯಾರು ಜ್ಞಾನಿ, ಸಂದೇಹಿಯ ಬಗ್ಗೆ ಸಂದೇಹಪಡು, ಜಪ

ಈ ಕೆಳಗಿನ ನಾಲ್ಕು ಪದ್ಯಗಳು ಶ್ರೀ ಸಾಧು ಓಂ ಮಹಾಶಯರ "ಸಾಧನೈಸಾರ'ಎಂಬ ತಮಿಳು ಕೃತಿಯಿಂದ ತೆಗೆದು ಅನುವಾದ ಮಾಡಿದಂಥವುಗಳು.

ಅ) ಆತ್ಮವಿಚಾರ ಪಥಿಕಂ (ಆತ್ಮಶೋಧದ ಬಗೆಗಿನ ೧೧ ಪದ್ಯಗಳು) :

೧. ವಿಚಾರ ಮಾಡುವುದೆಂಬುದೊಂದು ಮಾನಸವೃತ್ತಿ. ಇರುವಿಕೆಯು ಮಾನಸ ವೃತ್ತಿಯಲ್ಲ. ಯಾರು ವಿಚಾರ ಮಾಡುವವರೆಂದು ಕೇಳಿದೊಡನೆಯೇ ವಿಚಾರ ಕ್ರಿಯೆಯು ಮುಗಿದು ಹೋಗುವುದು! ವಿಚಾರಗಳಿಲ್ಲದಾಗಲೂ ನೀನಿರುವುದಿಲ್ಲವೇ? ಹೀಗೆ ವಿಚಾರಗಳ ಮೂಲ ಆಕರದಲ್ಲಿರುವುದೇ ಬ್ರಹ್ಮಾತ್ಮ ನಿಷ್ಠೆ. ಹೀಗಿರು !

೨. ವಿಚಾರ ಮಾಡುವಂಥವನು ಜೀವಾತ್ಮನು ; (ಬರಿದೆ) ಇರುವಾತನೇ ಬ್ರಹ್ಮನು. ಶಾಂತವಾದ ತತ್ ಪದಾರ್ಥವನ್ನು ವಿಚಾರಪರನು ಭಕ್ತಿಯಿಂದ ವಿಚಾರ ಮಾಡಿದರೆ, ಈ ವಿಚಾರವು ವಿಚಾರರಹಿತ ವಿಚಾರವಾಗಿ ವಿಚಾರಪರತೆಯನ್ನೇ ನಾಶ ಮಾಡುವುದು. ಹೀಗೆ ವಿಚಾರ ಪರನು ತನ್ನೆಲ್ಲಾ ವಿಚಾರಗಳೊಂದಿಗೆ ಸತ್ತಾಗ, ಅವನನ್ನು ಬಿಟ್ಟು ಬದುಕುವುದೇ ಶಿವಸಾಯುಜ್ಯ !

೩. ನಾನಿಂಥವನೆಂದು ವಿಚಾರ ಮಾಡುವಾತನೇ ವಿಚಾರಾಂತರ್ಗತವಾದ ಒಂದು ವಿಚಾರವಾಗಿರುತ್ತಾನೆ. ವಿಚಾರಗಳಲ್ಲೆಲ್ಲಾ ನಾನಿಂಥವನೆಂಬುದು ಪ್ರಥಮ ವಿಚಾರ. ನಾನಿಂಥವನೆಂದು ವಿಚಾರ ಮಾಡುವ ಜೀವಾತ್ಮನು ನಮ್ಮ ಪ್ರತಿಬಿಂಬ ಮಾತ್ರವಾಗಿದ್ದಾನೆ. ಏಕೆಂದರೆ, ತತ್ ಪದಾರ್ಥ ಯಾ ಬ್ರಹ್ಮ ಆಗಿರುವಾಗ ನಾನಿದು ಅಥವಾ ಅದೆಂದು ನಾವು ವಿಚಾರ ಮಾಡುವುದಿಲ್ಲ.

೪. ಶರೀರವು ನಾನೆಂಬ ವಿಚಾರವು ಸುಷುಪ್ತಿಯಲ್ಲಿ ಇರುವುದಿಲ್ಲ. ಶರೀರವು ನಾನೆಂಬ ವಿಚಾರವು ನಿಜಜ್ಞಾನಸ್ಥಿತಿಯಲ್ಲಿಯೂ ಇರುವುದಿಲ್ಲ. ಅಂಥ ಎರಡು ಅವಸ್ಥೆಗಳ ನಡುವೆ ಅದು ಎದ್ದು ಜಾರಿ ಹೋಗುವುದರಿಂದ ಈ ನಾನೆಂಬುದು ಅಸತ್. ಆದುದರಿಂದ ಈ ನಾನೆಂಬುದು ಬರಿಯ ವಿಚಾರ.

೫. ಈ ವಿಚಾರದ ವಿಸ್ತರಣೆಯು ನಿಜವಾಗಿಯೂ ದುಃಖದ ವಿಸ್ತರಣೆ! ಈ ನಾನೆಂಬ ವಿಚಾರವೇ ಅಹಂಕಾರವು. ಶೋಧ ಮಾಡದುದರಿಂದಲೇ ಈ ನಾನೆಂಬುದು ಅಸ್ತಿತ್ವಕ್ಕೆ ಬಂದು ಏಳಿಗೆ ಹೊಂದುತ್ತಿದೆ! ಅನುಕೂಲವಾಗಿ ನೋಡಲ್ಪಡುವುದರ ಬದಲು ಅದನ್ನು ಒಳಹೊಕ್ಕು ಈ ನಾನೆಂದರೇನೆಂದು ಶೋಧಿಸಿದ ಕೂಡಲೇ ಅದು ಅದೃಶ್ಯವಾಗುವುದು. ಅದಕ್ಕೇ ಅಸ್ತಿತ್ವವೇ ಉಳಿಯದು.

೬. ಆಲಯವಿಜ್ಞಾನ ರೂಪದ ಅಹಮ್ಮೆಂಬ ಉತ್ತಮ ಪುರುಷವನ್ನೇ ಮಧ್ಯಮ–ಪ್ರಥಮ ಪುರುಷಗಳು ಮೂಲವನ್ನಾಗಿ ಉಳ್ಳಂಥವುಗಳು. ಚಂಚಲ ಮನಸ್ಸು ಉತ್ತಮ ಪುರುಷದತ್ತ ತಿರುಗಿದರೆ ಈ ಉತ್ತಮ ಪುರುಷವು (ಅಹಂಕಾರವು) ಉಳಿಯದು ಮತ್ತು ನಿಜವಾಗಿ ಇರುವ ವಸ್ತುವು ಆಗ ಪ್ರಕಾಶಿಸುವುದು. ಈ ಅವಿನಾಶಿಯಾದ ನಿಜ ಬ್ರಹ್ಮಾತ್ಮವೇ ಜ್ಞಾನ.

೭. ಮಧ್ಯಮ–ಪ್ರಥಮ ಪುರುಷಗಳನ್ನು ವಿಚಾರ ಮಾಡುವುದು ತೀರಾ ಹುಚ್ಚುತನ. ಏಕೆಂದರೆ, ಮಧ್ಯಮ–ಪ್ರಥಮ ಪುರುಷಗಳ ವಿಚಾರವನ್ನು ಮಾಡುವುದರಿಂದ ಮನೋವೃತ್ತಿಗಳು ವಿಸ್ತಾರವಾಗುತ್ತವೆ. ತದ್ವಿರುದ್ಧವಾಗಿ, ಉತ್ತಮ ಪುರುಷೋನ್ಮುಖರಾಗುವುದು ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ. ಏಕೆಂದರೆ ಉತ್ತಮ ಪುರುಷದ ಶೋಧದಿಂದಲೇ ಅಹಂಕಾರವೇ ಸ್ವತಃ ಸಾಯುವುದು.[೧೫]

೮. ಉತ್ತಮ ಪುರುಷದತ್ತ ತಿರುಗಿ ಅದನ್ನು ಅವಧಾನಿಸುವುದನ್ನು ಬಿಟ್ಟು ಮಧ್ಯಮ–ಪ್ರಥಮ ಪುರುಷಗಳನ್ನು ಅವಧಾನಿಸಿದರೆ ಆ ಅವಧಾನವು ಅಜ್ಞಾನವನ್ನು ಮಾತ್ರ ಆಧರಿಸಿದ್ದೆನ್ನಿಸುವುದು. "ಹಾಗಾದರೆ ಅಹಮ್ಮನ್ನು ಅವಧಾನಿಸುವುದೂ ಅಜ್ಞಾನಾಧೃತ ಅವಧಾನವಾಗುವುದಿಲ್ಲವೇ?" ಎಂದ ಮೇಲೆ ನಾವೇಕೆ ಈ ಅಹಮ್ಮನ್ನು ಅವಧಾನಿಸಬೇಕು?" ಎಂದು ಪ್ರಶ್ನಿಸಿದರೆ, ಕೇಳಿರಿ :

೯. 'ನಾನು ಯಾರು?' ಎಂದು ಶೋಧಿಸಿದೊಡನೆಯೇ ಈ ನಾನೆಂಬುದೇಕೆ ಸತ್ತು ಹೋಗುವುದು? ಎಂದರೆ ಅದರ ವಿವರಣೆ ಈ ಕೆಳಗಿನಂತಿದೆ ಈ ನಾನೆಂಬ ವಿಚಾರವು ಬ್ರಹ್ಮಾತ್ಮಜ್ಞಾನದ ಒಂದು ಪ್ರತಿಬಿಂಬಿತ ಕಿರಣ ; (ಮತ್ತು ಅದೊಂದೇ ನೇರವಾಗಿ ಬ್ರಹ್ಮಾತ್ಮಕ್ಕೆ ಸಂಬಂಧಿಸಿದುದು. ಉಳಿದ ವಿಚಾರಗಳು ಹಾಗೆ ಸಂಬಂಧಿಸಿಲ್ಲ)..., (ಆದುದರಿಂದ) ನಮ್ಮ ಅವಧಾನವು ಒಳಗೊಳಗೇ ಅಹಂಕಿರಣವನ್ನನುಸರಿಸಿ ಹೆಚ್ಚು ಆಳವಾಗಿ ಹೋದ ಹಾಗೂ ಅದರ ಉದ್ದವು ಕಿರಿದಾಗುತ್ತ ಹೋಗುವುದು ಮತ್ತು ಅಹಂಕಿರಣವಳಿದಾಗ ಹೊಳೆಯುವುದೇ ನಾನೆಂಬ ಜ್ಞಾನ.

೧೦. ನನ್ನಿಂದಾಗಬೇಕೆಂದು ಆಲೋಚಿಸಿ ಯಾವ ಕೆಲಸವನ್ನು ಮಾಡಬೇಡ. ನಿನ್ನಿಂದ ಏನೂ ಆಗುವುದಿಲ್ಲ. (ಏಕೆಂದರೆ) ನೀನು ಬರಿ ಸೊನ್ನೆ. ಇದನ್ನು ಮೊದಲು ಅರಿತುಕೊಂಡು ಕರ್ತೃತ್ವ ಭಾವನೆಯೇಳುವುದನ್ನು, ತಪ್ಪಿಸಿಕೊಂಡರೆ ಆ ಪರಬ್ರಹ್ಮನಿಂದ ಎಲ್ಲವೂ ಚೆನ್ನಾಗಿ ಮಾಡಲ್ಪಡುವುದು ಮತ್ತು ನಿನ್ನ ಶಾಂತಿ ಅವಿಚಲಿತವಾಗಿರುತ್ತದೆ

೧೧. 'ನಿಜವಾವುದು?' ಎಂದು ಸೂಕ್ಷ್ಮಾವಲೋಕನ ಮಾಡುವಾಗ ಜಗತ್ತಿನ ಯಾವ ಒಂದು ವಸ್ತುವೂ ಅಂಥದಾಗಿಲ್ಲವೆಂದು (ಕಂಡುಬರುವುದು). ಬ್ರಹ್ಮಾತ್ಮವೊಂದೇ ನಿಜ. ಆದುದರಿಂದ ನಾವು ಸರ್ವವನ್ನೂ ಪರಿತ್ಯಜಿಸೋಣ ಮತ್ತು ಸತ್ ಪದಾರ್ಥದಂತೆ ಇರೋಣ. ನಮ್ಮ ನಿತ್ಯ ಸ್ವಾಮಿಗಳಾದ ಶ್ರೀ ರಮಣರು ಆಜ್ಞಾಪಿಸಿದ ಸೇವೆಯಿದೊಂದೇ!

---

೧೫. ವೈಕಲ್ಪಿಕವಾಗಿ.... ಅಹಮ್ಮು ತನ್ನಿಂದ ತಾನೇ ಸಾಯುವುದು.

ಬ) **ಯಾರು ಜ್ಞಾನಿ?**

೧. ಅವನು ಜ್ಞಾನಿ, ಇವನು ಜ್ಞಾನಿಯಲ್ಲ ಎಂದು ನಿಶ್ಚಯಿಸುವ ಮನಸ್ಸು ಜ್ಞಾನವೋ? ಅದು ಅಜ್ಞಾನವೋ? ಜ್ಞಾನಿಯು (ಬ್ರಹ್ಮಾತ್ಮಜ್ಞಾನಿಯು) ಒಬ್ಬನೇ ಒಬ್ಬ! ಆದುದರಿಂದ ಜ್ಞಾನಿಗಳನ್ನು ಒಬ್ಬನಿಗಿಂತ ಹೆಚ್ಚಾಗಿ ಕಾಣುವ ಜ್ಞಾನಿಯೂ ಆ ಅಜ್ಞಾನಮನದ ಫಲವೇ ಆಗಿದೆ.

೨. ನೀನೇ ಸ್ವತಃ ಕೇವಲ ಒಂದು ವಿಚಾರ. ಆದುದರಿಂದ ನೀನು ಯಾರನ್ನು ಮಹಾತ್ಮನೆಂದೆಣಿಸುವೆಯೋ (ಜ್ಞಾನಿಯೆಂದೆಣಿಸುವೆಯೋ) ಅವನು ನಿನ್ನ (ವಿಚಾರದ) ವಿಚಾರಗಳಲ್ಲೊಂದು ವಿಚಾರ ! ಆದುದರಿಂದ ಅಂಥ ಭ್ರಮಾತ್ಮಕ ವಿಚಾರವು ಪರಮಾತ್ಮ ಸ್ವರೂಪಿಯಾದ ಆತ್ಮಜ್ಞಾನಿ ಹೇಗಾದೀತು? ನೀನು ಹೀಗೆ ತಿಳಿಯತಕ್ಕದ್ದು!

೩. "ಅವನು ಮಹಾತ್ಮ, ಅವನು ಜ್ಞಾನಿ, ನನಗೆ ಗೊತ್ತಿದೆ" ಎಂದು ಹೇಳುವುದು ತಪ್ಪು. ಎಲ್ಲರೂ ಜ್ಞಾನಿಗಳೆಂದು ಹೇಳುವುದು ಸಹಾ ತಪ್ಪು. ಏಕೆಂದರೆ ಬಹಳ ಜನರಿದ್ದಾರೆ ಎಂಬಂತೆ ನೋಡುವುದೇ ಅಜ್ಞಾನದ ಗುರುತು. ಇರುವವನು ಒಬ್ಬನೇ–ಆ ಅವನೇ ನೀನು. ಹೀಗೆ ನೀನು ತಿಳಿದುಕೊಳ್ಳತಕ್ಕದ್ದು !

೪. ಜ್ಞಾನಿಯ ದೃಷ್ಟಿಯಲ್ಲಿ ಅಜ್ಞಾನಿಯೇ ಇಲ್ಲ. (ಅದರಂತೆಯೇ ಅಜ್ಞಾನಿಯ ದೃಷ್ಟಿಯಲ್ಲಿ ಜ್ಞಾನಿಯಾದವನಿರಲೇ ಆರನು.) ಜ್ಞಾನಿಯ ಶರೀರವನ್ನಷ್ಟೇ ಅಜ್ಞಾನಿಯು ಜ್ಞಾನಿಯೆಂದು ಕರೆಯುತ್ತಾನೆ! ಹೀಗೆ ಜ್ಞಾನಿಯನ್ನು ನೋಡುವುದರಿಂದ ಅಜ್ಞಾನಿ ಜ್ಞಾನಿಯನ್ನೊಬ್ಬ ಅಜ್ಞಾನಿಯನ್ನಾಗಿ ನೋಡಿದಂಥವನಾಗುವನು.! ಎಷ್ಟು ಮಹಾತ್ಮರನ್ನು ಬೇಕಾದರೂ ನೀನು ಸಂದರ್ಶಿಸು ; ಅವರೆಲ್ಲರೂ ಅಷ್ಟ ಸಿದ್ಧಿಗಳನ್ನು ಬೇಕಾದರೂ ಪ್ರದರ್ಶಿಸಲಿ. ಬ್ರಹ್ಮಾತ್ಮದತ್ತ ನಿನ್ನ ಅವಧಾನವನ್ನು ಯಾರು ತಿರುಗಿಸುವರೋ 'ಈ ಕಾಯಕದ ಡೊಂಬರಾಟಗಳನ್ನು ಗಣಿಸದಿರು, ಅಂತರ್ಮುಖನಾಗು' ಎಂದು ಯಾರು ಬುದ್ಧಿ ಹೇಳುವರೋ ಅವರೇ ಮಹಾತ್ಮರು.

೫. ಮಹಾತ್ಮರನ್ನು ಹುಡುಕಿಕೊಂಡು ಈ ಜೀವಾತ್ಮನು ಹಿಮಾಲಯದ ಕಾಡುಗಳತ್ತ ಬೇಕಾದರೆ ಹೋಗಲಿ. ಮೊದಲು ಈತನು ತನ್ನೊಳಹೊಕ್ಕು 'ನಾನೆತ್ತಣಿಂದ ಬಂದವನು?' ಎಂದು ಶೋಧಿಸಿ ಸುಖಾತ್ಮನಾಗಲಿ (ಆನಂದಮಯನಾಗಲಿ) ಆಗ ಈತನೆದುರು ಕಾಣಿಸುವ ಎಲ್ಲ ಮಹಾತ್ಮರೂ ಈತನ ಆತ್ಮ (ಬ್ರಹ್ಮಾತ್ಮ)ವೇ ಆಗಿರುವುದು ಗೊತ್ತಾಗುತ್ತದೆ! ಶ್ರೀ ರಮಣರಿಂತು ಉಸಿರಿದರು!

೬. ತನ್ನ ಬ್ರಹ್ಮಾತ್ಮವನ್ನರಿಯುವ ಮೊದಲೆ ಜ್ಞಾನಿಗಳನ್ನರಿಯುವುದು ಅಸಾಧ್ಯ. ಆದುದರಿಂದ ನಾನೊಬ್ಬ ಜೀವಾತ್ಮನೆಂಬ ಭಾವನೆಯನ್ನು ನಾಶಗೊಳಿಸುವ ಒಂದೇ ಒಂದು ಯೋಗ್ಯ ಪ್ರಯತ್ನಕ್ಕೆ ಗಟ್ಟಿಯಾಗಿ ಅಂಟಿಕೋ.

೭. ಆದುದರಿಂದ ಯಾರಾದರೊಬ್ಬನು ಜ್ಞಾನಿಯೋ ಅಜ್ಞಾನಿಯೋ ಎಂದು ತಿಳಿದುಕೊಳ್ಳುವ ವಿಚಾರವು ಮತ್ತೆ ನಿನ್ನಲ್ಲಿ ತಲೆ ಎತ್ತಿದರೆ ಕೂಡಲೇ ಅದನ್ನು ತ್ಯಜಿಸು; ಮತ್ತು 'ನಾನು ಯಾರು?' ಎಂಬ ಶೋಧದ ಮೂಲಕ ಆ ವಿಚಾರ

ಶ್ರೀ ರಮಣಮಾರ್ಗ

ಭಾಗ – ೨

[ದೇವರು, ಜಗತ್ತು, ಭಕ್ತಿ ಮತ್ತು ಕರ್ಮಗಳ ಬಗೆಗೆ ಶ್ರೀ ರಮಣ ಮಹರ್ಷಿಗಳು ಕೊಟ್ಟ ಉಪದೇಶಗಳ ವಿವರಣೆ]

ಪ್ರಕಾಶಕರ ಟಿಪ್ಪಣಿ

[ಆಂಗ್ಲಮೂಲದ ಪ್ರಥಮ ಪ್ರಕಾಶನ (೧೯೭೬)ಕ್ಕೆ ಸಂಬಂಧಿಸಿದ್ದು]

ಶ್ರೀ ರಮಣ ಮಾರ್ಗದ ಒಂದನೆಯ ಭಾಗದ ತಮಿಳು ಪ್ರಕಟನೆಗೆ ತಾವು ಬರೆದ ಮುನ್ನುಡಿಯಲ್ಲಿ ಡಾಕ್ಟರ್ ಆರ್. ಸಂತಾನಂ ಮಹಾಶಯರು ಆ ಪುಸ್ತಕ ಹೊರಬೀಳಲು ಕಾರಣವಾದ ಸನ್ನಿವೇಶವನ್ನು ಕಥಿಸಿದ್ದಾರೆ. ಹಸ್ತಪ್ರತಿಗಳ ಇತರ ಭಾಗಗಳನ್ನೂ ತಮಿಳಿನಲ್ಲಿ ಪ್ರಕಟಿಸಬೇಕೆಂಬ ತಮ್ಮ ಇಚ್ಛೆಯನ್ನೂ ಅವರು ಅದರಲ್ಲಿ ವ್ಯಕ್ತಪಡಿಸಿದ್ದಾರೆ. ಆ ಹಸ್ತ ಪ್ರತಿಗಳಲ್ಲಿ ಭಕ್ತಿಮಾರ್ಗ, ಕರ್ಮಮಾರ್ಗ, ಜಗತ್‌ಸೃಷ್ಟಿ ಮತ್ತು ಆಧುನಿಕನಿಗೆ ಸಮಸ್ಯೆಗಳಾಗಿ ತೋರುವ ಇತರ ಅಂಶಗಳು ಎಂಬಿವುಗಳ ಬಗೆಗೆ ಶ್ರೀ ರಮಣರ ಭಕ್ತರು ಕೇಳಿದ ಪ್ರಶ್ನೆಗಳಿಗೆ ಸಾಧುಗಳು ಕೊಟ್ಟ ಉತ್ತರಗಳಿವೆ. ಡಾಕ್ಟರ್ ಆರ್. ಸಂತಾನಂ ಮಹಾಶಯರೀಗ ನಮ್ಮೊಡನಿಲ್ಲ. ೧೯೭೩ ನೆಯ ಇಸವಿಯ ಜೂನ್ ೧೧ ನೆಯ ತಾರೀಕಿನಂದು ಅವರು ಭಗವಾನ್ ರಮಣರ ಪಾದಾರವಿಂದಗಳನ್ನು ಸೇರಿದರು. ಅವರಿಗೆ ತಮ್ಮ ಅಪೇಕ್ಷೆಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ. ಆದರೆ ಅವರ ಅಪೇಕ್ಷೆ ಅಷ್ಟು ಬಲಿಷ್ಠವಾಗಿದ್ದುದರಿಂದ ಶ್ರೀ ರಮಣ ಮಾರ್ಗದ ಎರಡನೆಯ ಭಾಗವೀಗ ತಮಿಳು ಮೂಲದಲ್ಲಿಯೇ ಪ್ರಕಟವಾಗಲಿದೆ ಮತ್ತು ಈ ಮೂಲಕ ಅವರ ಅಪೇಕ್ಷೆ ಪೂರ್ಣವಾಗಲಿದೆ.

ಮದ್ರಾಸಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ 'ಇಂಡಿಯನ್ ಸಿವಿಲ್ ಸರ್ವೀಸಿನ' ಶ್ರೀ ಅನಂತ ನಾರಾಯಣರಿಗೆ ಪೂರ್ವೋಕ್ತ ಗ್ರಂಥದ ಒಂದನೆಯ ಭಾಗದ ತಮಿಳು ಪ್ರಕಟನೆಯನ್ನು ಕಳಿಸಿಕೊಟ್ಟಾಗ ಅವರು ಅದರ ಆಂಗ್ಲಾನುವಾದದ ಅವಶ್ಯಕತೆಯನ್ನು ಅರಿತುಕೊಂಡು ಶ್ರೀ ರಮಣರ ಅನೇಕ ಪಾಶ್ಚಾತ್ಯ ಭಕ್ತರು ಅದನ್ನು ಮೆಚ್ಚಿಕೊಂಡಾರು ಮತ್ತು ಲಾಭ ಪಡೆದಾರು ಎಂದು ಅಭಿಪ್ರಾಯಪಟ್ಟರು. ಅದೂ ನಿಜವಾಯಿತು. ೧೯೭೧ರಲ್ಲಿ ಕಾನ್ಪುರದ "ಸಿಟಿಪ್ರೆಸ್ಸು" "ಶ್ರೀ ರಮಣ ಮಾರ್ಗ"ದ ಒಂದನೆಯ ಭಾಗವನ್ನು ಪ್ರಕಟ ಮಾಡಿತು. ಸಾಗರೋತ್ತರ ನಿವಾಸಿಯಾದ ಶ್ರೀ ರಿಚರ್ಡ್ ಓಸೋ ರಿಯೋ ಎಂಬ ಇನ್ನೊಬ್ಬ ಭಕ್ತರು ಈ ಸಲ ಎರಡನೆಯ ವಿಭಾಗದ ಆಂಗ್ಲಾನುವಾದದ ಪ್ರಕಟನೆಯ ಅಗತ್ಯವನ್ನು ಅರಿತುಕೊಂಡರು. ಆದರೆ ಅದರ ತಮಿಳು ಪ್ರಕಟಣೆಯು ಇನ್ನೂ ಬಿಡುಗಡೆಯಾಗಿಲ್ಲ. ಆದುದರಿಂದ ಶ್ರೀ ಸಾಧು ಓಂಗಳು ಮತ್ತೊಮ್ಮೆ ಆ ಅಧ್ಯಾಯಗಳನ್ನು ಇಂಗ್ಲಿಷಿಗೆ ಭಾಷಾಂತರಿಸುವ ಹೊಣೆಯನ್ನು ಹೊರಬೇಕಾಯಿತು. ಏಕೆಂದರೆ, ವಿಷಯದ ಸರಿಯಾದ ಅರ್ಥವನ್ನೂ ತಾಪತ್ರಯವನ್ನೂ ಅವರು ಮಾತ್ರ ತಮಿಳಿನಿಂದ ಇಂಗ್ಲಿಷಿಗೆ ತರಬಲ್ಲರಲ್ಲದೆ ಇನ್ನಾರಿಗೂ ಸಾಧ್ಯವಿಲ್ಲ. ಆದುದರಿಂದ ಇನ್ನೊಮ್ಮೆ ಆ ಕೆಲಸದಲ್ಲಿ ಅವರಿಗೆ ಸ್ವಾಮಿ ಧಾಕಪ್ಪಜಿ ಮತ್ತು ಇತರ ಸ್ನೇಹಿತರು ಸಮರ್ಥವಾಗಿ ಸಹಾಯ ಮಾಡಿದರು. ನಿಜವಸ್ತು (ಅಥವಾ ಪರಮಸತ್ಯವು) ಎಲ್ಲೋ ದೂರದಲ್ಲಿದೆ ಎಂದೂ ಹತ್ತಿರಕ್ಕೆ ಅದನ್ನು ತರಬೇಕೆಂಬ ಅಗತ್ಯವಿದೆಯೆಂದೂ ಸಾಧಕನಿಗೆ ಅನ್ನಿಸಿದಾಗ (ಉಪ+ದೇಶಂ=ದೂರದಲ್ಲಿದೆ

ಎಂದು ತೋರುವುದನ್ನು ಹತ್ತಿರದಲ್ಲಿ ಇದೆಯೆಂದು ತೋರಿಸುವ ಅಗತ್ಯವಿದ್ದಲ್ಲಿ) ಮಾತ್ರ ಉಪದೇಶವು ಸಾಧ್ಯ. ಶ್ರೀ ರಮಣರು ಅದ್ವೈತದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವರು. "ಅಹಮಲ್ಲದೆ ಅಲ್ಲಿ ಇನ್ನಾರಿದ್ದಾರೆ..." ಉಳ್ಳದು ನಾರ್ಪದು-ಪುರವಣಿ ನುಡಿ ೩೮. ತಮ್ಮ ಶುದ್ಧ ಸತ್ಯದ ದರ್ಶನದಲ್ಲಿ ತಮ್ಮನ್ನು ಬಿಟ್ಟರೆ ಅವರಿಗೆ (ಅವರ ಪಾಲಿಗೆ) ಜಗತ್ತೂ ಇರಲಿಲ್ಲ, ಜೀವವೂ ಇರಲಿಲ್ಲ. ಆದುದರಿಂದ ಜಗತ್ತಿಗೆ ಉಪದೇಶ ಮಾಡಬೇಕೆಂಬ ಒಲವು ಸ್ವಲ್ಪವೂ ಅವರಲ್ಲಿರಲಿಲ್ಲ; ಏಕೆಂದರೆ ಅವರ ದರ್ಶನದಂತೆ ಜಗತ್ತು ಅವರಿಂದ ಭಿನ್ನವಲ್ಲವೇ ಅಲ್ಲ.+ ಹಾಗಾದರೆ ಅವರ ಉಪದೇಶಗಳನ್ನು ಪದ್ಯರೂಪದಲ್ಲಿ ನಾವು ಹೇಗೆ ಪಡೆಯಬಲ್ಲವರಾದೆವು? ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವ ಪರಮೇಶ್ವರನನ್ನು ನಾವು ನಂಬುವುದಿಲ್ಲವೇ? ಭಕ್ತರ ಸಂದೇಹ, ಪ್ರಶ್ನೆ, ಪ್ರಾರ್ಥನೆಗಳನ್ನು ಕಾರಣವಾಗಿಟ್ಟುಕೊಂಡೇ ಆ ಪರಮೇಶ್ವರ ತತ್ವವು ಶ್ರೀ ರಮಣರ ಮನೋವಾಕ್ಕಾಯಗಳನ್ನು ಬಳಸಿಕೊಂಡು ಅಜ್ಞಾನ ನಿವಾರಣೆ ಮಾಡಿ ಜಗತ್ತನ್ನು ಉಳಿಸಲು ಉಕ್ತ ಪದ್ಯಗಳನ್ನು ಬರೆದುಕೊಟ್ಟದ್ದು. ಆದುದರಿಂದ ಶ್ರೀ ರಮಣರು ಅರುಣಾಚಲವನ್ನು ಬಿಟ್ಟು ಹೋಗಿಲ್ಲ ಮತ್ತು ಸ್ವೇಚ್ಛೆಯಿಂದ ಅವರು ಇತರರಿಗೆ ಉಪದೇಶ ಕೊಡಲಿಲ್ಲ.

ಅಂಥ ಗುರುರಾಜರ ಹೆಜ್ಜೆಗಳನ್ನು ಅನುಸರಿಸುವವರು ತಮ್ಮ ಜೀವನವನ್ನು ಹೇಗೆ ನಡೆಸಬೇಕೆಂಬುದಕ್ಕೆ ಗ್ರಂಥಕರ್ತರು (ಸ್ವತಃ) ಒಂದು ನಿದರ್ಶನವಾಗಿದ್ದಾರೆ. ಅವರಿಗೊಂದು ಪುಸ್ತಕ ಬರೆಯುವ ಇಚ್ಛೆ ಇರಲಿಲ್ಲ ; ತಾವೇ ತಾವಾಗಿ ಅವರು ಇತರರಿಗೆ ಉಪದೇಶ ಕೊಡಲು ಬಯಸರು. ಆಧ್ಯಾತ್ಮಿಕ ವಿಚಾರಗಳ ಬಗೆಗೆ ಸಾಧಕರು ಅವರೆದುರು ತಮ್ಮ ಸಂದೇಹಗಳನ್ನು ಹೇಳಿಕೊಂಡಾಗ ಅವರು ಉತ್ತರ ಕೊಡುವ ರೂಢಿಯನ್ನಿಟ್ಟುಕೊಂಡಿದ್ದಾರೆ. "ನೀವು ಕೇಳಿದ್ದರಿಂದ ನಾನು ಶ್ರೀ ರಮಣರ ಉಪದೇಶಗಳ ಬೆಳಕಿನಲ್ಲಿ ಉತ್ತರ ಕೊಡುತ್ತೇನೆ. ಕೇಳಿದ ಮೇಲೆ ಯಾವ ಉತ್ತರದಿಂದಲೂ ಸಮಾಧಾನವನ್ನು ನಿರೀಕ್ಷಿಸಬೇಡಿರಿ. ಬರಿ ಸಮಾಧಾನ ಕೊಡುವ ಉತ್ತರಗಳನ್ನು ಕೊಟ್ಟು ನಿಮ್ಮನ್ನು ಸಂತೋಷಪಡಿಸುತ್ತೇನೆಂದು ನಿರೀಕ್ಷಿಸಬೇಡಿರಿ. ಶ್ರೀ ರಮಣರಿಂದ ನಾನು ಕಲಿತುದನ್ನು ನಿಮಗೆ ತಿಳಿಸುತ್ತೇನೆ. ಆತ್ಮಶೋಧ ಮಾರ್ಗವನ್ನಲ್ಲದೆ ಇತರ ಮಾರ್ಗಗಳ ಬಗೆಗೂ ಕೇಳಿದರೆ ಹೇಳಬಲ್ಲೆ. ಆದರೆ ಅವುಗಳನ್ನು ಶ್ರೀ ರಮಣರ ಉಪದೇಶದ ಬೆಳಕಿನಲ್ಲೇ ಹೇಳುತ್ತೇನೆ. ಭಗವಾನ್ ಶ್ರೀ ರಮಣರೇ ನನ್ನ ಎಲ್ಲ ಅಧಿಕೃತ ಶಾಸ್ತ್ರಗಳು. ಜಗತ್ತು ಒಪ್ಪದಿದ್ದರೆ ಹೋಗಲಿ-ಅದು ನನ್ನ ಅಭಿಪ್ರಾಯಗಳೆಲ್ಲವನ್ನೂ ಬೇಕಾದರೆ ದೂರ ಎಸೆಯಲಿ !" ಶ್ರೀ ಸಾಧುಗಳು ತಮ್ಮ ಅಭಿಪ್ರಾಯಗಳನ್ನು ಕುರಿತು ಇತರರು ಏನು ಆಲೋಚಿಸುವರು ಎಂಬುದರ ಬಗೆಗೆ ತಲೆಬಿಸಿ ಮಾಡಿಕೊಳ್ಳುವುದಿಲ್ಲ; ಇತರರು ಅವುಗಳನ್ನು ಹೇಗೆ ಬೆಲೆ ಕಟ್ಟುತ್ತಾರೆ ಎಂಬ ಬಗೆಗೆ ತಲೆ ಕೆಡಿಸಿಕೊಳ್ಳುವುದೂ ಇಲ್ಲ. ಇದಕ್ಕೆ ಮುನ್ನುಡಿಯನ್ನಾಗಲಿ, ವಿಮರ್ಶೆಯನ್ನಾಗಲಿ ಏಕೆ ಬಯಸಿಲ್ಲ ಎಂಬುದಕ್ಕೆ ಮೇಲಿನ ಮಾತಿನಲ್ಲಿ ಓದುಗನು ಕಾರಣವನ್ನು ಕಂಡುಕೊಳ್ಳಬಹುದು. ಶ್ರೀ ರಮಣರು ತೋರಿಸಿದ ಸ್ಪಷ್ಟವಾದ ಮಾರ್ಗವನ್ನು ಚಾಚೂ ತಪ್ಪದೆ ಅನುಸರಿಸುವುದನ್ನು ಮೆಚ್ಚಿಕೊಳ್ಳುವವರಿಗಾಗಿ ಮೆಚ್ಚಿಕೊಳ್ಳುವವರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ.

+ ಶ್ರೀ ರಮಣರ ಬಗೆಗೆ ಮಾತಾಡುವಾಗ ಯಾ ಬರೆಯುವಾಗ ನಾವು ಭೂತಕಾಲವನ್ನು ಬಳಸಿದರೂ ಯಾವಾಗಲೂ ಇರುವ ಸದ್ಗುರುವಿಗೆ ಜೀವಂತ ಸದ್ಗುರು ಎಂಬ ಮಾತು ಅನ್ವಯಿಸದೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಅವರ ಉಪಸ್ಥಿತಿಯು ಕೇವಲ ಭೌತಿಕ ಉಪಸ್ಥಿತಿಯಲ್ಲ.

ಗುರು ಶಿಷ್ಯನಿಗೆ ಮಾಡುವ ಉಪದೇಶದ ನಮ್ಮ ಕಲ್ಪನೆ ಹೀಗಿದೆ : "ಗುರುಶಿಷ್ಯನಿಗೆ ಕೊಡುವ ಉಪದೇಶವು ಗುಟ್ಟಿನ ಮುಸುಕಿನಲ್ಲಿ ಚೆನ್ನಾಗಿ ಅಡಗಿರುತ್ತದೆ. ಮಂತ್ರವು ಗುಪ್ತ. ಅದನ್ನು (ಪಿಸುದನಿಯಿಂದ) ನಮ್ಮ ಕಿವಿಯಲ್ಲಿ ಉಸಿರಲಾಗುತ್ತದೆ. ಗುರುವು ಅನೇಕಾನೇಕ ಗ್ರಾಹ್ಯ–ತ್ಯಾಜ್ಯ ವಿಷಯಗಳನ್ನೂ (ಕರ್ತವ್ಯಾಕರ್ತವ್ಯಗಳನ್ನು) ಉಪದೇಶಿಸುತ್ತಾನೆ. ಸಾಕ್ಷಾತ್ಕಾರದ ಅಸ್ಪಷ್ಟ ಕಲ್ಪನೆಯ ಉಚ್ಚ ನಿರೀಕ್ಷೆಯಿರುತ್ತದೆ!" ಉಪದೇಶದ ಗೌಪ್ಯವನ್ನು "ಶ್ರೀ ರಮಣ ಮಾರ್ಗ"ದ ಎರಡು ಭಾಗಗಳಲ್ಲಿಯೂ, ಮುಚ್ಚು ಮರೆಯಿಲ್ಲದೆ ಅನಾವರಣ ಮಾಡಲಾಗಿದೆ. ಅನೇಕ ಮಾಡು–ಬಿಡುಗಳನ್ನು ಉಪದೇಶಿಸಿದ ಮೇಲೆ ಸಾಧಕ ಅವುಗಳಂತೆ ನಡೆದುಕೊಂಡ ಮೇಲೆ ತಾನು ಯಾವುದಕ್ಕೂ ತಕ್ಕವನಲ್ಲ ಎಂಬ ಭಾವನೆಯುಳ್ಳವನಾಗುತ್ತಾನೆ. ಅವನಿಗೆ ಅವನ ಅಹಂಕಾರದೊಡನೆ ಐಕ್ಯದಿಂದಿರುವುದು ತೀರಾ ಅಪ್ರಯೋಜಕವೆಂದು ಗೊತ್ತಾಗುತ್ತದೆ ; ಅಂದರೆ ಅವನಿಗೆ ನಮ್ರತೆಯುಂಟಾದಾಗ ಅಲ್ಲಿಗೆ ಎಲ್ಲ ಸಾಧನಗಳೂ ಕೊನೆಗೊಳ್ಳುತ್ತವೆ. ಅಲ್ಲಿಯವರೆಗೆ ದೊರಕದಿದ್ದ ಸ್ವಸಾಧನ ಫಲಗಳೆಲ್ಲವನ್ನೂ ಅವನು ಪಡೆಯುತ್ತಾನೆ ; ಏಕೆಂದರೆ, ಆವರೆಗೆ ಅವನಲ್ಲಿ ಕರ್ತೃತ್ವ ಭಾವನೆಯಿತ್ತು–ಅದರಿಂದಲೇ ಅಲ್ಲಿಯವರಿಗೆ ಅವನ ಸಾಧನೆ ಫಲದಾಯಕವಾಗಿರಲಿಲ್ಲ.

ಅಧ್ಯಾಯ ಒಂದು

ದೇವರು ಮತ್ತು ಜಗತ್ತು

ಮಾಯೆಯು ತನ್ನ ದಿವ್ಯ ದ್ಯೂತದಲ್ಲಿ ಬಳಸುವ ದಾಳಗಳೆಂದರೆ : ಪ್ರಪಂಚ, ಜೀವಾತ್ಮ ಮತ್ತು ದೇವರು – ಎಂಬ ಈ ಮೂರು ಪದಾರ್ಥಗಳು ! ಈ ಮೂರು ಇಲ್ಲದಿದ್ದರೆ ಅದರ ಆಟ ನಡೆಯಲಾರದು! ಈ ಮೂರನ್ನು ಮೂರು ಪದಾರ್ಥಗಳು' ಯಾ 'ಪದಾರ್ಥತ್ರಯ' ಎಂದು ಕರೆಯಲಾಗಿದೆ. ಜಗತ್ತಿನಲ್ಲಿ ಈವರೆಗೆ ಅಸ್ತಿತ್ವಕ್ಕೆ ಬಂದ ಎಲ್ಲ ಮತಧರ್ಮಗಳಿಗೂ ಈ ಪದಾರ್ಥತ್ರಯವೇ ತಳಪಾಯ. ಇಲ್ಲಿ ಕೆಲವರು ಕೇಳಿಯಾರು: 'ದೇವರನ್ನು ಕುರಿತು ಏನನ್ನೂ ಹೇಳದ ಬೌದ್ಧಮತದಂಥ ಕೆಲ ಮತಧರ್ಮಗಳಿಲ್ಲವೇ?' ಎಂದು. ಆದರೆ ಅದು ಹಾಗಲ್ಲ. ಪಡೆಯಲು ತಕ್ಕದ್ದೆಂದು ಬಹುವಾಗಿ ಹೊಗಳಿದ ದೇವರೆಂಬ ಪದಾರ್ಥವು ಇತರ ಮತಧರ್ಮಗಳಲ್ಲಿರುವಂತೆಯೇ ಬೌದ್ಧ ಮತದಂಥ ಮತಧರ್ಮದಲ್ಲಿಯೂ ತೃತೀಯ ಪದಾರ್ಥವೆಂದು ಹೇಳಲಾದ 'ನಿರ್ವಾಣ'ವನ್ನು ಅಹಂಕಾರಾಭಾವವೆಂದು ಹೊಗಳಿ, ಅದೇ ಪ್ರಕಾರ ಪಡೆಯಲರ್ಹವೆಂದೂ ಕೇವಲ ದುಃಖ ಸ್ವರೂಪವೆನ್ನಿಸಿರುವ ಜಗತ್ತೆಲ್ಲವನ್ನೂ ಪರಿತ್ಯಾಗ ಮಾಡುವುದೇ ಅದಕ್ಕೆ ಸಾಧನವೆಂದೂ ಪ್ರಶಂಸಿಸಲಾಗಿದೆ. ಎಲ್ಲಿಯವರೆಗೆ ಮನುಷ್ಯನು ತನ್ನನ್ನೂ ಜಗತ್ತನ್ನೂ ಎರಡು ಭಿನ್ನ ವಸ್ತುಗಳೆಂದು ತಿಳಿದಿರುವನೋ ಅಲ್ಲಿಯವರೆಗೆ ಆತನು ಮಾನಸೋತ್ತರವಾದ ನಿರ್ವಾಣ ಸ್ಥಿತಿಯನ್ನು ತೃತೀಯ ಪದಾರ್ಥವೆಂದು ತಿಳಿಯದಿರಲಾರನು. ಇತರ ಮತಧರ್ಮಗಳಲ್ಲಿ ಆ ನಿರ್ವಾಣ ಸ್ಥಿತಿಯನ್ನೇ ದೇವರೆಂದು ಕರೆದಿರುವಾಗ, ಬೌದ್ಧ ಮತವನ್ನು ಹಿಡಿದು ಜಗತ್ತಿನ ಎಲ್ಲ ಮತ ಧರ್ಮಗಳೂ ಮಾಯೆ ಆಡುವ ಅರ್ಥಪೂರ್ಣ ದಿವ್ಯದ್ಯೂತಕ್ಕೆ ಜಗತ್ತು, ಜೀವಾತ್ಮ ಮತ್ತು ದೇವರು ಎಂಬ ಮೂರೇದಾಳಗಳು–ಎಂದಿರುವುದು ಗಮನಾರ್ಹವಾಗಿದೆ. ಈ ಸಂಗತಿಯನ್ನೇ ಶ್ರೀ ರಮಣರು ತಮ್ಮ 'ಉಳ್ಳದು ನಾರ್ಪದು'ವಿನ ೨ನೆಯ ನುಡಿಯಲ್ಲಿ ಎತ್ತಿ ತೋರಿಸಿದ್ದಾರೆ.

> **"ದೇವ ಜೀವ ಜಗಗಳೆಂಬ**
> **ಮೂರು ವಸ್ತುಗಳನು**
> **ಪದ್ಧತಿಗಳು ವಿಚಾರಗಳ**
> **ಕಲ್ಪಿಸಿಕೊಳ್ಳುವುವು"**

ವಸ್ತುತ್ರಯದಲ್ಲಿ ಒಂದಾದ ನಾನೆಂಬುದು ಉತ್ತಮ ಪುರುಷ ; ಅದೇ ಜೀವ. ನಾವು ಕರ್ಮಸ್ಥಾನದಲ್ಲಿರುವುದೆಂದು ತಿಳಿದ (ಪ್ರವೃತ್ತಿ ವಿಜ್ಞಾನದ) ನಮ್ಮೆದುರಿರುವ ಜಗತ್ತು ಮಧ್ಯಮ ಪುರುಷ. ನಮ್ಮ ನೋಟದ ಕಕ್ಷೆಯ ಹೊರಗಿರುವ ದೇವರೇ ಮೊದಲಾದ ವಸ್ತುಗಳು ಪ್ರಥಮ ಪುರುಷ ನಿರ್ದೇಶ್ಯಗಳು. ಈ ಮೂರರಲ್ಲಿ ಯಾವುದಕ್ಕೆ ಸಂಬಂಧಿಸಿದಂತೆ

ಸಮಸ್ಯೆಗಳೇಳುತ್ತವೆ? ನಮ್ಮೆದುರಿರುವ ಜಗತ್ತು ಜಡವಾಗಿರುವುದರಿಂದ ಅದು ಜೀವಾತ್ಮದ ಯಾ ದೇವರ ಬಗ್ಗೆ ಯಾವ ಸಮಸ್ಯೆಯನ್ನೂ ಎತ್ತದು ; ಏಕೆಂದರೆ ಅದಕ್ಕೆ ಸಾಧ್ಯವಿಲ್ಲ ; ಆದುದರಿಂದ ಅದಕ್ಕೆ ಯಾವ ಸಮಸ್ಯಾ ಪರಿಹಾರವೂ ಬೇಕಾಗಿಲ್ಲ! ನಾವೀಗ ದೇವರತ್ತ ತಿರುಗೋಣ. ಆತ ಎಲ್ಲಿದ್ದಾನೆ? ಅವನಿಗೆ ಸಮಸ್ಯೆಗಳಿರಬೇಕೇ? (ಇದ್ದರೆ) ಅವುಗಳನ್ನು ನಾವೇ ಪರಿಹರಿಸಲು ಯತ್ನಿಸಬೇಕೇ? ಹೀಗೆ ವಿಚಾರ ಮಾಡಿದರೆ, ಅದು ಹಾಗಿರಲಾರದು ಎಂದು ನಿಗಮನಿಸಬೇಕಾಗುತ್ತದೆ. ಇದರಿಂದ ಪ್ರಪಂಚಕ್ಕೂ ದೇವರಿಗೂ ಯಾವ ಸಮಸ್ಯೆಯೂ ಇಲ್ಲ ಎಂಬುದು ಸ್ಪಷ್ಟವಾಗುವುದಿಲ್ಲವೇ? ನಾವೆಂಬ ಮೂರನೆಯದಾದ ಜೀವಾತ್ಮ ಮಾತ್ರ ಜಗತ್ತು ಹಾಗೂ ದೇವರುಗಳ ಬಗ್ಗೆ ಅಗಣಿತ ಸಮಸ್ಯೆಗಳನ್ನುಳ್ಳದ್ದಾಗಿದೆ ! ಮತ್ತು ಹಾಗೇಕೆ? ನಾವು ಜಗತ್ತನ್ನು ನೋಡುತ್ತೇವೆ. ಆದುದರಿಂದ ಅದನ್ನು ಅರಿತುಕೊಳ್ಳಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ. ಆದರೆ ಜಗತ್ತಿನ ಬಗೆಗಿನ ಸತ್ಯವು ವಿಪುಲವೂ ಅನಂತವೂ ಆಗಿರುವುದರಿಂದ ಅದು ನಮ್ಮ ಜ್ಞಾನದ ಪರಿಧಿಯೊಳಗೆ ಎಂದೂ ಬರುವುದಿಲ್ಲ. ದೇವರ ಕತೆಯೂ ಅಷ್ಟೇ. ನಮ್ಮ ಮತಧರ್ಮಗಳು ದೇವರ ಬಗೆಗೆ ಎಷ್ಟೇಷ್ಟೋ ಹೇಳುತ್ತವೆ ; ಆದರೆ ಅವುಗಳಲ್ಲಿಯ ಅತ್ಯಲ್ಪಾಂಶವೂ ನಮ್ಮಲ್ಲಿಯ ಅನೇಕರ ಅನುಭವಕ್ಕೆ ಒಳಪಟ್ಟಿಲ್ಲ. ದೇವಜ್ಞಾನವು ನಮ್ಮ ಗ್ರಹಣಶಕ್ತಿಯ ಒಳಗೆ ಇಲ್ಲವಾದುದರಿಂದ ಜೀವಾತ್ಮವಾದ ನಮ್ಮಲ್ಲಿ ದೇವರ ಕುರಿತಾದ ಅಗಣಿತ ಸಮಸ್ಯೆಗಳು ಏಳುತ್ತವೆ. ಆದುದರಿಂದ ಜೀವಾತ್ಮಕ್ಕಷ್ಟೇ (ಜಗತ್ತು–ದೇವರುಗಳ ಕುರಿತ) ಸಮಸ್ಯೆಗಳಿರುತ್ತವೆ. ಇದರ ಉಪಸಂಹಾರವೇನೆಂದರೆ, ಮೊಟ್ಟಮೊದಲು 'ಜೀವಾತ್ಮನಾದ ನಾನು ಯಾರು?' ಎಂಬ ಶೋಧವನ್ನು ಮಾಡತೊಡಗಬೇಕು. ಜಗತ್ತು ದೇವರುಗಳ ಕುರಿತು ಏನಾದರೂ ಹೇಳುವುದರಿಂದ ಓದುಗರ ಮನಸ್ಸಿನಲ್ಲಿ ಹೆಚ್ಚು ಗೊಂದಲ ಉಂಟಾಗುವುದು (ಹೀಗಿರುವಾಗ) ಬುದ್ಧನು ಮಿಕ್ಕೆರಡು ವಸ್ತುಗಳಲ್ಲಿ ಒಂದಾದ ದೇವರ ಬಗೆಗೆ ಏನನ್ನೂ ಹೇಳದಿರುವುದರಲ್ಲಿ ಆಶ್ಚರ್ಯವೇನಿದೆ? ಆ ಎರಡು ವಸ್ತುಗಳು (ಅನುಕ್ರಮವಾಗಿ) ಮಧ್ಯಮ ಮತ್ತು ಪ್ರಥಮ ಪುರುಷವಾಚ್ಯಗಳಲ್ಲವೇ? ಅದರಿಂದಲೆ 'ಶ್ರೀ ರಮಣಮಾರ್ಗ'ದ ಒಂದನೆಯ[೧] ಭಾಗದಲ್ಲಿ ಅವನ್ನು ಬಿಟ್ಟದ್ದಲ್ಲವೆ? (ಅದರ ಉದ್ದೇಶವೆಂದರೆ) ಓದುಗರ ಮನದಲ್ಲಿ ಗೊಂದಲ ಉಂಟುಮಾಡಬಾರದು ಎಂಬುದೇ ಆಗಿದೆ : ಅದರಲ್ಲಿ ಆಮೂಲಾಗ್ರವಾಗಿ ಉತ್ತಮ ಪೌರುಷೇಯವಾದ ಜೀವಾತ್ಮದ ಬಗೆಗೆ ಮಾತ್ರ ಪ್ರತಿಪಾದನೆ ಮಾಡಲಾಗಿದೆ!

ಸೃಷ್ಟಿಯ ಉಷಃಕಾಲದಿಂದ ಮನುಷ್ಯನ ಈ ಪರಮಾಣು ಯುಗದವರೆಗೆ ಅವಲೋಕನ ಮಾಡಿದರೆ ಮನುಷ್ಯನಿಗೇ ಎಲ್ಲ ಸಮಸ್ಯೆಗಳೂ ಎದುರಾಗಿವೆ ಎಂಬುದೂ ಅವನೇ (ಜಗತ್ತು ಮತ್ತು ದೇಹ) ಮಧ್ಯಮ–ಪ್ರಥಮ ಪೌರುಷೇಯ ಪದಾರ್ಥಗಳ ಮೇಲೆ ತನ್ನ ಮನವೆಂಬ ಸಾಧನದ ಮೂಲಕ ಸಂಶೋಧಿಸುತ್ತಿರುವುದರಲ್ಲಿ ಅನಿಯಂತ್ರಿತ ಭಾವೋದ್ರೇಕಪೂರ್ವಕವಾಗಿ ಕಾರ್ಯಮಗ್ನನಾಗಿದ್ದಾನೆ ಎಂಬುದೂ ಕಂಡುಬರುತ್ತವೆ. ಯಾರಿಗಾದರೂ ತನ್ನ ಸ್ವಂತ ಅಸ್ತಿತ್ವದ ಬಗೆಗೆ ಸಂದೇಹವಿರುವುದೇನು? ಆದರೆ ಜಗತ್ತಿನ

೧. 'ಶ್ರೀ ರಮಣ ಮಾರ್ಗ' ದ ಒಂದನೆಯ ಭಾಗದಲ್ಲಿ ಜಗತ್ತೆಂದರೇನು? ಅದು ಹೇಗೆ ಹುಟ್ಟಿತು?' ಎಂಬಂಥ ಪ್ರಶ್ನೆಗಳನ್ನೂ, ದೇವರೆಂದರಾರು? ಮತ್ತು ಆತನನ್ನು ಪಡೆಯುವ ವೈಭವವೆಂಥದು?' ಎಂಬ ಯಾವುದನ್ನು ಹೇಳದೆ, ನಾನೆಂಬ ವಿಷಯವೊಂದನ್ನೇ ಮೊದಲಿನಿಂದ ಕಡೆಯತನಕ ಪ್ರತಿಪಾದಿಸಿದ್ದು ಏಕೆ? – ಎಂದು ಕೇಳುವ ಪಾಠಕಸ್ನೇಹಿತರಿಗೆ ಇದು ಉತ್ತರ ಎಂದು ಗ್ರಹಿಸಬಹುವಾಗಿದೆ.

ಅಥವಾ ದೇವರ ಇಲ್ಲವೇ ಆ ಎರಡರ ಅಸ್ತಿತ್ವದ ಬಗೆಗೂ ಯಾರಿಗಾದರೂ ಸಂದೇಹಗಳಿರಬಹುದು. ಆದುದರಿಂದ ಸಮಸ್ಯೆ ಇರುವುದು ಒಬ್ಬನ ಬ್ರಹ್ಮಾತ್ಮದ ಸತ್ ಹಾಗೂ ಚಿತ್ (ಅಸ್ತಿತ್ವ ಮತ್ತು ಜ್ಞಾನ) ಎಂಬ ಮುಖದ ಬಗೆಗಲ್ಲ ; ಅದು ಇರುವುದು ಜಗತ್ತು ಮತ್ತು ದೇವರ ಬಗೆಗೆ ಮಾತ್ರ. ಆದ ಕಾರಣ ಯಾವಾಗಲೂ ಮಾನವನು ಮಾಡುವ ಸಂಶೋಧನೆಯು ಜಗತ್ತು ಮತ್ತು ದೇವರುಗಳ ದಿಕ್ಕಿನಲ್ಲಿಯೇ ಹೊರಡುವುದು. ಜಗತ್ತು ಮತ್ತು ದೇವರುಗಳನ್ನು ಕುರಿತು ಮಾಡುತ್ತಾ ಬಂದ ಸಂಶೋಧನೆಗಳು ಮುಖ್ಯವಾದಂಥವು. ಆ ದಿಕ್ಕಿನಲ್ಲಿ ಮಾಡಿದ ಸಂಶೋಧನೆಯ ಪ್ರಗತಿಯ ಫಲವಾಗಿ ಮಾನವಕುಲಕ್ಕೆ ಆದ ಪ್ರಯೋಜನಗಳಾವುವು? ಜಗತ್ತಿನ ಮೇಲೆ ಸಂಶೋಧನೆ ಮಾಡ ಹೊರಟು (ಮಾನವನ) ಮನಸ್ಸು ಪರಮಾಣುವನ್ನೂ ಒಡೆಯುವವರೆಗಿನ ಪ್ರಗತಿಯನ್ನು ಸಾಧಿಸಿದ ಅದ್ಭುತ ಭೌತಶಾಸ್ತ್ರವನ್ನು ಹುಡುಕಿ ತೆಗೆಯಿತು. ಇಂದು ವಿಜ್ಞಾನ ಶಾಸ್ತ್ರದ ಹೆಸರನ್ನು ಮೇಲಕ್ಕೆ ತಂದ ನವನಿರ್ಮಿತಿಗಳು ಅಸಂಖ್ಯಾತವಾಗಿವೆ, ಉಸಿರನ್ನು ಬಿಗಿದು (ಆಶ್ಚರ್ಯದಿಂದ) ನೋಡತಕ್ಕಂಥವುಗಳಾಗಿವೆ. ಆದರೆ ಮಾನವನ ಮನಸ್ಸಿಗೆ ತಿಳಿಯದಿರುವ ಪ್ರಾಕೃತಿಕ ಪದಾರ್ಥಗಳ ರಹಸ್ಯಗಳು (ಅಂತರಾಳದಲ್ಲಿ ನೇತಾಡುತ್ತಿರುವ ಗೋಲಗಳ ರಹಸ್ಯಗಳೂ ಅನೇಕಾನೇಕವಾಗಿವೆ) ಈ ಜಗತ್ತಿನಲ್ಲಿ ಅಸಂಖ್ಯಾತವಾಗಿವೆ. ಇದರಿಂದ ಮಾನವ ಮನವು ವಿಜ್ಞಾನದ ಆಚೆಯ ತೀರವನ್ನು ಎಂದೆಂದೂ ಸೇರಲಾರದು – ಎಂದು ನಾವು ಭಾವಿಸುವಂತಾಗಿದೆ. ಅಯಸ್ಕಾಂತ (ಲೋಹಚುಂಬಕ) ಶಕ್ತಿ, ಭಾಷ್ಪಶಕ್ತಿ, ಅನಿಲಶಕ್ತಿ, ಪೆಟ್ರೋಲ್ ಶಕ್ತಿ, ವಿದ್ಯುಚ್ಛಕ್ತಿ, ಪರಮಾಣುಶಕ್ತಿ ಮುಂತಾದ ವಿವಿಧ ಪ್ರಾಕೃತಿಕ ಶಕ್ತಿಗಳ ಸಂಶೋಧನೆಯ ಆಧಾರದ ಮೇಲೆ ನಿರ್ಮಿಸಲಾದ ವೈಜ್ಞಾನಿಕ ಸಾಧನ–ಸಾಮಗ್ರಿಗಳ ಫಲವಾಗಿ ಜಗತ್ತಿನಾದ್ಯಂತವಾಗಿ ಭಯಂಕರ ಮಹಾಯುದ್ಧಗಳು ನಡೆದುದನ್ನೂ ಆ ಮೂಲಕ ಭೀಕರ ರಕ್ತಪಾತಗಳಾದುದನ್ನೂ ನಾವು ಕಂಡೆವು. ದೇವೋನ್ಮುಖವಾದ ಸಂಶೋಧನೆಯ ಮೂಲಕ ಅನೇಕ ಮತಧರ್ಮಗಳು ಹುಟ್ಟಿಕೊಂಡವು. ಅವುಗಳು, ತಮ್ಮ ಸರದಿಯಂತೆ, ಭಿನ್ನ ತತ್ತ್ವಗಳನ್ನೂ ಧ್ಯೇಯವಾದಗಳನ್ನೂ ರೂಪಿಸುವುದರ ಮೂಲಕ ತಮ್ಮ ಅನುಯಾಯಿಗಳ ಅನೇಕಾನೇಕ ಗುಂಪುಗಳು ಘಟಿತವಾಗುವಂತೆ ಮಾಡಿದವು. ಸಾಮಾನ್ಯವಾದ ಅವ್ಯುತ್ಪನ್ನ (ಮಾನವನ) ಮನಸ್ಸು ಸರ್ವಧರ್ಮಗಳ ಬುಡದಲ್ಲಿರುವ ಸಾಧಾರಣಾಂಶವನ್ನು ಕಂಡುಕೊಳ್ಳಲಾರದೆ ತನ್ನ ಮತಧರ್ಮದಲ್ಲಿಟ್ಟುಕೊಂಡಿರುವ ಶಠಶ್ರದ್ಧೆಯ ದೆಸೆಯಿಂದ ಮಿಕ್ಕ ಮತಧರ್ಮಗಳನ್ನು ಕೀಳ್ಗಳೆಯುತ್ತದೆ, ಸ್ವಧರ್ಮಕ್ಕೆ ವಿಧರ್ಮೀಯರನ್ನು ಮತಾಂತರಗೊಳಿಸುತ್ತದೆ–ಮತ್ತು ಹೀಗೆ ಮಾಡುತ್ತಾ ಹೋಗಿ ಅದು ಅನೇಕ ಮತಧಾರ್ಮಿಕ ಮಹಾಯುದ್ಧಗಳು (ಆಧುನಿಕ ವೈಜ್ಞಾನಿಕ ಆಯುಧಗಳನ್ನು ಬಳಸಿ) ನಡೆದು ರಕ್ತಪಾತಗಳಾಗಲು ಕಾರಣವಾಗುವಷ್ಟರ ಮಟ್ಟಿಗೆ ಅವುಗಳೊಳಗೆ ಮತ ಧಾರ್ಮಿಕ ಯುದ್ಧಗಳೊಳಗೇ ಸಿಕ್ಕಿಕೊಂಡಿತು. ಈ ಪರಿಣಾಮದಶೆಗೆ ಜಗತ್ತಿನ ಚರಿತ್ರೆಯು ಸಾಕ್ಷಿಯಾಗಿ ನಿಲ್ಲುತ್ತದೆ.

ಅಯ್ಯೋ! ಸ್ವೇತರಗಳೂ ಮಧ್ಯಮ–ಪ್ರಥಮ ಪೌರುಷೇಯಗಳೂ ಆದ ಜಗತ್ತು ಹಾಗೂ ದೇವರು ಎಂಬೆರಡರ ಮೇಲೆ ಮಾಡಿದ ಸಂಶೋಧನೆಗಳಿಂದುಂಟಾದ ದುಷ್ಪರಿಣಾಮಗಳ ಮುಂಬರಿತವನ್ನು ಇನ್ನಾದರೂ ನಿಲ್ಲಿಸಲಿ ಎಂದು (ಕರೆಗೊಡಲು) ಕಾಲಮೀರಿ ಹೋಗಿದ್ದರೂ ಈಗಲಾದರೂ ಕರೆಗೊಡಬೇಡವೇ?

ಓ ಮನುಷ್ಯನೇ, ಉತ್ತಮ–ಮಧ್ಯಮ–ಪ್ರಥಮ ಪುರುಷಗಳಿಂದ ವಾಚ್ಯವಾದ ವಸ್ತುಗಳಾವುವೆಂಬುದು ನಿನಗೆ ಈಗಾಗಲೇ ಗೊತ್ತಿಲ್ಲವೇ? ನಿನಗವು ಯಾವವುಗಳು, ಎಂಥವುಗಳು ಎಂಬುದು ಗೊತ್ತಿದ್ದರೂ ಮಧ್ಯಮ–ಪ್ರಥಮ ಪುರುಷ ವಾಚ್ಯವಾದ ವಸ್ತುಗಳತ್ತ ಮಾಡುವ ಸಂಶೋಧನೆಗಳೇ ಆಗಿವೆಯಲ್ಲವೇ ನಿನ್ನ ಪ್ರಯತ್ನಗಳೆಲ್ಲವೂ! ಉತ್ತಮ ಪುರುಷ ಸ್ವರೂಪದ (ಬ್ರಹ್ಮಾತ್ಮಾರ್ಥಕ) 'ನಾನು' ಎಂಬುದನ್ನು ತಿಳಿದುಕೊಳ್ಳಲು ಮತ್ತು ಲಕ್ಷ್ಯ ಹಾಕಲು ಪ್ರಯತ್ನಿಸುವುದನ್ನು ಸಂಪೂರ್ಣವಾಗಿ ಅಲಕ್ಷಿಸಿ ಬಿಟ್ಟೆಯಲ್ಲವಯ್ಯಾ–ಅಯ್ಯೋ! ಹೇಗೆ? ನೋಡು–ನೀನು ಮಲಗುವೆ ಮತ್ತು ಮಲಗಿ ಏಳುವೆ. ಏಳುವಾಗ ನಿನ್ನ ಅವಧಾನ ಶಕ್ತಿಯು ಹೇಗೆ ಕೆಲಸ ಮಾಡುತ್ತಿರುತ್ತದೆ? ಎಚ್ಚತ್ತ ನಿಮಿಷಾರ್ಧದಲ್ಲಿ ಮೊಟ್ಟಮೊದಲು ನಿನಗೆ ಉಂಟಾಗುವುದು ದೇಹಭಾನ ; ಆಮೇಲೆ ನೀನಿರುವ ಸ್ಥಳದ ಭಾನ ; ಅನಂತರ ಅಲ್ಲಿರುವ ವಸ್ತುಗಳ ಭಾನ ಹಾಗೂ ಕೊನೆಯಲ್ಲಿ ಹೊರಜಗತ್ತಿನ ಭಾನ. ಇದೆಲ್ಲಾ ನಿನ್ನ ಮಧ್ಯಮ ಪೌರುಷೇಯ ಅವಧಾನ ಮಾತ್ರ ಎಂಬುದು ಸ್ಪಷ್ಟವಾಗುವುದು. ನೀನು ಎದ್ದಾಕ್ಷಣ ನಿನ್ನ ಅವಧಾನ ಶಕ್ತಿಯು ಸ್ವಾಭಾವಿಕವಾಗಿ ಮಧ್ಯಮ–ಪ್ರಥಮ ಪೌರುಷೇಯ ಪದಾರ್ಥಗಳತ್ತ ಮಾತ್ರ ಎದ್ದು ಹಾರುವುದು. ಆಮೇಲೆ ಕೇವಲ ಅವುಗಳ ಮೇಲೇ ನಿನ್ನ ಅವಧಾನ ಶಕ್ತಿಯು ಕೇಂದ್ರೀಕೃತವಾಗಿರುವುದರಿಂದ ನೀನು ಪಂಚೇಂದ್ರಿಯಗಳ ಮೂಲಕ ಅವುಗಳಿಗೇ ಅಂಟಿಕೊಂಡು ಪುನಃ ನಿದ್ರೆ ಮಾಡುವವರೆಗೆ ಅವುಗಳನ್ನು ಮಾತ್ರ ತಿಳಿದವನಾಗಿ ಇರುವೆ. ನಿದ್ರೆ ನಿನ್ನ ಮೇಲೆ ಹೇರಿಕೊಂಡು ಬಂದಾಗ ಮಧ್ಯಮ–ಪ್ರಥಮ ಪೌರುಷೇಯ ವಾಚ್ಯವಾದ ವಸ್ತುಗಳತ್ತಣ ನಿನ್ನ ಅವಧಾನವು ನಿಲ್ಲುವುದು. (ಬ್ರಹ್ಮಾತ್ಮವನ್ನರಿತುಕೊಂಡವರನ್ನು ಬಿಟ್ಟರೆ) ನಿದ್ರಾವಸ್ಥೆಯಲ್ಲಿ ಅವಧಾನಶಕ್ತಿಗೆ ಏನಾಗುತ್ತದೆ? ಎಂಬುದನ್ನು ಯಾರೂ ಅರಿಯರು. ನಿದ್ರೆಯಿಂದ ನಿದ್ರೆಯವರೆಗೆ, ಹುಟ್ಟಿನಿಂದ ಸಾವಿನವರೆಗೆ ಮತ್ತು ಸೃಷ್ಟಿಯಿಂದ ಪ್ರಳಯದವರೆಗೆ (ಮನುಷ್ಯನಷ್ಟೇ ಅಲ್ಲದೆ) ಎಲ್ಲ ಸಚೇತನ–ಅಚೇತನ ಪದಾರ್ಥಗಳು ಕೇವಲ ಮಧ್ಯಮ–ಪ್ರಥಮ ಪೌರುಷೇಯ ಪದಾರ್ಥಗಳ ಮೇಲೆಯೇ ಅವಧಾನವನ್ನಿಟ್ಟುಕೊಂಡಿರುವುದು ಈ ಪ್ರಕಾರವಾಗಿಯೇ ; ಆದರೆ ಯಾರೂ ಅದನ್ನು ಪ್ರಥಮ ಪುರುಷವಾಚ್ಯವಾದ ಪದಾರ್ಥದ ಮೇಲೆ ಇಡುವುದಿಲ್ಲ. **"ಮೂಲಪಾಪ" ಎಂದರೆ ಪ್ರಾರಂಭದಶೆಯ ಈ ಪ್ರಮಾದವೇ !**

ಇನ್ನು ಕೆಲವರು, "ಹಾಗಲ್ಲ! ಪೂರ್ವ ಪಶ್ಚಿಮದೇಶಗಳೆರಡರಲ್ಲೂ ಅನೇಕರು ಮನಃ ಸ್ವಭಾವದ ಮೇಲೆ ಸಂಶೋಧನೆ ಮಾಡಿದ್ದಾರೆ ಮತ್ತು ಮನಃಶಾಸ್ತ್ರದ ಮೇಲೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ ! ಇದು ಉತ್ತಮ ಪುರುಷದತ್ತಣ ಅವಧಾನದಿಂದಲೇ ಲಬ್ಧವಾದುದಲ್ಲವೇ?" ಎಂದು ಅಡ್ಡ ಸವಾಲು ಹಾಕಬಹುದು.

ಅವರು ಯಾರಾದರೂ ಆಗಿರಲಿ–ಅವರು ಸರಿಯಾದ ಉತ್ತಮ ಪುರುಷದತ್ತ ಉನ್ಮುಖರಾಗಿದ್ದರೆ ಸಾಕು–ಅವರಿಗೆ ಆತ್ಮಜ್ಞಾನ (ಪರಬ್ರಹ್ಮಜ್ಞಾನ)ವಾಗಿ ಬಿಡುತ್ತಿತ್ತೆಂಬುದು ಸಂಪೂರ್ಣ ನಿಶ್ಚಿತವಾದ ಮಾತು. ಭಾರತದಲ್ಲಿ ಹಿಂದಿನ ಋಷಿಗಳೆಲ್ಲಾ ಇವರಿಂದಲೇ ಪರಮಜ್ಞಾನವನ್ನು ಪಡೆದರು! ಪಶ್ಚಿಮ ದೇಶದಲ್ಲೂ ಅಲ್ಲಿ ಇಲ್ಲಿ ಕೆಲವರು ಅದನ್ನು ಪಡೆಯಬಲ್ಲವರಾದರು. ಆದರೆ ಮನಃಶಾಸ್ತ್ರದ ಮೇಲಿನ ಪುಸ್ತಕಗಳನ್ನು ಬರೆದ ಆ ಗ್ರಂಥಕರ್ತರಲ್ಲಿ ಆ ಋಷಿಗಳಂತೆ ಯಾರಾದರೂ ಉಕ್ತ ನಿಗಮನಕ್ಕೆ ಬಾರದೆ ಹೋದರೆ, ಅವರು ಮಾಡಿದ ಯತ್ನವು ಅಚ್ಚುಕಟ್ಟಾದ ಹಾಗೂ ಸರಿಯಾದ ಉತ್ತಮ ಪುರುಷವೇದ್ಯ

ವಸ್ತುವಿನತ್ತಣ ಅವಧಾನವಾಗಿರಲೇ ಇಲ್ಲ. ಮನಃಶಾಸ್ತ್ರಕಾರರೆಲ್ಲಾ ಮಾಡಿದ್ದು ಮಧ್ಯಮ ಪೌರುಷೇಯ ವಸ್ತುವಾದ ಮನಸ್ಸಿನತ್ತ ತಮ್ಮ ಅವಧಾನವನ್ನು ಹರಿಯಿಸಿದ್ದು ಮಾತ್ರ! ಮನಸ್ಸಿನ ಉದಯ ಮತ್ತು ಕಾರ್ಯ ನಿರ್ವಹಣೆ ಎಂಬ ವಿಚಾರಗಳು ನಮಗೆ ಗೊತ್ತಾಗುವುದರಿಂದ, ಮನಸ್ಸೆಂಬುದು ಕೇವಲ ಮಧ್ಯಮ ಪುರುಷ ವೇದ್ಯವೂ ನಮಗೆ ಗೋಚರಿಸುವಂಥದೂ ಆದ ಪದಾರ್ಥವಾಗಿ ಹೋಗಿ, ಆ ಮೂಲಕ ಅದು ದ್ರಷ್ಟೃ ಸ್ವರೂಪದ ನಾನೆಂಬ ಕರ್ತೃವೆಂದೂ ಆಗಲಾರದು. ಅವರು ಮನಃಶಾಸ್ತ್ರವೆಂದು ಹೇಳುವುದು ಅವರು ಮಾಡಿದ ಮನಸ್ಸಿನ ವಿವಿಧ ಮುಖಗಳ ವಿಶ್ಲೇಷಣೆಯ ಫಲ; ಅದು ತನ್ನ ಕಾರ್ಯನಿರ್ವಹಣೆಯನ್ನು ಹೇಗೆ ಮಾಡುತ್ತದೆ. ಅದರಲ್ಲಡಗಿರುವ ಅದ್ಭುತ ಶಕ್ತಿಗಳಾವುವು, ಅವನ್ನು ಎಬ್ಬಿಸುವುದು ಹೇಗೆ, ಹಾಗೆ ಎಬ್ಬಿಸಿ ಬೆಳೆಯಿಸಿ ಅತೀಂದ್ರಿಯ ಶಕ್ತಿಗಳನ್ನು ಪಡೆಯುವುದಕ್ಕೆ ಅವುಗಳನ್ನು ಬಳಸಿಕೊಳ್ಳುವುದು ಹೇಗೆ ಮತ್ತು ಆ ಮೂಲಕ ಪವಾಡಗಳನ್ನು ಪ್ರಕಟಿಸುವುದು ಹೇಗೆ–ಎಂಬಿವೇ ಮೊದಲಾದಂಥವು ಆ ಫಲವಿಶೇಷಗಳು.

ಆದರೆ ಈ ಎಲ್ಲವೂ ಪ್ರವೃತ್ತಿ ವಿಜ್ಞಾನ ರೂಪದ ಮಧ್ಯಮ ಪುರುಷಾವಧಾನ (ವ್ಯಕ್ತಿನಿಷ್ಠತೆಗೆ ವಿರುದ್ಧವಾದ ವಸ್ತುನಿಷ್ಠಾ ರೂಪದ ಅವಧಾನ). ಸ್ಥೂಲ ವಸ್ತುಗಳಾದ ಪರಮಾಣುಗಳೇ ಮೊದಲಾದವುಗಳನ್ನು ವಿಜ್ಞಾನಿಗಳು ಅವಧಾನಿಸುವಂತೆ ಈ ಮನೋವಿಜ್ಞಾನಿಗಳೂ ಮನಸ್ಸಿನಂಥ ಸೂಕ್ಷ್ಮ ಪದಾರ್ಥವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ; ಎಷ್ಟು ಹೇಳಿದರೂ ಮನಸ್ಸೆಂಬುದು ಮಧ್ಯಮ ಪೌರುಷೇಯ ಪದಾರ್ಥ. ಆದುದರಿಂದ ಮನಃಶಾಸ್ತ್ರಕಾರರ (ಮನೋವಿಜ್ಞಾನಿಗಳ)ಅವಧಾನವು ವಸ್ತುನಿಷ್ಠಾರೂಪದ ಅವಧಾನ. ಅದೆಷ್ಟರಮಟ್ಟಿಗೂ ಆಲಯವಿಜ್ಞಾನರೂಪದ (ವ್ಯಕ್ತಿ ನಿಷ್ಠಾರೂಪದ) ಅವಧಾನವಲ್ಲ. ಮನಃಶಾಸ್ತ್ರ ರಾಜ್ಯದಲ್ಲಿಯ ಈ ಸಂಶೋಧನೆಗಳು ಸದಸತ್ ಸಮ್ಮಿಶ್ರಿತ ಫಲಗಳನ್ನು ಕೊಟ್ಟಿವೆ ; ಭೌತ ವಿಜ್ಞಾನದ ಸಂಶೋಧನೆಗಳೂ ನವನಿರ್ಮಿತಿಗಳೂ ತಂದಂತೆಯೇ ಇವುಗಳು ಸಮ್ಮಿಶ್ರ ಫಲಗಳನ್ನು ತಂದುಕೊಟ್ಟಿವೆ. ಆದರೆ ಈ ಎರಡರ ಫಲವೂ ಆತ್ಮಜ್ಞಾನವಲ್ಲ. (ಬ್ರಹ್ಮಾತ್ಮದ=ಪರಬ್ರಹ್ಮದ ಜ್ಞಾನವಲ್ಲ); ಅದೊಂದೇ ಸದಸತ್ತೆಂಬ ದ್ವಂದ್ವಗಳಿಗೆ ಅತೀತ (ಮೀರಿದ್ದು). “ವಿಚಾರ ಸಮುದಾಯ ರೂಪದ ಮನಸ್ಸನ್ನು (ಅಹಂಕಾರವೆಂಬ “ನಾಮ”ವನ್ನು) ಕೂಡಾ ಅರಿಯಬಲ್ಲ ಈ ನಾನು ಯಾರು?” ಈ ಪ್ರಕಾರ ಅವಧಾನ ಶಕ್ತಿಯನ್ನು (ನಿಜವಾದ) ಕರ್ತೃತ್ವವುಳ್ಳ ನಾನು ಎಂಬುದರ ಮೇಲೆ ಕೇಂದ್ರೀಕರಿಸುವುದೇ ಸರಿಯಾದ ಬಗೆಯ ಆತ್ಮಾವಧಾನ (ಬ್ರಹ್ಮಾತ್ಮಾವಧಾನ). ಈ ರೀತಿಯ ಬ್ರಹ್ಮಾತ್ಮಾವಧಾನದಲ್ಲಿ ತೊಡಗುವವರು ಯಾರಾದರೂ ಸರಿಯೆ– ಅವರು ಫಲರೂಪದಲ್ಲಿ ಆತ್ಮದ (ಬ್ರಹ್ಮಾತ್ಮದ) ಜ್ಞಾನವನ್ನು ಪಡೆದೇ ತೀರುವರು. ಈ ಉತ್ಸರ್ಗ ನಿಯಮಕ್ಕೆ ಅಪವಾದವೆಂಬುದಿಲ್ಲ.

ಭಗವಾನ್ ಶ್ರೀ ರಮಣರು ಅನುಗ್ರಹ ಪೂರ್ವಕವಾಗಿ ಈ ಶತಮಾನದಲ್ಲಿ ಭೂಲೋಕಕ್ಕೆ ಇಳಿದು ಬಂದದ್ದು ಏತಕ್ಕಾಗಿ ಎಂಬುದನ್ನು ತಿಳಿದುಕೋ. ಭಯೋತ್ಪಾದಕ ಯುದ್ಧಗಳಿಗೂ ರಕ್ತಪಾತಗಳಿಗೂ ಎಳೆದೊಯ್ಯುವ ಮಧ್ಯಮ–ಪ್ರಥಮ ಪೌರುಷೇಯ ಅವಧಾನಗಳೆಂಬ ಅಪಾಯಕರವಾದ ಕಾಲುವೆಗಳಲ್ಲಿ ಮನುಕುಲವು ತನ್ನ ಅಮೂಲ್ಯವೂ, ಅದ್ಭುತವೂ ಆದ ಶಕ್ತಿಯನ್ನು ಹರಿಯಿಸಿ ಹಾಳು ಮಾಡುತ್ತಿರುವುದನ್ನು ತಪ್ಪಿಸಿ–ಆ ಶಕ್ತಿಯನ್ನು– ಶಾಂತಿ, ಪ್ರಶಾಂತಿ, ಪ್ರಮೋದ (ಆನಂದ)ಗಳತ್ತ ಖಂಡಿತವಾಗಿ ಒಯ್ಯುವ ಉತ್ತಮ ಪುರುಷಾವಧಾನದತ್ತ ತಿರುಗಿಸಿ ಹರಿಯುವಂತೆ ಮಾಡುವುದೇ ಶ್ರೀ ರಮಣರ ಅವತಾರದ

ಉದ್ದೇಶ. ಮಾನವ ಮನವೆಂಬ ಯಂತ್ರೋಪಕರಣದಲ್ಲಿ ಉಪದ್ರವದ ಆಕರವು ನಿರ್ದಿಷ್ಟವಾಗಿ ಎಲ್ಲಿ ಹುದುಗಿಕೊಂಡಿದೆ ಎಂಬುದನ್ನು ಕಂಡು ಹಿಡಿದಿರುವ ತಜ್ಞರಾದ ಯಂತ್ರ ಶಿಲ್ಪಿಗಳು ಯಾರೆಂದರೆ ಅವರೇ. ಅವರು ವಿಶ್ವದ ಮಹಾಗುರು (ಲೋಕ ಮಹಾಗುರು) ಗಳಾಗಿರುವುದರಿಂದ ಈ ಮಾನವ್ಯ ಯಂತ್ರವನ್ನು ಸರಿಮಾಡುವುದು ಹೇಗೆ? ಎಂಬುದು ಅವರಿಗೆ ಗೊತ್ತು. ಮಾನವ್ಯ ಮನ ಎಂಬ ಯಂತ್ರೋಪಕರಣದ ಒಳ–ಹೊರಗೆಲ್ಲವುಗಳ ಸಂಪೂರ್ಣ ಪರಿಚಯವಿರುವುದರಿಂದ ಅವರಿಗೆ ಇಡೀ ಜಗತ್ತಿಗಾಗಿ ಸರಳವೂ ಸುಲಭವೂ ಆದ ಒಂದು ಮಾರ್ಗವನ್ನು ತೋರಿಸಲು ಸಾಧ್ಯವಾಗಿದೆ. ಯಾರೇ ಆಗಲಿ–ಸುಲಭವಾಗಿ ಸ್ವೀಕರಿಸಿ ಅನುಸರಿಸಬಹುದಾದ ಮತ್ತು ದೃಢವೂ ಅತ್ಯುತ್ತಮವೂ ಆದ ಪ್ರಮಾಣಗಳಿರುವ ಮಾರ್ಗ ಎಂದರೆ ಆತ್ಮಶೋಧದ (ಬ್ರಹ್ಮಾತ್ಮವನ್ನು ಹುಡುಕಿಕೊಂಡು ಹೋಗುವ) ಮಾರ್ಗವೇ ಆಗಿದೆ.

ವಿಜ್ಞಾನ ಮತ್ತು ಮತಧರ್ಮಗಳಿಂದ ದೊರಕಿದ ಒಳಿತನ್ನು (ಪ್ರಯೋಜನವನ್ನು) ಹೀಗಳೆಯುವಂಥ ಗುರುಗಳು ಭಗವಾನ್ ಶ್ರೀ ರಮಣರಲ್ಲ ; ಆದರೆ ಅದೇ ವೇಳೆಗೆ ಹೇಳಬೇಕಾದುದೆಂದರೆ ಅವರು ಪಂಥ, ತತ್ವಶಾಸ್ತ್ರ ಅಥವಾ ಮತಧರ್ಮ ಎಂಬ ಯಾವ ಒಂದಕ್ಕೂ ಸೇರಿದವರಲ್ಲ. ಅವರೆಂದೂ ತಮ್ಮ ಹೆಸರಿನಲ್ಲಿ ಯಾವ ಒಂದು ಮತಧರ್ಮವನ್ನೇ ಆಗಲಿ, ಸ್ಥಾಪಿಸಿ ಪ್ರಚುರ ಪಡಿಸಲು ಬಯಸಲಿಲ್ಲ ; ಏಕೆಂದರೆ, ಮತ ಧರ್ಮಗಳು ಮನಸ್ಸಿನ ಕಕ್ಷೆಯೊಳಗೆ ಬರುತ್ತವೆ ; ಆದರೆ ಶ್ರೀ ರಮಣರು ಮನದ ಆಚೆಗಿನ ಬ್ರಹ್ಮಾತ್ಮವನ್ನು ಎತ್ತಿ ತೋರಿಸುತ್ತಾರೆ. ಆದುದರಿಂದ, ಶ್ರೀ ರಮಣರ ಮಾರ್ಗವು ಮತಧರ್ಮವಲ್ಲವೇ ಅಲ್ಲ! ಅವರ ಮಾರ್ಗವನ್ನು ಅದ್ವೈತ ಎಂದು ಕರೆಯುವುದೂ ಕೂಡಾ ಅಷ್ಟು ಸರಿಯಾದುದೆನ್ನಿಸದು. ಅದ್ವೈತವು ದ್ವೈತ ಸಾಪೇಕ್ಷವಾಗಿದೆ ; ದ್ವೈತದ ಅರ್ಥ ಇರುವಾಗಲೇ ಅದ್ವೈತಕ್ಕೆ ಅರ್ಥ ಉಂಟಾಗುತ್ತದೆ. "ಪರಮಾರ್ಥ ಸತ್" ಎಂಬುದೇ ನಿರಪೇಕ್ಷವಾದ ಪರಮ ಸತ್ಯ. ಅದರಲ್ಲಿ (ಶ್ರೀ ರಮಣರ) ಮಾರ್ಗವೂ ಗುರಿಯೂ ಒಂದೇ ಆಗಿರುವುದೆಂದು ಪ್ರಸಿದ್ಧ–ಅಂದರೆ ಶ್ರೀ ರಮಣ ಮಹರ್ಷಿಗಳ ಪ್ರಕಾರ "ಸತ್ಯವನ್ನು ನೋಡುವುದು (ರಮಣದರ್ಶನಂ)".

ಭಗವಾನ್ ಶ್ರೀ ರಮಣರು ನಮಗೆ ತೋರಿಸಿಕೊಟ್ಟಿರುವುದಿದು : "ಉತ್ತಮ ಪುರುಷನ (ಬ್ರಹ್ಮಾತ್ಮನ = ಪರಮಾರ್ಥಸತ್ತಿನ) ಸರಿಯಾದ ಜ್ಞಾನವನ್ನು ಮನುಕುಲವು ಪಡೆಯದಿರುವುದರಿಂದಲೇ ಅದಕ್ಕೆ ಮಧ್ಯಮ ಪ್ರಥಮ ಪುರುಷವಾಚ್ಯಗಳಾದ ವಸ್ತುಗಳ ಸತ್ಯವನ್ನು ಹಸ್ತಗತ ಮಾಡಿಕೊಳ್ಳುವುದು ಅಸಾಧ್ಯವಾಗಿ ಹೋಗಿದೆ ಮತ್ತು ಮಧ್ಯಮ ಮತ್ತು ಪ್ರಥಮ ಪುರುಷಗಳಿಂದ ವಾಚ್ಯವಾದ ವಸ್ತುಗಳ ತಪ್ಪು ತಿಳುವಳಿಕೆಯಿಂದ (ಅಂದರೆ ಅವು ಉತ್ತಮ ಪೌರುಷೇಯ ಸತ್ಯಕ್ಕಿಂತ ಏನೋ ಒಂದು ವಿಧದಿಂದ ಭಿನ್ನ ಎಂದು ಗ್ರಹಿಸುವುದರಿಂದ) ಮಾನವರ ಜ್ಞಾನವೆಲ್ಲಾ ಗೊಂದಲಗೆಟ್ಟು ಹೋಗಿದೆ, ತೊಳಸಂಬಟ್ಟೆಯಾಗಿದೆ ; ಹಾಗೂ ಹಾಗಾದುದರ ಫಲವಾಗಿ ಮನುಕುಲಕ್ಕೆ ವಿಘ್ನಗಳು ಮುತ್ತಿಕೊಂಡಿವೆ." ಅವರು ಸಂಪೂರ್ಣ ಆಧ್ಯಾತ್ಮಿಕ ವೈದ್ಯರಾದುದರಿಂದ (ಭವರೋಗ ಭೇಷಜರಾದುದರಿಂದ) ಮೇಲೆ ಹೇಳಿದಂತೆ ಕಾಹಿಲೆಯನ್ನು ಸರಿಯಾಗಿ ಹುಡುಕಿ ತೆಗೆದು (ರೋಗ ನಿದಾನ ಮಾಡಿ) ಅನಂತರ ಔಷಧ ಪಥ್ಯಗಳನ್ನು ಹೇಳಿದ್ದಾರೆ. (ಮನುಕುಲಕ್ಕೆ ತಕ್ಕ ಔಷಧ) ಮದ್ದು : ಬ್ರಹ್ಮಾತ್ಮಾವಧಾನ ಮಾಡುವುದು (ಅಂತರ್ಮುಖವಾಗುವುದು);

ಪಥ್ಯ : ಆಹಾರನಿಯಮನ–ಅಂದರೆ–ಮಧ್ಯಮ–ಪ್ರಥಮ ಪೌರುಷೇಯ ವಸ್ತುಗಳತ್ತ ಲಕ್ಷ್ಯ ಹಾಕುವುದನ್ನು (ಬಹಿರ್ಮುಖವಾಗುವುದು) ಬಿಡುವುದು–ಅದರಿಂದ "ಮೂಲ ಪಾಪ" ವನ್ನು ತೊಳೆದು ಹಾಕಿದಂತಾಗುವುದು. ಗಭೀರತರ ಅಂತಃದೃಷ್ಟಿಯಿಂದ ನೋಡುವವರಿಗೆ ಮದ್ದೆಂದರೆ ಭಕ್ತಿಯೆಂದೂ ಪಥ್ಯವೆಂದರೆ ವೈರಾಗ್ಯವೆಂದೂ ತಿಳಿದು ಬರುತ್ತದೆ. "ನಾನು ಯಾರು?" ಎಂಬ ರೂಪದಲ್ಲಿರುವ ಬ್ರಹ್ಮಾತ್ಮಾವಧಾನದ ಸರಿಯಾದ ಕ್ರಮವನ್ನು ಅವರು ವಿಶದಪಡಿಸಿದ್ದಾರೆ. ಇದೆಲ್ಲವನ್ನೂ ಅವರು ತಮ್ಮ ಸ್ವಂತದ ನೇರವಾದ ಅನುಭವದಿಂದ ಹೇಳುತ್ತಾರೆ. ಆ ಅನುಭವವು ಪರಮಸತ್ಯದ್ದು (ಅಪರೋಕ್ಷಾನುಭೂತಿ)–ಎಂದರೆ, ಬ್ರಹ್ಮಾತ್ಮಜ್ಞಾನದ ಅಪರೋಕ್ಷಾನುಭವ. ಅದು ತಾನೇ ತಾನಾಗಿ ಅವರಿಗೆ ಹೊಳೆದಿತ್ತು. ಅವರಿಗದು ಶಾಸ್ತ್ರ ಪಠನದಿಂದ ಅಥವಾ ಆಧ್ಯಾತ್ಮಿಕ ಗುರುವಿನಿಂದ ಬಂದದ್ದಲ್ಲ (ಹೊಳೆದದ್ದಲ್ಲ). ಆದುದರಿಂದ ಈ ಗ್ರಂಥದ ಉದ್ದೇಶವೇನೆಂದರೆ, ಮನುಕುಲವು ಈಗಲಾದರೂ ತನ್ನ ಜ್ಞಾನಶಕ್ತಿಯೆಂಬ ಆಯುಧವನ್ನು ಸರಿಯಾದ ಲಕ್ಷ್ಯದ ಮೇಲೆ ಪ್ರಯೋಗಿಸಲು ಕಲಿಯಲಿ ಎಂಬುದೇ ಆಗಿದೆ.

"ಹಾಗಾದರೆ, ಜಗತ್ತು ಮತ್ತು ದೇವರು (ಈಶ್ವರ, ಪರಮಾತ್ಮ) ಎಂಬ ಮಿಕ್ಕೆರಡು ಪದಾರ್ಥಗಳನ್ನು ತಿಳಿದುಕೊಳ್ಳುವ ಅಗತ್ಯವೇ ಇಲ್ಲವೇ?" ಎಂಬುದಾಗಿ ಯಾರಾದರೂ ಕೇಳಬಹುದು ; "ಹಾಗೆ ತಿಳಿದುಕೊಳ್ಳುವ ಯತ್ನವೆಲ್ಲಾ ವ್ಯರ್ಥವೇ?" ಎಂದೂ ಪ್ರಶ್ನಿಸಬಹುದು." "ಅಲ್ಲ– ಅದು ವ್ಯರ್ಥವಲ್ಲ ; ಅದು ಅವಶ್ಯಕ – ಆದರೆ ಅವುಗಳನ್ನು ಸರಿಯಾಗಿ ವಿವೇಚಿಸಿ ತಿಳಿದುಕೊಂಡರೆ ಮಾತ್ರ ಸಾರ್ಥಕ" ಎಂಬುದೇ ಉಕ್ತ ಪ್ರಶ್ನೆಗೆ ಉತ್ತರ. ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ಫಲಿತಾಂಶವು ವಿರುದ್ಧವಾದೀತು. ಈ ವಿರುದ್ಧ ಫಲಿತಾಂಶಗಳನ್ನು ದೂರ ಮಾಡುವುದಕ್ಕಾಗಿಯೇ–ಅವು ತಪ್ಪು ತಿಳುವಳಿಕೆಯಿಂದ ಫಲಿಸುವಂಥವುಗಳಾದುದರಿಂದ – ಜಗತ್ತು ಮತ್ತು ದೇವರುಗಳ ಮೇಲಿನ ಸಂಶೋಧನೆಗಳನ್ನು ಬಿಟ್ಟುಕೊಡುವ ಮತ್ತು ಉತ್ತಮ ಪುರುಷದ ಬಗೆಗಿನ ಸಂಶೋಧನೆಯನ್ನು ಪ್ರಾರಂಭಿಸುವ (ಆತ್ಮಾವಧಾನ ಮಾಡುವ) ಕೆಲಸಗಳನ್ನು ಈ ಹಂತದಲ್ಲಿ ಶಿಫಾರಸ್ಸು ಮಾಡಲಾಗಿದೆ. ಸರಿಯಾಗಿ ತಿಳಿದುಕೊಂಡರೆ ಜಗತ್ತಿನ ಮತ್ತು ದೇವರ ಜ್ಞಾನವು ಬ್ರಹ್ಮಾತ್ಮವನ್ನು ತಿಳಿದುಕೊಳ್ಳುವುದರ ಅಗತ್ಯವನ್ನು ಒತ್ತಿ ಹೇಳುವುದಲ್ಲದೆ ಆತ್ಮಾವಧಾನ ಮಾಡಿ ಆತ್ಮದಲ್ಲೇ (ಬ್ರಹ್ಮಾತ್ಮದಲ್ಲೇ) ನೆಲೆನಿಂತಿರುವುದನ್ನೂ ಪ್ರೋತ್ಸಾಹಿಸುತ್ತದೆ. ಅಷ್ಟೇ ಅಲ್ಲ – ಜಗತ್ತು ಮತ್ತು ದೇವರುಗಳ ಮೇಲೆ ಆಗಲೇ ಮಾಡಲಾದ ಸಂಶೋಧನೆಗಳ ಸತ್‌ಫಲಗಳನ್ನು ಮನುಕುಲದ ಅತಿಹೆಚ್ಚಿನ ಪ್ರಯೋಜನಕ್ಕಾಗಿ ಬಳಸಿಕೊಳ್ಳುವುದು ಹೇಗೆ? ಎಂಬುದನ್ನು ತಿಳಿದುಕೊಳ್ಳುವುದರಲ್ಲಿಯೂ ಅದು ನೆರವೀಯುತ್ತವೆ. ಈ ಅಪೇಕ್ಷೆಯಿಂದ ಮಾತ್ರ ಜಗತ್ತನ್ನೂ ದೇವರನ್ನೂ ಸ್ವಲ್ಪ ಸೂಕ್ಷ್ಮಾವಲೋಕನ ಮಾಡಲು ಯತ್ನಿಸೋಣ. ಭಗವಾನ್ ಶ್ರೀ ರಮಣರನ್ನು ಅನೇಕರು ಜಗತ್ತು ಹೇಗೆ ಸೃಷ್ಟಿಸಲ್ಪಟ್ಟಿತು ಎಂಬಂಥ ಪ್ರಶ್ನೆಗಳಿಂದ ಜಗತ್ತಿನ ಬಗೆಗೂ ಅದರ ನಿರ್ಮಾತೃವಾದ ದೇವರ ಬಗೆಗೂ ಕೇಳುತ್ತಿದ್ದರು. ಶ್ರೀ ಭಗವಾನ್ ರಮಣರು ಅವರಿಗೆ ಕೊಟ್ಟ ಉತ್ತರಗಳ ಸಾರಾಂಶವನ್ನು ಮಾತ್ರ ನಾವು ನೋಡೋಣ.

ಜಗತ್ತನ್ನು ಸಂಸ್ಕೃತದಲ್ಲಿ "ಲೋಕ" ಎನ್ನುತ್ತಾರೆ. ವ್ಯುತ್ಪತ್ತಿಶಾಸ್ತ್ರದ ಪ್ರಕಾರ ಅದರ ಅರ್ಥವು "ದೃಷ್ಟ" ಎಂದಾಗುವುದಲ್ಲದೆ "ಸತ್" (ಇರುವ ವಸ್ತು) ಎಂದಾಗದು. ದೃಷ್ಟವು ನೋಡಲ್ಪಟ್ಟದ್ದು. ಅದನ್ನು ಸರಿಯಾಗಿ ತಿಳಿದುಕೊಂಡೇ ಮಹರ್ಷಿಗಳು ಅದಕ್ಕೆ ಆ

ಹೆಸರನ್ನಿಟ್ಟರು. ಭಗವಾನ್ ಶ್ರೀ ರಮಣರು ರಚಿಸಿದ "ಉಳ್ಳದು ನಾರ್ಪದು"ವಿನ ಮೊದಲನೆಯ ಪದ್ಯದ ಮೊದಲನೆಯ ಸಾಲಿನಲ್ಲಿ ಈ ಭಾವವು ಸೂಚಿತವಾಗಿದೆ :

"ನಾವು ಜಗತ್ತನ್ನು ಪ್ರತ್ಯಕ್ಷವಾಗಿ ನೋಡುವುದರಿಂದ, ಅನೇಕವಾಗಿ ನೋಡಲ್ಪಡುವ ಶಕ್ತಿಯನ್ನುಳ್ಳ ಏಕ ತತ್ವವನ್ನು ಸ್ವೀಕರಿಸುವುದು ಸರ್ವಾನುಮತವಾಗಿದೆ :"

ಇಲ್ಲಿ "ನಾವು" ಎಂದರೆ ಜೀವ–ಉತ್ತಮಪುರುಷ–ತ್ರಿಮೂರ್ತಿಗಳಲ್ಲಿ (ಪುರುಷತ್ರಯದಲ್ಲಿ) ಮೊದಲನೆಯದು. "ಜಗತ್ತನ್ನು ಪ್ರತ್ಯಕ್ಷವಾಗಿ ನೋಡುವುದರಿಂದ" ಎಂಬ ಪದಗಳಿಂದ ಆತ್ಮೇತರ (ಪರಬ್ರಹ್ಮೇತರ) ಪದಾರ್ಥಗಳೆರಡಲ್ಲಿ ಒಂದಾದ ಜಗತ್ತು ಕೇವಲ ತೋರಿಕೆಯದು ಎಂಬುದೂ ಅದರಿಂದಲೇ ಅದನ್ನು "ಲೋಕ"ವೆಂದು ಕರೆಯಲಾಗಿದೆ ಎಂಬುದೂ ತಿಳಿಯಬೇಕಾದ ಅಂಶಗಳು. "ಅನೇಕವಾಗಿ ನೋಡಲ್ಪಡುವ ಶಕ್ತಿಯನ್ನುಳ್ಳ ಏಕ ತತ್ವ" ಎಂಬ ಪದಗಳು "ಪದಾರ್ಥತ್ರಯವನ್ನು ಮೀರಿದ ಪರಮ ಪುರುಷ" ಎಂಬುದನ್ನು ಹೇಳುತ್ತವೆ. ಉತ್ತಮ ಪೌರುಷೇಯ ಭಾವನೆಯಾದ "ನಾನು" ಎಂಬ ವಿಚಾರವು ನಿದ್ರೆಯಿಂದ ಎದ್ದ ಮೇಲೆಯೇ ಮಧ್ಯಮ ಪೌರುಷೇಯ ವಿಚಾರವಾದ ಜಗತ್ತನ್ನು ಸ್ವೀಕರಿಸುವುದು ಸ್ವಾಭಾವಿಕವಾಗಿ ಕ್ರಮ ಪ್ರಾಪ್ತವಾಗುತ್ತದೆ ; ಆಮೇಲೆ ಈ ವಿಶಾಲವೂ ಆಶ್ಚರ್ಯಕರವೂ ಆದ ವಿಶ್ವದ ನಿರ್ಮಾಣಕ್ಕೆ ಹೊಣೆಗಾರನಾದ ಪ್ರಥಮ ಪುರುಷ ಎನ್ನಿಸಿದ ಸರ್ವಶಕ್ತನಾದ ದೇವರ ಅಸ್ತಿತ್ವವನ್ನು ಸ್ವೀಕರಿಸುವ ಅಗತ್ಯವು ಉಂಟಾಗುವುದು. ಆದುದರಿಂದ ಸುಷುಪ್ತಿಯಲ್ಲಿ ಇಲ್ಲದ "ನಾನಿದು" ಎಂಬ ಉತ್ತಮ ಪುರುಷವಾಚ್ಯವಾದ ಭಾವನೆಯು ಎದ್ದ ಮೇಲೆ ಜಾಗ್ರದವಸ್ಥೆಯಲ್ಲಿರುವ ಯಾರೇ ಆದರೂ "ಜಗತ್ತು ಮತ್ತು ದೇವರು" ಎಂಬ ಎರಡು ಪದಾರ್ಥಗಳನ್ನು ಸ್ವೀಕರಿಸದೇ ಇರಲಾರರು. ಉತ್ತಮ ಪೌರುಷೇಯವಾದ "ನಾನು" (ಅಹಂಕಾರ) ಎಂಬುದು ಏಳದೆ ಇರುವಾಗ ಮಾತ್ರ ಜಗತ್ತೂ ದೇವರೂ ಇಲ್ಲವಾಗಿರುತ್ತಾರೆ ಮತ್ತು (ಅಹಂಕಾರಾಭಾವದ ದೆಸೆಯಿಂದ) ಅವುಗಳನ್ನು ಸ್ವೀಕರಿಸುವ ಅಗತ್ಯವು ಉಂಟಾಗದು. ನಾವು ಚೆನ್ನಾಗಿ ತಿಳಿದುಕೊಳ್ಳಬೇಕಾದ, ಮುಂದೆ ಹೇಳಲಾಗುವ ಭಗವಾನ್ ಶ್ರೀ ರಮಣರ ಪದ್ಯ ಪಂಕ್ತಿಗಳಿಂದ ಈ ವಿಷಯವು ಸ್ಪಷ್ಟವಾಗುವುದು:

"ನಾನು ಎದ್ದ ಮೇಲೆ ಎಲ್ಲವೂ ಏಳುವುವು

– "ಉಳ್ಳದು ನಾರ್ಪದು"ವಿನ ೨೩ನೆಯ ಪದ್ಯ(ನುಡಿ).

"ಅಹಂಕಾರವು ಅಸ್ತಿತ್ವಕ್ಕೆ ಬಂದರೆ (ಜಗತ್ತೂ ದೇವರೂ) ಉಳಿದೆಲ್ಲವೂ ಅಸ್ತಿತ್ವಕ್ಕೆ ಬರುವುವು. ಅಹಂಕಾರವಿಲ್ಲವಾದರೆ ಮಿಕ್ಕೆಲ್ಲವೂ ಇಲ್ಲವಾಗುವುವು. ನಿಜವಾಗಿಯೂ ಅಹಂಕಾರವೇ ಎಲ್ಲವೂ ಆಗಿದೆ."

– "ಉಳ್ಳದು ನಾರ್ಪ.ದು" ವಿನ ೨೬ನೆಯ ಪದ್ಯ.

"ನಾನು ಎಂಬ ವಿಚಾರವಿಲ್ಲದಿದ್ದರೆ ಮಿಕ್ಕ ಯಾವುದೂ ಇರದು."

– "ಶ್ರೀ ಅರುಣಾಚಲ ಅಷ್ಟಕಂ" ಎಂಬುದರ ೭ನೆಯ ಪದ್ಯ.

ಈ ಜಗತ್ತು ಹೇಗೆ ಅಸ್ತಿತ್ವಕ್ಕೆ ಬಂದು, ಮುಂಬರಿದು, ಅನಂತರ ಅದೃಶ್ಯವಾಗುತ್ತದೆ? ಮಾನವ್ಯ ಮನಸ್ಸಿಗೆ ಯಾವುದಾದರೂ ಒಂದು ಕಾರ್ಯದ "ಆಕರ" ಯಾ "ಕಾರಣ" ಯಾ "ಕರ್ತ" ಎಂಬುದರ ಬಗೆಗೆ ಊಹಿಸುವುದು ರೂಢಿಯಾಗಿರುವುದರಿಂದ ಈ ಬೃಹದಾಕೃತಿಯ

ಅದ್ಭುತವಾದ ಜಗತ್ತಿಗೊಬ್ಬ ಸೃಷ್ಟಿಕರ್ತನಿರುವುದನ್ನೂ ಅವನನ್ನು ತಿಳಿದುಕೊಳ್ಳುವುದನ್ನೂ ಬಯಸದೆ ಬಿಡಲಾರದು. ಈ ಮನಃ ಪ್ರಣಾಲಿಗನುಗುಣವಾಗಿ ವೇದಗಳು ಮೊದಲು ಸೃಷ್ಟಿ ಕ್ರಮದ ವಿಸ್ತಾರವಾದ ವರ್ಣನೆಗಳನ್ನು ಮಾಡುವುವು–ಜಗತ್ತೂ ಜೀವಜಾತವೂ ಹೇಗೆ ಕ್ರಮಶಃ ಅಸ್ತಿತ್ವಕ್ಕೆ ಬಂದವು ಎಂಬುದನ್ನು ಹೇಳುವುವು. ಕೆಲವರು ಶ್ರೀ ಭಗವಾನ್ ರಮಣರನ್ನು ಬೇರೆ ಬೇರೆ ವೇದಭಾಗಗಳಲ್ಲಿ ಬೇರೆ ಬೇರೆ ವಿಧವಾಗಿಯೂ ವ್ಯಾಘಾತ ಉಂಟಾಗುವಂತೆಯೂ ಸೃಷ್ಟಿಕ್ರಮವನ್ನು ವರ್ಣಿಸಲಾಗಿರುವುದೇಕೆ ಎಂದು ಕೇಳಿದಾಗ – "ಸೃಷ್ಟಿಯು ನಿಜವಾಗಿದ್ದರೆ ಅದರ ಕ್ರಮವನ್ನು (ಪ್ರಕ್ರಿಯಾ ಸಂತಾನವನ್ನು) ವೇದಗಳಲ್ಲಿ ಒಂದೇ ವಿಧವಾಗಿ ಕೊಡಲಾಗುತ್ತಿತ್ತು. ಆದರೆ ಆ ಕ್ರಮವನ್ನು ಭಿನ್ನವೂ ವ್ಯಾಹತಿಯುಕ್ತವೂ ಆದ ರೀತಿಗಳಿಂದ ಅನೇಕ ವಿಧವಾಗಿ ಕೊಟ್ಟಿರುವುದರಿಂದಲಾದರೂ ಸೃಷ್ಟಿಯು ಅವಾಸ್ತವಿಕವೆಂಬುದು ಸ್ಪಷ್ಟವಾಗುವುದಿಲ್ಲವೇ? ಸೃಷ್ಟಿಕ್ರಮದ ಸರಿಯಾದ ವರ್ಣನೆಯನ್ನು ಮಾಡುವುದು ವೇದಗಳ ನಿಜವಾದ ಉದ್ದೇಶವಲ್ಲ. ಆದರೆ ಸದಾ ಅಸತ್ತಾಗಿರುವ ಜಗತ್ತು ಅವಾಸ್ತವಿಕವೆಂದೂ ಸದಾ ಸತ್ತಾಗಿರುವ ಬ್ರಹ್ಮಾತ್ಮವೊಂದೇ ವಾಸ್ತವಿಕವೆಂದೂ ಸ್ಪಷ್ಟಪಡಿಸುವುದು ಮಾತ್ರ ಅವುಗಳ ಮುಖ್ಯೋದ್ದೇಶ" – ಎಂದು ಭಗವಾನ್ ಶ್ರೀ ರಮಣರು ಉತ್ತರ ಕೊಟ್ಟರು. ಸಾಮಾನ್ಯನ ಮನಸ್ಸು ಸೃಷ್ಟಿಕ್ರಮದ ಯಾವುದಾದರೂ ಒಂದು ವಿಧದ ವರ್ಣನೆಯಿಂದಲ್ಲದೆ ತೃಪ್ತಿ ಹೊಂದಲಾರದೆಂಬ ಕಾರಣದಿಂದ ವೇದಗಳು ಒಂದಲ್ಲಾ ಒಂದು ಕಾಲಕ್ರಮಗತಿಯ ಸೃಷ್ಟಿವಿಕಾಸ ವಿಧಾನವನ್ನು (ಕ್ರಮ ಸೃಷ್ಟಿಯನ್ನು) ಕೊಡುತ್ತವೆ. ಹೆಚ್ಚು ಪರಿಪಕ್ವ ಮನಸ್ಸನ್ನುಳ್ಳವರಿಗೆ ಅವು ರಜ್ಜುಸರ್ಪನ್ಯಾಯ, ಮರುಮರೀಚಿಕಾನ್ಯಾಯ, ಆಕಾಶ ನೀಲಿಮ ನ್ಯಾಯ ಮುಂತಾದ ಉಪಮೆಗಳ ಮೂಲಕ ದ್ರಷ್ಟಾರನ ದೃಷ್ಟಿದೋಷದಿಂದ ಜಗತ್ತು ತೋರುತ್ತದೆ ಎಂದು ವಿವರಿಸುತ್ತದೆ. ಇನ್ನೂ ಹೆಚ್ಚು ಪರಿಪಾಕ ಹೊಂದಿದ ಮನಸ್ಸನ್ನುಳ್ಳವರಿಗೆ, "ಅನವಧಾನದ ದೆಸೆಯಿಂದ (ಪ್ರಮಾದದ ಯಾ ಅವಿಚಾರದ ದೆಸೆಯಿಂದ) ಬ್ರಹ್ಮಾತ್ಮಾಧಾರವನ್ನು ನೀವು ಕಳೆದುಕೊಂಡಿರುವುದರಿಂದ ಜಗತ್ತು ನಿಮಗೆ ತೋರುತ್ತದೆ" ಎಂದು ಅವು ವಿವರಿಸುತ್ತವೆ. ಜಗತ್ತಿನ ಆಭಾಸಿಕತೆಯನ್ನಾದರೂ, ಕೊನೆಯ ಪಕ್ಷ ಅನುಮತಿಸಿ, ವೇದಗಳು ಈ ಪ್ರಕಾರವಾಗಿ (ಏಕಕಾಲಿಕ) ಸಮಕಾಲಿಕ ಸೃಷ್ಟಿಯನ್ನು (ಯುಗಪತ್ ಸೃಷ್ಟಿಯನ್ನು) ಕಲಿಸುತ್ತವೆ. ಆದರೆ ಸಂಪೂರ್ಣ ಪರಿಪಕ್ವ ಮನಸ್ಸನ್ನುಳ್ಳವರಿಗೆ – ಅವರ ಮನಸ್ಸು ಇನ್ನಷ್ಟು ಸ್ಪಷ್ಟವೂ ಧೈರ್ಯಯುಕ್ತವೂ ಆಗಿರುವುದರಿಂದ – "ನೀವು ನೋಡುತ್ತಿರುವುದು ಜಗತ್ತಲ್ಲ, ನೀವೇ ; ಅರ್ಥಾತ್ ಬ್ರಹ್ಮಾತ್ಮವೇ" ಎಂದು ಅವು ಹೇಳುತ್ತವೆ. "ಯಾವುದೂ ಎಂದೂ ಸೃಷ್ಟವಾಗಿರಲಿಲ್ಲ !" ಎಂಬುದು ವೇದವಾದ. ಹೀಗೆ ಅವು ಅಜಾತವನ್ನು (ಅಜಾತಿವಾದವನ್ನು) ಘೋಷಿಸುತ್ತವೆ.

ಜಗತ್ತು ಯಾವ ರೀತಿಯಿಂದ ಏಕಕಾಲಿಕವಾಗಿ ಸೃಷ್ಟವಾಯಿತು? ಏಕಕಾಲಿಕ ಸೃಷ್ಟಿ ಸಿದ್ಧಾಂತದ ಪ್ರಕಾರ ಯಾವಾಗ ಶ್ರೀ ರಮಣರು ಜಗತ್ತು ಹೇಗೆ ದೃಶ್ಯವಾಗುವುದೆಂಬುದನ್ನು ವಿವರಿಸ ಹೊರಡುತ್ತಾರೋ ಆವಾಗಲೆಲ್ಲಾ ಸಿನಿಮ ಪ್ರೊಜೆಕ್ಟರಿನ (ಚಲಚ್ಚಿತ್ರ ಪ್ರಕ್ಷೇಪಕದ) ಉದಾಹರಣೆಯನ್ನು ತೆಗೆದುಕೊಳ್ಳುತ್ತಿದ್ದರು. "ವಿಶ್ವಂ.... ನಗರಿ" ಎಂಬ ವಾಕ್ಯದ ಮೂಲಕ ಶ್ರೀ ಆದಿಶಂಕರರು ಈ ಸಿದ್ಧಾಂತವನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸಲಾದ ನಗರವೆಂದು ಹೇಳಿ ವಿವರಿಸುತ್ತಿದ್ದರೆಂದು ಒಮ್ಮೆ ಶ್ರೀ ರಮಣರು ಹೇಳಿದ್ದುಂಟು. ಅವರ ಕಾಲದಲ್ಲಿ (ಶ್ರೀ

ಶಂಕರಾಚಾರ್ಯರ ಕಾಲದಲ್ಲಿ) ಕನ್ನಡಿಗಿಂತ ಹೆಚ್ಚು ಉತ್ತಮವಾದ ಉದಾಹರಣ ವಸ್ತುವು ಇರಲಿಲ್ಲ. ಈಗ ಅವರು ಬದುಕಿದ್ದಿದ್ದರೆ, ಖಂಡಿತವಾಗಿಯೂ ಚಲಚ್ಚಿತ್ರ ಪ್ರಕ್ಷೇಪಕದ ಸೂಕ್ತ ಉದಾಹರಣೆಯನ್ನೇ ತೆಗೆದುಕೊಳ್ಳುತ್ತಿದ್ದರು. ನಾವೀಗ ಉದಾಹರಣೆಯನ್ನು ಪರಿಶೀಲಿಸೋಣ :

ಚಲಚ್ಚಿತ್ರ ಪ್ರಕ್ಷೇಪಕದಲ್ಲಿ ಒಂದು ಆರ್ಕ್‌ಲೈಟ್ (ಚಾಪದೀಪ) ಇರುತ್ತದೆ. ಫಿಲ್ಮ್ ಅಥವಾ ಚಿತ್ರಾಕರವು ಅದರೆದುರಿಗಿರುತ್ತದೆ. ಅದರ ಮುಂದೆ ಭೂತಗನ್ನಡಿಯಿರುತ್ತದೆ. ಬೆಳಕಿನ ಕಿರಣಗಳು ಚಿತ್ರಾಕರದ ಹಾಗೂ ಭೂತಗನ್ನಡಿಯ ಮೂಲಕ ಹರಿದು ಹೋಗುವುದರಿಂದ ಪರದೆಯ ಮೇಲಿನ ಚಿತ್ರಗಳು ಪ್ರಕ್ಷೇಪಕ ಯಂತ್ರದಿಂದ ಬಹಳ ದೂರದಲ್ಲಿರುವಂತೆ ತೋರುತ್ತವೆ. ಬ್ರಹ್ಮಾತ್ಮವು ಚಲಚ್ಚಿತ್ರ ಪ್ರಕ್ಷೇಪಕದಲ್ಲಿರುವ ಪ್ರಜ್ವಲ ಚಾಪದೀಪದಂತೆ ಹೊಳೆಯುತ್ತದೆ. ಶರೀರವು[೨] ಪ್ರಕ್ಷೇಪಕ ಯಂತ್ರದಂತಿದೆ. ಪ್ರಕ್ಷೇಪಕದ ದೀಪದ ಹತ್ತಿರದಲ್ಲಿರುವ ಚಿತ್ರಾಕರದಂತೆ ವಾಸನೆಗಳಿವೆ. ಪಂಚೇಂದ್ರಿಯಗಳು ಪ್ರಕ್ಷೇಪಕದ ಕನ್ನಡಿಯಂತೆ ವರ್ತಿಸುತ್ತವೆ. ವಿಚಾರಗಳ ಸೂಕ್ಷ್ಮರೂಪಗಳಾದ ವಾಸನೆಗಳು ಪಂಚೇಂದ್ರಿಯಗಳ ಮೂಲಕ ಹಿಗ್ಗಿಸಲ್ಪಡುತ್ತವೆ. ಬ್ರಹ್ಮಾತ್ಮ ಜ್ಯೋತಿಯಲ್ಲಿ ಕನ್ನಡಿಯಂತೆ ಇಂದ್ರಿಯ ಪಂಚಕ ಕೆಲಸ ಮಾಡುತ್ತದೆ. ಅದರಿಂದ ಸ್ಥೂಲ ಪ್ರಪಂಚದ ನಾಮರೂಪ–ಸ್ವರೂಪದ ಚಿತ್ರಗಳು ಹೊರಗಡೆಯಲ್ಲಿ ತೋರುವಂತಾಗುತ್ತದೆ ; ಅಂದರೆ –ಒಳಗಿನ ಸೂಕ್ಷ್ಮ ವಾಸನೆಗಳೇ ಹೊರಗೆ ವಿಶಾಲ ಜಗತ್ತಾಗಿ ತೋರುತ್ತದೆ. ಆದುದರಿಂದ, ಹೊರಗೆ ನಾವು ನೋಡಿದ್ದೆಲ್ಲವೂ ನಿಜವಾಗಿ ಒಳಗೇ ಇವೆ.

ಪ್ರಕ್ಷೇಪಕದ ಬೆಳಕಿಲ್ಲದೆ ಚಲಚ್ಚಿತ್ರ ಪ್ರದರ್ಶನವು ಹೇಗೆ ನಡೆಯಲಾರದೋ ಹಾಗೇ ಬ್ರಹ್ಮಾತ್ಮದ ಬೆಳಕಿಲ್ಲದೆ ಅದ್ಭುತ ಚಿತ್ರಗಳ ಸ್ವರೂಪದ ಜಗತ್ತು ಅಸ್ತಿತ್ವಕ್ಕೆ ಬರಲಾರದು–ಬಂದು ಇರಲಾರದು. (ಕಡಿಮೆ ಪಕ್ವವಾದ ಜೀವಾತ್ಮಗಳಿಗೆ ಇದನ್ನು ರೂಪಕೋಕ್ತಿಯ ಮೂಲಕ–ಅಂದರೆ ದೇವರು ಈ ಜಗತ್ತನ್ನು ನಿರ್ಮಿಸಿ ಪರಿಪಾಲಿಸುತ್ತಿದ್ದಾನೆ ಎಂಬ ಕ್ರಮಸೃಷ್ಟಿ ಸಿದ್ಧಾಂತದ ಮೂಲಕ ಇದನ್ನು ವಿವರಿಸಲಾಗಿದೆ.) ಬೀಸುವ ಪ್ರಾರಬ್ಧದ[೩] ಸುಂಟರಗಾಳಿಯಿಂದ–ಅಂದರೆ ಚಲಿಸುವ ಚಿತ್ರಾಕರದಿಂದ ಅಥವಾ ವಾಸನಾವಳಿಯಿಂದ–ಪರದೆಯ ಮೇಲಿನ ಚಿತ್ರಗಳು ಅರ್ಥಾತ್ ಒಬ್ಬನ ಜೀವನದ ನೋಟವು (ದೇಖಾವೆ) ಯಾ ನಾಟಕವು ರೂಪಿಸಲ್ಪಡುತ್ತದೆ. "ಫಿಲ್ಮ್" ಅಥವಾ ಚಿತ್ರಾಕರವಿಲ್ಲದೆ ಪರದೆಯ ಮೇಲೆ ಯಾವ ಚಿತ್ರಗಳೂ ಇರಲಾರವು – ಬರಿಯ ಉಜ್ವಲವಾದ ಬಿಳಿ ಬೆಳಕಷ್ಟೇ ಇರಬಲ್ಲುದು. ಹೀಗಿರುವಾಗ ನಾಶ ಹೊಂದಿದ ವಾಸನೆಗಳನ್ನುಳ್ಳ ಜ್ಞಾನಿಯ ದೃಷ್ಟಿಯಲ್ಲಿ ಏನಿದ್ದೀತು? – ನಾಮರೂಪಗಳ ಪ್ರಪಂಚವಂತೂ ಅಲ್ಲಿ ಇರಲಾರದು – ಆದರೆ ಬ್ರಹ್ಮಾತ್ಮವೊಂದೇ ಅಲ್ಲಿದ್ದೀತು. ಅದರಿಂದಲೇ ಶ್ರೀ ಶಂಕರಾಚಾರ್ಯರು ಹೇಳಿದರು: "ಜ್ಞಾನನಿಷ್ಠೆಯನ್ನು ಅನುಸರಿಸು ಮತ್ತು ಜಗತ್ತನ್ನು ಬ್ರಹ್ಮಾತ್ಮಕವೆಂದು ತಿಳಿ (ದೃಷ್ಟಿಂ

---

೨ ಶರೀರವೆಂದು ಹೇಳಿದಾಗಲೆಲ್ಲಾ ಅದು ಸ್ಥೂಲ ಶರೀರವೆಂದೇ ಅರ್ಥವಲ್ಲ, ನಾನಿದೆಂಬ ಏಕೀಭವನ ಭಾವವು (ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ) ಮೂರು ದೇಹಗಳಲ್ಲಿ (ಅಥವಾ ಪಂಚಕೋಶಗಳಲ್ಲಿ) ಯಾವ ಒಂದರಲ್ಲಿ ಮೂಡಿದರೂ ಅದರಿಂದ ಜಗತ್ತೊಂದು ದೃಶ್ಯವಾಗುತ್ತದೆ.

೩. ಪ್ರಾರಬ್ಧ : ಪ್ರಾರಬ್ಧದ ಹೆಚ್ಚಿನ ವಿವರಗಳಿಗಾಗಿ ೩ನೆಯ ಅಧ್ಯಾಯವನ್ನು ನೋಡಿರಿ.

ಜ್ಞಾನಮಯೀಂ ಕೃತ್ವಾ ಪಶ್ಯೇದ್ ಬ್ರಹ್ಮಮಯಂ ಜಗತ್)" ಎಂದು. "ಶ್ರೀ ಅರುಣಾಚಲ ಅಷ್ಟಕ[೪] ಎಂಬ ಗ್ರಂಥದ ೬ನೆಯ ನುಡಿಯಲ್ಲಿ ಶ್ರೀರಮಣರು ಹೇಳಿದ್ದು ಇದನ್ನೇ.

ಅಪರಿಮಿತನಾದ ಮತ್ತು ದೇಶಕಾಲಗಳನ್ನು ಬಿಟ್ಟು ಹಾಗೂ ಮೀರಿ ಪ್ರಕಾಶಿಸುತ್ತಿರುವ ನೀನು ನಿನ್ನ ಬ್ರಹ್ಮಾತ್ಮ ಜಾಗರವನ್ನು ಸರ್ವ ಪರಿಮಿತಿಗಳಿಂದೊಡಗೂಡಿದ "ನಾನು ಇದು" ಎಂಬ ಚಿಕ್ಕ ಶರೀರದಲ್ಲಿ ಅಡಕಗೊಳಿಸಿದರೆ, ಹಾಗೆ ಅಡಕಗೊಳ್ಳದೆ ಉಳಿದ ನಿನ್ನ ಬ್ರಹ್ಮಾತ್ಮಜಾಗರದ ಭಾಗವು ಅಸೀಮ ವಿಶ್ವವಾಗಿಯೂ ಸೃಷ್ಟಿಕರ್ತ ಎನ್ನಿಸುವ ಅಪರಿಮಿತ ದೇವಸ್ವರೂಪನಾಗಿಯೂ ನಿನ್ನೆದುರು ಕಾಣಿಸಿಕೊಳ್ಳುತ್ತದೆ. ನಿನ್ನ ಬ್ರಹ್ಮಜಾಗರವು (ಬ್ರಾಹ್ಮೀಸ್ಥಿತಿಯು) ನಾಮ, ರೂಪ, ದೇಶ, ಕಾಲ ಮುಂತಾದವುಗಳಿಂದ ಕಲುಷಿತವಾಗದಿರುವಾಗ ಅದು ಹುಟ್ಟಿದ್ದು, ಶರೀರವುಳ್ಳದ್ದು, ಮಾನವ್ಯ ನಾಮವುಳ್ಳದ್ದು, ಒಂದು ಸ್ಥಳವನ್ನು ಆಕ್ರಮಿಸಿಕೊಂಡಿರುವಂಥದು, ಒಂದು ಕಾಲಾವಧಿಯನ್ನು ಇರಲು ಆಯ್ದುಕೊಂಡದ್ದು ಎಂದು ಒಂದು ಬದ್ಧ ಸ್ವರೂಪದಲ್ಲಿ ಅನುಭವಕ್ಕೆ ತಂದುಕೊಂಡಾಗ ನಿನ್ನ ಸ್ವಂತದ ಬ್ರಹ್ಮಾತ್ಮದ ಪರಿಶಿಷ್ಟ ಅಪ್ರಮಿತ ಭಾಗವು ಸೃಷ್ಟವೂ ಅನಂತವೂ ಆದ ನಾಮರೂಪಾತ್ಮಕ ವಿಶ್ವವಾಗಿ ನಿನಗೆ ತೋರುತ್ತದೆ. ಈ ವಿಶ್ವದ ಇನ್ನೊಂದು ತೀರವನ್ನು ಎಷ್ಟು ಸಂಶೋಧನೆ ನಡೆಸಿದರೂ (ಹುಡುಕಿಕೊಂಡು ಹೋದರೂ) ವಿಜ್ಞಾನವು ತಲುಪಲಾರದು.[೫] ಆದುದರಿಂದ ಅದೆಲ್ಲಾ ನೀನು ಅಲ್ಲದೆ ಬೇರೆಯಲ್ಲ, ದೇವರ ಅಸ್ತಿತ್ವದ ಸ್ವರೂಪವೂ ಹೀಗೆ ಇರುವುದು. ನಿನ್ನ ಸ್ವಂತದ ಬ್ರಹ್ಮಾತ್ಮದ ಬಂಧರಹಿತವಾದ ಭಾಗವು ಅಪರಿಮಿತ ಶಕ್ತಿಗಳನ್ನುಳ್ಳ ದೇವರಾಗಿ ತೋರುತ್ತದೆ ; ಅದೇ ಸೃಷ್ಟಿಕರ್ತನಾಗಿ ಪ್ರಕಾಶಿಸುತ್ತದೆ. ಆ ಸೃಷ್ಟಿಕರ್ತನ ಸ್ವಭಾವವು ಎಷ್ಟೋ ಮತಧರ್ಮಗಳು ಹುಡುಕಿ ತೆಗೆದು ಆತನ ಎಷ್ಟೋ ಮುಖಗಳನ್ನು ತಮ್ಮ ಸ್ವಂತದ ವೇದಗಳಲ್ಲಿ (ಶ್ರುತಿಗಳಲ್ಲಿ) ವರ್ಣಿಸಿದ ಮೇಲೂ ವರ್ಣನಾತೀತವಾಗಿಯೇ ಉಳಿದಿರುತ್ತದೆ.

> **"ಎಲೈ ಅರ್ಜುನನೇ ನನ್ನ ದಿವ್ಯವೂ ಆಶ್ಚರ್ಯಕರವೂ ಆದ ಅವತಾರಗಳಿಗೆ**
> **ಕೊನೆಯಿಲ್ಲ." (ಭಗವದ್ಗೀತೆ : ೧೦–೪೦)**
> **ಇಡೀ ಜಗತ್ತನ್ನು ನನ್ನ ಒಂದು ಅಣುಪ್ರಮಾಣದ ಅಂಶದಿಂದ**
> **ಎತ್ತಿ ಹಿಡಿದು ನಿಂತಿದ್ದೇನೆ."**
>
> **–(ಭಗವದ್ಗೀತೆ : ೧೦–೪೨)**

ನಿನ್ನ ಆತ್ಮಾವಧಾನವು (ಬ್ರಹ್ಮಾತ್ಮಜಾಗರವು) ಶಿಥಿಲವಾಗಿ ಆ ಮೂಲಕ ನೀನು ನಿನ್ನ ಆತ್ಮವನ್ನು (ಪರಬ್ರಹ್ಮವನ್ನು) ತಪ್ಪು ದೃಷ್ಟಿಕೋನವನ್ನು ತಾಳಿದ ದೋಷದ ದೆಸೆಯಿಂದ ಒಂದೇ ದೇಹದ ಅಳತೆಯೊಳಗೆ ಸೀಮಿತಗೊಳಿಸಿದ್ದು – ಬ್ರಹ್ಮಾತ್ಮ ವಿಸ್ಮೃತಿಯು – ನಿಜವಾಗಿ ಜಗತ್ತಿನ ಹಾಗೂ ದೇವರ ಸೃಷ್ಟಿಗೆ ಕಾರಣವಾಗಿದೆ. ಸೃಷ್ಟಿ, ಸ್ಥಿತಿ, ಲಯಗಳು

---

೪. "ಶ್ರೀ ಅರುಣಾಚಲ ಅಷ್ಟಕಂ" : ಪರಿಶಿಷ್ಟ ವಿಭಾಗವು(ಅ) ಎಂಬಲ್ಲಿರುವ ಈ ಪದ್ಯದ ಮೇಲಿನ ವಿವರಣಾತ್ಮಕ ಟಿಪ್ಪಣಿಗಳನ್ನು ನೋಡಿರಿ.

೫. "ಉಳ್ಳದು ನಾರ್ಪ.ದು"ವಿನ ೪ ನೆಯ ಪದ್ಯವನ್ನು ನೋಡಿರಿ: "ಒಂದು ಶರೀರರೂಪದ ಆಕೃತಿಯಾದರೆ– ಆಮೇಲೆ ಜಗತ್ತೂ ದೇವರೂ ಹಾಗೇ ತೋರುವುದು ; ಅಂದರೆ, ಅವುಗಳೂ ನಾಮರೂಪಾತ್ಮಕಗಳೋ ಏನೋ ಎಂಬಂತೆ ತೋರುವುವು.

ದೇವರ ಲೀಲಾನಾಟಕ ಎಂದು ಶ್ರುತಿಗಳು (ಶಾಸ್ತ್ರಗಳು) ಹೇಳಿದುದರ ನಿಜವಾದ ಅರ್ಥವೇನೆಂದರೆ : ಅದು ನಿನ್ನದೇ ಆದ ಲೀಲಾನಾಟಕ ; ಅದಕ್ಕೆ ನೀನು ನಿನ್ನ ನಿರಪೇಕ್ಷವೂ ಅಸೀಮವೂ ಆದ ನಿನ್ನ ಸ್ವಾತಂತ್ರ್ಯವನ್ನು–ನಿನ್ನ ಬ್ರಹ್ಮಾತ್ಮವನ್ನು ಪರಿಮಿತವೆಂದು ನೋಡಿದ್ದರಿಂದ ಸೃಷ್ಟಿಗಾಗಿಯೂ ಆ ದೃಷ್ಟಿಕೋನವನ್ನು ಮುಂಬರಿಸಿದ್ದರಿಂದ ಸ್ಥಿತಿಗಾಗಿಯೂ ಆ ದೃಷ್ಟಿಕೋನವನ್ನು ಕೊನೆಗೊಳಿಸಿದ್ದರಿಂದ ಲಯಕ್ಕಾಗಿಯೂ–ಬಳಸಿಕೊಂಡಿರುವೆ. ನಿಜವಾಗಿ ಈಯೆಲ್ಲವೂ ನಿನ್ನ ಬ್ರಹ್ಮಾತ್ಮವೇ ಆಗಿವೆ. ನೀನು ಬದ್ಧನಾದ ಕೂಡಲೇ (ಅಂದರೆ ನೀನು ಒಂದು ದೇಹದೊಳಗೆ ನಿನ್ನನ್ನು ಆಭಾಸಿಕವಾಗಿ ಬಂಧಿಸಿಕೊಂಡಿರುವ ಕಾಲದಲ್ಲಿ) (ಅಂಥ ಬಂಧದ ಜೊತೆಜೊತೆಗೇ ಏಕಕಾಲಿಕವಾಗಿ) ಜಗತ್ತೂ ದೇವರೂ ಅಸ್ತಿತ್ವಕ್ಕೆ ಬರುತ್ತವೆ. ನೀನು, ಜಗತ್ತು ಮತ್ತು ದೇವರು ಎಂಬ ಮೂರೂ ಪದಾರ್ಥಗಳು ಏಕಕಾಲಿಕವಾಗಿ ಉದಯ, ಉಪಸ್ಥಿತಿ ಮತ್ತು ಅಸ್ತಂಗತಿಗಳುಳ್ಳಂಥವು. ಆದುದರಿಂದ ಅದನ್ನು ಸಮಸಾಮಯಿಕ ಸೃಷ್ಟಿ ಎಂದು ಕರೆಯಲಾಗುತ್ತದೆ. ನಿರಪೇಕ್ಷ (ಸರ್ವತಂತ್ರ ಸ್ವತಂತ್ರ) ಸತ್ಯದ ದೃಷ್ಟಿಕೋನದ ಪ್ರಕಾರ, ಮೇಲೆ ಹೇಳಿದಂತೆ ತಪ್ಪು ದೃಷ್ಟಿಕೋನವನ್ನು ತಾಳಿದ್ದು ಸಹಾ ಕೇವಲ ಆಭಾಸಿಕವಲ್ಲದೆ ವಾಸ್ತವಿಕವಲ್ಲ ಎಂದೂ ಯಾವುದೂ ಸೃಷ್ಟವಾಗಿಲ್ಲ ಎಂಬ (ಅಜಾತ) ಅಜಾತಿವಾದವೇ ಪರಮಾರ್ಥವಾಗಿದೆ !

"ಒಬ್ಬನು ತನ್ನ ಸ್ವಂತದ ಸ್ವಾಭಾವಿಕ ಸ್ಥಿತಿಯಲ್ಲಿ ತಪ್ಪದೆ ಇರುವಾಗ (ಅವನ) ಬ್ರಹ್ಮಾತ್ಮವನ್ನು ಬಿಟ್ಟು ಮಿಕ್ಕ ಯಾರು ಅಲ್ಲಿದ್ದಾರೆ?"

– "ಉಳ್ಳದು ನಾರ್ಪದು" ಎಂಬುದರ ಪುರವಣಿಯ

೩೮ನೆಯ ಪದ್ಯ

ನಿನ್ನ ಅವಧಾನಶಕ್ತಿಯನ್ನು ನಿನ್ನ ಬ್ರಹ್ಮಾತ್ಮದತ್ತ ತಿರುಗಿಸಿದೆ ಎಂದಾದರೆ ಜಗತ್ತು ಮತ್ತು ದೇವರುಗಳು ತೋರಿಕೆಯು ನಿಂತು ಹೋಗುತ್ತದೆ. ಸರ್ವಸಾಧಾರಣವಾದ ನಿದ್ರೆಯ ಉದಾಹರಣೆಯಿಂದ ಇದನ್ನು ನೀನು ಗ್ರಹಿಸಬಹುದು. ನಿದ್ರೆಯಲ್ಲಿ ಜಗತ್ತು–ದೇವರುಗಳ ಬಗೆಗೆ ಸಂದೇಹವೂ ಇಲ್ಲ, ಜ್ಞಾನವೂ ಇಲ್ಲ. ಏಕೆ ಹಾಗಾಗುತ್ತದೆ? ಏಕೆಂದರೆ, ನೀನೆಂಬ ಬದ್ಧ ಭಾವನೆಯ ಜೀವಿಯಾದ ಅಹಂಕಾರವು ಅಲ್ಲಿ ಇರುವುದಿಲ್ಲ. ಆದುದರಿಂದ ಮಿಕ್ಕೆರಡು ಪದಾರ್ಥಗಳೂ ಅಲ್ಲಿರುವುದಿಲ್ಲ. ಆದುದರಿಂದ ಜೀವರೂಪದಲ್ಲಿ ನಿನ್ನನ್ನು ನೀನು (ಶರೀರದಲ್ಲಿ) ಬಂಧಿಸಿಕೊಳ್ಳುವ ಕೃತ್ಯದಿಂದಲೇ ಒಳಿತು–ಕೆಡುಕು, ದುಃಖ–ಸುಖ, ಹುಟ್ಟು–ಸಾವು ಎಂಬಂಥ ದ್ವಂದ್ವಗಳೂ ದ್ರಷ್ಟೃ, ದೃಷ್ಟ, ದೃಷ್ಟಿ (ಜ್ಞಾತೃ, ಜ್ಞಾತ ಯಾ ಜ್ಞೇಯ, ಜ್ಞಾನ) ಎಂಬಂಥ ತ್ರಿಪುಟಿಗಳೂ ಅಸ್ತಿತ್ವಕ್ಕೆ ಬರುತ್ತವೆ ಮತ್ತು ಅದರಿಂದ ನೀನು ಈ ಪ್ರಕಾರವಾಗಿ ಜಗತ್ತು ಮತ್ತು ದೇವರುಗಳ ನಿರ್ಮಾಪಕನೆಂದೂ ಆಗುತ್ತೀಯೆ!

ಏಕಮೇವಾದ್ವಿತೀಯನೆನ್ನಿಸಿರುವ ಸಚ್ಚಿದಾನಂದನಾದ (ಸತ್=ಅಸ್ತಿತ್ವ ; ಚಿತ್=ಎಚ್ಚರ, ಜಾಗರ ; ಆನಂದ=ದ್ವಂದ್ವಾತೀತ ಸುಖ) ನೀನು ನಿನ್ನ ಪೂರ್ಣ ಸ್ವಾತಂತ್ರ್ಯದಿಂದ[೬] ನಿನ್ನ ಸ್ವಭಾವವನ್ನು ಇರುವಂಥದೆಂದು ನೋಡದೆ ಏಳುವಂಥದೆಂದು ನೋಡಿದರೆ, ಅಸ್ತಿತ್ವ–ಚೈತನ್ಯ–ಆನಂದಗಳೆಂಬ ನಿನ್ನ ಸ್ವರೂಪದ ಮುಮ್ಮೊಗಗಳು ತದ್ವಿರುದ್ಧವಾದ ಅನಸ್ತಿತ್ವ

---

೬ ಪೂರ್ಣ ಸ್ವಾತಂತ್ರ್ಯ : "ಕರ್ಮ" ಎಂಬ ಅಧ್ಯಾಯವನ್ನು ನೋಡಿರಿ.

ಅಜ್ಞಾನ ಮತ್ತು ದುಃಖಗಳೆಂಬ ರೂಪಗಳಾಗಿ ಪ್ರತಿಬಿಂಬಿಸುವುವು. ತಾಳೆಯ ಮರದ, ಕೆರೆಯಲ್ಲಿ ಬಿದ್ದ ನೆರಳು ತಲೆಕೆಳಗಾಗಿ ತೋರುತ್ತದೆ, ಕೆರೆಯ ಆಚೆಗಿನ ದಂಡೆಯಿಂದ ನೋಡಿದರೆ, ಎಡಪಾರ್ಶ್ವವು ಬಲ ಪಾರ್ಶ್ವವಾಗಿ ತೋರುತ್ತದೆ; ಅದೇ ಮೇರೆಗೆ ನಿನ್ನ ಸ್ವರೂಪವಾದ ಅಸ್ತಿತ್ವವನ್ನು ಉದಯದ ರೂಪಕ್ಕೆ ಬದಲಾಯಿಸಿದರೆ ಅಸ್ತಿತ್ವವೆಂಬ ಮುಖದ (ಸತ್ ಎಂಬುದರ) ಏಕತ್ವವು ತಾನೇ ಅಸ್ತಿತ್ವ ಅನಸ್ತಿತ್ವಗಳೆಂಬ ಪರಸ್ಪರ ವಿರುದ್ಧವಾದ ರೂಪಗಳನ್ನು ತಾಳುತ್ತದೆ ; ಜ್ಞಾನ, ಅರಿವು ಅಥವಾ ಜಾಗರ ಎಂಬ ಮುಖದ ("ಚಿತ್" ಎಂಬುದರ, ಚೈತನ್ಯವೆಂಬುದರ) ಏಕತ್ವವು ತಾನೇ ಜ್ಞಾನಾಜ್ಞಾನಗಳೆಂಬ ವಿರುದ್ಧ ರೂಪಗಳನ್ನು ತಾಳುತ್ತದೆ ; ಪರಮ ಸಂತೋಷದ (ಆನಂದದ) ಮುಖವು ಪರಸ್ಪರ ವಿರುದ್ಧವಾದ ಸುಖ, ದುಃಖಗಳೆಂಬ ರೂಪಗಳನ್ನು ತಾಳುತ್ತದೆ. (ಈ ದ್ವಂದ್ವರೂಪದ ಪ್ರತಿಬಿಂಬಗಳೆಲ್ಲಾ ಆಭಾಸಗಳು). ರವಿಯ ಬಿಳಿ ಬೆಳಕಿನ ಒಂದು ಕಿರಣವು ಏಳು ಬಣ್ಣಗಳಾಗಿ ವಿಪ್ರತಿಬಿಂಬಿಸುವುದು, ಅದು ಹರಳ ಮೂಲಕ ತೂರಿ ಹೋದಾಗ ; ಹಾಗೇ ನೀನು ನಿನ್ನನ್ನು ಒಬ್ಬ ವ್ಯಕ್ತಿ ಎಂದು ಆತ್ಮಾವಧಾನದ ಶೈಥಿಲ್ಯದ ದೆಸೆಯಿಂದ ನೋಡಿದಾಗ ಒಬ್ಬನೆ ಆದ (ಏಕಮೇವಾದ್ವಿತೀಯನಾದ) ನೀನು ಅನೇಕವಾಗಿ ತೋರುವೆ : ಆ ಅನೇಕತೆಯಲ್ಲಿ ಪಂಚಭೂತಗಳು ಮತ್ತು ಜಗತ್ತಿನ ಅಸಂಖ್ಯಾತ ಪದಾರ್ಥಗಳು ಪಂಚೇಂದ್ರಿಯಗಳ ಮೂಲಕ ವ್ಯಕ್ತಿಗೆ ತೋರುತ್ತವೆ.

ಈ ಎಲ್ಲ ದ್ವಂದ್ವಗಳೂ ತ್ರಿಪುಟಿಗಳೂ (ಅಕ್ಷರಶಃ ದ್ವಣುಕ–ತ್ರ್ಯಣುಕಗಳು) ನೀನೆದ್ದಾಗ ಮಾತ್ರ ಇರುತ್ತವೆ. ಈ "ನೀನು" ಎಂದರೆ ಪರಿಮಿತಿಗೊಳಪಟ್ಟ ಅಹಂಕಾರ – ಇದೇ ಅವುಗಳ ಇರುವಿಕೆಗೆ ಆಧಾರ.[೨] ಇಷ್ಟೇ ಅಲ್ಲದೆ, ಈ ದ್ವಂದ್ವಗಳ ಮತ್ತು ತ್ರಿಪುಟಿಗಳ ಪ್ರತಿಯೊಂದು ಘಟಕವೂ ಪರಘಟಕದ ಅಸ್ತಿತ್ವದ ದೆಸೆಯಿಂದಲೇ ಅರ್ಥವುಳ್ಳದ್ದಾಗುತ್ತದೆ. ಪೂರ್ವಭಾವಿಯಾಗಿ ಒಂದು ವಸ್ತುವಿನ ಬಗೆಗೆ ಅಜ್ಞಾನವಿದ್ದ ಹೊರತು ಅದರ ಬಗೆಗೆ ಜ್ಞಾನವೆಂಬುದು ಮೂಡದು. ಇದೊಂದು ನಿದರ್ಶನ. ಈ ಪ್ರಕಾರ, ಪೂರ್ವಕಾಲೀನ ಅಜ್ಞಾನದ ದೆಸೆಯಿಂದಲೇ ಒಂದು ವಸ್ತುವಿನ ಉತ್ತರಕಾಲೀನ ಜ್ಞಾನವೆಂಬುದಕ್ಕೆ ಅರ್ಥವುಂಟಾಗುತ್ತದೆ. ಅದೇ ರೀತಿಯಿಂದ ಒಂದು ವಸ್ತುವಿನ ಅಪರಕಾಲೀನಜ್ಞಾನ ಉದಯುವಾಗುವ ತನಕ ಅದರ ಪೂರ್ವಕಾಲೀನ ಅಜ್ಞಾನವೆಂಬುದಕ್ಕೆ ಅರ್ಥ ಉಂಟಾಗಲಾರದು. ಹೀಗೇ ಒಳಿತು–ಕೆಡುಕು, ಉದ್ದ–ಕುಳ್ಳ, ಒಳ–ಹೊರ, ಮೇಲೆ–ಕೆಳಗೆ ಮುಂತಾದ ದ್ವಯಗಳಿಗೂ ದೃಷ್ಟ, ದ್ರಷ್ಟೃ ಮತ್ತು ದೃಷ್ಟಿ ಎಂಬಂತಹ ತ್ರಯಗಳಿಗೂ ಉಕ್ತ ದಶೆ ಅನ್ವಯಿಸುತ್ತದೆ. (ಆಯಾ ದ್ವಯದ ಅಥವಾ ತ್ರಯದ ಘಟಕಗಳ ಅರ್ಥವತ್ತೆಯು ಪರಸ್ಪರಾರ್ಥ ಸಾಪೇಕ್ಷವಾಗಿರುತ್ತದೆ.)

ನಿನ್ನ ವಸ್ತುನಿಷ್ಠ ಜ್ಞಾನವು (ಪ್ರವೃತ್ತಿ ವಿಜ್ಞಾನವು) ಎಂದರೆ ನೀನು ತಿಳಿದ ಒಂದು ವಸ್ತುವಿನ ಜ್ಞಾನವು. ಅದು ಸತ್ಯವಾದ ಜ್ಞಾನವಲ್ಲ. ಅದು ಕೇವಲ ಮನೋಜ್ಞಾನ (ಮನೋವಿಜ್ಞಾನ). ಆದುದರಿಂದ ಈ ದ್ವಯಗಳೂ ತ್ರಯಗಳೂ ಕೇವಲ ನಿನ್ನನ್ನೇ ಆಧರಿಸಿ ನಿಂತಿವೆ ; ನೀನೆಂದರೆ ನಿನ್ನ ಅಪರಿಮಿತ ಸ್ವಭಾವವನ್ನು (ಸ್ವರೂಪವನ್ನು) ಪರಿಮಿತಗೊಳಿಸಿಕೊಂಡು ವ್ಯಕ್ತಿಯಾದಂಥವನು. ಅವು ಬ್ರಹ್ಮಾತ್ಮಕ್ಕೆ ಸೇರಿದವುಗಳೂ ಅಲ್ಲ

೨. ಅಹಂಕಾರವೆಂಬ ಆಧಾರ : ಪರಿಶಿಷ್ಟ ೪ರ (ಕ) ವಿಭಾಗವನ್ನು ನೋಡಿರಿ.

– ಅದಕ್ಕೆ ಅಂಟಿಕೊಂಡಿರುವುದೂ ಇಲ್ಲ. ಅವು ಬ್ರಹ್ಮಾತ್ಮಕ್ಕೆ ಸೇರಿದವುಗಳೂ ಅಂಟಿಕೊಂಡಿರುವಂಥವುಗಳೂ ಆಗಿದ್ದರೆ ಬ್ರಹ್ಮಾತ್ಮವು ಪ್ರಕಾಶಮಾನವಾಗಿರುವಂಥ ಸುಷುಪ್ತಿಯಲ್ಲಿ ಅವುಗಳೇಕೆ ಅನುಭವಕ್ಕೆ ಬರುವುದಿಲ್ಲ? ಅಹಂಕಾರವು ಅಲ್ಲಿ ಶಮನವಾಗಿರುವುದರಿಂದ ಅವು ಸುಷುಪ್ತಿಯಲ್ಲಿ ಅನುಭವಕ್ಕೆ ಬಾರವು. ಆದುದರಿಂದ ಅಹಂಕಾರವಿಲ್ಲದಲ್ಲಿ ದ್ವಿಪುಟಿ – ತ್ರಿಪುಟಿಗಳು ಇರುವುದಿಲ್ಲವೆಂಬ ಸತ್ಯವು ಎಲ್ಲರ ಅನುಭವದಿಂದಲೂ ಗೊತ್ತಾಗಿರುತ್ತದೆ. ಹೀಗೆ ವಿವೇಚಿಸಿ ನಾವು ದ್ವಿಪುಟಿ–ತ್ರಿಪುಟಿಗಳಿಗೆ ಅಹಂಕಾರವೇ ತಳಪಾಯ ಎಂಬುದನ್ನು ತಿಳಿದುಕೊಳ್ಳಬೇಕು. ಹಾಗೆ ವಿವೇಚಿಸುವ ತೊಂದರೆ ಕೂಡಾ ಆಗದಂತೆ ನಮ್ಮನ್ನು ಉಳಿಸಲು ಅನುಗ್ರಹಪೂರ್ವಕವಾಗಿ ಶ್ರೀ ರಮಣರು ತಮ್ಮ ತೀರ್ಪನ್ನು ಕೊಟ್ಟಿದ್ದಾರೆ .

"(ಜಗತ್ತು, ದೇವ, ಬಂಧ, ಮುಕ್ತಿ, ದುಃಖ, ಸುಖ ಎಂಬೀ) ಮಿಕ್ಕ ಪದಾರ್ಥಗಳೆಲ್ಲವೂ ಅಹಂಕಾರವು ಅಸ್ತಿತ್ವಕ್ಕೆ ಬಂದೊಡನೆಯೇ ತಾವು ಅಸ್ತಿತ್ವಕ್ಕೆ ಬರುವುವು. ಅಹಂಕಾರವಿಲ್ಲದೆ ಹೋದರೆ ಉಳಿದ ಯಾವುದೂ ಇರದು. ನಿಜವಾಗಿಯೂ ಅಹಂಕಾರವೇ ಎಲ್ಲವೂ!"

–"ಉಳ್ಳದು ನಾರ್ಪ.ದು"ವಿನ ೨೬ನೆಯ ಪದ್ಯ

"ಅಹಂಕಾರವೆಂಬ ವಿಚಾರವಿಲ್ಲದಲ್ಲಿ ಇನ್ನಾವ ವಸ್ತುವೂ ಇರಲಾರದು..."

– "ಶ್ರೀ ಅರುಣಾಚಲ ಅಷ್ಟಕಂ"

ಪ್ರಾಮಾಣಿಕವಾಗಿ ಆತ್ಮಾವಧಾನ ಮಾಡುವ ಪ್ರತಿಯೊಬ್ಬ ಮುಮುಕ್ಷುವಿಗೂ ಕೆಲವು ಸಮಯಗಳಲ್ಲಿ ಆತ್ಮಾನುಭವ (ಬ್ರಹ್ಮಾನುಭವ) ಉಂಟಾಗುತ್ತದೆ ಮತ್ತು ಕೆಲವು ವೇಳೆಗಳಲ್ಲಿ ಅದು ಹೊರಟು ಹೋಗುತ್ತದೆ ಎಂಬ ಭಾವನೆ ಉಂಟಾಗುತ್ತದೆ. ಅಂಥ ಸಂದರ್ಭಗಳಲ್ಲಿ ಸ್ವಾನುಭವದಿಂದಲೇ ಅವನಿಗೆ ಪ್ರಪಂಚವು ಹೇಗೆ ಮೂಡಿ ಮುಳುಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅತ್ಯಂತ ವೇಗದಿಂದ ಧಾವಿಸಿ ಬರುವ ಅನವಧಾನ (ಪ್ರಮಾದ)ದಿಂದ (ಸಾಧನೆಯ) ಪ್ರಾಥಮಿಕ ಅವಸ್ಥೆಯಲ್ಲಿ ತಾನು ಆತ್ಮಾವಧಾನವನ್ನು ಯಾವಾಗ ನಿಜವಾಗಿ ಕಳೆದುಕೊಂಡೆನೆಂಬುದನ್ನು ಮುಮುಕ್ಷು ತಿಳಿಯಲಾರನು. ಆದರೆ ಕಾಲಕ್ರಮೇಣ ಪುನಃ ಪುನಃ ಮಾಡಿದ ಅಭ್ಯಾಸದಿಂದ (ಅನುಷ್ಠಾನದಿಂದ) ಸಂಗೃಹೀತವಾದ ಸಾಮರ್ಥ್ಯದ ದೆಸೆಯಿಂದ ತನಗೆ ಆತ್ಮಾವಧಾನವು ಖಚಿತವಾಗಿ ಯಾವ ಕ್ಷಣದಲ್ಲಿ ಕಳೆದು ಹೋಯಿತೆಂಬುದೂ ಅದನ್ನು ಪುನಃ ತಂದುಕೊಳ್ಳುವುದು ಸಾಧ್ಯವಾಗಲು ಅವಶ್ಯಕವಾದ ಶಕ್ತಿಯನ್ನೂ ಅವನು ಪಡೆಯುವನು. ಅಂಥ ಸಂದರ್ಭಗಳಲ್ಲೆಲ್ಲಾ – ಅಂದರೆ ಆತ್ಮಾವಧಾನವನ್ನು ಕಳೆದುಕೊಂಡ ಮತ್ತು ಪುನಃ ಪಡೆದ ನಿರ್ದಿಷ್ಟ ಅವಧಿಯನ್ನು ಸ್ಪಷ್ಟವಾಗಿ ತಿಳಿದಂಥ ಸಂದರ್ಭಗಳಲ್ಲಿ–ಜಗತ್ತು ಅಲ್ಲೇ ಆಗಲೇ ಸೃಷ್ಟವಾದುದನ್ನೂ ನಷ್ಟವಾದುದನ್ನೂ ಸ್ವಾನುಭವದಿಂದ ಸುಲಭವಾಗಿ ಕಂಡುಹಿಡಿಯಲು ಸಮರ್ಥನಾಗುವನು; ಅವನು ಆ ಸೃಷ್ಟಿ ಮತ್ತು ನಾಶಗಳ ಕ್ರಮವನ್ನು ಹುಡುಕಿ ತೆಗೆಯಬಲ್ಲವನಾಗುವನು. ಆತ್ಮಾವಧಾನದ ಶಿಥಿಲತೆಯ ಸ್ಥಿತಿಯೇ ಸೃಷ್ಟಿಗೆ ಕಾರಣ; ಆ ಶಿಥಿಲಾವಸ್ಥೆಯಲ್ಲಿ ಮುಂಬರಿಯುವುದೇ ಸ್ಥಿತಿಗೆ ಕಾರಣ; ಆತ್ಮಾವಧಾನದ ಪುನರ್ಲಾಭವು ಲಯಕ್ಕೆ ಕಾರಣ! ಈಗ ಅವನಿಗೆ ಈ ಸತ್ಯವು ಅಷ್ಟು ಸ್ಪಷ್ಟವಾಗಿ ಉದಯಿಸುವುದರಿಂದ, ತಾನು ಏಕೈಕ ಸರ್ವೋಚ್ಚ ಆತ್ಮ (ಅದ್ವಿತೀಯ ಪರಬ್ರಹ್ಮ) ; ತಾನು ಸೃಷ್ಟಿ, ಸ್ಥಿತಿ, ಲಯಗಳನ್ನು ಮೀರಿದವನು

ಮತ್ತು ಯಾವಾಗಲೂ ಆನಂದಮಯನಾಗಿ ಬ್ರಹ್ಮಾತ್ಮದಲ್ಲಿ ನೆಲೆನಿಂತವನು ಎಂಬ ಅನುಭವ ಉಂಟಾಗುತ್ತದೆ.

ಯುಕ್ತವಾದ ವಿವೇಕದಿಂದ ಕೇವಲ ಸುಖ–ದುಃಖಗಳ ಸಮ್ಮಿಶ್ರಣವಾದ ಸೃಷ್ಟಿ–ಸ್ಥಿತಿಗಳೆಂಬೆರಡು ಅವಸ್ಥೆಗಳು ಧ್ಯೇಯಗಳಾಗಲು ಯೋಗ್ಯವಲ್ಲ ಎಂಬುದರ ಬಗ್ಗೆ ಸರಿಯಾದ ಜ್ಞಾನವು ದೊರಕುವವರೆಗೆ ಯಾವನೂ ಆತ್ಮಾವಧಾನಕ್ಕೆ ಅಂಟಿಕೊಂಡಿರುವ ಒಲವನ್ನು ಉಳ್ಳವನಾಗಲಾರನು. ಈಯೆರಡು ಅವಸ್ಥೆಗಳನ್ನು ಯೋಗ್ಯವಾದವುಗಳೆಂದು ಗಣಿಸಿದಾತನು ದ್ವಂದ್ವಗಳಲ್ಲಿ ಒಂದಾಗಿರುವ ಸುಖ–ದುಃಖ ಸಮ್ಮಿಶ್ರಣದಿಂದ ದುಃಖವನ್ನು ಕಳೆದೊಗೆದು ಸೃಷ್ಟಿ ಸ್ಥಿತಿಗಳ ಅವಸ್ಥೆಯಲ್ಲಿ ಸುಖವೊಂದೇ ಉಳಿಯುವ ಹಾಗೆ ಮಾಡಬಲ್ಲೆನೆಂದು ಗಾಳಿಯಲ್ಲಿ ಸೌಧಗಳನ್ನು ಕಟ್ಟುತ್ತಾ ಹೋದಾನು (ಹಗಲುಗನಸುಗಳನ್ನು ಕಾಣುತ್ತಾ ಹೋದಾನು). ತನ್ನ ಯೋಜನೆಗೆ ಅನುಗುಣವಾಗಿ ವರ್ತಮಾನ ಕಾಲದ ಸೃಷ್ಟಿ ಸ್ಥಿತಿಗಳಲ್ಲಿ ದುಃಖವೇ ಇರುತ್ತಿರಲಿಲ್ಲ ಎಂದು ಕೂಡಾ ಅವನು ಆಲೋಚಿಸಬಹುದು. ಈ ವಿಶಾಲ ಮನಸ್ಕನೂ ನಿಃಸ್ವಾರ್ಥಿಯೂ ದಯಾಮಯನೂ ಒಳ್ಳೆಯವನೂ ಆದ ಮನುಷ್ಯನಲ್ಲಿ ಸರಿಯಾದ ಬಗೆಯ ವಿವೇಕವು ಮೂಡದೆ ಇರುವುದರಿಂದ ಅವನು ಸದ್ಯದ ದೇವರ ಯೋಜನಾ ಜ್ಞಾನದಲ್ಲಿ ದೋಷಗಳನ್ನು ಕಂಡುಹಿಡಿದು ಈ ದೇವರ ದಿವ್ಯ ಪ್ರಶಾಸನದಲ್ಲಿ ಸುಧಾರಣೆಯಾಗಬೇಕೆಂದು ಸಹಾ ಬೇಡಿಕೆಯನ್ನು ಮಂಡಿಸುವಷ್ಟರ ವರೆಗೂ ಮುಂಬರಿದಾನು! ಈ ಮನುಷ್ಯನು ಜಗತ್ತಿನ ದುಃಖಗಳೆಲ್ಲವನ್ನೂ ಪರಿಹರಿಸಲು ಬೇಕಾದ ನಕ್ಷೆಯೊಂದನ್ನು ತಯಾರಿಸಿ ಆ ಮೂಲಕ ಅದನ್ನು ಸ್ವರ್ಗೀಕರಿಸಿ ಬ್ರಹ್ಮಾತ್ಮದ ಶರೀರವನ್ನು ಧರಿಸಿದ ಮನುಷ್ಯನನ್ನು ಅಮರನನ್ನಾಗಿ ಮಾಡಲು ಯೋಜಿಸಿಯಾನು! ತನ್ನ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅವನಿಗೆ ಎಲ್ಲಿಂದ ದಿವ್ಯಶಕ್ತಿಯು ಲಭ್ಯವಾದೀತು?

ಆತನು ಆಗ ತನಗೆ ಸದ್ಯದ ಸೃಷ್ಟಿ–ಸ್ಥಿತಿಕರ್ತನಾದ ಸರ್ವಶಕ್ತ ಪರಮೇಶ್ವರನನ್ನು ಬಿಟ್ಟರೆ ಇನ್ನಾರಿಂದಲೂ (ಮೇಲೆ ಹೇಳಿದಂಥ) ದಿವ್ಯಶಕ್ತಿಯನ್ನು ಪಡೆಯಲು ಸಾಧ್ಯವಿಲ್ಲವೆಂದು ಆಲೋಚಿಸುತ್ತಾನೆ ! ಈ ಉದ್ದೇಶಕ್ಕಾಗಿ ಅವನು ಆತ್ಮ ಸಮರ್ಪಣ ಮಾರ್ಗವನ್ನು ಹಿಡಿದು ಆ ಸರ್ವಶಕ್ತನನ್ನು ಆರಾಧಿಸಿ ಆ ಮೂಲಕ ಆ ಸರ್ವಶಕ್ತನ ದಿವ್ಯಶಕ್ತಿಯು ತನ್ನಲ್ಲಿ ಮೇಲಿನಿಂದ ಇಳಿದು ಬಂದುಬಿಡುತ್ತದೆ ಎಂದು ಅವನು ಪ್ರತ್ಯಾಶಿಸುತ್ತಾನೆ ಮತ್ತು ತನ್ನ ಮಹತ್ವಾಕಾಂಕ್ಷೆಗಳನ್ನು ಆ ಶಕ್ತಿಯ ನೆರವಿನಿಂದ ಪೂರೈಸಿಕೊಳ್ಳುವುದು ಖಂಡಿತವಾಗಿ ಸಾಧ್ಯ ಎಂದು ದೃಢವಾಗಿ ನಂಬುತ್ತಾನೆ ! ಆದರೆ ಅಂಥ ನಂಬಿಗೆಯ ಆತ್ಯಂತಿಕ ಫಲವೇನು?

ಆತ್ಮ ಸಮರ್ಪಣೆಯು ಪೂರ್ಣವಾದರೆ ನಾನೆಂಬ ರೂಪದಲ್ಲಿ ಉದಯಿಸಿದ ಅಹಂಕಾರವು ತಾನು ಊಹಿಸಿಕೊಂಡ ಈ ಎಲ್ಲ ವಿಚಾರಗಳೊಡನೆ ತನ್ನ ಮೂಲ ಆಕರವಾದ ಬ್ರಹ್ಮಾತ್ಮದಲ್ಲಿ ಮುಳುಗಿ ತನ್ನ ಪ್ರತ್ಯೇಕ ಸಂಜ್ಞೆಯನ್ನು ಕಳೆದುಕೊಳ್ಳಲೇ ಬೇಕಾಗುತ್ತದೆ! ಅದಾಗುವವರೆಗೆ ಆತ್ಮಸಮರ್ಪಣವು ಪೂರ್ಣವಲ್ಲ–ಪೂರ್ಣವಾಗಲು ಸಾಧ್ಯವಿಲ್ಲ. ಸಮರ್ಪಣೆಯು ಪೂರ್ಣವಾದರೆ, ಈ ಮನುಷ್ಯನು ಪ್ರತ್ಯೇಕ ಪದಾರ್ಥವಾಗಿ ಉಳಿಯಲಾರ. ಅವನೇ ಈ ಪ್ರಕಾರ ಉಳಿಯದಂತಾದಾಗ (ಅಹಂಕಾರ ಯಾ ಜೀವಾತ್ಮನೇ ಪರಬ್ರಹ್ಮದಲ್ಲಿ ಆತ್ಯಂತಿಕವಾಗಿ ಲಯ ಹೊಂದಿದಾಗ) ಯಾರಲ್ಲಿ ದಿವ್ಯಶಕ್ತಿಯು ಇಳಿದು ಬರಬೇಕು? ಮತ್ತು ಯಾರು ಅದನ್ನು ಬಳಸಿಕೊಂಡು ಜಗತ್ತಿನ ಪುನರಚನೆಯನ್ನು ಮಾಡಬೇಕು?

ಅಯ್ಯೋ! ಕಟ್ಟಕಡೆಗೆ ಈ ಕಥೆಯು "ಕೈವಲ್ಯನವನೀತಂ" ಎಂಬ ಗ್ರಂಥದ, ಕೆಳಗೆ ಕೊಟ್ಟ ಪದ್ಯದ ಸಮರ್ಪಕ ದೃಷ್ಟಾಂತವಾಗಿ ಮುಗಿಯುತ್ತದೆ.

"ಬಂಜೆಯ ಮಗನೊಬ್ಬನೂ ಕಂಬದ ಮೇಲೆ ಅಧ್ಯಾರೋಪಿತನಾದ ಮನುಷ್ಯನೊಬ್ಬನೂ ತಮ್ಮನ್ನು ಆಕಾಶದಲ್ಲಿ ಕಂಡ ಊಹಾತ್ಮಕ ಪುಷ್ಪಗಳಿಂದ ಸಿಂಗರಿಸಿಕೊಂಡು ಪರಸ್ಪರ ಜಗಳದಲ್ಲಿ ಬಿದ್ದರು. ಹಾಗೆ ಅವರು ಜಗಳಕ್ಕೆ ಬಿದ್ದುದ್ದು ಊಹಾತ್ಮಕ ನಗರದಲ್ಲಿ. ಜಗಳವಾದದ್ದು ಮುತ್ತಿನ ಚಿಪ್ಪಿನಲ್ಲಿದ್ದ ಬೆಳ್ಳಿಗಾಗಿ. ಅವರು ಪರಸ್ಪರ ಹೊಡೆದಾಡಿದುದು ಮೊಲದ ಕೊಂಬುಗಳಿಂದ. ಕೊನೆಗೆ ಅವರಿಬ್ಬರೂ ಸತ್ತು ಹೋಗಿ ಅದೃಶ್ಯ ಭೂತಗಳಾದರು. ಸಾಮಾನ್ಯ ವಿವೇಕವಿರುವ ಯಾವನಾದರೂ ಇಂಥ ಕಥೆಗೆ ಮರುಳಾಗಿ ಹೋದಾನೇನು?"

–ಅಧ್ಯಾಯ ಎರಡು, ಪದ್ಯಸಂಖ್ಯೆ ೮೯

ಅಯ್ಯೋ! ಅಷ್ಟರವರೆಗೆ ತನ್ನ ಮೆದುಳನ್ನು ಬಳಸಿ ಅನವಶ್ಯಕವಾಗಿ ತನ್ನನ್ನು ತಾನೇ ಗೊಂದಲಕ್ಕೀಡು ಮಾಡಿಕೊಳ್ಳುವ ಅವಶ್ಯಕತೆ ಮನುಷ್ಯನಿಗೆ ಎಲ್ಲಿಂದ ಬಂತು? ಒಂದು ಪ್ರಶ್ನೆಯ ರೂಪದಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳಿಗೆ ಹೇಳಿದಾಗ "ಮೊದಲು ಆತ್ಮ ಸಮರ್ಪಣೆಯು ಪೂರ್ಣವಾಗಲಿ. ಉಳಿದುದನ್ನು ಆಮೇಲೆ ನೋಡಬಹುದು!" ಎಂದು ಉತ್ತರ ಕೊಟ್ಟರು. ಅದರ ಅರ್ಥವೇನು? ಅದನ್ನು ತಿಳಿದುಕೊಳ್ಳಲು ನಾವು ಯತ್ನಿಸೋಣ.

ಭೂಲೋಕವನ್ನು ಸ್ವರ್ಗೀಕರಿಸುವ ಮತ್ತು ಮನುಷ್ಯಜಾತಿಯನ್ನು ದಿವ್ಯೀಕರಿಸುವ ಕೆಲಸಗಳನ್ನು ಹೊಸದಾಗಿ ಮಾಡಬೇಕಾಗಿಲ್ಲ! ನಿಜವಾದ ಸ್ಥಿತಿಯಲ್ಲಿ ಜಗತ್ತು ಯಾವಾಗಲೂ ಬ್ರಹ್ಮವೇ ಮತ್ತು ಮನುಷ್ಯ ಸಹಾ, ತನ್ನ ನಿಜ ಸ್ವರೂಪದಲ್ಲಿ, ನಿತ್ಯವಾದ ಬ್ರಹ್ಮಾತ್ಮ. ಅಂಥ ಪರಿವರ್ತನೆ ಅವರಿಗೆ ಬೇಕಾಗಿಲ್ಲ ; ಆದರೆ ಅವರನ್ನು ನಿಜವಾಗಿ ಇದ್ದ ಹಾಗೇ ನೋಡುವ ಅವಶ್ಯಕತೆ ನಮಗಿದೆ ! ನಿನ್ನ ದೃಷ್ಟಿಕೋನವನ್ನು ದಿವ್ಯವಿವೇಕವನ್ನಾಗಿ ಮಾಡಿಕೊಂಡು ಜಗತ್ತನ್ನು ಬ್ರಹ್ಮನೆಂದು ನೋಡು ("ದೃಷ್ಟಿಂ ಜ್ಞಾನಮಯೀಂ ಕೃತ್ವಾ ಪಶ್ಯೇದ್ ಬ್ರಹ್ಮಮಯಂ ಜಗತ್"). ದೃಷ್ಟಿಕೋನದಲ್ಲಿಯ ದೋಷದಿಂದಲ್ಲದೆ ಜಗತ್ತಿನಲ್ಲಿ ವಿಘ್ನಗಳು ತೋರುವುದು ಸೃಷ್ಟಿಯಲ್ಲಿಯ ನ್ಯೂನತೆಯಿಂದಲ್ಲ. ಈ ವಿಘ್ನಗಳ ಪರಿಹಾರಕ್ಕೆ ಮಾಡಬೇಕಾದ ಕೆಲಸವೆಂದರೆ ನಮ್ಮ ದೃಷ್ಟಿಕೋನವನ್ನು ಸುಧಾರಿಸಿಕೊಳ್ಳುವುದು ಮಾತ್ರ – ಸರ್ವಶಕ್ತನ ಅಧಿಕಾರವನ್ನು ಅಪಹರಿಸಿ ಜಗತ್ತಿನಲ್ಲಿ ಸುಧಾರಣೆ ಮಾಡುವುದಲ್ಲ.

ದೃಶ್ಯವಾದುದೆಲ್ಲಾ ಅದೃಶ್ಯವಾಗುವುದು ("ಯದ್ದೃಷ್ಟಂ ತನ್ನಷ್ಟಂ") 'ಸೃಷ್ಟವಾದುದೆಲ್ಲವೂ ಲಯ ಹೊಂದುವುದು ; ಹುಟ್ಟಿದ್ದೆಲ್ಲಾ ಸಾಯುವುದು ("ಜಾತಸ್ಯಹಿ ಧ್ರುವೋ ಮೃತ್ಯುಃ"); ಬರುವುದೆಲ್ಲಾ ಹೋಗತಕ್ಕದ್ದೇ ಆಗಿದೆ ; ಹೊಸದಾಗಿ ಕಲಿತದ್ದೆಲ್ಲಾ ಮರೆತು ಹೋಗತಕ್ಕದ್ದೇ ಆಗಿರುತ್ತದೆ. ಆದರೆ ದೃಶ್ಯಾದೃಶ್ಯತೆಗಳನ್ನು, ಸೃಷ್ಟತೆ–ನಶ್ಯತೆಗಳನ್ನು, ಜನ್ಮ–ಮೃತ್ಯುಗಳನ್ನು, ಆಗಮನ–ನಿರ್ಗಮನಗಳನ್ನು, ಉದಯಾಸ್ತಂಗಮನಗಳನ್ನು ಮತ್ತು ನವಜ್ಞಾತತೆ–ವಿಸ್ಮೃತತೆ ಮುಂತಾದವುಗಳನ್ನು ಮೀರಿದ ಪದಾರ್ಥವೊಂದೇ ಸತ್ಯವಾದುದು; ಅದು ಮಾತ್ರ ನಿತ್ಯವಾದುದು ; ಅದೇ ನೀನು! ನೀನು ಹುಟ್ಟಿರಲೇ ಇಲ್ಲ ; ನಿನ್ನ ಶರೀರ ಹುಟ್ಟಿದ್ದು, ಸಾವಿನಿಂದ ಅಥವಾ ಅದೃಶ್ಯತೆಯಿಂದ ಶರೀರವು ತನ್ನ ರೂಪವನ್ನು ಕಳೆದುಕೊಂಡೇ ತೀರುತ್ತದೆ. ಅದು ಸರ್ವಕಾಲದಲ್ಲೂ ಬದುಕಿರಲಾರದು. ಅದನ್ನು ಸದಾ ಬದುಕುವಂತೆ

ಮಾಡಲು ಸಾಧ್ಯವೂ ಇಲ್ಲ! ಅಪೇಕ್ಷೆ ಪಟ್ಟರೆ ಒಬ್ಬನು ತನ್ನ ಅತೀಂದ್ರಿಯ ಶಕ್ತಿಗಳನ್ನು ಬೆಳೆಯಿಸಿ ಬಳಸಿಕೊಂಡು ಶರೀರದ ಜೀವಿತಾವಧಿಯನ್ನು ಹೆಚ್ಚಿಸಿಕೊಳ್ಳಬಹುದು. ತಿರುಮೂಲ ಮುನಿಯ ಶರೀರವು ವರ್ಷಕ್ಕೊಂದು ಪವಿತ್ರ ತಿರುಮಂತ್ರವನ್ನು ರಚಿಸುತ್ತಿದ್ದು ೩೦೦೦ ವರ್ಷಗಳ ಕಾಲ ಬದುಕಿಯೂ ಕಟ್ಟಕಡೆಗೆ ತನ್ನ ರೂಪವನ್ನು ಕಳೆದುಕೊಳ್ಳಬೇಕಾಯಿತು! ಯಾರೂ ಶರೀರದ ರೂಪವನ್ನು (ಆಕೃತಿಯನ್ನು) ನಿತ್ಯತೆಗೇರಿಸಲಾರರು! ಹಾಗೆ ಮಾಡಲು ಯತ್ನಿಸುವುದು ವ್ಯರ್ಥ. ಏಕೆಂದರೆ ಈವರೆಗೆ ಯಾರೂ ಹಾಗೆ ಮಾಡಲು ಸಮರ್ಥರಾಗಲಿಲ್ಲ. ಇದು ಇಲ್ಲದಿರುವ ಪಟ್ಟಣದತ್ತ ಹೋಗಲು ದಾರಿಯನ್ನು ರಚಿಸುತ್ತ ಹೋದ ಹಾಗೆ !

ಇಲ್ಲಿ ಯಾರಾದರೂ ಕೇಳಬಹುದು. "ಶ್ರೀ ಜ್ಞಾನ ಸಂಬಂಧರು ಮತ್ತು ಮಾಣಿಕ್ಕವಚಕರಂಥ ಮುನಿಗಳು ತಮ್ಮ ಶರೀರಗಳನ್ನು ಹೆಣವಾಗಿ ಬಿಡಲಿಲ್ಲ ಎಂಬುದು ಸತ್ಯ ಸಂಗತಿಯಲ್ಲವೇ? ಅದು ದೇಹವನ್ನು ಅಮರಗೊಳಿಸಿದಂತೆಯೇ ಅಲ್ಲವೇ?" ಎಂದು. ಉತ್ತರ ಇಂತಿದೆ: ಹೆಣಗಳನ್ನಾಗಿ ಬಿಟ್ಟ ಇತರ ಶರೀರಗಳಿಗೆ ಏನಾಗುತ್ತದೆ? ದೇಹವು ವಿಘಟಿಸಿ ತಾನು ನಿರ್ಮಿತವಾಗಿದ್ದ ಪಂಚಭೂತಗಳ ರೂಪವನ್ನು ಹೊಂದುತ್ತದೆ. ವಿಘಟಿಸುವುದಕ್ಕೆ ಯಾ ರೂಪನಾಶಕ್ಕೆ ಬೆಂಕಿ, ಮಣ್ಣು, ಗಾಳಿ ಅಥವಾ ನೀರು ಎಂಬ ಯಾವುದಾದರೂ ಒಂದು ಪದಾರ್ಥದಲ್ಲಿ ಹೆಣವನ್ನು ಹಾಕಲಾಗುತ್ತದೆ ; ಈ ನಾಲ್ಕರಲ್ಲಿ ಯಾವ ಒಂದು ಆದರೂ ಅದನ್ನು ವಿಘಟಿಸಬಲ್ಲದು. ಹೀಗೆ ವಿಘಟನ ಕಾರ್ಯದಿಂದ ದೇಹವು ಅದೃಶ್ಯವಾಗುವುದು – ಕಾಲಕ್ರಮೇಣ ಅದು ತನ್ನ ರೂಪವನ್ನು ಕಳೆದುಕೊಳ್ಳುವುದು. ಕೆಲವರ ಪ್ರಕರಣಗಳಲ್ಲಿ ವಿಘಟನ ಕಾರ್ಯವು ಈಶ್ವರನ ಆಜ್ಞೆಯನುಸಾರವಾಗಿ (ದಿವ್ಯಾದೇಶದಂತೆ) ಕ್ಷಣಾರ್ಧದಲ್ಲಿ ಒಂದೇ ಏಟಿಗೆ, ಮುಗಿದು ಹೋಗಿ ಬಿಡುತ್ತದೆ. ಆದರೆ ಫಲಿತಾಂಶಗಳಲ್ಲಿ ಯಾವ ವ್ಯತ್ಯಾಸವಿದೆ? ಏನೂ ಇಲ್ಲ! ಅವರ ದೇಹಗಳೂ ಅದೃಶ್ಯವಾಗಿ ಅಸದ್ರೂಪ ತಾಳುವುದಲ್ಲದೆ (ಕೊನೆಯದಾಗಿ ನಾಶ ಹೊಂದುವುದಿಲ್ಲವೇ?) ವಿಘಟನ ವಿಧಾನದಲ್ಲಿ ಮಾತ್ರ ವ್ಯತ್ಯಾಸವಿದೆ–ಅದಕ್ಕೆ ತೆಗೆದುಕೊಂಡ ಕಾಲಾವಧಿಯಲ್ಲಿ ಮಾತ್ರ ಇದೆ. ಆದುದರಿಂದ ಅದು ಶರೀರವನ್ನು ಅಮರಗೊಳಿಸಿದಂತಲ್ಲ. ಅನಿವಾರ್ಯವಾದ ದೇಹರೂಪನಾಶವು ಯಾವ ರೀತಿಯಿಂದ ಆದರೆ ಏನು? ಏಕೆಂದರೆ ಅವರ ದೇಹಗಳೂ ಒಂದು ಕಾಲಾವಧಿಯಲ್ಲಿ ಜನ್ಮ ತಾಳಿದವುಗಳಾದುದರಿಂದ ಸಾವನ್ನು ಯಾ ರೂಪನಾಶವನ್ನು ಅವು ಎದುರಿಸಲೇ ಬೇಕು–ಅದೃಶ್ಯವಾಗಲೇಬೇಕು! ಇಲ್ಲಿ ಕೇಳಬಹುದು. ಮಹಾತ್ಮರ ಸ್ಥೂಲ ಶರೀರಗಳು ಅದೃಶ್ಯವಾದರೂ ಅವರು ತಮ್ಮ ಸೂಕ್ಷ್ಮ ಶರೀರಗಳಲ್ಲಿ ಬದುಕಿದ್ದು ಜಗತ್ತಿನ ವ್ಯವಹಾರಗಳನ್ನು ಪ್ರಶಾಸನಕ್ಕೊಳಪಡಿಸುತ್ತಿಲ್ಲವೇ? ಆದುದರಿಂದ ಸೂಕ್ಷ್ಮ ರೂಪದಲ್ಲಾದರೂ ಅವರ ಶರೀರಗಳು ಇರುವುವಲ್ಲವೇ?" ಉತ್ತರ ಈ ಪ್ರಕಾರವಾಗಿದೆ:

ಮಹಾತ್ಮರಿಗೆ ಮಾತ್ರ ಸೂಕ್ಷ್ಮ ಶರೀರಗಳಿದ್ದು ಲೋಕದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗಿರುವುದೇ? ಸಾಮಾನ್ಯ ಜನರೂ ತಮ್ಮ ಸ್ಥೂಲ ಶರೀರವನ್ನು ಬಿಟ್ಟ ಬಳಿಕ ಸೂಕ್ಷ್ಮ ಶರೀರಗಳನ್ನು ಧರಿಸಲು ಶಕ್ತರಾಗಿ ತಮ್ಮ ತಮ್ಮ ಪ್ರಪಂಚದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬಲ್ಲವರಾಗಿದ್ದಾರೆ : ಅವರವರ ಪಾಪ–ಪುಣ್ಯಗಳ ಪ್ರಕಾರ ಅವರವರಿಗೆ ಅಂಥಂಥ ಸೂಕ್ಷ್ಮ ಶರೀರ ದೊರಕುತ್ತದೆ. ಪದಾರ್ಥತ್ರಯದಲ್ಲಿ ಒಬ್ಬನಾದ ದೇವರೂ ಅದೇ ಪ್ರಕಾರ ಸೃಷ್ಟಿ–ಸ್ಥಿತಿ–ಲಯಗಳೆಂಬ ತನ್ನ ಕಾರ್ಯಗಳಲ್ಲಿ ಮಗ್ನನಾಗಿದ್ದಾನೆ ! ದ್ವೈತ ಪ್ರಜ್ಞೆಯ ಮಟ್ಟದಲ್ಲಿ ಅಂಥ ಕೆಲಸ ನಡೆಯುತ್ತದೆಯೆಂದು ನಾವೂ ಸಮ್ಮತಿಸುವೆವಲ್ಲವೇ?

ಅದರತ್ತ ಆಶ್ಚರ್ಯಪಡಲಾದರೂ ಕಾರಣವೇನಿದೆ? ಈ ಕಾರಣಕ್ಕಾಗಿಯೇ ದೇವರ ರೂಪಗಳಿಗೂ ಸಹಾ ಸರ್ವನಿರಪೇಕ್ಷ ಸತ್ಯದ ದೃಷ್ಟಿಯಿಂದ ಸತ್ಯತೆಯಿಲ್ಲ ಎಂದು ಹೇಳಿದ್ದು ಈ ಕಾರಣಕ್ಕಾಗಿಯೇ : ರೂಪವೆಂದರಿಲ್ಲಿ ಪದಾರ್ಥತ್ವ. ಸ್ಥೂಲವಾಗಲಿ, ಸೂಕ್ಷ್ಮವಾಗಲಿ, ಕಾರಣವಾಗಲಿ ಅವು "ಶರೀರ" ಮಾತ್ರ ! ಎಲ್ಲಿಯವರೆಗೆ ಒಬ್ಬನು ಈ ಮೂರು ವಿಧದ ಶರೀರಗಳಲ್ಲಿ ಯಾವುದೊಂದರೊಡನೆ ಆದರೂ ನಾನೆಂಬ ತಾದಾತ್ಮ್ಯ ಭಾವದಲ್ಲಿದ್ದದ್ದೇ ಆದರೆ ಅಲ್ಲಿಯವರೆಗೆ ಅದು ಅಜ್ಞಾನವೇ. ನಿಶ್ಚಿತವಾಗಿಯೂ ಆ ದೇಹಕ್ಕೂ ಅದರೊಡನೆ ತಾದಾತ್ಮ್ಯ ಹೊಂದಿದ ಅಜ್ಞಾನಕ್ಕೂ ಒಂದು ಅಂತ್ಯವಿದ್ದೇ ಇರುತ್ತದೆ. ಸ್ವೇತರ ನಿರಪೇಕ್ಷ ಸತ್ಯ ಸ್ವರೂಪದ "ನಮಗೆ" ದೇಹರೂಪವಿಲ್ಲ – ಮೇಲೆ ಹೇಳಿದ ಶರೀರತ್ರಯದಲ್ಲಿ ಒಂದರ ರೂಪವೂ ಇಲ್ಲ. ದೇಹ ಹುಟ್ಟಿದ್ದು ಸಾಯುವುದಕ್ಕೆಂದೇ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಂಥ ನಿಗಮನಕ್ಕೆ ನಮ್ಮನ್ನೊಯ್ಯುವ ವಿವೇಕವೇ ಸರಿಯಾದ ವಿವೇಕ.

ತಮ್ಮ ದೇಹವು ಹುಟ್ಟುವುದಕ್ಕಿಂತ ಮೊದಲು ಈಗ ತಮ್ಮ ದೇಹದ ಆಯುರ್ದಾಯವನ್ನು ಮುಂಬರಿಸಲು ಅಥವಾ ಅಮರೀಕರಿಸಲು ಬಯಸುವವರು ಏನಾಗಿದ್ದರು ಮತ್ತು ಹೇಗಿದ್ದರು? ತಾವು ಹುಟ್ಟುವುದಕ್ಕಿಂತ ಮೊದಲು–ಈಗ ಇರುವ ಶರೀರದ ಆಯುಷ್ಯವನ್ನು ಹೆಚ್ಚಿಸಲು ಯಾ ಅಮರೀಕರಿಸಲು (ಕಾಯ್ದಿಡಲು) ಬಯಸುವವರು–ಈ ಶರೀರದ ಬಗ್ಗೆ ಏಕೆ ಚಿಂತಿಸುತ್ತಿದ್ದಿಲ್ಲ? ಹುಟ್ಟುವುದಕ್ಕಿಂತ ಮೊದಲು ಅವರಿಗೆ ಸದ್ಯದ ಈ ಶರೀರವಿರಲಿಲ್ಲ. ಆದರೆ ಅವರು ಅದೊಂದು ನಷ್ಟವೆಂದು ಭಾವಿಸಲಿಲ್ಲ. ಹಾಗೇ ಸದ್ಯದ ಶರೀರ ಸತ್ತ ಮೇಲೆಯೂ ಅವರು ಸದ್ಯದ ಈ ಶರೀರ ಇಲ್ಲದವರಾಗಿರುವರು. ಹೀಗಿರುವಾಗ ಅವರಿಗೆ ಹೊಸದಾಗಿ ಯಾವ ನಷ್ಟವುಂಟಾಗುತ್ತದೆ ಮತ್ತು ಏಕೆ ಅವರು ಇದರ ಬಗೆಗೆ ಚಿಂತಿಸಬೇಕು? ಬ್ರಹ್ಮಾತ್ಮದ ಯಾ ತಾವು ನಿಜವಾಗಿ ಏನಾಗಿರುವರೋ ಅದರ–ಪೂರ್ಣ ಜ್ಞಾನವಿಲ್ಲದುದೇ ಅವರ ಮೇಲೆ ಹೇಳಿದ ಎಲ್ಲ ಪ್ರಯತ್ನಗಳಿಗೂ ಕಾರಣ ಎಂದರೆ ಯುಕ್ತಿಯುಕ್ತವಾಗುವುದಿಲ್ಲವೇ? ಆದುದರಿಂದ ಅವರ ಪ್ರಯತ್ನಗಳೆಲ್ಲವನ್ನೂ ಸರಿಯಾಗಿ ಬ್ರಹ್ಮಾತ್ಮವನ್ನರಿಯುವತ್ತ ಒಯ್ಯುವ ಕಾಲುವೆಯಲ್ಲಿ ಹರಿಯಿಸಲಿ.

ಇಷ್ಟೂ ಅಲ್ಲದೆ, ಯಾವಾಗಲೂ ರೋಗರಹಿತರೂ ದೋಷರಹಿತರೂ ಮರಣರಹಿತರೂ ಆದ ನಮಗೆ ದೇಹವೇ ಒಂದು ರೋಗ. ತಮ್ಮ ಕಾಯಿಲೆಯ ಕೊನೆಯ ದಿನಗಳಲ್ಲಿ ಶ್ರೀ ಭಗವಾನ್ ರಮಣರು ಒಮ್ಮೆ ತಮ್ಮ ಭಕ್ತರಿಗೆ ಅವರು ಗುರುಗಳ ಶರೀರದ ಸ್ಥಿತಿಯ ಬಗ್ಗೆ ಅತ್ಯಂತ ವ್ಯಾಕುಲರಾಗಿದ್ದಾಗ– "ದೇಹವೇ ಒಂದು ರೋಗ. ಆ ರೋಗಕ್ಕೆ ಇನ್ನೊಂದು ರೋಗ ಹಿಡಿದರೆ ಅದು ನಮ್ಮ ಒಳಿತಿಗೇ ಆಗುವುದಿಲ್ಲವೇ?" ಎಂದೊಮ್ಮೆ ಹೇಳಿದರು.

"ಕಾಯಿಲೆಯನ್ನು ಮುಂಬರಿಸಲು ಔಷಧ ತೆಗೆದುಕೊಳ್ಳುವವನಂತೆ ದುಃಖದಾಯಕ ಕಾಯಿಲೆಗಳೆಲ್ಲವುಗಳ ಕಾರಣವಾದ ವಿಷವನ್ನುಳ್ಳ ವಿಷ ಸ್ವರೂಪದ ಅಹಂಕಾರದೊಡಗೂಡಿದಬಾಲಿಶ ಜನರು ಮಾತ್ರ ದೇಹವನ್ನು ಬಲಿಷ್ಠವಾದುದನ್ನಾಗಿಯೂ ದೀರ್ಘಾಯುಷ್ಯವುಳ್ಳದ್ದನ್ನಾಗಿಯೂ ಮಾಡಲೆಂದು ಅಂತ–ಪಾರಗಳಿಲ್ಲದ ತಪಸ್ಸನ್ನು ಮಾಡುತ್ತಾರೆ."

"ಗುರುವಾಚಕ ಕೋವೈ", ನುಡಿ ೨೩೩

ಮೇಲೆ ಹೇಳಿದ ಮಾತುಗಳಿಂದ ನಾವು ಅರ್ಥ ಮಾಡಿಕೊಳ್ಳಬೇಕಾದದ್ದು ಇಂತಿದೆ: ಮೂಲತಃ ನಮ್ಮಲ್ಲಿ ಅಂತರ್ಗತವಾಗಿರುವ ಸಂಕಲ್ಪ ಶಕ್ತಿಯನ್ನು ಬಳಸುವ ಅಪ್ರಮಿತ ಸ್ವಾತಂತ್ರ್ಯದ ಮೂಲಕ ನಮ್ಮ ಅಸ್ತಿತ್ವದ ಅಪ್ರಮಿತ ಆನಂದದ ಸ್ವರೂಪವನ್ನು ಒಂದು ಪ್ರಮಿತ ದೇಹದೊಳಗೆ ಸಂಕುಚಿತವಾಗಿ ಇರುವಂತೆ ಮಾಡಿದುದರ ಫಲವಾಗಿಯೇ ನಮ್ಮಲ್ಲಿ ದೋಷಪೂರ್ಣವಾದ ದೃಷ್ಟಿಕೋನವು ಉಂಟಾಯಿತು. ಆ ನ್ಯೂನ ದೃಷ್ಟಿಕೋನದ ದೆಸೆಯಿಂದಲೇ ಈ ಜಗತ್ತಿನಲ್ಲಿ ನಮಗೆ ಕಂಡುಬರುವ ದುಃಖಗಳೆಲ್ಲಾ ಉಂಟಾಗಿವೆ; ಇದು ನಿಜವಾದ ಸಂಗತಿ. ಇದನ್ನು ಅರ್ಥಮಾಡಿಕೊಂಡ ಮೇಲೆ (ಆತ್ಮಾವಧಾನದ ಮೂಲಕ) ಪ್ರಪಂಚ ಮತ್ತು ದೇಹಗಳ ತೋರಿಕೆ ಎಂಬ ರೋಗವನ್ನು ಕೊನೆಗಾಣಿಸಿ ಆನಂದಮಯರಾಗಿ ಯಾವಾಗಲೂ ಇದ್ದು ಬಿಡುವುದೇ ವಿವೇಕಯುಕ್ತವಾದ ಕಾರ್ಯ ಎಂಬುದು ಸ್ಪಷ್ಟವಾಗುವುದು. ಆದುದರಿಂದ ಶರೀರವನ್ನು ಅಮರೀಕರಿಸುವ ಮತ್ತು ಪ್ರಪಂಚವನ್ನು ಸ್ವರ್ಗೀಕರಿಸುವ ಮನುಕುಲಕೃತ ಯೋಗಾಭ್ಯಾಸದ ಪ್ರಯತ್ನಗಳೆಲ್ಲವೂ ವ್ಯರ್ಥ ಮತ್ತು ಅವು ಕುರುಡನೊಬ್ಬನು ಒಂದು ಕತ್ತಲ ಕೋಣೆಯಲ್ಲಿ ತಾನು ಏನು ಮಾಡುತ್ತಿದ್ದೇನೆ ಎಂಬುದನ್ನೂ ಅರಿಯದೆ ಏನನ್ನೋ ಮಾಡುತ್ತಿರುವುದಕ್ಕಿಂತ ಯಾವ ರೀತಿಯಿಂದಲೂ ಹೆಚ್ಚು ಉತ್ತಮವೆನಿಸಲಾರವು. ಜಗತ್ತು ಮತ್ತು ದೇವರು ಎಂಬ ಎರಡು ಪದಾರ್ಥಗಳೂ ಬ್ರಹ್ಮಾತ್ಮಕ್ಕಿಂತ ಭಿನ್ನ ಎಂದು ತಪ್ಪು ವಿವೇಕದಿಂದ ಯಾ ಅಜ್ಞಾನದಿಂದ ಭಾವಿಸುವುದೇ ಸರ್ವಶಕ್ತನಾದ ದೇವರ ಶಕ್ತಿಯನ್ನು ಅಪಹರಿಸುವ ಹಾಗೂ ಮೇಲೆ ಹೇಳಿದ ಮಹತ್ವಾಕಾಂಕ್ಷೆಯ ಕಾರ್ಯಗಳನ್ನು ಮಾಡುವ ಈ ಎಲ್ಲ ಚಟುವಟಿಕೆಗಳಿಗೂ ಮೂಲ ಕಾರಣ. ಬ್ರಹ್ಮಾತ್ಮದ ಸರಿಯಾದ ಜ್ಞಾನ ಇಲ್ಲದಿರುವುದೇ ಈ ದಿಕ್ಕಿನಲ್ಲಿ (ಮನುಷ್ಯ) ಸಾಗಲು ಕಾರಣ. ಅಂದರೆ ತನ್ನನ್ನು ತಾನು ಅವಿಭಾಜ್ಯವಾದ ಪೂರ್ಣ ಪದಾರ್ಥ, ಜಗತ್ತಿನ ಪದಾರ್ಥತ್ರಯವನ್ನು (ದೇವರು, ಜಗತ್ತು ಮತ್ತು ಜೀವ ಎಂಬೀ ಮೂರನ್ನು) ಮೀರಿದ ಪರಮ ಸತ್ಯ ಎಂದು (ಮನುಷ್ಯನು) ತಿಳಿಯದಿರುವುದೇ ಸರಿಯಾದ ಜ್ಞಾನದ ಅಭಾವ. ಆದುದರಿಂದ ಜಗತ್ತು ಹಾಗೂ ದೇವರ ಬಗೆಗೆ ಗಡಿಬಿಡಿಯಿಂದ ಯಾವುದಾದರೂ ನಿಗಮನಕ್ಕೆ ಬರುವ ಮೊದಲು ಸರಿಯಾಗಿ ಬ್ರಹ್ಮಾತ್ಮವನ್ನು ತಿಳಿದುಕೊಳ್ಳುವ ಕಡೆಗೆ ಮೊಟ್ಟಮೊದಲು ಮನುಷ್ಯ ಪ್ರಯತ್ನಗಳು ಸಾಗಲಿ. ಆಗ ಜಗತ್ತು ಮತ್ತು ದೇವರುಗಳ ಬಗೆಗಿನ ಸತ್ಯವು ತನ್ನಿಂದ ತಾನೇ ಉದಯವಾಗುವುದು !

"ಆದ್ದರಿಂದ ನಮ್ಮ ಸುತ್ತಲೂ ನರಳುತ್ತಿರುವ ಎಲ್ಲ ಜೀವಿಗಳ ಬಗೆಗೂ ನಾವು ಕರುಣೆ ತೋರದೆ ಇರಬೇಕೇ? ಮನುಕುಲದ ಸೇವೆಗಿಳಿದು ನಾವು ಅದರ ದುಃಖಗಳೆಲ್ಲವನ್ನೂ ಪರಿಹರಿಸತೊಡಗಬೇಡವೇ? ಸರಿಯಾದ ನಕ್ಷೆಯಲ್ಲಿ ಚಿತ್ರಿಸಿದ ಮತ್ತು ಅನುಸರಿಸಲಾದ "ಕರ್ಮಯೋಗ" ಎಂಬ ಮಾರ್ಗವಿಲ್ಲವೇ?" ಎಂದು ಕೆಲವರು ಕೇಳುವುದು ಸ್ವಾಭಾವಿಕವಾಗಿದೆ.

ಹೌದು, ಇತರರ ಯೋಗಕ್ಷೇಮವನ್ನು ಲಕ್ಷಿಸುವುದು ಒಂದು ಮಹಾತತ್ವ! ಆದರೆ ಇತರರಿಗೆ ಯಾವುದು ಒಳಿತು? ಎಂಬುದನ್ನು ತಿಳಿದುಕೊಳ್ಳುವ ಮೊದಲು ನಮಗೆ ಯಾವುದು ಒಳಿತು? ಎಂಬುದನ್ನು ತಿಳಿದುಕೊಳ್ಳುವುದು ಮೊದಲಿನ ಅವಶ್ಯಕತೆಯಲ್ಲವೇ? ತಾನು ನಿಜವಾಗಿ ಯಾರು? ಎಂಬುದನ್ನು ತಿಳಿಯದಿರುವಾಗ ತನಗೆ ಯಾವುದು

ಒಳಿತು? ಎಂಬುದನ್ನು ಮನುಷ್ಯನು ತಿಳಿಯದಿರುವುದು ಆಶ್ಚರ್ಯಕರವಲ್ಲ. ಇದನ್ನವನು ತಿಳಿದ ಹೊರತು ಇತರರೆಂದರೆ ಯಾರು? ಮತ್ತು ಅವರಿಗೆ ಯಾವುದು ಒಳಿತು? ಎಂಬುದನ್ನು ಹೇಗೆ ತಿಳಿದುಕೊಳ್ಳಬಲ್ಲನು? ಪರಿಮಿತವಾದ ದೃಷ್ಟಿಕೋನದಿಂದ ಮಾನವನು ತಾನೊಂದು ಶರೀರವೆಂದು ನಂಬಿರುವುದರಿಂದ ಇತರರನ್ನೂ ಶರೀರಗಳೆಂದೇ ತಿಳಿದುಕೊಳ್ಳಬಲ್ಲನು ಮತ್ತು ಅದೇ ತಪ್ಪು ದೃಷ್ಟಿಕೋನವು ತನಗೂ ಇತರರಿಗೂ ಯಾವುದು ಒಳಿತು? ಎಂಬುದನ್ನು ಮನುಷ್ಯನು ತಪ್ಪಾಗಿ ನಿರ್ಧರಿಸುವಂತೆ ಮಾಡುತ್ತದೆ. ಇದರ ಜೊತೆಗೆ, ಒಳಿತು ಯಾವುದು? ಕೆಡಕು ಯಾವುದು? ಎಂಬುದನ್ನು ಸರಿಯಾಗಿ ತಿಳಿದುಕೊಳ್ಳುವುದರಲ್ಲಿ ಕೂಡಾ ಅವನು ಪೆಚ್ಚಾಗಿರುತ್ತಾನೆ. ತಾನು ಯಾರೆಂಬುದನ್ನು ಮೊದಲು ಸರಿಯಾಗಿ ತಿಳಿದುಕೊಳ್ಳದಿರುವ ಅಜ್ಞಾನ, ಇತರರೆಂದರೆ ಯಾರೆಂಬುದನ್ನು ಸರಿಯಾಗಿ ತಿಳಿದುಕೊಳ್ಳದ ಅಜ್ಞಾನ–ಇವುಗಳ ಜೊತೆಗೆ ಒಳಿತು–ಕೆಡುಕುಗಳೆಂದರೆ ಏನೆಂಬುದನ್ನು ತಿಳಿಯದಿರುವ ಅಜ್ಞಾನವೂ ಸೇರಿದರೆ ಅವು ಮನುಷ್ಯನನ್ನು ಗಂಡಾಂತರಕ್ಕೀಡು ಮಾಡಿ ಅವನನ್ನು ತೆಗೆದುಕೊಂಡು ಹೋಗಿ, ಅವನ ಚಟುವಟಿಕೆಗಳೆಲ್ಲವೂ ಗೊಂದಲದಲ್ಲಿ ಬೀಳುವಂತೆ ಮಾಡದಿರವು !

ಯಾವುದು ಒಳಿತು? ಯಾವುದು ಕೆಡಕು? ಇಂದಿನ ದಿನಮಾನದಲ್ಲಿ ಯಾವುದಾದರೂ ಒಂದು ವಿಧದ ವಿವೇಚನೆಯ ಪ್ರಕಾರ ನಾವು ನಿನ್ನೆ ಒಳಿತೆಂದು ನಿರ್ಣಯಿಸಿದ್ದನ್ನು ಇಂದು ಕೆಡುಕೆಂದು ನಿರ್ಣಯಿಸಿ ಬಿಡುತ್ತೇವೆ. ಅದೇ ಮೇರೆಗೆ, ಇನ್ನೊಂದು ವಿಧದ ವಿವೇಚನೆಯಂತೆ ಇಂದು ನಾವು ಒಳಿತೆಂದು ತೀರ್ಮಾನಿಸಿದ್ದನ್ನು ನಾಳೆ ಕೆಡುಕೆಂದು ತೀರ್ಮಾನಿಸಿ ತ್ಯಜಿಸಿ ಬಿಡಬಹುದು. ನಮ್ಮ ರಾಗ–ದ್ವೇಷಗಳಿಗನುಗುಣವಾಗಿ ನಮ್ಮ ಒಳಿತು–ಕೆಡಕುಗಳ ಮಟ್ಟಗಳು ಎಷ್ಟೋ ವೇಳೆ ಬದಲಾಗುತ್ತವೆ. ಇದರಿಂದ ನಾವು ಯಾವ ತೀರ್ಪಿಗೆ ಬರಬಹುದು? ಒಳಿತು–ಕೆಡಕುಗಳ ಬಗೆಗೆ ನಮ್ಮಲ್ಲಿ ಅಭೇದ್ಯವಾದ ಲಕ್ಷಣವಿಲ್ಲ; ಒಳಿತು–ಕೆಡುಕೆಂಬಿವು ಅನೇಕ ದ್ವಂದ್ವಗಳಲ್ಲಿ ಒಂದು ಎಂಬುದಿಷ್ಟೇ ನಾವು ಮಾಡಬಹುದಾದ ನಿಗಮನ. ಇಂಥ ಗೊಂದಲದಲ್ಲಿ ನಾವು ಜಗತ್ತಿಗೆ ಯಾವ ಒಳಿತನ್ನು ಹೇಗೆ ಮಾಡಬಲ್ಲೆವು? ಹೀಗಿರುವಾಗ ಮಲಬದ್ಧತೆಯಿಂದ ನರಳುತ್ತಿರುವ ಒಬ್ಬನು ತನ್ನ ಪರೋಪಕಾರಿ ಚಿತ್ತಲಹರಿಯಲ್ಲಿದ್ದಾಗ ಒಮ್ಮೆ (ದೀರ್ಘಕಾಲಿಕ ಅತಿಸಾರದಿಂದ ನರಳುತ್ತಿರುವವರನ್ನೂ ಹಿಡಿದು) ಎಲ್ಲರಿಗೂ ಜುಲಾಬಿನ ಗುಳಿಗೆಯನ್ನು ಕೊಟ್ಟರೆ ಅದರಲ್ಲಿ ಆಶ್ಚರ್ಯವೇನು! ಒಬ್ಬನನ್ನು ಆದೇಶಿಸಿದ ಪರೋಪಕಾರಿ ಚಿತ್ತಲಹರಿಯು–ತನ್ನಂತೆಯೇ ಪರರೆಂದು ತಿಳಿದಾಗ–ಇಂಥ ವಿಪರೀತ ರೀತಿಯಿಂದಲೇ ಕೆಲಸ ಮಾಡುತ್ತದೆ!

ಮೇಲೆ ಹೇಳಿದ್ದನ್ನು ನಾವೀಗ ಪುನಃ ಸ್ಮರಿಸಿಕೊಳ್ಳೋಣ.

(೧) ಮನುಷ್ಯನಿಗೆ ತಾನೇನೆಂಬುದು ಗೊತ್ತಿಲ್ಲದುದರಿಂದ ಜಗತ್ತೇನಿದೆ ಎಂಬುದು ಗೊತ್ತಾಗದು ; (೨) ತನಗೆ ಯಾವುದು ಒಳಿತೆಂಬುದನ್ನು ಮನುಷ್ಯನು ಅರಿಯದಿರುವಾಗ ಪರರಿಗೆ ಯಾವುದು ಒಳಿತೆಂಬುದನ್ನು ಅರಿಯಲಾರ ; (೩) ಎಲ್ಲ ನೆರವನ್ನೂ ಮನುಷ್ಯ ತನಗೇ ಕೊಡಲಾರನಾದುದರಿಂದ ಖಂಡಿತವಾಗಿಯೂ ಅವನು ಜಗತ್ತಿಗೆ ನೆರವನ್ನೀಯಲಾರ. ಈ ಮೂರು ಕಾರಣಗಳಿಂದ ಸುಧಾರಕರೆಂದು ಹೇಳಿಕೊಂಡು ಮುನ್ನುಗ್ಗಿದವರೆಲ್ಲರೂ ಒಳಿತನ್ನು ಮಾಡುವೆವೆಂಬ ತಪ್ಪು ಕಲ್ಪನೆಯಿಂದ ಜಗತ್ತಿಗೆ ಎಷ್ಟೋ ಅಪರಾಧ–

ಅಪಾಯಗಳನ್ನು ತಂದೊಡ್ಡಿದವರಾಗದೆ ಗತ್ಯಂತರವಿರಲಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಾಮಾನ್ಯ ವಿಚಾರ. ಆ ಬಡ ಸುಧಾರಕರ ಬಗೆಗೆ ಏಕೆ ಮಾತನಾಡಬೇಕು! ಒಂದೇ ಏಟಿಗೆ ಜಗತ್ತನ್ನು ಸುಧಾರಿಸಲಾರೆನೆಂದು ದೇವರೇ ಒಪ್ಪಿಕೊಂಡಿರುವಾಗ ಜಗತ್ತಿಗೆ ಸ್ಥಾಯಿಯಾದ ಒಳಿತನ್ನು ಅವರಲ್ಲಿ ಯಾರಾದರೂ ಮಾಡಬಲ್ಲೆವೆಂದು ಹೇಗೆ ಪ್ರತ್ಯಾಶೆ ಪಟ್ಟಾರು? ಹುಟ್ಟಿದಂದಿನಿಂದ ದೊಡ್ಡ ಪವಾಡಗಳನ್ನು ಮಾಡುತ್ತ ಹೋದ ಶ್ರೀ ಕೃಷ್ಣನ ಮಾತುಗಳತ್ತ ಹೊರಳೋಣ :

"ಧರ್ಮವನ್ನು ಸಂಸ್ಥಾಪಿಸಲೋಸುಗ ನಾನು ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ (ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ)"

–("ಭಗವದ್ಗೀತೆ"ಯ ೪ನೆಯ ಅಧ್ಯಾಯದ ೮ನೆಯ ಪದ್ಯ.)

ಅವನ ಮಾತಿನಿಂದಲೇ ಅವನು ಪುನಃ ಪುನಃ (ಈ ಜಗತ್ತಿಗೆ) ಬರಬೇಕಾಗುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳುವಂತೆ ಮಾಡಲಾಗಿದೆ. ಅವನು ಮಾಡಿದ ಸುಧಾರಣೆಯು ನಿತ್ಯವಾದುದಾಗಿದ್ದರೆ ಪುನಃ ಪುನಃ ಅವನು ಇಲ್ಲಿಗೆ ಬರುವ ಅಗತ್ಯವಿರುತ್ತಲೇ ಇರಲಿಲ್ಲ! ಇದರಿಂದ ನಾವು ಯಾವ ತೀರ್ಮಾನಕ್ಕೆ ಬರಬಹುದು? ಇದು ಸರ್ವಶಕ್ತನಾದ ಭಗವಂತನ ಅಸಾಮರ್ಥ್ಯವನ್ನಲ್ಲ–ಜಗತ್ತಿನ ಅನಿತ್ಯತೆಯನ್ನು ತೋರಿಸುತ್ತದೆ! ಭಗವಾನ್ ಶ್ರೀ ರಮಣರು ಈ ಸಂಗತಿಯನ್ನೇ ಎತ್ತಿ ತೋರಿಸಿದರು. ಆದುದರಿಂದ ಸುಧಾರಣೆಯ ಹೆಸರಿನಲ್ಲಿ ಮಾನವನ ಅಹಂಕಾರವೆದ್ದು ಅವನನ್ನೂ ಜಗತ್ತನ್ನೂ ಹಾಳು ಮಾಡದಿರಲಿ. ಮೊದಲು ನಾವು ಈ ತರಹದ ಭಾವನೆಗಳನ್ನು ಹಿಡಿತಕ್ಕೆ ತಂದುಕೊಂಡು ಶಾಂತ ಮನಸ್ಕರಾಗೋಣ.

"ಶ್ರೀ ರಮಣ ಮಾರ್ಗದ" ಒಂದನೆಯ ಭಾಗದಲ್ಲಿ –ಬ್ರಹ್ಮಾತ್ಮದ ಬಗೆಗಿನ ಅಜ್ಞಾನದ ದೆಸೆಯಿಂದ "ಸ್ವಾರ್ಥಪರತೆ" ಎಂಬ ಪದವನ್ನು ಒಂದು ದುರ್ಗುಣವನ್ನು ಹೆಸರಿಸಲು ನಾವು ಹೇಗೆ ಬಳಸುತ್ತೇವೆ ಎಂಬುದನ್ನು ಕಂಡಿದ್ದೇವೆ. ಖಂಡಿತೋಕ್ತಿಯಿಂದ ಹೇಳಬೇಕಾದರೆ, ಜ್ಞಾನಿಯ ದೃಷ್ಟಿಯಲ್ಲಿ ಅವನಿಂದ ಬಿನ್ನವಾದ ಜಗತ್ತೆಂಬುದೇ ಇಲ್ಲವಾದರೂ ತನ್ನ ಆತ್ಮವೆಂದೇ ಇಡೀ ಜಗತ್ತನ್ನು ಯಾವನು ಅನುಭವಕ್ಕೆ ತಂದುಕೊಂಡಿರುವನೋ ಆ ಜ್ಞಾನಿ ಒಳಿತೆಂದು ನಿರ್ಧರಿಸಿದ್ದು ಮಾತ್ರ–ನಿಜವಾಗಿ ಒಳಿತು–ಕೆಡಕುಗಳಾವುವು ಎಂಬುದನ್ನು ನಾವು ತಿಳಿದುಕೊಳ್ಳಲೇಬೇಕೆಂದಾದರೆ – ಸರಿಯಾದ ನಿರ್ಣಯವಾದೀತು.

ಅತ್ಯಂತ ಹೆಚ್ಚಿನ ಪರಿಮಿತಿಗೊಳಗಾದ ದೇಹ ಮಾತ್ರ ಮಾನವನಿಗೆ "ನಾನು" ಎಂಬ ಅನುಭವವಾಗಿ ತೋರುತ್ತದೆ. ಅಂಥ ಪರಿಮಿತಾನುಭವದ ಫಲವಾಗಿ–ಜಗತ್ತೂ ಅದರೊಳಗಿನ ಎಲ್ಲ ಜೀವಿಗಳೂ ಎಂದರೆ ಅವನಿಗೆ ತೋರುವ ಎಲ್ಲವೂ ತನ್ನಿಂದ ಬೇರೆ ಎಂದು ಅವನಿಗೆ ಕಾಣುತ್ತದೆ. ದೇಹವನ್ನೇ "ನಾನು" ಎಂದು ಅನುಭವದಲ್ಲಿ ಅರ್ಥ ಮಾಡಿಕೊಂಡಿರುವುದರಿಂದ (ಅವನ ಪ್ರಕಾರ) ಸ್ವಾರ್ಥಪರತೆಯನ್ನು ಒಂದು ದುರ್ಗುಣ ಎಂದು ಗಣಿಸಲಾಗಿದೆ. ಆದರೆ ಬ್ರಹ್ಮಾತ್ಮ ಸ್ವರೂಪದ ನಿಜವಾದ ಅನುಭವವುಳ್ಳ ಜ್ಞಾನಿಗೆ "ನಾನು" ಎಂಬುದು ಸರ್ವವ್ಯಾಪಕವಾದ ಒಂದೇ ಒಂದು ಇಡಿ ಎಂಬ ಅನುಭವವುಂಟಾಗುತ್ತದೆ. ಆದುದರಿಂದ ಅವನ ದೃಷ್ಟಿಕೋನದ ಪ್ರಕಾರ, ಅವನ

"ಸ್ವಾರ್ಥಪರತೆ" ಎಂಬುದು ಅತ್ಯುನ್ನತ ಪರೋಪಕಾರ ಭಾವ. ಹೀಗೆ ಎಲ್ಲವೂ ಅವಿಭಾಜ್ಯವಾದ ಬ್ರಹ್ಮಾತ್ಮವೆಂದು ಜ್ಞಾನಿಗೆ ಅನುಭವವುಂಟಾದಾಗ ಅವನಿಗೆ ಅವನ ದೇಹವೂ "ನಾನೆಂಬ" ಆ ಅನುಭವದೊಳಗೆ ಸೇರಿಕೊಂಡಿದೆ ಎನ್ನಿಸುವುದಿಲ್ಲವೇ? ಅಜ್ಞಾನಿಯ[೮] ಅನುಭವವು "ನಾನೀ ದೇಹಮಾತ್ರ" ಎಂದಾದರೆ ಜ್ಞಾನಿಯ ಅನುಭವವು "ನಾನೀ ದೇಹಕೂಡಾ" ಎಂದಾಗಿರುತ್ತದೆ. "ಉಳ್ಳದ್ದು ನಾರ್ಪ.ದು" ವಿನ ೧೭ನೆಯ ಪದ್ಯದಲ್ಲಿ ಶ್ರೀ ಭಗವಾನ್ ರಮಣರು ಹೀಗೆ ವಿವರಿಸಿದ್ದಾರೆ: "ಬ್ರಹ್ಮಾತ್ಮಾನುಭವವಾಗದಿದ್ದವರಿಗೂ ಬ್ರಹ್ಮಾತ್ಮಾನು ಭವವಾದವರಿಗೂ ಈ ದೇಹವು "ನಾನು" ; ಆದರೆ ಬ್ರಹ್ಮಾತ್ಮಾನುಭವವಾಗದಿದ್ದವರಿಗೆ "ನಾನು" ಎಂಬುದು ದೇಹದ ಗಡಿಗಷ್ಟೇ ಪರಿಸೀಮಿತ ; ದೇಹದ ಒಳಗೆ ಬ್ರಹ್ಮಾತ್ಮಾನುಭವವಾದವರಿಗೆ (ದೇಹದ ಒಳಗೆ=ಈ ಜನ್ಮದಲ್ಲಿಯೇ) "ನಾನು" ಅಪರಿಮಿತ (ಅಪ್ರಮೇಯ) ಬ್ರಹ್ಮಾತ್ಮವಾಗಿ ಪ್ರಕಾಶಿಸುತ್ತದೆ. ಈ ಇಬ್ಬರಲ್ಲಿರುವ ಭೇದ ಇದೇ ಎಂದು ತಿಳಿ."

ಇದೇ ಮೇರೆಗೆ, ಜ್ಞಾನಿಗೆ ಇಡೀ ಜಗತ್ತು ತನ್ನಿಂದ ಬೇರೆಯಲ್ಲ ಎಂಬ ಅನುಭವವಾಗಿರುವಾಗ (ತನ್ನಿಂದ=ಬ್ರಹ್ಮಾತ್ಮದಿಂದ=ಸಚ್ಚಿದಾನಂದದಿಂದ) ಜಗತ್ತು ಸತ್ಯವೆಂದು ತಿಳಿಯುವುದು ಜ್ಞಾನಿಗೆ ತಪ್ಪಾಗದು. ಆದರೆ ಎಲ್ಲಿಯವರೆಗೆ ತನ್ನ ಅನುಭವವು ದೇಹಕ್ಕಷ್ಟೇ ಪರಿಸೀಮಿತವಾಗಿರುವುದೋ ಅಲ್ಲಿಯವರೆಗೆ ಒಬ್ಬ ಅಜ್ಞಾನಿಯು "ಜಗತ್ತು ಸತ್ಯ" ಎಂದು ಹೇಳಿದರೆ ಅದು ತಪ್ಪು. ಏಕೆಂದರೆ, ಅಜ್ಞಾನಿಯು ಬ್ರಹ್ಮದ ಅಸತ್ಯ ಮುಖಗಳಾದ ನಾಮರೂಪಗಳಿಂದಾದ ಜಗತ್ತನ್ನು ಸತ್ಯವೆಂದು ಗ್ರಹಿಸುತ್ತಾನೆ. ಅವನಿಗೆ, "ಬ್ರಹ್ಮವಷ್ಟೇ ಸತ್ಯ ; ಜಗತ್ತು ಮಿಥ್ಯೆ (ಬ್ರಹ್ಮ ಸತ್ಯಂ ಜಗನ್ಮಿಥ್ಯಾ) ಎಂದು ಉಪದೇಶಿಸಬೇಕು. ಆದರೆ ಜ್ಞಾನಿಯ ಸರ್ವೋಚ್ಚವೂ ಅವಿಭಾಜ್ಯವೂ ಆದ ಅನುಭವದ ದೃಷ್ಟಿಕೋನದಿಂದ ನಿಜವಾಗಿಯೂ ಜಗತ್ತು ಬ್ರಹ್ಮ ಯಾ ಅಸ್ತಿತ್ವ, ಚೈತನ್ಯ ಮತ್ತು ಆನಂದ (ಸಚ್ಚಿದಾನಂದ). ಇದನ್ನು ಶ್ರೀ ಭಗವಾನ್ ರಮಣರು ತಮ್ಮ "ಉಳ್ಳದು ನಾರ್ಪ.ದು"ವಿನಲ್ಲಿ ವಿವರಿಸಿದ್ದಾರೆ. "ಬ್ರಹ್ಮಾತ್ಮಾನುಭವವಾಗದವರಿಗೂ ಬ್ರಹ್ಮಾತ್ಮಾನುಭವವಾದವರಿಗೂ ಜಗತ್ತು ಸತ್ಯ. ಬ್ರಹ್ಮಾತ್ಮ ಸಾಕ್ಷಾತ್ಕಾರವಾಗದವರಿಗೆ ಸತ್ಯವು ಜಗತ್ತಿನ (ನಾಮ–ರೂಪಗಳ) ಅಳತೆಯದು. ಬ್ರಹ್ಮಾತ್ಮ ಸಾಕ್ಷಾತ್ಕಾರವಾದವರಿಗೆ ಸತ್ಯವು ಜಗತ್ತಿನ ನಾಮರೂಪರಹಿತವಾದ ಅಧಿಕರಣವಾಗಿ ಪ್ರಕಾಶಿಸುತ್ತದೆ. ಈ ಇಬ್ಬರಲ್ಲಿರುವ ವ್ಯತ್ಯಾಸವು ಇದು ಎಂದು ತಿಳಿ."

ಜ್ಞಾನಿಯ ಸ್ವಾರ್ಥಪರತೆಯೇ ನಿಜವಾಗಿ ಜನರು ಈವರೆಗೆ ಸ್ತುತಿಸುತ್ತ ಬಂದ ಸರಿಯಾದ ಬಗೆಯ "ನಿಃಸ್ವಾರ್ಥತೆ". ತದ್ವಿರುದ್ಧವಾಗಿ, ಪರರ ಯೋಗಕ್ಷೇಮವು ತನ್ನ ಬಡಮನಸ್ಸಿನಲ್ಲಿ ಕೆಲವು ವೇಳೆ ಏಳುವ ಸಾತ್ವಿಕ (ಚಿತ್ತ) ವೃತ್ತಿಯ ಮೂಲಕ ಬರುವ ಔದಾರ್ಯವೆಷ್ಟೋ ಅಷ್ಟು ಔದಾರ್ಯದ ಮೊತ್ತದಿಂದ ನಿರ್ಧರಿಸಲ್ಪಡುತ್ತದೆ – ಆ ಜೀವನ (ಜೀವಿಯ) ಬುದ್ಧಿಯು ಎಷ್ಟು ಆಶ್ಚರ್ಯಕರವಾಗುವಷ್ಟು ಪ್ರಜ್ವಲವಾಗಿರಲಿ, ಜ್ಞಾನದ

೮. ದೇಹಪ್ರಜ್ಞೆಯು ಪರಿಸೀಮಿತವಾದುದು. ಅಪರಿಮಿತವಾದ ನಿತ್ಯವಾಗಿರುವ ಬ್ರಹ್ಮಚೈತನ್ಯದೊಡನೆ (ಆತ್ಮಪ್ರಜ್ಞೆಯೊಡನೆ) ಅದನ್ನು ಹೋಲಿಸುವುದು ಅಸಾಧ್ಯ. ಜ್ಞಾನಿಯ ದೇಹಪ್ರಜ್ಞೆಯು ಅವನ ಅನುಭವದಲ್ಲಿರುವ ಕೇವಲಾತ್ಮಪ್ರಜ್ಞೆಯ ಅಣುಪ್ರಮಾಣದ ಅಂಶದ ಕಿರಣ ಪ್ರತಿಬಿಂಬ ಮಾತ್ರ. ಈ ವಿಧದಿಂದಲೇ ಜ್ಞಾನಿಗೆ ತನ್ನ ದೈಹಿಕ ಅಸ್ತಿತ್ವದ ಜಾಗರವಿರುತ್ತದೆ.

– "ಶ್ರೀ ಮಹರ್ಷಿಗಳ ಅಮೃತವಾಣಿ"–ಅಧ್ಯಾಯ೪

ಭಿನ್ನ ಶಾಖೆಗಳಲ್ಲಿ ಎಷ್ಟೇ ತಜ್ಞತೆಯನ್ನು ಪಡೆದಿರಲಿ – "ಈ ದೇಹವೇ ನಾನು" ಎಂಬಷ್ಟಕ್ಕೆ ಅದರ ಜ್ಞಾನವು ಪರಿಸೀಮಿತವಾಗಿದ್ದರೆ (ಅದು ಮಾಡುವ ಪರರ ಯೋಗಕ್ಷೇಮದ ಕೆಲಸಗಳು) ಜಗತ್ತಿನ ಅಯೋಗ–ಅಕ್ಷೇಮಗಳಲ್ಲಿಯೇ ಪರ್ಯವಸಾನ ಹೊಂದುತ್ತವೆ !

ಮೇಲೆ ಹೇಳಿದ ಮಾತುಗಳಿಂದ ಓದುಗನು ಪರೋಪಕಾರ ಮಾಡುವುದು ತಪ್ಪೆಂದು ತಿಳಿಯಬಾರದು ; ತನ್ನ ಉಪಕಾರವನ್ನೇ ಗುರಿಯನ್ನಾಗಿ ಇಟ್ಟುಕೊಳ್ಳದಿದ್ದಾಗ ಪರರಿಗೆ ಮಾಡಿದ ಉಪಕಾರಗಳೆಲ್ಲವೂ ಉಪಕಾರಗಳೇ ಆಗುತ್ತವೆ.

ನಿಷ್ಕಾಮ ಪೂಜೆಯ ಬಹು ಬಗೆಗಳಲ್ಲಿ ಜಗತ್ತನ್ನು ದೇವರ ಒಂದು ರೂಪವೆಂದು ಪೂಜಿಸುವುದುನ್ನು ಶಿಫಾರಸ್ಸು ಮಾಡಲಾಗಿದೆ. ಜಗತ್ತನ್ನು (ವಿಶ್ವವನ್ನು) ದೇವರೆಂದು ಭಾವಿಸಿ ಪೂಜಿಸುವುದನ್ನು ಮನಸ್ಸಿನ ಕಲ್ಪನಾ ಪ್ರಕ್ರಿಯೆಯ ಮೂಲಕ ಮಾತ್ರ ಮಾಡಬಹುದು. ಆದುದರಿಂದ ಅದು ಮಾನಸಿಕ ದೇವರ ಪೂಜೆಯಲ್ಲದೆ, ಪರಮಸತ್ಯದ ಪೂಜೆಯಾಗದು. ಆದರೆ ವಿಶ್ವವನ್ನು ದೇವರೆಂದು (ಅದು ನಿಜವಾಗಿ ಅದನ್ನು ಪೂಜಿಸುತ್ತಿರುತ್ತದೆ) ನಿಜವಾಗಿ ಅನುಭವಕ್ಕೆ ತಂದುಕೊಳ್ಳುವುದು ಸಾಧ್ಯವಾಗುವುದು ಜಗತ್ತೂ ದೇವರೂ ಬ್ರಹ್ಮಾತ್ಮೇತರ ಪದಾರ್ಥಗಳಾಗಿ ಉಳಿದಿರದ ಸ್ಥಿತಿಯ ಸ್ವರೂಪದ ನಿಜವಾದ ಬ್ರಹ್ಮಾತ್ಮ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡ ಮೇಲೆಯೇ.

"ಮೊಟ್ಟಮೊದಲು ನೀನು ಅವನನ್ನು ಹೃದಯದಲ್ಲಿ ನೋಡುತ್ತೀಯೆ–
ಅವನು ಎಲ್ಲ ಕಡೆಗಳಲ್ಲಿಯೂ ಇರುತ್ತಾನೆ ;
ಆಗ ಮಾತ್ರ ನೀನು ಅವನಾಗಿಯೇ ಎಲ್ಲವೂ ಇರುತ್ತದೆ ಎಂಬ
ಜಾಗರವನ್ನು ಹೊಂದುವೆ"

ಪದ್ಯಾನುವಾದ

ಎಲ್ಲೆಲ್ಲೂ ಇರುವ ಅವನ ನೋಡುವೆ ನೀ ಹೃದಯದಲ್ಲಿ
ಮೊಟ್ಟಮೊದಲಿಗೆ
ಎಲ್ಲಕ್ಕೂ ದೇವಗಿರುವ ಅಸ್ತಿತ್ವವೆ ಇರುವುದೆಂದು
ಅರಿಯುವೆ ಕೊನೆಗೆ

"ಧ್ಯಾನಗೀತೆ"_______ "ಸಾಧನೈ ಸಾರಂ"

ಮನದಿಂದಾದರೂ ಜಗತ್ತನ್ನೂ ಅದರಲ್ಲಿರುವ ಜೀವಿಗಳನ್ನೂ ದೇವರೆಂದು ನೋಡುವುದರಿಂದ ಮನಃಶುದ್ಧಿ ಎಂಬ ಒಂದು ಮಹಾಪ್ರಯೋಜನವು ನಮಗೆ ದೊರಕುತ್ತದೆ. ಕರ್ಮಯೋಗದ ಗುಪ್ತ ಗುರಿ ಇದೇ. ಮನುಷ್ಯನಿಗೆ, ಅವನ ಸಾಮಾನ್ಯ ಮನೋಬುದ್ಧಿಗೆ ಅನುಗುಣವಾಗಿ ಸಹಾ, ತೋರುವಂತೆ ವಿವೇಚಿಸಿ ತನಗೆ ಯಾವುದು ಒಳಿತು? ಪರರಿಗೆ ಯಾವುದು ಒಳಿತು? ಎಂಬುದನ್ನು ನಿರ್ಧರಿಸಲು ಕರ್ಮ ಯೋಗವು ಅವಕಾಶ ನೀಡುತ್ತದೆ. ಆದರೆ ಈ ಅವಕಾಶ ಕೊಟ್ಟದ್ದರ ಉದ್ದೇಶವು ಜಗತ್ತಿನ ಎಲ್ಲ ದುಃಖಗಳನ್ನು ಸಂಪೂರ್ಣವಾಗಿ ನಿವಾರಿಸುವುದೂ ಅಲ್ಲ, ಅಸಾಧ್ಯನೂ ಒಬ್ಬನೇ ಒಬ್ಬನೂ ಆದ ದೇವರನ್ನು ಸೆರೆಹಿಡಿಯುವುದೂ ಅಲ್ಲ–ಎಂಬುದನ್ನು ತಿಳಿದುಕೊಂಡಿರಬೇಕು. "ಉಪದೇಶ ಉಂದಿಯಾರ್" ಗ್ರಂಥದ ೩ನೆಯ ಪದ್ಯದಲ್ಲಿ ಶ್ರೀ ಭಗವಾನ್ ರಮಣರು ಕರ್ಮಯೋಗದ ಕ್ರಮವನ್ನೂ ಫಲವನ್ನೂ

ಕೊಟ್ಟಿದ್ದಾರೆ. "ಫಲಾಸಕ್ತಿಯಿಲ್ಲದೆ ಈಶ್ವರಾರ್ಪಣ ಭಾವದಿಂದ ಮಾಡಿದ ಕರ್ಮಗಳು ಮನಸ್ಸನ್ನು ಶುದ್ಧಗೊಳಿಸಿ ಮುಕ್ತಿಮಾರ್ಗವನ್ನು ನಿರ್ದೇಶಿಸುತ್ತವೆ. ಇದು ಗುಪ್ತಧ್ಯೇಯವಾಗಿರುವುದರಿಂದ ಕರ್ಮಯೋಗದಲ್ಲಿ ಇದನ್ನು (ಹೀಗೆ ಕರ್ಮ ಮಾಡುವುದನ್ನು) ಆಜ್ಞಾಪಿಸಲಾಗಿದೆ.

> **"ಕರ್ಮದಲ್ಲಿ ಮಾತ್ರ ನಿನಗೆ ಅಧಿಕಾರವಿದೆ, ಕೆಲಸ ಮಾಡುವ ಹಕ್ಕು ಮಾತ್ರ ನಿನಗಿದೆ. ಅವುಗಳ ಫಲಗಳಲ್ಲಿ ನಿನಗೆ ಎಂದೂ ಹಕ್ಕಿಲ್ಲ.**
> **(ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ)"**
>
> **–ಭಗವದ್ಗೀತೆಯ ೨ನೆಯ ಅಧ್ಯಾಯದ ೪೭ನೆಯ ಶ್ಲೋಕ**

ಇಲ್ಲಿ "ಫಲಗಳು" ಎಂಬ ಪದವು ಸಾಧಕನ (ಮುಮುಕ್ಷುವಿನ) ಚಟುವಟಿಕೆಯ ಫಲಗಳಿಗಲ್ಲದೆ ಕರ್ಮಯೋಗಾಭ್ಯಾಸದ ಫಲಗಳಿಗೂ ಅನ್ವಯಿಸುತ್ತದೆ! ಮನುಕುಲದ ಸೇವೆಗಳಿಂದ ಕರ್ಮಯೋಗಿಯು ನಿಃಸ್ವಾರ್ಥ ಉದ್ದೇಶದಿಂದ ಇದ್ದು ತಾನು ಸೇವೆ ಸಲ್ಲಿಸುತ್ತಿರುವವರಾದರೂ ದುಃಖ ಮುಕ್ತರಾಗಬೇಕು ಮತ್ತು ಸುಖ ಪಡೆಯಬೇಕು ಎಂದು ಫಲ ನಿರೀಕ್ಷೆಯಲ್ಲಿರುತ್ತಾನೆ. ಸ್ವ ಪ್ರಯೋಜನವೊಂದನ್ನು ತಾನು ತ್ಯಾಗ ಮಾಡುತ್ತಿದ್ದೇನೆ ಎಂದು ಅವನು ಆಲೋಚಿಸಬಹುದು ; ಆದರೆ ವಸ್ತುತಃ ಅವನು, ಅಂಥ ಕೆಲಸವು ಮನಸ್ಸನ್ನು ಶುದ್ಧೀಕರಿಸುವುದರಿಂದ, ತನಗೇ ಉಪಕಾರ ಮಾಡಿಕೊಳ್ಳುತ್ತಿದ್ದಾನೆ. ಮುಮುಕ್ಷುವು (ಸಾಧಕನು) ಮೊಟ್ಟಮೊದಲು, ಕರ್ಮಯೋಗದ ಅನುಷ್ಠಾನದ ಆರಂಭ ಕಾಲದಲ್ಲಿ ನಿರೀಕ್ಷಿತ ಫಲವನ್ನಾದರೂ ಪಡೆಯದಿದ್ದರೆ, ಕರ್ಮಯೋಗದಲ್ಲಿಯ ಶ್ರದ್ಧೆ–ಉತ್ಸಾಹಗಳು ಅವನಿಂದ ಹೊರಟು ಹೋಗುತ್ತವೆ : ತನ್ನ ಸೇವೆಯಿಂದ ಜಗತ್ತು ದುಃಖ ಮುಕ್ತವಾಗುವುದೆಂಬುದೇ ನಿರೀಕ್ಷಿತ. ಕರ್ಮಯೋಗದ ಬಗೆಗಿನ ಉತ್ಸಾಹವೂ ಶ್ರದ್ಧೆಯೂ ಹೊರಟು ಹೋದರೆ, ಕರ್ಮಯೋಗದ ಉದ್ದೇಶವಾದ ಮನಃಶುದ್ಧೀಕರಣವೇ ಇಲ್ಲವಾಗುತ್ತದೆ.

ಚಿತ್ತ ಶುದ್ಧೀಕರಣವೂ ಆ ಮೂಲಕ ಬರುವ ಸರಿಯಾಗಿ ವಿವೇಚಿಸುವ ಶಕ್ತಿಯೂ ಮುಮುಕ್ಷುವಿನಲ್ಲಿ ಏಕಕಾಲಕ್ಕೆ ಬೆಳೆಯುತ್ತವೆ. ಆದುದರಿಂದ ಅವನ ಮನಸ್ಸು ಶುದ್ಧ–ಶುದ್ಧತರವಾಗುತ್ತ ಹೋದ ಹಾಗೆ ಅವನು ಹೆಚ್ಚಿನ ಸ್ಪಷ್ಟದರ್ಶನದ ಶಕ್ತಿಯನ್ನು ಪಡೆಯುತ್ತಾನೆ; ಆ ಸ್ಪಷ್ಟದರ್ಶನ ಶಕ್ತಿಯಿಂದ ಅವನ ಅರ್ಥಗ್ರಹಣ ಶಕ್ತಿಯು ನಿಶಿತ–ನಿಶಿತತರವಾಗುತ್ತ ಹೋಗುತ್ತದೆ. ಆಗ ಮಾತ್ರ ಅವನು ತನ್ನ ನಿಶಿತಮತಿಯ ಬಲದಿಂದ ಬ್ರಹ್ಮಾತ್ಮವನ್ನು ಸರಿಯಾಗಿ ಅರಿತುಕೊಳ್ಳುವ ಅಗತ್ಯವನ್ನು ಮನಗಾಣಲು ಶಕ್ತನಾಗುತ್ತಾನೆ. ಹಾಗೆ ಅರಿತುಕೊಳ್ಳುವುದೆಂದರೆ, ಜಗತ್ತು–ದೇವರುಗಳ ತೋರಿಕೆ ಹೇಗೆ ಆತ್ಮಜ್ಞಾನದೊಡನೆ ಸಂಬಂಧ ಹೊಂದಿದೆ ಎಂಬುದು ಮತ್ತು ಈ ಅಧ್ಯಾಯದಲ್ಲಿ ಈವರೆಗೆ ವಿವರಿಸುತ್ತ ಬಂದಂತೆ ಮನಸ್ಸಿನ ಶುದ್ಧೀಕರಣವು ಕರ್ಮಯೋಗದ ಮುಖ್ಯ ಧ್ಯೇಯ ಎಂಬುದು ಮುಮುಕ್ಷುವಿಗೆ ಸ್ಪಷ್ಟವಾಗುವುದು. ಹಾಗೆ ನೋಡಿದರೆ, ಮನಃಶುದ್ಧೀಕರಣಕ್ಕಿಂತ ಹೆಚ್ಚು ಯೋಗ್ಯವಾದ ಪ್ರಯೋಜನವನ್ನು ಕರ್ಮಯೋಗದಿಂದ ಪಡೆಯಲು ಏನಿದೆ? ಏಕೆಂದರೆ, ಮುಮುಕ್ಷುವಿನ ಮೇಲೆ ಅತ್ಯುನ್ನತ ಸತ್ಯವು ಬೆಳಕಿನಂತೆ ಬೀಳುವ ಹಾಗೆ ಮಾಡುವ ಆತ್ಮವಿಜ್ಞಾನವನ್ನು ಕಲಿಯಲು ಅವನು ಈಗ ಪಾತ್ರನಾಗುತ್ತಾನೆ. ಹಿಂದೆ ಹೇಳಲಾದ, ಶ್ರೀ ರಮಣಕೃತ "ಉಪದೇಶ ಉಂದಿಯಾರ್" ಎಂಬ ಗ್ರಂಥದ ಮೂರನೆಯ ನುಡಿಯಲ್ಲಿ ಎತ್ತಿ ತೋರಿಸಿದ್ದು ಈ ಕ್ರಮವಿಕಾಸವನ್ನೇ.

ಕರ್ಮಯೋಗದ ಅಭ್ಯಾಸದಿಂದ (ಅನುಷ್ಠಾನದಿಂದ) ಮನಃಶುದ್ಧೀಕರಣವು ಹೇಗೆ ಆಗುತ್ತದೆ?

ಮನಸ್ಸಿನಲ್ಲಿಯ ಅಶುದ್ಧತೆ ಎಂದರೆ ಏನೆಂಬುದನ್ನು ನಾವು ತಿಳಿದರೆ, ಕರ್ಮಯೋಗದ ಅನುಷ್ಠಾನದ ಮೂಲಕ ಅದನ್ನು ಹೇಗೆ ತೆಗೆದೆಸೆಯಬಹುದೆಂಬುದನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಲು ನಮಗೆ ಸಾಧ್ಯವಾಗುವುದು. ಮನಸ್ಸು ಯಾ ಚಿತ್ತ ಎಂಬುದರಲ್ಲಿ "ನಾನು" ಮತ್ತು "ನನ್ನದು" ಎಂಬಿವೇ ಅಶುದ್ಧ ಪದಾರ್ಥಗಳು. "ಚಿತ್ತಂ" ಎಂಬುದರಲ್ಲಿ "ತಂ" ಕಾರವಾಗಿರುವುದು ಈ ಕಲುಷಿತ ಪದಾರ್ಥಗಳಿಂದ. ಚಿತ್ತದಿಂದ ಈ ಕಾಲುಷ್ಯವನ್ನು ಕಳೆದು ತೆಗೆದರೆ, "ಚಿತ್" (ಶುದ್ಧ ಚೈತನ್ಯ) ಎಂಬ ಅದರ ನಿಜವಾದ ನಿತ್ಯ ಸ್ವರೂಪ ಉಳಿಯುತ್ತದೆ.

"ಕೆಂಪು ಹೂವಿನ ಹತ್ತಿರ ಇರುವಾಗ ವರ್ಣರಹಿತವಾದ ಹರಳು ಕೆಂಪಾಗಿ ತೋರುವಂತೆ "ಚಿತ್" (ಚೈತನ್ಯ ಯಾ ಪ್ರಜ್ಞೆ ಯಾ ಜಾಗರ) ಎಂಬುದು "ಚಿತ್ತಂ" ಆಗಿ ತೋರುವುದು (ಚಿತ್ತಂ=ಮನಸ್ಸು) ಚಿತ್ತಿನ ಮೇಲೆ ನಾನು–ನನ್ನದು ಎಂಬ ಅಪವಿತ್ರವಸ್ತುಗಳನ್ನು ಅಧ್ಯಾರೋಪಿಸಿದ ಮೇಲೆಯೇ. ಮಾಯೆಯಿಂದಾದ ಇವು ದೂರೀಕೃತವಾದೊಡನೆಯೇ ಅದು ಯಾವಾಗಲೂ "ಚಿತ್" ಆಗಿಯೇ ಪ್ರಕಾಶಿಸುತ್ತಿರುತ್ತದೆ.

– "ಗುರುವಾಚಕ ಕೋವೈ – ಪದ್ಯಸಂಖ್ಯೆ ೨೪೪

ಕಾಮ, ಕ್ರೋಧ ಮುಂತಾದ ಅಸಂಖ್ಯಾತ ಹೊಲಸು ಪದಾರ್ಥಗಳಿಗೆಲ್ಲಾ ಮೂಲಾಧಾರವಾಗಿರುವವು "ನಾನು" ಮತ್ತು "ನನ್ನದು" ಎಂಬೀ ಎರಡು. ಈ ಎರಡರಲ್ಲೂ ನನ್ನದು ಎಂಬ ಷಷ್ಠೀ ರೂಪವು (ಸಂಬಂಧಾರ್ಥಕವು) ನಾನು ಎಂಬುದು ಇರುವುದನ್ನೇ ಅವಲಂಬಿಸಿದೆ. "ನಾನು" ಎಂಬುದು ಇಲ್ಲದಲ್ಲಿ "ನನ್ನದು" ಎಂಬುದು ಇರದು. ಶುದ್ಧ ಸ್ವರೂಪದಲ್ಲಿ "ನಾನು" ಎಂಬುದೇ ಬ್ರಹ್ಮಾತ್ಮವಾಗಿದ್ದರೂ ಅದನ್ನು ಅಶುದ್ಧವೆಂದು ಪರಿಗಣಿಸಲು ಅದಕ್ಕಿರುವ ವಿಶೇಷಣಗಳೇ ಕಾರಣ. ಆ ವಿಶೇಷಣಗಳು ಅದಕ್ಕೆ ಹೊರತಾದ ಹೊರಗಿನವುಗಳು. ಅವು ಯಾವುವೆಂದರೆ – ಇದು ನಾನು, ಈ ದೇಹ ನಾನು, ನಾನೊಬ್ಬ ಮನುಷ್ಯ, ನಾನು ಅಂಥವನು ಮತ್ತು ಇಂಥವನು (ನನ್ನ ಸ್ಥಾನಮಾನಗಳಿಂಥವು)– ಎಂಬಿವೇ ಮೊದಲಾದವುಗಳು. ಆದುದರಿಂದ "ನಾನು ಇರುತ್ತೇನೆ" ಎಂಬುದಕ್ಕೆ ಹಚ್ಚುವ ವಿಶೇಷಣಗಳು "ಮೂಲಭೂತ ಅಶುದ್ಧ ಪದಾರ್ಥಗಳೆನ್ನಿಸುತ್ತವೆ". ಈ ಅಶುದ್ಧಿ (ಅಶೌಚ) ಹೋಗುವವರೆಗೆ ಆತ್ಮವನ್ನು (ಸಚ್ಚಿತ್ತನ್ನು) ಯಾ ಅಸ್ತಿತ್ವ ಚೈತನ್ಯಗಳ ಸಾತ್ಮ್ಯಭೂತ ಸ್ವರೂಪವನ್ನು "ಅಹಂಕಾರ" ಎಂದು ಕರೆಯಲಾಗುವುದು. ಈ ಮೂಲಭೂತ ಅಶುದ್ಧತೆಯನ್ನು ತೆಗೆದು ಹಾಕುವುದೇ ಯೋಗದ ನಿಜವಾದ ಉದ್ದೇಶ.

ಮುಮುಕ್ಷುಗಳ ಪಾತ್ರತೆಯನ್ನಾಧರಿಸಿ ಅಶೌಚ ಪರಿಹಾರಕ್ರಮಗಳು ಬೇರೆ ಬೇರೆ ವಿಧದವುಗಳಾಗುತ್ತವೆ. ಅದರ ಫಲವಾಗಿ ಭಿನ್ನ ಭಿನ್ನ ಯೋಗಗಳನ್ನು ರೂಪಿಸಬೇಕಾಯ್ತು. ತಮ್ಮ ಅಶುದ್ಧಾಂಶಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಬಹಳ ಆಸಕ್ತಿಯುಳ್ಳ ಮುಮುಕ್ಷುಗಳ ಪ್ರತ್ಯಕ್ಷದ ಕಕ್ಷೆಯಲ್ಲಿ ಮೊದಲು ಬರುವುವು "ನಾನು" ಎಂಬ ರೂಪದ ಮತ್ತು "ನನ್ನದು" ಎಂಬ ರೂಪದ ಅಶೌಚಾಂಶಗಳು : ಇವುಗಳಲ್ಲಿ ಮೊದಲನೆಯದು ಸೂಕ್ಷ್ಮ ಮತ್ತು ಎರಡನೆಯದು ಸ್ಥೂಲ. ಪ್ರಾಮಾಣಿಕ ಮುಮುಕ್ಷುವು ಆಗ "ಅದು ನನಗಾಗಿ ಆಗದಿರಲಿ

(ನನಗೆ ಸೇರಿದ್ದಾಗದಿರಲಿ)" ಎಂದು ಹೇಳಿ ಸರ್ವ (ಭೋಗ್ಯವಸ್ತು) ಪರಿತ್ಯಾಗ ಮಾಡುತ್ತಾನೆ. ಇದು ವೈರಾಗ್ಯಕ್ಕೆ ಒಯ್ದು ಮುಟ್ಟಿಸುವುದು. ಇನ್ನೊಂದು ವಿಧದ ಮುಮುಕ್ಷುವು "ಈ ಎಲ್ಲವುಗಳೂ (ನನಗೆ ಸೇರಿದ ಪದಾರ್ಥಗಳು) ಪರರ ಪ್ರಯೋಜನಕ್ಕೆ ಒದಗಲಿ – ನನ್ನ ಪ್ರಯೋಜನಕ್ಕಾಗಿ ಅಲ್ಲ" – ಎಂದು ಹೇಳಿ ತನ್ನಲ್ಲಿ ತ್ಯಾಗಾಗ್ನಿಯನ್ನು (ತ್ಯಾಗದ ಭಾವನೆಯನ್ನು) ಹೊತ್ತಿಸಿಕೊಳ್ಳುತ್ತಾನೆ. ೨ನೆಯ ಮಾದರಿಯ ತತ್ವದ ಮುಮುಕ್ಷುವನ್ನು ಆಧಾರವನ್ನಾಗಿ ತೆಗೆದುಕೊಂಡು ಕರ್ಮಯೋಗ[೯]ವನ್ನು ರೂಪಿಸಲಾಗಿದೆ. (ಜ್ಞಾನನಿಷ್ಠೆಯುಳ್ಳ ಮುಮುಕ್ಷುವು ೧ನೆಯ ಮಾದರಿಯ ತತ್ವದವನು.)

"ಐಶ್ವರ್ಯ, ಕೀರ್ತಿ, ಹೆಸರು ಮತ್ತು ಅವುಗಳಂಥ ಪ್ರಾಪಂಚಿಕ ಪದಾರ್ಥಗಳು ನನಗೆ ಸುಖ ಉಂಟಾಗುವಂತೆ ಮಾಡುವವುಗಳಾದರೆ – ಅವೆಲ್ಲವೂ ಪರರ ಸುಖಕ್ಕಾಗಿಯೇ ಒದಗಲಿ – ನನ್ನ ಸುಖಕ್ಕಾಗಿ ಅಲ್ಲ." ಈ ಬಗೆಯ ಮನಃ ಪ್ರಣಾಳಿಯಿಂದ ಮುಮುಕ್ಷುವು ತನ್ನ ಇಡೀ ಜೀವನದಲ್ಲಿ ಅಂಥ ಕರ್ಮಗಳಲ್ಲಿಯೇ ತನಗೆ ಶಕ್ಯವಾದ ರೀತಿಗಳಿಂದ ಮಗ್ನನಾಗುತ್ತಾನೆ. ಕೊಳಕು ವಸ್ತ್ರವು ಹೆಚ್ಚು ಹೆಚ್ಚಾಗಿ ಒಗೆದು ಹಿಂಡಿದ ಹಾಗೆ[೧೦] ಶುದ್ಧವಾಗುತ್ತಾ ಹೋಗುವ ಹಾಗೆ ಅವನ ಪ್ರತಿಯೊಂದು ನಿಃಸ್ವಾರ್ಥ ಕರ್ಮವೂ ಅವನ "ನನ್ನದುತನ"ದ ಮೇಲೆ ಹೊಡೆತ ಕೊಟ್ಟು ಆ ಮೂಲಕ ಅವನ ಮನಸ್ಸನ್ನು ಶುದ್ಧ–ಶುದ್ಧತರವನ್ನಾಗಿ ಮಾಡುತ್ತಾ ಹೋಗುತ್ತದೆ. ನಿತ್ಯಕರ್ಮಾನುಷ್ಠಾನದಲ್ಲಿ ಜನರು ಮಾಡಬೇಕೆಂದು ವೇದಗಳು ಆಜ್ಞಾಪಿಸಿ ಹೇಳುವ ಉಪವಾಸ, ದಾನ ಮತ್ತು ಇತರ ನಡತೆಯ ನಿಯಮಗಳನ್ನು ಸೂಕ್ಷ್ಮವಾಗಿ ನಾವು ಅವಲೋಕಿಸಿದರೆ– ಈ ವಿಧಿ ನಿಷೇಧಗಳು ಒಬ್ಬನು ತನ್ನಲ್ಲಿದ್ದ ಸ್ವಲ್ಪ ಸ್ವಾರ್ಥವನ್ನಾದರೂ (ನನ್ನದುತನವನ್ನಾದರೂ) ಬಿಡುವ ಹಾಗೆ ಮಾಡುವುದಲ್ಲದೆ ಅವನ ಐಹಿಕ ಭೋಗಲಾಲಸೆಯನ್ನು ತಡೆಹಿಡಿಯುತ್ತವೆ.

ಹೀಗೆ "ನಾನು" ಮತ್ತು "ನನ್ನದು" ಎಂಬ ಎರಡು ಅಶುಚಿಗಳಲ್ಲಿ ಸುಲಭವಾಗಿ ತೋರಿ ಬರುವ "ನನ್ನದು" ಎಂಬುದನ್ನು ಮರ್ಯಾದಸ್ಥ ಆಶೊತ್ತರಗಳನ್ನಿಟ್ಟುಕೊಂಡ ಸಜ್ಜನರೆಲ್ಲರೂ ಸಾಮಾನ್ಯವಾಗಿ ಬಿಡಲು ಮೊದಲು ಯತ್ನಿಸುತ್ತಾರೆ ಎಂಬುದು ಆಶ್ಚರ್ಯಕರವೇನಲ್ಲ. ಈ ಪ್ರಕಾರ ಮಮಕಾರ ತ್ಯಾಗದಿಂದ ಶುದ್ಧಿ ಹೊಂದಿದ ಮನಸ್ಸಿಗೆ ಮತ್ತೊಂದು ಸತ್ಯ ಕೂಡಾ ಹೊಳೆಯುತ್ತದೆ : "ಈ ಮಮಕಾರವು (ನನ್ನದುತನವು) ಒಂದು ಮರದ ಕೊಂಬೆ ಮತ್ತು ಎಲೆಗಳಂತಿದೆ. ಎಷ್ಟು ಪ್ರಯತ್ನ ಮಾಡಿ ಎಷ್ಟು ಸಲ ಈ ಕೊಂಬೆ ಮತ್ತು ಎಲೆಗಳನ್ನು ಕಡಿದರೂ (ಮಮಕಾರವನ್ನು ಮೊಟಕು ಮಾಡಿದರೂ) ಅವು ಅನುಕೂಲ ಪರಿಸ್ಥಿತಿಯಲ್ಲಿ ತಮಗೆ ಬೇಕಾದಷ್ಟು ಕಾಲವನ್ನು ತೆಗೆದುಕೊಂಡು ಮತ್ತೆ ಮತ್ತೆ ಚಿಗುರುತ್ತಲೇ ಇರುತ್ತವೆ. ಆದುದರಿಂದ ಮಮಕಾರದ ಬೇರಾದ "ನಾನು" ಎಂಬುದನ್ನು ಹುಡುಕಿ ತೆಗೆದು ನಾಶಗೊಳಿಸಿಬಿಡಬೇಕು". ಈ ಸತ್ಯವು ಹೊಳೆಯ ಬೇಕಾದರೂ ಮಮಕಾರದ ಅವಿಶ್ರಾಂತವಾದ ಒತ್ತಡವು ಬಹಳ ಕಡಿಮೆಯಾಗುವುದು ಅವಶ್ಯಕವಲ್ಲವೇ? ಪ್ರಾಮಾಣಿಕ ಮುಮುಕ್ಷುವಿಗೆ ಶುದ್ಧವಾದ ಮನಸ್ಸಿನ ಯುಕ್ತವಾದ ವಿವೇಕದ ಮೂಲಕ

---

೯. ಕರ್ಮಯೋಗಕ್ಕೆ ಒಬ್ಬನು ತಕ್ಕವನೋ ಅಲ್ಲವೋ ಎಂಬುದನ್ನು ಕಂಡುಹಿಡಿಯಲು ಮುಂದಿನ ಅಧ್ಯಾಯದಲ್ಲಿ ಉದ್ಧರಿಸಿ ಹೇಳಿದ "ಚಮಕಂ" ಎಂಬುದರ ಭಾಗಗಳನ್ನು ತುಲನೆ ಮಾಡುವುದು ಉಪಯುಕ್ತವಾಗುವುದು.

೧೦. ದಕ್ಷಿಣ ಭಾರತದಲ್ಲಿ ಬಟ್ಟೆಯನ್ನು ಸ್ವಚ್ಛಮಾಡಲು ಅದನ್ನು ಕಲ್ಲುಚಪ್ಪಡಿಯ ಮೇಲೆ ಕುಕ್ಕಿ ಒಗೆದು ಅದರ ಕೊಳೆಯನ್ನು ತೆಗೆಯಲು ಅದನ್ನು ಹಿಂಡುವುದು ರೂಢಿಯಾಗಿದೆ.

"ನಾನು" ಎಂಬುದು ಸರಿಯಾದ ಮೂಲ ಅಶುದ್ಧಿ ಮತ್ತು ಅದನ್ನು ಬೇರುಕಿತ್ತು ಹೊರಗೆಸೆಯಬೇಕು ಎಂಬ ತಿಳುವಳಿಕೆ ಬರುವವರೆಗೆ, ಮಾನವ ಕುಲದ ಸೇವೆ, ಪರರಿಗಾಗಿ ತ್ಯಾಗ ಮತ್ತು ಇತರ ತತ್ಸಮ ನಿಸ್ವಾರ್ಥ ಕರ್ಮಗಳನ್ನು ಕರ್ಮಯೋಗಾನುಸಾರವಾಗಿ ಜೀವಾವಧಿ ಮಾಡುತ್ತಾ ಹೋಗುವುದು ಅವನ ಪ್ರಯತ್ನದ ಬಹುಭಾಗವಾಗಿ ಇರುತ್ತದೆ. ಆಮೇಲೆ ಅವನು ತನ್ನ ಪೂರ್ವ ವಾಸನೆಗಳ ಹಾಗೂ ಅಭಿರುಚಿಗಳ ಪ್ರಕಾರ ಭಕ್ತಿಮಾರ್ಗವನ್ನೋ ಜ್ಞಾನಮಾರ್ಗವನ್ನೋ ಹಿಡಿಯುತ್ತಾನೆ. ಭಕ್ತಿ–ಜ್ಞಾನ ಮಾರ್ಗಗಳು ಮಾತ್ರ ನೇರವಾಗಿ, ಮೂಲ ಅಶುದ್ಧಿಯಾದ ಅಹಂಕಾರದ ನಾಶಕ್ಕೆ ಸಂಬಂಧಿಸಿದಂಥವುಗಳು. ಈವರೆಗೆ ಯಾವನು ಉಪನದಿಯಾದ ಯಮುನೆಯ ಪ್ರವಾಹದಲ್ಲಿ ತೇಲುತ್ತ ಹೋದನೋ ಅವನನ್ನೀಗ ಮಾತ್ರ ನದಿಯಾದ ಗಂಗೆಯ ವಶಕ್ಕೆ ಒಪ್ಪಿಸಲಾಯ್ತು. ಇಲ್ಲಿ ಯಮುನೆಯು ಕರ್ಮಯೋಗದ ಸಂಜ್ಞೆ ಮತ್ತು ಗಂಗೆಯು ಜ್ಞಾನ–ಭಕ್ತಿಮಾರ್ಗಗಳೆಡರಕ್ಕೂ ಸಂಜ್ಞೆ. ಜ್ಞಾನ–ಭಕ್ತಿಮಾರ್ಗಗಳು ಗಂಗೆಯಂತೆ ಯಾವಾಗಲೂ ತಮ್ಮ ಪ್ರವಾಹದಲ್ಲಿ ಬಿದ್ದ ಮುಮುಕ್ಷುವನ್ನು ತಪ್ಪದೇ ತೆಗೆದುಕೊಂಡು ಬ್ರಹ್ಮ ಸಾಗರದೊಳಗೆ ಹರಿಯುತ್ತಲೇ ಇರುತ್ತವೆ.

ಸಚ್ಚಿದಾನಂದವನ್ನು, ಆತ್ಮವನ್ನು ಅಥವಾ ಬ್ರಹ್ಮವನ್ನು (ಪರಬ್ರಹ್ಮವನ್ನು) ಪಡೆಯಲು ಚಿತ್ ಮತ್ತು ಆನಂದಗಳು ಮಾರ್ಗದ್ವಯವಾಗಿ ನಡೆದುಕೊಳ್ಳುತ್ತವೆ. ಅಸ್ತಿತ್ವವೆಂಬ ಅತ್ಯುನ್ನತ ಸತ್‌ಪದವನ್ನು ಸೇರಲು ಚೈತನ್ಯ (ಚಿತ್) ಮತ್ತು ಆನಂದಗಳು (ಪ್ರಿಯ) ಮಾತ್ರ ಮಾರ್ಗಗಳು. ಚಿನ್ಮಾರ್ಗವೇ ಜ್ಞಾನಮಾರ್ಗ ಮತ್ತು ಆನಂದಮಾರ್ಗವೇ ಭಕ್ತಿಮಾರ್ಗ. (ಮತ್ತೂ ವಿವರಿಸಿ) ಹೇಳುವುದಾದರೆ, ಪರಮಸತ್ಯ ಯಾ ಬ್ರಹ್ಮ ಯಾ ಸತ್ ಎಂಬುದು ಚಿತ್ ಮತ್ತು ಆನಂದಗಳೆಂಬ ತನ್ನ ತೋಳುಗಳನ್ನು ತನ್ನೆಡೆಗೆ ನಮ್ಮನ್ನೆಳೆದುಕೊಳ್ಳಲೆಂದು ಚಾಚುತ್ತದೆ– ತನ್ನನ್ನೇ ಚಾಚುತ್ತದೆ ಎಂದರೂ ಸರಿಯೆ ; ಅಥವಾ ಬೇರೆಯ ರೀತಿಯಿಂದ ಹೇಳುವುದಾದರೆ ನಮ್ಮ ಪಾದಗಳ ಅಡಿಯಲ್ಲಿ ತನ್ನನ್ನೇ ಜ್ಞಾನ–ಭಕ್ತಿಮಾರ್ಗಗಳ ರೂಪದಲ್ಲಿ ನಾವು ನಡೆಯಲೆಂದು (ಒಡ್ಡಿಕೊಳ್ಳುತ್ತದೆ) ಇಡುತ್ತದೆ. ಹೀಗೆ, ಪವಿತ್ರ ವಾಕ್ಯಗಳಾದ "ನಾನೇ ಮಾರ್ಗ, ನಾನೇ ಸೇರತಕ್ಕ ಗುರಿ" ಎಂಬಿವು ಸಿದ್ಧವಾದಂತಾಯಿತು. "ನಾನಿದ್ದೇನೆ" ಎಂಬುದನ್ನು ಅವಧಾನಿಸುವುದು ಮಾರ್ಗ ಮತ್ತು "ನಾನಿದ್ದೇನೆ" ಎಂಬುದರಲ್ಲಿ ನೆಲೆ ನಿಲ್ಲುವುದೇ ಗುರಿ.

ಕರ್ಮಯೋಗಿಯ ಪ್ರಯತ್ನವನ್ನು ನಾವು ಈ ಹಿಂದೆ ವರ್ಗೀಕರಿಸಲಿಲ್ಲವೇ? ಮುಮುಕ್ಷುವೀಗ ಆ ಪ್ರಯತ್ನವನ್ನು ಮಾಡುತ್ತಾನೆ–ಮೂಲಾಶುದ್ಧಿಯನ್ನು ನಾಶಮಾಡಿ ಮುಖ್ಯ ಮಾರ್ಗಗಳಾದ ಜ್ಞಾನಮಾರ್ಗ–ಭಕ್ತಿಮಾರ್ಗಗಳನ್ನು ಹೊಗಲೆಂದು. "ನಾನು" ಎಂಬುದೇ ಮೂಲಾಶುದ್ಧಿ. ಶೋಧನೆಯ ಕ್ರಮವಿದು: "ನಾನು" ಎಂಬ ಭಾವನೆ ಎಂದರೆ ಏನು? ಬೇರೆ ಮಾತಿನಲ್ಲಿ "ನಾನು ಯಾರು?" ಎಂಬುದೇ ನಿಜವಾದ ಜ್ಞಾನಮಾರ್ಗ. ಈ ಗ್ರಂಥದ ಒಂದನೆಯ ಭಾಗದಲ್ಲಿ ವಿವರಣೆಗಳೊಡನೆ ಆಗಲೇ ಜ್ಞಾನಮಾರ್ಗವನ್ನು ಪ್ರತಿಪಾದಿಸಲಾಗಿದೆ. "ಶ್ರೀ ರಮಣ ಮಾರ್ಗ" ಎಂಬುದು ಉಕ್ತಗ್ರಂಥ. ಈಗ ಮೂಲಾಶುದ್ಧಿಯಾದ "ನಾನು" ಎಂಬುದನ್ನು ಯಾ ಅಹಂಕಾರವನ್ನು ಭಕ್ತಿಮಾರ್ಗದ ಮೂಲಕ ಹೇಗೆ ನಾಶಪಡಿಸಬಹುದು ಎಂಬುದನ್ನು ನೋಡೋಣ.

ಅಧ್ಯಾಯ ಎರಡು

ಪ್ರೇಮ ಯಾ ಭಕ್ತಿ

ಕೆಳಗೆ ಹರಿಯುವುದು ನೀರಿನ ಸ್ವಭಾವ. ಸಾಗರದ ನೀರು ಒಂದು ವಿಶಾಲವಾದ ರಾಶಿಯಾಗಿ ನಿಂತಲ್ಲೇ ನಿಂತಿರುತ್ತದೆ. ಭೂಲೋಕದಲ್ಲಿ ಸಾಗರವು ಅತ್ಯಂತ ತಗ್ಗಾದ ಸ್ಥಳ. ಆದುದರಿಂದ ಸಾಗರದ ನೀರಿಗೆ ಹರಿದು ಹೋಗಲು ಅದಕ್ಕಿಂತ ತಗ್ಗಾದ ಸ್ಥಳವಿಲ್ಲ. ಆದರೆ ನೀರು ಬಿಸಿಲಿನಿಂದ ಆವಿಯಾಗಿ ಹೋದ ಮೇಲೆ ಮತ್ತು ಮೋಡಗಳಾಗಿ ಪರಿವರ್ತನ ಹೊಂದಿದ ಮೇಲೆ ಅದು ಆಕಾಶದಲ್ಲಿ ಸುಮ್ಮನೆ ನಿಂತಿರುವುದಿಲ್ಲ. ಪರ್ವತದ ತುದಿಗಳತ್ತ ಗಾಳಿಯಿಂದ ಓಡಿಸಲ್ಪಟ್ಟು ಶುದ್ಧ ನೀರಾಗಿ ಪರಿವರ್ತನೆ ಹೊಂದಿ ಅದು ಹರಿಯುತ್ತದೆ. ನೀರಿನ ಸ್ವಭಾವಕ್ಕೆ ಅನುಗುಣವಾಗಿ ಅದು ಪುನಃ ತನ್ನ ಆಕರವನ್ನು ಜಲಪಾತಗಳಲ್ಲಿ ಹುಡುಕುತ್ತಾ ಕೆಳಮುಖವಾಗಿ ಹರಿಯಲಾರಂಭಿಸುತ್ತದೆ ; ಅದು ಅನೇಕ ಹಳ್ಳಗಳಾಗಿ ಒಟ್ಟುಗೂಡುತ್ತದೆ ; ನದಿಯಾಗಿ ಕೆಳಕೆಳಗೆ ವೇಗದಿಂದ ಹರಿಯುತ್ತದೆ : ಕೊನೆಗೆ ಅದು ತನ್ನ ಆಕರವಾದ ಸಾಗರವನ್ನು ಸೇರುವುದು. ತನ್ನ ಆಕರವಾದ ಸಾಗರವನ್ನು ಸೇರುವವರೆಗೆ ಅದನ್ನು ಯಾವ ರೀತಿಯಿಂದಲೂ ತಡೆಯಲು ಸಾಧ್ಯವಾಗದು. ನೀರಾವರಿ ಕ್ಷೇತ್ರಗಳಲ್ಲಿ ಅದು ಅನೇಕ ಕಾಲುವೆಗಳಾಗಿ ಹರಿದರೂ – ಕೆರೆ–ಮಹಾಸರೋವರಗಳಲ್ಲಿ ಹಿಡಿದಿಡಲ್ಪಟ್ಟರೂ ಚಿಲುಮೆ ಮತ್ತು ಬಾವಿಗಳಲ್ಲಿ ನಿಲ್ಲಿಸಲ್ಪಟ್ಟರೂ ಅದು ಅಲ್ಲಿ ಬಹುಕಾಲ ಇರಲಾರದು. ಏಕೆಂದರೆ, ಅದು ಪುನಃ ಆವಿಯಾಗುತ್ತದೆ, ಮೋಡಗಳಾಗಿ ಪರಿವರ್ತನೆ ಹೊಂದುತ್ತದೆ ಮತ್ತು ಮೊದಲಿನಂತೆಯೇ ತನ್ನ ಆಕರವನ್ನು ಸೇರಲು ಪ್ರಯತ್ನಿಸುತ್ತದೆ ವೈಯಕ್ತಿಕ ಜೀವಗಳ (ಜೀವಿಗಳ) ಜೀವನ ಸ್ವರೂಪದಲ್ಲಿ ನಾವು ಕಾಣುವ ಪ್ರಯತ್ನಗಳು ನಿಷ್ಕೃಷ್ಟವಾಗಿ ಈ ಬಗೆಯವೇ ಆಗಿವೆ.

ಎಲ್ಲ ಜೀವರ–ಮನುಷ್ಯರ ಅಷ್ಟೇ ಅಲ್ಲ, ಎಲ್ಲ ಸೃಷ್ಟ ಪದಾರ್ಥಗಳ–ಆಕರವೂ ಆ ಪರಮೋಚ್ಚ ಪದಾರ್ಥವೇ (ಪರಬ್ರಹ್ಮವೇ). ಅಸಂಖ್ಯಾತ ಗೋಲಗಳಲ್ಲಿ ವಾಸಿಸುವ ಅಸಂಖ್ಯಾತ ಜೀವಗಳು, ಲಕ್ಷಣ ಹೇಳಲು ಬಾರದ ವಿಚಿತ್ರ ಶಕ್ತಿಯೊಂದರ ದೆಸೆಯಿಂದ, ತಮ್ಮ ಆಕರದಿಂದ ಪ್ರತ್ಯೇಕಿಸಲ್ಪಟ್ಟಂತೆ ತೋರುತ್ತವೆ. ಅವು ತಮ್ಮ ಆಕರವಾದ ಆ ಅತ್ಯುಚ್ಚ ಪದಾರ್ಥದತ್ತ ಹಿಂದಿರುಗಲು ಯಾವಾಗಲೂ ಗಡಿಬಿಡಿ ಮಾಡುತ್ತಾ ಇರುತ್ತವೆ. ನೀರಿಗೆ ನಿಮ್ನತಮ ಪ್ರದೇಶಕ್ಕೆ ಹರಿಯುವುದೇ ಸ್ವಭಾವವಾಗಿರುವಂತೆ, ವಿಚಾರ–ವಾಕ್–ಕರ್ಮಗಳ ಮೂಲಕ ಜೀವಗಳು ಮಾಡುವ ಯತ್ನಗಳಲ್ಲಿ ಪರಮಪದಾರ್ಥವೆಂಬ ತಮ್ಮ ಮೂಲಕ್ಕೆ ಹಿಂದಿರುಗುವ ಪ್ರವೃತ್ತಿಯನ್ನು ನಾವು ಕಾಣುತ್ತೇವೆ. ಆ ಪ್ರವೃತ್ತಿಯು ನಿಜವಾಗಿ ಅವುಗಳ ಸ್ವಭಾವ. ಆದುದರಿಂದ ಜೀವಗಳೆಲ್ಲವುಗಳ ಧ್ಯೇಯವೂ ತಮ್ಮ ಮೂಲ ಆಕರವಾದ ಬ್ರಹ್ಮನನ್ನು ಪುನಃ ಸೇರುವುದೇ ಆಗಿದೆ. ಆದರೆ ಮಳೆ ನೀರು ಗುಡ್ಡದ ತುದಿಗಳಿಂದ ಬೀಳುವಾಗ ನೇರವಾಗಿ ಸಮುದ್ರಕ್ಕೇ ಹರಿದು ಹೋಗುವುದಿಲ್ಲ; ತನಗೆದುರಾದ ಯಾವ

ಕೊಳವನ್ನಾದರೂ ಯಾ ಗುಂಡಿಯನ್ನಾದರೂ ತುಂಬಿಕೊಳ್ಳುತ್ತದೆ. ಆಮೇಲೆ ಅದು ಅವುಗಳಿಂದ ತುಂಬಿ ಯಾವ ದಿಕ್ಕಿನಲ್ಲಾದರೂ ಮೇಲೆ ಹರಿದು ನೆಲದ ಲಕ್ಷಣಗಳಿಗನುಗುಣವಾಗಿ ಮುಂದೆ ಬರುವ ತಗ್ಗಿನ ಸ್ಥಳಕ್ಕೆ ಹೋಗುತ್ತದೆ. ತಾನು ಸಮುದ್ರಕ್ಕೆ ಹೋಗುತ್ತಿದ್ದೇನೆ ಎಂಬುದು ಕೂಡಾ ಅದಕ್ಕೆ ಗೊತ್ತಿರುವುದಿಲ್ಲ. ಅದೇ ಪ್ರಕಾರ, ತಮ್ಮ ಅಭಿರುಚಿಯಂತೆ ಜೀವಗಳು ಆ ಈ ಕಾರ್ಯದಲ್ಲಿ ಒಂದಾದ ಮೇಲೊಂದರಂತೆ, ಮಗ್ನವಾಗುತ್ತವೆ ; ಆದರೆ ಆಗ ಅವುಗಳಿಗೆ ತಮ್ಮ ಯತ್ನಗಳ ಕೊನೆಯ ಗುರಿ ಯಾವುದೆಂಬುದು ಸಹಾ ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಮಳೆ ನೀರಿಗೆ ತನ್ನ ಸ್ವಭಾವಾನುಸಾರವಾಗಿ ನಿಮ್ನತರ ಸ್ಥಳಗಳತ್ತ ಹರಿಯುವುದನ್ನು ಬಿಟ್ಟರೆ ಇನ್ನಾವ ಕಾರ್ಯದಲ್ಲೂ ಮಗ್ನವಾಗಲು ಶಕ್ತಿಯಿಲ್ಲ. ಅದಕ್ಕೆ ಮಾರ್ಗ ತಿಳಿದಿರಲಿ, ತಿಳಿಯದೆ ಇರಲಿ–ಬೇಗನೆ ಅಥವಾ ತಡವಾಗಿ ಅದು ಸಾಗರವನ್ನು ಖಂಡಿತವಾಗಿ ತಲುಪುತ್ತದೆ. ಏಕೆಂದರೆ ಅದು ತನ್ನ ಮಾರ್ಗದಲ್ಲಿ ಎಲ್ಲಿಯೂ ಸ್ಥಿರವಾಗಿ ನಿಲ್ಲಲಾರದು. ಹಾಗೇ ಜೀವರಾದರೂ ಸ್ವ ಸ್ವಭಾವವಾದ ಸುಖವನ್ನು ಬಯಸದೆ ಇರಲಾರರು. ಆದುದರಿಂದ ಅವರು ತಮ್ಮ ಸದ್ಯದ ಆಸೆಗಳನ್ನು ಪೂರ್ತಿ ಮಾಡಿಕೊಳ್ಳುವ ಒಂದೇ ಒಂದು ಚಟುವಟಿಕೆಯಲ್ಲಿ ಮಗ್ನವಾಗಿರುತ್ತಾರೆ. ಅವರಿಗೆ ತಿಳಿದಿರಲಿ, ತಿಳಿಯದಿರಲಿ – ಸ್ವಕೀಯ ಆಕರವನ್ನು ಸೇರುವುದೇ ಅವರ ಎಲ್ಲ ಯತ್ನಗಳ ಫಲ. ಕೋಟಿಗಟ್ಟಲೆ ಸೃಷ್ಟಿಚಕ್ರಗಳು ಮುಗಿದ ಮೇಲಾದರೂ ಅವರು ಅದನ್ನು ಸೇರಿಯೇ ಸೇರುತ್ತಾರೆ.

ನಾವು ಮೇಲೆ ವರ್ಣಿಸಿದಂತೆ ಕಡಲಿನಿಂದ ಆವಿಯಾಗಿ ಮೋಡಗಳ ರೂಪವನ್ನು ತಾಳಿದ ನೀರು ಒಮ್ಮೆ ಗುಡ್ಡದ ತುದಿಗಳಿಂದ ಮಳೆಯನ್ನು ಸುರಿಸಿದ ಕೂಡಲೇ ಒಂದು ನದಿಯಂತೆ ಆಗಿಂದಾಗ ಒಂದೇ ಓಟಕ್ಕೆ ಕಡಲಿಗೆ ಹಿಂದಿರುಗುವುದಿಲ್ಲ. ಅದರ ಹಾದಿಯಲ್ಲಿ ಪುನಃ ಅದು ಆವಿಯಾಗುವುದು, ಪುನಃ ಮೋಡಗಳಾಗಿ ತೇಲುವುದು ಮತ್ತು ತಣ್ಣಗಾದ ಕೂಡಲೇ ಪುನಃ ತನ್ನ ಜಲರೂಪವನ್ನು ಹೊಂದುವುದು. ಇದು ಅದರ ಪುನರ್ಜನ್ಮ ಅಲ್ಲವೇ? ಅದೇ ಮೇರೆಗೆ, ತನ್ನ ಆಕರವಾದ ಬ್ರಹ್ಮನನ್ನು ಸೇರುವ ಮೊದಲು ಜೀವವು ಭಿನ್ನ ಶರೀರಗಳನ್ನು ಪುನಃ ಪುನಃ ಪಡೆಯುತ್ತದೆ. ಪ್ರತಿಸಲವೂ ಆ ಜೀವನು ಬಹುದಿಕ್ಕುಗಳಲ್ಲಿ ಪ್ರಯತ್ನ ಮಾಡುತ್ತದೆ ಮತ್ತು ಪ್ರತಿಸಲವೂ ಒಮ್ಮೆ ಧರಿಸಿದ ಶರೀರವು ಸವೆದು ಸತ್ತ ಕೂಡಲೇ–ಮತ್ತೊಂದು ಶರೀರವನ್ನು ಧರಿಸುತ್ತದೆ. ಇದೇ ಪುನರ್ಜನ್ಮ.

ಕರ್ಮಗಳ ರೂಪದಲ್ಲಿ ಜೀವನು ಮಾಡುವ ಪ್ರಯತ್ನಗಳೆಲ್ಲವೂ ನೀರಿನ ಓಟದ ಪ್ರಯತ್ನಗಳ ಹಾಗೇ ಇರುತ್ತವೆ. ಜೀವನು ತನ್ನ ಆಕರವನ್ನು ಸೇರುವವರೆಗೆ ಒಂದು ಕ್ಷಣವೂ ಅಂಥ ಪ್ರಯತ್ನಗಳೆಂದೂ ನಿಲ್ಲುವುದಿಲ್ಲ. ತನ್ನ ಹಾದಿಯಲ್ಲಿ ಎಷ್ಟೇ ಎಡರು ತೊಡರುಗಳು ಎದುರಾದರೂ ಪುನಃ ಪುನಃ ಸುತ್ತಿ ನೀರು ಮುಂದಿನ ಆಳವಾದ ಸ್ಥಳವನ್ನು ಹೇಗೆ ಸೇರುವುದೋ ಹಾಗೇ ಜೀವನೂ ತನ್ನ ಬಾಳಿನಲ್ಲಿ ಎಷ್ಟೇ ವಿಘ್ನಗಳು ಎದುರಾದರೂ (ಕರ್ಮರೂಪದ) ಪ್ರಯತ್ನ ಮಾಡುವುದನ್ನು ಮುಂಬರಿಸಿಕೊಂಡೇ ಹೋಗುವನು.

ನಿಮ್ನತಮ ಸ್ಥಳಕ್ಕೆ ಗುರಿಯಿಡುವುದೇ ನೀರಿನ ಸ್ವಭಾವವಾಗಿರುವಂತೆ, ಜೀವನಾದರೂ ತನ್ನ ಸ್ವಭಾವಕ್ಕನುಗುಣವಾಗಿ–ಆ ಸ್ವಭಾವವು ಸುಖಾಪೇಕ್ಷೆಯ ಸ್ವರೂಪದ್ದಾಗಿರುವುದರಿಂದ– ಮನೋವಾಕ್ಕಾಯಗಳ ಮೂಲಕ ಕೆಲಸ ಮಾಡುತ್ತಾನೆ. ಸುಖಾಪೇಕ್ಷೆಯು ಜೀವನ

ಸ್ವಭಾವ(ಸ್ವರೂಪ). ಅದರ ಅತಿ ಹೆಚ್ಚಿನ ಸುಸಂಸ್ಕೃತ ಸ್ಥಿತಿಯಲ್ಲಿ ಅದು ಪರಾಭಕ್ತಿಯಾಗಿ ಮಾರ್ಪಡುತ್ತದೆ. ಆ ಪರಾಭಕ್ತಿಯು ಅವನನ್ನು ಪರಮ ಪದಾರ್ಥಕ್ಕೆ ಒಯ್ದು ಮುಟ್ಟಿಸುತ್ತದೆ. ಏಕೆಂದರೆ ಆ ಪರಮ ಪದಾರ್ಥವು (ಬ್ರಹ್ಮಾತ್ಮವು) ಅಪ್ರಮಿತವಾದ ಆನಂದಸಾಗರವಲ್ಲದೆ ಇನ್ನೇನೂ ಆಗಿರುವುದಿಲ್ಲ. ಆದರೂ ಜಲದ ಚಲನವು – ಅದು ಗುಡ್ಡದ ತುದಿಯಿಂದ ಓಡುತ್ತಿರುವಾಗ–ಹತ್ತಿರದ ಕೊಳವನ್ನು ತಲುಪಿದ ಕೂಡಲೇ ತಡೆಗಟ್ಟಲ್ಪಟ್ಟಂತೆ ತೋರುತ್ತದೆ. ಅಲ್ಲಿ ಚಲನ ನಡೆದೇ ಇರುತ್ತದೆ. ಆದರದು ಭಿನ್ನ ದಿಕ್ಕಿನಲ್ಲಿ ಅಂದರೆ, ನೀರು ಕೆಳಗೆ ಓಡದೆ ಮೇಲಕ್ಕೆ ಏರುತ್ತದೆ. ಆಗ ನೀರಿನ ಕೆಳಮುಖವಾಗಿ ಹರಿಯುವ ಸ್ವಭಾವವೇ ಬದಲಾಗಿ ಮೇಲ್ಮುಖವಾಗಿ ಹರಿಯುವಂತೆ ತೋರುತ್ತದೆ. ಹಾಗೇ ಜೀವನದಲ್ಲಿ ದೊರಕಿದ ಯಾವುದಾದರೂ ಒಂದು (ಇಲ್ಲಿಯ ಅಥವಾ ಇತರ ಲೋಕಗಳಲ್ಲಿಯ) ಭೋಗದ ಲಾಭದಿಂದ–ಸುಖಭೋಗವೂ ಆ ಬಗ್ಗೆ ಪ್ರಯತ್ನಿಸುವುದೂ ಜೀವನ ಸ್ವಭಾವವಾಗಿರುವುದರಿಂದ – ಅವನ ಆ ಪ್ರಯತ್ನವೇ ಬದಲಾಗಿ ಪ್ರಯತ್ನರಹಿತವಾದ ತೃಪ್ತಿಯ ಸ್ವರೂಪವನ್ನು ತಾಳಿದಂತೆ ತೋರಿತು. ತೃಪ್ತಿಯು ಬ್ರಹ್ಮದ ಸ್ವಭಾವ. ಆದರೆ ಕೊಳ ತುಂಬಿದ ಮೇಲೆ ನೀರಿಗೆ ಹೇಗೆ ಪುನಃ ಕೆಳಮುಖವಾಗಿ ಓಡಬೇಕಾಗಿದೆಯೋ ಹಾಗೇ ತಾನು ಬಯಸುವ ಪೂರ್ಣಸುಖವನ್ನು ಪಡೆಯಲು ಎಷ್ಟೋ ವಿಧಗಳಿಂದ ಜೀವನೂ ಪುನಃ ಪ್ರಯತ್ನಿಸಬೇಕಾಗುತ್ತದೆ. ಏಕೆಂದರೆ, ಇಹದಲ್ಲಿ ಮತ್ತು ಪರಲೋಕಗಳಲ್ಲಿ ಅವನು ಪಡೆದ ಸುಖ ಭೋಗಗಳು ಅವನ ಕರ್ಮದ ಫಲಗಳು–ಆದರೆ ಆ ಫಲರೂಪದ ಸುಖಭೋಗಗಳು ಬಹಳ ಕಾಲ ಅವನನ್ನು ತೃಪ್ತಿಯಲ್ಲಿ ಇಡಲಾರವು.

ತನ್ನ ಗುರಿಯಾದ ಪರಮಪದಾರ್ಥವನ್ನು (ಸಚ್ಚಿದಾನಂದವನ್ನು) ಸೇರುವ ತನಕ– ಆ ಸಚ್ಚಿದಾನಂದವು ಇತಿಮಿತಿ ಇಲ್ಲದುದೂ ಕಡಿಮೆಯಾಗದುದೂ ಆಗಿರುವುದಲ್ಲದೆ ಉಕ್ಕಿ ಹರಿಯುವಂಥದೂ ಪೂರ್ಣಾನಂದ ಸ್ವರೂಪವನ್ನುಳ್ಳದ್ದೂ ಆಗಿದೆ – ಯಾವ ಕ್ಷುದ್ರ ಸುಖಭೋಗವೂ ಜೀವನದಲ್ಲಿ ಬದುಕಿನ ಹೋರಾಟವಾಗಿ ತೋರುವ ಪ್ರಯತ್ನವನ್ನು ನಿಲ್ಲಿಸಿ ಅವನನ್ನು ಶಾಂತ ಸ್ಥಿತಿಯಲ್ಲಿ ಇಡಲಾರದು. ಮಳೆ ನೀರು ಹೇಗೆ ಸಮುದ್ರವನ್ನು ಸೇರಿದಾಗ ಅಚಲವೂ ಪ್ರಯತ್ನರಹಿತವೂ ವಿಶ್ರಾಂತವೂ ಆಗುವುದೋ ಹಾಗೇ ಜೀವನು ಪರಮ ಪದಾರ್ಥವನ್ನು ತಲುಪಿದ ಮೇಲೆ ತನ್ನ ಜೀವತ್ವವನ್ನು ಕಳೆದುಕೊಳ್ಳುವನು, ಪ್ರಯತ್ನರಹಿತನಾಗುವನು ಮತ್ತು ಎಲ್ಲವನ್ನೂ ಸಾಧಿಸಿದವನಂತೆ ಅವನು ಬ್ರಹ್ಮಸ್ವರೂಪವನ್ನು– ನಿತ್ಯಶಾಂತಿಯನ್ನು – ಪುನಃ ಪಡೆಯುವನು.

"ಈ ಪ್ರಕಾರ ಅವನ ಮನೋರೂಪವು ನಾಶವಾದುದರಿಂದ ಮತ್ತು ಅವನು ಪರಮೋಚ್ಚ ಸತ್ಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವುದರಿಂದ – ಆ ಮಹತ್ತರನಾದ ಯೋಗಿಗೆ ಮಾಡಲು ಒಂದು ಕರ್ಮವೂ ಇರದು. ಏಕೆಂದರೆ ಆತನು ತನ್ನ ಸ್ವಾಭಾವಿಕ ಸ್ಥಿತಿಯನ್ನು ಸಾಧಿಸಿಕೊಂಡು ಬಿಟ್ಟಿದ್ದಾನೆ!"

"ಉಪದೇಶ ಉಂದಿಯಾರ್"

– ಪದ್ಯ–೧೫

ಗುಡ್ಡದಿಂದ ಬಂದ ಮಳೆ ನೀರು, ತಾನು ಆವಿಯಾಗಿ ಹೋಗುವುದರೊಳಗೆ, ಯಾವಾಗಲೂ ಸಮುದ್ರಕ್ಕೆ ಹರಿಯುತ್ತಿರುವ ಒಂದು ದೊಡ್ಡ ನದಿಯನ್ನು ಸೇರಿ, ಆ

ಮೂಲಕ ಅದು ತನ್ನ ಆಕರವಾದ ಸಮುದ್ರವನ್ನು–ತೊಂದರೆ–ವಿಲಂಬಗಳಿಲ್ಲದೆ ಸೇರುವುದು ಎಂದಿಟ್ಟುಕೊಳ್ಳೋಣ. ಅದೇ ಮೇರೆಗೆ, ಋಷಿಗಳು ಯಾವಾಗಲೂ ಹರಿಯುತ್ತಿರುವ ದಿವ್ಯ ನದಿಗಳು ; ಆ ನದಿಗಳು ತೊಂದರೆಗಳುಂಟಾಗದಂತೆ ಜೀವನನ್ನು ನೇರವಾಗಿ ಪರಮ ಪದಾರ್ಥದತ್ತ ಒಯ್ಯುತ್ತವೆ. ಈ ದಿವ್ಯ ನದಿಗಳು ಹರಿದು ನಿರ್ಮಿಸಿದ ಮಾರ್ಗಗಳೇ ಭೂಲೋಕದಲ್ಲಿ ಈಗ ಇರುವ, ಸ್ವತಃ ಪ್ರಮಾಣವಾದ, ದಿವ್ಯ ಸತ್ಯದ ಆಧ್ಯಾತ್ಮಿಕ ಸಾಕ್ಷಾತ್ಕಾರಗಳು–ಇವೇ ಸತ್ಯವಾದಂಥವುಗಳು. ಒಬ್ಬನು ಈ ಮಾರ್ಗಗಳಲ್ಲಿ ಒಂದನ್ನು – ಅದು ಮುಗಿಯುವವರೆಗೆ – ಹಿಡಿದು ನಡೆದರೆ, ಅವನು ತನ್ನ ಆಕರವಾದ ಮತ್ತು ಗುರಿಯಾದ ಪರಮಪದಾರ್ಥವನ್ನು ತಲುಪಿ ಶಾಂತಿಯನ್ನು ಪಡೆಯುತ್ತಾನೆ. ಮನುಷ್ಯನಲ್ಲಿರುವ ಸುಖಾಪೇಕ್ಷೆಯನ್ನು (ಸುಖರತಿಯನ್ನು) ಈ ಸಾಕ್ಷಾತ್ಕಾರ ಸಂಪ್ರದಾಯಗಳಲ್ಲಿ ಪ್ರತಿಯೊಂದೂ ಸುಸಂಸ್ಕೃತವನ್ನಾಗಿ ಮಾಡುತ್ತದೆ ಮತ್ತು ನೇರವಾಗಿ ಅದು ಅ ಆಸೆಯನ್ನು ಗುರಿಗೆ ತೆಗೆದುಕೊಂಡು ಹೋಗಿ ಮುಟ್ಟಿಸುತ್ತದೆ. ಸುಖಾಪೇಕ್ಷೆಯನ್ನು ಸಂಸ್ಕರಿಸುವ ನೇರವಾದ ಮಾರ್ಗವೇ ಭಕ್ತಿಮಾರ್ಗ (ದಿವ್ಯಪ್ರೇಮಮಾರ್ಗ). ಉಕ್ತ ಸಂಪ್ರದಾಯಗಳ ಉದ್ದೇಶವು ಮನುಕುಲವನ್ನು ಹೀಗೆ ಬೋಧಿಸಿ ಪ್ರೋತ್ಸಾಹಿಸುವುದೇ ಆಗಿದೆ: "ಮಾನವನೇ, ನಿನ್ನ ಯತ್ನಗಳೆಲ್ಲವೂ ನಿನ್ನ ಸುಖಕ್ಕಾಗಿಯೇ. ನಿನ್ನ ಸುಖದ ಪೂರ್ಣಸ್ವರೂಪವೇ ಆನಂದ ಅಥವಾ ಪರಮೋಚ್ಚ ಸ್ಥಿತಿ. ಇತರ ಯಾವುದಾದರೂ ಪದಾರ್ಥದ ವಿಲಾಸದಿಂದ ಮೋಸಹೋಗಿ ದಾರಿಯ ಮೇಲೆ (ಮಾರ್ಗಕ್ರಮಣ ಮಾಡದೆ) ನಿಲ್ಲಬೇಡ. ಜಾಗರಹೊಂದು, ಎದ್ದೇಳು–ನೀನು ನಿನ್ನ ಸ್ಥಿತಿಯಾದ ಪೂರ್ಣಾನಂದವನ್ನು ಯಾ ನಿಜವಾದ ದೇವರನ್ನು ಸೇರುವವರೆಗೆ ಸರಿಯಾದ ಮಾರ್ಗ ಹಿಡಿದು ಪ್ರಯತ್ನ ಮಾಡುವುದನ್ನು ನಿಲ್ಲಿಸದಿರು." ಜೀವರ ಸ್ವಭಾವವಾಗಿರುವ ಕರ್ಮಗಳ ರೂಪದ ಪ್ರಯತ್ನಗಳನ್ನು ಸ್ವವಶಕ್ಕೆ ತಂದುಕೊಂಡು ನಿಯತಗೊಳಿಸಿಕೊಂಡಾಗ – ಆ ಅದೇ (ಕರ್ಮಯೋಗವೇ) ಒಂದು ಆತ್ಮಸಾಧನವಾಗುವುದು. ಆತ್ಮ ಸಾಧನವೊಂದು ಆಧ್ಯಾತ್ಮಿಕ ಅನುಷ್ಠಾನ, ಪರಮ ಪದಾರ್ಥದ ಮೇಲೆ ಇಟ್ಟ ಪ್ರೀತಿ. ಆದ್ದರಿಂದ ಪರಮ ಪದಾರ್ಥವನ್ನು (ಪರಮಾತ್ಮನನ್ನು, ದೇವರನ್ನು, ಈಶ್ವರನನ್ನು) ಪ್ರೀತಿಸುವುದೇ (ಭಕ್ತಿಯಿಂದ ನೋಡುವುದೇ) ಒಬ್ಬನು ಮಾಡಬಹುದಾದ ಒಂದು ಪರಮ ಪ್ರಯತ್ನ. ಭಗವಾನ್ ಶ್ರೀ ರಮಣರ, ಕೆಳಗೆ ಕೊಟ್ಟ ಪದ್ಯದಲ್ಲಿ ಇದನ್ನು ಚೆನ್ನಾಗಿ ಹೇಳಲಾಗಿದೆ.

"ಮೋಡ ಸುರಿಸಿದ ನೀರು ಕಡಲಿನಿಂದೆದ್ದು ಬಂದದ್ದು ;
ವಿಘ್ನಗಳು ತಡೆದರೂ ತನ್ನ ವಾರ್ಧಿನಿಕೇತನವನು
ಸೇರುವನ್ನೆಗಮದೆಂದೂ ನಿಲ್ಲದಾ ಪ್ರಕಾರದಲಿ
ದೇಹಬದ್ಧ ಶರೀರ ಜೀವಾತ್ಮನೆದ್ದು ಬಂದದ್ದು
ನಿನ್ನಿಂದ ; ಅದರಿಂದ ತನ್ನೆದುರು ಬಂದವುಗಳಿಂದ
ಅಥವಾ ಸ್ವಬುದ್ಧಿಯಿಂದವನೇ ಹಿಡಿದು ಹೋದ ಪಥಗಳ್
ಎಷ್ಟಾದರೂ ಅವುಗಳಲ್ಲಿ ತಿರು ತಿರುಗಿಯೂ ಜೀವ
ನಿನ್ನ ಸೇರುವ ವರೆಗೆ ನಿಲ್ಲಿಸನು ಮಾರ್ಗಕ್ರಮಣವ.
ಹರವಾದ ಬಾನಿನಲಿ ಹಾರಿಯೂ ಹಕ್ಕಿ ಅಲ್ಲಲ್ಲಿ
ನಿಲ್ಲಲಾರದು ಅಲ್ಲಿ ; ವಿಶ್ರಾಂತಿಗದಕೆ ಭೂಲೋಕ

ಒಂದೆ ; ಅದರಿಂದ ಹಿಂದಿರುಗಿ ಬರಲೇಬೇಕು ಬುವಿಗೆ.
ಅದರಂತೆಯೇ ಹೋದ ಹಾದಿಯನ್ನೇ ಮತ್ತೆ ಹಿಡಿದು
ಹೋದ ಹಾಗೇ ಹಿಂದೆ ತಿರುಗಿ ನಿನ್ನನು ಸೇರಬೇಕು
ಜೀವಾತ್ಮ–ಆನಂದಜಲಧಿ ಹೇ ಅರುಣಾಚಲ !"

– "ಶ್ರೀ ಅರುಣಾಚಲ ಅಷ್ಟಕಂ", ಪದ್ಯ–೮

ಶ್ರೀ ಭಗವಾನ್ ರಮಣರೇ ನಮಗೆ ಅತ್ಯಂತ ಹತ್ತಿರದಲ್ಲಿರುವ ಅತಿ ದೊಡ್ಡದೂ ಅತಿ ಸಮರ್ಥವೂ ಆದ ದಿವ್ಯಗಂಗೆ. ನಾವೀ ದಿವ್ಯಗಂಗೆಯಲ್ಲಿ ಬೀಳೋಣ. ಅದು ನಮ್ಮನ್ನು ಅಯತ್ನತಃ ಅತ್ಯುಚ್ಚ ಆನಂದ ಸಾಗರಕ್ಕೆ ಒಯ್ಯುವುದು. ಶ್ರೀ ರಮಣ ಮಾರ್ಗದಲ್ಲಿ ನಮ್ಮನ್ನದು ಎತ್ತಿಕೊಂಡು ಹೋಗಲಿ. ಪ್ರವಾಹಕ್ಕೆ ಎದುರಾಗಿ ಅಥವಾ ಅಡ್ಡವಾಗಿ ಈಸುವ ಅಗತ್ಯ ನಮಗೆ ಬಾರದಿರಲಿ. ಶ್ರೀ ರಮಣ ಸ್ವರೂಪದ ದಿವ್ಯ ಗಂಗೆಯಲ್ಲಿ ಒಮ್ಮೆ ಬಿದ್ದರೆ ಅಪ್ರಾಮಾಣಿಕವಾಗಿ ವರ್ತಿಸುವುದೆಂಬುದು ಪ್ರವಾಹದ ವಿರುದ್ಧವಾಗಿ ಈಸುವಂತೆ ; ಅವರ ಉಪದೇಶಗಳನ್ನು ನಮ್ಮ ಗುರಿಗಳಿಗನುಗುಣವಾಗಿ ಅಡ್ಡ ಮುರಿದು ಅರ್ಥೈಸುವುದು ಎಂದರೆ ಪ್ರವಾಹಕ್ಕೆ ಅಡ್ಡವಾಗಿ ಈಸುವುದು : ಅಂದರೆ, ಪ್ರವಾಹದ ಶಕ್ತಿಯನ್ನು ಬಳಸಿಕೊಂಡು ಸಮುದ್ರಕ್ಕೆ ಹೋಗದೆ, ನದಿಯ ಆಚೆಯ ಅಥವ ಈಚೆಯ ಯಾವುದಾದರೂ ಸ್ಥಳಗಳನ್ನು ಸೇರುವುದು – ಎಂದರ್ಥ. ಹೃತ್ಪೂರ್ವಕವಾಗಿಯೂ ಸಂಪೂರ್ಣವಾಗಿಯೂ ನಮ್ಮನ್ನು ಸಮರ್ಪಿಸಿಕೊಂಡು ಶ್ರೀ ರಮಣರ ತತ್ವಗಳ ಪ್ರಕಾರ ಬದುಕುವುದು ಎಂದರೆ ಅಯತ್ನತಃ ಆ ದಿವ್ಯ ಗಂಗಾ ಪ್ರವಾಹವು ನಮ್ಮನ್ನು ಎತ್ತಿಕೊಂಡೊಯ್ಯುವಂತೆ ಮಾಡುವುದು : ಅರ್ಥಾತ್ ಆತ್ಮ ಸಮರ್ಪಣ ಮಾರ್ಗವನ್ನು ಹಿಡಿಯುವುದು. ಆಗ ನಾವು ಸೇರುವುದು ಕೇವಲ ಆನಂದ ಸಾಗರವನ್ನೇ– ಇನ್ನಾವುದನ್ನೂ ಅಲ್ಲ. ರತಿಯನ್ನು ಅಥವಾ ಪ್ರೀತಿಯನ್ನು (ಪ್ರೇಮವನ್ನು) ಸಂಪೂರ್ಣವಾಗಿ ಸಂಸ್ಕರಿಸಿದಾಗ ಅದಕ್ಕೆ ಪರಮೋಚ್ಚ ವಸ್ತುವಿನ ಬಗೆಗೆ ತಳೆಯುವ ಪ್ರೀತಿಯ ಅಥವಾ ಭಕ್ತಿಯ ಸ್ವರೂಪ ಬರುತ್ತದೆ. ಈಗ ನಾವು ಪ್ರೇಮವನ್ನು ಹೇಗೆ ಶುದ್ಧೀಕರಣದ ಮೂಲಕ ಪರಮಾತ್ಮಭಕ್ತಿಯನ್ನಾಗಿ ಮಾರ್ಪಡಿಸಬಹುದು? ಎಂಬುದನ್ನು ನೋಡೋಣ.

ಭಕ್ತಿ ಎಂದರೇನು? ಅದೊಂದು ಪ್ರೇಮ ಸ್ವರೂಪದ ಭಾವನೆ. ಎಲ್ಲ ಸೃಷ್ಟ ಪದಾರ್ಥಗಳಲ್ಲೂ (ಜೀವಿಗಳಲ್ಲೂ) ಪ್ರೇಮಭಾವನೆ ಆಜನ್ಮವಾಗಿ ಇರುತ್ತದೆ. ಅಂದರೆ ಯಾರು ಯಾವುದನ್ನು ಪ್ರೀತಿಸುವರೋ ಆ ಪ್ರೀತಿಸುವಿಕೆಯು ಆ ಪದಾರ್ಥದ ಬಗೆಗಿನ ಪ್ರೇಮ (ಭಕ್ತಿ) ಎನಿಸುತ್ತದೆ. ಶುದ್ಧ ಸ್ವರೂಪದ (ಶುದ್ಧ ಸ್ಥಿತಿಯ) ಈ ಪ್ರೀತಿಸುವಿಕೆ, ಯಾ ಪ್ರೀತಿ ಎಂಬುದೇ ಶಿವ[೧೧]. ಪ್ರೀತಿಯು ಗಂಗಾ ಜಲದಂತಿದೆ. ಸ್ವಭಾವತಃ ಗಂಗಾಜಲವು ಪವಿತ್ರ ; ಹಾಗೇ ಪ್ರೀತಿ ಎಂಬುದೂ ಪವಿತ್ರ. ಅದೇ ಪವಿತ್ರ ಜಲವು ಅದನ್ನು ತುಂಬಿದ ಪಾತ್ರೆಯ ಶುದ್ಧತೆಯ ಮಟ್ಟದ ಪ್ರಕಾರ ಮೇಲು ಅಥವಾ ಕೀಳು ಎಂದು ಪರಿಗಣಿತವಾಗುತ್ತದೆ. ಹಾಗೇ ಜೀವರುಗಳ ಮನಸ್ಸಿನ ಪಾವಿತ್ರ್ಯದ ಅಂಶಗಳನ್ನಾಧರಿಸಿ ಪ್ರೀತಿಗೆ ಅಥವಾ ಭಕ್ತಿಗೆ ಮೇಲ್ತನ–ಕೀಳ್ತನಗಳ ಮಟ್ಟಗಳಿರುತ್ತವೆ. ಈ ರೀತಿಯಿಂದ ವಿವಿಧ ಜೀವರುಗಳಲ್ಲಿಯ

೧೧. ಶಿವ ಎಂದರೆ ಸ್ವತಃ ಮಾಂಗಲ್ಯ–ಅದು ಪೂರ್ಣ ಪರಬ್ರಹ್ಮ ; ವೈಯಕ್ತಿಕ (ಸಾಕಾರ) ದೇವರಲ್ಲ.

ಪ್ರೀತಿಯನ್ನು ಯಾ ಭಕ್ತಿಯನ್ನು ಪಂಚವಿಧವಾಗಿ ವರ್ಗೀಕರಿಸಲು ಸಾಧ್ಯವಾಗಿದೆ. ಪೂರ್ಣ ಶುದ್ಧ ಪ್ರೇಮವು ಶಿವನಾಗಿ ಪ್ರಕಾಶಿಸುತ್ತದೆ.

ಪ್ರಾಣಿಗಳನ್ನು ಹಿಡಿದು ಎಲ್ಲ ಜೀವಿಗಳಿಗೂ ಪ್ರೇಮಶಕ್ತಿ ಇರುವುದೆಂದು ನಾವು ಹಿಂದೆಯೇ ಹೇಳಿರುವೆವಾದರೂ ಮನುಷ್ಯರಲ್ಲಿ ಮಾತ್ರ ಅದರ ಪ್ರಗತಿಪರ ಶುದ್ಧೀಕರಣವು ದೃಶ್ಯವಾಗಿದೆ. ಜಗತ್ತಿನ ಪದಾರ್ಥಗಳ ಬಗ್ಗೆ ಪ್ರಾಣಿಗಳಿಗೂ ಭಕ್ತಿ ಇರುತ್ತದೆ. ಅವು ಆ ಪದಾರ್ಥಗಳನ್ನು ದೇಹಬಲದಿಂದಲ್ಲದೆ ಬುದ್ಧಿಬಲದಿಂದ ಪಡೆದುಕೊಳ್ಳಲು ಯತ್ನಿಸುವುದಿಲ್ಲ. ಪ್ರಾಣಿ ರಾಜ್ಯದಲ್ಲಿ "ಬಲವೇ ಸರಿ" – ಎಂಬುದೇ ಕಾಯಿದೆ. ಗದ್ದೆಗಳಲ್ಲಿ ಕುರಿಗಳೂ ಆಡುಗಳೂ ಬೆಳೆಗೆ ಹಾನಿಯುಂಟಾಗುತ್ತದೆಯೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಮೇಯುತ್ತವೆ ; ಕಾಡಿನಲ್ಲಿ ಬಲಿಷ್ಠ ಪ್ರಾಣಿಗಳು ದುರ್ಬಲ ಪ್ರಾಣಿಗಳನ್ನು ತಿನ್ನುತ್ತವೆ. ಮೂಲ ಪ್ರವೃತ್ತಿಯ ರೂಪದಲ್ಲಿ ಪ್ರಾಣಿಗಳಲ್ಲೂ ಪಕ್ಷಿಗಳಲ್ಲೂ ಪ್ರೀತಿ ಇರುವಂತೆ ಅನಾಗರಿಕ ಮನುಷ್ಯನಲ್ಲಿ ಮೂಲಪ್ರವೃತ್ತಿಯ ರೂಪದಲ್ಲಷ್ಟೇ ಪ್ರೀತಿ ಎಂಬ ಭಾವನೆ ಇರುತ್ತದೆ. ಆ ಪ್ರೀತಿಯು ಪ್ರಾಪಂಚಿಕ ವಸ್ತುಗಳ ಬಗೆಗೆ ಇರುತ್ತದೆ (ಅದು ವಿಷಯ ಭಕ್ತಿ). ಪ್ರಾಣಿಗಳಂತೆಯೇ ಅನಾಗರಿಕ ಮನುಷ್ಯನೂ ತನ್ನ ಆಶೆಗಳನ್ನು ಪೂರೈಸಿಕೊಳ್ಳಲು ತನ್ನ ಭೌತಿಕ ಶಕ್ತಿಯನ್ನಲ್ಲದೆ ಬೌದ್ಧಿಕ ಶಕ್ತಿಯನ್ನು ಬಳಸುವುದಿಲ್ಲ. ಅವನು ಸಮಾಜದ ಯಾವ ಕಾಯಿದೆ ಮತ್ತು ಸುವ್ಯವಸ್ಥೆಗಳ ಕಕ್ಷೆಗೆ ಒಳಪಟ್ಟಿರುವುದಿಲ್ಲ ; ಆದರೆ ಅವನು ಪ್ರಾಣಿ ರಾಜ್ಯದಲ್ಲಿ ರೂಢಿಯಲ್ಲಿರುವ ಬಲವೇ ಸರಿ ಎಂಬ ಕಾಯಿದೆಯನ್ನೇ ಅನುಸರಿಸುತ್ತಾನೆ. ಅನಾಗರಿಕ ಮಾನವನಲ್ಲಿ ನ್ಯಾಯವೆಂಬುದರ ತಿಳುವಳಿಕೆ ಇಲ್ಲದುದರಿಂದ ತನಗೆ ಹೇಗೋ ಹಾಗೇ ಇತರರಿಗೂ ಜಗತ್ತಿನ ವಸ್ತುಗಳ ಮೇಲೆ ಹಕ್ಕೂ ಅವುಗಳ ಅವಶ್ಯಕತೆಯೂ ಇವೆ ಎಂಬುದನ್ನವನು ಅರಿಯನು. ಆದುದರಿಂದ ಅವನು ತನಗೆ ಬೇಕಾದವುಗಳನ್ನು ಪಡೆಯಲು ಯಾರನ್ನಾದರೂ ನಾಶಗೊಳಿಸುತ್ತಾನೆ.

ಅನಾಗರಿಕ ಜನರಲ್ಲಿಯೂ ಬಲಿಷ್ಠರಿಗೆ ಮಾತ್ರ ತಮಗೆ ಬೇಕಾದುದನ್ನು ಪಡೆದುಕೊಳ್ಳಲು ಸಾಧ್ಯ. ಪಡೆದವುಗಳಿಗಿಂತ ಪಡೆಯದೆ ಉಳಿದ ಪದಾರ್ಥಗಳು ಹೆಚ್ಚು ಎಂಬುದನ್ನು ಅವನು ತಿಳಿದಿರುವುದರಿಂದ ಆ ಬಲಿಷ್ಠನೂ ತೃಪ್ತನಾಗಿರುವುದಿಲ್ಲ; ಏಕೆಂದರೆ ಅವನಿಗೆ ಇನ್ನೂ ಪೂರೈಸಲು ಸಾಧ್ಯವಾಗಿರದ ಆಶೆಗಳಿರುತ್ತವೆ. "ಆಶೆಗಳು ಅನಂತ" ಎಂಬ ಹಳೆಯ ಗಾದೆ ಅದನ್ನೇ ಹೇಳುತ್ತದೆ. ಆದುದರಿಂದ ಅವನು ತನ್ನ ಎಲ್ಲ ಆಶೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ತನ್ನ ಶಕ್ತಿಗಳನ್ನೂ ಸಾಮರ್ಥ್ಯಗಳನ್ನೂ ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಇತರರ ದೌರ್ಬಲ್ಯವನ್ನೂ ತನ್ನ ಕಾರ್ಯಗಳ ತಪ್ಪನ್ನೂ ಸ್ವಾರ್ಥಪರತೆಯ ದೆಸೆಯಿಂದ ತಿಳಿದುಕೊಳ್ಳದೆ ಮಾಡಿದ ಅವನ ದುಷ್ಕರ್ಮಗಳ ಫಲವಾಗಿ ಮುಂದಿನ ಜನ್ಮಗಳಲ್ಲಿ ಅವನಿಗೆ ದುರ್ಬಲ ಶರೀರಗಳೂ ದುರ್ಬಲವಾದರೂ ಆಸೆ–ಪಾಸೆಗಳಲ್ಲಿ ಕೊರತೆಯಿಲ್ಲದುದೂ ಆದ ಮನಸ್ಸೂ ದೊರಕುತ್ತವೆ. ("ಸಂಕಲ್ಪ–ವಿಕಲ್ಪಾತ್ಮಕಂ ಮನಃ" ಎಂಬುದಿಲ್ಲಿ ಮನಸ್ಸಿನ ಲಕ್ಷಣ–ಹಿಂದೆ ಬಳಸಿದ ಮನಃ ಶಬ್ದಕ್ಕೆ ಇದ್ದಂತೆ ಅಹಂಕಾರ, ಜೀವ, ಮತಿಮತ್ ಪದಾರ್ಥ ಎಂಬ ಅರ್ಥಗಳಿಲ್ಲ.) ಆದುದರಿಂದ ಆತನು ಹೆಚ್ಚು ಹೆಚ್ಚು ನರಳುತ್ತಾನೆ, ಕಷ್ಟಪಡುತ್ತಾನೆ. ಅಂಥ ಸಕಾಮನೂ ಸ್ವಕಾಮಗಳನ್ನು ಪಡೆಯಲು ಬೇಕಾದ ಶಕ್ತಿಯಿಲ್ಲದವನೂ ಆದ ಮನುಷ್ಯನು ತನಗೆ ಬೇಕಾದುದನ್ನು ಪಡೆಯಲು

ಸುಲಭವಾದ ಸಾಧನ ಅಥವಾ ಕ್ರಮ ಯಾವುದಾದರೂ ಇದೆಯೇ? ಎಂದು ತಿಳಿಯಲು ಯತ್ನಿಸುತ್ತಾನೆ. ಅಂಥ ಜನರು ಈಗಲೂ ನಮ್ಮ ಮಧ್ಯದಲ್ಲಿದ್ದಾರೆ! ಇದನ್ನು ನಾವು ಮರೆಯಬಾರದು ! ಅಂಥ ಮನುಷ್ಯನು ಪ್ರಾಣಿಗಿಂತ ಮೇಲುದರ್ಜೆಯವನಲ್ಲ !

ಅನಾಗರಿಕ ಮನುಷ್ಯನು ಸ್ವಾರ್ಥಪರತೆಯು ಸರ್ವಪಾಪಗಳ ಮೂಲ ಮತ್ತು (ಶಾಸ್ತ್ರೋಕ್ತ ಕಾಯಿದೆ ಮತ್ತು ಸುವ್ಯವಸ್ಥೆಯ ರೂಪದ) “ಸರಿ” ಅಥವಾ “ಯುಕ್ತ” ಎಂಬುದನ್ನು ಅನುಸರಿಸದೆ ತನ್ನ ಬಲದಿಂದಲೇ ಸಾಧಿಸಿದ ಎಲ್ಲವೂ ಪಾಪಸಂಗ್ರಹ ಎಂಬುದನ್ನು ಅರಿಯನು. ವಿವೇಕಿಗಳು ಆತನಿಗೆ ಮಾರ್ಗದರ್ಶನ ಮಾಡುವುದು ಅವಶ್ಯವಾಗುತ್ತದೆ. ನರಳುವ ಈ ಅನಾಗರಿಕ ಮಾನವನು ತನ್ನ ಪಾಪಗಳ ಮೂಲಕ ದುರ್ಬಲತರನಾಗುತ್ತಾ ಹೋಗುತ್ತಾನೆ. ಆದರೆ ಅವನ ಆಸೆಗಳು ಬಲವತ್ತರವಾಗುತ್ತಾ ಹೋಗುತ್ತವೆ. ಅವನು ಅವಿಶ್ರಾಂತವಾಗಿ ಅಲೆದಾಡುತ್ತಾನೆ ಮತ್ತು ಕೊನೆಯಲ್ಲಿ ವಿವೇಕಿಯೊಬ್ಬನಲ್ಲಿಗೆ ಹೋಗುತ್ತಾನೆ. ಆ ವಿವೇಕಿಯು ನಿಃಸ್ಪೃಹನು, ತಪೋಬಲ ಸಂಪನ್ನನು ಮತ್ತು ಯಾವಾಗಲೂ ಶಾಂತ ಚಿತ್ತನಾಗಿರುವವನು (ಆನಂದಮಯನಾಗಿರುವವನು). ಅವನ ಹತ್ತಿರ ಈ ಅನಾಗರಿಕನು ದೂರಿಕೊಳ್ಳುತ್ತಾನೆ–ತನ್ನ ಅಗತ್ಯಗಳನ್ನು ಕುರಿತು ಮನವಿ ಮಾಡಿಕೊಳ್ಳುತ್ತಾನೆ. ವೇದಗಳು ಅಂಥ ವಿವೇಕಿಗಳ ಉಪದೇಶಗಳು. “ವೇದಗಳು” ಎಂದರೆ ಜ್ಞಾನ. ಮನುಷ್ಯನ ಜೀವನವನ್ನು ನಿಯಮಿಸುವ ವರ್ತನೆಯ ರೀತಿಗಳು ಋಷಿಗಳಿಂದ ಉಕ್ತವಾದಂಥವುಗಳು. ಅವೇ ವೇದಗಳು–ಮಹಾಮುನಿ (ಲೋಕಮಹಾಗುರು)! ಅನಾಗರಿಕನಲ್ಲಿರುವ ಅಪವಿತ್ರವಾದ ಪ್ರೇಮಭಾವನೆಯು (ಕಾಮ, ಆಸೆ) ಎಂಬುದು ಆಸೆಪಾಸೆಗಳ ಒಂದು ಮೋಡ ಹೊತ್ತ ಬಿರುಗಾಳಿ. ಆ ಆಸೆಪಾಸೆಗಳು ಪ್ರಾಪಂಚಿಕ ವಸ್ತುಗಳನ್ನು ಕುರಿತಂಥವುಗಳು. ಆದುದರಿಂದ ಅವನದು ವಿಷಯಭಕ್ತಿ. ಆ ಭಕ್ತಿಯನ್ನು ಕಾಲಕ್ರಮೇಣ ಶುದ್ಧೀಕರಿಸಬೇಕು. ಭಕ್ತಿಯನ್ನು ಶುದ್ಧೀಕರಿಸುವ ಪಾಠಶಾಲೆಗಿನ್ನೂ ಹೋಗದಿರುವವನು ಪ್ರಾಣಿಯಾಗಿಯೇ ಉಳಿದಿರುತ್ತಾನೆ.

ಭಕ್ತಿ ಶುದ್ಧೀಕರಣದ, ಪಾಠಶಾಲೆಯಲ್ಲಿ ಐದು ತರಗತಿಗಳೂ ಒಬ್ಬನೇ ಒಬ್ಬ ಉಪಾಧ್ಯಾಯನೂ ಇರುತ್ತಾನೆ! “ಋಷಿ ಮುನಿಗಳ ವಾಕ್ಯಗಳು” ಎಂಬುದು ಆ ಒಬ್ಬ ಉಪಾಧ್ಯಾಯ ಯಾ ಗುರು. ಇಲ್ಲಿಂದ ಮುಂದೆ ನಾವು ಸ್ಪಷ್ಟತೆಗೋಸ್ಕರವಾಗಿ – ಮಾನವಕುಲದ ಪ್ರೀತಿಯನ್ನು ಸುಧಾರಿಸಿ ಸಂಸ್ಕರಿಸುವ ಇಡೀ ವೇದ–ವೇದಾಂತವಾಙ್ಮಯವನ್ನು “ಗುರು” ಎಂದು ಕರೆಯೋಣ; ಮತ್ತು ಇಡೀ ಮಾನವ ಕುಲವನ್ನು – ಪ್ರೀತಿಯೆಂಬ ಭಾವನೆ ಶುದ್ಧವಾಗಬೇಕಾದ ಅಗತ್ಯವುಳ್ಳ ಮನುಷ್ಯ ಜಾತಿಯನ್ನು “ಮಾನವ” ಎಂದು ಕರೆಯೋಣ.

ಮಾನವನು ಗುರುವಿನ ಹತ್ತಿರ ಹೋಗುತ್ತಾನೆ! “ಸ್ವಾಮಿ, ನನ್ನ ಶರೀರದ ಶಕ್ತಿಯು ಅತ್ಯಲ್ಪ ; ಅದರಿಂದ ಜಗತ್ತಿನಲ್ಲಿ ನಾನು ಬಯಸುವ ಎಲ್ಲ ಪದಾರ್ಥಗಳನ್ನೂ ಪಡೆಯಲಾರೆ. ನನ್ನೆದುರಿರುವ ಅಪೇಕ್ಷಿತ ವಸ್ತುಗಳು ಅಸಂಖ್ಯಾತ. ನನ್ನ ಬುದ್ಧಿ ಬಲದಿಂದಲೂ ನಾನು ಅವುಗಳನ್ನು ಪಡೆಯಲಾರದವನಾಗಿದ್ದೇನೆ. ಇವರಿಂದ ಅತೃಪ್ತನಾದ ನಾನು ಖಿನ್ನನಾಗಿದ್ದೇನೆ. ನನ್ನ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಬೇಕಾದ ತ್ವರಿತವೂ ಸುಲಭವೂ ಆದ ಮಾರ್ಗವಿದೆಯೇ?” ಎಂದು ಮಾನವನು ಗುರುವನ್ನು ಕೇಳುತ್ತಾನೆ.

"ಹೌದು, ಇದೆ! ಮೊದಲು ನಿನ್ನ ಅಶಕ್ತಿಯ ಕಾರಣವನ್ನು ಅರಿತುಕೋ. ಜಗತ್ತು ದೇವನಿರ್ಮಿತವಾದುದು ; ಅದು ಅವನ ಸ್ವತ್ತು. ಅದರಿಂದ ನೀನು ಸ್ವಲ್ಪ ತೆಗೆದುಕೊಂಡರೆ ಅದರ ಬೆಲೆಯನ್ನು ನೀನು ತೆರಬೇಕು. ಬೆಲೆಕೊಡದೆ ನೀನು ನಿನ್ನ ಬಲದಿಂದ ಅದನ್ನು ಕಿತ್ತುಕೊಳ್ಳಲಾರೆ. ನೀನು ಹಾಗೆ ಮಾಡಿದರೆ ಅದೊಂದು ಪಾಪ ಅಥವಾ ಒಂದು ಅಧಾರ್ಮಿಕ ಕೃತ್ಯ ಎನ್ನಿಸುತ್ತದೆ. ಕೊಡಬೇಕಾದ ಬೆಲೆಯೆಂದರೆ ಸರಿಯಾದ ಆಚಾರ (ಧರ್ಮ) ಒಂದೇ. ಅದನ್ನು ತೆತ್ತರೆ ಮಾತ್ರ ಆ ದೇವರ ಸ್ವತ್ತುಗಳನ್ನು ಅನುಭವಿಸಬಹುದಾದ ತಕ್ಕ ಮಾರ್ಗ ಅದು ಎನ್ನಿಸುತ್ತದೆ. ಈವರೆಗೆ ನೀನು ಧರ್ಮವೆಂದರೆ ಏನೆಂದು ತಿಳಿಯದೆ ಕರ್ಮಮಾಡುತ್ತ ಬಂದಿರುವುದರಿಂದ ನಿನ್ನ ಪಾಪಗಳು ನಿನ್ನನ್ನು ದುರ್ಬಲಗೊಳಿಸಿರುತ್ತವೆ. ನಿಮ್ನೋಕ್ತ ಧರ್ಮವನ್ನು ತಿಳಿದು ಅನುಸರಿಸುತ್ತಾ ನೀನು ಕರ್ಮಗಳನ್ನು (ಮನೋವಾಕ್ಕಾಯಗಳ ಮೂಲಕ ನೀನು ಮಾಡುವ ಪ್ರಯತ್ನಗಳನ್ನು) ಮಾಡಿದರೆ ಅಂಥ ಕರ್ಮಗಳು ಸರಿಯಾದ ಕರ್ಮಗಳು (ವಿಹಿತವಾದ ಕರ್ಮಗಳು ಯಾ ಸತ್ ಕರ್ಮಗಳು) ಎನ್ನಿಸುವುವು. ಅವು ಯಾವುವು? ಎಂಬುದನ್ನು ನನ್ನಿಂದ ತಿಳಿದುಕೋ. ಈ ಜಗತ್ತಿನಲ್ಲಿ ಹಾಗೂ ಪರಲೋಕದಲ್ಲಿ ನೀನು ಭೋಗಿಸಬೇಕೆಂದು ಬಯಸುವ ಆಯಾ ವಸ್ತುಗಳನ್ನು ಪಡೆಯಲು ತಕ್ಕ ಕರ್ಮಗಳನ್ನೂ ಅವುಗಳನ್ನು ಮಾಡುವ ಕ್ರಮವನ್ನೂ ಕಾಲವನ್ನೂ ಸ್ಥಳವನ್ನೂ ನಿರ್ದೇಶಿಸಲಾಗಿದೆ. ಅಂಥ ಕರ್ಮಗಳಿಂದ ಅಂಥ ಫಲಗಳು ದೊರಕುತ್ತವೆ." ಹೀಗೆ ಆರಂಭಿಸಿ ವೇದಗಳು ಮಾನವನಿಗೆ ಮೊದಲು ಕಲಿಸುವುದು ಕರ್ಮಕಾಂಡವನ್ನು (ಮಂಗಲಾಮಂಗಲ ಸಮಾರಂಭಗಳ ಹಾಗೂ ಯಜ್ಞ-ಯಾಗಾದಿಗಳ ಆಚರಣೆಯ ಕ್ರಮಗಳನ್ನೂ ಅವುಗಳಿಂದ ಬರುವ ಪುಣ್ಯವನ್ನೂ ಕಲಿಸುತ್ತವೆ.)

ಈ ಉಪದೇಶಗಳಂತೆ ನಡೆದುಕೊಳ್ಳುವವನು ಅವುಗಳಲ್ಲಿ ಹೇಳಿದ ಸರಿಯಾದ ಕರ್ಮಗಳನ್ನು (ಕರ್ತವ್ಯಗಳನ್ನೂ ಮಹಾಪುಣ್ಯಪ್ರದ ಕರ್ಮಗಳನ್ನೂ) ಸ್ವೀಕರಿಸಿ ಆಚರಿಸುತ್ತಾನೆ, ಅವುಗಳ ಪ್ರಕಾರ ಬದುಕುತ್ತಾನೆ. ಪ್ರತಿದಿನವೂ ಹೀಗೆ ಆಚಾರಶೀಲನಾಗಿರುವ ಅವನನ್ನು (ನಮ್ಮ) ಪಾಠಶಾಲೆಯ ಪ್ರಥಮ ವರ್ಗಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಇಲ್ಲಿ ಅವನದು ಕೇವಲ ವಿಷಯಭಕ್ತಿಯಾದರೂ ಕೆಲಮಟ್ಟಿಗೆ, ಅವನ ಅಹಂಕಾರವು, ಈ ಮಟ್ಟದಲ್ಲಿ, ಅಡಗುವಂತೆ ಮಾಡಲಾಗುತ್ತದೆ. ಅವನ ಅಹಂಕಾರವು ತಗ್ಗುವುದರಿಂದ ಅವರಿಗೆ ತನ್ನ ದೌರ್ಬಲ್ಯದ ಅರಿವಾಗುತ್ತದೆ ಮತ್ತು ಅದರಿಂದ ಅವನು ವಿವೇಕಿಯಾದವನು ಹೇಳಿದ್ದಕ್ಕೆ ವಿಧೇಯನಾಗಿಯೂ ಅವನ ಬುದ್ಧಿವಾದವನ್ನು ತೆಗೆದುಕೊಳ್ಳುವ ನಮ್ರತೆಯುಳ್ಳವನೂ ಆಗುತ್ತಾನೆ. ಇದು ಪಾಠಶಾಲೆಯ ಪ್ರಥಮ ವರ್ಗಕ್ಕೆ ಅವನನ್ನು ಸೇರಿಸಿಕೊಳ್ಳಲು ಅಗತ್ಯವಾದ ಅರ್ಹತೆ. ಈಗಲಾದರೂ ವೇದೋಕ್ತ ಆಚಾರ ನಿಬಂಧನೆಗಳನ್ನು ಸ್ವೀಕರಿಸಿ, ವಿವೇಕಿಗಳಿಗೆ ವಿಧೇಯರಾಗಿ ವರ್ತಿಸಲು ಒಲ್ಲದ ಅಹಂಕಾರವುಳ್ಳ ಜನರಿಲ್ಲವೇ? ಭವಿಷ್ಯತ್ಕಾಲದಲ್ಲಿಯೂ ಅಂಥವರು ಇಲ್ಲದೆ ಹೋಗುವರೇ? ಅವರೆಲ್ಲರೂ ಪಾಠಶಾಲೆಗೆ ಹೋಗಲೊಲ್ಲದೆ ಬೀದಿಗಳಲ್ಲಿ ಅಲೆದಾಡಲು ಬಯಸುವ ಅವಿಧೇಯ ಮಕ್ಕಳಿಗೆ ಸಮಾನರಲ್ಲವೇ?

ಜಗತ್ತಿನಲ್ಲಿ ಎಷ್ಟು ಜನರಿರುತ್ತಾರೋ ಅಷ್ಟೇ ಸಂಖ್ಯೆಯ ವಿಭಿನ್ನ ಮನಸ್ಸುಗಳಿಲ್ಲವೇ? ತನ್ನ ತನ್ನ ಅಭಿರುಚಿಗನುಗುಣವಾಗಿ ಪ್ರತಿಯೊಂದು ಮನಸ್ಸಿಗೂ ಬೇರೆ ಬೇರೆ ಬಗೆಯ ವಸ್ತುಗಳ ಅಗತ್ಯವಿರುವುದಿಲ್ಲವೇ? ಆದುದರಿಂದಲೇ ತಮ್ಮ ಅಸಂಖ್ಯಾತ ಬಯಕೆಗಳನ್ನು

ಈಡೇರಿಸಿಕೊಳ್ಳಲು ಸಾಧನಗಳನ್ನಾಗಿ ಮಾಡಿಕೊಳ್ಳಲು ಬೇಕಾದ ವಿವಿಧ ಕರ್ಮಗಳನ್ನು ವ್ಯವಸ್ಥೆಗೊಳಿಸಬೇಕಲ್ಲವೆ? ಅದರಿಂದಲೇ ವೇದಗಳ ಕರ್ಮಕಾಂಡವು ಅಷ್ಟು ವಿಶಾಲವಾಗಿದೆ, ವಿಸ್ತಾರವಾಗಿದೆ ಮತ್ತು ಹಾಸುಹೊಕ್ಕುಗಳಿಂದ ಹೆಣೆದುಕೊಂಡಿದೆ. ಜನರಲ್ಲಿಯ ಮಹಾಭಾಗರು ಪ್ರಾಪಂಚಿಕ ವಸ್ತುಗಳಿಂದ ಸುಖ ಸಿಗುತ್ತದೆ ಎಂಬ ತಪ್ಪುಕಲ್ಪನೆಯು ಹಿಡಿತಕ್ಕೊಳಗಾಗಿರುವುದರಿಂದ, ಅವರು ಅಂಥ ಭ್ರಮೆಗೊಳಗಾದ ಅವಧಿಯಲ್ಲಿ ಅವರ ಬಗ್ಗೆ ಕನಿಕರಿಸಿ, ತಾಯಿಯಂತೆ ವೇದಗಳು – ಸುಖ ನಿಜವಾಗಿ ಆ ವಸ್ತುಗಳಿಂದ ದೊರಕದೆ ಹೋದರೂ – ಅವರಿಗೆ ಬೇಕಾದ ಅವುಗಳನ್ನು ಕೊಡುತ್ತವೆ. ಈಗ ಮಾನವನು ತಾನು ಬಹಳ ಉತ್ಸಾಹದಿಂದ ಮಾಡಿದ ಧರ್ಮಕರ್ಮಗಳ ಫಲರೂಪವಾದ ಪ್ರಾಪಂಚಿಕ ವಸ್ತುಗಳನ್ನು ಭೋಗಿಸುತ್ತಾ ಸುಖವಾಗಿರುತ್ತಾನೆ. ಆದರೆ ಅದರಿಂದ ಬಂದ ಫಲವೇನು?

ಆಶೆಗಳಿಂದ ತುಂಬಿದ (ಕೃಷ್ಣರಾಜ ಸಾಗರದಂಥ) ದೊಡ್ಡ ಅಣೆಕಟ್ಟಿನ ಜಲಾಶಯವನ್ನು ಕರ್ಮ–ಧರ್ಮಗಳ ಅರ್ಧ ಅಂಗುಲದ ನಲ್ಲಿಯ ಮೂಲಕ ಖಾಲಿ ಮಾಡ ಹೊರಟಾಗ ಉಂಟಾಗುವ ವಿಳಂಬವನ್ನು ತಾಳಿಕೊಳ್ಳುವ ಸಹಿಷ್ಣುತೆ ಮನುಷ್ಯನಿಗಿದೆಯೇ? ವೇದೋಕ್ತವಾದ ಪ್ರತಿಯೊಂದು ವಿಧಾನವನ್ನು ತಪ್ಪದೆ ಪಾಲಿಸಿದ ಹೊರತು ಯಜ್ಞ ಯಾಗಗಳನ್ನು ಮಾಡುವುದರಿಂದ ತಕ್ಕ ಫಲ ದೊರಕದು ಎಂಬುದನ್ನು ಮಾನವನೀಗ ಅರಿತುಕೊಂಡಿರುವುದರಿಂದ ಶಾಸ್ತ್ರದಲ್ಲಿ ಹೇಳಿದ ಅವಶ್ಯಕವಾದ ಪ್ರತಿಯೊಂದು ವಸ್ತುವನ್ನು ಸಂಗ್ರಹ ಮಾಡುವುದರಲ್ಲಿ ಅವನು ತೊಂದರೆ ಪಡುತ್ತಿರುತ್ತಾನೆ. ಒಂದು ಚಿಕ್ಕ ವೇದೋಕ್ತ ಕರ್ಮವನ್ನು ಪೂರ್ಣವಾಗಿ ಮಾಡಲು ಕೂಡಾ ಮಹಾಪ್ರಯತ್ನವನ್ನು ಮಾಡಬೇಕಾಗುತ್ತದೆ. ಇಡೀ ಜಗತ್ತಿನ ಚಕ್ರವರ್ತಿಯೆಂದು ಅಭಿಜ್ಞಾತನಾಗಿ ಸಾರ್ವಭೌಮ ಅಧಿಕಾರಗಳನ್ನೂ ಹಕ್ಕುಗಳನ್ನೂ ರಾಜಸೂಯಯಾಗದ ಫಲರೂಪದಲ್ಲಿ ಪಡೆಯಲು ಯಾವ ಮನುಷ್ಯನು ಬಯಸುವುದಿಲ್ಲ? ಆದರೆ ಸಾಮಾನ್ಯ ಮನುಷ್ಯನು ಅವಶ್ಯಕ ಸಾಮಗ್ರಿಗಳನ್ನು ಎಲ್ಲಿಂದ ಒದಗಿಸಿಕೊಳ್ಳಬಲ್ಲನು? ಒಬ್ಬ ಬಲಿಷ್ಠ ದೊರೆ ಮಾತ್ರ ಅದನ್ನು ಮಾಡಬಲ್ಲನು! ಅಷ್ಟಾದರೂ ಅದನ್ನು ಮುಗಿಸುವವರೆಗೆ ಅದಕ್ಕೆ ಎದುರಾಗುವ ವಿಘ್ನಗಳ ಸಂಖ್ಯೆ ಒಂದೇ ಎರಡೇ? ಸುಖಭೋಗಗಳನ್ನು ಬಯಸುವುದು ಮಾನವನ ಸ್ವಭಾವವಲ್ಲವೇ? ಹೌದು. ತನ್ನ ಕಾರ್ಯಶಕ್ತಿಯನ್ನು ಮೀರಿದ ಕರ್ಮಗಳ ಫಲಗಳನ್ನು ಬಯಸುವುದೂ ಸ್ವಭಾವವಲ್ಲವೇ? ತನ್ನ ಅನೇಕ ಕಾಮನೆಗಳ ತೃಪ್ತಿಗಾಗಿ ಯಾವ ಮನುಷ್ಯನು ಶ್ರದ್ಧೆ ಭಕ್ತಿಪೂರ್ವಕವಾಗಿ ವಿವಿಧ ಕರ್ಮಗಳನ್ನು ಮಾಡುತ್ತಾನೋ ಅವನು ತನ್ನ ಕರ್ಮಗಳ ಫಲಗಳನ್ನು ಉತ್ತರೋತ್ತರ ಜನ್ಮಗಳಲ್ಲಿ ಅಲ್ಲದೆ ಬೇರೆ ಬೇರೆ ಲೋಕಗಳಲ್ಲಿ ಕೂಡಾ ಅನುಭೋಗಿಸುವನು ; ಆದರೆ ಪ್ರಾಪಂಚಿಕ ವಸ್ತುಗಳ ಅನುಭೋಗ ಹೆಚ್ಚಾದಷ್ಟೂ ಅವನ ಆಶಾಗ್ನಿಯು ಇನ್ನಷ್ಟು ಹೆಚ್ಚು ಕರಾಳವಾಗಿ ಹೊತ್ತಿ ಉರಿಯುತ್ತದೆ. ನಿಜವಾಗಿ ತನ್ನ ಮನ ಹಾಗೂ ದೇಹಗಳು ಮಾಡಿದ ಅಚೇತನವಾದ ಕರ್ಮಗಳು ಕೊಟ್ಟ ಫಲಗಳು ಪರಿಮಿತ ಎಂಬುದು ಮಾನವನಿಗೆ ಗೊತ್ತಾದಾಗ (ದೇವರ ಸಂಕಲ್ಪವಿಲ್ಲದೆ ಕರ್ಮಗಳು ಫಲ ಕೊಡಲಾರವು) ಅವನು ಕರುಣಾಜನಕವಾಗಿ ವಿಚಾರ ಮಾಡತೊಡಗುತ್ತಾನೆ. “ಕರ್ಮಗಳ ಸ್ವರೂಪದಲ್ಲಿರುವ ನನ್ನ ಯತ್ನಗಳನ್ನು ಬಿಟ್ಟರೆ ತ್ವರಿತಗತಿಯಿಂದ ಇದಕ್ಕೂ ಹೆಚ್ಚು ಪ್ರಯೋಜನವನ್ನು ದೊರಕಿಸಿಕೊಡುವ ಬೇರೆ ಯಾವ ಸಾಧನವೂ ಇಲ್ಲವೇ?” ಎಂದು. ತನ್ನ ವರ್ತಮಾನ ಸಮಸ್ಯೆಗೂ ಉತ್ತರ ರೂಪದ ಸೂಚನೆ ಸಿಗಬಹುದೆಂದು ಆ ಮಾನವನು ತಾನು

ಮೊದಲು ಸಮೀಪಿಸಿದ ಗುರುವಿನ ಬಳಿಗೇ, ತನಗೆ ಕರ್ಮಪಾಠವನ್ನು ಕಲಿಸಿದವನ ಹತ್ತಿರಕ್ಕೇ ಮತ್ತೆ ಹೋಗುತ್ತಾನೆ. ಆ ಗುರು ಎಂದರೆ ವೇದಗಳು.

ಮೊದಲನೆಯ ತರಗತಿಯಲ್ಲಿ ಹೇಳಿಕೊಟ್ಟ ಹಾಗೆ ಕರ್ಮಗಳನ್ನು ಮಾಡುತ್ತ ಹೋಗಿ ಕರ್ಮಗಳ ಬಗ್ಗೆ ಆ ಮಾನವನಲ್ಲಿ ಜುಗುಪ್ಸೆ ಉಂಟಾಗಲು ಅಸಂಖ್ಯಾತ ಜನ್ಮಗಳು ಅವನಿಗೆ ಬಂದು ಹೋಗಿರಬಹುದು. ಇಷ್ಟು ಕಾಲದವರೆಗೂ ಅವನು ಒಂದನೆಯ ತರಗತಿಯ ವಿದ್ಯಾರ್ಥಿಯಾಗಿಯೇ ಇದ್ದನು. ಅವನಿಗೀಗ ಉಂಟಾದ ಜುಗುಪ್ಸೆಯ ರೂಪದ ಪಕ್ವತೆಯು ಪ್ರಥಮ ವರ್ಗದ ತರಬೇತನ್ನು ಸಂಪೂರ್ಣವಾಗಿಯೂ ಜಯಪ್ರದವಾಗಿಯೂ ಅವನು ಪಡೆದಿದ್ದನೆಂಬುದನ್ನು ಸೂಚಿಸುತ್ತದೆ. ಇಂದಿಗೂ ಮೊದಲನೆಯ ಇಯತ್ತೆಯಲ್ಲಿ ಓದುತ್ತಿರುವವರು ನಮ್ಮಲ್ಲಿ ಸಿಕ್ಕುತ್ತಾರೆ. ವರ್ತಮಾನ ಕಾಲದ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಅವರು ಉನ್ನತ ಪದವೀಧರರೂ ಆಗಿರಬಹುದು. ಆದರೂ ನಮ್ಮ ಪ್ರೇಮ ಶುದ್ಧೀಕರಣದ ಶಾಲೆಯಲ್ಲಿ ಅವರು ಕೇವಲ ಒಂದನೆಯ ದರ್ಜೆಯ ವಿದ್ಯಾರ್ಥಿಗಳು. ಇನ್ನೂ ಕೋಟಿಗಟ್ಟಲೆ ಜನರು ಕರ್ಮಗಳನ್ನು ಮಾಡಲು ಪ್ರಥಮ ತರಗತಿಗೆ ಸೇರಲು ಮತ್ತು ಹಾಗೆ ಸೇರಿ, ನಿಯಮಬದ್ಧ ಜೀವನವನ್ನು ನಡೆಸಲು ಒಪ್ಪದೆ ಶಾಲೆಯ ಹೊರಗೆ ಸುಖವಾಗಿ ಅಲೆದಾಡುತ್ತಿರುವಾಗ ನಾವೇಕೆ ಒಂದನೆಯ ಇಯತ್ತೆಯವರನ್ನು ಕಂಡು ಖಿನ್ನರಾಗಬೇಕು?

ಮೊದಲನೆಯ ಇಯತ್ತೆಯಲ್ಲಿ ಉತ್ತೀರ್ಣನಾದ ಮಾನವನು ಪುನಃ ಗುರುವಿನ ಬಳಿಗೆ ಬಂದು ಕೇಳುತ್ತಾನೆ. "ಸ್ವಾಮಿ, ವೇದೋಕ್ತವಾದ ಕರ್ಮಗಳು ಅಸಂಖ್ಯಾತ. ಅವುಗಳೆಲ್ಲವನ್ನೂ ಪೂರ್ಣವಾಗಿ ಮಾಡಲು ನನಗೆ ಕಾಲವೂ ಇಲ್ಲ, ನನ್ನಲ್ಲಿ ಶಕ್ತಿಯೂ ಇಲ್ಲ. ಆದರೆ ಇಹದಲ್ಲೂ ಪರಲೋಕಗಳಲ್ಲೂ ಅಂಥ ಎಲ್ಲ ಕರ್ಮಗಳ ಎಲ್ಲ ಫಲಗಳನ್ನೂ ಅನುಭೋಗಿಸಿದ ಹೊರತು ನನಗೆ ತೃಪ್ತಿಯುಂಟಾಗದು. ಆದುದರಿಂದ ಹೆಚ್ಚು ಫಲದಾಯಕವಾದ ಹಾಗೂ ಕರ್ಮ ಮಾಡುವುದಕ್ಕಿಂತ ಹೆಚ್ಚು ಸುಲಭವಾದ ಸಾಧನ ಯಾವುದಾದರೂ ಇರುವುದೇ? ಎಂಬುದನ್ನು ಶೋಧಿಸಲು ಮತ್ತು ಅಂಥ ಸಾಧನ ಇರುವುದಾದರೆ ಅದನ್ನು ಅನುಸರಿಸಲೆಂದು ನಿಮ್ಮ ಪಾದಗಳೆಡೆಗೆ ಬಂದಿದ್ದೇನೆ"–ಎಂದು.

"ಹೌದು, ಇದೆ ! ನಿನ್ನ ಎಲ್ಲ ಕರ್ಮಗಳಿಗೂ ಶಕ್ತಿ ಇಲ್ಲದುದರಿಂದ ಅವು ತಾವೇ ಫಲಗಳನ್ನು ಕೊಡುವುದಿಲ್ಲ. ಕರ್ಮಗಳು ಕೇವಲ ಅಚೇತನ[೧೨]. ಅವು ಸರ್ವೇಶ್ವರನಾದ ದೇವರ ಆದೇಶದ ಪ್ರಕಾರವಾಗಿಯೇ ಫಲ ಕೊಡುತ್ತವೆ. ಯಾವುದಾದರೂ ಸುಲಭವಾದ ಪೂಜೆಯಿಂದ (ಉಪಾಸನೆಯಿಂದ) ಪೂಜಕನಿಗೆ ಅನೇಕ ಭಿನ್ನ ಭಿನ್ನ ಫಲಗಳನ್ನು ಕೊಡುವುದರಲ್ಲಿ ದೇವರ ವಿವಿಧ ನಾಮರೂಪಗಳಿಗೆ ದೊಡ್ಡ ದಿವ್ಯಶಕ್ತಿಗಳಿವೆ. ಆದುದರಿಂದ ದೇವರ ಬೇರೆ ಬೇರೆ ನಾಮ–ರೂಪಗಳನ್ನು ನೀನು ಪೂಜಿಸಿದರೆ ಅವುಗಳ ಅನುಗ್ರಹದ ಮೂಲಕ ಅಲ್ಪಪ್ರಯತ್ನದಿಂದಲೂ ನಿನಗೆ ಇಷ್ಟವಾದ ವಸ್ತುಗಳನ್ನು ಹೇರಳವಾಗಿ ಪಡೆಯುವೆ. ಹಿಡಿದ ಕೆಲಸವು ನಿರ್ವಿಘ್ನವಾಗಿ ಹಾಗೂ ಜಯಪ್ರದವಾಗಿ ನಿನಗೆ ಮುಗಿಯಬೇಕೆಂದೆನ್ನಿಸಿದರೆ

---

೧೨. ದೇವರ ಆದೇಶದಂತೆ ಕರ್ಮವು ಫಲ ಕೊಡುತ್ತದೆ. ಕರ್ಮವು ಅಚೇತನವಾದುದರಿಂದ ಅದು ದೇವರಾಗಬಲ್ಲುದೇ?"

–ಉಪದೇಶ ಉಂದಿಯಾರ್", ಪದ್ಯ–೧

ಗಜಮುಖನಾದ ಗಣಪತಿಯನ್ನು ಪೂಜಿಸು. ಸರಸ್ವತಿ ಎಂಬುದು ಪಾಂಡಿತ್ಯವನ್ನು ಕೊಡುವ ದೇವತೆಯ ನಾಮ–ರೂಪ ಆಗಿರುವುದರಿಂದ ನಿನಗೆ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಆ ಮೂಲಕ ಹೆಸರನ್ನೂ ಕೀರ್ತಿಯನ್ನೂ ಗಳಿಸಬೇಕೆಂದಿದ್ದರೆ ಅವಳನ್ನು ಪೂಜಿಸು. ನಿನಗೆ ಮಕ್ಕಳು, ಮನೆ, ಐಶ್ವರ್ಯ, ಆಸ್ತಿ, ಚಿನ್ನ ಮುಂತಾದವುಗಳು ಬೇಕೆಂದೆನ್ನಿಸಿದರೆ ದೇವತಾತ್ಮಿಕೆಯಾದ ಲಕ್ಷ್ಮಿಯನ್ನು ಪೂಜಿಸು. ನಿನ್ನ ಅನೇಕ ಬಯಕೆಗಳನ್ನು ಪೂರೈಸಲು ಇದೇ ಪ್ರಕಾರ ಎಷ್ಟೋ ದೇವತೆಗಳಿದ್ದಾರೆ. ಅವರಲ್ಲಿ ಪ್ರತಿಯೊಬ್ಬ ದೇವತೆಯೂ – ರುದ್ರ, ವಿಷ್ಣು, ಸುಬ್ರಹ್ಮಣ್ಯ, ದೇವಿ ಇತ್ಯಾದಿಗಳಲ್ಲಿ ಯಾವ ದೇವತೆಯಾದರೂ ಸರಿಯೆ– ಸರ್ವೇಶ್ವರನ ನಾಮ–ರೂಪಗಳ ಭಿನ್ನ ಭಿನ್ನ ಮುಖಗಳು. ಈ ದೇವತೆಗಳಲ್ಲಿ ಪ್ರತಿಯೊಬ್ಬರ ಪೂಜೆಗೂ[೧೩] (ಪೂಜಾವಿಧಿಗೂ) ತಕ್ಕ ಮಂತ್ರಗಳೂ ಕ್ರಮಗಳೂ ಇವೆ ; ಯಂತ್ರಗಳು (ಯೋಗಶಾಸ್ತ್ರೀಯ ಅಥವಾ ಔತಿಷಿಕ ನಕ್ಷೆಗಳು) ಮತ್ತು ತಂತ್ರಗಳು (ಪೂಜೆಯಲ್ಲಿ ಅಸಾಧಾರಣವಾದ ವಸ್ತುಗಳನ್ನೂ ಕ್ರಮಗಳನ್ನೂ ಅನುಸರಿಸುವಂಥವುಗಳು) ಅಂಥ ಕ್ರಮಭೇದಕ್ಕೆ ಉದಾಹರಣೆಗಳು. ನಿನ್ನ ಅವಶ್ಯಕತೆ ಹಾಗೂ ಅಭಿರುಚಿಗಳಿಗನುಗುಣವಾಗಿ ಈ ಎಲ್ಲವನ್ನೂ ಸ್ವೀಕರಿಸಿ ದೇವರನ್ನು ಪೂಜಿಸಲು ಪ್ರಾರಂಭಿಸು. ಈ ಪೂಜೆಯ ಮೂಲಕ ಬರುವ ಲಾಭ ಹೆಚ್ಚು ಮತ್ತು ಇದಕ್ಕೆ ಬೇಕಾದ ಶ್ರಮವು ಕರ್ಮಾಚರಣೆಗೆ ಬೇಕಾದ ಶ್ರಮಕ್ಕಿಂತ ಕಡಿಮೆ." ಹೀಗೆ ವೇದಗಳು ಅಂದರೆ ಗುರುವು ಮಾನವನಿಗೆ ದೇವರನ್ನು ಪೂಜಿಸುವಲ್ಲಿ ಉಪದೇಶ ಮಾಡುತ್ತಾನೆ.

ಮಾನವನು ಅದನ್ನು ಕೇಳಿದಾಕ್ಷಣ ಈ ಪೂಜೆಯ ಮೂಲಕ ಆ ದೇವರುಗಳ ಸಹಾಯವನ್ನು ಪಡೆದು, ಸ್ವ ಪ್ರಯತ್ನರೂಪದ ಕರ್ಮಗಳನ್ನು ಅವಲಂಬಿಸುವುದನ್ನು ಬಿಟ್ಟು, ಇಹಪರಗಳಲ್ಲಿಯ ಎಲ್ಲ ಸುಖಭೋಗಗಳನ್ನೂ ಪಡೆಯಬಲ್ಲವನಾಗುವನು ಮತ್ತು ಈಗ ಮಹೋತ್ಸಾಹದಿಂದಲೂ ಮಹಾಪ್ರತ್ಯಾಶೆಗಳಿಂದಲೂ ದೇವರ ನಾಮರೂಪಗಳನ್ನು ಆರಾಧಿಸಲು ಆರಂಭಿಸುತ್ತಾನೆ. ಪ್ರಯತ್ನ ಮಾಡುವುದರಲ್ಲಿಯ ತನ್ನ ಶಕ್ತಿಗಳು ಕ್ಷುದ್ರ ಎಂಬುದನ್ನು ತಿಳಿದು ಅನುಭವಿಸಿ ಮಾನವನು ತನಗಿಂತ ಎಷ್ಟೋ ಪಾಲು ಮೇಲಾಗಿರುವ ಸಮರ್ಥ ಸರ್ವಶಕ್ತ ದೇವರನ್ನು ಸ್ವೀಕರಿಸುವುದೂ ಆ ದೇವರಲ್ಲಿ ನಂಬಿಗೆ ಇಡುವುದೂ ಹೊಸ ಬೆಳವಣಿಗೆಗಳು. ಶ್ರೀ ಭಗವಾನ್ ರಮಣರು ಬರೆದ "ಉಪದೇಶ ಉಂದಿಯಾರ್" ಗ್ರಂಥಕ್ಕೆ ಅವರ ಜ್ಯೇಷ್ಠ ಶಿಷ್ಯರಾದ ಶ್ರೀ ಮುರುಗನಾರರು ಬರೆದ ಪ್ರಾಸ್ತಾವಿಕ ಪದ್ಯಗಳನ್ನು ಕೆಳಗೆ ಕೊಟ್ಟಿದ್ದೇವೆ. ಅವು ನಮ್ಮ ವಿಷಯದ ಮೇಲೆ ಬೆಳಕು ಬೀರುತ್ತವೆ.

೧) ಕರ್ಮಾನುಷ್ಠಾನ ಮಾಡುತ್ತಿದ್ದ ದಾರುಕವನವಾಸಿಗಳು (ದಾರುಕವೆಂಬುದು ಒಂದು ವನದ ಹೆಸರು) ಆಧ್ಯಾತ್ಮಿಕವಾಗಿ ಕೆಳಗಿಳಿಯುತ್ತಿದ್ದರು. ಅದಕ್ಕೆ (ಪೂರ್ವಮೀಮಾಂಸೆಯಲ್ಲಿ ಹೇಳಿದ) ಹಳೆಯ ಕಾಮ್ಯಕರ್ಮಾನುಷ್ಠಾನದ[೧೪] ಮಾರ್ಗವನ್ನು ಅವರು ಅನುಸರಿಸುತ್ತಿದ್ದುದೇ ಕಾರಣ.

---

೧೩. ಲಂಕೆಯ ದೊರೆಯಾದ ರಾವಣ ಮತ್ತು ಅನಂತರ ಇತರರು ಈ ವಿಧದಿಂದ ಈ ಜಗತ್ತನ್ನೂ – ಸ್ವರ್ಗದ ಒಡೆಯ ಇಂದ್ರನನ್ನು ಕೂಡಾ–ಗೆಲ್ಲಲು ಬೇಕಾದ ಶಕ್ತಿಗಳನ್ನು ಸಂಪಾದಿಸಿದರು.

೧೪. ಆಶೆಗಳನ್ನು ಈಡೇರಿಸಿ ಕೊಡುವ ಕರ್ಮಗಳೇ ಕಾಮ್ಯ ಕರ್ಮಗಳು. ದಾರುಕವನದಲ್ಲಿದ್ದ ತಪಸ್ವಿಗಳು ಕರ್ಮ ಮಾಡುವುದರಲ್ಲಿ ತಾವು ಮಾಡಿದ ಪ್ರಯತ್ನಗಳೇ ಎಲ್ಲವನ್ನೂ ಸಾಧಿಸಿಕೊಡಬಲ್ಲವು ಎಂಬ ತಪ್ಪು ಭಾವನೆಯನ್ನು ತಾಳಿದ್ದರು ; ಆದರೆ ಕೊನೆಯಲ್ಲಿ ಸ್ವತಃ ಸರ್ವೇಶ್ವರನಾದ ಶಿವನೇ ಬಂದು ಅವರನ್ನು ನಾಚಿಕೆಗೆ ಈಡು ಮಾಡಿ ಉಪದೇಶವನ್ನು ಕೊಡಬೇಕಾಯಿತು.

೨) ಸ್ವವಂಚಕವಾದ ಅಹಂಕಾರದ ದೆಸೆಯಿಂದ ಕರ್ಮಗಳಲ್ಲದೆ ದೇವರೆಂಬಾತನಿಲ್ಲ ಎಂದು ಯಥೇಷ್ಟವಾಗಿ ಅವರು ಮತ್ತರಾಗಿದ್ದರು.

೩) ದೇವರನ್ನು ತ್ಯಜಿಸಿ ಕರ್ಮಗಳನ್ನು ಅನುಷ್ಠಿಸುವುದರ ಫಲಿತಾಂಶವನ್ನು ಕಂಡು ಅವರ ಜಂಭವನ್ನು ಸೋಲಿಸಲಾಯ್ತು.

೪) ನಮ್ಮನ್ನು ಅನುಗ್ರಹಪೂರ್ವಕವಾಗಿ ಕಾಪಾಡು–ಎಂದು ಕಣ್ಣೀರ್ಗರೆಯುತ್ತ ಬೇಡಿದ್ದರಿಂದ ಸರ್ವೇಶ್ವರನಾದ ಶಿವನು ಅವರ ಮೇಲೆ ಕರುಣಾಕಟಾಕ್ಷಬೀರಿ ಅವರಿಗೆ ಆಧ್ಯಾತ್ಮಿಕ ಉಪದೇಶಗಳನ್ನು ನೀಡಿದನು.”

ಕರ್ಮಾನುಷ್ಠಾನದ ದೆಸೆಯಿಂದ ಮಾನವ ಈಗ ಪಡೆದುಕೊಂಡ ನಿಜವಾದ ಪ್ರಯೋಜನವೆಂದರೆ ಅವನ ಅಹಂಕಾರವು ಅವನು ದೇವರೆದುರು ನಮ್ರನಾಗಿ ಅವನ ಅನುಗ್ರಹವನ್ನು ಬೇಡಲು ತಲೆಬಾಗುವಷ್ಟರ ಮಟ್ಟಿಗೆ – ಅಡಗಿ ಹೋದದ್ದೇ ಆಗಿದೆ. ತಾನು ಪಡೆದ ಉಪದೇಶಗಳನ್ನು ಅನುಷ್ಠಾನಕ್ಕೆ ತರಲೆಂದು ಈಗ ಮಾನವನನ್ನು ಎರಡನೆಯ ತರಗತಿಗೆ ಬಡ್ತಿ ಮಾಡಲಾಗಿದೆ.

ದೇವಪೂಜಕನಾಗಿ ಬಿಟ್ಟ ಮಾನವನು ಈಗ ಎಲ್ಲ ಮಂತ್ರ–ಯಂತ್ರ–ತಂತ್ರಗಳೊಡನೆ (ಅವುಗಳ ನೆರವಿನಿಂದ) ತನ್ನ ಅವಶ್ಯಕತೆ ಹಾಗೂ ಬಯಕೆಗಳಿಗನುಗುಣವಾಗಿ ದೇವರ ವೇದೋಕ್ತವಾದ ವಿವಿಧ ನಾಮ–ರೂಪಗಳನ್ನು ಪೂಜಿಸಲು ಪ್ರಾರಂಭಿಸುತ್ತಾನೆ. ಈ ದಿನಮಾನದಲ್ಲಿ ಆಸ್ತಿಕರು ಮತ್ತು ದೈವಭಕ್ತರು ಎಂದು ಕರೆಯಲ್ಪಡುವ ಜನರಲ್ಲಿಯ ಮಹಾಭಾಗರು ಎರಡನೆಯ ಇಯತ್ತೆಯಲ್ಲಷ್ಟೇ ಓದುತ್ತಿದ್ದಾರೆ. ಈ ಜನರು ತಾವು ದೈವನಿಷ್ಠರಾಗಿರುವೆವೆಂದು ತಿಳಿದಿರುತ್ತಾರೆ. ತಾವು ಬಯಸಿದ ವಸ್ತುಗಳ ಬಗೆಗಷ್ಟೇ ಅವರ ಭಕ್ತಿ ಇರುವಾಗ ಅವರದು ದೈವನಿಷ್ಠೆ ಹೇಗಾದೀತು? ಹೌದೋ ಅಲ್ಲವೋ? ಇಹ–ಪರಗಳಲ್ಲಿಯ ಸುಖ ಭೋಗಗಳಿಗಾಗಿ ಮಾತ್ರ ಅವರು ಭಕ್ತಿಯನ್ನು ಮೆಚ್ಚಿಕೊಂಡಿರುವುದು! ಈ ವಿಷಯದಲ್ಲಿ ಸಹಾಯ ಮಾಡಲೆಂದು ಮಾತ್ರ ಅವರು ದೇವರನ್ನು ಆಮಂತ್ರಿಸುತ್ತಾರೆ. ಇಲ್ಲಿ ಅವರಿಗೆ ದೇವರುಗಳು (ದೇವತೆಗಳೂ) ಬೇಕಾದದ್ದು ನೆರವೀಯುವವರಾಗಿ ಮಾತ್ರ. ಅವರ ಭಕ್ತಿ ಇರುವುದು ಪ್ರಾಪಂಚಿಕ ವಸ್ತುಗಳ ಬಗ್ಗೆ ಮಾತ್ರ–ದೇವರತ್ತ ಅಲ್ಲ. ಪಾಠಶಾಲೆಗೆ ಸೇರುವ ಮೊದಲು ಮಾನವನ ಅಂತರ್ಗತವಾದ ಭಕ್ತಿ ಭಾವನೆಯು ಕೇವಲ ವಿಷಯೋನ್ಮುಖವಾಗಿತ್ತು ಮತ್ತು ಅವುಗಳನ್ನು ಪಡೆಯುವ ಸಾಧನವೆಂದರೆ ಅವನ ಭೌತಿಕ ಹಾಗೂ ಮಾನಸಿಕ ಶಕ್ತಿಯೇ ಆಗಿತ್ತು. ಪ್ರಥಮ ವರ್ಗದಲ್ಲಿ ಇದ್ದಾಗ ಅವನದು ವಿಷಯ ಭಕ್ತಿಯಾಗಿತ್ತು ಮತ್ತು ಆ ವಿಷಯಗಳ ಪೂರೈಕೆಗೆ ಕರ್ಮಗಳು ಸಾಧನಗಳಾಗಿದ್ದವು. ಈ ಎರಡನೆಯ ತರಗತಿಯಲ್ಲಿ ಈಗಲೂ ಅವನದು ವಿಷಯ ಭಕ್ತಿಯೇ ಆಗಿದೆ ; ಅವನು ಬೇಡುವ ವಿಷಯಗಳ ಪೂರೈಕೆಗೆ ಕರ್ಮಗಳ ಬದಲು ದೇವರ ವಿವಿಧ ನಾಮರೂಪಗಳು ಸಾಧನ. ಈ ಸ್ಥಿತಿಯಲ್ಲಿ ಮಾನವನು ಉತ್ಸಾಹದಿಂದ ತನ್ನ ಪೂಜೆಯನ್ನು ಆರಂಭಿಸುತ್ತಾನೆ.

“ನಾನು ತಿರುಪತಿಗೆ[೧೫] ಯಾತ್ರೆ ಮಾಡಿದೆ. ಆ ಸಪ್ತಾದ್ರಿ ಪತಿಯು ಐಶ್ವರ್ಯವನ್ನು ನನಗೆ ದಯಪಾಲಿಸುತ್ತಾನೆ. ನಾನು ಕಾವಡಿಯನ್ನು (ಎರಡೂ ಕಡೆಗಳಲ್ಲಿ ನೆಲುವುಗಳಲ್ಲಿ

---

೧೫. ಸ್ಥಳನಾಮಗಳು.

ಭಾರವಿರಿಸಿ ಹೊರುವುದಕ್ಕಾಗುವ ಬಿದಿರಿನ ತುಂಡನ್ನು) ಪಳನಿಯ ಮುರುಗನಾರ ದೇವರಿಗಾಗಿ ಹೊತ್ತೆ. ಆ ದೇವರಿಗೆ ನಾನು ಕ್ಷೀರಾಭಿಷೇಕ ಮಾಡಿಸಿದೆ, ಪಂಚಾಮೃತ ಸ್ನಾನ ಮಾಡಿಸಿದೆ (ದ್ರಾಕ್ಷಿ, ಬಾಳೆಹಣ್ಣು, ಜೇನುತುಪ್ಪ, ಸಕ್ಕರೆ ಮತ್ತು ತುಪ್ಪ ಎಂಬಿವೇ ಆ ಐದು ಅಮೃತಗಳು). ನಾನು "ತಿರುಮುರುಗತ್ರುಪದ್ಯೆ" ಎಂಬ ಸ್ತೋತ್ರವನ್ನು ಮಾಡುತ್ತಿದ್ದೇನೆ. ಆ ದೇವರ ಅನುಗ್ರಹದಿಂದ ನಮ್ಮ ಎಲ್ಲ ಕಷ್ಟಗಳು ಪರಿಹಾರ ಹೊಂದುವುವು ಮತ್ತು ನಮ್ಮ ಕುಟುಂಬಕ್ಕೆ ಬೇಕಾದ ಎಲ್ಲ ಸೌಕರ್ಯಗಳೂ ದೊರಕುವಂತಾಗುವುವು. ನಾನು ಕಾಶೀ ವಿಶ್ವೇಶ್ವರನನ್ನು[೧೬] ನೋಡಿಬಂದೆ. ರಾಮೇಶ್ವರದ ದೇವರನ್ನೂ ದರ್ಶನ ಮಾಡಿ ಬಂದೆ. ಗಂಗಾ, ಯಮುನಾ ನದಿಗಳಲ್ಲಿ ಪವಿತ್ರ ಸ್ನಾನ ಮಾಡಿ ಬಂದೆ. ಆದುದರಿಂದ ನನಗೆ ಒಳ್ಳೆಯ ಮಕ್ಕಳು ಹುಟ್ಟುತ್ತವೆ. ನಾನು ಆದಿತ್ಯ ಹೃದಯ ಸ್ತೋತ್ರವನ್ನು ದಿನವೂ ಪಠಿಸುತ್ತಿರುವದರಿಂದ ನನ್ನ ಶತ್ರುವು ಕೋರ್ಟಿನಲ್ಲಿ ಏನು ಮಾಡಬಲ್ಲ? ನಾನೇನನ್ನಾದರೂ ಪ್ರಾರಂಭಿಸಿದರೆ ಅದು ನಿರ್ವಿಘ್ನವಾಗಿ ಹಾಗೂ ಜಯಪ್ರದವಾಗಿ ಮುಗಿಯಬೇಕು ಅಲ್ಲವೇ? ಆದುದರಿಂದ ನಾನು ಯಾವಾಗಲೂ ಗಣಪತಿಯನ್ನು ಪೂಜಿಸುತ್ತೇನೆ. ವರ್ಷವಿಡೀ ನಾನು ಲಕ್ಷ್ಮೀ–ಅಷ್ಟೋತ್ತರವನ್ನು ಲಕ್ಷ್ಮೀ ಸಹಸ್ರನಾಮವನ್ನು ಪಠಿಸುತ್ತಾ ಬಂದಿದ್ದೇನೆ. ಆಕೆಯ ಅನುಗ್ರಾಹಕ ಕಟಾಕ್ಷವು ನನಗೆ ಎಷ್ಟೋ ಐಶ್ವರ್ಯವನ್ನು ತಂದುಕೊಡುತ್ತದೆ. ಲಲಿತಾ ಸಹಸ್ರನಾಮದ ಪಾರಾಯಣವನ್ನು ನಾನೆಂದೂ ತಪ್ಪಿಸಿಲ್ಲ. ತ್ರಿಶತಿ, ಚಂಡಿಕಾ ಹೋಮ ಮತ್ತು ಶ್ರೀಚಕ್ರಪೂಜೆಗಳನ್ನು ನಾನೆಂದೂ ಬಿಡಲಿಲ್ಲ. ನನಗೆ ದೇವಿಯೇ ಎಲ್ಲವನ್ನೂ ಕೊಡುತ್ತಿದ್ದಾಳೆ. ಚಿದಂಬರದ ನಟರಾಜನನ್ನು ಹೋಗಿ ನೋಡಬೇಕೆಂದು ದೃಢಸಂಕಲ್ಪ ಮಾಡಿದ್ದೇನೆ. ಅಣ್ಣಾಮಲೈ ಅಪ್ಪ, ಕಾಳಹಸ್ತಿಯ ಒಡೆಯ, ಮಹಾಲಿಂಗ ಒಡೆಯ ವಯದೀಶ್ವರನ ಒಡೆಯ ಮತ್ತು ಕೈಲಾಸದ ಒಡೆಯ – ಎಂಬೀ ದೇವರುಗಳ ದರ್ಶನವನ್ನು ಮಾಡಬೇಕೆಂದು ದೃಢವಾಗಿ ನಿರ್ಧರಿಸಿದ್ದೇನೆ. ಇಹ–ಪರಗಳಲ್ಲಿ ಎಲ್ಲವನ್ನೂ ಕೊಡುವಾತನು ಅವನೇ ಆದುದರಿಂದ ನಾನು ಶಿವಸ್ತೋತ್ರವನ್ನು[೧೭] ಸಹಸ್ರನಾಮವನ್ನೂ ಪಾರಾಯಣ ಮಾಡುತ್ತೇನೆ. ಒಂದು ಸಾವಿರ ಗಾಯತ್ರಿಯನ್ನು ಸಂಧ್ಯಾವಂದನೆಯೊಡನೆ ನಾನು ದಿನಕ್ಕೆ ಎರಡು ಸಲ ಜಪಿಸುತ್ತೇನೆ. ನನ್ನ ತೇಜಸ್ಸನ್ನೂ ನನ್ನ ಮುಖದ ಮೇಲಿನ ವರ್ಚಸ್ಸನ್ನೂ ನೋಡಿರಿ ! ನನ್ನ ಮನೆಯಲ್ಲಿ ನಾನು ಪ್ರತಿವರ್ಷವೂ ಭಗವದ್ಗೀತಾ ಪಾರಾಯಣವನ್ನು ರಾಮನಾಮ ಸಂಕೀರ್ತನವನ್ನೂ ಶ್ರೀ ರಾಮನವಮಿ ಉತ್ಸವವನ್ನೂ[೧೮] ಏರ್ಪಡಿಸುತ್ತೇನೆ. ದೇವರ ಬೇರೆ ಬೇರೆ ನಾಮರೂಪಗಳನ್ನು ಈ ಪ್ರಕಾರ ಪೂಜಿಸುವುದೊಂದೇ ನನ್ನ ಅದೃಷ್ಟವನ್ನು ಸುಧಾರಿಸುವ ಉಪಾಯ (ಮಾರ್ಗ)!"

ಹೀಗೆ ಜಗದ್ವಸ್ತುಗಳ ಬಗೆಗಿನ ವಿಸ್ತರಶೀಲ ಆಶೆಗಳ ದೆಸೆಯಿಂದ ದೇವರ ನಾಮ ರೂಪಗಳ ಬಗೆಗೆ ಎರಡನೆಯ ವರ್ಗದಲ್ಲಿರುವ ಮಾನವನ ನಂಬಿಗೆ ಮತ್ತು ಭಕ್ತಿಯು ಹೆಚ್ಚುತ್ತಾ ಹೋಗುತ್ತದೆ. ಈಗ ಮಾನವನು ಪೂಜೆಯಲ್ಲಿ ಹೆಚ್ಚು ಹೆಚ್ಚು ಆಸಕ್ತನಾಗಿರುತ್ತಾನೆ!

---

೧೬. ದೇವರ ಹೆಸರುಗಳು

೧೭. ಸ್ತೋತ್ರಗಳ ಹೆಸರುಗಳು

೧೮. ಪೂಜಾವಿಧಾನಗಳ ಹೆಸರುಗಳು

ಈ ಪೂಜೆಗಳಲ್ಲಿ ಅಸಂಖ್ಯಾತ ಜನ್ಮಗಳು ಕಳೆದು ಹೋಗುತ್ತವೆ. ಮಾನವರಿಗೆ ಈ ಜಗತ್ತಿನಲ್ಲಿ ಇಹ-ಪರಗಳಲ್ಲಿ, ಅಪೂಜಕರಿಗಿಂತ ಹೆಚ್ಚಿನ ಸುಖಭೋಗಗಳು ಸಿಕ್ಕುತ್ತಿರುತ್ತವೆ. ವಿವಿಧ ಸುಖಭೋಗಗಳ ಮತ್ತು ಅವುಗಳ ಬಗೆಗಿನ ವಿವಿಧ ಮನೋಭಿಷ್ಟಗಳ ಕುರಿತಾದ ಊಹೆಯು ಯಾ ಕಲ್ಪನೆಯು ಸೀಮಾತೀತವಾಗಿರುವುದು ವಸ್ತುಸ್ಥಿತಿಯಲ್ಲವೇ? ಇದಕ್ಕೆ ತುದಿಯೆಲ್ಲಿ?

"ಇಡೀ ಜಗತ್ತನ್ನು ಗೆದ್ದುಕೊಂಡು ಆಳಿದರೂ ಮಾನವನಿಗೆ ತೃಪ್ತಿಯುಂಟಾಗದು; ಮತ್ತೂ ಅವನು ಸಮುದ್ರಗಳನ್ನು ಆಳಬಯಸುತ್ತಾನೆ. ಸ್ವರ್ಗದ ಕೋಶಾಧ್ಯಕ್ಷ ಕುಬೇರನಂತೆ ಚಿನ್ನದ ರಾಶಿರಾಶಿಗಳನ್ನು ಪಡೆದುಕೊಂಡ ಮೇಲೂ ಅವನು ಎಲ್ಲ ಲೋಹಗಳನ್ನೂ ಚಿನ್ನವಾಗಿ ಪರಿವರ್ತಿಸುವ ರಸೌಷಧಕ್ಕೆ ಮರುಳಾಗಿರುತ್ತಾನೆ ! ಬಹಳ ವರ್ಷ ಬದುಕಿದಾತನು ಅಮರತ್ವವನ್ನು ಕೊಡಬಲ್ಲ ಅಮೃತವನ್ನು ಶೋಧಿಸುವುದರಲ್ಲಿ ತಲೆ ಚಚ್ಚಿಕೊಳ್ಳುತ್ತಾನೆ. ಹೀಗೆ ಆಶೆಗಳಿಗೆ ಅಂತ್ಯವಿಲ್ಲ" ಎಂದು ಸಾಧು ತಾಯುಮನಾರರು ಹಾಡಿದ್ದಾರೆ.

ರಾವಣ, ಹಿರಣ್ಯ ಕಶಿಪು ಮತ್ತು ಇಂದ್ರನು ಮಹಾಬಲಿಷ್ಠ ಪುರುಷರು ; ಪ್ರತಿಯೊಬ್ಬ ಬಲಿಷ್ಠನಿಗೂ ಅವನಿಗಿಂತ ಬಲ ಹೆಚ್ಚಾಗಿರುವ (ಎದುರಾಳಿಯೊಬ್ಬ) ವ್ಯಕ್ತಿಯೊಬ್ಬನಿರುತ್ತಾನೆ. ಅವರು ಉಪಾಸನೆಯ ಮೂಲಕ ಅಸಾಧಾರಣ ಶಕ್ತಿ ಸಂಪನ್ನರಾಗಿದ್ದರು. ಅವರಿಗೆ ಹೃದಯ ವಿದ್ರಾವಕವಾದ ಅತೃಪ್ತಿ ಇದ್ದುದರಿಂದ ತಮ್ಮ ಸಮಾಧಿಯನ್ನು (ಹೂಳುವ ಸ್ಮಶಾನವನ್ನು) ತಾವೇ ಅಗೆದು ಕಟ್ಟಿಕೊಂಡರು. ಅವರಿಗೆ ಪರರ ಬಗ್ಗೆ ಅಸೂಯೆಯೂ ಪರರ ಸ್ವತ್ತುಗಳ ಬಗೆಗೆ ಅತಿಯಾದ ಆಸೆಯೂ ಇದ್ದವು. ಅಂಥವರ ಗತಿಯೇ ದುರಂತವಾದಾಗ ಮಾನವ ತನ್ನ ಉಪಾಸನಾಲಬ್ಧವಾದ ಅಲ್ಪಶಕ್ತಿಯ ಮೂಲಕ ಎಷ್ಟು ತೃಪ್ತಿಯನ್ನು ಪಡೆಯಬಲ್ಲವನಾದಾನು? ಉಪಾಸನೆಯಲ್ಲಿ ತನಗಿಂತ ಮುಂಬರಿದವರನ್ನು ಕಂಡಾಗ ಅವನಿಗೆ ಈರ್ಷ್ಯೆಯಿಂದ ಮುಖ ಕೆಂಪೇರುವುದು. ತನ್ನ ಅನೇಕಾನೇಕ ಈಡೇರದ ಬಯಕೆಗಳ ದೆಸೆಯಿಂದ ಅವನು ಸೊರಗುತ್ತಲೇ ಇರುತ್ತಾನೆ.

ಹೊಟ್ಟೆಪಾಡಿಗಾಗಿ ತನ್ನ ದಿನದ ಬಹುಭಾಗವನ್ನು ವ್ಯಯಿಸುವ ಮಾನವನಿಗೆ -ನಿದ್ರೆ ತನ್ನ ಕಾಲುಭಾಗವನ್ನು ವಸೂಲು ಮಾಡಿಕೊಂಡ ಮೇಲೆ – ಉಳಿಯುವ ಕಾಲಾವಧಿಯು ಅತ್ಯಲ್ಪವಲ್ಲವೇ? ಅವನಿಗೆ ದೊರಕಬಹುದಾದ ಆ ಪರಿಮಿತ ಕಾಲಾವಧಿಯಲ್ಲಿ ದೇವರ ಅಪರಿಮಿತ ಮುಖಗಳಲ್ಲಿ ಎಷ್ಟನ್ನು ದಿನವೂ ಅವನು ಪೂಜಿಸಬಲ್ಲನು? ಮಂಗಳವಾರ, ಶುಕ್ರವಾರಗಳ ಮಂಗಳಕಾರಕತೆಯ ದೆಸೆಯಿಂದ ಆ ದಿನಗಳಲ್ಲಿ ಲಕ್ಷ್ಮೀ ದೇವಿಯ ಪೂಜೆಗೆ ಬಹಳ ಕಾಲ ಕಳೆದು ಹೋಗುತ್ತದೆ ; ಸೋಮವಾರ-ಗುರುವಾರಗಳನ್ನು ಶಿವಪೂಜೆಯು ಕಬಳಿಸಿ ಬಿಡುತ್ತದೆ. ಶನಿವಾರವನ್ನು ನವಗ್ರಹ ಪೂಜೆಯು ಖಲಾಸು ಮಾಡುತ್ತಿದೆ. ರವಿವಾರವನ್ನು ರವಿಪೂಜೆಯು ನುಂಗಿ ಹಾಕಿ ಬಿಡುತ್ತದೆ. ಈ ಪೂಜೆಗಳ ಜೊತೆಗೇ ಮಿಕ್ಕ ೬ ವಾರಗಳಲ್ಲಿ (ದಿನಗಳಲ್ಲಿ) ಇತರ ದೇವರುಗಳನ್ನೂ ಪೂಜಿಸಬೇಕಾಗಿರುತ್ತದೆ! ಬುಧವಾರಗಳಲ್ಲೂ ವಿಶಿಷ್ಟ ದೇವತೆಗಳ ಜೊತೆಗೆ ಆ ಸಾಮಾನ್ಯ ದೇವತೆಗಳೆಲ್ಲವನ್ನೂ ಪೂಜಿಸಲು ಗಮನ ಹರಿಯಿಸಬೇಕಾಗುತ್ತದೆ! ಹೀಗಿರುವಾಗ ಮಾನವನು ಪ್ರತಿದಿನವೂ ಆ ಎಲ್ಲ ದೇವತೆಗಳನ್ನೂ ಪೂಜಿಸುವ ತನ್ನ ಬಯಕೆಗೆ ಪೂರ್ಣನ್ಯಾಯವನ್ನು ದೊರಕಿಸಿಕೊಡುವುದು ಹೇಗೆ ಸಾಧ್ಯ?

ವೈವಿಧ್ಯದ ಬಗ್ಗೆ ಒಲವಿದ್ದರೂ ಒಂದಕ್ಕಿಂತ ಹೆಚ್ಚಾಗಿ ಇನ್ನೊಂದಕ್ಕೆ ಅಂಟಿಕೊಳ್ಳುವುದು ಮನಸ್ಸಿಗೆ ಸಾಧ್ಯ. ಈ ತತ್ವದ ಅನುಸಾರವಾಗಿ ಅವನ ಬಹುದೇವತಾರಾಧನೆಯ ಮಧ್ಯದಲ್ಲಿಯೂ ಮಾನವನಿಗೆ ದೇವರುಗಳಲ್ಲಿ ಯಾರಾದರೂ ಒಬ್ಬ ದೇವರ ಬಗೆಗೆ ವಿಶೇಷಾಸಕ್ತಿಯು ಕೂಡಲೇ ಉಂಟಾಗುತ್ತದೆ. ಸ್ವಾಭಾವಿಕವಾಗಿ ಅತಿ ಹರ್ಷದಿಂದಲೂ ಭಕ್ತಿಯಿಂದಲೂ ಅವನು ತನ್ನನ್ನಾಕರ್ಷಿಸಿದ ವಿಶಿಷ್ಟ ದೇವತಾಮುಖವನ್ನು ಹೆಚ್ಚು ಹೊತ್ತು ಪೂಜಿಸುತ್ತಾನೆ. [ದೇವತೆಗಳೆಲ್ಲರೂ ಏಕಮೇವಾದ್ವಿತೀಯತ್ವವುಳ್ಳ ಪರಮಸತ್ಯ ಸ್ವರೂಪದ ಮಹಾದೇವನ ಅಂಶಗಳು ಯಾ ಮುಖಗಳು – ಎಂಬುದಿಲ್ಲಿ ಸ್ಮರಣೀಯ. ಹಾಗೇ ದೇವರು, ಜಗತ್ತು ಮತ್ತು ಜೀವ ಎಂಬ ತ್ರಿವಿಧ ವಿಭಾಗಗಳಲ್ಲಿ ಬರುವ ದೇವತ್ವದ ಅರ್ಥ ಪರಿಮಿತಿಯೂ ಈ ಮಹಾದೇವನಿಗಿಲ್ಲ. ಈತನು ಆತ್ಮ=ಪರಬ್ರಹ್ಮ=ಸಚ್ಚಿದಾನಂದ–ಎಂದು ತಾತ್ಪರ್ಯ]. ಇದರ ಫಲವಾಗಿ ದೇವರ ಇನ್ನಿತರ ನಾಮರೂಪಗಳಲ್ಲಿ ತನಗಿರುವ ಆಸಕ್ತಿಯು ಹೆಚ್ಚು ಹೆಚ್ಚು ಕಡಿಮೆಯಾಗುತ್ತಿರುವುದನ್ನು ಅವನು ತನ್ನಲ್ಲಿ ನೋಡುತ್ತಾನೆ. ಇದರ ಮೇಲೆ, ಆ ಈ ದೇವತೆಯನ್ನು ಗೌರವಿಸುವುದಕ್ಕಾಗಿ ನಡೆಯುವ ವಿವಿಧ ವಾರ್ಷಿಕ ರಥೋತ್ಸವಗಳಿಗೆ ಹೋಗುವುದೂ ಮುಖ್ಯವೆಂದು ಅವನಿಗೆ ತೋರುತ್ತದೆ : ಏಕೆಂದರೆ ಆ ದೇವತೆಗಳೆಲ್ಲರನ್ನೂ ಅವನು ಪ್ರತಿದಿನ ಮನೆಯಲ್ಲಿ ತಪ್ಪದೆ ಪೂಜಿಸುತ್ತಿದ್ದಾನೆ. ಇವುಗಳಲ್ಲಿ ಅವನು ಯಾವುದಕ್ಕೆ ಹೋದಾನು ಮತ್ತು ಯಾವುದನ್ನು ಬಿಟ್ಟಾನು?

ಅವನ ಪ್ರಾರಬ್ಧದ ದೆಸೆಯಿಂದ ಜೀವನದಲ್ಲಿ ಮಾನವನಿಗೆ ಕೆಲವು ಕಷ್ಟಗಳೂ, ದುಃಖಗಳೂ ಉಂಟಾದಾಗ ತಾನು ಆ ದೇವರುಗಳ ಪೂಜೆಯತ್ತ ಉದಾಸೀನ ಮಾಡಿದ್ದೇ ಕಾರಣವೆಂದು ಅವನು ತಿಳಿಯುತ್ತಾನೆ. ಆದರೆ ನಿಜವಾಗಿ ಅದು ಹಾಗಿರಲಿಕ್ಕಿಲ್ಲ. ಅವನ ವರ್ತಮಾನ ಪ್ರಾರಬ್ಧವು ಅವನು ತಿಳಿದೋ ತಿಳಿಯದೆಯೋ ಹಿಂದೆ (ಪೂರ್ವಜನ್ಮದಲ್ಲಿ) ಮಾಡಿದ ಕರ್ಮಗಳ ಫಲಾಂಶ. ಅವನೀಗ ಪೂಜಿಸುತ್ತಿರುವ ಯಾವ ದೇವರೂ ಅವನ ಪ್ರಾರಬ್ಧದಲ್ಲಿ ಕೈ ಹಾಕುವುದಿಲ್ಲ.

ಈ ಪೂಜೆಗಳನ್ನು ಮಾಡುವುದಕ್ಕಾಗಿ ಮಾನವನು ದೇಹ–ಮನಸ್ಸುಗಳ ಶುದ್ಧಿಯನ್ನು ಇಟ್ಟುಕೊಳ್ಳುವುದು ಅಗತ್ಯ. ಹಾಗೆ ಅವುಗಳ ವಿವಿಧ ಶುದ್ಧಿಯನ್ನು ಇಟ್ಟುಕೊಳ್ಳುವುದಲ್ಲದೆ ಅವನು ತಾನು ದಿನವೂ ಪಾಲಿಸಲೆಂದು ಕೆಲವು ವ್ರತಗಳನ್ನು ಹಿಡಿಯಬೇಕು. ಯಾಗಾದಿ ಸಮಾರಂಭಗಳಿಗೆ ಅಗತ್ಯವಾದ ಹಾಗೂ ವೈಯಕ್ತಿಕವಾದ ನೈರ್ಮಲ್ಯವನ್ನು ಪಾಲಿಸದೆ ಇರುವವನಿಗೆ ದೇವರ ಪೂಜೆ ಹೇಗೆ ಸಾಧ್ಯ? ಈ ವಿವಿಧ ಪಾವಿತ್ರ್ಯವನ್ನಿಟ್ಟುಕೊಳ್ಳಲು ಅವನು ಅನೇಕ ದುರಭ್ಯಾಸಗಳನ್ನು – ಸೋಮಾರಿತನವೂ ಸೇರಿದಂತೆ – ಬಿಡಬೇಕಾಗುತ್ತದೆ ; ವೈಯಕ್ತಿಕ ಶುದ್ಧಿಯನ್ನು ಅರ್ಥಾತ್ ಆಚಾರಗಳನ್ನು ಪಾಲಿಸಿಕೊಂಡು ಬರಬೇಕೆಂಬುದರ ಆತ್ಯಂತಿಕ ಉದ್ದೇಶವನ್ನು ಕುರಿತ ಕಥೆಯನ್ನು ಮೂರನೆಯ ಪರಿಶಿಷ್ಟದಲ್ಲಿ ಕೊಡಲಾಗಿದೆ. ಅದು ಶ್ರೀ ಭಗವಾನ್ ರಮಣರೇ ಹೇಳಿದ್ದು. ಅದರ ಸಾರವನ್ನು ತಮ್ಮ "ಗುರುವಚನ ಮಾಲೆ" ("ಗುರುವಾಚಕ ಕೋವೈ) ಎಂಬ ಗ್ರಂಥದ ೬೮೦ ನೆಯ ಪದ್ಯದಲ್ಲಿ ಶ್ರೀ ಮುರುಗನಾರರು ದಾಖಲೆ ಮಾಡಿ ಇಟ್ಟಿದ್ದಾರೆ. ನಮ್ಮ ಮನುಷ್ಯನೀಗ ಜೀವನದ ಶುದ್ಧ ಮಾರ್ಗವನ್ನು ಹಿಡಿದಿದ್ದಾನೆ ಮತ್ತು ದೇವರನ್ನು ಅವಲಂಬಿಸುವ ಅಭ್ಯಾಸವನ್ನು ಗಳಿಸಿಕೊಂಡಿದ್ದಾನೆ. ಆದರೆ ದೇವರ ಅಷ್ಟೊಂದು ನಾಮ–ರೂಪಗಳನ್ನು ಪೂಜಿಸಲು

ಅಗತ್ಯವಾದ ಕಾಲಾವಕಾಶವೂ ಶಕ್ತಿಯೂ ಇಲ್ಲದುದರಿಂದ ಆ ಪೂಜೆ ಮನೆಯಲ್ಲೇ ಮಾಡುವುದಿರಲಿ ಯಾ ಹೊರಗೆ ಮಾಡುವುದಿರಲಿ ಮತ್ತು ನಿದ್ರೆ ಮಾಡಲು ಕೂಡಾ ಸಾಕಷ್ಟು ಕಾಲ ಸಿಕ್ಕದಾದುರಿಂದ ಅವನ ಮನಸ್ಸು ಮತ್ತೆ ಇನ್ನೂ ಹೆಚ್ಚಿನ ಗೊಂದಲದಲ್ಲಿ ಸಿಕ್ಕಿಕೊಳ್ಳುತ್ತದೆ. ಹೀಗೆ ಮಾನವನು ಪುನಃ ಗುರುವಿನೆಡೆಗೆ ಬರುತ್ತಾನೆ.

"ಸ್ವಾಮಿ, ನಿಮ್ಮ ಅನುಗ್ರಹದಿಂದ, ನಿಮ್ಮ ಉಪದೇಶದ ಅನುಸಾರವಾಗಿ ನಾನು ದೇವರ ಅನೇಕ ಭಿನ್ನ ಭಿನ್ನ ನಾಮ–ರೂಪಗಳನ್ನು ಪೂಜಿಸುತ್ತಾ ಬಂದಿದ್ದೇನೆ. ಆದರೆ ಆ ಎಲ್ಲ ದೇವರುಗಳು ಮತ್ತು ನನ್ನ ಹೃದಯ ತೃಪ್ತವಾಗುವಂತೆ ಪೂಜಿಸಲು ನನಗೆ ಕಾಲವೂ ಇಲ್ಲ, ಶಕ್ತಿಯೂ ಇಲ್ಲ, ಈ ಕಾರಣದಿಂದ ಆ ದೇವರುಗಳಲ್ಲಿ ಕೆಲವರ ಪೂಜೆಯತ್ತ ಉದಾಸೀನನಾಗಬೇಕಾಯಿತು ಮತ್ತು ನಾನೀಗ ಪದೇ ಪದೇ ಕಷ್ಟ–ದುಃಖಗಳಲ್ಲಿ ಬೀಳುತ್ತಿದ್ದೇನೆ. ನಾನು ಎಲ್ಲ ದೇವರುಗಳನ್ನೂ ಪೂಜಿಸಿದ ಹೊರತು ನನ್ನ ಎಲ್ಲ ಆಸೆಗಳೂ ಪೂರ್ಣವಾಗುವುದಿಲ್ಲವಲ್ಲವೇ? ಈ ಬಗ್ಗೆ ಏನು ಮಾಡಬೇಕೆಂಬುದನ್ನರಿಯದೆ, ಗಲಿಬಿಲಿಗೊಂಡ ಮನಸ್ಸಿನಿಂದ ನಾನು ನಿಮ್ಮ ಸಹಾಯವನ್ನು ಯಾಚಿಸಲೆಂದು ಇಲ್ಲಿಗೆ ಬಂದಿದ್ದೇನೆ. ಸುಲಭತರವೂ ತ್ವರಿತತರವೂ ಆದ ಮಾರ್ಗವೊಂದು ನನ್ನ ಆಸೆಗಳ ಪೂರೈಕೆಗೆ ಇಲ್ಲವೇನು?" – ಎಂದು ಅವನು ಕೇಳುತ್ತಾನೆ. ಗುರುವಿನಿಂದ ತಕ್ಕ ಉತ್ತರ ದೊರಕೀತೆಂದು ಅವನಿಗೆ ದೊಡ್ಡ ಪ್ರತ್ಯಾಶೆಯಿದೆ

"ಹೌದು, ಇದೆ! ನಾನು ಹೇಳುವುದನ್ನು ಕೇಳು. ದೇವರು ಒಬ್ಬನೇ. ಆ ಒಬ್ಬ ದೇವರನ್ನೇ ಬೇರೆ ಬೇರೆ ನಾಮ–ರೂಪಗಳಲ್ಲಿ ಪೂಜಿಸಲಾಗುತ್ತದೆ. ಅವನ ಪ್ರತಿಯೊಂದು ನಾಮಕ್ಕೂ ರೂಪಕ್ಕೂ ವಿಶಿಷ್ಟವಾದ ಆಸೆಯನ್ನು ಪೂರೈಸುವ ವಿಶಿಷ್ಟ ಶಕ್ತಿ ಇರುತ್ತದೆ. ಅವನು ಬಹುವಲ್ಲ. ಇಲ್ಲಿಯವರೆಗೆ ನೀನು ಅವನ ವಿವಿಧ ನಾಮ–ರೂಪಗಳನ್ನು ಭಕ್ತಿಯಿಂದ ಪೂಜಿಸುತ್ತ ಬಂದಿರುವೆಯಲ್ಲವೇ? ಅವುಗಳಲ್ಲಿ ಯಾವುದರ ಬಗೆಗೆ ನಿನಗೆ ಹೆಚ್ಚು ಭಕ್ತಿ ಇದೆ ಎಂಬುದನ್ನು ಹೇಳು. ನಿನ್ನ ಮನಸ್ಸನ್ನು ಅತಿ ಹೆಚ್ಚಾಗಿ ಆಕರ್ಷಿಸುವುದು ಯಾವುದೋ ಅದು ನಿನ್ನ ಪ್ರಿಯತಮ ದೇವತೆ "(ಇಷ್ಟದೈವ)" ಎಂದು ಗುರುಗಳು ಕೇಳಿದರು.

ಶಿವ, ವಿಷ್ಣು, ದೇವಿ ಮುಂತಾದ ಆ ಎಲ್ಲಾ ನಾಮರೂಪಾತ್ಮಕ ದೇವತೆಗಳಲ್ಲಿ ಮಿಕ್ಕೆಲ್ಲ ದೇವತೆಗಳಿಗಿಂತ ಹೆಚ್ಚಾಗಿ ಯಾವುದಾದರೂ ಒಬ್ಬ ದೇವತೆಯ ಮೇಲೆ ಹೆಚ್ಚು ಭಕ್ತಿ ನಮಗೆ ಹುಟ್ಟುವುದಿಲ್ಲವೇ? ತಮ್ಮದೇ ಮತಧರ್ಮದ ವಿಶಿಷ್ಟ ದೇವಮುಖದತ್ತ ಹೆಚ್ಚಿನ ಭಕ್ತಿಯು ಹಿಂದುಗಳಲ್ಲದ ಇತರ ಮತಧರ್ಮೀಯರಲ್ಲೂ ಹುಟ್ಟಬಹುದು ; ಅಲ್ಲವೇ? ಓದುಗ ಭಕ್ತಿದೋರುವ ಯಾವುದಾದರೂ ಒಂದು ದೇವಮುಖವನ್ನೇ ಆ ಮನುಷ್ಯನು ಹೇಳಿದ್ದಾನೆ ಎಂದು ನಾವೀಗ ಭಾವಿಸಿಕೊಳ್ಳೋಣ – ಆ ಇಷ್ಟ ದೈವವನ್ನೇ ಹೆಸರಿಸಿದನು ಎಂದು ಇಟ್ಟುಕೊಳ್ಳೋಣ.

ಆಳವಾಗಿ ಆಲೋಚಿಸಿದ ಅನಂತರ ಆ ಮಾನವನು, ಶ್ರೀ ಕೃಷ್ಣದೇವರು ಈ ಎಲ್ಲ ಕಾಲದಲ್ಲೂ ತನ್ನ ಮನಸ್ಸನ್ನು ಅಪಹರಿಸಿದ ದೇವತೆ ಎಂದೂ ಅವನೇ ಇತರ ದೇವತೆಗಳನ್ನು ತಾನು ಮರೆಯುವಂತೆ ಮಾಡಿದನೆಂದೂ ಹೇಳುತ್ತಾನೆ. ಈ ಅಧ್ಯಾಯದ ಆರಂಭದಲ್ಲಿ ನಾವು ಹೇಳಿದಂತೆ ಗುರುಗಳು ಎಂದರೆ ವೇದಗಳು ; ಮಾನವ (ಮನುಷ್ಯ) ಎಂದರೆ

ಮನುಕುಲ (ಸಾಧಕ, ಮುಮುಕ್ಷು, ಅಭ್ಯರ್ಥಿ), ಶ್ರೀ ಕೃಷ್ಣದೇವರು ಇಷ್ಟದೈವವೆಂದೂ ಅವನನ್ನೇ ಮನುಷ್ಯನು ಪೂಜಿಸುತ್ತಾನೆ ಎಂದೂ ನಾವೀಗ ಕಲ್ಪಿಸಿಕೊಳ್ಳೋಣ.

ಮಾನವ ಮುಂಬರಿಸುತ್ತಾನೆ : "ಶ್ರೀಕೃಷ್ಣನು ಪೂರ್ಣನಾದ ವಿಷ್ಣುವಿನ ಅವತಾರ. ತರುಣಪ್ರಾಯದ, ಸುಂದರವಾದ, ಮೇಘಶ್ಯಾಮ ಕೃಷ್ಣನ ಮೂರ್ತಿಯಲ್ಲಿ ಆ ಮಹಾವಿಷ್ಣು ಪ್ರಕಟವಾಗಿದ್ದಾನೆ. ಆ ವಿಷ್ಣು ಹೀಗೆ ಅವತರಿಸಿದ್ದು ಸಜ್ಜನರನ್ನು ರಕ್ಷಿಸಲು ಮತ್ತು ದುರ್ಜನರನ್ನು ಶಿಕ್ಷಿಸಲು. ಆ ಕೃಷ್ಣ ಸ್ವರೂಪದ ವಿಷ್ಣುವೇ ನಮಗೆ ಪವಿತ್ರವಾದ ಈ ಭಗವದ್ಗೀತೆಯನ್ನು ಕೊಟ್ಟದ್ದು. ಅವನೇ ನನ್ನ ಹೃದಯವನ್ನು ತನ್ನ ಪಾದಗಳ ಅಡಿಯಲ್ಲಿ ಇಟ್ಟುಕೊಂಡದ್ದು!" ಎಂದು.

ಗುರುಗಳು ಹೇಳುತ್ತಾರೆ, – "ಹೌದು ಅವನೇ ನಿನ್ನ ಇಷ್ಟದೈವವಾಗಲಿ. ಶ್ರೀ ಕೃಷ್ಣನೊಬ್ಬನೇ ಪರಮ ಪದಾರ್ಥ ! ಇಷ್ಟು ಕಾಲವೂ ಆತನೇ ವಿವಿಧ ನಾಮರೂಪಗಳ ಮೂಲಕ ನಿನ್ನ ಪೂಜೆಯನ್ನು ಸ್ವೀಕರಿಸಿ ನಿನ್ನ ವಿವಿಧ ಆಶೆಗಳನ್ನು ಸಂತೃಪ್ತಿಗೊಳಿಸಿದ್ದು. ಅಷ್ಟೇ ಅಲ್ಲದೆ, ನಿನ್ನ ಅವಧಾನವು ಅಷ್ಟುರಾಶಿ ದೇವರುಗಳಲ್ಲಿ ವಿಭಕ್ತವಾಗಿ ಹೋಗಿದ್ದುದರಿಂದ ಅವರಲ್ಲಿ ಒಬ್ಬನಿಗೇ (ಶ್ರೀ ಕೃಷ್ಣನಿಗೇ) ಪೂರ್ಣಾವಧಾನವನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಈಗ ನಿನಗೆ ತಿಳಿದಂತೆ ಶ್ರೀ ಕೃಷ್ಣನೇ ಇತರ ದೇವರುಗಳ ಮೂಲಕ ನಿನಗೆ ಒಳಿತನ್ನು ಮಾಡುತ್ತ ಬಂದದ್ದರಿಂದ ನಿನ್ನ ಅವಧಾನಶಕ್ತಿಯೆಲ್ಲವನ್ನೂ ಕ್ರೋಢೀಕರಿಸಿ ಅದೆಲ್ಲವನ್ನೂ ಅವನಿಗೆ ಸಲ್ಲಿಸು. ನಿನಗೆ ಚಿನ್ನ, ಐಶ್ವರ್ಯ, ಪಾಂಡಿತ್ಯ, ಮಕ್ಕಳು, ಜಯ ಅಥವಾ ಇನ್ನೂ ಏನೇನು ಬೇಕೋ ಅದೆಲ್ಲವನ್ನೂ ಅವನ ಹತ್ತಿರವೇ ಬೇಡು. ನೀನು ಬೇಡಿದ್ದೆಲ್ಲವನ್ನೂ ಕೊಡುವ ಕಲ್ಪತರು ಎಂದರೆ ಅವನೇ. ಈಗ ನಿನ್ನ ಪೂಜೆ ಸುಲಭವಾಯಿತು. ನಿನ್ನ ಹೃದಯಕ್ಕೆ ತೃಪ್ತಿಯಾಗುವ ಹಾಗೆ ನಿನ್ನ ಇಷ್ಟದೈವವಾದ ಶ್ರೀಕೃಷ್ಣನಿಗೆ ಆ ಪೂಜೆಯೆಲ್ಲವನ್ನೂ ಸಲ್ಲಿಸು. ನಿನ್ನ ಎಲ್ಲ ಅಭೀಷ್ಟಗಳನ್ನೂ ಪಡೆದು ಸುಖಿಯಾಗು" ಎಂದು.

ಗುರುಗಳ ಈ ಮಾತುಗಳನ್ನು ಕೇಳಿ ಮಾನವನ ಮನಸ್ಸಿನ ಗೊಂದಲವೆಲ್ಲಾ ಪರಿಹಾರವಾಯ್ತು. ತನ್ನ ಇಷ್ಟವೆಲ್ಲಾ ಪೂರೈಸುವುದೆಂಬ ಬಗೆಗೆ ಅವನಿಗೆ ಈಗ ಖಾತ್ರಿಯಾಯಿತು. ಹಾಗೆ ಪೂರೈಸಿ ಕೊಡುವವನು ತನ್ನ ಇಷ್ಟದೈವವಾದ ಶ್ರೀಕೃಷ್ಣನು. ಆ ದೇವರ ಬಗೆಗೆ ಈಗ ಆತನು ತನ್ನ ಪೂರ್ಣಾವಧಾನವನ್ನು ಸಲ್ಲಿಸಬಲ್ಲನು. ಅವನಿಗೆ ಇತರ ದೇವರುಗಳನ್ನು (ದೇವತೆಗಳನ್ನು) ಪೂಜಿಸುವ ತೊಂದರೆಯೂ ತಪ್ಪಿತು. ಆ ದೇವರುಗಳ ಪೂಜೆಯನ್ನು ಈವರೆಗೆ ಅವನು ಅಷ್ಟೇನೂ ಇಷ್ಟವಿಲ್ಲದೆಯೇ ಮಾಡುತ್ತಿದ್ದನು. ತನ್ನ ಇಷ್ಟದೈವವೊಬ್ಬನನ್ನೇ ಉಪಾಸಿಸಲು ಉಪದೇಶ ಪಡೆದ ಅವನು ತನ್ನ ಗುರುವಿಗೆ ಗೌರವವನ್ನು ಸಮರ್ಪಿಸಿ ಸುಖಿಯಾಗಿ ಮನೆಗೆ ಹಿಂದಿರುಗಿದನು.

ಒಬ್ಬನೇ ಒಬ್ಬ ದೇವನನ್ನು ಪೂಜಿಸುತ್ತಿರುವ ಮಾನವನು ತನ್ನ ಇಷ್ಟದೈವವೊಂದನ್ನೆ ಆರಾಧಿಸುತ್ತಿರುವ ಆ ಮುಮುಕ್ಷುವು ಈಗ ಶಾಲೆಯ ಮೂರನೆಯ ಇಯತ್ತೆಯಲ್ಲಿ ಕಾಲಿಟ್ಟಿದ್ದಾನೆ. ಶಾಲೆಯಲ್ಲಿ ಭಕ್ತಿಯ ಶುದ್ಧೀಕರಣವಾಗುತ್ತಾ ಇರುತ್ತದೆ. ಮೊದಲನೆಯ ವರ್ಗದಲ್ಲಿ ಕರ್ಮಾನುಷ್ಠಾನ ನಡೆಯಿತು. ಎರಡನೆಯ ದರ್ಜೆಯಲ್ಲಿ ದೇವರ ವಿವಿಧ ನಾಮರೂಪಗಳ ಆರಾಧನೆಯಾಯಿತು. ಮೂರನೆಯ ತರಗತಿಯಲ್ಲಿ ಒಬ್ಬನೇ ಒಬ್ಬನಾದ ಇಷ್ಟ ದೇವತೆಯನ್ನು ಪೂಜಿಸುವುದು ನಡೆಯುತ್ತದೆ. ಮೂರನೆಯ ತರಗತಿಯಲ್ಲಿ (ವರ್ಗದಲ್ಲಿ)

"ಅ" ಮತ್ತು 'ಬ" ಎಂಬ ಎರಡು ವಿಭಾಗಗಳಿವೆ (೧) ವಿಷಯ ಭಕ್ತಿಯದು ಮೊದಲನೆಯ ವಿಭಾಗ ; (೨) ಕೇವಲ ದೈವಭಕ್ತಿಯದು ಎರಡನೆಯ ವಿಭಾಗ. ನಮ್ಮ ಮನುಷ್ಯ ಇನ್ನೂ ವಿಷಯಭಕ್ತಿಯಲ್ಲೇ ಇರುವುದರಿಂದ ಅವನು ಮೂರನೆಯ ಇಯತ್ತೆಯ "ಅ" ಎಂಬ ವಿಭಾಗದಲ್ಲೇ ಇದ್ದಾನೆ.

"ಮಹಾತ್ಮರ ಮಾತುಗಳನ್ನು ಮೀರಲು ಇಷ್ಟವಿಲ್ಲ : ಒಬ್ಬನಿಗೆ ಬರೀ ಆಹಾರ, ಬಟ್ಟೆ ಮತ್ತು ಅಂಥ ಇತರ ಚಿಲ್ಲರೆ ಪದಾರ್ಥಗಳು ಸುಖಕ್ಕಾಗಿ ಬೇಕಾದಾಗಲೂ ಅಥವಾ ಎಲ್ಲವುದಕ್ಕಿಂತಲೂ ದೊಡ್ಡದಾದ ಮೋಕ್ಷವೇ ಬೇಕೆನ್ನಿಸಿದಾಗಲೂ ಅದನ್ನು ಪಡೆಯಲು ಆತನು ಪ್ರಯತ್ನಿಸಬಾರದು ; ಆದರೆ ಅವನು ಬಂದು ನಿನ್ನ ಹತ್ತಿರ ಕೇಳಬೇಕು. ಓ ವಡಲೂರ ಒಡೆಯನೇ, ನಾನು ನಿನ್ನಲ್ಲಿ ಬಂದಿದ್ದೇನೆ ಎಂದು ಶ್ರೀ ರಾಮಲಿಂಗಸ್ವಾಮಿಗಳು ಹಾಡುತ್ತಾರೆ.

ಶ್ರೀ ರಾಮಲಿಂಗ ಸ್ವಾಮಿಗಳ ಮೇಲೆ ಹೇಳಿದ ಮಾತಿನಂತೆ ಮಾನವನು ತನ್ನ ವಿವಿಧ ಅವಶ್ಯಕತೆಗಳ ಹಾಗೂ ಬಯಕೆಗಳ ಪೂರೈಕೆಯನ್ನು ತನ್ನ ಇಷ್ಟದೈವ ಶ್ರೀ ಕೃಷ್ಣನೊಬ್ಬನಿಂದಲೇ ಪಡೆಯಬಯಸುತ್ತಾನೆ. ಇಲ್ಲಿ ಅವನು ಪ್ರೀತಿಸುವುದು ವಸ್ತುಗಳನ್ನು. ಅವನ ಇಷ್ಟ ದೇವತೆಯು ಕೇವಲ ಸಹಾಯಕನು – ಅಷ್ಟೇ ! ಈವರೆಗೆ ಅನೇಕ ದೇವರುಗಳತ್ತ ಹರಿಬಿದ್ದುದರಿಂದ ಅವನ ಮನಸ್ಸು ದುರ್ಬಲವಾಗಿತ್ತು. ಆದರೆ ಈಗ ಅದು ಅವನ ಒಬ್ಬನೇ ಒಬ್ಬನಾದ ಇಷ್ಟ ದೇವತೆಯ ಮೇಲೆ ನಿಷ್ಠವಾಯಿತು. ಇದು ಅವನ ಪೂಜೆಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುತ್ತದೆ.

"ಅನೇಕಾನೇಕ (ಅಸಂಖ್ಯಾತ) ಶಾಖೋಪಶಾಖೆಗಳಾಗಿ ಮನಸ್ಸು ವಿಚಾರ ರೂಪದಲ್ಲಿ ಹರಿದು ಹಂಚಿ ಹೋಗುವುದರಿಂದ ಆ ಪ್ರತಿಯೊಂದು ವಿಚಾರದ ಅವಧಾರಣಶಕ್ತಿಯೂ ಬಹಳ ದುರ್ಬಲವಾಗುತ್ತದೆ. ವಿಚಾರಗಳು ಹೆಚ್ಚು ಹೆಚ್ಚು ತಣ್ಣಗಾಗುತ್ತಾ (ಶಾಂತವಾಗುತ್ತ) ಹೋದ ಹಾಗೆ ಮನಸ್ಸು ಏಕಾಗ್ರವಾಗುವುದರ ಮೂಲಕ ಶಕ್ತಿಯನ್ನು ಪಡೆಯುತ್ತದೆ."

"ನಾನು ಯಾರು?" – ಭಗವಾನ್ ಶ್ರೀ ರಮಣರು ಬ್ರಹ್ಮಾತ್ಮದ ಪ್ರತಿಬಿಂಬವಾದ ಮನಸ್ಸು ತನ್ನ ಶುದ್ಧ ಸ್ಥಿತಿಯಲ್ಲಿ ಒಂದು ದೊಡ್ಡ ಅದ್ಭುತ ಶಕ್ತಿ ಎನ್ನುತ್ತಾರೆ. ಅದೆಷ್ಟು ಶಕ್ತ ಎಂದರೆ – ಅದು ತನ್ನ ವಿಚಾರ ಕ್ರಿಯೆಯ ಸಾಂದ್ರತೆಯಿಂದ ಏನನ್ನು ಬೇಕಾದರೂ ಸ್ಥೂಲ ರೂಪದಲ್ಲಿ ಸೃಷ್ಟಿಸಿ ನೋಡಬಲ್ಲುದು.

ಯೋಗದ ಮುಖ್ಯಾಂಶವಿರುವುದು ಅತ್ತಿತ್ತ ಚದುರಿ ಹೋದ ವಿಚಾರಗಳನ್ನು ಸಂಗ್ರಹಿಸಿ ಒಂದನ್ನಾಗಿ ಮಾಡಿ ಮನಸ್ಸನ್ನು ಅದರ ಮೇಲೆ ನಿಷ್ಠವನ್ನಾಗಿ ಮಾಡುವುದರಲ್ಲೇ. ದೇವರ ಪೂಜೆಯು ಏಕಬಿಂದುವಿನ ಮೇಲೆ ಮನಸ್ಸನ್ನು ನಿಲ್ಲಿಸುವ ಒಂದು ಸಾಧನ. ಹಾಗೆ ನಿಲ್ಲಿಸುವಾಗ ಒಬ್ಬನ ಜಾಗ್ರದವಸ್ಥೆಯಲ್ಲಿ ಏಳುವ ಇತರ ಅಸಂಖ್ಯಾತ ವಿಚಾರಗಳು ಅವನ ದೈನಿಕ ಚಟುವಟಿಕೆಗಳಿಗೆ ಸಂಬಂಧಿಸಿದವುಗಳಾದುದರಿಂದ ಅವುಗಳನ್ನು ದೂರಕ್ಕೆ ತಳ್ಳಲಾಗುತ್ತದೆ. ಭಕ್ತಿ ಮಾರ್ಗದಲ್ಲಿ "ನನ್ನ ಜೀವನದಲ್ಲಿ ಎಲ್ಲವನ್ನೂ ಭಗವಂತನೇ ನೋಡಿಕೊಳ್ಳುತ್ತಾನೆ. ನಾನೇಕೆ ಅದರ ಬಗ್ಗೆ ವಿಚಾರಮಾಡಿ ತೊಂದರೆಪಟ್ಟುಕೊಳ್ಳಬೇಕು?" ಎಂಬಷ್ಟು ಮಟ್ಟಿನ ವಿಶ್ವಾಸ ಹೆಚ್ಚಿದಾಗ ಸಾವಿರಾರು ಅನವಶ್ಯಕ ವಿಚಾರಗಳು ದೂರವಾಗುವುದು. ಆದರೆ ಇಷ್ಟೇ ಸಾಕಾಗದು. ಭಕ್ತಿಯೋಗದ ಮುಖ್ಯಾಂಶವಿರುವುದು

ಒಬ್ಬನೇ ಒಬ್ಬ ದೇವನಲ್ಲಿ (ಅವನ ನಾಮ–ರೂಪಗಳಲ್ಲಿ) ಮನಸ್ಸನ್ನು ನಿಷ್ಠಗೊಳಿಸುವುದರಲ್ಲಿ – ದೇವನ ಇನ್ನೊಂದು ನಾಮ–ರೂಪಗಳಲ್ಲಿ ಆರಾಧಿಸ ಹೋಗುವ ಬದಲಾವಣೆಯನ್ನು ತಾರದೆ ಇರುವುದರಲ್ಲಿದೆ. ಹಾಗೆ ಬದಲಾಯಿಸಿದರೆ ಅನೇಕ ಆಲೋಚನೆಗಳಲ್ಲಿ ಮನಸ್ಸು ಶಾಖೆಗಳಾಗಿ ಹರಿದು ಅಲುಗಾಡುವಂತಾಗುತ್ತದೆ. ತದ್ವಿರುದ್ಧವಾಗಿ,

"ರಾಮಕೃಷ್ಣ ನಮೋ ರಹೀಂ
ಲಂಬೋದರ ಶ್ರೀ ಷಣ್ಮುಕಾಯ
ಭಾಮಾ ಮೇರೀ ಬುದ್ಧ ಶಿವ
ಪಾರ್ವತಿ ಅಲ್ಲಾ ಜೇಸುನಾಥ"

ಎಂದು ಎಲ್ಲ ಮತಧರ್ಮಗಳ ಎಲ್ಲ ದೇವರುಗಳ ಎಲ್ಲ ನಾಮರೂಪಗಳನ್ನೂ ಸೇರಿಸಿ ಒಂದು ಪದ್ಯವನ್ನು ಹೆಣೆದು "ಸರ್ವಸಾಧಾರಣ ಪ್ರಾರ್ಥನೆ" ಯಾ "ಜಪ" ಎಂದು ಎಲ್ಲ ಜನರಿಗೂ ಜಪ ಮಾಡಿರಿ ಅಥವಾ ಹೇಳಿರಿ ಎಂದು ಭಜನೆಯ ಕೂಗುಗಳನ್ನು ತಯಾರಿಸಿದರೆ ಭಕ್ತಿಮಾರ್ಗದ ಸಾಧನ ಅದೆಂದೂ ಆಗದು. ಹಾಗೆ ಮಾಡಿದಲ್ಲಿ ಮನಸ್ಸು ಏಕಾಗ್ರವಾಗದು – ಅದು ಚದುರಿ ಹೋಗುವುದಷ್ಟೇ. ಇದರಂಥ ಧಾರ್ಮಿಕ ಭಜನೆಯು ಮತಧಾರ್ಮಿಕ ಸುಧಾರಕರಿಗೆ ಕೆಲಮಟ್ಟಿಗೆ ಉಪಯುಕ್ತವಾಗಬಹುದು. ಭಿನ್ನ ಭಿನ್ನ ಮತಧರ್ಮಗಳಲ್ಲಿ ಅನೇಕಾನೇಕ ನಾಮರೂಪಗಳಿಂದ ಪೂಜಿಸಲ್ಪಡುವ ದೇವರು ಒಬ್ಬನೆ ಎಂದು ಸಾಮಾನ್ಯರಿಗೆ ತೋರಿಸಲು ಒಂದು ಉಪಾಯವೆನ್ನಿಸೀತಷ್ಟೇ. ಏಕೆಂದರೆ ಅವರು ಸರಿಯಾದ ವಿವೇಕವಿಲ್ಲದವರಾಗಿರುತ್ತಾರೆ ; ಅದರಿಂದ ಧರ್ಮಾಂಧರಾಗಿ (ಧರ್ಮಶಾತ್ಯದಿಂದ) ಪ್ರಚಾರ ಬೋಧನೆ ಮಾಡುತ್ತಾ ತಮ್ಮೊಳಗೇ ಜಗಳವಾಡಿ ತಮ್ಮ ಕಾಲವನ್ನು ಶಕ್ತಿಯನ್ನೂ ಹಾಳು ಮಾಡಿಕೊಳ್ಳುತ್ತಾರೆ. ಆದರೆ ಸಾಧಕನಿಗೆ (ಮುಮುಕ್ಷುವಿಗೆ) ದೇವರನ್ನು ಸೇರಬೇಕಾಗಿದೆ. ಆದುದರಿಂದ ಇದೆಂದೂ ಆಧ್ಯಾತ್ಮಿಕ ಸಾಧನೆಯಾಗಲಾರದು ! ಈ ಅಭ್ಯಾಸದ ಮೂಲಕ ಮನಸ್ಸು ದೇವರ ಯಾವ ಒಂದು ನಾಮಕ್ಕಾಗಲಿ, ರೂಪಕ್ಕಾಗಲಿ ಅಂಟಿಕೊಳ್ಳಲಾರದು. ಒಬ್ಬ ದೇವರಿಗೆ ಅಂಟಿಕೊಳ್ಳುವುದೊಂದೇ ದೇವರೊಬ್ಬನೆ ಎಂಬುದನ್ನು ತಿಳಿದುಕೊಂಡಿದ್ದಾನೆ ಎಂಬುದಕ್ಕೆ ಸರಿಯಾದ ಗುರುತು. ದೇವರ ನಾನಾ ನಾಮಗಳನ್ನು ಬರೆದು ಹಾಡುವುದು, ದೇವರ ಐಕ್ಯವನ್ನು ಒಬ್ಬ ಅರಿತಿಲ್ಲವೆಂಬುದನ್ನೂ ಅದರಲ್ಲಿ ಶ್ರದ್ಧೆ ಅವನಿಗೆ ಇಲ್ಲವೆಂಬುದನ್ನೂ ತೋರಿಸುತ್ತದೆ!

ಒಂದೇ ನಾಮ–ರೂಪಗಳ ಕಕ್ಷೆಯಲ್ಲಿ ತನ್ನ ಇಷ್ಟ ದೇವತೆಯನ್ನು ಅರ್ಚಿಸುವುದು ಒಬ್ಬನಿಗೆ ನಿರಾಕಾರ ಪರಮ ಪುರುಷನನ್ನು ಆ ಆಕಾರದಲ್ಲಿ ಕಾಣುವ ಮಾರ್ಗವಾಗುತ್ತದೆ.

"ಯಾರು ಯಾವ ರೂಪಕ್ಕೆ ಯಾವ ಹೆಸರನ್ನಿತ್ತು ಅರ್ಚಿಸಿದರೂ ಸರಿಯೆ. ಅದು ಪರಮ ಪುರುಷನನ್ನು ಆ ನಾಮ–ರೂಪಗಳಲ್ಲಿ ಮಾತ್ರ ಕಾಣುವ ಮಾರ್ಗವಾಗುವುದು."

–ಉಳ್ಳದು ನಾರ್ಪದು, ನುಡಿ ೮

ಆತನದು ವಿಷಯ ಭಕ್ತಿಯೇ ಆದರೂ ಅವನ ಪೂಜೆಯ ತೀವ್ರತೆಯ ದೆಸೆಯಿಂದ ಅವನ ಬಯಕೆಗಳ ಪೂರೈಕೆಯ ಜೊತೆಗೆ ಅವನು ತನ್ನ ಇಷ್ಟ ದೇವತೆಯಾದ ಶ್ರೀ ಕೃಷ್ಣನನ್ನು ಕರೆದಾಗಲೆಲ್ಲಾ ಸಶರೀರವಾಗಿ ಕಾಣಬಲ್ಲನು. ಒಬ್ಬನಿಗೆ ಅಷ್ಟು ಪ್ರಾಮಾಣಿಕ ಆಸಕ್ತಿ ಇದ್ದರೆ ಹಾಗೂ ಭಕ್ತಿ ಇದ್ದರೆ ಅವನು ಕಲ್ಲಿನಲ್ಲಿಯೂ ದೇವತಾಪ್ರಜ್ಞೆಯನ್ನು

ಮೂಡಿಸಬಹುದು ಎಂದು ಶ್ರೀ ರಾಮಕೃಷ್ಣ ಪರಮಹಂಸರು ಒಮ್ಮೆ ಹೇಳಿದ್ದುಂಟು. ಆದುದರಿಂದ ಇಲ್ಲಿ ನಾವು ಎಂಟನೆಯ ಪುಟದಲ್ಲಿ "ನಾವು ಹೊರಗೆ ನೋಡುವುದಿಲ್ಲ ಒಳಗೆ" ಎಂದ ಮಾತನ್ನು ನಮ್ಮ ಓದುಗರಿಗೆ ನೆನಪು ಮಾಡಿಕೊಡೋಣ. ಶ್ರೀ ಅರುಣಗಿರಿನಾಥರ ಪ್ರಾರ್ಥನೆಗೆ ಉತ್ತರವಾಗಿ ಸುಬ್ರಹ್ಮಣ್ಯಸ್ವಾಮಿಯು ದೊರೆಸಹಿತವಾಗಿ ಅಲ್ಲಿಯೇ ಎಲ್ಲರ ಎದುರು ಸಾಕಾರವಾಗಿ ಕಂಬವೊಂದರಲ್ಲಿ ತೋರಿದನು. ತನ್ನ ಮೂರನೆಯ ವರ್ಷ ವಯಸ್ಸಿನಲ್ಲಿ ಶ್ರೀ ಜ್ಞಾನ ಸಂಬಂಧರು "ಅಪ್ಪ ಮತ್ತು ಅಮ್ಮ" ಎಂದು ಕರೆದೊಡನೆಯೇ ಪಾರ್ವತೀ ಪರಮೇಶ್ವರರು ಪ್ರತ್ಯಕ್ಷರಾಗಿ ಅವರಿಗೆ ದಿವ್ಯಕ್ಷೀರವನ್ನು ಕೊಟ್ಟರು. ೬೩ ಜನ ಸಂತರಲ್ಲಿ ಒಬ್ಬರಾದ ಸುಂದರ ಮೂರ್ತಿಗಳು ಒಡೆಯನಾದ ಶಿವನನ್ನು ಕರೆದರು – ಚಿನ್ನ, ಅಕ್ಕಿ, ಮನೆ, ಹೆಂಡತಿ ಮುಂತಾದ ಯಾವುದು ಬೇಕಾದಾಗಲೂ–ಆ ಕೂಡಲೇ ಅವರಿಗೆ ಅದು ಸಿಕ್ಕಿ ಬಿಡುತ್ತಿತ್ತು. ತಮ್ಮ ಚಿಕ್ಕ ವಯಸ್ಸಿನಿಂದಲೇ ಪಂಡರಪುರದ ಶ್ರೀ ನಾಮದೇವನು ಒಡೆಯ ವಿಠ್ಠಲನೊಡನೆ ಉಣ್ಣಲು, ಬದುಕಲು ಮತ್ತು ಆಟವಾಡಲು ಬಲ್ಲವನಾಗಿದ್ದನು. ತಾಯಿಯೊಡನಿರುವ ಮಗುವಿನಂತೆ ಮಾತೃಶ್ರೀ ಕಾಲೀದೇವಿಯೊಡನೆ ಶ್ರೀರಾಮಕೃಷ್ಣ ಪರಮಹಂಸರು ಇರಬಲ್ಲವರಾಗಿದ್ದರು. ನಿಮ್ಮ ಮಾನವನಂತೆಯೇ ಇನ್ನೂ ಅನೇಕ ಮಹಾಭಕ್ತರು[೧೯] ದೇವರ ಭಿನ್ನ ಬಿನ್ನ ನಾಮರೂಪಗಳಲ್ಲಿ ಆತನೊಡನೆ ಸಾಕ್ಷಾತ್ತಾಗಿ ಸಹವಾಸದಲ್ಲಿದ್ದು ಆ ಸುಖವನ್ನನುಭವಿಸುವುದರ ಮೂಲಕ ಒಬ್ಬನು ತನ್ನ ಭಕ್ತಿಯ ಮೂಲಕ ದೇವರನ್ನು ಪ್ರತ್ಯಕ್ಷವಾಗಿ ನೋಡಬಹುದು ಎಂಬುದನ್ನು ಸಿದ್ಧಮಾಡಿ ತೋರಿಸಿದ್ದಾರೆ. ಪಶ್ಚಿಮ ದೇಶದಲ್ಲಿ ಲಿಸ್ಯುಕ್ಸಿನ ಸೇಂಟ್‌ಥೆರೇಸೆಯು – ಒಬ್ಬ ರೋಮನ್ ಕ್ಯಾಥೊಲಿಕ್ ಸನ್ಯಾಸಿನಿಯು–ಮಗು ಯೇಸುವಿನ ಸತತ ಸಹವಾಸದಲ್ಲಿ ಇರುತ್ತಿದ್ದಳು.

ಅವನ ಪ್ರಿಯಕೃಷ್ಣನು ಅವನು ಕರೆದಾಗಲೆಲ್ಲಾ ಬರುತ್ತಿದ್ದುದರಿಂದ ಮಾನವನು ಎಲ್ಲ ಆಸೆಗಳೂ ಈಡೇರುವಂತೆ ಮಾಡಿಕೊಳ್ಳುವುದರಲ್ಲಿ ಸಮರ್ಥನಾದನು. ಪ್ರತಿದಿನವೂ ನಮ್ಮೆದುರು ಆ ಯಃಕಶ್ಚಿತ್ ಎನ್ನಿಸಿದ ಅಶಕ್ತ ಅಹಂಕಾರವುಳ್ಳ ಮಾನವ ತನ್ನಷ್ಟೇ ಕ್ಷುದ್ರನೂ ಅಶಕ್ತನೂ ಆದ ಇನ್ನೊಬ್ಬನಿಗೆ ಸಹಾಯ ಮಾಡಲು ಶಕ್ತನಾಗುವುದನ್ನು ನಾವು ಕಂಡ ಮೇಲೆ, ಸರ್ವಶಕ್ತನಾದ ಭಗವಂತನು ಅಂಥ ಮಾನವನಿಗೆ ಸಹಾಯ ನೀಡುವುದು ಅಸಾಧ್ಯವೇ? ಆಶ್ಚರ್ಯವೇ? ೨೦ನೆಯ ಪುಟದಲ್ಲಿ ನಾವು ಆಗಲೆ ಹೇಳಿದ ಹಾಗೆ, "ನಮ್ಮ ಬ್ರಹ್ಮಾತ್ಮವನ್ನು ದೇವರೆಂದು ನಾವು ನೋಡುತ್ತೇವೆ, ಜಗತ್ತು–ಜೀವಾತ್ಮಗಳೆಂದೂ ನೋಡುತ್ತೇವೆ. ಹಾಗೆ ನಾವು ನೋಡುವುದು ನಮ್ಮ ಮನಸ್ಸಿನ ನಿರ್ಮಾಪಕ ಶಕ್ತಿಯ ಮೂಲಕ ಮಾತ್ರ." ತಾನೊಬ್ಬ ವೈಯಕ್ತಿಕ ಜೀವ ಎಂದು ಒಬ್ಬ ತಿಳಿದಾಕ್ಷಣ – ತಾನು ದೇವರಿಂದ ಭಿನ್ನ ಎಂಬ ವಿಚಾರ ಅವನ ತಲೆಯೊಳಗೆ ಮೂಡಿದ ಕೂಡಲೇ ಆ ದೇವರ ಅನುಗ್ರಾಹಕ ಹಸ್ತವು ಸಹಾಯ ನೀಡಲೆಂದು ಚಾಚಿ, ಅನೇಕಾನೇಕ ಮಾರ್ಗಗಳಿಂದ ಅವನನ್ನು ಸರ್ವೋಚ್ಚ ಜ್ಞಾನವಾದ ಐಕ್ಯಭಾವದತ್ತ ಹಿಂದೆಳೆದುಕೊಳ್ಳುತ್ತದೆ. ಹೀಗೆ ಮಾನವನು ತನ್ನ ಇಷ್ಟ ದೇವತೆಯಾದ ಕೃಷ್ಣನನ್ನು ನೋಡಲೂ ಸಂಪರ್ಕ ಹೊಂದಲೂ ಸಮರ್ಥನಾಗುತ್ತಾನೆ. ತನ್ನ ಇಷ್ಟ ದೇವತೆಯಾದ ಕೃಷ್ಣನನ್ನು ಅವನು ಪದೇ ಪದೇ ನೋಡಲು ಶಕ್ತನಾದರೂ

---

೧೯. ದೇವರ ಬೇರೆ ಬೇರೆ ನಾಮರೂಪಗಳಲ್ಲಿ ಅವನನ್ನು ಒಬ್ಬನು ನೋಡಬಹುದು ಎಂಬುದನ್ನು ಸಿದ್ಧಮಾಡಲೆಂದೇ ಅಂಥ ಮಹಾತ್ಮರನ್ನು ಇಲ್ಲಿ ಹೆಸರಿಸಲಾಗಿದೆ. ಓದುಗ ಆ ಮಹಾತ್ಮರು ನಮ್ಮ ಶಾಲೆಯ ೩ನೆಯ ವರ್ಗದ (ಅ) ವಿಭಾಗಕ್ಕೆ ಸೇರಿದವರೆಂಬ ತಪ್ಪು ತಿಳುವಳಿಕೆಯನ್ನು ತಾಳದಿರಲಿ.

ಆ ಕೃಷ್ಣನು ಬುದ್ಧಿಪೂರ್ವಕವಾಗಿ ತನ್ನ ಭಕ್ತನಾದ ಮಾನವನ ಕೆಲ ಬಯಕೆಗಳನ್ನು ಈಡೇರಿಸುವುದಿಲ್ಲ. ಏಕೆಂದರೆ, ಮಾನವನು ತನಗೆ ಯಾವುದು ಒಳಿತು? ಯಾವುದು ಕೆಡುಕು? ಎಂಬುದನ್ನು ವಿವೇಚಿಸಿ ಪ್ರತ್ಯೇಕಿಸಲಾರದವನಾಗಿರುತ್ತಾನೆ. "ನಾನು ಬಯಸಿದ್ದನ್ನೆಲ್ಲಾ ಕೊಡಲು ನನ್ನ ಇಷ್ಟದೇವತೆಯಾದ ಕೃಷ್ಣನಿದ್ದಾನೆ" ಎಂದು ತನ್ನ ಅಹಂಕಾರವನ್ನು ವಿಸ್ತರಿಸಲು ಸಹಾಯಕವಾಗುವಂತೆ ಮನುಷ್ಯನು ಗರ್ವದಿಂದ ಆಲೋಚಿಸಲು ಬಿಡುವುದಿಲ್ಲ. ಈ ಕಾರಣದಿಂದಲೇ ತನ್ನ ದಿವ್ಯಲೀಲೆಯಲ್ಲಿ ಪರಮಾತ್ಮನು ತನ್ನ ಭಕ್ತನಾದಂಥ ಮಾನವನ ಕೆಲವು ಬಯಕೆಗಳನ್ನು ಪೂರೈಸಲು ಒಲ್ಲನು ಅಥವಾ ಅವುಗಳನ್ನು ಅನುಸರಿಸಿ ತೊಂದರೆಗಳು ಬರುವ ರೀತಿಯಿಂದ ಪೂರೈಸುತ್ತಾನೆ. ನಾವು ಮೇಲೆ ಹೇಳಿದ ಸಂತರ ಜೀವನದಲ್ಲೂ ಅಂಥ ಘಟನೆಗಳು ನಡೆದಿದ್ದವು ಎಂಬುದನ್ನು ನಾವು ಮರೆಯಬಾರದು.

ಸಂಗಿಲಿ ನಾಚಿಯಾರಳನ್ನು ಮದುವೆಯಾಗಲೆಂದು ಸಂತ ಸುಂದರ ಮೂರ್ತಿಗಳು ಒಡೆಯ ಶಿವನನ್ನು ಒಂದು ದಿನದ ಮಟ್ಟಿಗೆ ದೇವಸ್ಥಾನವನ್ನು ಬಿಟ್ಟು ಒಂದು ಮರದ ಕೆಳಗೆ ಉಳಿಯಬೇಕೆಂದು ಕೇಳಿಕೊಂಡರು. ಒಡೆಯ ಶಿವ ಅವರ ಬೇಡಿಕೆಯನ್ನು ಒಪ್ಪಿಕೊಂಡದ್ದರ ಫಲವಾಗಿ ಅನಂತರ ಆ ಭಕ್ತರಿಗೆ ಎರಡು ಕಣ್ಣುಗಳೂ ಕುರುಡಾದವು. ಸಂತ ಅಪ್ಪಾರರ ಸೇವಾಭಾವವನ್ನು ಪುರಸ್ಕರಿಸಲು –ಶ್ರೀ ಜ್ಞಾನ ಸಂಬಂಧರಲ್ಲಿ ಅದು (ಸೇವಾಭಾವ) ಇರಲಿಲ್ಲ–ಒಂದೇ ಬೆಲೆಯ ಎರಡು ಬಂಗಾರದ ನಾಣ್ಯಗಳನ್ನು ಇಬ್ಬರಿಗೂ ಒಡೆಯನಾದ ಶಿವನು ಕೊಟ್ಟನು. ಆದರೆ ಕಾಲಾಂತರದಲ್ಲಿ ಆ ನಾಣ್ಯಗಳನ್ನು ಸೊನಗಾರನು ಒರೆಗೆ ಹಚ್ಚಿದಾಗ ಶ್ರಿ ಜ್ಞಾನ ಸಂಬಂಧರ ಕೈಯಿಂದ ಬಂದ ನಾಣ್ಯದ ಬೆಲೆ ಕಡಿಮೆಯಾಗಿತ್ತು. ಸಂತ ಗೋರಾಕುಂಬಾರನಿಂದ ಋಷಿಗಳ ಸಭೆಯಲ್ಲಿ "ಬೇಯದ ಮಣ್ಣು ಮಡಿಕೆ" ಎಂದು ಅಪಹಾಸ್ಯ ಮಾಡಲ್ಪಟ್ಟಾಗ ನಾಮದೇವನು ಬಹಳ ಕುಪಿತನಾದನು ಮತ್ತು ತನ್ನ ಇಷ್ಟದೈವವಾದ ವಿಠ್ಠಲನ ಹತ್ತಿರ ಹೋಗಿ ತನ್ನನ್ನು ಬೆಂಬಲಿಸಬೇಕೆಂದು ಬೇಡಿದನು. ಆಗ ವಿಠ್ಠಲನೂ ಅವನ ನಿಂದಕರ ಜೊತೆಗೆ ಸೇರಿ ನಾಮದೇವನನ್ನು "ಬೇಯದ ಮಣ್ಣು ಮಡಿಕೆ" ಎಂದು ದೃಢಪಡಿಸಿದನು. ಇನ್ನೂ ಎಷ್ಟೋ ಇಂಥ ಉದಾಹರಣೆಗಳಿವೆ.

ಸರಿಯಾದ ಮಾರ್ಗವನ್ನು ಕಳೆದುಕೊಂಡು ಅನೇಕ ಭವಾವಳಿಗಳ ಕಾಲದ ತನಕ, ಮಾನವ ಈಗ ಇರುವ ಮಟ್ಟವನ್ನು ಮುಟ್ಟಿದ ಮೇಲೆ, ತಮ್ಮ ವೇಳೆಯನ್ನು ವ್ಯರ್ಥವಾಗಿ ವ್ಯಯಿಸುತ್ತಾ ಮುಂದಿನ ಪ್ರಗತಿ ಕುಂಠಿತವಾಗುವಂತೆ ಮಾಡಿಕೊಂಡಿರುವ ಜನರು ಬಹಳವಾಗಿ ಇದ್ದಾರೆ. ಅವರು ವೆಗ್ಗಳ ಹೇಳಿಕೊಳ್ಳುತ್ತಾರೆ : "ನೋಡಿರಿ ; ನಾನು ದೇವರನ್ನು ನೋಡಿದ್ದೇನೆ ದೇವಿಯು ಸಶರೀರೆಯಾಗಿ ನನಗೆ ಗೋಚರವಾಗುತ್ತಾಳೆ! ... ನೋಡಿರಿ! ಒಡೆಯ ಸೀತಾರಾಮನು ನನ್ನ ಕರೆಗೆ ಓಗೊಡದೆ ಇರುವುದೇ ಇಲ್ಲ!... ನಿಜವಾಗಿ, ನಾನು ಕರೆದಾಗಲೆಲ್ಲಾ, ಒಡೆಯ ಸುಬ್ರಹ್ಮಣ್ಯನು ಆಗಿಂದಾಗ ಬಂದು ನನ್ನ ಅಗತ್ಯಗಳನ್ನು ಪೂರೈಸಿಕೊಡುತ್ತಾನೆ. ನನ್ನ ಇಷ್ಟ ದೇವತೆಯ ಸಹಾಯದಿಂದ ನಾನು ಯಾರಿಗೆ ಏನನ್ನು ಬೇಕಾದರೂ ಮಾಡಿಕೊಟ್ಟೇನು ಎಂದು ಆಶ್ವಾಸನ ನೀಡುತ್ತೇನೆ"– ಎಂದು. ಹೀಗೆ ಅವರು ತಮ್ಮ ಸುತ್ತಲೂ ಒಂದು ಜನರ ಗುಂಪನ್ನು ಸಂಘಟಿಸಿ ಪವಿತ್ರ ವಿಭೂತಿಯನ್ನೂ ಕುಂಕುಮವನ್ನೂ ವಿತರಣ ಮಾಡುತ್ತಾರೆ. ಇದು ಕೇವಲ ಹುಚ್ಚುತನ.

"ನನಗೆ ಅನುಗ್ರಾಹಕನಾದ ದೇವರು ಇತರರಿಗೂ ಯಾವಾಗಲೂ ಅನುಗ್ರಾಹಕನಾಗಿದ್ದಾನೆ ; ನನಗೆ ಸಹಾಯ ಮಾಡುತ್ತಿರುವ ದೇವರು ಇತರರಿಗೂ

ಸಮಾನವಾಗಿ ಸಹಾಯ ಮಾಡುತ್ತಾನೆ" ಎಂದು ತಿಳಿದುಕೊಳ್ಳುವಷ್ಟರ ಮಟ್ಟಿಗಾದರೂ ಒಬ್ಬನ ಅಹಂಕಾರವು ಕಡಿಮೆಯಾಗಿದ್ದರೆ ಒಬ್ಬನ ಜೀವನದಲ್ಲಿ ಈ ಬಗೆಯ ಅಧಃಪತನ ಉಂಟಾಗುತ್ತಿರಲಿಲ್ಲ. ಕಡಿಮೆಯಾಗಲು ಒಲ್ಲದ ಮತ್ತು ಕುಪ್ಪಳಿಸಿ ಮೇಲಕ್ಕೆ ಏರಲು ಬಯಸುವ ಅಹಂಕಾರ ಮಾತ್ರ ಸಿದ್ಧಿಗಳ ಮೇಲಿನ ಗಾಢ ಮೋಹದಲ್ಲಿ ಸಿಕ್ಕಿಕೊಳ್ಳುತ್ತದೆ ಮತ್ತು ಸ್ತುತಿರೂಪದ ಕುಯುಕ್ತಿ ಸಂಪನ್ನ ರಾಜವೇಶ್ಯೆಯ ಗುಲಾಮನಾಗುತ್ತದೆ; ಅದರಿಂದ ಅದು ಮಾನವ ಜೀವಿತದ ಸರಿಯಾದ ಉದ್ದೇಶವನ್ನೆ ಕಳೆದುಕೊಳ್ಳುತ್ತದೆ.

"ಎಲ್ಲ ಲೋಕಗಳನ್ನೂ ಒಂದು ಹುಲ್ಲುಕಡ್ಡಿಗೆ ಸಮಾನವೆಂದು ಪರಿತ್ಯಜಿಸಿದರೂ ಎಲ್ಲ ವೇದಗಳೂ ಅವರ ಬೆರಳ ತುದಿಗಳಲ್ಲಿದ್ದರೂ ಯಾರು ಸ್ತುತಿರೂಪದ ಕುಯುಕ್ತಿ ಸಂಪನ್ನ ರಾಜವೇಶ್ಯೆಯ ಕೈಯಲ್ಲಿ ಸಿಕ್ಕಿರುವರೋ ಅವರಿಗೆ ಆ ವೇಶ್ಯೆಯ ಗುಲಾಮರಾಗದೆ ಸ್ವತಂತ್ರರಾಗಿರುವುದು ನಿಜವಾಗಿಯೂ ಬಹಳ ಕಷ್ಟ.

"ಉಳ್ಳದು ನಾರ್ಪ.ದು"ವಿನ ಪುರವಣಿಯ ೩೭ನೆಯ ನುಡಿಯಲ್ಲಿ ಶ್ರೀ ರಮಣರು ಹೀಗೆ ಎಚ್ಚರಿಕೆ ಕೊಟ್ಟಿದ್ದಾರೆ.

ದೇವರನ್ನು ಸಾಕ್ಷಾತ್ತಾಗಿ ಕಾಣುವವನಿದ್ದಾನೆ ಎಂಬುದು ತಿಳಿದ ಕೂಡಲೇ ಇತರರು ಸಂದೇಹ ಪಡದೆ –ದೈವಭಕ್ತಿಯನ್ನು ಕೂಡಾ ಅವನು ಸಾಧಿಸಿಕೊಂಡಿರದಿದ್ದರೂ – ಅವನನ್ನು ದೈವ ಸಾಕ್ಷಾತ್ಕಾರ ಮಾಡಿಕೊಂಡವನೆಂದು ನಂಬುತ್ತಾರೆ ; ಅಂದರೆ ಮೂರನೆಯ ದರ್ಜೆಯ (ಬ) ವಿಭಾಗಕ್ಕೆ ಇನ್ನೂ ಸೇರಿಸಲ್ಪಡದ ಮತ್ತು ಪ್ರಾಪಂಚಿಕ ವಸ್ತುಗಳ ಬಗೆಗೆ ಮಾತ್ರ ಪ್ರೀತಿ ಇರುವ, ಹಾಗೂ ಹೆಸರು–ಕೀರ್ತಿಗಳಿಗಾಗಿ ಆಸೆಪಡುವ ವಿಷಯಭಕ್ತಿ ಸಂಪನ್ನನು : ಅರ್ಥಾತ್ ಅವನು ಇನ್ನೂ ಮೂರನೆಯ ವರ್ಗದ (ಅ) ವಿಭಾಗದಲ್ಲೋ ಇರುವಂಥವನು. ಇಂಥವರೇಕೆ ಹೀಗಿರಬಾರದು ! ಏಕೆಂದರೆ, ಇವರೂ ಎರಡನೆಯ ತರಗತಿಯ ವಿದ್ಯಾರ್ಥಿಯಂತೆಯೇ ಪ್ರಾಪಂಚಿಕ ವಸ್ತುಗಳು ಬೇಕೆನ್ನುತ್ತಾರೆ ಮತ್ತು ದೇವರ ಸಹಾಯ ಇರಲಿ ಎನ್ನುತ್ತಾರೆ ! ಅಂಥ ಮನುಷ್ಯನ ಸುತ್ತಲೂ ಮುತ್ತುವ ಜನರಲ್ಲಿ ಅನೇಕರು ದೊಡ್ಡ ವಿದ್ವಾಂಸರಾಗಿರಬಹುದು, ವಿಶ್ವವಿದ್ಯಾಲಯದ ಪದವೀಧರರಾಗಿರಬಹುದು, ಸಮಾಜದಲ್ಲಿ ಪ್ರತಿಷ್ಠಿತರಾಗಿರಬಹುದು ಅಥವಾ ಬಹಳ ಶ್ರೀಮಂತರಾಗಿರಬಹುದು! ಕುರುಡನು ಕುರುಡರನ್ನು ಕರೆದುಕೊಂಡು ಹೋದ ಹಾಗೆ ಅವನು ಅವರನ್ನು ಕರೆದುಕೊಂಡು ಹೋಗುತ್ತಾನೆ.!

ನಾವೀಗ ತನ್ನ ಇಷ್ಟದೈವವಾದ ಶ್ರೀಕೃಷ್ಣನ ಪವಿತ್ರ ಸಹವಾಸದಲ್ಲಿರುವ ನಮ್ಮ ಮಾನವನನ್ನು ನೋಡೋಣ. ಅವನಿಗಿನ್ನೂ ಪ್ರಾಪಂಚಿಕ ವಸ್ತುಗಳು ಬೇಕೆನಿಸುತ್ತಿವೆ; ಆದುದರಿಂದ ಅವನದು ಇನ್ನೂ ವಿಷಯ ಭಕ್ತಿಯಾಗಿಯೇ ಇದೆ ಮತ್ತು ಅವನ ಇಷ್ಟ ದೇವತೆಯು ಇನ್ನೂ ಸಾಧನವಾಗಿಯೇ ಇದ್ದಾನೆ. ಈ ಪ್ರಕಾರ ಅನೇಕ ಜನ್ಮಗಳು ಉರುಳಿಯಾವು. ಆದರೂ ಸರ್ವೋಚ್ಚ ಸತ್ ಪದಾರ್ಥ ಸ್ವರೂಪನೇ ಅನುಗ್ರಹಪೂರ್ವಕವಾಗಿ ಇಷ್ಟು ದೈವಸ್ವರೂಪದಲ್ಲಿ ಅವನ ಸಹವಾಸಿಯಾಗಿರುವಾಗ ಈ ಸಹವಾಸವು ಬಹಳ ಬೆಲೆಬಾಳುವ ಸತ್‌ಸಂಗ[೨೦]ವಾಗುವುದು.

---

೨೦ ಬರಿ ಒಳ್ಳೆಯವರೆಂದು ಗಣಿಸಲಾದ ಜನರ ಕೂಟಕ್ಕೆ ಸತ್ಸಂಗವೆನ್ನಲಾಗುವುದಿಲ್ಲ. ಶ್ರೀ ಭಗವಾನ್ ರಮಣರು ಹೇಳುತ್ತಿದ್ದರು, "ಸತ್‌ಸಂಗವೆಂದರೆ ಸತ್ಯ ಸ್ವರೂಪದ ಸತ್ ಪದಾರ್ಥದ ಅಥವಾ ನಿಜವಸ್ತುವಿನ ಸಹವಾಸ. ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವರ ಸಹವಾಸವೆಂದೂ ಅದಕ್ಕೆ ಅರ್ಥವಾಗುತ್ತದೆ. ಸತ್ಯ = ಸತ್."

"ಸತ್ ಪದಾರ್ಥದೊಡನೆ ಸೇರಿಕೊಳ್ಳುವುದರಿಂದ – ಸತ್ ಎಂದರೆ ಪರಮಸತ್ಯವಾದುದರಿಂದ – ವಿಷಯ ಸಂಗವು (ಪ್ರಾಪಂಚಿಕ ವಸ್ತುಗಳ ಮೇಲಿನ ಆಸಕ್ತಿಯು) ಹೊರಟು ಹೋಗುವುದು...."

–ಉಳ್ಳದು ನಾರ್ಪ.ದು"ವಿನ ಪುರವಣಿಯ ನುಡಿ ೧

ನಮ್ಮನ್ನು ಸಂರಕ್ಷಿಸಿ ಕರೆದೊಯ್ಯಲು ಸತ್ಸಂಗಕ್ಕಿಂತ ಹೆಚ್ಚು ಉತ್ತಮವಾದ ತೀವ್ರಸಾಧನ ಯಾವುದಾದರೂ ಇದೆಯೇ? ಹೇಗೆ ಎಂದು ತನಗೆ ಗೊತ್ತಿಲ್ಲದಿದ್ದರೂ ಮಾನವನು ತನ್ನ ಇಷ್ಟ ದೇವತೆಯಾದ ಶ್ರೀ ಕೃಷ್ಣನ ಹತ್ತಿರವೇ ಸತತವಾಗಿ ಅವನ ದಿವ್ಯ ಸಹವಾಸದಲ್ಲಿದ್ದು ಕ್ರಮೇಣ ತನ್ನ ಮನಸ್ಸಿನ ಅಶುದ್ಧಿಯನ್ನು ಕಳೆದುಕೊಂಡು ಸ್ವಚ್ಛವಾಗುತ್ತಿದ್ದಾನೆ. ಇಲ್ಲಿಯವರೆಗೂ ಆ ವೇದಗಳೇ ಅವನಿಗೆ ಗುರುವಾಗಿ ನಿಂತದ್ದು; ಅವೇ ಅವನ ಮುಂದೇ ಇಷ್ಟ ದೇವತೆಯಾಗಿ ನಿಂತಿರುವುದು – ಅವುಗಳೇ ಕೆಲವು ವೇಳೆ ಅವನ ಇಷ್ಟಗಳನ್ನು ಪೂರೈಸಿಯೂ ಕೆಲವು ವೇಳೆ ಪೂರೈಸದೆಯೂ ಅವನನ್ನು ಅವನ ಜನ್ಮಾಂತರಗಳ ಮೂಲಕ ಪರಿಪಕ್ವಗೊಳಿಸುತ್ತಿರುವಂಥವು. ಅವನ ಮನದಲ್ಲೇ ಉಂಟಾಗುತ್ತಿರುವ ಬದಲಾವಣೆಯಿಂದ ಅವನ ಬೆಳೆಯುತ್ತಿರುವ ಪರಿಪಕ್ವತೆಯನ್ನು ನಾವು ತಿಳಿದುಕೊಳ್ಳಬಹುದು.

ಅವನು ವಿಚಾರ ಮಾಡುತ್ತಾನೆ : "ಏನಾಶ್ಚರ್ಯ ! ನಾನು ಕರೆದಾಗಲೆಲ್ಲಾ ನನ್ನ ಒಡೆಯನಾದ ಕೃಷ್ಣ ಪರಮಾತ್ಮನು ನನ್ನೆದುರು ಅನುಗ್ರಹ ಬುದ್ಧಿಯಿಂದ ತಗ್ಗಿನಡೆದುಕೊಳ್ಳುತ್ತಾನೆ ; ನಾನು ಕೇಳಿದ್ದನ್ನೆಲ್ಲಾ ಕೊಡುತ್ತಾನೆ. ನನ್ನ ಮಾತಾಪಿತೃಗಳೂ ಅಷ್ಟು ಪ್ರೀತಿ–ಕರುಣೆಗಳನ್ನು ತೋರಿಸಿದ್ದಿಲ್ಲ. ಇನ್ನಾರಾದರೂ ನನ್ನನ್ನಿಷ್ಟು ಪ್ರೀತಿಸುವವರಿದ್ದಾರೆಯೇ? ಅದಕ್ಕೆ ಪ್ರತಿಯಾಗಿ ನಾನು ಆ ಪರಮಾತ್ಮನ ಬಗೆಗೆ ಕೃತಜ್ಞತೆಯನ್ನು ಹೇಗೆ ವ್ಯಕ್ತಪಡಿಸಲಿ? ನನ್ನಿಂದ ಅವನಿಗೆ ಏನಾಗಬೇಕಾಗಿದೆ? ಏನೂ ಇಲ್ಲ! ಅವನು ಒತ್ತಾಯವಿಲ್ಲದೆ ಅಥವ ಋಣಿತ್ವದ ನಿರೀಕ್ಷೆಯಿಲ್ಲದೆ, (ಪ್ರತಿಫಲ) ಪಡೆಯುವ ಆಸೆಯಿಲ್ಲದೆ ಮತ್ತು ವಿಶಿಷ್ಟವಾದ ಯಾವ ಕಾರಣವೂ ಇಲ್ಲದೆ ನನ್ನನ್ನು ಅಷ್ಟು ಹೆಚ್ಚು ಪ್ರೀತಿಸುತ್ತಾನೆ ; ನಾನವನನ್ನು ಎಷ್ಟು ಸ್ವಲ್ಪ ಪ್ರೀತಿಸುತ್ತೇನೆ– ಏನಿದು? ಒಡೆಯ ಕೃಷ್ಣನು ನನ್ನ ಮೇಲಿಟ್ಟಿರುವ ವಾತ್ಸಲ್ಯವು ಅಷ್ಟು ಹೆಚ್ಚಿನದು! ಆದರೆ ನನ್ನಲ್ಲಿ ಪ್ರಾಪಂಚಿಕ ವಸ್ತುಗಳ ಬಗೆಗೆ ಅದೆಷ್ಟು ಮೋಹ ! ಇದು ಕೃತಜ್ಞತೆಯೇ? ನಾಚಿಕೆ ನನಗೆ ! ನಿಜವಾಗಿಯೂ ಆತನು ನನಗೆ ತೋರುವ ವಾತ್ಸಲ್ಯದ ಸಾವಿರದ ಒಂದು ಅಂಶದಷ್ಟೂ ಆಗದು ನಾನವನಿಗೆ ತೋರುತ್ತಾ ಬಂದ ಭಕ್ತಿ. ಅನೇಕ ವಸ್ತುಗಳಿಗಾಗಿ ಬೇಡಿ ಅವನಿಗೆ ತೊಂದರೆ ಕೊಡುತ್ತಿದ್ದೇನೆ. ನನ್ನ ಇಷ್ಟ ದೇವತೆಗೆ ತೋರುವ ಭಕ್ತಿ ಇಷ್ಟೇ ಏನು? ಅಯ್ಯೋ ! ನಾಚಿಕೆ ! ಇದು ವಿಷಯಪ್ರೇಮ ; ದೇವರಿಗಾಗಿ ಸಲ್ಲಿಸುವ ಭಕ್ತಿಯಲ್ಲ ! ಅವನ ಅನುಗ್ರಹವಿಲ್ಲದೆ ಜೀವಾತ್ಮನಾದ ನಾನು ಉಸಿರನ್ನೂ ಆಡಿಸಲಾರೆ. ಈ ಐಶ್ವರ್ಯವು ಅವನು ನನಗೆ ಕೊಟ್ಟದ್ದು ; ಅವನು ಕೊಟ್ಟ ಆರೋಗ್ಯವನ್ನೇ ನಾನು ಅನುಭೋಗಿಸುತ್ತಿರುವುದು. ನನ್ನ ಬುದ್ಧಿಮತ್ತೆ ಕೂಡಾ ಅವನ ಅನುಗ್ರಹದ ಫಲವೇ! ಈ ಎಲ್ಲವುಗಳ ದೆಸೆಯಿಂದಲೆ ನಾನವನನ್ನು ಆರಾಧಿಸುತ್ತಲಿದ್ದೇನೆ. ಆದರೂ "ನಾನೀ ಪೂಜೆಯನ್ನು ಮಾಡಿದ್ದೇನೆ, ಅದರ ಫಲವನ್ನು ನನಗೆ ಕೊಡಬೇಕು!" "ಇದು ಅನ್ಯಾಯದ ವ್ಯಾಪಾರವಲ್ಲವೇ? ನಾನೆಷ್ಟು ಕೀಳುದರ್ಜೆಯವನು!".

"ನಾನು ಆ ಅವಶ್ಯಕತೆಗಳನ್ನು ತಿಳಿಯುವ ಮೊದಲೇ ಆತನು ಅವುಗಳ ಪೂರೈಕೆಗಾಗಿ ಸಿದ್ಧತೆ ಮಾಡುತ್ತಿದ್ದನು – ಅವನಿಗೆ ನನ್ನ ಭವಿಷ್ಯತ್ಕಾಲೀನ ಅವಶ್ಯಕತೆಗಳೂ ಗೊತ್ತು.

ಹಾಗಿದ್ದರೆ, ಇದರರ್ಥವೇನೆಂದರೆ – ಅವುಗಳಿಗಾಗಿ ನಾನು ಪ್ರಾರ್ಥಿಸಲು ಉದ್ವಿಗ್ನನಾಗುವ ಮೊದಲೇ ಆತನು ನನ್ನತ್ತ ಉದ್ವಿಗ್ನನೂ ಅನುಗ್ರಾಹಕನೂ ಆಗಿರುತ್ತಾನೆ. ಅವನು ಸರ್ವಜ್ಞನಾದುದರಿಂದ ನನಗೇನು ಬೇಕೆಂಬುದನ್ನು ಅವನು ಬಲ್ಲ ಮತ್ತು ಯಾವುದು ನನಗೆ ಯಾವಾಗ ಬೇಕಾಗುತ್ತದೆ ಎಂಬುದವನಿಗೆ ಗೊತ್ತು – ಅಲ್ಲದೆ, ಅವನು ಸರ್ವಶಕ್ತನಾದುದರಿಂದ ಆ ನನ್ನ ಎಲ್ಲ ಅವಶ್ಯಕತೆಗಳನ್ನೂ ಪೂರೈಸುವನು. ಅವನು ಪ್ರೇಮ ಸ್ವರೂಪನೇ ಆಗಿರುವುದರಿಂದ ಆತ ಹೀಗೆ ನನ್ನ ಅಗತ್ಯಗಳೆಲ್ಲವನ್ನೂ ಪೂರೈಸುವನು ! ಅಂದ ಮೇಲೆ ನಾನೇನನ್ನು ಕೇಳಬೇಕು ಮತ್ತು ಏತಕ್ಕೆ ಕೇಳಬೇಕು? ನನ್ನ ಅಗತ್ಯಗಳನ್ನವನಿಗೆ ತಿಳಿಸುವ ಮೂಲಕ ನಾನವನನ್ನು ಸರ್ವಜ್ಞತ್ವದಿಂದ ಅಜ್ಞತ್ವಕ್ಕೆ ಇಳಿಸುತ್ತೇನೆ. ಪರಿಹಾರವನ್ನು ದಯಪಾಲಿಸೆಂದು ನನ್ನ ದುಃಖ–ದುಮ್ಮಾನಗಳನ್ನು ಅವನೆದುರು ದೂರಿಕೊಂಡು ಆ ಸರ್ವಶಕ್ತನನ್ನು ಅಶಕ್ತತೆಗೆ ಇಳಿಸುತ್ತೇನೆ ; ಮತ್ತು ಅದರ ಫಲವನ್ನು ಬೇಡುವ ಮೂಲಕ ಪ್ರೇಮ ಸ್ವರೂಪನಾದ ಅವನ ವಾತ್ಸಲ್ಯವನ್ನು ಕೊಂಡುಕೊಳ್ಳಲು ನನ್ನ ಪೂಜೆಯನ್ನು ನಗದು ಹಣವನ್ನಾಗಿ ಬಳಸಿಕೊಳ್ಳುತ್ತೇನೆ! ನಾನವನಿಗೆ ಮಾಡುವುದು ಮೂರುಪಟ್ಟು ಅವಮಾನವನ್ನು. ನನ್ನ ಕೃತಜ್ಞತೆಯು ಈ ಬಗೆಯದು ! 'ಇದು ದೈವಭಕ್ತಿಯೇ? ನಾನು ನರಕಕ್ಕೆ ಹೋಗಿ ಬೀಳಲಿ! ನಾನಿನ್ನು ಮುಂದೆ ಅವನ ಹತ್ತಿರ ಏನನ್ನೂ ಬೇಡುವುದಿಲ್ಲ. ನಾನೀಗ ಅವನೇ ನನಗೆ ಬೇಕೆಂದು ಮಾತ್ರ ಬೇಡುತ್ತೇನೆ. ಅವನ ಅನುಗ್ರಾಹಕ ಹಸ್ತಗಳೇ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿವೆ ಮತ್ತು ನನ್ನನ್ನು ಮೇಲಕ್ಕೆ ಎತ್ತುತ್ತಿವೆ, ಈ ದಿನದಿಂದ.

ಹೀಗೆ ಅವನು ದೇವಾಲಯಕ್ಕೆ ಹೋಗುತ್ತಾನೆ ಮತ್ತು ತನ್ನ ಇಷ್ಟದೇವತೆಯಾದ ಶ್ರೀ ಕೃಷ್ಣನನ್ನು ಆಮಂತ್ರಿಸುತ್ತಾನೆ.

ಒಂದು ಚಿಕ್ಕ ಮಗುವು ತನ್ನ ಪುಟ್ಟ ಕೈಯಿಂದ ತನಗೆ ಕೊಟ್ಟ ತಿನಿಸನ್ನು ತೆಗೆದುಕೊಂಡು ತನ್ನ ತಾಯಿಗೆ ಅದನ್ನು ತಿನ್ನಿಸಲು ಪ್ರಯತ್ನಿಸುತ್ತದೆ. ತನ್ನ ತಾಯಿಯ ಮೇಲಿನ ಪ್ರೀತಿಯಿಂದ ಅದು ಹೀಗೆ ಮಾಡುತ್ತದೆ. ಈವರೆಗೂ ಮಾನವನ ಉಪಾಸನಾ ರೀತಿಯು ಮಗು ತನ್ನ ತಾಯಿಗೆ ತಿಂಡಿಯನ್ನು ತಿನ್ನಿಸುವಂತಿದ್ದರೂ ಅದನ್ನು ಅವನು ತನ್ನ ಇಷ್ಟದೇವತೆಯ ಮೇಲಿನ ಭಕ್ತಿಯಿಂದ ಮಾಡುತ್ತಿರಲಿಲ್ಲ – ಪ್ರಾಪಂಚಿಕ ವಿಷಯಗಳ ಮೇಲಿನ ಮೋಹದಿಂದ ಮಾಡುತ್ತಿದ್ದನು. ಅಂದಿನಿಂದ ಇಂದಿನವರೆಗೂ ಅವನು ಸಲ್ಲಿಸುತ್ತ ಬಂದ ಪೂಜೆಯು ಬೆಲ್ಲದಿಂದ ಮಾಡಿದ ಗಣೇಶ ಮೂರ್ತಿಗೆ[೨೧] ಅವನ (ಗಣೇಶನ) ಹೆಬ್ಬೆರಳನ್ನೇ ನೈವೇದ್ಯ

೨೧ ಶ್ರೀ ಭಗವಾನ್ ರಮಣರು ಹೇಳಿದ ಬೆಲ್ಲದ ಗಣೇಶನ ಕಥೆ :

ಒಬ್ಬ ಬಡ ದಾರಿಹೋಕನು ಗಣೇಶನ ಆರಾಧಕನಾಗಿದ್ದನು. ಅವನು ದಾರಿಯಲ್ಲಿ ಗಣೇಶ ದೇವಸ್ಥಾನವೊಂದನ್ನೂ ಕಾಣದೆ, ಮಧ್ಯಾಹ್ನದ ಊಟದ ವೇಳೆಯೊಳಗೆ ತನ್ನ ದೈನಿಕ ಗಣೇಶ ಪೂಜೆಯನ್ನು ಮಾಡಲಾರದೆ ತನ್ನಲ್ಲಿದ್ದ ಸ್ವಲ್ಪ ಬೆಲ್ಲದಿಂದ ಒಂದು ಗಣೇಶ ಮೂರ್ತಿಯನ್ನು ಮಾಡಲು ನಿರ್ಧರಿಸಿದನು. ಹಾಗೆ ಮಾಡುತ್ತ ಹೊದಾಗ ತನ್ನಲ್ಲಿ ನೈವೇದ್ಯಕ್ಕೆ ಏನೂ ಇಲ್ಲವೆಂಬುದನ್ನರಿತು ಗೊಂದಲಕ್ಕೀಡಾದನು. ಆದ್ದರಿಂದ ಆ ಸರಳ ಮನಸ್ಸಿನ ಹಾದಿಹೋಕನು ಮೂರ್ತಿಯ ಹೆಬ್ಬೆರಳನ್ನು ಚಿವುಟಿ ಅದನ್ನು ನೈವೇದ್ಯ ಮಾಡಿದನು. ಅವನು ಗಣೇಶನಿಗೆ ಹಾಗೆ ಪೂಜೆ ಮಾಡಿ ತೃಪ್ತನಾದನು. ಅವನು ಮಾಡಿದ ನೈವೇದ್ಯದ ಅರ್ಥವೇನು? ಗಣೇಶನನ್ನು ಗಣೇಶನಿಗೆ ಕೊಟ್ಟನು! ಅದೇ ರೀತಿಯಿಂದ ನಾವು ದೇವರಿಗೆ ಕೊಡುವುದೆಲ್ಲವೂ ನಮ್ಮ ಆಸ್ತಿಯೂ ಅಲ್ಲ– ಅದು ಆ ದೇವರಿಂದ ಭಿನ್ನವಾದುದೂ ಅಲ್ಲ.

ಮಾಡುವ ಕೆಲಸಕ್ಕಿಂತ ಹೆಚ್ಚು ಉತ್ತಮವಾಗಿರಲಿಲ್ಲ! ತನ್ನ ಮಾತಾಪಿತೃಗಳ ವಾತ್ಸಲ್ಯದ ಸ್ವರೂಪವನ್ನರಿಯದೆ ಮಗು ಅದು ಬೇಕು, ಇದು ಬೇಕು ಎಂದು ಬೇಡುತ್ತದೆ. ಆದರೆ ಅದು ಬೆಳೆದು (ದೊಡ್ಡವನಾದ ಮೇಲೆ) ಕುಮಾರನಾದ ಮೇಲೆ ತನ್ನ ಮಾತಾಪಿತೃಗಳು ತನಗೆ ಅಗತ್ಯವಾದ ಎಲ್ಲವುಗಳನ್ನೂ ಒದಗಿಸುತ್ತಾರೆ ಎಂದೂ ತನ್ನ ಭವಿಷ್ಯತ್ಕಾಲಿನ ಏಳಿಗೆಯ ಬಗೆಗೂ ತಕ್ಕವ್ಯವಸ್ಥೆ ಮಾಡುತ್ತಿದ್ದಾರೆ ಎಂದೂ ತಿಳಿದುಕೊಂಡು ತಾನು ಬಾಲಕನಾಗಿದ್ದಾಗ ಬೇಡುತ್ತಿದ್ದಂತೆ ಅನಂತರ ಏನನ್ನೂ ಬೇಡುವುದಿಲ್ಲ. ಹಾಗೇ ನಮ್ಮ ಮಾನವನ ವಿವೇಕವು ಈಗ ಪಕ್ವವಾಗಿರುವುದರಿಂದ ಅವನ ಸರಿಯಾದ ಜ್ಞಾನವಾದ "ದೇವರು ಸರ್ವಜ್ಞ, ಸರ್ವಶಕ್ತ ಮತ್ತು ಸರ್ವವತ್ಸಲ" ಎಂಬುದರಿಂದಲೇ ಆತನಲ್ಲಿ ಏನಾದರೂ ಬೇಕೆಂದು ಪ್ರಾರ್ಥಿಸೆನು ಎಂಬ ನಿರ್ಧಾರಕ್ಕೆ ಬಂದಿರುವುದು.

ಅವನ ಇಷ್ಟ ದೇವತೆಯಾದ ಶ್ರೀಕೃಷ್ಣನು ಅವನಲ್ಲಿದ್ದ ಪ್ರೇಮ ಭಾವನೆಯನ್ನು (ಭಕ್ತಿಯನ್ನು) ಕ್ರಮೇಣ ಶುದ್ಧೀಕರಿಸುತ್ತಾ ಬಂದು ಅರ್ಥಾತ್ ಅವನಲ್ಲಿದ್ದ ಪ್ರಾಣಿ ಸಹಜವಾದ ಕಾಮವನ್ನು (ಪ್ರಾಪಂಚಿಕ ವಿಷಯಗಳ ಮೇಲಿನ ಆಸಕ್ತಿಯನ್ನು) ದೈವಭಕ್ತಿಯನ್ನಾಗಿ ಪರಿವರ್ತಿಸುತ್ತಾ ಬಂದು, ಸ್ವಾರ್ಥಪರತೆಯ ಬಂಧನದಿಂದ (ಕಾರಾವಾಸದಿಂದ) ಅವನನ್ನು ಮುಕ್ತಗೊಳಿಸಿದನು ; ಹಾಗೆ ಮುಕ್ತಗೊಳಿಸಲು ಅವನಲ್ಲಿ ಸರಿಯಾದ ವಿವೇಕ ಹಾಗೂ ನಿಷ್ಪಕ್ಷಪಾತಗಳು ಮೂಡುವಂತೆ ಮಾಡಿದನು ; ಅಲ್ಲದೆ, ದೇವರ ಮೇಲಿನ ನಿಜವಾದ ಭಕ್ತಿಯ ಸ್ವರೂಪವೆಂಥದೆಂಬುದನ್ನು ಅವನು ತಿಳಿದುಕೊಳ್ಳುವಂತೆ ಮಾಡಿ ಮೊದಲಿನಂತೆ ಅವನೆದುರು ಪ್ರತ್ಯಕ್ಷನಾಗಿ ಸಹಾನುಭೂತಿಪರ ಹೃದಯದಿಂದ ಕೇಳುತ್ತಾನೆ, "ನನ್ನ ಮಗುವೇ, ನಿನಗೀಗ ಏನು ಕಡಿಮೆಯಾಗಿದೆ? ನಿನಗೆ ಏನಾಯಿತು?"

ಮಾನವ ಉತ್ತರ ಕೊಡುತ್ತಾನೆ : "ಓ ಒಡೆಯನೇ, ನನ್ನನ್ನು ನನ್ನ ತಪ್ಪಿಗಾಗಿ ಕ್ಷಮಿಸು ; ನಿನ್ನನ್ನು ಪ್ರೀತಿಸುವುದರ ಬದಲು ನಾನು ಪ್ರಾಪಂಚಿಕ ವಸ್ತುಗಳನ್ನು ಪ್ರೀತಿಸಿದೆ – ಅದು ತಪ್ಪು ; ನೀನು ಪೂರ್ಣ ಪ್ರೇಮ ಸ್ವರೂಪನು !"

"ಓ ಅಣ್ಣಾಮಲೈ, ಸ್ವಯಂ ಪ್ರೇಮಸ್ವರೂಪ! ನಿನ್ನನ್ನು ನಾನು ನೆನೆಯುವಂತೆ ಮಾಡುವಂಥ ಭಕ್ತಿ ನನ್ನಲ್ಲಿಲ್ಲ ; ನಿನಗಾಗಿ ವಿರಹದಿಂದ ಪರಿತಪಿಸುವಂಥ ಭಕ್ತಿ ನನ್ನಲ್ಲಿಲ್ಲ; ಮೇಣವನ್ನು ಬೆಂಕಿ ಕರಗಿಸುವಂತೆ ನಿನಗಾಗಿ ನನ್ನನ್ನು ಕರಗಿಸುವ ಭಕ್ತಿ ಇಲ್ಲ, ಹೀಗಿದ್ದರೂ ನೀನು ನನ್ನನ್ನು ನಿನ್ನವನೆಂದು ಮಾಡಿಕೊಂಡೆ. ಹೀಗೆ ನನ್ನನ್ನು ನಿನ್ನವನನ್ನಾಗಿ ಮಾಡಿಕೊಂಡ ಮೇಲೆ ನಿನ್ನ ಮೇಲೆ ಭಕ್ತಿ ನನ್ನಲ್ಲಿ ಉಂಟಾಗುವಂತೆ ಅನುಗ್ರಹಿಸದೆ ನಾನು ಹಾಳಾಗಿ ಹೋಗಲು ಬಿಡುವುದು ನಿನಗೆ ತಕ್ಕ ಕೆಲಸವೇ? ಪ್ರೇಮಜಾತ ಆನಂದವೇ, ನಿನ್ನ ಭಕ್ತರ ಹೃದಯದಲ್ಲಿ ಚಿಮ್ಮುವ ಅಮೃತವೇ! ನಾನು ನಿನಗೆ ಏನು ಹೇಳಬಲ್ಲೆ! ನಿನ್ನ ಇಚ್ಛೆಯೇ ನನ್ನ ಇಚ್ಛೆ ಮತ್ತು ಅದೇ ನನ್ನ ಸುಖ – ಓ ನನ್ನ ಜೀವಿತೇಶನೇ!"

ಪದ್ಯಾನುವಾದ :

"ಅರುಣಾಚಲೇಶ್ವರನೆ, ಪ್ರೇಮ ಸ್ವರೂಪನೇ
ನನ್ನನ್ನು ನಿನ್ನವನು ಎನ್ನಿಸಿರುವೆ ;
ಅರಸಿದೊಡೆಯೂ ನಿನ್ನ ನೆನೆವಂತೆ ಮಾಡ್ವಂಥ,
ನಿನಗಾಗಿ ವಿರಹದಲಿ ಪರಿತಪಿಸುವೆ–

ಎಂಬಂಥ, ಬೆಂಕಿ ಮೇಣವ ಕರಗಿಸುವ ಹಾಗೆ
ನನ್ನ ಕರಗಿಸುವಂಥ ಭಕ್ತಿ ಸಿಗದು ;
ತುಂಬದೆಯೆ ನನ್ನಲ್ಲಿ ನಿನ್ನ ಭಕ್ತಿಯನೊಡೆಯ
ನಾನು ಹಾಳಾಗ ಬಿಡುವುದು ಸಲ್ಲದು –
ನಿನಗೆ ! ಪರಮ ಪ್ರೇಮ ಸಂಜಾತ ಸಂಮೋದ
ನಿನ್ನ ಭಕ್ತರ ಮನದಿ ಪುಟಿದೇಳುವ
ಇನಿಜೇನೆ ! ನಿನಗೆ ನಾನೇನ ಹೇಳಲಿ? ನಿನ್ನ
ಸಂಕಲ್ಪವೇ ನನ್ನ ಸಂಕಲ್ಪವು –
ಎಂಬುದೇ ಸುಖ ನನಗೆ (ಸಮತೋಷ, ಸೌಭಾಗ್ಯ)
(ನಂಬಿರುವೆ) ನನ್ನ ಈ ಬಾಳಿನೊಡೆಯ !"

– ಶ್ರೀ ಅರುಣಾಚಲ ಪಥಿಕಂ, ನುಡಿ–೨
–ಶ್ರೀ ರಮಣ

"ಹೇ ಪರಮಾತ್ಮ ! ಎಲ್ಲ ಪ್ರಾಪಂಚಿಕ ಆಸಕ್ತಿಗಳನ್ನೂ ಬಿಟ್ಟು ನಿನ್ನ ಪಾದಗಳಿಗೇ ಅಂಟಿಕೊಳ್ಳುವಂಥ ಅತ್ಯುತ್ತಮ ಮಟ್ಟದ ವಿವೇಕವುಳ್ಳವರಲ್ಲಿ ನಾನೊಬ್ಬನಲ್ಲ. ನನ್ನ ಎಲ್ಲ ಭಾರವನ್ನೂ ನಿನ್ನವೆಂದು ತಿಳಿದು ಎಲ್ಲ ಕೆಲಸಗಳಲ್ಲಿಯೂ "ನನ್ನದು" ಎಂಬ ಭಾವನೆಯು ನಿಂತು ಹೋಗುವ ಹಾಗೆ ಮಾಡು. ಇಡೀ ಜಗತ್ತನ್ನು ಹೊರೆಯುವ ಹೊಣೆ ಹೊತ್ತಿರುವ ನಿನಗೆ ನಿಜವಾಗಿ ಯಾವುದಾದರೂ ಭಾರವೆಂದೆನ್ನಿಸೀತೇ? ಓ ಒಡೆಯ, ನಿನ್ನನ್ನು ಬಿಟ್ಟು ಈ ಜಗತ್ತಿನ ಭಾರವನ್ನು ತಲೆಯ ಮೇಲೆ ನಾನು ಹೊತ್ತುಕೊಂಡಿದ್ದು ಇನ್ನು ಸಾಕು. ಹೇ ಅರುಣಾಚಲ, ನೀನೇ ಪ್ರಭು! ನಿನ್ನ ಪಾದಗಳಿಂದ ನನ್ನನ್ನು ಹೊರಬಿಡುವ ಆಲೋಚನೆಯನ್ನು ಇನ್ನು ಬಿಡು."

– "ಶ್ರೀ ಅರುಣಾಚಲ ಪಥಿಕಂ"– ೯ನೆಯ ನುಡಿ –ಶ್ರೀ ರಮಣ

"ಹೇ ಅರುಣಾಚಲ, ಲೋಹ ಚುಂಬಕವು (ಅಯಸ್ಕಾಂತವು) ಕಬ್ಬಿಣವನ್ನು ಹೇಗೆ ತನ್ನತ್ತ ಎಳೆದುಕೊಳ್ಳುತ್ತದೆಯೋ ಆದರೆ ಅದನ್ನು ಬಿಡಲಾರದೋ ಹಾಗೆ ನನ್ನನ್ನು ನಿನ್ನತ್ತ ಎಳೆದುಕೋ ಮತ್ತು ನನ್ನನ್ನು ಬಿಡದೆ ಯಾವಾಗಲೂ ನನ್ನಲ್ಲಿ ಐಕ್ಯವಾಗಿರು."

– "ಶ್ರೀ ಅರುಣಾಚಲ ಅಕ್ಷರಮಣಮಾಲೈ– ಪದ್ಯ–೧೬

"ಶ್ರೀ ಅರುಣಾಚಲ, ಹಿಮವು ನೀರಿನಲ್ಲಿ ಹೇಗೆ ಕರಗುವುದೋ ಕರಗಿ ನೀರಾಗುವುದೋ ಹಾಗೇ ನನ್ನನ್ನು ಪ್ರೀತಿಯಲ್ಲಿ, ನಿನ್ನಲ್ಲಿ ನಿನ್ನ ಸ್ವರೂಪವಾದ ಪ್ರೇಮದಲ್ಲಿ ಕರಗಿಸು."

– "ಶ್ರೀ ಅರುಣಾಚಲ ಅಕ್ಷರಮಣಮಾಲೈ– ಪದ್ಯ–೧೦೧

"ಓ ಅಣ್ಣಾಮಲೈ, ಯಾವ ಕ್ಷಣದಲ್ಲಿ ನೀನು ನನ್ನನ್ನು ನಿನ್ನವನನ್ನಾಗಿ ಮಾಡಿಕೊಂಡೆಯೋ, ಆಗ ನೀನು ನನ್ನ ಶರೀರವನ್ನೂ ಜೀವಾತ್ಮವನ್ನೂ ತೆಗೆದುಕೊಂಡೆ. (ಸ್ವೀಕರಿಸಿದೆ). ನನಗಿನ್ನೇನಾದರೂ ದೂರಿಕೊಳ್ಳುವ ವಿಷಯವಿದ್ದೀತೇ? ನೀನಿಲ್ಲದೆ ಪಾಪ–

ಪುಣ್ಯಗಳೆರಡೂ ಇರಲಾರವಾದುದರಿಂದ ನಾನು ಅವುಗಳ ಬಗೆಗೆ ಆಲೋಚಿಸೆನು; ನಿನ್ನನ್ನೇ ಚಿಂತಿಸುತ್ತೇನೆ. ಓ ನನ್ನ ನಿಜವಾದ ಆತ್ಮವೇ (ಪರಮಾತ್ಮವೇ, ಬ್ರಹ್ಮಾತ್ಮವೇ) ನಿನಗೆ ಇಷ್ಟಬಂದ ಹಾಗೆ ಮಾಡು. ಓ ಪ್ರಿಯತಮನೇ ನಿನ್ನ ಪಾದಗಳ ಬಗ್ಗೆ ಯಾವಾಗಲೂ ಹೆಚ್ಚಾಗುತ್ತಿರುವ ಪ್ರೀತಿಯನ್ನು ನನಗೆ ದಯಪಾಲಿಸು."

– "ನವರತ್ನಮಾಲಿಕಾ ಸ್ತೋತ್ರ"–ಶ್ರೀ ರಮಣ

"ಈ ಗಳಿಗೆಯಿಂದ ಜೀವನದ ಅವಶ್ಯಕತೆ ಎಂಬುದು ನನಗಿಲ್ಲ. ನಿನ್ನ ಇಷ್ಟದಂತೆ ನನ್ನ ಜೀವನದಲ್ಲಿ ಏನಾದರೂ ಆಗಲಿ–ಸುಖ–ದುಃಖ, ಐಶ್ವರ್ಯ–ಬಡತನ, ಮಾನ–ಅವಮಾನ, ಕೀರ್ತಿ–ಅಪಕೀರ್ತಿ ಇವುಗಳಂಥ ಯಾವ ಏರಿಳಿತಗಳಾದರೂ ಆಗಲಿ...."

– ಶ್ರೀ ರಾಮಲಿಂಗಸ್ವಾಮಿ

ಒಂದೇ ಒಂದು ಅಗತ್ಯವೆಂದರೆ, ನೀನೇ. ಆ ಒಂದೇ ಒಂದು ಅಗತ್ಯ ನನಗಿರುವುದು–ಅದನ್ನು ಒಡೆಯನೇ, ಪೂರೈಸು!

ಇಷ್ಟರವರೆಗೆ ಮೂರನೆಯ ಇಯತ್ತೆಯ (ಅ) ವಿಭಾಗದಲ್ಲಿ ಓದುತ್ತಿದ್ದ ಮಾನವನು ವಿಷಯ ಭಕ್ತಿಯನ್ನು ಉಳ್ಳವನಾಗಿದ್ದನು ; ಅವನ ವಿಷಯಲಾಭಕ್ಕೆ ಇಷ್ಟದೇವತೆಯು ಸಾಧನವಾಗಿದ್ದನು. ಈಗ ಅವನು ತನ್ನ ಇಷ್ಟ ದೇವತೆಯ ಬಗೆಗೆ ಪ್ರೀತಿಯನ್ನು ತಾಳುತ್ತಾನೆ. ಮೂರನೆಯ ತರಗತಿಯಲ್ಲಿಯ "ಅ" ವಿಭಾಗದಲ್ಲಿ ಅವನು ತನ್ನ ಇಷ್ಟದೇವತೆಯನ್ನು ಪ್ರಾರ್ಥಿಸಿಕೊಂಡರೂ ಅವನ ಪ್ರೀತಿಯು ಜಗತ್ತಿನ ನಾನಾ ವಸ್ತುಗಳತ್ತ ಹರಿದು ಹಂಚಿಹೋಗಿದ್ದಿತು – ಅವನದು ಇಷ್ಟದೇವತಾಭಕ್ತಿಯಾಗಿರಲಿಲ್ಲ – ವಿಷಯ ಭಕ್ತಿಯಾಗಿಯೇ ಇದ್ದಿತು. ಚೆಲ್ಲಾಪಿಲ್ಲಿಯಾಗಿ ಹರಡಿ ಹೋಗಿದ್ದ ಅವನ ಪ್ರೀತಿಯನ್ನು ಈಗ ವಿಷಯಗಳಿಂದ ಹಿಂದೆಗೆದುಕೊಂಡು ಸಂಗ್ರಹಿಸಿ ಅವನ ಇಷ್ಟ ದೇವತೆಯತ್ತ ಹರಿಯಿಸಿದಾಗ ಅದು ಅವನ ಇಷ್ಟ ದೇವತೆಯತ್ತ ಬಿಟ್ಟ ಬಲವಾದ ಬಾಣವಾಗುತ್ತದೆ. ಹೀಗೆ ಅವನು ಬಾಣ ಬಿಡುವುದು (ಪ್ರೇಮಬಾಣವನ್ನು ಬಿಡುವುದು) ಅವನನ್ನು ಮೂರನೆಯ ವರ್ಗದ "ಬ" ವಿಭಾಗಕ್ಕೆ ಸೇರಿಸುತ್ತದೆ. ತನ್ನ ಇಷ್ಟ ದೇವನಾದ ಶ್ರೀಕೃಷ್ಣನ ವರಗಳ ಬಲದಿಂದ ಅನೇಕ ಜನ್ಮಗಳು ಕಳೆಯುವ ತನಕ ಎಲ್ಲ ಭೋಗಗಳನ್ನೂ ಅನುಭೋಗಿಸಿದ ಮೇಲೆ ಮಾನವನಿಗೆ ಈಗ ಆಶಾಗ್ನಿಯನ್ನು ವಸ್ತುರೂಪದ ತೈಲದಿಂದ ನಂದಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಶೋಧಿಸಿ ತೆಗೆಯುತ್ತಾನೆ. ಈ ಪ್ರಕಾರ ಅವನಿಗೆ ಪೂರ್ಣ ವೈರಾಗ್ಯವು ಪ್ರಾಪ್ತವಾಗುತ್ತದೆ. ದೇಯ ವಸ್ತುವನ್ನು ಪ್ರೀತಿಸುವುದಕ್ಕಿಂತ ದಾತೃವನ್ನು ಪ್ರೀತಿಸುವುದು ಮೇಲು ಎಂಬ ವಿವೇಕ ಅವನಲ್ಲಿ ಮೂಡುತ್ತದೆ. ಹೀಗೆ ಅವನಿಗೆ ಶುದ್ಧವಾದ ದೈವಭಕ್ತಿಯು ಪ್ರಾಪ್ತವಾಗುತ್ತದೆ. ಈಗ ಅವನಿಗೆ ಪೂರ್ಣ ವೈರಾಗ್ಯವಿದೆ, ಪರಿಪೂರ್ಣವಾದ ಭಕ್ತಿಯಿದೆ. ಈ ಎರಡು ರೆಕ್ಕೆಗಳಿಂದ ಅವನು ತನ್ನ ಗುರಿಯತ್ತ ವೇಗವಾಗಿ ಹಾರುತ್ತಾನೆ.

ನಮ್ಮ ಮಾನವನು ಎಲ್ಲವನ್ನೂ ವೈರಾಗ್ಯದಿಂದ ಪರಿತ್ಯಜಿಸಿದ್ದಾನೆ, ಎಲ್ಲವನ್ನೂ ಮರೆತುಬಿಟ್ಟಿದ್ದಾನೆ ; ತನ್ನ ಇಷ್ಟ ದೇವತೆಯನ್ನು ಪ್ರಾರ್ಥಿಸಲು ಅವನೆದುರು ನಿಂತಿದ್ದಾನೆ, "ಓ ನನ್ನ ಒಡೆಯ, ನಿನ್ನನ್ನು ನೀನು ನನಗೆ ಕೊಡು ಮತ್ತು ನನ್ನನ್ನು ನಿನ್ನ ಸ್ವತ್ತನ್ನಾಗಿ ಮಾಡಿಕೋ" ಎಂದು ಹೇಳುವ ತನ್ನ ನಿಜವಾದ ಭಕ್ತನಿಗೆ ಅವನ ಇಷ್ಟದೇವತೆಯು

ಏನನ್ನು ಹೇಗೆ ದಯಪಾಲಿಸಬೇಕೆಂಬುದು ಗೊತ್ತಿಲ್ಲವೇ? ಯಾವ ದೇವರು ಈ ಎಲ್ಲ ದಿನಗಳಲ್ಲಿ ತನ್ನ ಭಕ್ತನು ಅಜ್ಞಾನದಲ್ಲಿದ್ದಾಗ ಅವನ ಕ್ಷುದ್ರ ಬಯಕೆಗಳನ್ನೂ ತೀರಿಸಿದನೋ, ಅವನು ತನ್ನ ಭಕ್ತನ ವರ್ತಮಾನಕಾಲದ ಹೃತ್ಪೂರ್ವಕವಾದ ಪರಮೋಚ್ಛ ಪ್ರಾರ್ಥನೆಯನ್ನು ಪೂರೈಸದೆ ಉಳಿದಾನೇನು? ಅವನ ಮಾರ್ಗದಲ್ಲಿ ಅವನನ್ನು ಮುನ್ನಡೆಯಿಡುವಂತೆ ಮಾಡಲು ಮುಂದೊಂದು ಹೆಜ್ಜೆಯನ್ನಿಟ್ಟು, ಆ ದೇವರು ಅವನನ್ನು ಕರೆದುಕೊಂಡು ಹೋಗುವನು ಮತ್ತು ಅವನ ಪ್ರಾರ್ಥನೆಯನ್ನು ಉತ್ತರಿಸುವನು. ಆ ಭಕ್ತನ ಮುಂದೆ ಅನುಗ್ರಾಹಕವಾಗಿ ಎಂದಿನಂತೆ ನಿಲ್ಲುತ್ತಿದ್ದ ಆ ದೇವರ ಪ್ರಿಯಕರರೂಪವು ಮಾಯವಾಗಿ ಹೋಗುವುದು! ಎಷ್ಟೋ ಸಲ ಭಕ್ತನು ಇಷ್ಟ ದೇವನನ್ನು ಕರೆದರೂ ಅವನು ಪುನಃ ಮೈದೋರುವುದಿಲ್ಲ! ಸರಿಯಾದ ವಿವೇಕ ಮೂಡಿದ್ದರಿಂದ ಭಕ್ತನು ಪ್ರಾಪಂಚಿಕ ವಸ್ತುಗಳನ್ನು ಪರಿತ್ಯಜಿಸಿದ್ದಾನೆ. ಅವು ಈಗ ಅವನನ್ನು ಆಕರ್ಷಿಸಲಾರವು. ಅವನಲ್ಲಿ ನಿಜವಾದ ಭಕ್ತಿಯು ಅರಳಿದುದರಿಂದ ಅವನಿಗೆ ತನ್ನ ಇಷ್ಟದೇವರೊಬ್ಬನೇ ಆಕರ್ಷಕನಾಗಿದ್ದಾನೆ. ಇಂಥ ಪರಿಸ್ಥಿತಿಯಲ್ಲಿ ತನ್ನ ಇಷ್ಟದೇವರೂ ಅದೃಶ್ಯವಾದರೆ ಆ ಭಕ್ತನು ಏನು ಮಾಡಬೇಕು? ಎಂಥ ತೀವ್ರ ಅಶಾಂತ ಸ್ಥಿತಿಯಲ್ಲಿ ಹಾಗೂ ನರಳಾಟದಲ್ಲಿ ಅವನಿರಬೇಡ? ಅವನಿಗೆ ವಿರಹದ ನೋವು ಅನುಭವಕ್ಕೆ ಬಾರದೆ ಇದ್ದೀತೇ? ಈಗ ಅವನ ಹೃದಯವು ಪ್ರಾರ್ಥನಾ ರೂಪದಲ್ಲಿ (ಈ ರೀತಿಯಾಗಿ) ಭೋರೆಂದು ಅಳುತ್ತದೆ.

"ಓ ಇಷ್ಟ ದೇವತೆಯೇ, ನಿನ್ನ ಅನುಗ್ರಹದ ಮೂಲಕ ಆಗಲೇ ನನ್ನನ್ನು ನಿನ್ನವನನ್ನಾಗಿ ಮಾಡಿಕೊಂಡಿರುವ ನೀನು ಈಗ ನನಗೆ ನಿನ್ನನ್ನು ತೋರದಿರುವೆ. ನಾನೀ ಜಗತ್ತಿನಲ್ಲಿ ತೀಕ್ಷ್ಣವಾದ ನೋವನ್ನು ಅನುಭವಿಸುತ್ತಿದ್ದೇನೆ. ಈ ಜಗತ್ತೊಂದು ಕ್ರೂರವಾದ ಭ್ರಾಂತಿ. ಏಕೆಂದರೆ, ನಿನಗಾಗಿ ಅತೃಪ್ತ ದೃಷ್ಟಿಯಿಂದ ಕಾತರಿಸುವ (ಸ್ಥಿತಿ ನನಗೆ ಉಂಟಾಗಿದೆ). ಈ ಶರೀರ ಸತ್ತ ಮೇಲೆ ನನಗೆ ಏನಾಗುವುದು? ಹೇ ಸೂರ್ಯರಿಗೇ ಸೂರ್ಯನಾದವನೇ, ಕಮಲವು ಸೂರ್ಯನನ್ನು ನೋಡದೆ ಅರಳಬಲ್ಲುದೇ?

– "ಶ್ರೀ ಅರುಣಾಚಲ ಪಥಿಕಂ"–ಪದ್ಯ–೧–ಶ್ರೀ ರಮಣ

"ನನ್ನನ್ನು ರಕ್ಷಿಸು ; ನಾನು ಅಂಟಿಕೊಳ್ಳಲು ಬೇಕಾದ ಆಧಾರ ಸ್ತಂಭವಾಗು ಅದರಿಂದ ನಾನು ಮಿದುವಾದ ಬಳ್ಳಿಯಂತೆ ಆಧಾರವಿಲ್ಲದೆ ಕೆಳಗೆ ಜಾರಿ ಬೀಳದೆ ಇರಲಿ."

– "ವಧೂ ಲಿಖಿತ ಪತ್ರಗಳು," ಪದ್ಯ ೭೨–ಶ್ರೀ ರಮಣ

"ಯಾರಿಗಾಗಿ ನೀನು ನನ್ನನ್ನು ಗೆದ್ದು ತಂದೆ? ಈಗ ನೀನು ನನ್ನನ್ನು ಪರಿತ್ಯಜಿಸಿದರೆ ಜಗತ್ತು ನಿನ್ನನ್ನು ದೂರುತ್ತದೆ."

– "ಅರುಣಾಚಲ ಅಕ್ಷರಮಣ ಮಾಲೈ"–ಪದ್ಯ–೪

"ಈ ದೂರಿನಿಂದ ಪಾರಾಗು. ನೀನೇಕೆ ನಿನ್ನನ್ನು ನಾನು ಚಿಂತಿಸುವಂತೆ ಮಾಡಿದೆ? ಈಗ ಯಾರು ಇನ್ನೊಬ್ಬರನ್ನು ಬಿಟ್ಟು ಹೋಗಬಲ್ಲರು?"

– "ಅರುಣಾಚಲ ಅಕ್ಷರಮಣ ಮಾಲೈ" –ಪದ್ಯ–೫

"ತಾಯಿಗಿಂತ ಹೆಚ್ಚಿನ ಪ್ರೀತಿಯನ್ನು ಕೊಟ್ಟವನೇ, ಇದೇ ನಿನ್ನ ಪ್ರೀತಿಯೇ?"

–"ಶ್ರೀ ಅರುಣಾಚಲ ಅಕ್ಷರಮಣ ಮಾಲೈ"–ಪದ್ಯ–೬

"ನಿನ್ನ ಅನುಗ್ರಹವನ್ನು ನನ್ನ ಮೇಲೆ ತೋರು. ಕೇಳದೇ ಕೊಡುವ ನಿನ್ನ ಅಕಲಂಕ ಕೀರ್ತಿಯನ್ನು ಮಲಿನಗೊಳಿಸಬೇಡ."

– "ಅ.ಅ.ಮ.ಮಾ" – ಪದ್ಯ–೨೨

"ಸಿಟ್ಟಿಲ್ಲದ ಸ್ವಭಾವದವನೇ ! ನಿನ್ನ ಸಿಟ್ಟಿಗೆ ನನ್ನನ್ನು ಗುರಿಮಾಡಲು ನಾನೇನು ತಪ್ಪು ಮಾಡಿದ್ದೇನೆ?"

– "ಅ.ಅ.ಮ.ಮಾ" – ಪದ್ಯ–೨೫

"ಹೆಚ್ಚು ಹೆಚ್ಚು ಮೃದುವಾಗುತ್ತಾ ತೀವ್ರವಾದ ಭಕ್ತಿಯಿಂದ ಕರಗುತ್ತಾ ನನ್ನ ಆಶ್ರಯವೆಂದು ನಾನು ನಿನ್ನನ್ನು ಹೊಕ್ಕೆ. ಆಗ ನೀನು ಅಚಲನಾಗಿ ನಿಂತೆ !"

– "ಅ.ಆ.ಮ.ಮಾ" – ಪದ್ಯ–೫೯

"ನಿನ್ನ ಬಗ್ಗೆ ಪ್ರೀತಿಯೇ ಇಲ್ಲದ ನನ್ನಲ್ಲಿ ನಿನ್ನತ್ತ ಆಕರ್ಷಣೆಯನ್ನು ಎಬ್ಬಿಸಿದೆ. ಈಗ ಮೋಸ ಮಾಡಬೇಡ ; ನಿನ್ನ ಅನುಗ್ರಹವನ್ನು ನನ್ನ ಮೇಲೆ ತೋರು."

– "ಅ.ಅ.ಮ.ಮಾ" – ಪದ್ಯ–೬೦

"ಅತಿ ಪಕ್ವವಾದ ಮತ್ತು ಹುಳಿತ ಹಣ್ಣಿನಿಂದ ಪ್ರಯೋಜನವಿಲ್ಲ. ಸರಿಯಾಗಿ ಹಣ್ಣಾದ ಫಲವೇ ತಿನ್ನಲು ಯೋಗ್ಯವಾದುದು ; ಬಂದೆನ್ನ ತಿನ್ನು"

– "ಅ.ಅ.ಮ.ಮಾ" – ಪದ್ಯ–೬೧

"ನೀನು ನಿನ್ನನ್ನು ನನಗೆ ಕೊಟ್ಟು ನನ್ನನ್ನು ನೀನು ತೆಗೆದುಕೊಂಡರೆ ನಾನು ಇನ್ನು ಮೇಲೆ ನರಳಬೇಕಾಗಿಲ್ಲ. ನೀನು ನನಗೆ ಯಮ."

– "ಅ.ಅ.ಮ.ಮಾ" – ಪದ್ಯ–೬೨

"ನಿನ್ನ ಕಟಾಕ್ಷವನ್ನು ನನ್ನ ಮೇಲೆ ಬೀರಿ, ನಿನ್ನ ವಿಚಾರವನ್ನು ನನ್ನತ್ತ ಹರಿಯಿಸಿ, ನಿನ್ನ ಸ್ಪರ್ಶವನ್ನು ನನ್ನ ಮೈಗೆ ಕೊಡಿಸಿ, ನೀನು ನನ್ನನ್ನು ಪರಿಪಕ್ವಗೊಳಿಸು ಮತ್ತು ಅನುಗ್ರಾಹಕವಾಗಿ ನಿನ್ನವಳನ್ನಾಗಿ ಮಾಡಿಕೋ."

– "ಅ.ಅ.ಮ.ಮಾ" – ಪದ್ಯ–೬೩

"ನನ್ನ ಬಾಯಿಗೆ ಮಣ್ಣು ಹಾಕಿ ನನ್ನ ಬದುಕನ್ನು ಹಾಳು ಮಾಡಿದ್ದು ನೀನಲ್ಲದೆ ಇನ್ನಾರು?"

– "ಅ.ಅ.ಮ.ಮಾ" – ಪದ್ಯ–೮೮

"ನನ್ನನ್ನು ಮರುಳುಗೊಳಿಸಿ ನನ್ನ ಮನಸ್ಸನ್ನು ಕದ್ದೊಯ್ದವನು ನೀನಲ್ಲದೆ ಇನ್ನಾರು?"

– "ಅ.ಅ.ಮ.ಮಾ" – ಪದ್ಯ–೮೯

"ಜಗತ್ತಿನ ಬಗೆಗಿದ್ದ ನನ್ನ ಮರುಳನ್ನು ಬಿಡಿಸಿದೆ. ನಾನು ಆ ಮರುಳಿನಿಂದ ಈಗ ಮುಕ್ತಳು ; ಮತ್ತು ನೀನು ನನ್ನನ್ನು ನಿನಗೆ ಮನಸೋತ ಮರುಳನನ್ನಾಗಿ ಮಾಡಿದೆ. ಈಗ ಈ ನನ್ನ ಹುಚ್ಚನ್ನು ಗುಣಪಡಿಸಲು ಬೇಕಾದ ಮದ್ದೆಂದರೆ ನಿನ್ನ ಅನುಗ್ರಹ !"

– "ಅ.ಅ.ಮ.ಮಾ" – ಪದ್ಯ–೬೬

"ಬಿಡಿಸಲಾರದ ಭೂತದಂತೆ ನೀನು ನನ್ನಲ್ಲಿ ಆವಿಷ್ಟನಾದೆ ಮತ್ತು ನನ್ನನ್ನು ಒಂದು ಭೂತವನ್ನಾಗಿ ಮಾಡಿದೆ. ಹಾಗೆ ಮಾಡುವುದರಲ್ಲಿ ನನ್ನ ಭೂತತ್ವವನ್ನು (ದೆವ್ವತನವನ್ನು) ಬಿಡಿಸುವುದೇ ನಿನ್ನ ಉದ್ದೇಶವಾಗಿತ್ತು. ಎಂಥ ಆಶ್ಚರ್ಯ ಅದು?"

– "ಅ.ಅ.ಮ.ಮಾ" – ಪದ್ಯ–೭೧

"ನೀನು ನನ್ನನ್ನು ಅಪ್ಪಿಕೊಂಡೇ ಬಿಟ್ಟೆ ; ಉದ್ವೇಗದಿಂದ ನನ್ನ ಶರೀರವು ನೀರಾಗಿ ಹೋಗುವುದು. ನಾನು ಕಣ್ಣೀರ ಹೊಳೆಯಲ್ಲಿ ಕಳೆದು ಹೋಗುವೆನು"

– "ಅ.ಅ.ಮ.ಮಾ" – ಪದ್ಯ–೩೪

"ನೀನು ನನ್ನನ್ನು ಪರಿತ್ಯಜಿಸಿದರೆ ಛಿ: ಎಂದು ತಿರಸ್ಕರಿಸಿದರೆ ತ್ರಿಕಾಲದಲ್ಲಿ ಮಾಡಿದ ನನ್ನ ಕರ್ಮಗಳು ನನ್ನನ್ನು ಸುಡುತ್ತವೆ ; ಹಾಗಾಗಬಾರದೆಂದಿದ್ದರೆ ಯಾವ ರೀತಿಯಿಂದ ನಾನು ರಕ್ಷಿತೆಯಾಗಬಲ್ಲೆ? ದಯವಿಟ್ಟು ಹೇಳು.""

– "ಅ.ಅ.ಮ.ಮಾ" – ಪದ್ಯ–೩೫

"ನೀನು ದೂರೀಕರಿಸಿದ್ದೇ ಆದರೆ ನಾನು ದುಃಖಿನಿಯಾಗುವೆನು. ನಾನು ದೇಹ ಬಿಟ್ಟ ಮೇಲೆ ನಿನ್ನ ಆಸರೆಯಿಂದ ನಾನು ಸಡಿಲಾಗದಿರಲಿ ಎಂದು ಆಶೀರ್ವದಿಸು."

– "ಅ.ಅ.ಮ.ಮಾ" – ಪದ್ಯ–೯೬

"ಅಣೋರಣೀಯನೇ, ಮಹತೋ ಮಹೀಯನೇ, ನನ್ನಲ್ಲಿ ವಿಚಾರ ತರಂಗಗಳು ಎಂದು ನಿಂತಾವು? ಎಂದು ನಾನು ನಿನ್ನನ್ನು ಸೇರಿಯೇನು?"

– "ಅ.ಅ.ಮ.ಮಾ" – ಪದ್ಯ–೫೭

"ನಾನು ಹೀನ ಬುದ್ಧಿಯವಳು. ಸಂಕಟ ಮೈಮೇಲೆ ಬಿದ್ದಾಗ ಮಾತ್ರ ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ. ಆದರೂ ನನ್ನನ್ನು ಅನುಗ್ರಹಿಸು ; ನನ್ನನ್ನು ವಂಚಿಸಬೇಡ."

– "ಅ.ಅ.ಮ.ಮಾ" – ಪದ್ಯ–೭೮

"ನಾಯಿಗಿಂತ ಕೀಳಾದ ನಾನು ನಿನ್ನನ್ನು ಬಯಸಿ ಎಂದು ಸೇರಿಯೇನು?."

– "ಅ.ಅ.ಮ.ಮಾ" – ಪದ್ಯ–೩೯

"ಉತ್ತರ ಕೊಡದೆ ನೀನು ಕಲ್ಲಿನಂತೆ ಕುಳಿತರೆ, ಈ ಮೌನವು ನಿನಗೆ ತಕ್ಕದ್ದೆನ್ನಿಸೀತೇ?"

– "ಅ.ಅ.ಮ.ಮಾ" – ಪದ್ಯ–೮೭

"ನನ್ನ ಒಬ್ಬನೇ ದೇವ, ಒಬ್ಬನೆ ರಕ್ಷಕ ನೀನು ಎಂದು ನಾನು ನಿನ್ನ ಹತ್ತಿರ ಬಂದಾಗ ನೀನು ನನ್ನನ್ನು ಸಂಪೂರ್ಣವಾಗಿ ನಾಶ ಮಾಡಿದೆ."

– "ಅ.ಅ.ಮ.ಮಾ" – ಪದ್ಯ–೪೮

"ನೀನು ಬೇಕೆಂಬ ನನ್ನ ಉಜ್ವಲ ಆಕಾಂಕ್ಷೆಯು ನನ್ನನ್ನು ಸುಟ್ಟು ಬೂದಿ ಮಾಡುವುದರೊಳಗೆ ನಿನ್ನ ಆಹ್ಲಾದಕರವಾದ ಅನುಗ್ರಹ ವೃಷ್ಟಿಯನ್ನು ನನ್ನ ಮೇಲೆ ಸುರಿಸು."

– "ಅ.ಅ.ಮ.ಮಾ" – ಪದ್ಯ–೫೫

"ನನ್ನ ಇಷ್ಟ ದೇವತೆಯಾದ ಓ ರಮಣನೇ, ನನ್ನೆಡೆಗೆ ಬಾ. ಆಗ ನಾನು ನಿನ್ನನ್ನು ಕೇಳುವೆನು ; ನಿನ್ನ ಆಜ್ಞೆಯಂತೆ ವರ್ತಿಸುವೆನು. ನನ್ನ ದಿನದ ಬಾಳಿನಲ್ಲಿ ಪ್ರತಿಯೊಂದು ಕೆಲಸವನ್ನೂ ನೀನು ಹೇಳಿದಂತೆ ಮಾಡುವೆನು. ಒಂದು ವಸ್ತುವನ್ನು ಇಡುವುದರಲ್ಲಿ, ಅಥವಾ ತೆಗೆದುಕೊಳ್ಳುವುದರಲ್ಲಿ, ಏಳುವುದರಲ್ಲಿ, ಕುಳಿತುಕೊಳ್ಳುವುದರಲ್ಲಿ – ಎಲ್ಲಿಗಾದರೂ ಹೋಗುವುದರಲ್ಲಿ ಯಾ ಹೋಗದಿರುವುದರಲ್ಲಿ – ನೀರು ಕುಡಿಯುವುದರಲ್ಲಿ ಯಾ ಕುಡಿಯದಿರುವುದರಲ್ಲಿ – ಒಂದು ವಸ್ತುವನ್ನು ಪ್ರೀತಿಸುವುದರಲ್ಲಿ ಯಾ ಅಪ್ರೀತಿಯಿಂದ ನೋಡುವುದರಲ್ಲಿ ಮತ್ತು ಅಂಥ ಇನ್ನೂ ಎಷ್ಟೋ ವಿಷಯಗಳಲ್ಲಿ ನೀನು ಹೇಳಿದಂತೆ ಕೇಳುವೆನು. "

"ಶ್ರೀ ರಮಣ[೨೨]ವರುಹೈ" – ಪದ್ಯ–೮೧

"ಈಗ ದೇವರೇಕೆ ತನ್ನ ಭಕ್ತನಿಗೆ ಪ್ರತ್ಯಕ್ಷನಾಗುವುದಿಲ್ಲ. ಮಾನವ ಕೇಳಿದಾಗ ; "ನಿನ್ನನ್ನು ನನಗೆ ಕೊಡು" ಎಂದು ಬೇಡಿದಾಗ ಅವನಿಗೆ ತನ್ನ ಇಷ್ಟ ದೇವತೆ ಎಂಥವನೆಂಬುದು ಗೊತ್ತಿತ್ತೇ? ಗೊತ್ತಿರಲಿಲ್ಲ. ಅವನಿಗೇ (ಆ ಇಷ್ಟದೇವತೆಗೇ) ಗೊತ್ತು; ಏಕೆಂದರೆ ಮಾನವನು ಈ ನಾಮ–ರೂಪಗಳೇ ಅವನು ಎಂದು ತಿಳಿಯುತ್ತಾನೆ. ಅವನಿಗೆ ಈ ನಾಮರೂಪಗಳಷ್ಟೇ ಬೇಕು ; ಆದರೆ ದೇವರು ಅವನಿಗೆ ಬೇಕಾದುದೆಲ್ಲವನ್ನು ಕೊಟ್ಟು ಅವನನ್ನು ವಂಚಿಸಲು ಇಷ್ಟಪಡುವುದಿಲ್ಲ. ತಾನು ನಿಜವಾಗಿಯೂ ಏನಾಗಿರುವನೋ ಅಂಥದನ್ನೇ, ಅದನ್ನೇ ತನ್ನ ಭಕ್ತನಿಗೆ ಕೊಡಬೇಕೆಂಬುದು ದೇವರ ಉದ್ದೇಶ.

---

೨೨. ೧೯೫೦ರಲ್ಲಿ ಶ್ರೀ ರಮಣರು ದೇಹತ್ಯಾಗ ಮಾಡಿದ ಬಳಿಕ ಅವರನ್ನು ಸದೇಹವಾಗಿ ನೋಡಬೇಕೆಂಬ ಉತ್ಕಟೇಚ್ಛೆಯುಂಟಾದಾಗ ಗ್ರಂಥಕರ್ತರು ರಚಿಸಿದ ಅಪ್ರಕಟಿತ ಪದ್ಯಕಾವ್ಯ.

ಬ್ರಹ್ಮನ ಸತ್ (ಅಸ್ತಿತ್ವ), ಚಿತ್ (ಚೈತನ್ಯ), ಆನಂದ (ಪೂರ್ಣಹರ್ಷ), ನಾಮ (ಹೆಸರು), ರೂಪ (ಆಕಾರ) ಎಂಬ ಪಂಚಮುಖಗಳಲ್ಲಿ ಮೊದಲ ಮೂರು (ಸತ್– ಚಿತ್– ಆನಂದ) ಮುಖಗಳು ನಿಜವಾದಂಥವು. ಕೊನೆಯ ಎರಡು (ನಾಮ–ರೂಪ) ಮುಖಗಳು ನಿಜವಾದವುಗಳಲ್ಲ. ಇಷ್ಟು ದಿನಗಳವರೆಗೂ ಮಾನವನು ಬ್ರಹ್ಮನ ಅನಿತ್ಯ (ಅಸತ್ಯ) ಮುಖದ ಪವಿತ್ರ ಸಂಗದಿಂದ ಮಾತ್ರ ಸುಖಿಸುತ್ತಿದ್ದನು. ಆ ಅಸತ್ಯ ಮುಖವು ಅವನ ನಾಮರೂಪಯುಗಲಗಳಲ್ಲಿ ಒಂದು. ಆದರೆ ಈ ನಾಮ–ರೂಪ ಅದೃಶ್ಯವಾದೊಡನೆಯೇ, ಅದು ತನ್ನ ಇಷ್ಟದೈವದ ನಿಜಸ್ವರೂಪವೆಂದು ನಂಬಿದ ಮಾನವನು ತನ್ನ ದೇವರನ್ನು ತಾನು ಕಳೆದುಕೊಂಡೆನೆಂದು ಭಾವಿಸಿ ಆ ದೇವವಿರಹದಿಂದ ಬಳಲುತ್ತಾನೆ. ಸಚ್ಚಿದಾನಂದಗಳೆಂಬ ನಿಜವಾದ ಬ್ರಹ್ಮ ಮುಖಗಳನ್ನು, ಸ್ವರೂಪವನ್ನು ಅರಿಯದಿರುವುದರಿಂದಲೇ ಆ ಭಕ್ತನಿಗೆ ಅಂಥ ದೊಡ್ಡ ಬಳಲಿಕೆಯುಂಟಾಗುತ್ತದೆ, ಕಷ್ಟದ ಅನುಭವ ಬರುತ್ತದೆ.

"ನಿನ್ನ ನಿಜಸ್ವರೂಪದ ಜ್ಞಾನವಿಲ್ಲದೆಯೇ ನಾನು ನೀನು ಬೇಕೆಂದು ಬಯಸಿ ಸುಸ್ತು ಹೊಂದಿದ್ದೇನೆ! ನಿನ್ನ ಪರಮೋಚ್ಚ ಜ್ಞಾನವನ್ನು ನನಗೆ ಅನುಗ್ರಹಿಸು. ಓ ಅರುಣಾಚಲನೇ, ಅದರಿಂದ ನನ್ನ ಆಯಾಸವು ಪರಿಹಾರ ಹೊಂದೀತು !"

–"ಅರುಣಾಚಲ ಅಕ್ಷರಮಣ ಮಾಲೈ"– ನುಡಿ ೪೦

ಪರಮಾತ್ಮನ ಮೇಲಿನ ಪ್ರೀತಿಯ ದೆಸೆಯಿಂದಲೇ ನಮ್ಮ ಮನುಷ್ಯನು ವಿರಹವನ್ನು ಅನುಭವಿಸುತ್ತಿದ್ದಾನೆ ಎಂಬುದನ್ನು ಅರಿತು ಅವನಿಗೆ ಹೀಗಾಗಿರುವುದು ತನ್ನ ನೈಜತೆಯ ಸರಿಯಾದ ಜ್ಞಾನ ಅವನಿಗಿಲ್ಲದುದರಿಂದ ಎಂಬುದನ್ನೂ ಪರಮೋಚ್ಚ ಜ್ಞಾನವನ್ನು ಅವನಿಗೆ ಅನುಗ್ರಹಿಸುವುದೊಂದೆ ಅದರ ಪರಿಹಾರೋಪಾಯ ಎಂಬುದನ್ನೂ ತಿಳಿದು ದೇವರು ತನ್ನ ಅನಿತ್ಯ (ಅಸತ್ಯ) ಮುಖಗಳಾದ ನಾಮ–ರೂಪಗಳನ್ನು ಅವನಿಂದ ಹಿಂತೆಗೆದುಕೊಳ್ಳುವನು.

ಗೊತ್ತು ಗುರಿಯಿಲ್ಲದೆ ಮನುಷ್ಯನು ಹುಚ್ಚನಂತೆ ತಿರುಗುತ್ತಾನೆ ; ಒಮ್ಮೆ ನಡೆಯುತ್ತಾನೆ, ಒಮ್ಮೆ ನಿಲ್ಲುತ್ತಾನೆ ; ತುದಿಯಿಲ್ಲದೆ ದಣಿವನ್ನೆಣಿಸದೆ "ಓ ಕೃಷ್ಣ, ಹೇ ಕೃಷ್ಣ" ಎಂದು ಆರ್ತನಾಗಿ ಕೂಗುತ್ತಾನೆ, ಕರೆಯುತ್ತಾನೆ–ತಾರ–ಮಂದ್ರಧ್ವನಿಗಳಿಂದ, ಉದಾತ್ತಾನುದಾತ್ತ ಸ್ವರಗಳಿಂದ. ಅವನೀಗ ದೈವ–ಮರುಳನಾಗಿದ್ದಾನೆ, ದೇವೋನ್ಮಾದ ಪೀಡಿತನಾಗಿದ್ದಾನೆ. ಅವನಿಗೆ ಹೆಂಡತಿ, ಮಕ್ಕಳು, ಮನೆ, ಕೆಲಸ ಎಂಬ ಯಾವುದರ ಚಿಂತೆಯೂ ಇಲ್ಲ. ಸ್ವ ಪ್ರಯತ್ನವಿಲ್ಲದೆಯೇ ಇದ್ದ ಅವನನ್ನು ಬಲಾತ್ಕರಿಸಿದ ಶ್ರೀಕೃಷ್ಣನೆಂಬ ಇಷ್ಟದೇವತೆಯ ಧ್ಯಾನದಲ್ಲಿ ಆ ಮನುಷ್ಯನು ಮುಳುಗಿದ್ದಾನೆ! ದೇವರ ವಿರಹದ ಯಾತನೆಯಲ್ಲಿರುವ ಇವನು ಕೈಲಾಸದಲ್ಲಿಯ ಶಿವಸ್ವಾಮಿಯನ್ನು ನೋಡಲು ಹೋಗುವ ದಾರಿಯಲ್ಲಿದ್ದ ಸಂತ ಅಪ್ಪಾರನ ಮನಃಸ್ಥಿತಿಯಲ್ಲಿದ್ದಾನೆ ; ತನ್ನ ದಿವ್ಯ ಮಾತೆ ಕಾಳಿಗಾಗಿ ಅಳುತ್ತಾ ತನ್ನನ್ನು ಕೊಂದುಕೊಳ್ಳಲು ಕೂಡಾ ಯತ್ನಿಸಿದ ಶ್ರೀ ರಾಮಕೃಷ್ಣ ಪರಮಹಂಸರ ಮನೋಭಾವದಲ್ಲಿದ್ದಾನೆ ; ಲಂಕೆಯಲ್ಲಿ ಸೆರೆಮನೆಯಲ್ಲಿದ್ದಾಗ ತನ್ನನ್ನು ಕಾಡಿನಲ್ಲಿ ಹುಡುಕುತಿದ್ದ ರಾಮನನ್ನೂ, ಲಕ್ಷ್ಮಣನನ್ನೂ ತೀವ್ರವಾಗಿ ಬಯಸುತ್ತಿದ್ದ ಸೀತೆಯ ಮಾನಸಿಕ

ಅವಸ್ಥೆಯಲ್ಲಿದ್ದಾನೆ. ಕೆಲವು ಸಲ ಇನ್ನೂ ಕೆಲವು ಜನ್ಮಗಳು ಈ ವಿರಹ ಬಾಧೆಯಲ್ಲೇ ಕಳೆದು ಹೋಗಬಹುದು!

ದೇವರ ಯಾವುದಾದರೂ ಒಂದು ನಾಮ–ರೂಪವನ್ನು ತನ್ನ ಸಹವಾಸಕ್ಕೆ ತೆಗೆದುಕೊಳ್ಳಲು ಶಕ್ತನಾದರೂ ಅದು ಖಾಯಂ ಆಗಿ ದೇವರನ್ನು ಸಾಧಿಸಿಕೊಂಡಿರುವ ಸ್ಥಿತಿ ಎಂದಾಗದು ; ಆ ನಾಮ ಯಾ ರೂಪವು ಸ್ವಲ್ಪ ಬೇಗನೆ ಅಥವಾ ತಡವಾಗಿ ಆದರೂ ಅದೃಶ್ಯವಾಗಲೇಬೇಕು.

"ಸರ್ವೋಚ್ಚ ಸತ್ಯ ಪದಾರ್ಥದ ಸತ್ಯದಲ್ಲಿ ತನ್ನ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು, ಅದರೊಡನೆ ಒಂದಾಗಿ ಇದ್ದು ಅದರಲ್ಲಿ ಕರಗಿ ಹೋಗುವುದೇ ನೋಡುವುದು (ಅಪರೋಕ್ಷಾನುಭೂತಿಯನ್ನು ಪಡೆಯುವುದು). ಹೀಗೆ ನೀನು ತಿಳಿದುಕೊಳ್ಳತಕ್ಕದ್ದು."

– "ಉಳ್ಳದು ನಾರ್ಪ.ದು", ನುಡಿ ೮

ಮಾನವನು ತನ್ನ ಬ್ರಹ್ಮಾತ್ಮದ ಏಕತ್ವವನ್ನು ದೇವರ ನಿಜಸ್ವರೂಪದೊಡನೆ ಸಾಕ್ಷಾತ್ಕರಿಸಿಕೊಂಡು ಅದರಲ್ಲಿ ವ್ಯಕ್ತಿತ್ವದ ಸ್ವಲ್ಪ ಅಂಶವೂ ಉಳಿಯದಂತೆ ಮುಳುಗುವುದೇ ದೇವರನ್ನು ನಿಜವಾಗಿ ನೋಡುವುದು ಮತ್ತು ಸಾಧಿಸಿಕೊಳ್ಳುವುದು (ದೈವೈಕ್ಯವಾಗುವುದು). ಅಲ್ಲವೇ? ಆದುದರಿಂದ ಅವನ ಇಷ್ಟದೈವವು ಸರ್ವೋನ್ನತ ಪರಮೋಚ್ಚ–ಅದು ಆ ಸ್ಥಿತಿಯನ್ನು ಮೋಸ ಮಾಡದೆ ಅವನಿಗೆ ಕೊಡಬಯಸುತ್ತದೆ ; ಆ ಸ್ಥಿತಿಯು ಏಕಮೇವಾದ್ವಿತೀಯ– ಅದು ಅವನ ಪ್ರಯತ್ನಗಳೆಲ್ಲವುಗಳ ಏಕಕಾಲಿಕ ಪೂರೈಕೆ – ಅವನ ಎಲ್ಲ ಬಯಕೆಗಳ ಸಿದ್ಧಿ. ಇದನ್ನು ಅವನಿಗೆ ನೀಡುವುದು ಹೇಗೆ?

"ಕಾಡುಜಿಂಕೆಯನ್ನು ಊರು (ಸಾಕಿದ) ಜಿಂಕೆಯೊಡನೆ ಹೋಗಿ ಬಲೆಯೊಳಗೆ ಬೀಳಿಸುವಂತೆ...."

– ತಾಯುಮಾನವರ್

ಕಾಡು ಜಿಂಕೆಯನ್ನು ಹಿಡಿಯಬೇಕೆಂಬವನು ಪಳಗಿಸಿದ (ಸಾಕಿದ) ಜಿಂಕೆಯನ್ನು ತನ್ನೊಡನೆ ಕಾಡಿಗೆ ತೆಗೆದುಕೊಂಡು ಹೋಗುತ್ತಾನೆ ; ಮತ್ತು ಕಾಡಾನೆಯನ್ನು ಹಿಡಿಯಬಯಸುವಾತನು ತನ್ನೊಡನೆ ಸಾಕಿದ ಆನೆಯನ್ನು ಕರೆದುಕೊಂಡು ಹೋಗುತ್ತಾನೆ ತನ್ನ ಜಾತಿಯ ಪ್ರಾಣಿಯೊಂದನ್ನು (ಜಿಂಕೆಯನ್ನು ಯಾ ಆನೆಯನ್ನು) ಕಾಣುವವರೆಗೆ ಸ್ವತಂತ್ರವಾಗಿ ಕಾಡುಪ್ರಾಣಿಯು ಹೊರಗೆ ಬರುವುದಿಲ್ಲ. ಅದೇ ರೀತಿಯಿಂದ – ಇತಿಮಿತಿಗಳಿಂದ ಬದ್ಧವಾದ ಶರೀರದೊಡನೆ ಮಾನವನು (ಹುಟ್ಟಿ ಬಂದ ಹಾಗೆ) ಇರುವಂತೆ ತಾನೂ ಒಬ್ಬ ತಾಯಿಯ ಮಗನಾಗಿ ಹುಟ್ಟಿ ಬಂದ ಹೊರತು ಹಾಗೆ ಹುಟ್ಟಿ ಬಂದು ಗುರುಶಿಷ್ಯಭಾವವನ್ನು ತಾಳಿದ ಹೊರತು ಅವನಿಗೆ ತನ್ನನ್ನು ಸಾಕ್ಷಾತ್ಕರಿಸಿಕೊಡುವುದು ಕಷ್ಟವೆಂದು ಪರಮಾತ್ಮನಿಗೆ (ಪರಮಪುರುಷನಿಗೆ, ಸಚ್ಚಿದಾನಂದನಿಗೆ) ಗೊತ್ತು. ಆದುದರಿಂದ ಆ ದೇವರು (ಪರಮಸತ್ಯವು) ತಾಯಿಯ ಬಸಿರಿನಲ್ಲಿ ಒಂದು ದೇವಾಲಯ ಸ್ವರೂಪದ ದೇಹವನ್ನು ರಚಿಸಿಕೊಳ್ಳುತ್ತಾನೆ. ಇದೇ ಗುರುವಿನ ಅವತರಣ.

ಭೂಲೋಕದಲ್ಲಿ ಪರಮಾತ್ಮನು (ಸಚ್ಚಿದಾನಂದನು) ಗುರುವಿನ ಅವತಾರ ತಾಳಲು ದೇಹಧಾರಣೆ ಮಾಡುವಾಗ, ಮಾನವನಿಗಾಗಿ ಮತ್ತು ಇತರರಿಗಾಗಿ – ಅವನಂತೆಯೇ ಪರಿಪಕ್ವರಾಗಿ ಅವರು ದೈವೋನ್ಮಾದದಲ್ಲಿ ಇರುವುದರಿಂದ – ಅವರೂ ಅಂಥಂಥ ಸ್ಥಳಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಗುರುವಿನ ಹತ್ತಿರದಲ್ಲಿ ಅಥವಾ ದೂರದಲ್ಲಿ ಗುರುವನ್ನು ನೋಡಿ ಅವನೊಡನೆ ಸಂಪರ್ಕ ಬೆಳೆಸುವಂತೆ ಹುಟ್ಟುವ ಎಲ್ಲ ಯೋಜನೆಯನ್ನು ಮಾಡಲಾಗಿರುತ್ತದೆ – ಎಂಬುದು ರೂಢಿ. ಅನುಕೂಲಕ್ಕಾಗಿ ನಾವು ಇಡೀ ಮಾನವ ಕುಲಕ್ಕೆ "ಮಾನವ" ಎಂಬ ಸಂಜ್ಞೆಯನ್ನು ಕೊಟ್ಟ ಪ್ರಕಾರ, ಇಡೀ ವೇದರಾಶಿಯನ್ನು ಗುರುವೆಂದು ಸಂಜ್ಞಾಪಿಸಿದಂತೆ ಮತ್ತು ಶ್ರೀ ಕೃಷ್ಣನನ್ನು ದೇವರ ಅನೇಕಾನೇಕ ನಾಮ–ರೂಪಗಳಿಂದ ಎತ್ತಿ ತೆಗೆದು ಇಷ್ಟ ದೇವತೆ ಎಂದು ಪರಿಗಣಿಸಿದ ಹಾಗೆ – ಅವನ ಗುರುವನ್ನು "ಶ್ರೀ ರಮಣರು" ಎಂದು ಈ ಸಂದರ್ಭದಲ್ಲಿ – ಅಂದರೆ ಮಾನವನು ತನ್ನ ಗುರುವನ್ನು ಸಂದರ್ಶಿಸುವ ಅವಧಿಯಲ್ಲಿ ಭಾವಿಸಿಕೊಳ್ಳೋಣ.

"ನೀನೇಕೆ ಅಷ್ಟು ಖಿನ್ನನಾಗಿದ್ದೀಯೇ? ನಿನಗೆ ಏನಾಯಿತು?" ಎಂದು ಒಡೆಯ ವಿಠ್ಠಲನು ಕೇಳಿದಾಗ ನಾಮದೇವನು, "ಆ ಕುಂಬಾರನು ನನ್ನ ತಲೆಯನ್ನು ತನ್ನ ಕೋಲಿನಿಂದ ಬಡಿದು ಸದ್ದು ಮಾಡಲು ಯತ್ನಿಸಿದನು ; ನಾನವನನ್ನು ತಡೆದೆ ; ಆದ್ದರಿಂದ ಅವನು "ಬೇಯದ ಮಣ್ಣು ಮಡಿಕೆ" ಎಂದು ಅವಮಾನ ಮಾಡಿದನು!"

"ಇತರರ ತಲೆಯನ್ನೂ ಅವನು ಬಡಿದು ನೋಡಿದನೇ?"

"ಹೌದು, ಅವನು ಬಡಿದು ನೋಡಿದನು. ಅವರು ತಕರಾರು ಮಾಡಲಿಲ್ಲ. ನನ್ನ ತಲೆಯನ್ನೂ ಅವನು ಹಾಗೆ ಬಡಿದು ನೋಡುವುದು ಉಚಿತವೇ? ನಾನು ನಿನ್ನ ದೊಡ್ಡ ಭಕ್ತನಲ್ಲವೇ? ಆದ್ದರಿಂದ ನಾನು ನಿನ್ನಿಂದ ಪ್ರೀತಿಸಲ್ಪಟ್ಟಿಲ್ಲವೇ?"

"ಇಲ್ಲೇ ನೀನು ತಪ್ಪಿರುವೆ! ನಿನ್ನ ಅಹಂಕಾರವು ನಾನು ದೇವರ ಭಕ್ತನು ; ನನ್ನ ಭಕ್ತಿ ಹೆಚ್ಚಿನದು ; ನಾನು ದೇವರಿಗೆ ಇಷ್ಟನಾದವನು – ಎಂದು ವಿಚಾರ ಮಾಡಿ ಹಿಗ್ಗುತ್ತದೆ. ಪ್ರೀತಿಗೆ ಪ್ರತಿ ಪ್ರೀತಿಯನ್ನು ತೋರಿಸುವುದು ನನ್ನ ಜವಾಬ್ದಾರಿಯಾದುದರಿಂದ ನಿನ್ನನ್ನು ತಿದ್ದಲು ನನ್ನಿಂದ ಸಾಧ್ಯವಾಗಲಿಲ್ಲ ; ನಿಜ ಜ್ಞಾನವನ್ನು ಕಲಿಸಲು ಶಕ್ಯವಾಗಲಿಲ್ಲ. ಹೀಗೆ ನಿನ್ನನ್ನು ಮುದ್ದು ಮಾಡಲಾಯಿತು ಮತ್ತು ನನ್ನಿಂದ ದುಶ್ಚಟಕ್ಕೆ ಇಳಿಸಲಾಯ್ತು. ಕಲಿಯಲು ಮಾತಾಪಿತೃಗಳು ಮಕ್ಕಳನ್ನು ಇತರರೆಡೆಗೆ ಕಳಿಸುವಂತೆ ನಾನೀಗ ನಿನ್ನನ್ನು ನಮ್ರತೆಯನ್ನೂ ಜ್ಞಾನವನ್ನೂ ಗಳಿಸಲೆಂದು ಗುರುವಿನೆಡೆಗೆ ಕಳಿಸಬೇಕಾಗಿದೆ. ಅಲ್ಲಿಯವರೆಗೆ ನೀನು ಖಂಡಿತವಾಗಿಯೂ, ಒಂದು ಬೇಯದ ಮಣ್ಣು ಮಡಿಕೆ." ನಾಮದೇವನ ಇಷ್ಟ ದೇವತೆಯಾದ ಪಂಡರ ಪುರದ ವಿಠ್ಠಲನ ತೀರ್ಪು ಇಂಥದ್ದಾಗಿತ್ತು.

"ಏನು! ನಿನಗಿಂತ ಹೆಚ್ಚಿನವನಾದ ಗುರು ಎಂಬಾತನೊಬ್ಬನಿದ್ದಾನೆಯೇ?"

"ಹೌದು, ಮೃತ್‌ಕುಂಭವನ್ನು ಪಕ್ವಗೊಳಿಸುವುದು ಅಂದರೆ, ನೀನು ಬ್ರಹ್ಮಾತ್ಮಜ್ಞಾನವನ್ನು ಪಡೆಯುವಂತೆ ಮಾಡುವುದು ನನ್ನ ಮೂಲಕ ಸಾಧ್ಯವಾಗದು–ನಾನು ನಿನ್ನ ಇಷ್ಟದೇವತೆ ; ಆದ್ದರಿಂದ ನಾನು ನಿನಗೆ ನಿನ್ನ ಮಾತಾಪಿತೃಗಳಂತಿದ್ದೇನೆ. ಗುರುವಿನಿಂದ ಮಾತ್ರ ಅದನ್ನು ಮಾಡಲು ಸಾಧ್ಯ. ನಿನ್ನ ಗುರುವು ಹತ್ತಿರದ ಕಾಡಿನಲ್ಲಿರುವ ಮುರುಕು ದೇವಾಲಯದಲ್ಲಿ ಇದ್ದಾನೆ. ಅವನೆಡೆಗೆ ಹೋಗು."

ಒಡೆಯ ವಿಠ್ಠಲನಿಂದಲೂ ಋಷಿಗಳ ಸಭೆಯಲ್ಲಿಯೂ ನಾಮದೇವನು ಅವಮಾನಿತನಾದುದರಿಂದ, ಏನಾದರೂ ಆಗಲಿ, ಸತ್ಯಜ್ಞಾನವನ್ನು ತಾನು ಪಡೆಯಲೇಬೇಕು ಎಂಬ ತೀಕ್ಷ್ಣಭಾವನೆ ಅವನಲ್ಲಿ ಉಂಟಾಯ್ತು. ಆದುದರಿಂದ ಅವನು ತನ್ನ ಇಷ್ಟದೇವತೆಯನ್ನು ಬಿಟ್ಟು ಕಾಡಿಗೆ ಹೋದನು. ಮುರುಕುದೇವಸ್ಥಾನವನ್ನು ಸಮೀಪಿಸಿದ ಹಾಗೆ ಅಲ್ಲಿ ಒಬ್ಬ ಮುದುಕನು ಶಿವಲಿಂಗದ ಮೇಲೆ ತನ್ನ ಕಾಲುಗಳನ್ನು ಚಾಚಿ ಬಿದ್ದುಕೊಂಡಿರುವುದನ್ನು ಅವನು ನೋಡಿದನು. ಘೋರಪಾಪಕರವೆಂದು ತೋರಿದ ಆ ನೋಟದಿಂದ ದಿಗ್ಭ್ರಾಂತನಾಗಿ ಅವನು, "ಒಡೆಯ ವಿಠ್ಠಲನು ಈ ಮುದುಕನೇ ಆ ಪರಮ ಜ್ಞಾನವನ್ನು ಬೋಧಿಸುವವನು ಎಂದು ಹೇಳಿದನು ; ಆದರೆ ಇವನಿಗೆ ಶಿವಲಿಂಗದ (ತಲೆಯ) ಮೇಲೆ ಕಾಲು ಚಾಚಬಾರದು ಎಂಬ ಸರಳಸತ್ಯ ಕೂಡಾ ಗೊತ್ತಿಲ್ಲ." ಎಂದುಕೊಂಡು ಮುದುಕನ ಹತ್ತಿರ ಹೋದನು.

"ಹತ್ತಿರ ಬಾ ; ವಿಠ್ಠಲ ನಿನ್ನನ್ನು ಕಳಿಸಿಕೊಟ್ಟಿಲ್ಲವೇ?" ಎಂದು ಆ ಮುದುಕನು ಹೇಳಿದನು. ಇದನ್ನು ಕೇಳಿ ತಬ್ಬಿಬ್ಬಾದರೂ ನಾಮದೇವನು ಆಗಿಂದಾಗ, "ಸ್ವಾಮಿ, ತಾವು ತ್ರಿಕಾಲ ಜ್ಞಾನಿಗಳಾಗಿ ತೋರುತ್ತೀರಿ. ಹೀಗಿರುವಾಗ ಶಿವಲಿಂಗದ ಮೇಲೆ ಕಾಲು ಚಾಚಬಾರದೆಂಬುದು ತಮಗೆ ಗೊತ್ತಿರುವಂತೆ ಕಾಣುವುದಿಲ್ಲವಲ್ಲಾ ಇದೇನು?"

ಭಕ್ತಿ ಎಷ್ಟೇ ಅಪಾರವಾಗಿದ್ದರೂ ಪ್ರಯೋಜನವಿಲ್ಲ ; ನಮ್ರತೆ ಇಲ್ಲದ ಮನಸ್ಸು ಗುರುವನ್ನು ಸಂದರ್ಶಿಸಲು ಅಥವಾ ಅವನ ಸಂದರ್ಶನದ ನಿಜವಾದ ಫಲವನ್ನು ಪಡೆಯಲು ಅನರ್ಹ. ಭಗವಾನ್ ಶ್ರೀ ರಮಣರ ಎದುರಿನಲ್ಲಿ ಕಲಿಯಬಂದ ಕೆಲವರು ಸಾಕ್ಷಾತ್ತಾಗಿ ಶ್ರೀ ರಮಣರಿಗೇ ಕಲಿಸಲಾರಂಭಿಸಿದ್ದನ್ನೂ ಅವರ ಸೇವೆಗೆಂದು ಬಂದ ಕೆಲವರು ಅವರ ಮೇಲೆ ಪ್ರಭುತ್ವ ನಡೆಯಿಸಲಾರಂಬಿಸಿದ್ದನ್ನೂ ಒಂದಕ್ಕಿಂತ ಹೆಚ್ಚು ಸಲ[೨೩]

---

೨೩. (೧) ಒಮ್ಮೆ ಒಬ್ಬ ಭಕ್ತನು, ಸಮಾಜ ಸುಧಾರಕನಾಗಿದ್ದು, ಶ್ರೀ ಭಗವಾನ್ ರಮಣರಿಗೆ ಆಶ್ರಮದ ಭೋಜನ ಶಾಲೆಯಲ್ಲಿ ಸಮಾನತೆಯನ್ನು ಪಾಲಿಸುತ್ತಿಲ್ಲ ಎಂದುದೂರು ಕೊಟ್ಟನು. "ನೀನು ಇಲ್ಲಿಗೆ ಬಂದ ಮೇಲೆ, ನೀನು ಮನಃಶಾಂತಿಯನ್ನು ಪಡೆಯಬೇಕೆಂದು ಬಯಸಿರುವುದರಿಂದ, ಅದನ್ನು ಮಾತ್ರ ಅವಧಾನಿಸು" ಎಂದು ಶ್ರೀ ರಮಣರು ಉತ್ತರವಿತ್ತರು, ಭಕ್ತನು. "ಇಡೀ ಜಗತ್ತಿಗೆ ನಾನು ಸಮಾನತೆಯನ್ನು ತರಲು ಬಯಸುತ್ತೇನೆ" ಎಂದು ಮಾರುತ್ತರವಿತ್ತನು. "ನೀನು ಹಾಗೆ ಮಾಡಬಲ್ಲೆಯಾದರೆ ಅದು ಬಹಳ ಒಳಿತು ! ಇಡೀ ಜಗತ್ತು ಸುಧಾರಿಸಿದಾಗ ಈ ಸ್ಥಳವು ಜಗತ್ತಿನಲ್ಲೇ ಇರುವುದರಿಂದ ಈ ಸ್ಥಳವೂ ಸುಧಾರಿಸುವುದಲ್ಲವೇ?" ಎಂದು ಹಾಸ್ಯಮಯ ಉತ್ತರವನ್ನು ಶ್ರೀ ರಮಣರು ಕೊಟ್ಟರು." ಈ ಸ್ಥಳದಿಂದಲೇ ನಾನು ನನ್ನ ಸೇವೆಯನ್ನು ಆರಂಭಿಸಬೇಕೆಂದಿದ್ದೇನೆ!" ಎಂದು ಹಠದಿಂದ ಭಕ್ತ ಮುಂಬರಿಸಿದನು. ಈ ಸಂದರ್ಭದಲ್ಲಿ ಭಗವಾನ್ ಶ್ರೀ ರಮಣರು, "ಅಯ್ಯೋ, ಎಂಥ ಕರುಣಾಸ್ಪದ ಪ್ರಸಂಗ! ನಿನ್ನ ಮನಸ್ಸನ್ನು ಅನವಶ್ಯಕವಾಗಿ ಅಷ್ಟೇಕೆ ಕೆಡಿಸಿಕೊಳ್ಳುವೆ?" ಎಂದು ಉದ್ಗರಿಸಿದ್ದಲ್ಲದೆ, "ನಿದ್ರೆ ಮಾಡ ಹೋಗು ; ಅಲ್ಲಿ ಮಾತ್ರ ಎಲ್ಲರೂ ಸಮಾನರು!" ಎಂದು ಬುದ್ಧಿ ಹೇಳಿದರು. ಹೀಗೆ ಅವರು ಗಂಭೀರ ಅರ್ಥಧ್ವನಿಯುಳ್ಳ ಅನುಗ್ರಹ ವಾಕ್ಯಗಳನ್ನು ಆಡಿದರು. ಒಮ್ಮೆ ಭಗವಾನ್ ಶ್ರೀ ರಮಣರು, "ಇಲ್ಲಿಗೆ ಬಂದವರು ನನಗೆ ಬಹಳ ಕಲಿಸುತ್ತಾರೆ ; ಅವರಿಂದ ನಾನು ಅನೇಕ ಸಂಗತಿಗಳನ್ನು ಕಲಿಯುತ್ತೇನೆ" ಎಂದು ಹಾಸ್ಯಮಾಡಿ... ಮೊದಲು ಇಲ್ಲಿಗೆ ಬಂದು ಕೆಲವರು ಭಗವಾನ್ ಮಹರ್ಷಿಗಳಿಗೆ ತಮ್ಮ ಭಕ್ತಿಯನ್ನು ತೋರಿಸುತ್ತಾರೆ. ಅವರು ಆನಂದಾತಿರೇಕದಿಂದ ಹಾಡಿ ಕುಣಿದು, "ಭಗವಾನ್ ಮಹರ್ಷಿಗಳೇ ನಿಮ್ಮ ದಾಸರಾಗಲು ನಮಗೆ ಅಪ್ಪಣೆ ಕೊಡಿರಿ" ಎಂದು ಘೋಷಿಸುತ್ತಾರೆ ಮತ್ತು ತಮ್ಮ ಸೇವೆಯನ್ನು ಪ್ರಾರಂಭಿಸುತ್ತಾರೆ. ಬಹು ಬೇಗನೆ ಅವರ ಭಕ್ತಿ ಬೆಳೆದು ನನ್ನ ಆಹಾರದ ಬಗ್ಗೆ ಬಹಳ ಚಿಂತೆ ಮಾಡಿ ಅದು ನಿಮಗೆ ಪಥ್ಯ–ಇದಲ್ಲ" ಎಂದು ಹೇಳುವಷ್ಟರವರೆಗೆ ಹೋಗುತ್ತಾರೆ. ಒಂದು ಅಥವಾ ಎರಡು ತಿಂಗಳುಗಳಲ್ಲಿ ಹೊಸಬರು ಕೆಲವರು ಬಂದು ಭಕ್ತಿಯಿಂದ ಕೆಲ ತಿಂಡಿಗಳನ್ನು ಕೊಡುತ್ತಾರೆ;

ನೋಡಿಲ್ಲವೇ? ಅಪಕ್ವ ಮನಸ್ಸು ಗುರುವಿನೆದುರಿನಲ್ಲಿ ಹೀಗೇ ನಡೆದುಕೊಳ್ಳುತ್ತದೆ. ಅವನ ನಿತ್ಯದ ಕೆಲಸಗಳಲ್ಲಿಯೂ ತಪ್ಪನ್ನು ಹುಡುಕುತ್ತದೆ ಮತ್ತು ನಾಮದೇವನಂತೆ ಅದು ಆ ಕೆಲಸಗಳನ್ನು ಸರಿಪಡಿಸಲು ಯತ್ನಿಸುತ್ತದೆ. ಆದರೆ ಗುರುರೂಪದಲ್ಲಿ ಮಾನವ ದೇಹಧಾರಣೆ ಮಾಡಿ ಅವತರಿಸಿದ ಅವನೀಗ ಪರಮಾತ್ಮನೇ (ಪರಮ ಪದಾರ್ಥವೇ) ಆಗಿರುವುದರಿಂದ ಆತನು ತನ್ನ ಭಕ್ತರು ಅಜ್ಞಾನದಿಂದ ದೂರಿದ್ದನ್ನೂ ಆನಂದಾತಿರೇಕದಿಂದ ಹೊಗಳಿದ್ದನ್ನೂ ಲೆಕ್ಕಿಸುವುದಿಲ್ಲ. ಅದೇ ಮೇರೆಗೆ ಈ ಮುದುಕನು ಬಹಳ ತಾಳ್ಮೆಯಿಂದ ನಾಮದೇವನ ಪ್ರಶ್ನೆಗೆ, "ಹಾಗೇನು, ಮಗು? ನನ್ನ ಕಾಲುಗಳು ಲಿಂಗದ ಮೇಲೆ ಇವೆಯೇ? ನೋಡು, ನಾನು ಇಷ್ಟು ಮುದುಕನಾಗಿರುವುದರಿಂದ ನನ್ನ ಕಾಲುಗಳೆಲ್ಲಿವೆ ಎಂಬುದು ನನಗೆ ಕಾಣಿಸುವುದಿಲ್ಲ ; ನನ್ನ ಕಾಲಿನಲ್ಲಿ ಯಾವ ಸಂವೇದನೆಯೂ ಉಂಟಾಗದು. ಅವುಗಳನ್ನು ನಾನು ಅತ್ತಿತ್ತ ಕದಲಿಸಲಾರೆ ; ಆದ್ದರಿಂದ ಅವುಗಳನ್ನು ಲಿಂಗವಿಲ್ಲದೆಡೆಗೆ ಸರಿಸಿ ಇಡು" ಎಂದು ಉತ್ತರವಿತ್ತನು. ತನ್ನ ಗುರುವು ತಾನು ಮಾಡಿದ ನಿರ್ಭರ್ತ್ಸನೆಯನ್ನು ಸ್ವೀಕರಿಸಿದನೆಂದು ತಿಳಿದು ನಾಮದೇವನು ಸಂತೋಷದಿಂದ ಕೂಡಲೇ ಮುದುಕನ ಪಾದಗಳನ್ನು ಹಿಡಿದೆತ್ತಿ ಲಿಂಗವಿಲ್ಲದಿದ್ದಲ್ಲಿ ಇಟ್ಟನು. ಏನಾಶ್ಚರ್ಯ! ಮುದುಕನ ಕಾಲ ಕೆಳಗೆ ಲಿಂಗ ಚಿಗುರಿತು. ನಾಮದೇವನು ಎಲ್ಲೆಲ್ಲಿ ಮುದುಕನ ಕಾಲುಗಳನ್ನು ಎತ್ತಿ ಇಟ್ಟರೂ ಅಲ್ಲೆಲ್ಲಾ ಅವುಗಳ ಕೆಳಗೆ ಲಿಂಗವೊಂದು ಚಿಗುರಿ (ಮೂಡಿ) ಬಿಡುತ್ತಿತ್ತು! ಬಹುಶಃ ನಾಮದೇವನು ಪ್ರಭುವಿಠ್ಠಲ ಸಂಪರ್ಕದಿಂದ ನಮ್ರತೆಯೊಂದನ್ನು ಬಿಟ್ಟು ಮಿಕ್ಕೆಲ್ಲಾ ಅಂಶಗಳಲ್ಲಿ ಅವನು ಮನಸಾ ಪರಿಪಕ್ವನಾಗಿದ್ದನು–ಸ್ಪರ್ಶವೇದಿಯೊಂದರ ಸ್ಪರ್ಶಕ್ಕಾಗಿ ಕಾಯುತ್ತಿದ್ದಿರಬೇಕು. ಆದುದರಿಂದ ಅಷ್ಟು ಸಲ ತನ್ನ ಗುರುವಿನ ಪಾದಗಳನ್ನು ಮುಟ್ಟುವ ಅವಕಾಶ ದೊರೆತುದರಿಂದ ಅವನ ಹೃದಯವು ಜಾಗ್ರದ್ದಶೆಯನ್ನು ಮುಟ್ಟಿತು. ತನ್ನ ಗುರುವಿನ ಪಾದಗಳನ್ನು ಇಡಲು ಅಪವಿತ್ರ ಸ್ಥಳವು ಎಲ್ಲಿಯೂ ಕಾಣದಾಗಲು ತನ್ನ ತಲೆಯನ್ನು ಅಪವಿತ್ರ ಸ್ಥಳ ಎಂಬ ತೀರ್ಮಾನಕ್ಕೆ ಅವನು ಬಂದು ಮುಟ್ಟಿದನು. ಹೀಗೆ ನಮ್ರತೆಯ ಪರಾಕಾಷ್ಠೆಗೆ ತಲುಪಿದ ನಾಮದೇವನು ತನ್ನ ತಲೆಯ ಮೇಲೆ ತನ್ನ ಗುರುವಿನ ಪಾದಗಳನ್ನು ಇಟ್ಟುಕೊಂಡನು! ಈಗ ಏನಾಗಬೇಕು? ನಾಮದೇವನೀಗ ಶಿವಲಿಂಗವಾಗಬೇಕು – ಅರ್ಥಾತ್ ಅವನು ಅದ್ವೈತ ಸತ್ಯ, ಬ್ರಹ್ಮಾತ್ಮ, ಶಿವನಾಗಿ ಬಿಡುತ್ತಾನೆ.

"ಮಧ್ಯಮ–ಪ್ರಥಮ ಪೌರುಷೇಯ ಪದಾರ್ಥಗಳಿರುವ ಪ್ರತಿಯೊಂದು ಸ್ಥಳವೂ ಶಿವಲಿಂಗ ಸ್ಥಾಪನೆಗೆ ಯೋಗ್ಯ ಎಂದು ನಾಮದೇವ ಶೋಧಿಸಿ ತಿಳಿದರೂ ತನ್ನ ಬ್ರಹ್ಮಾತ್ಮದತ್ತ ಅವನ ಅವಧಾನವನ್ನು ಸೆಳೆಯುವವರೆಗೆ ಅವನಲ್ಲಿ ನಿಜಜ್ಞಾನ ಅರಳಲಿಲ್ಲ – ನಿಜಜ್ಞಾನವು ಉತ್ತಮ ಪುರುಷ–ಗುರುಪಾದಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡ ಕಾರ್ಯವು

ಹಳಬರು ಅವುಗಳನ್ನು ನಾನು ಸ್ವೀಕರಿಸುವುದಕ್ಕೆ ಕೆಲ ನಿಯಮಗಳನ್ನು (ಶರ್ತಗಳನ್ನು) ಹಾಕುತ್ತಾರೆ. ಕೊಟ್ಟವನಿಗೆ ಸಂತೋಷವಾಗಲೆಂದು ನಾನು ಸ್ವಲ್ಪ ತೆಗೆದುಕೊಂಡರೆ ಅವರು, "ಇದು ಒಳಿತಲ್ಲ ; ಇದನ್ನು ತೆಗೆದುಕೊಳ್ಳಬಾರದು" ಎಂದು ದೋಷ ಹೇಳುತ್ತಾರೆ. ಇನ್ನೂ ಕೆಲವು ತಿಂಗಳುಗಳು ಕಳೆದ ಮೇಲೆ ನನ್ನ ಮೇಲಿನ ಭಕ್ತಿಯಿಂದ ಅವರು ಬುದ್ಧಿ ಹೇಳುತ್ತಾ ಬಂದುದರಿಂದ ಅವರಿಗೆ ಅವಿಧೇಯನಾಗಿ ವರ್ತಿಸಲು ನನಗೆ ಹೆದರಿಕೆಯಾಗುವುದು. ಆಗ ಎಂದಿನಂತೆ ಅವರು ನನಗೆ ಒಡೆಯರಾಗುವರು ಮತ್ತು ನಾನು ಅವರ ದಾಸನಾಗುತ್ತೇನೆ. ಒಬ್ಬನು ಸ್ವಾಮಿಯಾದರೆ ಅವನು ಇನ್ನೊಬ್ಬರು ಹೇಳಿದ್ದನ್ನು ತಪ್ಪೆನ್ನಬಾರದು. ಸ್ವಾಮಿಯಾದ ಮೇಲೇ ಸ್ವಾಮಿತನವೆಂದರೆ ಏನೆಂಬುದರ ಅನುಭವವು ಲಭ್ಯವಾಗುತ್ತದೆ!"

ಅವಧಾನದ ಆಕರ್ಷಣೆಯಾಗುವವರೆಗೆ ಅವನಿಗೆ ಸತ್ಯಜ್ಞಾನ ಮೂಡಲಿಲ್ಲ” ಎಂಬುದನ್ನಿಲ್ಲಿ ಗಮನಿಸತಕ್ಕದ್ದು. ಆಗ ಮಾತ್ರ ಅವನಿಗೆ ಸತ್ಯದ ಸಾಕ್ಷಾತ್ಕಾರ ಲಭಿಸಿತು. ಇದು ಶ್ರೀ ಭಗವಾನ್ ರಮಣರ ಉಪದೇಶವನ್ನು ಸಿದ್ಧಮಾಡಿ ತೋರಿಸುತ್ತದೆ : ಆತ್ಮಜ್ಞಾನವಾಗುವವರೆಗೆ (ಬ್ರಹ್ಮ ಸಾಕ್ಷಾತ್ಕಾರವಾಗುವವರೆಗೆ)” “ಸರ್ವಂಖಲ್ವಿದಂ ಬ್ರಹ್ಮ” ಎಂಬ ಜ್ಞಾನವು ಕೇವಲ ಊಹೆಯಾಗಿರುವುದಲ್ಲದೆ – ಸಾಧಕನು ಜಗತ್ತನ್ನು ಪರಬ್ರಹ್ಮವೇ ಎಂದು ಒಪ್ಪಿ ಹಾಗೇ ನೋಡಲು ಯತ್ನಿಸಿದರೂ ಅವನ ಬ್ರಹ್ಮಜ್ಞಾನವು (ಸರ್ವವೂ ಪರಬ್ರಹ್ಮನೇ ಎಂಬ ಜ್ಞಾನವು) ಪೂರ್ಣತೆಯನ್ನು ಮುಟ್ಟುವುದಿಲ್ಲ ಮತ್ತು (ಪಾರಮಾರ್ಥಿಕವಾಗಿ) ಸತ್ಯವಾಗುವುದಿಲ್ಲ.

“.... ಆತ್ಮಶೋಧದ ಮೂಲಕ ಉತ್ತಮ ಪುರುಷರ ಸ್ವರೂಪದ ಅಹಂಕಾರವು ನಿಂತು ಹೋದ ಮೇಲೆ, ಆ ಪುರುಷದ ನಿತ್ಯ ಸತ್ಯದಲ್ಲಿ ಕರಗಿ ಹೋದ ಮೇಲೆ, ಮಧ್ಯಮ–ಪ್ರಥಮ ಪುರುಷ ವಾಚ್ಯಗಳು ಕೊನೆಗೊಳ್ಳುವುವು. ಉತ್ತಮ–ಮಧ್ಯಮ ಪ್ರಥಮ ಪುರುಷ ವಾಚ್ಯಗಳೆಲ್ಲವೂ ಒಂದಾಗಿ ಪ್ರಕಾಶಿಸಿರುವುದೇ ಬ್ರಹ್ಮಾತ್ಮದ ಸ್ವರೂಪ.

– “ಉಳ್ಳದು ನಾರ್ಪ.ದು”–ಪದ್ಯ–೧೪

ಪರಮಸತ್ಯದ ಜ್ಞಾನವನ್ನು ಪಡೆದ ನಾಮದೇವನೀಗ ಮನೆಗೆ ಮರಳಿದನು. ಕೆಲ ದಿನಗಳಾದ ಮೇಲೆ ಅವನ ಮನೆಗೆ ಒಡೆಯ ವಿಠ್ಠಲನೇ ಸ್ವತಃ ಹೋಗಿ, “ಇಂದಿನ ದಿನಮಾನಗಳಲ್ಲಿ ನನ್ನನ್ನು ನೋಡಲು ನೀನೇಕೆ ಬರುವುದಿಲ್ಲ” ಎಂದು ಕೇಳಿದನು. “ಒಡೆಯನೇ, ಈಗಲೂ ನನಗೆ ಪರೀಕ್ಷೆಯೇ? ಈಗ ನಾನೆಲ್ಲಿದ್ದೇನೆ? ನೀನೊಬ್ಬನೇ ಇರುವೆ ; ಆದ್ದರಿಂದ ನಾನಿಲ್ಲ! ಅಂದ ಮೇಲೆ ಎಲ್ಲಿ ಮತ್ತು ಯಾವಾಗ ನಾನು ನಿನ್ನೊಡನೆ ಇಲ್ಲ?” ಎಂದು ನಾಮದೇವನು ಉತ್ತರವಿತ್ತನು. “ಈ ಮಣ್ಣುಮಡಿಕೆ ಬೆಂದಿದೆ!” ಎಂದು ಉದ್ಗರಿಸಿ ಒಡೆಯ ವಿಠ್ಠಲನು ಅದೃಶ್ಯನಾದನು.

ಈ ಕಥೆಯಿಂದ, “ಇಷ್ಟ ದೇವತೆಯ ಮೇಲಿನ ಭಕ್ತಿಗೂ ಇತಿಮಿತಿ ಇದೆ ಮತ್ತು ಇಷ್ಟ ದೇವತೆಯು ತನ್ನ ಭಕ್ತನನ್ನು ಒಬ್ಬ ಗುರುವಿನ ಬಳಿಗೆ ಕಳಿಸಬೇಕು–ಆ ಗುರುವಿನಿಂದ ಭಕ್ತನು ಪರಮಜ್ಞಾನವನ್ನು ಪಡೆಯಬೇಕು” ಎಂಬುದು ಸ್ಪಷ್ಟವಾಗುವುದಿಲ್ಲವೆ? ಈಗ ನಾವು ನಮ್ಮ ಮನುಷ್ಯನತ್ತ ತಿರುಗೋಣ :

ಅವನ ಇಷ್ಟ ದೇವತೆಯು–ಯಾರಿಗಾಗಿ ನಮ್ಮ ಮನುಷ್ಯನು ಕರುಣಾಜನಕವಾಗಿ ಹುಡುಕಿಕೊಂಡು ಅಲೆಯುತ್ತಿದ್ದಾನೆಯೋ ಆ ದೇವರು–ತಿರುಚಿಯಲ್ಲಿ ಒಂದು ಮನುಷ್ಯರೂಪವನ್ನು ಧರಿಸುತ್ತಾನೆ. ತಿರುಚಿಯು ಈ ಜಗತ್ತಿನ ಸುದೂರದಲ್ಲಿ ಇರುವ ಮೂಲೆಯಲ್ಲಿರುವ ಸ್ಥಳ. ತಿರುಚಿಯಲ್ಲಿದ್ದ ಯಾರೋ ಆದ ದಂಪತಿಗಳೆಂದರೆ ಸುಂದರಂ ಅಯ್ಯರ್ ಮತ್ತು ಅಲಗಮ್ಮಾಳ್. ಶ್ರೀ ರಮಣರು ಅವರಿಗೆ ಮಗನಾಗಿ ಹುಟ್ಟಿದರು. ಅವರು ಪರಮೋಚ್ಚ ಪದಾರ್ಥ ಸ್ವರೂಪರು. ಕೇವಲ ಮಾನವರೂಪ ಧರಿಸಿದ್ದಾರೆ ಅಷ್ಟೇ. ಹಾಗೆ ಅವರು ಮಾಡಲು ಜಗತ್ತಿಗೆ ನಿಜಜ್ಞಾನವನ್ನು ಉಪದೇಶಿಸುವುದೇ ಉದ್ದೇಶ. ಮರಣಭಯ ಅವರಿಗೆ ಉಂಟಾದದ್ದು–ಅವರು ಆತ್ಮಶೋಧದಲ್ಲಿದ್ದುದು–ಇವೆಲ್ಲಾ ನೆಪಗಳು. ಮುಂದೆ ಅವರ ಚರಿತ್ರೆಯನ್ನು ಬರೆಯುವವರಿಗೆ ಆ ಮರಣಭಯವು ಅವರ ಆತ್ಮಶೋಧಕ್ಕೆ ಕಾರಣ ಎಂದು ಅರ್ಥಯಿಸಿ ಬರೆಯಲು ಅನುಕೂಲ ಮಾಡಿಕೊಟ್ಟವು–ಅಷ್ಟೇ ; ಏಕೆಂದರೆ, ಅವರು ತ್ರಿಕಾಲಗಳಲ್ಲಿಯೂ ಒಂದೇ ಸಮನಾಗಿ ಪ್ರಕಾಶಿಸುತ್ತಿರುವವರು (ಸಚ್ಚಿದಾನಂದ

ಸ್ವರೂಪರು). ಅವರು ಅರುಣಾಚಲಕ್ಕೆ ಬಂದರು. ಅರುಣಾಚಲವು ಮನುಷ್ಯರೂಪದ ಹೆಚ್ಚು ಸ್ಥೂಲವಾದ ರೂಪ (ವಿಶ್ವರೂಪ). ಮನುಷ್ಯರೂಪದ ಮರೆಯೊಳಗಿನಿಂದ ಈಗ ಅವರು ಕೆಲಸ ಮಾಡುತ್ತಿದ್ದಾರೆ ಮತ್ತು ನಮ್ಮ ಮಾನವನಿಗಾಗಿ ಕಾಯುತ್ತಿದ್ದಾರೆ.

ನಮ್ಮ ಮಾನವನು ನಮ್ಮ ಪಾಠಶಾಲೆಯ ಮೂರನೆಯ ಇಯತ್ತೆಯ "ಬ" ವಿಭಾಗದಲ್ಲಿ ಓದುತ್ತಿದ್ದಾನೆ ; ತನ್ನ ಇಷ್ಟ ದೇವತೆಯನ್ನು ಮಾತ್ರ ಬಯಸುವಷ್ಟು ಅವನೀಗ ಪೂರ್ಣ ಪರಿಪಕ್ವವಾಗಿದ್ದಾನೆ. ಅದರಿಂದ ಅವನು ತನ್ನ ಇಷ್ಟದೇವತೆಯನ್ನಷ್ಟೇ "ಕೃಷ್ಣ, ಕೃಷ್ಣ" ಎಂದು ಗಟ್ಟಿಯಾಗಿ ಕರೆಯುತ್ತಾನೆ. ಅವನ ಸ್ನೇಹಿತರು ಅವನ ಹತ್ತಿರ ಬಂದು ನೋಡಿ, "ನೀನು ನಿನ್ನ ಇಷ್ಟದೈವವನ್ನು ಕುರಿತು ಧಗೆಬಿಡುತ್ತಾ ಕೂಗುತ್ತಿದ್ದಿಯೆ; ಗುರುವಿಲ್ಲದೆ ದೇವರ ಸಾಕ್ಷಾತ್ಕಾರ ಲಭಿಸದೆಂದು ಋಷಿಗಳು ಹೇಳಿದ್ದು ನಿನಗೆ ಗೊತ್ತಿಲ್ಲವೇ? ಆಲಿಸು – ತಿರುವಣ್ಣಾಮಲೈ ಎಂಬಲ್ಲಿ ರಮಣರು ಎಂಬ ಒಬ್ಬರಿದ್ದಾರೆ. ಅನೇಕರು ಅವರನ್ನು ಸಾಕ್ಷಾತ್ಕಾರ ಮಾಡಿಕೊಂಡ ಋಷಿಗಳೆಂದು ಹೊಗಳುತ್ತಾರೆ. ಅವರು ಪ್ರೇಮಮೂರ್ತಿಗಳಾಗಿದ್ದಾರೆ. ನಿನ್ನ ಇಷ್ಟದೇವನನ್ನು ಪುನಃ ಪಡೆಯಲು ಅವರ ಹತ್ತಿರ ಹೋಗಿ ನೀನೇಕೆ ಪ್ರಾರ್ಥಿಸಬಾರದು?" ಎಂದು ಬುದ್ಧಿ ಹೇಳಿದರು.

"ಹಾಗೇನು?" "ಹಾಗಾದರೆ ನಾನು ಹೋಗಿ ಅವರನ್ನು ನೋಡುವೆನು" ಎಂದು ಹೇಳಿ ಆ ಮನುಷ್ಯನು ಗುರುಗಳನ್ನು ಸಂದರ್ಶಿಸಲು ಹೋದನು.

ಅವನೆದುರು ಒಂದು ಮನುಷ್ಯಾಕಾರವು ಕುಳಿತಿತ್ತು. ದುಷ್ಟರ ಬಗೆಗೆ ಕೂಡಾ ಉಕ್ಕಿ ಹರಿಯುವ ಪ್ರೇಮವುಳ್ಳ ಆ ರೂಪವು ತನ್ನ ಹತ್ತಿರಕ್ಕೆ ಬಂದು ಹೋಗುವವರ ಬಗೆಗೆ ಉದಾಸೀನವಾಗಿರುವಂತೆ ತೋರಿತು. ಲೋಹ ಚುಂಬಕದಂತೆ ಅದು ಅವನನ್ನು ಆಕರ್ಷಿಸಿದರೂ ತನ್ನೆದುರು ಅವನನ್ನು ಬರುವಂತೆ ಮಾಡಿದರೂ ಅದರ ಮುಖವು ಅಂಥ ಅನುಗ್ರಹದ ಯಾವ ಕುರುಹುಗಳನ್ನೂ ವ್ಯಕ್ತಪಡಿಸದಾಗಿದೆ. ಅದಕ್ಕೆ ಬೇಕು–ಬೇಡಗಳೇ ಇಲ್ಲ. ಅದು ಸಾಕ್ಷೀಭೂತವಾಗಿದೆ. ಅಂಥ ವೇಷಾಂತರದಲ್ಲಿ ಗುರುಗಳು ಆ ಮನುಷ್ಯನಿಗೆ ತೋರಿಸಿಕೊಂಡರು. ಆದರೆ ಅವನೆದುರು ಕುಳಿತಿರುವುದಾದರೂ ಏನು? ಅದು ಅವನ ಇಷ್ಟದೇವತೆ. ಅದು ಪ್ರೇಮದ ಒಂದು ಲೋಹ ಚುಂಬಕಗಿರಿ. ಅದು ಜೀವಾತ್ಮನನ್ನು ಆಕರ್ಷಿಸುತ್ತದೆ. ಅದನ್ನೇ ಈವರೆಗಿನ ಕಾಲದಲ್ಲಿ ಅವನು ಪೂಜಿಸುತ್ತಿದ್ದದ್ದು. ಅವನ ಪೂಜೆ ಶುದ್ಧ ಭಕ್ತಿಯಿಂದ ಕೂಡಿತ್ತು. ಎಲ್ಲವನ್ನೂ ಪರಿತ್ಯಜಿಸಿದ ಮೇಲೆ ಅವನ ಬಳಿಗದು ಬಂದಿತ್ತು. ಅವನು ಬಿಟ್ಟದ್ದು ಶರೀರ, ಸಂಬಂಧಿಕರು ಮತ್ತು ಜಗತ್ತುಗಳ ಮೇಲಿನ ವ್ಯಾಮೋಹವನ್ನು ಅಲ್ಲವೇ? ಅವುಗಳನ್ನೆಲ್ಲಾ ಅವನು ಹುಲ್ಲುಕಡ್ಡಿಗೆ ಸಮಾನವೆಂದು ತಿಳಿಯಲಿಲ್ಲವೇ? ಹೊರಗೆ ಅದು ಮಾನವಾಕೃತಿಯನ್ನು ತಳೆದಿದ್ದರೂ ಈಗ ತನ್ನತ್ತ ಸೆಳೆಯುತ್ತಿರುವ ಆ ಆಕೃತಿಯು ಅವನ ಇಷ್ಟದೈವವೇ ಅಲ್ಲವೇ? ಮನುಷ್ಯನು ಆ ಗುರುಗಳ ಪಾದಗಳೆಡೆಯಲ್ಲಿ ಬಿದ್ದನು ; ಅನಂತರ ಪುನಃ ಎದ್ದು ನಿಂತನು. ಈಗ ಅವನ ಅನುಭವಕ್ಕೆ ಬರುತ್ತಿರುವ ಈ ಮಾನವಾಕೃತಿಯತ್ತಣ ಆಕರ್ಷಣೆಗೆ ಅದರೊಡನಿದ್ದ ಪೂರ್ವ ಪರಿಚಯವು ಕಾರಣವಲ್ಲ–ಆ ಗುರುವಿನೊಡನೆ ಎಷ್ಟೋ ಜನ್ಮಾಂತರಗಳಿಂದ ಸತತವಾಗಿ ಇಟ್ಟುಕೊಂಡಿದ್ದ ಸಂಪರ್ಕವೇ ಕಾರಣ.

ಶ್ರೀ ರಾಮಕೃಷ್ಣ ಪರಮಹಂಸರನ್ನು ಮೊದಲು ಸಂದರ್ಶಿಸಿದ ಮೇಲೆ ನರೇಂದ್ರನಿಗೆ ವಾರಕ್ಕೆ ಒಮ್ಮೆಯಾದರೂ ಅವರನ್ನು ನೋಡದೆ ಇರಲು ಸಾಧ್ಯವಾಗುತ್ತಿರಲಿಲ್ಲ. ವಿದ್ಯೆ, ಸುರೂಪ, ಐಶ್ವರ್ಯವೆಂಬ ಯಾವುದೂ ಇಲ್ಲದ ಮುದುಕನಂತಿದ್ದು ಹುಚ್ಚನಂತೆ ವರ್ತಿಸುತ್ತಿದ್ದ ಶ್ರೀರಾಮಕೃಷ್ಣ ಪರಮಹಂಸರಲ್ಲಿದ್ದ ಯಾವುದು ನೋಡಲು ಮತ್ತು ಮಾಡಲು ತಕ್ಕ ಅನೇಕ ಆಕರ್ಷಕ ವಸ್ತುಗಳಿಂದ ತುಂಬಿದ್ದ ಕಲ್ಕತ್ತೆಯಲ್ಲಿ ವಾಸಿಸುತ್ತಿದ್ದ ವಿದ್ಯಾವಂತ ಯುವಕನಾದ ನರೇಂದ್ರನನ್ನು ಆಕರ್ಷಿಸಿತು? ನರೇಂದ್ರ ಅಥವಾ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳ ಅತ್ಯಂತ ಹೆಚ್ಚಿನ ಆಕರ್ಷಕ ಶಕ್ತಿಯನ್ನು ಕುರಿತು ಒಮ್ಮೆ ಹೇಳಿದ್ದು ಗಮನಾರ್ಹ : "ನನ್ನ ಶಿಕ್ಷಿತ ಬುದ್ಧಿಯ ವಿಚಾರದ ಮೂಲಕ ಮನಸ್ಸನ್ನು ಎಷ್ಟು ಮಟ್ಟಿಗೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದರೂ ಅದು ಅವರತ್ತ ಹಾರಿ ಹೋಗುತ್ತಿತ್ತು" – ಎಂದು. ಗುರುಗಳಿಂದ ಕದ್ಡೊಯ್ಯಲಾದ ಹೃದಯವನ್ನುಳ್ಳ ನಮ್ಮ ಮಾನವನು ಭಗವಾನ್ ರಮಣರೆದುರು ಅಳುತ್ತಾನೆ, "ನಾನು ಶ್ರೀ ಕೃಷ್ಣನನ್ನು ಆರಾಧಿಸಿದೆ ; ಅವನ ದರ್ಶನವನ್ನು ಪಡೆದೆ. ನಾನು ಕರೆದಾಗಲೆಲ್ಲಾ ವ್ಯಕ್ತನಾಗುತ್ತಿದ್ದ ಅವನ ಹತ್ತಿರ ನಾನು ಪ್ರಾಪಂಚಿಕ ವಸ್ತುಗಳನ್ನು ಮಾತ್ರ ಬೇಡುವಷ್ಟು ಮರುಳನಾಗಿದ್ದೆ – ಆದರೆ ಒಂದು ದಿನ ಮಾತ್ರ ಆತನ ಅನುಗ್ರಹದಿಂದ ನನಗೆ ನನ್ನ ಮರುಳ್ತನದ ಅರಿವು ಉಂಟಾಯಿತು. ಆ ದಿನದಿಂದ ಕೇವಲ ಭಕ್ತಿಗಾಗಿ ಎಂದೇ ಅವನನ್ನು ಭಕ್ತಿಯಿಂದ ನೋಡಲು ಬಯಸಿದೆ ; ಯಾವ ಲೋಕಗಳ ಯಾವ ವಸ್ತುಗಳನ್ನೂ ಬಯಸದಿರುವೆನೆಂಬುದನ್ನೂ ಅವನಿಗೆ ತಿಳಿಸಿದೆ – ನೀನೊಬ್ಬನೇ ನನ್ನ ಅವಶ್ಯಕತೆ ಎಂದೆ ! ಆದರೆ ಅವನನ್ನು ಹೀಗೆ ಪ್ರಾರ್ಥಿಸಿದ ಮೇಲೆ ಅಯ್ಯೋ ಆ ದಿನದಿಂದ ಪುನಃ ಎಂದೂ ತೋರದಂತೆ ಅವನು ಮಾಯವಾದನು. ಎಷ್ಟು ಕರೆದರೂ ಅವನು ಬರಲೇ ಇಲ್ಲ – ಸುಸ್ತು ಹೊಂದಿದೆ, ದಣಿದೆ – ಅವನಿಗಾಗಿ. ಅನುಗ್ರಹಪೂರ್ವಕವಾಗಿ ನನ್ನನ್ನು ಹರಸಿರಿ ; ನಾನು ಅವನನ್ನು ಯಾವಾಗಲೂ ಹೊಂದಿರಲಿ ಎಂದು. ಗುರುಗಳಿಂದಲೇ ನಿತ್ಯ ಸತ್ಯ ವಸ್ತುವಾದ ಭಗವಂತನನ್ನು ಪಡೆಯಬಹುದೆಂದು ಹಿರಿಯರಿಂದ ಕೇಳಿದ್ದೇನೆ. ಆದುದರಿಂದ ಈಗ ನಾನು ನಿಮ್ಮ ಹತ್ತಿರ ಬಂದಿದ್ದೇನೆ ; ನನಗೆ ಸಹಾಯ ಮಾಡಿರಿ!" ಎಂದು.

ಗುರು : ಏನು ! ನಿನ್ನ ದೇವರು ಅದೃಶ್ಯನಾದನೇ? ಅವನು ನಿತ್ಯ ಸತ್ಯ ಸ್ವರೂಪನೇ ಆಗಿದ್ದರೆ ಅವನು ಅದೃಶ್ಯನಾಗುವುದು ಹೇಗೆ? ನೀನು ಹೇಳಿದಂತೆ ಅವನ ರೂಪವು ಅದೃಶ್ಯವಾದರೆ ಅದು ಹೇಗೆ ನಿತ್ಯಸತ್ಯವಾದೀತು?

ಮಾನವ : ಹೇ ಭಗವಾನ್, ನಾನು ಸತ್ಯವನ್ನಷ್ಟೇ ಹೇಳುತ್ತಿದ್ದೇನೆ. ನಿಜವಾಗಿಯೂ ಅವನು ನನಗೆ ತೋರಿದನು ಮತ್ತು ತನ್ನ ನಿರ್ಮಲ ಸಹವಾಸವನ್ನು ನನಗೆ ದಯಪಾಲಿಸಿದನು ; ಹಾಗೇ ನಿಜವಾಗಿ ಅವನು ಅದೃಶ್ಯನಾದನು. ನನ್ನ (ಮಾತಿನಲ್ಲಿ) ಸಂದೇಹ ಪಡಬೇಡಿರಿ.

ಗುರು : ಹೌದು, ನೀನು ಹೇಳಿದ್ದು ಸರಿ. ಅವನು ನಿನಗೆ ಕಾಣಿಸಿಕೊಂಡದ್ದು ಅವನು ಅದೃಶ್ಯನಾದಷ್ಟೇ ಸತ್ಯವಾದುದು. ಆದರೆ ದೃಶ್ಯವಾಗುವುದು ಅದೃಶ್ಯವಾಗುವುದು ಎಂಬುದು ಪರಮ ಸತ್ಯದ ನಿಜವಾದ ಸ್ವರೂಪವಲ್ಲ. ಬಂದದ್ದೆಲ್ಲಾ ಹೋಗಲೇಬೇಕು. ಯಾವುದಾದರೂ ಒಂದು ವಸ್ತು ಬಂದರೆ

ಯಾ ತೋರ್ಪಡಿಸಿಕೊಂಡರೆ ಅದು ಹಿಂದೆ ಅಲ್ಲಿರಲಿಲ್ಲ; ಅದು ಹೋಯ್ತು ಯಾ ಅದೃಶ್ಯವಾಯ್ತು ಎಂದರೆ ಅನಂತರ ಅದು ಅಲ್ಲಿ ಇಲ್ಲವೆಂದಾಯ್ತು. ಬಂದು ಹೋಗುವ ಹಾಗೂ ನಿರ್ದಿಷ್ಟ ಸ್ಥಳದಲ್ಲಿ ಮತ್ತು ನಿರ್ದಿಷ್ಟ ಕಾಲದಲ್ಲಿ ಇರುವ ದೇವರು ನಿತ್ಯವಸ್ತು, ದಿಕ್ಕಾಲಗಳಿಂದ ಅನವಚ್ಛಿನ್ನ ಎಂದು ಹೇಗಾದೀತು? ಯಾವಾಗಲೂ ಇರುವಂಥ ಸತ್ಯವಸ್ತುವನ್ನು ಪಡೆಯಲು ಸಹಾಯ ಮಾಡಬೇಕೆಂದು ನೀನು ನನ್ನನ್ನು ಬೇಡಿದೆ. ಆ ಸತ್ಯಪದಾರ್ಥ ಯಾವುದೆಂಬುದನ್ನು ವಿವೇಚಿಸಿ ಸರಿಯಾದ ನಿರ್ಧಾರಕ್ಕೆ ಬರುವುದೀಗ ನಿನಗೆ ಸೇರಿದ್ದು. ಆಗ ಮಾತ್ರ ಅದನ್ನು ಪಡೆಯಲು ನಾನು ನೀಡುವ ಸಹಾಯವು ಯೋಗ್ಯವಾದುದಾದೀತು. ಅದೃಶ್ಯವಾಗಲೆಂದೇ ದೃಶ್ಯವಾಗುವ ನಾಮರೂಪಯುಕ್ತವಾದ ದೇವರೆಂಬ ವಸ್ತುವನ್ನು ಪುನಃ ಪಡೆಯುವಂತೆ ನಿನಗೆ ನಾನು ಸಹಾಯವೀಯುವುದು ನಿಷ್ಪ್ರಯೋಜಕ. ಸರಿಯಾಗಿ ನಿನಗೇನು ಬೇಕೆಂಬುದನ್ನು ನೀನು ನಿರ್ಧರಿಸಿ ನನಗೆ ಹೇಳಬೇಕು. ನಿನ್ನ ಗುರಿ ಏನೆಂಬುದನ್ನು ಕಂಡು ಹಿಡಿಯಲು ನೆರವಾಗುವಂಥ ಸೂಚನೆಗಳನ್ನು ಕೂಡಾ ನಾನು ನಿನಗೆ ಕೊಡುವೆನು.

ಮಾನವ : ಸತ್ಯ ಪದಾರ್ಥದ ಲಕ್ಷಣವೇನು ಹಾಗಾದರೆ?

ಗುರು : ನಿತ್ಯ–ಅಪರಿವರ್ತನೀಯ – ಸ್ವಯಂಪ್ರಕಾಶ ; ದೃಶ್ಯವಾಗದೆ, ಅದೃಶ್ಯವಾಗದೆ ಸರ್ವದೇಶಕಾಲಗಳಲ್ಲೂ ಇರುವುದು ಪರಮಸತ್ಯ (ನಿತ್ಯಸತ್ಯ, ನಿರ್ವಿಕಲ್ಪ ಸತ್ಯ, ಶುದ್ಧಸತ್ಯ, ಪೂರ್ಣಸತ್ಯ) ಅದೆಂದೂ ಬೆಳೆಯದು – ರೂಪಾಂತರ ಹೊಂದದು – ಕ್ಷಯ ಹೊಂದದು– ಅದು ಸತ್ಯ ; ಇತರ ಪದಾರ್ಥದ ಅವಶ್ಯಕತೆ ಇಲ್ಲದೆ ತನ್ನಿಂದ ತಾನೇ ಬೆಳಗುತ್ತಿರುವುದು ಸತ್ಯ (ಪರಬ್ರಹ್ಮ). ಅದೇ ಸತ್. ಈ ಮೂರು ಲಕ್ಷಣಗಳಿಗೊಳಪಟ್ಟ ಪದಾರ್ಥವನ್ನು ನೀನೇ ಹುಡುಕಿಕೋ ಮತ್ತು ನನಗೆ ಹೇಳು.

ಮಾನವ : ನಾನು ನೋಡುತ್ತಿರುವ ಇಡೀ ವಿಶ್ವವು ಖಂಡಿತವಾಗಿಯೂ ದೇಶ ಕಾಲಾವಚ್ಛಿನ್ನ, ಪರಿವರ್ತನ ಶೀಲ ಮತ್ತು ನಶ್ವರ. ಹಾಗಾದರೆ ಇಡೀ ವಿಶ್ವದಲ್ಲಿರುವ (ಸೂರ್ಯ, ಚಂದ್ರ, ತಾರಕೆ ಇತ್ಯಾದಿ) ಪದಾರ್ಥಗಳೆಲ್ಲವೂ ಸುಳ್ಳೆಂದು ಸಿದ್ಧವಾಯ್ತು. ನನ್ನ ಇಷ್ಟದೇವತೆ ಕೂಡಾ ಅವನು ದೃಶ್ಯನಾಗಿ ಅದೃಶ್ಯನಾದುದರಿಂದ–ಸತ್ ಎಂಬ ಸತ್ಯ ಪದಾರ್ಥದ ಲಕ್ಷಣಕ್ಕೆ ಹೊಂದನು. ಹಾಗಾದರೆ ಪರಮ ಸತ್ಯದ ಲಕ್ಷಣಗಳನ್ನುಳ್ಳ ಒಂದು ಪದಾರ್ಥವನ್ನು ನಾನೆಂತು ಹುಡುಕಿ ತರಲಿ?

ಗುರು : ಪರಮ ಸತ್ಯದ ಲಕ್ಷಣಗಳಿಗೆ ಹೊಂದುವುವೋ ಇಲ್ಲವೋ ಎಂದು ಎಲ್ಲ ವಿಷಯಗಳ ಬಗೆಗೂ ಶೋಧ ನಡೆಸುತ್ತಿರುವ ನೀನೇ ಪರಮಸತ್ಯದ ಲಕ್ಷಣಗಳಿಗೆ ಹೊಂದುವೆಯೋ ಇಲ್ಲವೋ ಎಂಬುದನ್ನೇಕೆ ಪರಿಶೀಲಿಸಿಬಾರದು? ನೀನು ಯಾರು?

ಮಾನವ : ನಾನೂ ಹುಟ್ಟಿದವನು ; ಬೆಳೆದೆನು ; ಮುದುಕನಾಗುವೆನು ;ಸಾಯುವೆನು – ಒಂದು ದಿನ ಅದೃಶ್ಯನಾಗುವೆನು. ನಾನು ಪರಿವರ್ತನ ಪಾತ್ರ, ನಾಶಕ್ಕೆ ತುತ್ತಾಗುವವನು.

ಗುರು : ನೀನು ಹೇಳುವುದಕ್ಕೆ ಅರ್ಥವೇನು? ನೀನು ಹುಟ್ಟಿದವನೇ? ಯಾವುದು ಹುಟ್ಟಿದ್ದು? ನೀನೋ ನಿನ್ನ ಶರೀರವೋ? ನಿನ್ನ ಶರೀರವಲ್ಲವೇ ಹುಟ್ಟಿದ್ದು, ಬೆಳೆದದ್ದು ಮತ್ತು ಸತ್ತು ಅದೃಶ್ಯವಾಗುವಂಥದು? ನೀನು ಶರೀರವೇ?

ಮಾನವ : ಆದರೆ .... ನನ್ನ ಶರೀರ ಸಾಯುತ್ತದೆ.

ಗುರು : ನಿನ್ನ ಸ್ವತ್ತಾಗಿರುವುದು ಸಾಯುವಂಥ ಶರೀರವಾಗಿದ್ದರೆ, ಅದರ ಒಡೆಯನಾದ ನೀನು ಯಾರು?

ಮಾನವ : ಹೌದು, ಒಡೆಯನಾದ ನಾನು ಶರೀರ ಭಿನ್ನನಾಗಿರಬೇಕು. ಇತರ ವಸ್ತುಗಳನ್ನೂ ಶರೀರವನ್ನೂ ಕುರಿತು ಚಿಂತಿಸುವ ಮತ್ತು ತಿಳಿದುಕೊಳ್ಳುವ ಶಕ್ತಿಯುಳ್ಳ ನಾನು ಖಂಡಿತವಾಗಿಯೂ ಶರೀರದಿಂದ ಭಿನ್ನ.

ಗುರು : ಏನು ನೀನು ಹೇಳುವುದರ ಅರ್ಥ? ಮತ್ತೆ–ನೀನು ಚಿಂತನಶೀಲವಾದ ಮನಸ್ಸೇನು? ನಿನ್ನ ಮನಸ್ಸು ನಿನ್ನ ವಿಚಾರಗಳ ಆಕಾರವಲ್ಲವೇ?

ಮಾನವ : ಹೌದು ; ನನ್ನ ಮನಸ್ಸು ವಿಚಾರ ಮಾಡುತ್ತದೆ. ಈ ವಿಚಾರಗಳೇ ಮನಸ್ಸೇನು?

ಗುರು : ವಿಚಾರಗಳೆಲ್ಲವನ್ನೂ ಹೊರಗೆ ಹಾಕು ಮತ್ತು ನೋಡು. ಮನಸ್ಸು ಎಂಬಂಥ ವಸ್ತುವೇ ಇರದು. ವಿಚಾರಗಳೇ ಮನಸ್ಸೆಂಬುದರ ರೂಪ (ಆಕಾರ)!

ಮಾನವ : ವಿಚಾರವಿಲ್ಲದಿರುವಾಗ ಅಲ್ಲೇನೂ ಇರದು ! ಆಗ ನಿಜವಸ್ತುವೆಂದು ಅಲ್ಲಿ ಯಾವುದಿರುತ್ತದೆ?

ಗುರು : ನಿನ್ನ ವಿಚಾರಗಳನ್ನು ತಿಳಿದುಕೊಳ್ಳುವಂಥ ನೀನು–ನಿನ್ನ ಮನಸ್ಸು ಎಂದರೇ ವಿಚಾರಗಳು. ನೀನು ಮನಸ್ಸಿನಿಂದ ಬೇರೆಯಲ್ಲವೇ? ನಿನಗೆ ಜ್ಞಾತವಾಗುವ ಮನಸ್ಸು ನಿನ್ನ ಸ್ವತ್ತಲ್ಲವೇ? ಇದು ನಿಜವಾದರೆ ಮನಸ್ಸೆಂಬ ಆಸ್ತಿಗೆ ಒಡೆಯನಾದ ನೀನು ಯಾರು? ಏನು? ಎಂದು ಶೋಧ ಮಾಡು.

ಮಾನವ : ಮನಸ್ಸಿಲ್ಲದಾಗ ಜ್ಞೇಯವೇನೂ ಇರುವುದಿಲ್ಲ ; ಯಾವ ವಿಚಾರವೂ ಇಲ್ಲವೆಂದು ಜಾಗರವಾಗಿರುವುದು ಮಾತ್ರ ಅಲ್ಲಿ ಇರುತ್ತದೆ.

ಗುರು : ನಿನ್ನ ವಿಚಾರಗಳ ಚಲನಗಳು ನಿನಗೆ ಗೊತ್ತಿಲ್ಲವೇ? ಈಗ ಅದೇ ಮೇರೆಗೆ ಅವುಗಳು ಶಮನಹೊಂದಿರುವುದನ್ನೂ ನೀನು ತಿಳಿದಿಲ್ಲವೇ?

ಮಾನವ : ಹೌದು, ನಿರ್ವಿಚಾರದ ಅವಸ್ಥೆಯನ್ನು, ಶೂನ್ಯದಂಥ ಅಂಧಕಾರವನ್ನು– ನಾನು ಬಲ್ಲೆನು.

ಗುರು : ಸವಿಚಾರ–ನಿರ್ವಿಚಾರ ಎಂಬ ಎರಡು ಅವಸ್ಥೆಗಳೂ ದೃಶ್ಯವಾಗಿ ಅದೃಶ್ಯವಾಗುವಂಥವುಗಳೆಲ್ಲವೇ? (ಬಂದು ಹೋಗತಕ್ಕಂಥವುಗಳಲ್ಲವೇ?) ಆದುದರಿಂದ ಅವು ನಿಜವಸ್ತುವಿನ (ಪರಮಸತ್ಯದ) ಲಕ್ಷಣಕ್ಕೆ ಹೊಂದುವುದು

ಹೇಗೆ? ನೋಡು–ಇದು ನಾನಾತ್ವ, ಇದು ಶೂನ್ಯಸ್ಥಿತಿ (ಸವಿಚಾರ–ನಿರ್ವಿಚಾರವಸ್ಥೆಗಳು) ಎಂದು ತಿಳಿದಿರುವ ನೀನು ನಿಜವಸ್ತುವಿನ ಲಕ್ಷಣಕ್ಕೆ ಹೊಂದುವೆಯೋ ಇಲ್ಲವೋ ಎಂದು ನೋಡು (ಪರೀಕ್ಷಿಸು).

ನೋಡು, ನೀನೊಮ್ಮೆ ಒಂದು ಚಿಕ್ಕ ಮಗುವಾಗಿದ್ದೆ. ಈಗ ನಿನ್ನ ಶರೀರದ ಆಕಾರ ಬದಲಾಯಿಸಿದೆ. ಅಂದಿನ ನಿನ್ನ ಮನಸ್ಸಿನ ಹೂರಣಗಳೂ ಇಂದು ಬದಲಾಗಿವೆ. ಆದರೆ ಮನದ ಮತ್ತು ಶರೀರದ ಈ ಬದಲಾವಣೆಗಳ ನಡುವೆಯೂ ಈವರೆಗೂ ಬದಲಾಗದೆ ಇದ್ದ ನೀನು ಅದೇ ಆಗಿರುವೆಯಲ್ಲವೇ? ಈ ನೀನು ಯಾವುದಾದರೂ ಬದಲಾವಣೆಗೊಳಗಾಗಿದೆಯೇ?

ಮಾನವ : ಇಲ್ಲ, ನಾನು ಅದೇ ನಾನು. ನಾನು ಇನ್ನೊಬ್ಬನಲ್ಲ. ಆದರೂ ಶರೀರವು ಹುಟ್ಟುವುದಕ್ಕೆ ಮೊದಲು ಈ ನಾನೆಂಬುದು ಇದ್ದೀತ್ತೇ ! ದೇಹಸತ್ತ ಮೇಲೂ ಈ ನಾನೆಂಬುದು ಇರುವುದೇ? ನಾನು ಯಾರು?

ಗುರು : ಅಷ್ಟು ದೂರ ಏಕೆ ಆಲೊಚನೆ ಮಾಡುವೆ? ನಿದ್ರೆಯಲ್ಲಿ ನೀನು ಏನಾಗುವೆ? ಅಲ್ಲಿ ನೀನು ಇದ್ದೆಯೋ ಇಲ್ಲವಾಗಿದ್ದೆಯೋ?

ಮಾನವ : ದೇಹ ಮನಗಳಲ್ಲದ ನಾನು ನಿದ್ರೆಯಲ್ಲಿ ಇದ್ದಿರಲೇ ಬೇಕು. ಆದರೆ ನನ್ನ ಅಸ್ತಿತ್ವದ ಅರಿವು ನನಗೆ ಅಲ್ಲಿ ಇರಲಿಲ್ಲ !

ಗುರು : ಅಲ್ಲಿ ನೀನು ತಿಳಿಯದೆ ಇದ್ದಂಥದ್ದೇನು?! ಅಲ್ಲಿ ನಿನಗೆ ನಿನ್ನ ಶರೀರ, ಮನಸ್ಸು ಮತ್ತು ಜಗತ್ತುಗಳ ಅರಿವು ಇರಲಿಲ್ಲ. ನಿನ್ನ ಅಸ್ತಿತ್ವವೇ ನಿನಗೆ ಗೊತ್ತಿರಲಿಲ್ಲವೇ? ನಿನ್ನ ಅನುಭವಕ್ಕೆ ಬಂದಿರಲಿಲ್ಲವೇ? ನಿದ್ರೆಯಲ್ಲಿಯ ನಿನ್ನ ಅಸ್ತಿತ್ವದ ಸ್ವೀಕಾರವು ನಿನ್ನನ್ನು ತಿಳಿದುಕೊಂಡಿರುವುದು ಕೂಡಾ ಆಗಿರುತ್ತದೆ. ಏಕೆಂದರೆ ಅಸ್ತಿತ್ವ ಮತ್ತು ಜ್ಞಾನಗಳು ಬೇರೆ ಬೇರೆ ಆದವುಗಳಲ್ಲ; ಅವು ಒಂದೇ ಆಗಿರುತ್ತವೆ. ನೀನು ಎಚ್ಚೆತ್ತಾಗ ನಿದ್ರೆಯಲ್ಲಿ ಹೇಗಿತ್ತೋ ಹಾಗೇ ಇದ್ದ ನಿನ್ನ ಅಸ್ತಿತ್ವದ ಸ್ವರೂಪವನ್ನು ನೀನು ನೆನಪಿಸಿಕೊಂಡಿರುವೆಯಲ್ಲವೇ? "ನಾನು ಸುಖವಾಗಿಯೂ ಚೆನ್ನಾಗಿಯೂ ನಿದ್ರಿಸಿದ್ದೆ. ನನಗೆ ಒಂದು ಕನಸು ಕೂಡಾ ಬಿದ್ದಿರಲಿಲ್ಲ" – ಎಂಬುದು ನೆನಪಿಲ್ಲವೇ?

ನೀನು ಎದ್ದ ಮೇಲೆ ಕೊಟ್ಟ ಹೇಳಿಕೆಯೆಂಬುದು ನಿದ್ರೆಯಲ್ಲಿ ನಿನಗಿದ್ದ ನಿನ್ನ ಅಸ್ತಿತ್ವದ ಅರಿವಲ್ಲವೇನು? "ನಾನು ಚೆನ್ನಾಗಿ ನಿದ್ರಿಸಿದೆನು"; ನನಗಲ್ಲಿ ಕನಸು ಕೂಡಾ ಬಿದ್ದಿರಲಿಲ್ಲ" ಎಂಬ ಎರಡು ಅನುಭವಗಳು
ಅಲ್ಲಿ ನಿನಗೆ ನಿನ್ನ ಅಸ್ತಿತ್ವದ ಎಚ್ಚರವಿತ್ತೆಂಬುದನ್ನು ಸೂಚಿಸುವುದಿಲ್ಲವೇ? (ಶರೀರ, ಮನ, ಜಗತ್ತುಗಳ ಬಗೆಗಿನ) ವಿಚಾರಗಳಿಂದ ಮಾತ್ರ ವರ್ತಮಾನದ ಜಾಗರವು ತುಂಬಿರುವುದಿಲ್ಲವೇ? ಆ ವಿಚಾರಗಳು ನಾನಾತ್ವವನ್ನು ಪ್ರತಿನಿಧಿಸುವುದಿಲ್ಲವೇ? ಮತ್ತು ನಿದ್ರೆಯು (ಶರೀರ, ಮನ, ಜಗತ್ತು)ಗಳಿಂದ ದೂರವಿದ್ದು ಶೂನ್ಯವನ್ನು (ಅಥವಾ ಕೇವಲ ಅವ್ಯಕ್ತವನ್ನು)

ಪ್ರತಿನಿಧಿಸುವುದಿಲ್ಲವೇ? ಅಲ್ಲಿ ಇಲ್ಲಿ ಈಗ ನೀನು ಹುಟ್ಟು ಸಾವುಗಳ ಸ್ವರೂಪವನ್ನು ತಿಳಿದುಕೊಳ್ಳಬಲ್ಲೆ. ಆದುದರಿಂದ ಶರೀರ ಹುಟ್ಟುವುದಕ್ಕಿಂತ ಮೊದಲು ಇದ್ದ ಮತ್ತು ಸತ್ತ ಮೇಲೆ ಇರುವ ಸ್ಥಿತಿಯು ನಿನಗೆ ಸ್ಪಷ್ಟವಾಗಿ ಗೊತ್ತಾಗಿರಬೇಕು. ನಿದ್ರೆ ಜಾಗರಗಳಲ್ಲಿ ನೀನು ಶರೀರ–ಮನಗಳಿಂದ ಭಿನ್ನನಾಗಿ ಇರುವೆ ಎಂಬುದನ್ನು ನೀನೀಗ ತಿಳಿದುಕೊಳ್ಳಬಲ್ಲೆಯಾದುದರಿಂದ ಈ ಜೀವನದಲ್ಲೂ ಶರೀರೋತ್ಪತ್ತಿ ಪೂರ್ವದಲ್ಲೂ ಮರಣೋತ್ತರ ಕಾಲದಲ್ಲೂ (ಮರಣವೆಂದರೆ ಜನನಪೂರ್ವದ ಸ್ಥಿತಿ) ಭಿನ್ನವಾಗಿ ನೀನು ಇರುವೆ ಎಂಬುದನ್ನು ತಿಳಿದುಕೊಳ್ಳಲು ಶಕ್ತನಾಗಿರುವೆ.

ಜಗತ್ತನ್ನು ತಿಳಿದುಕೊಳ್ಳಲು ನೀನಲ್ಲದೆ ಬೆಳಕು ಇಂದ್ರಿಯಗಳು ಮತ್ತು ಮನಸ್ಸು ಬೇಕು. ಆದರೆ ಶರೀರ, ಇಂದ್ರಿಯ, ಮನಸ್ಸು ಮುಂತಾದ ಯಾವುದೂ ಇಲ್ಲದ ಸುಷುಪ್ತಿಯಲ್ಲಿ ನಿನ್ನ ಅಸ್ತಿತ್ವವನ್ನು ತಿಳಿದುಕೊಳ್ಳಲು ನೀನಲ್ಲದೆ ಇನ್ನಾವುದಾದರೂ ಸಹಾಯಕ ಸಾಧನವು ಬೇಕೇ? ನಿನ್ನ ಅಸ್ತಿತ್ವವನ್ನು ತಿಳಿದುಕೊಳ್ಳಲು ಇತರ ಸಲಕರಣೆಗಳು ಬೇಡ.

ಗುರು : ನಿನಗೆ ಬೆಳಕು ಯಾವುದು?

ಶಿಷ್ಯ : ನನಗೆ ಹಗಲಿನಲ್ಲಿ ಸೂರ್ಯನೂ ರಾತ್ರಿಯ ಕತ್ತಲೆಯಲ್ಲಿ ದೀಪವೂ ಬೆಳಕು.

ಗುರು : ಬೆಳಕನ್ನು ನೋಡುವ ಬೆಳಕು ಯಾವುದು?

ಶಿಷ್ಯ : ಕಣ್ಣು

ಗುರು : ಕಣ್ಣನ್ನು ತಿಳಿದಿರುವ ಬೆಳಕು ಯಾವುದು?

ಶಿಷ್ಯ : ಮನಸ್ಸು ಆ ಬೆಳಕು

ಗುರು : ಮನಸ್ಸನ್ನು ತಿಳಿದ ಬೆಳಕು ಯಾವುದು?

ಶಿಷ್ಯ : ಅದೇ ನಾನು.

ಗುರು : ಆದುದರಿಂದ ನೀನೇ ಬೆಳಕುಗಳಿಗೆಲ್ಲಾ ಅಗ್ರೇಸರ ಬೆಳಕು, ಪರಮೋಚ್ಚ ಪ್ರಕಾಶ. (ಅವನಿಗೆ ಗುರು ಹೀಗೆ ಉಪದೇಶ ಕೊಟ್ಟಾಗ) ಶಿಷ್ಯನು ನಿಜವಾಗಿ ನಾನು ಅದೇ ಆಗಿದ್ದೇನೆ ಎಂಬ ಅನುಭವವನ್ನು ಪಡೆದನು.

– "ಉಳ್ಳದು ನಾರ್ಪ.ದು" – ಪುರವಣಿ ಪದ್ಯ–೭

ಈಗ ನೀನು ಹೀಗೆ ಸತ್ಯವಸ್ತುವಿನ ಎಲ್ಲ ಲಕ್ಷಣಗಳೂ ಅನ್ವಯವಾಗುವಂಥ ನಿನ್ನ ಸ್ವ ಸ್ವರೂಪವನ್ನು ಶೋಧಿಸು.

ಮಾನವ : ಹೌದು, ಆಗಲಿ. ನಾನೇ ಆ ಸತ್ಯವಸ್ತು ಎಂಬ ನಿಗಮನಕ್ಕೆ ಬರಬೇಕಾಯ್ತು. ಹಾಗಾದರೆ ನನಗೆ ಈವರೆಗೆ ಬೇಡಿದ್ದನ್ನೆಲ್ಲಾ ಕೊಡುತ್ತಿದ್ದ ಇಷ್ಟದೇವತೆ ಯಾರು? ನಾನು ಪ್ರಾಣಕ್ಕಿಂತ ಹೆಚ್ಚೆಂದು ಪ್ರೀತಿಸುತಿದ್ದ ನನ್ನ ಇಷ್ಟದೈವ ಯಾವುದು? ಅದು ಯಾರು? ನನ್ನ ಬಗೆಗೆ ಅವನಿಗಿದ್ದ ಕನಿಕರವೂ

ನನಗೆ ಆತನ ಬಗೆಗಿದ್ದ ಪ್ರಾಮಾಣಿಕ ಭಕ್ತಿಯೂ ಸುಳ್ಳು ಭಾವನೆಗಳೆ? ಅವೆಲ್ಲಾ ನಿಷ್ಫಲಗಳೆ? ಅನುಗ್ರಹಿಸಿರಿ ; ನನ್ನ ಈ ಗೊಂದಲವನ್ನೂ ಪರಿಹರಿಸಿಕೊಡಿರಿ.

ಗುರು : ನಿನ್ನನ್ನು ಬಿಟ್ಟು ಪ್ರೀತಿ (ಭಕ್ತಿ) ಎಂಬ ಬೇರೆಯೊಂದು ಪದಾರ್ಥ ಇದೆಯೇ? ಹಾಗೆ ಇದ್ದದ್ದೇ ಹೌದಾದರೆ ಸತ್ಯ ಪದಾರ್ಥದ ಏಕತ್ವಕ್ಕೆ ಭಂಗವುಂಟಾಗುತ್ತದೆ. ಆದುದರಿಂದ ನೀನೇ ನಿಜವಾಗಿಯೂ ಪ್ರೀತಿ. ನೀನೇ ಪ್ರೀತಿ ಸ್ವರೂಪನಾಗಿರಬೇಕಲ್ಲದೆ ಪ್ರೀತಿ ಎಂಬುದು ಅಸ್ತಿತ್ವದಲ್ಲಿರುವ ಇನ್ನೊಂದು ವಸ್ತು ಹೇಗಾದೀತು? ನಿನ್ನ ಬ್ರಹ್ಮಾತ್ಮವನ್ನರಿಯುವುದು (ಸತ್ ಎಂಬ ವಸ್ತು ಅನುಭವಕ್ಕೆ ಬರುವುದು) ಯಾವಾಗಲೂ ತನ್ನಿಂದ ತಾನೇ ಉಪಸ್ಥಿತವಾಗಿರುತ್ತದೆ. ಏಕೆಂದರೆ ನೀನು ಎಂದರೆ ಜ್ಞಾನವೇ. ಹಾಗೇ ನಿನ್ನಲ್ಲಿಯ ಪ್ರೀತಿಯ ಯಾವುದಾದರೂ ಒಂದು ಭಾವನೆಯು ನೀನೇ ಆಗಿರದೇ ಇನ್ನಾವುದೂ ಆಗಲಾರದು ; ಏಕೆಂದರೆ ನೀನೇ ಸ್ವತಃ ಪ್ರೇಮ ಸ್ವರೂಪನು.

ಮಾನವ : ಸ್ವಲ್ಪ ಸಮಯದ ಮುಂಚೆ ನಾನು ಸ್ವತಃ ಜ್ಞಾನವೇ ಆಗಿರುವುದು ಹೇಗೆ ಎಂಬುದನ್ನು ಅನುಗ್ರಾಹಕವಾಗಿ ವಿವರಿಸಿದಿರಿ ; ಆ ಜ್ಞಾನಾನುಭವವು ಸತತವೂ ಇರುತ್ತದೆ ಎಂದು ಹೇಳಿದಿರಿ. ನಾನು ಪ್ರೇಮವೂ ಆಗಿರುವ ಸತತಾನುಭವವು ನನಗಿರುವುದು ಹೇಗೆ? ಎಂಬುದನ್ನು ಅನುಗ್ರಾಹಕವಾಗಿ ವಿವರಿಸುತ್ತೀರಾ?

ಗುರು : ಸತ್ ಆದ ನೀನೇ ಚಿತ್ ಎಂಬುದನ್ನು ನೀನು ಅನುಭವಿಸುತ್ತಿರುವೆ ಎಂಬುದನ್ನು ಸ್ವಲ್ಪ ಆಲೋಚಿಸಿ ನಿನಗೆ ಸಿದ್ಧಮಾಡಿ ತೋರಿಸಿದಂತೆಯೇ ಸ್ವಲ್ಪ ಆಲೋಚಿಸಿದರೆ ಆಗ ನಿನಗೆ ಪ್ರೀತಿ (ಆನಂದ) ನೀನೇ ಎಂಬ ಅನುಭವವಿರುವುದು ಸಿದ್ಧ ಮಾಡಲ್ಪಡುತ್ತದೆ.

ಮಾನವ : ನಾನು ಹೇಗೆ ಪ್ರಾರಂಭಿಸಲಿ?

ಗುರು : ಯಾವುದರ ಪ್ರೀತಿಗಾಗಿ ನೀನಿಲ್ಲಿಗೆ ಬಂದೆ? ನಿನ್ನ ಇಷ್ಟದೇವತೆಯ ಮೇಲಿನ ಪ್ರೀತಿಯಿಂದ ಅಲ್ಲವೇ? ಅವನನ್ನು ನೀನೇಕೆ ಪ್ರೀತಿಸುತ್ತಿದ್ದೆ? ಅವನು ನಿನಗೆ ಬಯಸಿದ್ದನ್ನೆಲ್ಲಾ ಕೊಡುತ್ತಿದ್ದನೆಂದೇ ಅವನನ್ನು ನೀನು ಪ್ರೀತಿಸುತ್ತಿದ್ದೆಯಲ್ಲವೇ? ಅವನು ಇತರರಿಗೆ ಕೊಡುತ್ತಿದ್ದನು – ನಿನಗೆ ಕೊಡುತ್ತಿದ್ದಿಲ್ಲ – ಎಂದು ಊಹಿಸಿಕೊಳ್ಳೋಣ. ಆಗ ನೀನು ಅವನಿಗಾಗಿ ಇಲ್ಲಿಗೆ ಬರುತ್ತಿದ್ದೆಯಾ?

ಮಾನವ : ಅದು ಹಾಗೇ ಇರಬಹುದಾದರೂ ಈಗ ನಾನು ನನ್ನ ಇಷ್ಟದೇವತೆಯನ್ನು ಪ್ರೀತಿಸುವುದು ಅವನ ಮೇಲಿನ ಪ್ರೀತಿ (ಭಕ್ತಿ)ಗಾಗಿಯೇ. ಇದು ಸ್ವಾರ್ಥ ಪರತೆಯೇ?

ಗುರು : ಈಗ ನೀನು ಅವನನ್ನು ಏನೂ ಸ್ವಾರ್ಥವಿಲ್ಲದವನಂತೆ ಪ್ರಾರ್ಥಿಸುವೆ: "ನಿನಗವನು ಏನು ಕೊಡುವುದೂ ಬೇಡ–ಅವನು ನಿನ್ನೆದುರು ವ್ಯಕ್ತವಾಗಬೇಕು

ಮತ್ತು ನಿನ್ನ ಜೊತೆಗಿರಬೇಕು – ಇಷ್ಟು ಸಾಕು" ಎಂದು. ಉಳಿದ ಎಲ್ಲರಿಗೂ ಅವನು ದರ್ಶನ ಕೊಡುತ್ತಿರುವುದನ್ನೂ ನಿನಗೆ ಎಂದೂ ದರ್ಶನ ಕೊಡುವುದಿಲ್ಲವೆಂದು ತೀರ್ಮಾನಿಸಿದ್ದನ್ನೂ ನೀನು ತಿಳಿದೆ ಎಂದಿಟ್ಟುಕೊಳ್ಳೋಣ. ಆಗಲೂ ನೀನು ಅವನನ್ನು ಪ್ರೀತಿಸುವೆಯಾ? ಹೀಗೆ (ದೇವರ ಕಡೆಗೆ ಭಕ್ತಿ ಇರುವುದು ಎಂದರೆ) ನಿಜವಾಗಿ ನೀನು ನಿನ್ನನ್ನು (ಬ್ರಹ್ಮಾತ್ಮವನ್ನು) ಪ್ರೀತಿಸುತ್ತಿದ್ದೆ ಎಂದೇ ಅರ್ಥವಾಗುತ್ತದೆ. ಅದರಲ್ಲಿ ನಿನ್ನ ಇಷ್ಟ ದೇವತೆಯು ಮೇಲಿನ ಪ್ರೇಮವು ಆ ಬ್ರಹ್ಮಾತ್ಮ ಲಕ್ಷ್ಯದತ್ತ ತಿರುಗಬೇಕೆಂಬ ನಿರೀಕ್ಷೆ ಇತ್ತು. ಅದರಿಂದಲೇ ವೇದಗಳು ಸಾರುತ್ತವೆ, "ಆತ್ಮಕ್ಕಾಗಿ (ಬ್ರಹ್ಮಾತ್ಮಕ್ಕಾಗಿ) ಎಲ್ಲವೂ ಪ್ರಿಯವಾಗುತ್ತದೆ. (ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ)...." ಎಂದು. ಆದುದರಿಂದ ಆತ್ಮ (ಬ್ರಹ್ಮಾತ್ಮ) ಎಂಬುದು ಎಲ್ಲವುದಕ್ಕಿಂತಲೂ ಅಧಿಕ ಪ್ರಿಯವಾಗಿದೆ.

ಮಾನವ : ಇದೆಷ್ಟು ವಿಚಿತ್ರ ! ಆಳವಾಗಿ ವಿಚಾರ ಮಾಡಿದ ಮೇಲೆ "ನನ್ನ ಇಷ್ಟದೇವರ ಮೇಲಿನ ಪ್ರೀತಿಯನ್ನು ಹಿಡಿದು ನನ್ನ ಎಲ್ಲ ಪ್ರೀತಿಯೂ ಸ್ವಾರ್ಥಪರ!" ಎಂಬ ನಿಗಮನಕ್ಕೆ ನಾನು ಬರಬೇಕಾಯ್ತು. ಅದೆಲ್ಲಾ ಬಹಳ ಸರಿ. ಆದರೆ ಅಂಥ ನಿರ್ವ್ಯಾಜ ಪ್ರೇಮವನ್ನು ನನ್ನ ಇಷ್ಟದೇವತೆ ನನ್ನ ಬಗ್ಗೆ ತೋರಿಸಿದ್ದಕ್ಕೆ ವಿವರಣೆಯನ್ನು ಕೊಡುವುದು ಹೇಗೆ?

ಗುರು : ನಿನ್ನಿಂದ ಅವನಿಗೆ ಏನೂ ಬೇಕಾಗಿರದೆ ಹೋದರೂ ಅವನ ವಾತ್ಸಲ್ಯ ಇದ್ದದ್ದಾದರೂ ಯಾರ ಕಡೆಗೆ? ಅದಿದ್ದದ್ದು ನಿನ್ನ ಕಡೆಗಲ್ಲವೇ? ಎರಡು ದಿಕ್ಕುಗಳಿಂದಲೂ ನೀನೇ ಪ್ರೀತಿಗೆ (ಪಾತ್ರ ಯಾ) ಲಕ್ಷ್ಯ ಎನ್ನಿಸಿರುವುದರಿಂದ (ಪ್ರೀತಿ ಹರಿದು ಬರುವುದು ನಿನ್ನ ಕಡೆಯಿಂದ ಮತ್ತು ನಿನ್ನ ಇಷ್ಟದೇವರ ಕಡೆಯಿಂದ) ನಿನ್ನತ್ತಲೇ ಉಭಯ ಪ್ರೀತಿಯ ಗುರಿ ಇರುತ್ತದೆ. ಆದುದರಿಂದ ನೀನೇ ಪ್ರೀತಿಯ ಪೂರ್ಣ ಸ್ವರೂಪ ಎಂಬುದು ನಿನಗೆ ಸ್ಪಷ್ಟವಾಗಲಿಲ್ಲವೇ? ಹಿಂದೆ ನೀನು ನಿನ್ನ ಅನುಭವವನ್ನು ತಿಳಿದಿರುವ ಜ್ಞಾನವೆಂದರೆ ನೀನೇ ಎಂಬುದನ್ನು ಕಂಡುಹಿಡಿದಂತೆಯೇ ಈಗಲಾದರೂ ನಿನ್ನನ್ನು ಪ್ರೀತಿಸುವ ಸ್ವಯಂ ಆವಿರ್ಭೂತವಾಗುವ ಪ್ರೇಮರೂಪವು (ನಿನ್ನ ಇಷ್ಟದೈವ ಮತ್ತು ನೀನು–ಎಂಬೀ ಉಭಯವೂ) ನೀನೇ ಆಗಿರುವೆ. ಈ ಪ್ರಕಾರ, ಸತ್ ಚಿತ್ ಆಗಿರುವ ನೀನು ಆನಂದವು ಆಗಿರುತ್ತೀಯೆ ಅಥವಾ ಇನ್ನೊಂದು ತೆರನಾಗಿ ಹೇಳುವುದಾದರೆ, ಸತ್+ಚಿತ್ ಆದ ನಿನ್ನನ್ನು ತಿಳಿದುಕೊಳ್ಳುವುದೇ ಆನಂದಲಾಭ (ಆನಂದ ಸಿದ್ಧಿ). ನಾಮರೂಪಗಳೆಂಬ ಅಸದ್ರೂಪಗಳನ್ನು ತೆಗೆದು ಹಾಕಿದ ಮೇಲೆ ಉಳಿಯುವ ನಿನ್ನ ಇಷ್ಟ ದೇವತೆಯ ಪೂರ್ಣ ಸ್ವರೂಪವು ಸಚ್ಚಿದಾನಂದ – ಅಂಥ ಇಷ್ಟ ದೇವತೆಯನ್ನು ಯಾವಾಗಲೂ ಪಡೆದುಕೊಂಡಿರುವುದೆಂದರೆ ಸಚ್ಚಿದಾನಂದಮಯನಾಗಿರುವುದೆಂದೇ ಅರ್ಥ. ಅದನ್ನು ತಿಳಿದುಕೋ ; ಅದನ್ನು ಅನುಭವಿಸು ಮತ್ತು ಅದೇ ಆಗಿ ಇರು.

"ಯಾವ ರೂಪದಲ್ಲಿ ಆ ಸರ್ವೋಚ್ಚ ವಸ್ತುವನ್ನು (ಪರಬ್ರಹ್ಮವನ್ನು) ಒಬ್ಬನು ಉಪಾಸನೆ ಮಾಡಿದರೂ ಯಾವ ಹೆಸರನ್ನು ಅವನಿಗೆ ಕೊಟ್ಟರೂ ನಾಮರೂಪಗಳಲ್ಲಿ ಆ ವಸ್ತುವನ್ನು

ನೋಡಲು ಅದೇ ಮಾರ್ಗ (ಸರಿಯಾದುದು) ಎನ್ನಿಸಿದರೂ – ಆ ಸತ್ಯವಾದ ಪದಾರ್ಥದ ಸತ್ಯದಲ್ಲಿ ಸ್ವ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಅದರೊಡನೆ ಏಕವಾಗಿರುವುದು ಮತ್ತು ಅದರಲ್ಲಿ ಕರಗಿ ಹೋಗುವುದು ಎಂಬುದೊಂದೇ ನಿಜವಾದ ದರ್ಶನ. ನೀನೀ ಪ್ರಕಾರ ತಿಳಿದುಕೊಳ್ಳತಕ್ಕದ್ದು.

– "ಉಳ್ಳದು ನಾರ್ಪ.ದು, ಪದ್ಯ–೮[೨೪]

ಇದನ್ನು ಕೇಳಿದ ಬಳಿಕ ಮಾನವನು ಪವಿತ್ರ ಭಯದಿಂದ ತುಂಬಿ ಹೋದನು, ರೋಮಾಂಚನ ಹೊಂದಿದನು; ಮತ್ತು ಅವನ ಹೃದಯವು ಗುರುಗಳ ಬಗ್ಗೆ ಭಕ್ತಿಯಿಂದ ತುಂಬಿ ಹರಿಯಿತು; ಅವನು ಅವರ ಪಾದಗಳಲ್ಲಿ ಬಿದ್ದನು !

ಆ ಮಾನವನು ಮನೆಗೆ ಮರಳಿದನು. ಕೆಲಕಾಲ ಅವನು ಅಹೋ ರಾತ್ರಿ ಗಂಭೀರವಾಗಿ ಅದ್ವೈತೋಪದೇಶವನ್ನು ಕುರಿತು ವಿಚಾರ ಮಾಡಿದನು – ಆ ಉಪದೇಶವನ್ನು ಆತ ಅವನ ಗುರುಗಳಿಂದ ಪಡೆದಿದ್ದನು. "ನನ್ನನ್ನು ಸರ್ವೋಚ್ಚ ಸತ್ಯದತ್ತ ತಿರುಗುವಂತೆ ಮಾಡಿದ ಗುರುಗಳು ನನ್ನ ಇಷ್ಟ ದೇವತೆಯಲ್ಲದೆ ಇನ್ನಾರಾದಾರು? ಇಷ್ಟು ವಾತ್ಸಲ್ಯವನ್ನೂ ಕಾಳಜಿಯನ್ನೂ ನನ್ನ ಬಗ್ಗೆ ಇಷ್ಟು ವರ್ಷಗಳ ಕಾಲ ಸುರಿಸುತ್ತಾ ಬಂದ ನನ್ನ ಇಷ್ಟದೇವತೆಯೇ ಅದು. ಆದರೆ ಈಗ ನನಗೆ ತಿಳಿದು ಬಂದದ್ದಿಷ್ಟು : ನನ್ನ ಇಷ್ಟದೇವತೆಯೇನೋ ನಾನು ಕೇಳಿದ ಎಲ್ಲ ಪ್ರಾಪಂಚಿಕ ವಸ್ತುಗಳನ್ನೂ ಕೊಟ್ಟನು. ಆದರೆ ಅದಕ್ಕಿಂತ ಹೆಚ್ಚಿನ ಬಹಳ ಹೆಚ್ಚಿನ ನಿಜವಾದ ಒಳಿತು ಎನ್ನಿಸಿದ್ದೆಂದರೆ, ನನ್ನ ಸದ್‌ಗುರುಗಳು ನಿಜವಾದ ಮಾರ್ಗದಲ್ಲಿ ನನ್ನನ್ನು ನಡೆಸಿಕೊಂಡು ಹೋಗಿರುವುದರಿಂದ ಅವರೇ ಸರ್ವೋಚ್ಚ ಸತ್ಯ – ಆ ಸತ್ಯವನ್ನೇ ನಾನು ಪಡೆದುಕೊಳ್ಳಬೇಕು ಎಂಬ ತಿಳುವಳಿಕೆಯೇ ಆಗಿದೆ. ಆತನೇ ನನ್ನ ಅವಶ್ಯಕತೆ ಎಂದು ನಾನು ನನ್ನ ಇಷ್ಟದೇವತೆಯಲ್ಲಿ ವರವನ್ನಾಗಿ ಬೇಡಲಿಲ್ಲವೇ? ಈಗ ಆ ವರವು ನನಗೆ ಕೊಡಲ್ಪಟ್ಟಿದೆ ಎಂದು ತೋರುತ್ತದೆ. ಆತನೇ ನನ್ನ ಸದ್ಗುರುಗಳ ರೂಪದಲ್ಲಿ ಅವತರಿಸಿರುವುದೊಂದೇ ಅವನು ತನ್ನನ್ನು ನನಗೆ ಕೊಟ್ಟುಕೊಳ್ಳುವ ಮಾರ್ಗ. ನಿಜವಾಗಿಯೂ ಈಗ ನನ್ನಂತೆಯೇ ಬದುಕಿರುವ ನನ್ನ ಸದ್ಗುರುಗಳು ಹಗಲೂ ರಾತ್ರಿಯೂ ಅಲ್ಲಿರುತ್ತಾರೆ; ಅವರು ನನ್ನ ಇಷ್ಟ ದೇವತೆಯಾದ ಶ್ರೀ ಕೃಷ್ಣನಂತೆ ಕೆಲವು ಕಾಲ ತೋರಿಸಿಕೊಳ್ಳುವುದು ಮತ್ತು ಕೆಲವು ಕಾಲ ಮಾಯವಾಗಿ ಹೋಗುವುದು ಎಂಬ ರೀತಿಯಲ್ಲಿ ಅವರಿಲ್ಲ! ಆತನ ಪಾದಗಳನ್ನು ಸೇರುವುದೇ ನಿಜವಾಗಿಯೂ ನಾನು ಬೇಡಿದ ವರ. ಹಾಗಾದರೆ ನಾನಿಲ್ಲಿ ಏತಕ್ಕಾಗಿಯಾದರೂ ಉಳಿದುಕೊಂಡಿರಬೇಕು?"

ಅವನಲ್ಲಿ ಗುರುಭಕ್ತಿಯು ಈಗ ಅರಳಿದೆ. ಎಲ್ಲವನ್ನೂ ತನ್ನ ಹಿಂದೆಯೇ ಬಿಟ್ಟು ಆ ಮಾನವನು ಮುಂದೆಂದೂ ಅಗಲದಂತೆ ತನ್ನ ಗುರುಗಳತ್ತ ಮರಳಿ ಹೋದನು. ಹೀಗೆ ಅವನ ಇಷ್ಟ ದೇವತಾ ಭಕ್ತಿಯು ಪರಿಪಕ್ವಗೊಂಡು ಗುರುಭಕ್ತಿಯಾಗಿ ಹೋಯ್ತು. ಆ ಮನುಷ್ಯನೀಗ ನಮ್ಮ ಶಾಲೆಯ ನಾಲ್ಕನೆಯ ಇಯತ್ತೆಗೆ ಸೇರಿದವನಾದನು. ಈ ಗುರುಭಕ್ತಿಯು ಎಲ್ಲ ವಿಧದ ದ್ವೈತ ಭಕ್ತಿಯ ಶಿಖರ. ಇನ್ನಾವ ವಿಧದ ಭಕ್ತಿಯೂ ಇದನ್ನು ಮೀರಿಸದು.

---

೨೪ ಪರಿಶಿಷ್ಟ ೪, ವಿಭಾಗ (೮) ಎಂಬುದನ್ನು ನೋಡಿರಿ.

"ಗುರುವು ಬ್ರಹ್ಮ, ಗುರುವು ವಿಷ್ಣು, ಗುರುವು ಮಹೇಶ್ವರ ; ನಿಜವಾಗಿಯೂ ಗುರುವೇ ಪರಬ್ರಹ್ಮ. ನನ್ನ ನಮಸ್ಕಾರವು ಅವನಿಗೆ ಸಲ್ಲಲಿ –

ಗುರುರ್ಬ್ರಹ್ಮಾ ಗುರುರ್ವಿಷ್ಣು ರ್ಗುರುಃ ಸಾಕ್ಷಾನ್ಮಹೇಶ್ವರಃ
ಗುರುರೇವ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ"

ಒಬ್ಬನ ಹೃದಯದಲ್ಲಿ ಅಂಥ ಗುರುಭಕ್ತಿ ಅರಳಿದಾಗ ಪರಮ ಪದಾರ್ಥವೆಂಬ ಗುರಿಯತ್ತ ಒಬ್ಬನು ಮಾಡುವ ಯಾತ್ರೆಯು, ಮಳೆಹನಿಯು ಗಂಗಾಪ್ರವಾಹದಲ್ಲಿ ಬೀಳುವಂತಾಗುತ್ತದೆ. ನಮ್ಮ ಪಾಠಶಾಲೆಯ ೪ನೆಯ ಇಯತ್ತೆಯಲ್ಲಿ ಮಾತ್ರ ನಿಜಗುರು ಲಾಭ ಮತ್ತು ಅಂತಃಕರಣದಲ್ಲಿ ನಿಜವಾದ ಗುರುಭಕ್ತಿಯು ಜನ್ಮ ತಾಳುವುದು–ಎಂಬಿವು ಘಟಿಸುತ್ತವೆ. ಈ ಇಯತ್ತೆಯಲ್ಲಿ ಭಕ್ತಿಯು ಶುದ್ಧೀಕೃತವಾಗುವುದು. ತನ್ನ ಗುರುಗಳೊಡನಿರುವುದೆಂದರೇ ತನ್ನ ಇಷ್ಟದೇವತೆಯನ್ನು ಪಡೆದು ಅವನೊಡನಿರುವುದೆಂದೂ ಮಾನವ ತಿಳಿದೊಡನೆಯೇ ತನ್ನಿಷ್ಟದೈವವನ್ನು ಪಡೆದುಕೊಂಡು ಅವನೊಡನೆ ಇರಬೇಕೆಂಬ ಅವನ ಬಯಕೆಯ ಶುಷ್ಕವಾಗಿ ಹೋಗುವುದು. ಪ್ರಾಪಂಚಿಕ ವಸ್ತುಗಳ ಬಗೆಗಿನ ಎಲ್ಲ ಬಯಕೆಗಳನ್ನು ಅವನ ವಿವೇಕವು ನಾಶಗೊಳಿಸಿದುದರಿಂದ ಆ ಮನುಷ್ಯನೀಗ ತನ್ನ ಗುರುಗಳ ಪಾದಗಳೆಡೆಯಲ್ಲಿ ಕುಳಿತು ತನ್ನ ಗುರುವಿನ ಸಮಕ್ಷಮದಲ್ಲಿ ಸಂಪೂರ್ಣ ತೃಪ್ತಿಯಿಂದ ಆನಂದವನ್ನು ಅನುಭೋಗಿಸುತ್ತಿರುತ್ತಾನೆ (ಅಂದರೆ ವಿವೇಕ–ಆನಂದದ ಸ್ಥಿತಿಯಲ್ಲಿ ಆತನಿರುತ್ತಾನೆ).

ಎಲ್ಲ ವಿಧದ ದ್ವೈತ ಭಕ್ತಿಗಳಲ್ಲಿ ಗುರುಭಕ್ತಿಯು ಶ್ರೇಷ್ಠವೆಂದು ಗೊತ್ತಾದ ಮೇಲೆ, ನಮ್ಮಲ್ಲಿರುವ ಗುರುಭಕ್ತಿಯು ಯಾವ ಸ್ವರೂಪದ್ದೆಂಬುದನ್ನು ಈಗ ನಾವು ಸೂಕ್ಷ್ಮಾವಲೋಕನ ಮಾಡೋಣ. ಪ್ರಾಚೀನ ಮಾನವನು ನಮ್ಮ ಶಾಲೆಯ ಒಂದನೆಯ ಇಯತ್ತೆಯನ್ನು ಸೇರಿದಾಗ ಅವನ ಉಪಾಧ್ಯಾಯನೆನ್ನಿಸಿದ ವೇದರಾಶಿಯು ಅವನಿಗೆ ಗುರುವಾಗಿತ್ತು. ಆ ಗುರುವಿನ ಬಗೆಗಿನ ಅವನ ಭಕ್ತಿಯೂ ಒಂದು ವಿಧದ ಗುರುಭಕ್ತಿಯೇ. ಅದು ಗುರುಭಕ್ತಿಯಾಗಿರಲಿಲ್ಲವೇ? ನಮ್ಮ ಪ್ರತಿಪಾದನೆಗೋಸ್ಕರ ಅನುಕೂಲವಾಗಲೆಂದು ಹೇಳಿದ ಪ್ರಕಾರ ವೇದ ರಾಶಿಯು ಉಪಾಧ್ಯಾಯ ಮತ್ತು ಮನುಕುಲವಿಡೀ ಆ ಮಾನವ. ಅದು ವ್ಯಾವಹಾರಿಕವಾಗಿ ಹೇಗೆ ಕಾರ್ಯಗತವಾಗುತ್ತದೆ ಎಂಬುದನ್ನು ನೋಡೋಣ. ವೇದಗಳ ಕರ್ಮಕಾಂಡದ ಕೆಲಭಾಗಗಳನ್ನು ಓದಿ ಅರಗಿಸಿಕೊಂಡ ಪಂಡಿತರೂ ವಿದ್ವಾಂಸರೂ (ಈ ಲೋಕದಲ್ಲಿ) ಸಿಗುವುದಿಲ್ಲವೇ? ಅವರಿಂದಲೇ ಮನುಕುಲವು ಉಪದೇಶ ಪಡೆಯಬೇಕು ; ಕರ್ಮಕಾಂಡದ ವಿಶಿಷ್ಟ ಶಾಖೆಯಲ್ಲಿ ಅವರಲ್ಲಿ ಪ್ರತಿಯೊಬ್ಬನೂ ಗುರುವೇ – ಆಯಾ ಶಾಖೆಗೆ ಆಯಾ ಗುರು. ಆದುದರಿಂದ (ನಮ್ಮ ಪಾಠಶಾಲೆಯ) ಮೊದಲನೆಯ ವರ್ಗದ ಗುರುಗಳು ಅನೇಕ. ಅವರಲ್ಲಿಯ ಪ್ರತಿಯೊಬ್ಬರ ಶಿಷ್ಯರೂ ಅನೇಕ. ಹೀಗೆ ಮಾನವಕುಲದಲ್ಲಿ ನಮ್ಮ ಮಾನವನು ಮೊದಲನೆಯ ದರ್ಜೆಯಲ್ಲಿದ್ದಾಗ ಹೇಗೋ ಹಾಗೆ ಅನೇಕ ಶಿಷ್ಯವರ್ಗಗಳಿಗೆ ಕರ್ಮಪಾಠ ಹೇಳುವ ಗುರುಗಳು ಬಹಳ. ಅಂಥ ಒಂದನೆಯ ಇಯತ್ತೆಯ ಗುರುಗಳೂ ಶಿಷ್ಯರೂ ನಮ್ಮ ನಡುವೆ ಆಗಿ ಹೋಗಿದ್ದಾರೆ, ಇದ್ದಾರೆ ಮತ್ತು ಇರುವರು. ತನ್ನ ಗುರುವೇ ಅತ್ಯುನ್ನತ ಸದ್ಗುರು ಎಂದು ಪ್ರತಿಯೊಬ್ಬ ಗುರುವಿನ ಗುಂಪಿನಲ್ಲಿರುವ ಪ್ರತೀ ವಿದ್ಯಾರ್ಥಿಯೂ ಪ್ರಾಮಾಣಿಕವಾಗಿ ಸಾಧಿಸಿದರೆ ಅದರಲ್ಲಿ ಯಾವ ಆಶ್ಚರ್ಯವೂ

ಇಲ್ಲ! ಈಗ ನಮಗೆ ಆ ಶಿಷ್ಯರ ಗುರುಭಕ್ತಿಗೂ ಈ ಮಾನವನ ಗುರುಭಕ್ತಿಗೂ ಇರುವ ಅಂತರ ಗೊತ್ತಾಗುತ್ತದೆ–ಇವನೀಗ ೪ನೆಯ ಇಯತ್ತೆಯಲ್ಲಿದ್ದಾನೆ. ಈ ಅಂತರವು ಕಣಿವೆಗೂ ಪರ್ವತಕ್ಕೂ ಇರುವ ಅಂತರದಂತಿದೆ.

ಒಂದನೆಯ ಇಯತ್ತೆಯ ಜನರಿಗೆ ಅವರ ಪ್ರಾಪಂಚಿಕ ವಸ್ತುಗಳ ಬಗೆಗಿನ ಬಯಕೆಗಳ ಪೂರೈಕೆಗಾಗಿ (ವಿಷಯಭಕ್ತಿಗೆ ಸರಿಯಾಗಿ) ಅನೇಕ ಗುರುಗಳಿರುವ ಹಾಗೆ ನಮ್ಮ ನಡುವೆ ಎರಡನೆಯ ಇಯತ್ತೆಗೆ ಸೇರಿದ ಜನರಿಗೆ (ಅವರ ವಿಷಯ ಭಕ್ತಿಗನುಗುಣವಾಗಿ) ದೇವರ ವಿವಿಧ ನಾಮರೂಪಗಳನ್ನು ಪೂಜಿಸುವುದರ ಮೂಲಕ ಪ್ರಾಪಂಚಿಕ ವಸ್ತುಗಳ ಕುರಿತಾದ ಬಯಕೆಗಳ ಪೂರೈಕೆಗಾಗಿ ಅಸಂಖ್ಯಾತ ಗುರುಗಳಿರುತ್ತಾರೆ. ಪುಟ ೨ ರಲ್ಲಿ ಹೇಳಿರುವಂತೆ ಯಾರ ಪ್ರಗತಿಯು ಮೂರನೆಯ ವರ್ಗದ (ಅ) ವಿಭಾಗದಲ್ಲಿ ನಿಂತು ಹಿಮ್ಮೆಟ್ಟಿತೋ ಅವರನ್ನು ಎರಡನೆಯ ವರ್ಗದವರು, ಇನ್ನೂ ಪೂಜಾವಿಧಿಗಳನ್ನು ಕಲಿತುಕೊಳ್ಳುವ ಮಟ್ಟದಲ್ಲಿರುವುದರಿಂದ, ದೇವಸಾಕ್ಷಾತ್ಕಾರ ಮಾಡಿಕೊಂಡ ಮಹಾತ್ಮರೆಂದು ಗ್ರಹಿಸುತ್ತಾರೆ. ೨ನೆಯ ವರ್ಗದವರಿಗೆ ಪ್ರಾಪಂಚಿಕ ವಸ್ತುಗಳ ಬಗ್ಗೆ ಆಸೆಗಳಿರುತ್ತವೆ, ಸಿದ್ಧಿಗಳು ದೊರಕಬೇಕೆಂಬ ಬಯಕೆಗಳಿರುತ್ತವೆ. ಹೆಸರು–ಕೀರ್ತಿಗಳ ಅಪೇಕ್ಷೆ ಇರುತ್ತದೆ ; ಅವರಿಗೆ ತಮ್ಮ ಇಷ್ಟದೇವತೆಯನ್ನು ನಾಮರೂಪಗಳ ಮೂಲಕ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗಿದ್ದರೂ ಅಷ್ಟೇ. ಅವರೂ ತಮ್ಮ ಗುರುಗಳ ಬಗೆಗಿನ ಪ್ರೀತಿಯನ್ನು ಗುರುಭಕ್ತಿ ಎಂದು ಕರೆದುಕೊಂಡು "ದೇವರನ್ನು ಕಂಡ ನನ್ನ ಇಂಥ ಗುರುವೇ ಮಹಾತ್ಮನು. ಅವನೇ ದೇವರು ! ಅವನೇ ಮೂರ್ತಿವೆತ್ತ ದೇವರು. ಅವನು ಮಹರ್ಷಿ. ಅವನ ಹತ್ತಿರ ಹೋಗಿರಿ. ನಿಮ್ಮೆಲ್ಲಾ ಗುರಿಗಳು ಸಿದ್ಧಿಸುವುವು" ಎಂದು ಘೋಷಿಸುವರು. ನಮ್ಮ ಶಾಲೆಯ ೨ನೆಯ ವರ್ಗದಲ್ಲಿ ಕೋಟಿಗಟ್ಟಲೆ ವಿದ್ಯಾರ್ಥಿಗಳಿರುವುದರಿಂದಲೂ ತನ್ನ ವಿವಿಧ ಬಯಕೆಗಳನ್ನು ಪೂರೈಸಿಕೊಳ್ಳಲು ಪ್ರತಿಯೊಬ್ಬ ವಿದ್ಯಾರ್ಥಿಯೂ ದೇವರ ಅಷ್ಟೊಂದು ನಾಮರೂಪಗಳನ್ನು ಪೂಜಿಸಬೇಕಾಗಿರುವುದರಿಂದ ಆ ವರ್ಗದವರಿಗೆ ಕೋಟ್ಯನುಕೋಟಿ ಗುರುಗಳು ಇರಬೇಕಾಯಿತು! ಅಲ್ಲವೇ?

"ತನ್ನ ಲಕ್ಷ್ಮೀದೇವೀಪೂಜೆಯ ಮೂಲಕ ಬಹಳ ಸಿದ್ಧಿಗಳನ್ನು ಪಡೆದಿರುವ ಮಹಾತ್ಮನೊಬ್ಬ ಇಲ್ಲಿದ್ದಾನೆ. ಅವನ ಹತ್ತಿರ ಹೋದರೆ ನಮಗೆ ಧನವೂ ಕೀರ್ತಿಯೂ ಲಭಿಸುವುದು."…. ಇಲ್ಲಿಯ ನಮ್ಮ ಹಳ್ಳಿಯಲ್ಲಿ ಒಬ್ಬ ದೊಡ್ಡ ಸ್ವಾಮಿಗಳಿದ್ದಾರೆ ; ಅವರಿಗೆ ಪಾರ್ವತೀದರ್ಶನ ದೊರಕಿದೆ. ಅವನು ನಮಗೆ ಪ್ರಸಾದ ಕೊಡುತ್ತಾನೆ. ಆ ಪ್ರಸಾದವು ನಮ್ಮ ಎಲ್ಲ ಬಯಕೆಗಳನ್ನೂ ಈಡೇರಿಸುತ್ತದೆ"…. ಹತ್ತಿರದ ಗುಡ್ಡದ ತುದಿಯಲ್ಲಿರುವ ದೇವಾಲಯದಲ್ಲಿ ಒಬ್ಬ ಸಂತನಿದ್ದಾನೆ. ಅವನ ಮೂಲಕ ಒಡೆಯ ಸುಬ್ರಹ್ಮಣ್ಯನು ಮಾತಾಡುತ್ತಾನೆ. ಅವನು ಯಾರಿಗಾದರೂ ಸ್ವಲ್ಪ ಪವಿತ್ರ ವಿಭೂತಿಯನ್ನು ಕೊಟ್ಟರೆ ಪವಾಡಗಳಂಥ ಘಟನೆಗಳು ನಡೆದು ಹೋಗುವುವು. ಈ ಪ್ರಕಾರವಾಗಿ ನಮ್ಮ ಸುತ್ತಮುತ್ತಲೂ ಅವಿದ್ಯರಲ್ಲದೆ ಪದವೀಧರರು, ಮತ್ತು ದೊಡ್ಡ ದೊಡ್ಡ ಸ್ಥಾನಮಾನಗಳನ್ನುಳ್ಳವರು ಕೂಡಾ ಅಂಥ ಅನೇಕ ಗುರುಗಳ ಸುತ್ತಲೂ ಗುಂಪುಕಟ್ಟಿ ಸೇರುವುದು ನಮಗೆ ಕಾಣುವುದಿಲ್ಲವೇ? ಅವರು ಮೇಲಿನಂತೆ ಹೇಳುವುದು ಕೇಳುವುದಿಲ್ಲವೇ? ಹೀಗೆ ನಮ್ಮ ಪಾಠಶಾಲೆಯ ೧ನೆಯ ಮತ್ತು ೨ನೆಯ ವರ್ಗಗಳ ಉಪಾಧ್ಯಾಯರು, ಎಂದರೆ ವೇದಗಳು, ಅಷ್ಟು ಸಹಾಯಕ ಉಪಾಧ್ಯಾಯರ ಮೂಲಕ ಉಪದೇಶ ಕೊಡುತ್ತಾರೆ.

ಮೂರನೆಯ ದರ್ಜೆಯ (ಅ) ವಿಭಾಗದ ಮುಮುಕ್ಷುವು ತನ್ನ ಏಕಾಗ್ರಭಕ್ತಿಯ ದೆಸೆಯಿಂದ ತನ್ನ ಇಷ್ಟದೇವತೆಯ ಸಂಪರ್ಕವನ್ನು ಅನುಭೋಗಿಸಬಲ್ಲನು. ಆದುದರಿಂದ ಯಾರ ಹತ್ತಿರ ಹೋಗುವ ಅವಶ್ಯಕತೆಯೂ ಅವರಿಗಿಲ್ಲ. ವೇದರೂಪದ ಉಪಾಧ್ಯಾಯರು ಅವನನ್ನು ೩ನೆಯ ಇಯತ್ತೆಯ (ಅ) ವಿಭಾಗಕ್ಕೆ ಸೇರಿಸಿದವರಾದರೂ ಅವರ ಹತ್ತಿರ ಕೂಡಾ ಹೋಗುವ ಅಗತ್ಯ ಅವನಿಗಿರದು. ಏಕೆಂದರೆ, ಅವನ ಪ್ರಾಪಂಚಿಕ ಆಸೆಗಳನ್ನೆಲ್ಲಾ ಈಡೇರಿಸಿ ಕೊಡುತ್ತಿರುವ ಅವನ ಇಷ್ಟ ದೇವತೆಯಲ್ಲದೆ ಇನ್ನಾವುವಾದಾವು ಆ ವೇದಗಳು? ಅವನ ಏಕಾಗ್ರಭಕ್ತಿಯ ದೆಸೆಯಿಂದ ತನ್ನ ಇಷ್ಟದೇವತೆಯಲ್ಲದ ಇತರ ದೇವರುಗಳ ನಾಮರೂಪಗಳನ್ನು ಸಂದರ್ಶಿಸುವುದು ಮತ್ತು ಅಂಥ ಪೂರ್ವೋಕ್ತ ರೀತಿಯ ಹಲವಾರು ಗುರುಗಳ ಹತ್ತಿರ ಹೋಗುವುದು ಈಗ ಅವನ ಸ್ವಭಾವದಲ್ಲೇ ಇರುವುದಿಲ್ಲ.

ಕೆಲವು ಸಲ, ವಿಚಿತ್ರವಾಗಿ, ೪ನೆಯ ದರ್ಜೆಯಲ್ಲಿರುವ ಮಾನವನಂತೆ ಅಂದರೆ ದೇವರಲ್ಲಷ್ಟೇ ಭಕ್ತಿಯನ್ನಿಟ್ಟುಕೊಂಡಿದ್ದು ಪ್ರಪಂಚದ ವಸ್ತುಗಳ ಬಗೆಗೆ ಸಂಪೂರ್ಣ ವೈರಾಗ್ಯ ತಾಳಿರುವ – ಸುಂಸಂಸ್ಕೃತ ಗುರುಭಕ್ತಿಯ ಮೂಲಕ ಉನ್ನತ ಅರ್ಹತೆಯನ್ನು ಪಡೆದುಕೊಂಡಿರುವ ಕೆಲ ಮುಮುಕ್ಷುಗಳಿಗೂ ಹಿಂದೆ ಹೇಳಿದಂಥ ಗುರುಗಳ ಶಿಷ್ಯರು ತಮ್ಮ ಗುರುಗಳನ್ನು ಸಂದರ್ಶಿಸಬೇಕೆಂದು ಉಪದೇಶಿಸುತ್ತಾರೆ. ಆದರೆ ಪರಮಾತ್ಮಾನುಗ್ರಹವು ಬಹುಬೇಗನೆ ಅವನ ಒಳಿತಿಗಾಗಿಯೇ ಆ ಪರಿಸರವನ್ನು ಬಿಟ್ಟು ಹೋಗುವಂತೆ ಮಾಡುವುದು. ಎಲ್ಲವನ್ನೂ ಪರಿತ್ಯಜಿಸಿದ ಬಳಿಕ ಬುದ್ಧನು ಕಾಡಿನಲ್ಲಿ ಸತ್ಯಶೋಧಕ್ಕಾಗಿ ಅಲೆದಾಡುತ್ತಿದ್ದಾಗ ನಮ್ಮ ಪಾಠಶಾಲೆಯ ಪ್ರಥಮ ಹಾಗೂ ದ್ವಿತೀಯ ವರ್ಗಗಳಿಗೆ ಅರ್ಹರಾದ ವಿದ್ಯಾರ್ಥಿಗಳ ಗುರುಗಳ ಅಂಕೆಗೆ ಒಳಪಡಬೇಕಾದ ಪರಿಸ್ಥಿತಿ ಉಂಟಾಯಿತು. ಅವರ ಸಹಾಯವು ವ್ಯರ್ಥವೆಂದು ಬಹುಬೇಗ ತಿಳಿದುಕೊಂಡು ಅವನು ಅವರನ್ನು ಬಿಟ್ಟು ಹೋದನು. ೩ನೆಯ ವರ್ಗದ (ಬ) ವಿಭಾಗದಲ್ಲಿರುವ ಮುಮುಕ್ಷುವಿನ ಪ್ರಜ್ವಲ ಜಿಜ್ಞಾಸಾಗ್ನಿಯೆದುರು ಅಂಥ ಗುರುಗಳು ಅವನಿಗೆ ಯಾವ ನೆರವನ್ನೂ ನೀಡಲಾಗದಂತಾಗುವುದು ಆಶ್ಚರ್ಯವೇನಲ್ಲ. ಯೋಗಿನಿ ಭೈರವಿ ಬ್ರಾಹ್ಮಣಿಯ ಶಿಷ್ಯತ್ವವನ್ನು ಕೊನೆಗೊಳಿಸುವ ಒತ್ತಾಯ ಶ್ರೀ ರಾಮಕೃಷ್ಣ ಪರಮಹಂಸರಿಗೆ ಉಂಟಾದುದು ಇಲ್ಲಿ ಗಮನಿಸಬೇಕಾದ ಅಂಶ. ಕೆಲವು ಸಾರಿ ಅಂಥ ಗುರುಗಳು ಮುಮುಕ್ಷುವಿನ ಮೇಲೆ ದೂರು ಹೊರಿಸಬಹುದು. ಏಕೆಂದರೆ, ಅವನಿಗೆ ಅವರಲ್ಲಿ ಮುಂದೆ ಯಾವ ಆಸಕ್ತಿಯೂ ಇರುವುದಿಲ್ಲ ಮತ್ತು ೪ನೆಯ ಇಯತ್ತೆಯತ್ತ ಅವನು ವೇಗವಾಗಿ ಧಾವಿಸುತ್ತಿರುತ್ತಾನೆ, ಭಕ್ತಿಯಿಲ್ಲ, ಅವಿಧೇಯ (ಗುರುದ್ರೋಹಿ), ಕೃತಘ್ನ ಎಂಬುದಾಗಿ ಆ ಗುರುಗಳು ಅವನು ದೂರಬಹುದು. ಆದರೆ ಆ ಮುಮುಕ್ಷು ಶ್ರೇಷ್ಠನು ತನ್ನ ಗುರಿಯತ್ತ ತನ್ನನ್ನು ನೂಕಿಕೊಂಡು ಒಯ್ಯುವನು. ಅವನಲ್ಲಿ ಪರಮ ಸತ್ಯದ ಬಗೆಗಿನ ತೀಕ್ಷ್ಣ ಬಯಕೆಯ ಪ್ರವಾಹ ಹರಿಯುತ್ತಿರುವಾಗ ಆ ಗುರುಗಳ ಜೊತೆಗೆ ವ್ಯರ್ಥವಾಗಿ ಕಳೆದ ದಿನಗಳ ಬಗೆಗೆ ಪಶ್ಚಾತ್ತಾಪ ಪಡಲು ಅಥವಾ ಅವರ ಬಗ್ಗೆ ದ್ವೇಷ ತಾಳಲು ಯಾ ಔದಾಸೀನ್ಯ ತೋರಲು ಅವನಿಗೆ ಸಮಯವೆಲ್ಲಿದೆ? ಅವರನ್ನು ಮರೆತು ಅವನು ಮುನ್ನಡೆಯುವನು.

ನಮ್ಮ ಶಾಲೆಯ ಮೂರನೆಯ (ಬ) ವಿಭಾಗದಿಂದ ನಾಲ್ಕನೆಯ ಇಯತ್ತೆಯತ್ತ ಪ್ರಗತಿಯಿಂದ ಸಾಗುತ್ತಿರುವಾಗ, ಕೆಳ ವರ್ಗಗಳಿಗೆ ಮಾತ್ರ ಬೋಧಿಸಬಲ್ಲ ಗುರುಗಳಲ್ಲಿ

ಕೆಲವರು – ಹಾಗೆ ಸಾಗುತ್ತಿರುವ ಮುಮುಕ್ಷುಗಳನ್ನು ಕಂಡು, ಅವರ ನಿರಾಶೆ–ಕಾಲಹರಣಗಳನ್ನು ಗಮನಿಸಿ – ಅವರಿಗೆ "ಗುರುಶಿಷ್ಯ ಭಾವವೀಗ ಅನಗತ್ಯ ; ಗುರು ಸದ್ಬೋಧ ನೀಡುವನೆಂಬ ಹಳೆಯ ನಂಬಿಗೆ ಈಗ ಅನಪೇಕ್ಷಣೀಯ ಎಂದು ಉಪದೇಶಿಸುವುದು ಅಗತ್ಯವೆಂದು ತಿಳಿಯಬಹುದು. ಅಂಥ ಹೇಳಿಕೆಯ ಹಿನ್ನಲೆಯಲ್ಲಿರುವ ಸತ್ಯ ಇದು : "ನಮ್ಮ ಪಾಠಶಾಲೆಯ ೪ನೆಯ ವರ್ಗಕ್ಕೆ ಸೇರಲು ಅರ್ಹನಾದ ಅತ್ಯುನ್ನತ ಪರಿಪಕ್ವ ದಶೆಗೇರಿದವನು ಪೂರ್ವೋಕ್ತರಾದ ಯಾವ ಗುರುಗಳ ಸನ್ನಿಧಿಗೂ ಹೋಗುವ ಅವಶ್ಯಕತೆಯಿಲ್ಲ. ಏಕೆಂದರೆ ಕಾಲಕ್ಕೆ ಸರಿಯಾಗಿ ಅನುಗ್ರಹದ ದೆಸೆಯಿಂದ ಅವನು ಸದ್ಗುರುವನ್ನು ಸಂದರ್ಶಿಸುವಂತೆ ವ್ಯವಸ್ಥೆ ಮಾಡಲಾದೀತು." ಆದರೂ ಹಾಗೆ ಬುದ್ಧಿವಾದ ಹೇಳುವವರು ಗುರುಗಳ ಪಾತ್ರವನ್ನು ವಹಿಸಿ ಪಕ್ವಾತ್ಮರಾದ ಮುಮುಕ್ಷುಗಳಿಗೆ ಅಂಥ ಎಚ್ಚರಿಕೆಗಳನ್ನಿತ್ತು, ಅವರು ಅಪದಿಕ್ಕುಗಳಿಗೆ ಹೋಗದಂತೆ, ಮಾಡಿ ರಕ್ಷಿಸುವುದಿಲ್ಲವೇ? ಕೆಲ ಶ್ರದ್ಧಾಳುಗಳಾದ ಮುಮುಕ್ಷುಗಳಿಗೆ ಕೆಲ ತತ್ವಶಾಸ್ತ್ರದ ಕೇವಲ ವಾಗ್ಮಿಗಳಿಂದಲೂ ಉಪಾಸನಾಬಲದಿಂದ ಪ್ರಾಪಂಚಿಕ ವಸ್ತುಗಳನ್ನು ಪಡೆಯಬಲ್ಲವರ ಗುಜುಗುಂಪಿನಿಂದಲೂ ನಿರಾಶೆ ಉಂಟಾದಾಗ ಮಹಾಗುರು (ಸದ್‌ಗುರು) ತಮಗೆ ಖಂಡಿತ ಅನಗತ್ಯ ಎಂದು ನಿಗಮನಿಸುವುದು ಅಪಾಯಕರ. ಉಕ್ತ ಉಪಾಸಕರು ೩ನೆಯ ದರ್ಜೆಯ (ಅ) ವಿಭಾಗದಲ್ಲಿರುವ ಮಹಾಗುರುಂ ಮನ್ಯರು – ಮಹಾ ಗುರುಗಳಲ್ಲ. ಈ ಸಂಗತಿಯ ಕುರಿತೇ ಶ್ರೀ ರಾಮಕೃಷ್ಣ ಪರಮಹಂಸರು, "ಒಂದು ನೀರು ಹಾವು ಒಂದು ದೊಡ್ಡ ಕಪ್ಪೆಯನ್ನು ಕಚ್ಚಿ ಹಿಡಿದಾಗ ಎರಡೂ ನರಳುವುದು ; ಏಕೆಂದರೆ ಹಾವು ಕಪ್ಪೆಯನ್ನು ನುಂಗಲಾರದು ಮತ್ತು ಕಪ್ಪೆಯು ಹಾವಿನ (ಬಾಯಿಯಿಂದ) ತಪ್ಪಿಸಿಕೊಳ್ಳಲಾರದು" ಎಂದು ಹೇಳಿದ್ದು.

ಇನ್ನೂ ಕೆಲವು ಸಲ – ಹಾಗೇ ವಿಚಿತ್ರವಾಗಿ ಕೇವಲ ಪ್ರಾಪಂಚಿಕ ವಸ್ತುಗಳ ಬಗೆಗೆ ಆಸೆಯುಳ್ಳ ಅನೇಕರು (ವಿಷಯ ಭಕ್ತಿ ಸಂಪನ್ನರು) ನಮ್ಮ ಶಾಲೆಯ ೨ ಮತ್ತು ೩ (ಅ) ವರ್ಗಗಳಲ್ಲಿರುತ್ತಾ ನಿಜವಾದ ಸದ್ಗುರುವಿನ ದಿವ್ಯ ಸನ್ನಿಧಾನಕ್ಕೆ ಬಂದಾರು. ಆ ಸದ್ಗುರು ಕಾಯುತ್ತಿರುವುದು ೪ನೆಯ ದರ್ಜೆಯ ಮುಮುಕ್ಷುವಿಗಾಗಿ. ಆದರೆ ಅವರು ತಮ್ಮ ಪ್ರಾರಬ್ಧ ಬಲದಿಂದ ಆ ಮಹಾಗುರುವಿನೆದುರು ಬಂದವರಾಗಿರುತ್ತಾರೆ. ಆ ಮಹಾಗುರುವೋ ಯಾವಾಗಲೂ, ಪರಬ್ರಹ್ಮವಾಗಿ ಪ್ರಕಾಶಿಸುತ್ತಿರುತ್ತಾನೆ. ಅವನ ಶರೀರ ಮಾತ್ರ ಮಾನವ್ಯ. ಆದರೆ ಅವರು ಆತನನ್ನು ತಮ್ಮ ವಿಷಯ ಭಕ್ತಿಗೆ ಸಾಧನವೆಂದು ಗ್ರಹಿಸುತ್ತಾರೆ ; ಆದ್ದರಿಂದ ಅವರಿಗೆ ಆ ಗುರುವಿನ ಬಗೆಗೆ ಇರುವ ಪ್ರೀತಿಯನ್ನು ಗುರುಭಕ್ತಿ ಎಂದು ಕರೆಯಲು ಸಾಧ್ಯವಾಗದು.

"ಈ ಜಗತ್ತಿನಲ್ಲಿ ಮತ್ತು ಪರಲೋಕದಲ್ಲಿ ನಾನು ಸುಖವಾಗಿರಲಿ. ಅಪೇಕ್ಷಣೀಯ ವಸ್ತುಗಳನ್ನು ನಾನು ಹೊಂದಿರುವಂತಾಗಲಿ. ನಾನವುಗಳನ್ನು ಹೊಂದಲು ಬಯಸುವಂತಾಗಲಿ. ನನ್ನ ಆಶೆಗಳು ಈಡೇರಲಿ. ನನಗೆ ಉಳಿಯಲು ತಕ್ಕ ಮನೆ ಸಿಗಲಿ. ನನಗೆ ಕೀರ್ತಿಯು ಸಿಕ್ಕಲಿ ನಾನು ಸುದೈವಿಯಾಗಲಿ, ನನಗೆ ಐಶ್ವರ್ಯ ದೊರಕಲಿ. ನನ್ನ ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವ ಶಕ್ತಿ ನನಗೆ ಬರಲಿ. ಮಿಕ್ಕವರು ನನ್ನನ್ನು ಗೌರವಿಸಲಿ. ನಾನು ಧರ್ಮ ಕಾರ್ಯಗಳನ್ನು ಮಾಡುವಂತಾಗಲಿ ಮತ್ತು ಅಂಥ ಯಜ್ಞಾದಿಗಳನ್ನು

ಮಾಡಿ ಅದರ ಫಲವನ್ನು ನಾನು ಅನುಭೋಗಿಸುವಂತಾಗಲಿ. ನಾನು ಬಹುಕಾಲ ಜೀವಿಸಿರುವಂತಾಗಲಿ."

"–ಚಮಕಂ"+ –೩ನೆಯ ವಿಭಾಗ

"ನನಗೆ ಬೇಕಾದಷ್ಟು ಆಹಾರ ಸಿಗಲಿ. ನನಗೆ ಹಾಲು ಸಿಗಲಿ, ಕೆನೆ ಸಿಗಲಿ, ತುಪ್ಪ ಸಿಗಲಿ, ಜೇನುತುಪ್ಪ ಸಿಗಲಿ ; ನನ್ನ ಬಂಧುಗಳೊಡನೆ ತಿನ್ನುವ–ಕುಡಿಯುವ ಅವಕಾಶಗಳು ಸಿಗಲಿ. ನನ್ನ ಗಿಡ–ಮರಗಳು ಚೆನ್ನಾಗಿ ಬೆಳೆಯಲಿ. ನನಗೆ ಚಿನ್ನ, ರತ್ನ, ಮುತ್ತು ಮುಂತಾದವು ಯಥೇಷ್ಟವಾಗಿ ಸಿಗಲಿ. ನಾನು ದೇಹದಾರ್ಢ್ಯ ಉಳ್ಳವನಾಗಲಿ."

"–ಚಮಕಂ" –೪ನೆಯ ವಿಭಾಗ

"ನಾನು ಆಗಲೇ ಗಳಿಸಿದ ಮತ್ತು ಮುಂದೆ ಗಳಿಸಬಹುದಾದ ಸಂಪತ್ತು ಸುರಕ್ಷಿತವಾಗಿ ಇರಲಿ. ನಾನೂ ನನ್ನ ಮಕ್ಕಳೂ ಬಂಧುಗಳೂ ಅಭಿವೃದ್ಧಿಯುಕ್ತರಾಗಲಿ. ನಾನು ಚರಾಚರ ಆಸ್ತಿಯನ್ನು ಉಳ್ಳವನಾಗಲಿ. ನನ್ನ ಕರ್ಮಗಳಿಗೆ ನಾನು ತಕ್ಕ ಫಲಗಳನ್ನು ಪಡೆಯುವಂತಾಗಲಿ.

"–ಚಮಕಂ" –೫ನೆಯ ವಿಭಾಗ

ಸದ್ಗುರುವಿನ ಹತ್ತಿರ ಅವರು ಹೀಗೆ ಪ್ರಾರ್ಥಿಸುತ್ತಾರೆ.

ಹಣ್ಣಿನ ತೋಟದಲ್ಲಿರುವ ಎಲ್ಲ ಹಣ್ಣುಗಳಲ್ಲಿ ಕಾಗೆ ಕುಕ್ಕುವುದು ಚಿಕ್ಕದಾದ ಹಾಗೂ ಕಹಿಯಾದ ಬೇವಿನ ಹಣ್ಣನ್ನು ಮಾತ್ರ! ಸದ್ಗುರುವು ನಿಸ್ಪೃಹನಾಗಿದ್ದರೂ ನಿರುದ್ದೇಶನಾಗಿದ್ದರೂ ನಿಷ್ಪ್ರಯತ್ನ ಪರನಾಗಿದ್ದರೂ ಅವನ ಕೇವಲ ಸಾನಿಧ್ಯವೇ ಕಲ್ಪ ತರುವಿನಂತೆ, ಅವರ ಬಯಕೆಗಳನ್ನು ಪೂರೈಸುವುದರಲ್ಲಿ ಎಂದೂ ತಪ್ಪದು. ಅವರು ತಮ್ಮ ಬಯಕೆಗಳು ಈಡೇರಬೇಕೆಂದು ಬೇಡುವುದಲ್ಲದೆ, ನಮ್ಮ ಶಾಲೆಯ ೧ನೆಯ, ೨ನೆಯ ಮತ್ತು ೩ನೆಯ (ಅ) ಇಯತ್ತೆಗಳಿಗೆ ಸಲ್ಲುವ ಎಲ್ಲಾ ಕರ್ಮ, ಮಂತ್ರ ಮತ್ತು ಉಪಾಸನಾವಿಧಿಗಳಲ್ಲಿ ತಮ್ಮನ್ನು ಸದ್ಗುರು ಉಪನೀತರನ್ನಾಗಿ ಮಾಡಬೇಕೆಂದು ಸಹಾ ಅಪೇಕ್ಷಿಸುತ್ತಾರೆ. ಸದ್ಗುರು ಅವತರಿಸಿರುವುದು ನಮ್ಮ ಶಾಲೆಯ ೪ನೆಯ ವರ್ಗದವರಿಗೆ ಸ್ವಾತ್ಮಭಕ್ತಿಯನ್ನು ಕಲಿಸಲು ಮಾತ್ರವೇ ಆಗಿದ್ದರೂ – ಸ್ವಾತ್ಮ ಭಕ್ತಿಯು ಅತ್ಯುಚ್ಚವೂ ಅತಿ ಸುಂಸ್ಕೃತವೂ ಆದುದಾಗಿದ್ದರೂ– ಆತನು ಇತರರ ಮೇಲಿನ ಕನಿಕರದಿಂದ (ಪ್ರಾಪಂಚಿಕ ವಸ್ತುಗಳನ್ನು ಬೇಡುವವರ ಮೇಲಿನ ದಯೆಯಿಂದ) ಅವರ ಮಟ್ಟಕ್ಕೆ ಇಳಿದು ಬಂದು ಕೆಲ ಕರ್ಮಗಳನ್ನು ೧ನೆಯ ವರ್ಗದವರಿಗೂ ಕೆಲ ಮಂತ್ರಗಳನ್ನು, ಚಕ್ರಗಳನ್ನೂ ೨ನೆಯ ವರ್ಗದವರಿಗೂ ೩ನೆಯ (ಅ) ವಿಭಾಗಸ್ಥರಿಗೆಂದು ಕೆಲ ಸ್ತೋತ್ರಗಳನ್ನೂ ದಿವ್ಯನಾಮ ಜಪಗಳನ್ನೂ ಅವರವರ ಬೇಡಿಕೆಗೂ ಅಭಿರುಚಿಗೂ ತಕ್ಕಂತೆ ಶಿಫಾರಸ್ಸು ಮಾಡುವುದರ ಮೂಲಕ ಸಹಾಯವನ್ನೀಯುತ್ತಾನೆ. ಒಬ್ಬ ತಾಯಿಯು ತನ್ನ ಮಕ್ಕಳಿಗೆ ಒಂದು ವಿಧದ ಆಹಾರವನ್ನೂ, ವಯಸ್ಕರಿಗೆ ಇನ್ನೊಂದು ವಿಧದ ಆಹಾರವನ್ನೂ ಅವರವರ ರಕ್ತಗತ ಮಾಡಿಕೊಳ್ಳುವ ಶಕ್ತಿಗೆ ಅನುಗುಣವಾಗಿ ಕೊಟ್ಟರೆ ಹೇಗೆ ಆಶ್ಚರ್ಯವಾಗದೋ ಹಾಗೇ ಸದ್ಗುರುವು ಪ್ರಾಪಂಚಿಕ ವಸ್ತುಗಳನ್ನು ಪಡೆಯಲಷ್ಟೇ ಆತನ ಸಮೀಪಕ್ಕೆ ಬಂದಿರುವವರಿಗೆ ನೆರವು ನೀಡುವುದು

---

೨೫ ವೇದಗಳ ಒಂದು ಭಾಗದ ಹೆಸರು (ಶೀರ್ಷಿಕೆ)

ಆಶ್ಚರ್ಯವೆನ್ನಿಸದು. ನಮ್ಮ ಶಾಲೆಯ ೧ನೆಯ, ೨ನೆಯ ಮತ್ತು ೩ನೆಯ (ಅ)ವಿಭಾಗದ ವಿದ್ಯಾರ್ಥಿಗಳಿಗೆ ಕೇವಲ ವೇದ–ವಿದ್ವಾಂಸರಿಂದಲೂ ವೇದ ಪಂಡಿತರಿಂದಲೂ ಪಾಠ ಹೇಳಿಸಿಕೊಳ್ಳುವುದಕ್ಕಿಂತ ಪರಮಾತ್ಮ (ಪರಮೇಶ್ವರ) ಸ್ವರೂಪನಾದ ಸದ್ಗುರುವಿನಿಂದ ಪಾಠ ಹೇಳಿಸಿಕೊಳ್ಳುವುದು ವಿಶೇಷ ಹಕ್ಕೆನ್ನಿಸದೇ? ೩ನೆಯ ವರ್ಗದ (ಬ) ವಿಭಾಗಕ್ಕಿಂತ ಕೆಳಗಿನ ವರ್ಗಗಳಲ್ಲಿ ಇದ್ದು ಸದ್ಗುರುವಿನ ಹತ್ತಿರ ಬರುವವರಿಗೆ ಕರ್ಮಗಳು, ಮಂತ್ರಗಳು, ಚಕ್ರಗಳು, ಜಪಗಳು ಮುಂತಾದವುಗಳ ಬಗ್ಗೆ ಸದ್ಗುರು ಕೊಟ್ಟ ಉಪದೇಶಗಳನ್ನು – ಅವೇ ಪ್ರಧಾನೋಪದೇಶಗಳೆಂದು ತಿಳಿದುಕೊಂಡು ಹಾಗೆಂದೇ ಅವುಗಳನ್ನು ಪ್ರಚಾರ ಮಾಡುವುದು ಒಂದು ಚಟ. ಹೌದು, ಅವರಿಗೆ ಅವೇ ಮುಖ್ಯ ಮತ್ತು ಒಂದೇ ಒಂದಾದ (ನಮೂನೆಯ) ಉಪದೇಶಗಳು – ಆದರೆ ಅವರಿಗೆ ಮಾತ್ರವೇ ಅವು ಅಂಥವುಗಳು ! ಆದುದರಿಂದ ನಮ್ಮ ಶಾಲೆಯ ೪ನೆಯ ವರ್ಗದಲ್ಲಿರುವ ಮುಮುಕ್ಷುಗಳಿಗೆ ಸದ್ಗುರುವಿನ ಮುಖ್ಯ ಉಪದೇಶಗಳು ನಿಜವಾಗಿ ಯಾವುವು? ಎಂಬುದನ್ನು ಹುಡುಕಿ ತೆಗೆದು ಅನುಷ್ಠಾನಕ್ಕೆ ತಂದುಕೊಳ್ಳುವುದು ಕರ್ತವ್ಯ.

ನಮ್ಮ ಶಾಲೆಯಲ್ಲಿಯ ೧ ರಿಂದ ೩ (ಅ) ವರೆಗಿನ ವರ್ಗಗಳ ಯಾವ ಗುರುವೂ ಆತ್ಮಜ್ಞಾನಿಯಲ್ಲ. ಆದುದರಿಂದ ಅಂಥ ಗುರುಗಳು ಜಗತ್ತಿನ ನಾಮ–ರೂಪಗಳಿಗೆ ಸತ್ಯತೆ ಇದೆ ಎಂಬ ತಿಳುವಳಿಕೆ ಉಳ್ಳವರಾಗಿರುತ್ತಾರೆ. ಆ ಕಾರಣದಿಂದ ಇಹಪರಸುಖವನ್ನವರು ಬಯಸುತ್ತಾರೆ ಮತ್ತು ಹೆಸರನ್ನೂ ಕೀರ್ತಿಯನ್ನೂ ಆಶಿಸುತ್ತಾರೆ. ಅಂದರೆ, ಶ್ರೇಷ್ಠ ಗುರುಗಳೆಂದು ಜನರಿಂದ ಹೊಗಳಿಸಿಕೊಳ್ಳಲು ಆಶಿಸುತ್ತಾರೆ. ತತ್ಫಲವಾಗಿ ಅವರು ತಮ್ಮ ಶಿಷ್ಯರು ಯಾವಾಗಲೂ ತೃಪ್ತರೂ ಕರ್ತವ್ಯನಿಷ್ಠರೂ ತಮ್ಮಲ್ಲಿ ವಿಧೇಯರೂ ಆಗಿರುವುದನ್ನು ನಿರೀಕ್ಷಿಸುತ್ತಾರೆ.

ದ್ವೈತಭಕ್ತಿಯಿಂದ ತಮ್ಮ ಶಿಷ್ಯರು ಮುನ್ನಡೆಯುವುದನ್ನು ಅವರು ಬಯಸುವವರಲ್ಲದೆ ಸ್ವಾತ್ಮಭಕ್ತಿಯಿಂದ (ಪರಬ್ರಹ್ಮಭಕ್ತಿಯಿಂದ) ಆ ಶಿಷ್ಯರು ಮುನ್ನಡೆಯುವುದನ್ನು ಅವರು ಬಯಸರು ; ಆ ಗುರುಗಳಿಗೆ ತಮ್ಮ ಶಿಷ್ಯರು ಅದ್ವೈತಾನಂದವನ್ನು ಅನುಭೋಗಿಸುವುದು ಇಷ್ಟವಾಗದು. ಸ್ವತಃ ತಮಗೇ ಪರಮತತ್ವದ ಜ್ಞಾನವು ಇಲ್ಲದಿರುವುದರಿಂದ ಅವರು ಈರ್ಷ್ಯಾಲುಗಳಾಗಿರುತ್ತಾರೆ.

ಆದರೆ ನಿಜಗುರುವು ಪರಬ್ರಹ್ಮನೇ ಅಲ್ಲದೆ ಬೇರೆ ಯಾರೂ ಆಗಿರುವುದಿಲ್ಲ. ಆದ್ದರಿಂದ ಆತನು ತನ್ನ ಬಗೆಗಿನ ದ್ವೈತ ಭಕ್ತಿಯನ್ನು ತನ್ನ ಶಿಷ್ಯನು ಅನುಭೋಗಿಸಲು ಬಿಡನು ; ಅಂಥ ದ್ವೈತ ಭಕ್ತಿಯಲ್ಲಿಯೇ ತೃಪ್ತನಾಗಿ ವಿರಮಿಸಬಾರದೆಂಬುದನ್ನು ತನ್ನ ಶಿಷ್ಯನಿಗೆ ಅವನು ಎತ್ತಿ ತೋರಿಸುತ್ತಾನೆ. ಶಿಷ್ಯನು ಸ್ವಯಂ ಪ್ರಕಾಶವುಳ್ಳ ಅದ್ವೈತ ಬ್ರಹ್ಮಾತ್ಮವನ್ನು (ಸಹಜಾತ್ಮಾನುಭವವನ್ನು) ಪಡೆಯುವವರೆಗೆ ಸದ್ಯದ ಶಮಸ್ಥಿತಿಯಲ್ಲೇ ತೃಪ್ತನಾಗಿರಲು ನಿಜಗುರುವು ಬಿಡನು.

ಈಗ ನಮ್ಮ ಮಾನವನತ್ತ ತಿರುಗೋಣ. ದೊಡ್ಡ ಕೆರೆಯಲ್ಲಿ ಮಳೆ ನೀರು ಇರುವಂತೆ ಅವನು ತನ್ನ ಗುರುವಿನ ಪಾದಗಳೆಡೆಯಲ್ಲಿ ಸುಖಿಯೂ ಶಾಂತನೂ ಆಗಿದ್ದಾನೆ. ಆದರೆ ಅವನ ಗುರುಗಳಾದ ಶ್ರೀ ರಮಣರು ಅಂಥ ಸುಖದಲ್ಲಿ ಅವನು ತೃಪ್ತನಾಗಿರಲು ಬಿಡರು.

ಮಾನವ ಹಾಡುತ್ತಾನೆ :

"ಶ್ರೀ ರಮಣರನ್ನು ಬಿಟ್ಟರೆ ನನಗೆ ಬೇರೆ ದೇವರಿಲ್ಲ. ಮಾರ್ಗದಲ್ಲಿ ಹೇಗೆ ಮುನ್ನಡೆಯಬೇಕೆಂದು ಕೇಳಿದಾಗ ಅವರು – ನಿನ್ನ ಆತ್ಮದ (ಬ್ರಹ್ಮಾತ್ಮದ) ಎಡೆಗೆ ನಡೆಯಬೇಕು, ಇದಕ್ಕಿಂತ ಉತ್ತಮವಾದ ಮಾರ್ಗ ಇನ್ನೊಂದಿಲ್ಲ, ನ್ಯೂನತೆ ಇಲ್ಲದ ಮಾರ್ಗ ಇದೊಂದೇ–ಎಂದು ಹೇಳುವುದನ್ನು ಬಿಟ್ಟರೆ ಇನ್ನೇನನ್ನೂ ಹೇಳಲಿಲ್ಲ."

–"ಶ್ರೀ ರಮಣ ಸನ್ನಿಧಿ ಮುರೈ", ನುಡಿ ೫೩೩

–ಶ್ರೀ ಮುರುಗನಾರ್

"ಶ್ರೀ ರಮಣರೆಂಬ ಹೆಸರಿನಿಂದ ಮಾನವರೂಪ ತಾಳಿ ಭೂಲೋಕಕ್ಕೆ ಬಂದ ಓ ನನ್ನ ಇಷ್ಟದೇವರೇ, ಓ ನನ್ನ ಜ್ಞಾನಭಾನುಗಳೇ, ಓ ಆನಂದ ಸಾಗರರೇ, ನಿಮಗಾಗಿ ಹೃದಯ ಕರಗುವ ಭಕ್ತಿಯುಳ್ಳ ಭಕ್ತರಿಗೆ ಪವಿತ್ರವಾದ ಈ ಅರುಣಾಚಲ ಪರ್ವತದಂತೆಯೇ ಅನುಗ್ರಹ ಮಾಡುತ್ತಿರುವ ನೀವು ನಿಮ್ಮ ಹತ್ತಿರಕ್ಕೆ ನನ್ನನ್ನು ಕರೆಯಿರಿ ಮತ್ತು ನಿಮ್ಮ (ಆನಂದಾಮೃತವನ್ನು) ನನಗೆ ಕುಡಿಯಬಿಡಿರಿ !"

–"ಶ್ರೀ ರಮಣ ಸನ್ನಿಧಿ ಮುರೈ", ನುಡಿ ೨೧೮

"ನಾಯಿಯಂತೆ ನಾನು ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದೆ. ಹೇ ರಮಣ ಗುರುಗಳೇ, ನೀವು ನನ್ನನ್ನು ರಕ್ಷಿಸಿದಿರಿ ! ಓ ನನ್ನ ಇಷ್ಟದೇವರೇ, ನೀವು ನನ್ನ ಗುರುಗಳಾಗಿ ಬಂದಿರಿ ಮತ್ತು ನನಗೆ (ಆತ್ಮಶೋಧದ) ಮಾರ್ಗವನ್ನು ಮಾರ್ಗವನ್ನು ತೋರಿಸಿದಿರಿ. ಆ ಮಾರ್ಗದಲ್ಲಿ ಹೋಗುವಾಗ ಮಾಯೆ ನನ್ನನ್ನು ಮೋಸಗೊಳಿಸಲಾರದು. ಹೇ ರಮಣ ಗುರುಗಳೇ, ನಾನಿನ್ನು ಇತರ ಯಾವ ದೇವರ ದೇವಸ್ಥಾನಕ್ಕೂ ಹೋಗುವುದಿಲ್ಲ."

"ಶ್ರೀ ರಮಣ ಸನ್ನಿಧಿ ಮುರೈ", ನುಡಿ ೫೪೪

ತೃಪ್ತನಾಗಿ ಈ ಪ್ರಕಾರ, ಬಯಸಿದ್ದು ಸಿಕ್ಕಿತೆಂಬ ಭಾವನೆಯಿಂದ, ಸುಖವಾಗಿ ತನ್ನ ಗುರುಗಳನ್ನು ಸ್ತುತಿಸಿ ಹಾಡುತ್ತಿರುವ ನಮ್ಮ ಮಾನವನತ್ತ ತಿರುಗಿ ಸದ್ಗುರುಗಳು ಕೇಳುತ್ತಾರೆ, "ನಿನಗೆ ನಿನ್ನ ಇಷ್ಟದೇವತೆ ಸಿಕ್ಕಿತೇ?" ಎಂದು.

ಮಾನವ : "ಓ ನನ್ನ ಒಡೆಯರೇ, ತಾವು ನನ್ನನ್ನು ನಿಮ್ಮವನನ್ನಾಗಿ ಸ್ವೀಕರಿಸಿದಿರಿ. ಕಳೆದ ಎಷ್ಟೋ ಜನ್ಮಗಳ ಮೂಲಕ (ಬರುತ್ತಿದ್ದ) ನನ್ನನ್ನು ರಕ್ಷಿಸಿದಿರಿ. ಈಗ ನನ್ನೊಳಗಿನಿಂದ ಹೊರಬಂದು ನನ್ನ ಗುರುಗಳಾಗಿ ನೀವು ನನಗೆ ಉಪದೇಶ ಮಾಡುತ್ತಿರುವಿರಿ."

"ಕೈವಲ್ಯ", ಅಧ್ಯಾಯ ೧ – ಪದ್ಯ ೭೯

ಹೌದು, ಒಡೆಯರೇ, ನನ್ನ ಇಷ್ಟದೇವರು ನನಗೆ ಸಿಕ್ಕಿದ್ದಾನೆ! ತಾವೇ ನನ್ನ ಇಷ್ಟದೇವರು

ಗುರು : ನಿನ್ನ ಇಷ್ಟದೇವರಲ್ಲಿ ನೀನು ಬೇಡಿಕೊಂಡ ವರವೇನು?

ಮಾನವ : ಸ್ಪಷ್ಟವಾದ ತಿಳುವಳಿಕೆಯನ್ನು ಪಡೆದ ಮೇಲೆ – ನನಗೆ ಬೇರೆಯೇನೂ ಬೇಡ ; ನಿನ್ನನ್ನೇ ನೀನು ನನಗೆ ಕೊಡು – ಎಂಬ ಒಂದೇ ಒಂದು ವರವನ್ನು (ನನ್ನ ಇಷ್ಟದೇವರ ಹತ್ತಿರ) ನಾನು ಬೇಡಿಕೊಂಡೆ.

ಗುರು : ಆ ವರ ಸಿಕ್ಕಿತೇ?

ಮಾನವ : ಹೌದು ; ನಾನು ಕೇಳಿದ್ದು ನಿಮ್ಮನ್ನೇ. ನನ್ನ ಒಡೆಯರೇ, ನೀವೇ ನನ್ನೆದುರು ಇದ್ದೀರಿ ! ಆದುದರಿಂದ ನಾನು ಕೇಳಿದ್ದು ನನಗೆ ದೊರಕಿದೆ!

ಗುರು : (ತಮ್ಮ ಶರೀರವನ್ನು ತೋರಿಸುತ್ತಾ) ನಿನ್ನೆದುರಿರುವ ಇದು ಏನು? ಇದನ್ನೇ ನೀನು ಬೇಡಿಕೊಂಡಿದ್ದೆಯಾ?

ಮಾನವ : ನಾನು ತೀಕ್ಷ್ಣವಾಗಿ ಬಯಸುತ್ತಿದ್ದುದು ನಿಜವಾಗಿಯೂ ಸದ್ಗುರುಗಳಾದ ನಿಮ್ಮನ್ನೇ.

ಗುರು : ನಾನಿದೇ ಏನು? ನಾನೀ ದೇಹ ಎಂದು ನೀನು ನಂಬುತ್ತೀಯಾ? ಹಾಗಾದರೆ, ಈ ಶರೀರವು ನಿನ್ನ ಇಷ್ಟ ದೇವತೆಯ ಶರೀರಕ್ಕಿಂತ ಉತ್ತಮ ಹೇಗಾದೀತು? ಏಕೆಂದರೆ, ಆ ರೂಪವು ತೋರಿತು ಮತ್ತು ಕೆಲ ಕಾಲಾನಂತರದಲ್ಲಿ ಅಡಗಿತು. ಅದೇ ಮೇರೆಗೆ ಈ ರೂಪವೂ ನಿನ್ನೊಡನೆ ಕೆಲ ಕಾಲವಿದ್ದು ಆಮೇಲೆ ಸತ್ತು ಅದೃಶ್ಯವಾಗುವಂಥದಲ್ಲವೇ? ಹೀಗಿರುವಾಗ ಈ ನಾಮರೂಪವು ಆ ನಾಮರೂಪಕ್ಕಿಂತ ಯಾವ ರೀತಿಯಿಂದ ಹೆಚ್ಚಿನದೆನ್ನಿಸುತ್ತದೆ? ಈ ನಾಮರೂಪ ಎಂಬುದೇ ಸಾಧಿಸತಕ್ಕ ನಿನ್ನ ಗುರಿ ಎಂದು ನೀನು ತಿಳಿದದ್ದಾಗಿದ್ದರೆ ಒಂದಲ್ಲಾ ಒಂದು ದಿನ ನಿನ್ನ ಆ ಆಸೆಯು ನಿಷ್ಪ್ರಯೋಜಕ ಎಂದು ಸಿದ್ಧವಾಗುವುದು. ಆದುದರಿಂದ ಕೊನೆಯ ಪಕ್ಷ ನೀನು ಈಗಲಾದರೂ ನಿನಗೆ ಉಪದೇಶಿಸಿದ ಪ್ರಕಾರ ನಿನ್ನ ಗುರಿ ಏನೆಂಬುದನ್ನು ನಿರ್ಧರಿಸಿಕೋ.

ಮಾನವ : "ನಾನೇ ಪರಮೋನ್ನತ ಪದಾರ್ಥ–ಎಂಬ ಮಹಾಸತ್ಯವನ್ನು ನೀವೇ ನನ್ನೆದುರು ಬಹಿರಂಗಗೊಳಿಸಿದಿರಿ. ನನ್ನ ಇಷ್ಟದೇವತೆ ಹಾಗೆ ಮಾಡಲಿಲ್ಲ! ನೀವಲ್ಲದೆ ಆ ದೇವರೇನೂ ಪರಮತತ್ವವನ್ನು ನನಗೆ ಉಪದೇಶಿಸಲಿಲ್ಲ. ಆದುದರಿಂದ ನಾನು ಕೇಳಿದ್ದಷ್ಟನ್ನೇ ಕೊಟ್ಟ ನನ್ನ ಇಷ್ಟದೇವತೆ ನನ್ನ ಮೇಲಿಟ್ಟ ಪ್ರೀತಿಗಿಂತ ನನ್ನ ನಿಜವಾದ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಿರುವ ನಿಮ್ಮ (ನನ್ನ ಮೇಲಿನ) ಪ್ರೀತಿಯು ಹೆಚ್ಚಿನದು. ನೀವೂ ನೀವು ತೋರಿಸಿದ ಪರಮ ಸತ್ಯವೂ ಒಂದೇ ಎಂಬುದು ನಾನು ಬಂದು ಮುಟ್ಟಿರುವ ತೀರ್ಮಾನ.

ಗುರು : ನಾನು ಅದಾದರೆ (ಆ ಪರಮ ಸತ್ಯವೇ ಆದರೆ) ನಿನಗೆ ಅದರಿಂದ ಲಾಭವಾಗುವುದೇ? ನನ್ನನ್ನು ದೇವರೆಂದೋ ಗುರುವೆಂದೋ ಪರಮ ಸತ್ಯವೆಂದೋ ಹೊಗಳುವುದಷ್ಟೇ ನಿನ್ನ ಗುರಿಯೇ? ನಾನು ಆ ಪರಮ ಸತ್ಯವಾದರೆ ನಿನ್ನ ಕಥೆ ಏನು? ಆಗ ನೀನು ಯಾರು? ಪರಮ ಸತ್ಯವಾದ ನನ್ನನ್ನು ನೀನು ಪಡೆಯುವುದೂ ನೀನೇ ಪರಮಸತ್ಯವೆಂದು ತಿಳಿಯುವುದೂ ಒಂದೇ ಅಲ್ಲವೇ?

ಮಾನವ : ನನ್ನ ಸದ್ಗುರುಗಳ ದಿವ್ಯಪಾದಗಳನ್ನು ಹಿಡಿದುಕೊಳ್ಳುವುದೊಂದೇ ಸತ್ಯದ ಪರಮೋನ್ನತ ಸ್ಥಿತಿಯನ್ನು ತಲುಪುವ ಮಾರ್ಗವಲ್ಲವೇ? (ಹಾಗೆ ಹೇಳುತ್ತಾ

ಅವನು ತನ್ನ ಗುರುಗಳ ಪಾದಕ್ಕೆ ಬಿದ್ದು ಆ ಪಾದದ್ವಯವನ್ನು ಹಿಡಿದುಕೊಳ್ಳುತ್ತಾನೆ.)

ಗುರು : (ತಮ್ಮ ದೇಹವನ್ನು ತೋರಿಸುತ್ತಾ) ಇವು ನಿನ್ನ ಗುರುವಿನ ಪಾದಗಳೇನು? ಇವನೇ ನಿನ್ನ ಸದ್ಗುರುವೇನು? ಪುನಃ ಪುನಃ ನೀನು ಅದೇ ತಪ್ಪನ್ನು ಮಾಡುತ್ತಿದ್ದೀಯೆ. ಇಲ್ಲಿ (ಮಾನವನ ದೇಹದತ್ತ ತೋರಿಸುತ್ತಾ), ನಿನ್ನ ಸದ್ಗುರು ನಿನ್ನೊಳಗೆ ಇದ್ದಾನೆ. ನಿನ್ನೊಳಗೆ ಯಾವಾಗಲೂ ಹೊಳೆಯುತ್ತಾ, "ನಾನು ನಾನು" ಎಂದು ನೇರವಾಗಿ ನಿನ್ನ ಅನುಭವಕ್ಕೆ ಯಾವಾಗಲೂ ಬರುತ್ತಿರುವ ಆತ್ಮ ಜಾಗರವೇ (ಆತ್ಮಜ್ಞಾನವೇ, ಬ್ರಹ್ಮಾತ್ಮ ಜ್ಞಾನವೇ) ನಿನ್ನ ಸದ್ಗುರುವಿನ ನಿಜವಾದ ಪಾದ. ಅದಕ್ಕಂಟಿಕೋ. ಅದೊಂದೇ ನಿನ್ನನ್ನು ನಿನ್ನ ಗುರಿಯತ್ತ ಒಯ್ಯುವುದು.

ಮಾನವ : ಈ ಮಹಾಸತ್ಯವನ್ನು ಹೊರಗಿನಿಂದ ಬಂದ ನಿಮ್ಮ ಮಾತಿನಿಂದ ಮಾತ್ರ ನಾನು ತಿಳಿದಿದ್ದೇನೆ. ಆದುದರಿಂದ ನನ್ನ ಒಡೆಯರೇ ನಿಮಗೆ ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ನಾನು ಪುಣ್ಯಾತ್ಮನಾಗಲಿ (ಲಬ್ಧಾಶೀರ್ವಾದನಾಗಲಿ) ; ನಿಮ್ಮನ್ನು ಪೂಜಿಸುವುದರಿಂದ ಮತ್ತು ನಿಮ್ಮ ಪ್ರಸಾದವನ್ನು ತೆಗೆದುಕೊಳ್ಳುವುದರಿಂದ ನಾನು ಧನ್ಯನಾಗಲಿ.

ಗುರು : "ಅಜ್ಞಾನಿಯಾದ ಅಹಂಕಾರದಿಂದ ಜನಿಸುವ ಮೋಸದ ಮೂಲಕ (ಭ್ರಾಂತಿಯ ಮೂಲಕ) ಉಂಟಾಗುವ ದೇವ–ಮಾನವ, ಗುರು–ಶಿಷ್ಯ ಎಂಬಂತಹ ಭೇದ ಬುದ್ಧಿಯು ಏಳದಿರುವಂಥ ಪರಮೋನ್ನತ ಮೌನದಲ್ಲಿ ಇರುವುದೇ ನಿಜವಾದ ನಮಸ್ಕಾರ ಪದ್ಧತಿ."

– "ಗು.ವಾ.ಕೋವೈ", ಪದ್ಯ ೩೧೦

"ನಿಜವಾದ ಗುರುಪೂಜೆ ಎಂದರೆ ನಾನೀ ದೇಹವೆಂಬ ಅಹಂಕಾರ ರೂಪದ ಮಂಜುಗಡ್ಡೆಯು ಆತ್ಮಜ್ಞಾನ (ಆತ್ಮಜಾಗರ) ಸ್ವರೂಪದ ಐಕ್ಯಭಾವವೆನ್ನುವ ಗುರುಚೈತನ್ಯ ಸಾಗರದಲ್ಲಿ ಕರಗಿ ಹೋಗುವುದೇ ಆಗಿದೆ."

– "ಗು.ವಾ.ಕೋವೈ", ಪದ್ಯ ೩೧೫

"ನಾನಾ ವಸ್ತುಗಳಿಂದ ಮಾನವ ದೇಹಧಾರಿಯಾದ ಶಿವಸ್ವರೂಪದ ತನ್ನ ಗುರುವನ್ನು ಒಬ್ಬ ಪೂಜಿಸಿದರೂ ಅವನ ಜೀವದ ಜೀವಾಳವಾಗಿರುವ ಆತನಲ್ಲಿ (ಆ ಪರಬ್ರಹ್ಮ ಸ್ವರೂಪನಾದ ಗುರುವಿನಲ್ಲಿ) ಮುಳುಗಿ ಆ ಮೂಲಕ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದೇ ಗುರುವಿನ ನಿಜವಾದ ಪೂಜೆ."

– "ಗು.ವಾ.ಕೋವೈ", ಪದ್ಯ ೩೧೯

"ತನ್ನನ್ನು–ತನ್ನ ಅಹಂಕಾರವನ್ನು – ಪೂರ್ಣತ್ವದ ಮೌನದ ಮೂಲ ಆಕರವಾದ ಗುರುವಿಗೆ ಬಲಿಯಾಗಿ ಒಪ್ಪಿಸಿದ ಮೇಲೆ ಹೃದಯದಲ್ಲಿ ಉಳಿಯುವ (ಶುದ್ಧ) ಚೈತನ್ಯ (ಜಾಗರ) ಎಂಬುದು ಗುರುವಿನಿಂದ ಪಡೆಯುವ ಪ್ರಸಾದ.

– "ಗು.ವಾ.ಕೋವೈ", ಪದ್ಯ ೨೦೨

"ಬ್ರಹ್ಮಾತ್ಮವನ್ನುಳಿದು ಇತರ ದೇವರನ್ನು ನಾವು ಪೂಜಿಸಿದಾಗ ನಮಗೆ ಬ್ರಹ್ಮಾತ್ಮವನ್ನು ಬಿಟ್ಟು ಇತರ ಎಲ್ಲ ಪದಾರ್ಥಗಳನ್ನೂ ಕೊಡಲಾದೀತು. ಬ್ರಹ್ಮಾತ್ಮವನ್ನುಳಿದರೆ ಇನ್ನಾವ ಕ್ಷುದ್ರ ದೇವರು ಶಿವಸ್ಥಿತಿಯನ್ನು ಅನುಭವಕ್ಕೆ ತಂದುಕೊಡುವ ಬ್ರಹ್ಮಾತ್ಮದ ನಿತ್ಯಜಾಗರವನ್ನು ನಮಗೆ ಕೊಟ್ಟೀತು?"

– "ಗು.ವಾ.ಕೋವೈ", ಪದ್ಯ ೧೦೭೧

ಆದುದರಿಂದ, ಬ್ರಹ್ಮಾತ್ಮದ (ನಾನೆಂಬ ಪರಮಸತ್ಯದ) ಶೋಧದಲ್ಲಿ ಆಳವಾಗಿ ಮುಳುಗುವುದೇ ನಿನ್ನ ಗುರುವನ್ನು ಪೂಜಿಸುವ ಒಂದೇ ಒಂದು ಮಾರ್ಗ, ಎಂಬುದನ್ನು ನೀನು ಅರಿತುಕೊಳ್ಳಬೇಕು.

"ನಿನ್ನ ಬ್ರಹ್ಮಾತ್ಮವನ್ನು ಅರಿತ ಮೇಲೆ ಮಾತ್ರ ನಿನಗೆ ಯಾವ ಅಪಾಯವೂ ಉಂಟಾಗಲಾರದು...."

– "ಕೈವಲ್ಯಂ", ಅಧ್ಯಾಯ ೧, ಪದ್ಯ ೧೩

ತದ್ವಿರುದ್ಧವಾಗಿ, ನಿನ್ನ ದೇವರನ್ನು ಯಾ ಗುರುವನ್ನು ನಾಮ–ರೂಪದಲ್ಲಿ ಅನೇಕ ಬಾರಿ ಪಡೆಯಲು ನೀನು ಶಕ್ತನಾದರೂ ಕೊನೆಯಲ್ಲಿ ಅವೆಲ್ಲವೂ ಮಾಯವಾಗಿ ಹೋಗುವುವು.

"ಜಾಗ್ರದವಸ್ಥೆಯಲ್ಲೂ ನಿದ್ರೆಯ ಅಜ್ಞಾನ ಸ್ಥಿತಿಯಲ್ಲೂ ಕಂಡ ಎಲ್ಲವನ್ನೂ ಸಾಕ್ಷಿತ್ವದಿಂದ ತಿಳಿದುಕೊಳ್ಳಲು ಯಾರಿಗೆ ಶಕ್ಯವಾಗುವುದಿಲ್ಲವೋ ಅವರು ಮಾತ್ರ ದೇವರು ಮೊದಲು ಪ್ರತ್ಯಕ್ಷನಾಗಿ ಅನಂತರ ಅದೃಶ್ಯನಾದನು ಎಂದು ಆಲೋಚಿಸಿ ಭ್ರಾಂತರಾಗುವರು."

– "ಗು.ವಾ.ಕೋ" ಪದ್ಯ ೧೦೭೨

"ಬ್ರಹ್ಮಾತ್ಮದ ನಾನೆಂಬ ರೂಪದ ನಿತ್ಯ ಸತ್ಯವನ್ನು ಅರಿಯದವರೂ ತಾತ್ಕಾಲಿಕವಾದ ದೇಹವನ್ನು ಮಾತ್ರ ಉತ್ಸಾಹದಿಂದ ನಾನೆಂದು ಅರಿತಿರುವವರೂ ಮಾತ್ರ ಕೆಲಕಾಲ ದೇವರ ಭಿನ್ನ ಭಿನ್ನ ನಾಮರೂಪಗಳನ್ನು ಕಂಡು ಅವುಗಳತ್ತ ಆಶ್ಚರ್ಯಪಡುತ್ತಾರೆ. "

– "ಗು.ವಾ.ಕೋ" ಪದ್ಯ ೧೦೭೦

"ಉಪಾಸನೆಯ ಮೂಲಕ ಪಡೆದ ದೇವರ ಅವತಾರಗಳೆಲ್ಲವೂ ವ್ಯಕ್ತವಾಗುತ್ತವೆ ಮತ್ತು ಅವ್ಯಕ್ತವಾಗುತ್ತವೆ. ಆದುದರಿಂದ (ವ್ಯಕ್ತಾವ್ಯಕ್ತ ಸ್ಥಿತಿಗಳನ್ನು ಮೀರಿದ) ಹಾಗೂ ಯಾವಾಗಲೂ ಪ್ರಕಾಶಿಸುವ ಒಬ್ಬನ ನಿಜವಾದ ಸ್ವರೂಪವೆನ್ನಿಸಿರುವ ಬ್ರಹ್ಮಾತ್ಮವೊಂದೇ ನಿಜವಾದ ದೇವರು.

– "ಗು.ವಾ.ಕೋ" ಪದ್ಯ ೧೦೭೩

ಮಾನವ : ಹಾಗಾದರೆ ನನ್ನೊಳಗೆ ಮುಳುಗಿ ನನ್ನ ಆತ್ಮವನ್ನು (ಬ್ರಹ್ಮಾತ್ಮವನ್ನು) ಅರಿತುಕೊಳ್ಳಲು ನನ್ನ ಗುರುಗಳಾದ ನಿಮ್ಮನ್ನು ಮರೆತುಬಿಡಬೇಕೇ? ಇದು ಯೋಗ್ಯವೆಂದು ನನಗೆ ತೋರುವುದಿಲ್ಲ.

ಗುರು : ನೀನು ನಿನ್ನ ಗುರುವೆಂದು ಕರೆಯುವುದು ಯಾವುದನ್ನು? ನೀನು ದೇಹವೆಂದು ನಿನ್ನನ್ನು ತಿಳಿದುಕೊಂಡಿರುವವರೆಗೆ ನಿನ್ನ ಗುರುವನ್ನೂ

ದೇಹವೆಂದು ತಪ್ಪಾಗಿ ತಿಳಿದುಕೊಳ್ಳುವೆ. ಇದು ಅವನು ನಿಜವಾಗಿ ಇರುವ ಸ್ಥಿತಿಗೆ ವಿರುದ್ಧವಾದುದು; ಹಾಗೇ ಇದು ನಿನಗೆ ಅವನು ನಿಜವಾಗಿ ಉಪದೇಶಿಸಿದುದಕ್ಕೂ ವಿರುದ್ಧವಾದುದು. ಅದು ಮಾತ್ರ ಅಯುಕ್ತ.

"ಬ್ರಹ್ಮಾತ್ಮವೊಂದೇ ಮಹತ್ತಮ ವಸ್ತು. ಬ್ರಹ್ಮಾತ್ಮಕ್ಕಿಂತ ಉತ್ತಮವಾದ ವಸ್ತು ಇನ್ನೊಂದಿಲ್ಲ. ಆದುದರಿಂದ ಬ್ರಹ್ಮಾತ್ಮವನ್ನು ವಿನಿಮಯಕ್ಕಾಗಿ ಕೊಟ್ಟು ಇನ್ನಾವ ವಸ್ತುವನ್ನೂ ಅದರ ಬದಲು ತೆಗೆದುಕೊಳ್ಳಲು ಸಾಧ್ಯವಿಲ್ಲ – ಬದಲಿ ವಸ್ತುವು ನಮಗೆ ದೊರಕುವುದು ಅಸಾಧ್ಯ.

– "ಗು.ವಾ.ಕೋವೈ", ಪದ್ಯ ೧೦೬೦

"ನಾನೇ ನನ್ನನ್ನು ತಿಳಿದುಕೊಂಡ ರೀತಿಯಲ್ಲಿ ನನ್ನನ್ನು ತಿಳಿದುಕೊಂಡಿರುವಾತನು ನಿಜವಾಗಿ ನನ್ನನ್ನು ತಿಳಿದುಕೊಂಡವನು.

ತಮ್ಮ ಜ್ಞಾನಗುರುಗಳು ಮನುಷ್ಯರೂಪ ತಾಳಿದ್ದರೂ ರೂಪರಹಿತ (ಆಕಾರರಹಿತ) ಪರಮೋನ್ನತ ಆಕಾಶ ಎಂದು ತಿಳಿದುಕೊಳ್ಳದಿರುವವರು ಅತಿ ದುಷ್ಟ ಅಪರಾಧಿಗಳು

– "ಗು.ವಾ.ಕೋವೈ", ಪದ್ಯ ೨೭೪

ಮಾನವ : ನನ್ನ ಗುರುಗಳ ರೂಪವೂ ನನ್ನ ಆತ್ಮದ (ಬ್ರಹ್ಮಾತ್ಮದ) ಸ್ವರೂಪವೂ ನನ್ನ ಇಷ್ಟ ದೇವತೆಯ ರೂಪವೂ ಒಂದೇ ಎಂದು ನನಗೆ ತಿಳಿದಿದೆ. ನನ್ನ ಎದುರೇ ಅಂಥ ಗುರುಗಳನ್ನು ನಾನು ಪಡೆದಿರುವುದು ಒಂದು ವಿಶಿಷ್ಟವಾದ ಹಕ್ಕು (ಅಪೂರ್ವಯೋಗ) ಎಂದು ನಾನು ತಿಳಿದಿದ್ದೇನೆ. ಹೀಗಿರುವಾಗ ನಾನು ಅವನನ್ನು ಹೇಗೆ ತ್ಯಜಿಸಲಿ?

ಗುರು : ಗುರುವು ನಿನ್ನ ಒಳಗೂ ಇದ್ದಾನೆ ಹೊರಗೂ ಇದ್ದಾನೆ. ನಿನ್ನ ಹೊರಗಿರುವ ಗುರುವು ನೀನು ನಿನ್ನ ಒಳಗೆ ಮುಳುಗಿ ನಿನ್ನ ನಿಜ ಸ್ವರೂಪವನ್ನು ತಿಳಿಯಲು ಅನುಕೂಲವಾದ ಪರಿಸರಗಳನ್ನು ನಿರ್ಮಿಸಿ ಹೊರಗಿನಿಂದ ನಿನ್ನನ್ನು ಒಳಗೆ ನೂಕುತ್ತಾನೆ; ನಿನ್ನ ಒಳಗಿರುವ ಗುರುವು ಒಳಗಿನಿಂದಲೇ ನಿನ್ನನ್ನು ಎಳೆದು ನಿನಗೆ ಹೊರಗೆ ಹೋಗಲು ಬಿಡದೆ ಹೃದಯದಲ್ಲೇ ನಿನ್ನನ್ನು ಇಟ್ಟಿರುತ್ತಾನೆ.

ಮಾನವ : ಹಾಗಾದರೆ ನನ್ನ ಗುರುಗಳ ಬಾಹ್ಯಾಕೃತಿ ಎನ್ನಿಸಿರುವ ನಿಮಗೆ ಅಂಟಿಕೊಳ್ಳುವುದು ತಪ್ಪಲ್ಲ ಎಂದು ನನಗೆನ್ನಿಸುತ್ತದೆ.

ಗುರು : ಅದು ತಪ್ಪು! ಗುರುವಿನ ಬಾಹ್ಯರೂಪವು ದೃಶ್ಯತೆ–ಅದೃಶ್ಯತೆಗಳಿಂದ ಕೂಡಿಲ್ಲವೇ? ಆದುದರಿಂದ ಅದು ನಿತ್ಯವಲ್ಲ. ಗುರುವೇ ಬ್ರಹ್ಮಾತ್ಮ. ಆತ್ಮಸಿದ್ಧಿಯೇ (ಬ್ರಹ್ಮಸಿದ್ಧಿಯೇ) ದೇವಸಿದ್ಧಿ ಅಥವಾ ಗುರುಸಿದ್ಧಿ (ದೇವರ ಅಥವಾ ಗುರುಗಳ ಸಾಕ್ಷಾತ್ಕಾರ.) ತದ್ವಿರುದ್ಧವಾಗಿ ನಿನ್ನಾತ್ಮದಿಂದ ನಿನ್ನ ಗುರುವೂ ದೇವರೂ ಭಿನ್ನ ಎಂದು ನೋಡುತ್ತಿರುವವರೆಗೆ ಪೂರ್ಣ ಸ್ವಾತಂತ್ರ್ಯರೂಪದ ಬ್ರಹ್ಮಾತ್ಮಸ್ಥಿತಿಯನ್ನು ನೀನು ಅರಿಯಲಾರೆ. ಪೃಥಕ್ತ್ವ (ಭೇದ) ಭಾವನೆ ಇರುವವರೆಗೆ ಭಯವಿದ್ದೇ ಇರುತ್ತದೆ. ನಿನಗೆ ಭಯ

ಮುಕ್ತನಾಗಬೇಕೆಂಬ ಆಸೆಯಿದ್ದರೆ (ಅಭಯ ಸ್ಥಿತಿ ಲಭ್ಯವಾಗಬೇಕೆಂದಿದ್ದರೆ) ಆತ್ಮ ಸ್ವರೂಪದ ಇತರತ್ವ ರಹಿತ ಸ್ಥಿತಿಯಲ್ಲಿ ಇರು. ಅದರ ಅರ್ಥವು ನಿನ್ನ ಗುರು ಇನ್ನು ಮೇಲೆ ಇರುವುದಿಲ್ಲವೆಂದಲ್ಲ. ನೀನು ಒಳಗೆ ಮುಳುಗಿ (ಅಂತರ್ಮುಖನಾಗಿ) ಹೃದಯದಲ್ಲಿ ಪ್ರತಿಷ್ಠಿತನಾದರೆ ಆ ಸ್ಥಿತಿಯಲ್ಲಿ ಮಾತ್ರ ನೀನು ಯಾವಾಗಲೂ ನಿನ್ನ ಗುರುವಿನೊಡನೆ ಇರುವೆ. ನಿನ್ನ ಸ್ವಾತ್ಮಭಕ್ತಿಯು, (ಅಹಂಕಾರವು) ಬ್ರಹ್ಮಾತ್ಮದಲ್ಲಿ ಮುಳುಗಿ ಹೋಗುವುದು, ಎಂಬುದೇ ನಿನ್ನ ನಿಜವಾದ ಗುರುಭಕ್ತಿ.

"ಹೃದಯದಲ್ಲಿ ಸದಾ ನಡೆಯುತ್ತಿರುವ ಪರಮಾತ್ಮನ ಉಪದೇಶವನ್ನು ಆಲಿಸಲು ಬೇಕಾದ ಸ್ವಾತ್ಮ ಭಕ್ತಿ ಇಲ್ಲದುದರಿಂದ ಒಬ್ಬನು ಮಹೋತ್ಸಾಹದ ಭ್ರಾಂತಿಯಿಂದ ಹೊರಬರುತ್ತಾನೆ. ಈ ಕಾರಣದಿಂದಲೇ ಬಾಹ್ಯಗುರುವೊಬ್ಬನು ಅವನಿಗೆ ಬೇಕಾಗುತ್ತದೆ."

– "ಗುರುವಾಚಕಕೋವೈ", ಪದ್ಯ ೨೭೨

ಶ್ರೀ ಮುರುಗನಾರ್

ಅಲ್ಲಿಯವರೆಗೆ ಇಂದಿನ ಗುರುಭಕ್ತಿಯ ಹೆಸರಿನಲ್ಲಿ ನೀನು ಸ್ಥೂಲವಾದ ಈ ನಾಮರೂಪಗಳತ್ತ ತೋರಿಸುವ ನಿನ್ನ ಪ್ರೀತಿಯು ಕೇವಲ ವಿಭಕ್ತ ಪ್ರೇಮ, ಪಾಕ್ಷಿಕ ಪ್ರೀತಿ. ಇದು ಪ್ರೀತಿಯ (ಭಕ್ತಿಯ) ನ್ಯೂನಾವಸ್ಥೆ.

ಮಾನವ : ಹಾಗಾದರೆ ನಿಮ್ಮ ಬಗ್ಗೆ ನಾನು ತಳೆದಿರುವ ಸದ್ಯದ ಭಕ್ತಿಯು ನಿಜವಾದುದಲ್ಲವೇ?

ಗುರು : ಇತರ ಪದಾರ್ಥಗಳ ಮೇಲೆ ಜಿಗಿದು ನಿಲ್ಲುವ ಪ್ರೀತಿ ಅಥವಾ ಭಕ್ತಿಯು ಎಂದೂ ಪೂರ್ಣಸ್ವರೂಪದ್ದೆನ್ನಿಸದು. ಪ್ರೀತಿಯು ಪೂರ್ಣವಾದಾಗ, ಇತರ ಪದಾರ್ಥಗಳ ಮೇಲೆ ಜಿಗಿಯುವಂಥ ಅದರ ಚಲನಕ್ರಿಯೆಯು ಒಂದು ನ್ಯೂನತೆಯಾಗಿರುವುದರಿಂದ ಅಸ್ತಿತ್ವದಲ್ಲಿ ಇರದು. ಅವ್ಯಾಹತವೂ ಅಖಿಲ ವ್ಯಾಪಿಯೂ ಆದ ಪ್ರೀತಿಯ ಪೂರ್ಣತ್ವವು ಇನ್ನೊಂದರೊಡನೆ ಇರತಕ್ಕದ್ದಲ್ಲ. ಅಂದರೆ ಅದು ಅದ್ವೈತ ಸ್ವರೂಪವುಳ್ಳದ್ದು; ಅನ್ಯ ವಸ್ತುವಿನ ಬಗೆಗಿಲ್ಲದ ಅನನ್ಯ ಭಕ್ತಿ ಸ್ವರೂಪವುಳ್ಳ ಪ್ರೀತಿಯನ್ನು ತಳೆದಿರುವ ಮನುಷ್ಯನು ಸಂಪೂರ್ಣ ಭಕ್ತಿ ಸಂಪನ್ನನು; ಅವನ ಪ್ರೀತಿಯು ಸಂಪೂರ್ಣವಾದುದು.

ಮಾನವ : ಈ ಅನನ್ಯ ಭಕ್ತಿಯು ನಿಮ್ಮ ಮೇಲಿಟ್ಟ ಭಕ್ತಿಗಿಂತ ಹೆಚ್ಚಿನದೇ? ನನ್ನ ಮೇಲೆ ನೀವಿಟ್ಟ ದಿವ್ಯ ವಾತ್ಸಲ್ಯಕ್ಕಿಂತಲೂ ಹೆಚ್ಚಿನದೇ?

ಗುರು : ಹೌದು ! ಸ್ವಾತ್ಮಭಕ್ತಿಯು ಅತ್ಯುತ್ತಮವೂ ಮಹತ್ತಮವೂ ಆಗಿರುವಂಥದು. ಈ ಸ್ವಾತ್ಮಭಕ್ತಿಯೇ ಪೂರ್ಣಭಕ್ತಿ.

ಭಕ್ತಿ ಭಾವನೆಯ, ಆತ್ಯಂತಿಕ ಅವಸ್ಥೆಯು ಅಚಲವಾದ ಆತ್ಮರತಿಯ ಸ್ವರೂಪದ ಬ್ರಹ್ಮಾತ್ಮದಲ್ಲಿ ವಿರಮಿಸಿರುವ ಸ್ವರೂಪದಲ್ಲಿ ಅನುಭವಿಸಲ್ಪಡುತ್ತದೆ. ಇದಕ್ಕಿಂತ ಕಡಿಮೆ ಮಟ್ಟದ ಭಕ್ತಿಯು ಪರಾಭಕ್ತಿಯೂ ಅಲ್ಲ ಪೂರ್ಣ ಭಕ್ತಿಯೂ ಅಲ್ಲ ಈ ಭಕ್ತಿಯು ಬ್ರಹ್ಮಾತ್ಮ–ಇದು ಶಿವ.

ಮಾನವ : ಹೇಗೆ? ದಯವಿಟ್ಟು ವಿವರಿಸಿರಿ.

ಗುರು : ಏಕೈಕವಾದ ಉತ್ತಮ ಪುರುಷದ ಬ್ರಹ್ಮಾತ್ಮವು ಅಪರಿವರ್ತನೀಯವಾದ ಚೈತನ್ಯ (ಜಾಗರ)ವಲ್ಲವೇ? ನೀನು ಆ ಜಾಗರವಲ್ಲವೇ? ಪರಬ್ರಹ್ಮಾತ್ಮದ ಅನುಭವದಿಂದ ಮಾತ್ರ ಸಿದ್ಧ ಮಾಡಲು ಏಕೆ ಪ್ರಯತ್ನ ಮಾಡುವೆ? ಈಗಲೂ ಅದು ನಿನಗೊಂದು ಅಜ್ಞಾತ ವಸ್ತುವಲ್ಲ. ಅದು ನಿನ್ನ ನಿತ್ಯದ ಅನುಭವದೊಳಗೇ ಇದೆ. ನಿನ್ನ ಅನುಭವಕ್ಕೆ ಬರುವ ಉತ್ತಮ ಪೌರುಷೇಯ ಜ್ಞಾನವು "ನಾನೀದೇಹ" ಎಂಬ ಚೈತನ್ಯ – ಅದೇ ಅಹಂಕಾರ ಅಲ್ಲವೇ? ನೋಡು! ಒಂದು ಹೂವನ್ನೋ ಒಂದು ಮಗುವನ್ನೋ ಇತರ ಯಾವುದಾದರೂ ವಸ್ತುವನ್ನೋ ನೀನು ಹಿಡಿದುಕೊಂಡರೆ ನೀನು ಅವುಗಳ ಬಗ್ಗೆ ಪ್ರೀತಿಯನ್ನು ವ್ಯಕ್ತಪಡಿಸಿದಂತಾಗುತ್ತದೆ. ಮಧ್ಯಮ ಪೌರುಷೇಯವಾದ ಆ ವಸ್ತುಗಳು ನಿನಗೆ ಪರಕೀಯ. ಅವುಗಳ ಮೇಲಿರುವುದಕ್ಕಿಂತ ಹೆಚ್ಚಿನ ಪ್ರೇಮವು ನಿನ್ನ ಮೇಲೆ (ನಿನ್ನ ಶರೀರದ ಮೇಲೆ) ನಿನಗಿರುವುದು ಖಂಡಿತ. ಹೀಗಿದ್ದರೂ ನೀನು ನಿನ್ನ ಹಸ್ತ, ಕಾಲು ಅಥವಾ ಬೆರಳುಗಳನ್ನು– ಅವುಗಳನ್ನು ನೀನು ಇತರ ವಸ್ತುಗಳಿಗಿಂತ ಹೆಚ್ಚು ಪ್ರೀತಿಸಿದರೂ ಮಧ್ಯಮ– ಪ್ರಥಮ ಪುರುಷದವುಗಳಾದ ಹಸ್ತಾದಿಗಳನ್ನು ಮುದ್ದಾಡಲು ತೆಗೆದು ಕೊಳ್ಳುವೆಯಾ?: "ಓ ನನ್ನ ಹಸ್ತಗಳೇ, ಓ ನನ್ನ ಕಾಲುಗಳೇ, ಓ ನನ್ನ ಸುಂದರ ಬೆರಳುಗಳೇ ನಾನು ನಿಮ್ಮನ್ನು ಇಷ್ಟು ಹೆಚ್ಚಾಗಿ ಪ್ರೀತಿಸುವೆ." ಎಂದು ಮುದ್ದಾಡುವೆಯಾ? ಇಲ್ಲ – ನೀನು ಮುದ್ದಾಡುವುದಿಲ್ಲ. ಆದರೆ ನೀನು ಒಂದು ಹೂವಿಗೆ ಅಥವಾ ಮಗುವಿಗೆ ನಿನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಇತರ ವಸ್ತುವಿಗಿಂತ ನೀನು ನಿನ್ನ ಶರೀರವನ್ನು ಹೆಚ್ಚಾಗಿ ಪ್ರೀತಿಸಿದರೂ ನಿನ್ನ ಹಸ್ತಾದಿಗಳ ಬಗೆಗೆ ನೀನು ಅಂಥ ವರ್ತನೆಯನ್ನು ಕಲ್ಪಿಸಿಕೊಳ್ಳುವುದಿಲ್ಲ – ಹಸ್ತಾದಿಗಳು ನಿನಗೆ ಪ್ರಥಮ ಪುರುಷದವುಗಳು. ನೀನೇಕೆ ಅಂಥ ವರ್ತನೆಯನ್ನು ಹಿಡಿಯುವುದಿಲ್ಲ? ಏಕೆಂದರೆ, ಉತ್ತಮ ಪುರುಷಾನ್ವಿತ ಪದಾರ್ಥದ ಬಗೆಗೆ ನಿನ್ನ ಪ್ರೀತಿಯು ಪೂರ್ಣವೂ ಅನ್ಯೂನವೂ ಆಗಿದೆ. ಅದನ್ನು ವ್ಯಕ್ತಪಡಿಸಲು ಯಾವ ಚಟುವಟಿಕೆ ಅಥವಾ ಭಾವನೆಯೂ ಬೇಡ. ಪ್ರೀತಿಯು ತಾನೇ ತಾನಾಗಿ ನೆಲೆನಿಂತಾಗ ಅದು ಪೂರ್ಣವೂ, ಅನ್ಯೂನವೂ ಆದ ಪ್ರೀತಿಯಾಗಿರುತ್ತದೆ. ಪ್ರೀತಿಯು ಚಟುವಟಿಕೆಯ ರೂಪವನ್ನು ತಳೆದಾಗ ಅದು ಒಡೆದು ಚೂರಾಗಿ ಬಯಕೆಯ ರೂಪಕ್ಕೆ ಇಳಿದು ಇತರ ಪದಾರ್ಥಗಳ ಮೇಲೆ ಜಿಗಿದು ನಿಲ್ಲುತ್ತದೆ. ಸತತ ಧಾರಾಸ್ವರೂಪದ ಅಸ್ತಿತ್ವವಾಗಿದ್ದಾಗ ಅದು ಪ್ರೀತಿ ; ಚಟುವಟಿಕೆಯ ಅಥವಾ ಒಡೆದ ಚೂರಿನ ರೂಪದಲ್ಲಿದ್ದಾಗದು ಬಯಕೆ (ಆಸೆ). ಮಧ್ಯಮ ಪ್ರಥಮಪೌರುಷೇಯ ಪದಾರ್ಥಗಳೆಲ್ಲಾ ಒಡಕು ಚೂರುಗಳಾಗಿರುವುದರಿಂದ ಅವುಗಳ ಬಗೆಗಿನ ನಿನ್ನ ಪ್ರೀತಿಯು ಕೇವಲ ಆಸೆಯ ರೂಪದ್ದಾಗಿರುತ್ತದೆ–ಪ್ರೀತಿಯ ಗುರುವಿನ ಬಗೆಗಿನ ನಿನ್ನ ಭಕ್ತಿಯು ಸಹಾ ಕೇವಲ ಅಪೇಕ್ಷಾ ರೂಪದ್ದಾಗಿರುತ್ತದೆ. ಆದರೆ ಪ್ರೀತಿಯು ಬ್ರಹ್ಮಾತ್ಮಕವಾದ ಉತ್ತಮ ಪೌರುಷೇಯ ಅಸ್ತಿತ್ವದ ಸತತಧಾರೆಯಲ್ಲಿ

ನೆಲೆಸಿದಾಗ, ಅದು ಪೂರ್ಣವೂ (ತುಂಬಿದುದೂ) ಅನ್ಯೂನವೂ ಪರ್ಯಾಪ್ತವೂ ಆಗಿರುತ್ತದೆ. ಈ ಮಟ್ಟದ ಸ್ವಾತ್ಮ ಭಕ್ತಿಯು ಆತ್ಯಂತಿಕ ಸಂಸ್ಕಾರ (ಪರಿಷ್ಕಾರ) ಪಡೆದ ಪ್ರೇಮಸ್ಥಿತಿ. ಇದನ್ನು ಪರಾಭಕ್ತಿ, ಅನನ್ಯಭಕ್ತಿ ಎಂದು ಕರೆಯಲಾಗಿದೆ (ಪರಾ= ಅತ್ಯುನ್ನತ; ಅನನ್ಯ; ಅದ್ವೈತ). ಆದುದರಿಂದ ಪ್ರೀತಿಯು ನಮ್ಮ ಅಸ್ತಿತ್ವ ; ಬಯಕೆಯು ನಮ್ಮ ಅಹಂಕಾರದ ಎತ್ತುವಳಿ (ಉದಯ). ನಮ್ಮ ಕೇವಲಾಸ್ತಿತ್ವವು ಅಪವರ್ತನೀಯವಾದ ಆನಂದ ಸ್ಥಿತಿ–ಅದೇ ಅವಿಭಾಜ್ಯವಾದ ಮಹೋನ್ನತ ಪ್ರೇಮಸ್ಥಿತಿ ಅಪರಿಚ್ಛಿನ್ನ ಪರಾಭಕ್ತಿ.

"...... ತನ್ನ ನಿಜವಾದ ಅಸ್ತಿತ್ವ ಸ್ಥಿತಿಯಲ್ಲಿರುವುದೇ ಮಹತ್ತಮ ಪ್ರೀತಿಯ ಸತ್ಯವಾಗಿದೆ."

–"ಉಪದೇಶ ಉಂದಿಯಾರ್", ಪದ್ಯ ೯

ನಿನ್ನತ್ತ ಹರಿದ ನಿನ್ನ ಗುರುವಿನ ದಿವ್ಯ ವಾತ್ಸಲ್ಯವು ಒಂದು ಪದಾರ್ಥದಿಂದ ಇನ್ನೊಂದಕ್ಕೆ ನೆಗೆದ ಪ್ರೀತಿ ಎಂದು ನೀನು ತಿಳಿದಿರುವವರೆಗೆ ಆ ವಾತ್ಸಲ್ಯ ಯಾ ಪ್ರೀತಿಯು (ನಿನ್ನ ಬಗೆಗಿನ ನಿನ್ನ ಗುರುವಿನ ವಾತ್ಸಲ್ಯವು) ವಿಭಕ್ತ ಪ್ರೇಮ ಎಂದು ತಿಳಿಯತಕ್ಕದ್ದು. ಆದುದರಿಂದ ಅದು ನಿನ್ನ ಬ್ರಹ್ಮಾತ್ಮೋನ್ಮುಖ ಪ್ರೀತಿಗಿಂತ ಕೆಳ ತರಗತಿಯದು.

ನಾವು ಹೆಚ್ಚು ಆಳವಾಗಿ ಸೂಕ್ಷ್ಮಾವಲೋಕನ ಮಾಡಿದರೆ ಮಾನವನು ತನ್ನ ಮನವನ್ನೂ ಶರೀರವನ್ನೂ ಅರ್ಥಾತ್ ತನ್ನನ್ನು ಈವರೆಗೆ ವ್ಯಕ್ತಿಯಾಗಿ ತಿಳಿದು ಪ್ರೀತಿಸುತ್ತಿದ್ದರೂ ಆ ಪ್ರೀತಿಯು ಅತ್ಯಲ್ಪವೆಂದು ಗೊತ್ತಾಗುತ್ತದೆ ; ಈಗ ಅವನ ಗುರುವಿನತ್ತ ಹರಿಯುತ್ತಿರುವ ಭಕ್ತಿಯೊಡನೆ ಅದನ್ನು ಹೋಲಿಸಲು ಸಾಧ್ಯವೇ ಇಲ್ಲ – ಎಂಬುದು ತಿಳಿದುಬರುತ್ತದೆ. ಆದುದರಿಂದ ಶಿಷ್ಯನೀಗ ತನ್ನ ಸ್ವಂತದ ಶರೀರ–ಮನಗಳ ಬಗೆಗೆ ಉದಾಸೀನನಾಗುತ್ತಾನೆ. (ಈವರೆಗೆ ಆ ಶರೀರ–ಮನಗಳನ್ನೇ ತಾನೆಂದು ತಿಳಿದುಕೊಂಡಿದ್ದನು ; ಅವನು ತನ್ನ ಗುರುವಿಗಾಗಿ ಅವನ್ನು ಪರಿತ್ಯಜಿಸಲು ಕೂಡಾ ಸಿದ್ಧನಾಗುತ್ತಾನೆ. ಗುರುವು ನಿಜವಾಗಿಯೂ ಅವನ ಆತ್ಮ (ಬ್ರಹ್ಮಾತ್ಮ).

ಜಗತ್ತಿನ ಇತರ ವಸ್ತುಗಳ ಮೇಲೆ ಇರುವುದಕ್ಕಿಂತ ತನ್ನ ಮೇಲಿನ ಪ್ರೇಮವು ಅತ್ಯಂತ ಹೆಚ್ಚಿನದಾದರೂ ನಿಜವಾದ ಗುರುಭಕ್ತಿ ಉದಯವಾದ ಕೂಡಲೇ ತನ್ನ ಗುರುವಿನ ಕಡೆಗೆ ಉಂಟಾದ ಭಕ್ತಿಯು ತಾನೇ ಆದ ತನ್ನ ಅಹಂಕಾರದ ಮೇಲಿನ ಪ್ರೀತಿಗಿಂತಲೂ ಹೆಚ್ಚಿನದಾಗುವುದು. ಆದರೆ ಸ್ವಾತ್ಮಭಕ್ತಿಯು ಬ್ರಹ್ಮಾತ್ಮಸತ್ಯದ ಅನುಭವವನ್ನು ಪಡೆಯುತ್ತಿರುವಾಗ ನಿಜವಾದ ಬ್ರಹ್ಮಾತ್ಮದೆಡೆಗಿನ ಭಕ್ತಿಯು ತನ್ನ ಗುರುವಿನ ಕಡೆಗೆ ಶಿಷ್ಯನಿಗಿರುವ ಭಕ್ತಿಗಿಂತ ಕೂಡಾ ಅಧಿಕತರವೆಂಬುದು ತಿಳಿದುಬರುವುದು. ಇಲ್ಲಿಯವರೆಗೂ ಮಾನವನು ಬ್ರಹ್ಮಾತ್ಮ ಪ್ರೇಮದ ದೆಸೆಯಿಂದ ತನ್ನನ್ನು ಇತರ ಪದಾರ್ಥಗಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಾನೆ ಎಂದು ಹೇಳುತ್ತಾ ಬಂದದ್ದಾಯ್ತು. ಆದರೆ ಅಹಂಕಾರವೇ ತಾನು, ತನ್ನ ಆತ್ಮ ಎಂಬ ತಪ್ಪು ತಿಳಿವಳಿಕೆ ಎಲ್ಲರಿಗೂ ಇರುವುದರಿಂದ ನಿಜವಾದ ಆತ್ಮದ ಬಗೆಗೆ (ಬ್ರಹ್ಮಾತ್ಮದ ಬಗೆಗೆ) ಯಾರಿಗೂ ಪ್ರೀತಿ ಇರುವುದಿಲ್ಲ. ಅಹಂಕಾರವು ಆತ್ಮವಲ್ಲ ; ಏಕೆಂದರೆ ಅದು ಅಸತ್ ಪದಾರ್ಥ, ಬ್ರಹ್ಮಾತ್ಮದ ವಿಪ್ರತಿಬಿಂಬ. [ತನ್ನ ನಿಜವಾದ ಆತ್ಮವಾದ ಗುರುವು ಶಿಷ್ಯನೆದುರು ಬಂದಾಗ–ತನ್ನ ಗುರುವಿನ ಮೇಲೆ ನಿಜವಾದ ಭಕ್ತಿಯನ್ನಿಡುವವಷ್ಟು ಶಿಷ್ಯನು ಪರಿಪಕ್ವನಾಗಿರುವುದರಿಂದ–ಅವನಿಗೆ ಬ್ರಹ್ಮಾತ್ಮದತ್ತಣ ಭಕ್ತಿಯನ್ನು ಅನುಭವಿಸಲು

ಶಕ್ಯವಾಗುತ್ತದೆ ; ಆದರೆ ಅದು ಆ ಗುರುವು ಮಾನವ ರೂಪದಿಂದ ತನ್ನೆದುರು ಇದ್ದಾಗ ಮಾತ್ರ] ಆದುದರಿಂದ ತನ್ನ ಅಹಂಕಾರದೆಡೆಗಿನ (ಜೀವಾತ್ಮದ ಕಡೆಗಿನ) ಭಕ್ತಿಗಿಂತ ಶಿಷ್ಯನಲ್ಲಿಯ ಗುರುವಿನತ್ತಣ ಭಕ್ತಿಯು ಹೆಚ್ಚಿನದೆಂದು ಮೇಲೆ ಹೇಳಲಾಯ್ತು. ಅವನ ಗುರುವೇನೋ ಅವನ ಬ್ರಹ್ಮಾತ್ಮನೆಂಬುದು ನಿಜ ; ಅವನ ಗುರುಭಕ್ತಿಯು ಅಪ್ರತ್ಯಕ್ಷವಾಗಿ ಬ್ರಹ್ಮಾತ್ಮ ಭಕ್ತಿಯೆಂಬುದು ಸರಿಯೆ : [ಆದರೆ ಅವನ ಬ್ರಹ್ಮಾತ್ಮವನ್ನು ಅವನು ಮಧ್ಯಮ ಪುರುಷಸ್ಥನೆಂದು ತಿಳಿದರೆ]. ಅವನ ಗುರುಭಕ್ತಿಯು ಪೂರ್ಣವಾಗಿ ಪರಿಷ್ಕೃತ ಎಂದು ಹೇಳಲು ಸಾಧ್ಯವಾಗದು : ಗುರುವನ್ನು ತನ್ನ ಬ್ರಹ್ಮಾತ್ಮವೆಂದು ಅವನು ಅನುಭವದಿಂದ ಕಂಡುಕೊಂಡಾಗಲೇ ಅವನ ಭಕ್ತಿಯು ಸಂಪೂರ್ಣ ಪರಿಷ್ಕೃತ (ಸಂಸ್ಕೃತ)ವಾಗಿ ಬ್ರಹ್ಮಾತ್ಮಭಕ್ತಿ ಎನ್ನಿಸುತ್ತದೆ. ಅದರಿಂದಲೇ ಅವನ ಗುರುವು, "ನಿನ್ನ ಗುರುಭಕ್ತಿಯು ನಿನ್ನ ಸ್ವಾತ್ಮ ಭಕ್ತಿಗಿಂತ ಕೆಳಮಟ್ಟದ್ದು" ಎಂದು ಮಾನವನಿಗೆ ಈಗ ಸಿದ್ಧಮಾಡಿ ತೋರಿಸಿ ಒಪ್ಪಿಗೆಯಾಗುವಂತೆ ಮಾಡುತ್ತಾನೆ.

ಹೌದು, ಆದರೆ, ಶಿಷ್ಯನ ಮೇಲೆ ಗುರುವಿಟ್ಟ ವಾತ್ಸಲ್ಯವೂ ಸ್ವಾತ್ಮ ಭಕ್ತಿಗಿಂತ ಕಡಿಮೆ ದರ್ಜೆಯದೆಂದು ಏಕೆ ಹೇಳಲಾಯ್ತು?

ಗುರುವಿನ ದೃಷ್ಟಿಯಲ್ಲಿ ಬ್ರಹ್ಮಾತ್ಮೇತರ ಪದಾರ್ಥವೇ ಇಲ್ಲ. ಆದುದರಿಂದ ನಿಜವಾಗಿ ಅವನ ವಾತ್ಸಲ್ಯವೆಂದೂ ಶಿಷ್ಯರೂಪದ ಎರಡನೆಯ ಪದಾರ್ಥದೆಡೆಗೆ ಅಲ್ಲವೇ ಅಲ್ಲ. ಗುರು ಯಾರನ್ನೂ ತನ್ನ ಶಿಷ್ಯನೆಂದು ಗಣಿಸುವುದಿಲ್ಲ–ಸ್ವೇತರ ಶಿಷ್ಯನು ಅವನಿಗಿಲ್ಲ. ಆದರೆ ಶಿಷ್ಯನಿಗೆ ಗುರು ತೋರಿಸಿಕೊಟ್ಟಂತೆ ಗುರುವು ಒಂದು ಪ್ರತ್ಯೇಕ ಪದಾರ್ಥ ಎಂದು ಶಿಷ್ಯ ತಿಳಿದುಕೊಂಡಿರುವವರೆಗೆ ಶಿಷ್ಯನು ಗುರುವಿನ ವಾತ್ಸಲ್ಯವು ಒಂದು ವಸ್ತುವಿನಿಂದ ಇನ್ನೊಂದು ವಸ್ತುವಿನೆಡೆಗೆ ಹರಿಯುವಂಥದೆಂದೇ" ತಿಳಿದುಕೊಳ್ಳಬೇಕು. ನಿಜವಾಗಿ ಅದು ಹಾಗಿಲ್ಲ ; ಏಕೆಂದರೆ, ಗುರುವೆಂದೂ ಶಿಷ್ಯನನ್ನು ಎರಡನೆಯ ವ್ಯಕ್ತಿಯೆಂದು ತಿಳಿಯುವುದಿಲ್ಲ. ಅದರಿಂದಲೆ (ಶಿಷ್ಯನ ದೃಷ್ಟಿಕೋನದ ಪ್ರಕಾರ) ಶಿಷ್ಯನ ಕಡೆಗಿನ ಗುರುವಿನ ವಾತ್ಸಲ್ಯ ಕೂಡಾ ಕೆಳಮಟ್ಟದ್ದೆಂದು ವಿವರಿಸಲಾಯಿತು. "ನನಗೆ ಗುರುವಿಲ್ಲ ಶಿಷ್ಯನಿಲ್ಲ" ("ಗುರುರ್ನೈವ ಶಿಷ್ಯ, ಚಿದಾನಂದ ರೂಪ ಶಿವೋಽ ಹಂ" –ಶಂಕರಾಚಾರ್ಯ) ಎಂದ ಶ್ರೀ ರಮಣೋಕ್ತಿಯನ್ನು ಮೇಲೆ ಹೇಳಿದ್ದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆಲಿಸಿದರೆ ಶ್ರೀ ರಮಣರು ಆ ಮಾತಿನಲ್ಲಿ ನಿಜವಾಗಿ ಹೇಳಲುದ್ದೇಶಿಸಿದ ತಾತ್ಪರ್ಯವೇನೆಂಬುದು ನಮಗೆ ತಿಳಿದುಬರುತ್ತದೆ. ನಿಜವಾದ ಗುರುವಾದವನು ಯಾರನ್ನೂ ಶಿಷ್ಯನನ್ನಾಗಿ ಕಾಣಲಾರ. ಶಿಷ್ಯನ ದೃಷ್ಟಿಯಲ್ಲಿ ಮಾತ್ರ ಗುರುವು ಒಬ್ಬ ಗುರು.

ಹೀಗೆ, ಮನುಷ್ಯರೂಪದ ಮಳೆನೀರು ಗುರುಭಕ್ತಿಯೆಂಬ ವಿಶಾಲವಾದ ಕೆರೆಯಲ್ಲಿ ಸಂಪೂರ್ಣ ಹೀರಿಹೋದಾಗ ಗುರುವು ಅವನನ್ನು ಅವನ ಗುರುಭಕ್ತಿಯೆಂಬ ಕೆರೆಯಕಟ್ಟೆಯನ್ನೊಡೆಯಲು ಅವನನ್ನು ಪ್ರೇರಿಸುತ್ತಾನೆ. ಆ ಕಟ್ಟೆಯೇ ಅವನ ಗುರುಭಕ್ತಿಯ ಗಡಿಗೆರೆ ಮತ್ತು ಆ ಮಳೆನೀರು (ಮನುಷ್ಯ) ಬ್ರಹ್ಮಾತ್ಮ ಸ್ವರೂಪದ ಆನಂದ ಸಮುದ್ರಕ್ಕೆ ಹರಿದು ಹೋಗುವಂತೆ ಮಾಡುತ್ತಾನೆ. ತನ್ನ ಅತ್ಯುತ್ತಮ ಯೋಗ್ಯತೆಯ ದೆಸೆಯಿಂದ ಮಾನವನು ತಲ್ಲೀನನಾಗಿ ಗುರುಭಕ್ತಿಯನ್ನು ಆಲಿಸುತ್ತಾ ಬಂದುದರಿಂದ, ಹಾಗೆ ಆಲಿಸುತ್ತಿರುವಾಗಲೇ (ಸತ್ಯಶ್ರವಣ ಮಾಡುತ್ತಿರುವಾಗಲೇ) ಮನನವನ್ನು ಮುಗಿಸಿ ಏಕಕಾಲದಲ್ಲಿ

ನಿದಿಧ್ಯಾಸವನ್ನು ಮಾಡಲು ಶಕ್ತನಾಗುತ್ತಾನೆ. ಅವನು ನಿರ್ವಾಕ್, ನಿರ್ವಿಚಾರ ಮತ್ತು ನಿಶ್ಚಲನಾಗುತ್ತಾನೆ ; ಅವನು ಪರಮೋಚ್ಚ ಮೌನ ಸಾಗರದಲ್ಲಿ ಮುಳುಗಿ ಇದ್ದು ಬಿಡುತ್ತಾನೆ. ಮನುಷ್ಯರೂಪದ ನದಿಯು ತನ್ನ ಮೂಲವನ್ನು ಸೇರಿದಾಗ ಬ್ರಹ್ಮಾತ್ಮ ಸಮುದ್ರಕ್ಕೆ ತಲುಪಿದಾಗ – ಪ್ರವಹಿಸುವ ಕಾರ್ಯದ ಪ್ರಯತ್ನವು ಸಂಪೂರ್ಣವಾಗಿ ನಿಂತು ಹೋಗುತ್ತದೆ. ಮೇಲೆ ಹೇಳಿದ ಮಾರ್ಗದಿಂದ ಪ್ರೀತಿ (ಭಕ್ತಿ) ಎಂಬ ಭಾವನೆಯು ಪೂರ್ಣತೆಯನ್ನು ಮುಟ್ಟುವಷ್ಟು ಪರಿಷ್ಕೃತವಾದಾಗ ಮನುಷ್ಯನು ಗುರುಭಕ್ತಿಯ ಮೆಟ್ಟಿಲನ್ನು ದಾಟಿ ಸ್ವಾತ್ಮಭಕ್ತಿ ಎಂಬ ಮೇಲಿನ ಸೋಪಾನವನ್ನು ಏರುತ್ತಾನೆ ; ಎಂದರೆ ಅವನು ನಮ್ಮ ಶಾಲೆಯ ೪ನೆಯ ಇಯತ್ತೆಯಿಂದ ೫ನೆಯ ಇಯತ್ತೆಗೆ ಮೇಲೆ ಹೋಗುತ್ತಾನೆ. ಆಶೆ, ಭಯ, ಭ್ರಾಂತಿಗಳೆಂಬ ಗೊಂದಲ (ಗಲಿಬಿಲಿ)ದಿಂದ ಪಾರಾಗಿ ಈಗ ಮಾನವನು –ಸ್ವಾತ್ಮವನ್ನು ಅನೇಕವೆಂದು ತಿಳಿದ ದೃಷ್ಟಿದೋಷವೀಗ ಪರಿಹೃತವಾದುದರಿಂದ ತಜ್ಜನ್ಯವಾದ ಗೊಂದಲವೂ ಪರಿಹೃತವಾಗಿ – ಬ್ರಹ್ಮಾತ್ಮಾವಧಾನದ ಮೂಲಕ ಬ್ರಹ್ಮಾತ್ಮದಲ್ಲಿ ನೆಲೆ ನಿಲ್ಲುತ್ತಾನೆ (ಸುಪ್ರತಿಷ್ಠಿತನಾಗುತ್ತಾನೆ). ಈ ಬ್ರಹ್ಮಾತ್ಮ ಸಂಸ್ಥಾಪಿತತೆಯೇ ನಿಜವಾಗಿ ಭಕ್ತಿಯ ಸಾರ, ತುತ್ತತುದಿ, ಶಿಖರ.

ಈ ಗ್ರಂಥದಲ್ಲಿ ಕೊಟ್ಟ ಒರೆಗಲ್ಲಿನ (ನಿಕಷದ) ಪ್ರಕಾರ ಇನ್ನು ಮುಂದೆ ನಮ್ಮಲ್ಲಿಯ ಪ್ರತಿಯೊಬ್ಬನೂ ತನ್ನನ್ನು ತಾನೇ ಶೋಧ ಮಾಡಿ ತಾನು ಯಾವ ಇಯತ್ತೆಯಲ್ಲಿರುವೆನೆಂಬುದನ್ನು ಕಂಡುಕೊಂಡು ಮುಂದಿನ ಇಯತ್ತೆಗೆ ಹೋಗಲು ತಕ್ಕ ಯೋಗ್ಯತೆಯನ್ನು ಗಳಿಸಲು ಯತ್ನಿಸಬೇಕು. ನಮ್ಮನ್ನು ನಾವು ಹೀಗೆ ವಿಷಯ ಭಕ್ತಿ ಸಂಪನ್ನರೋ ನಿಜವಾದ ದೈವಭಕ್ತಿ ಸಂಪನ್ನರೋ (ನಿಷ್ಕಾಮ ಭಕ್ತಿಯುಕ್ತರೋ) ಎಂದು ಪರೀಕ್ಷಿಸಿಕೊಳ್ಳುವುದು ಬಹಳ ಪ್ರಾಮಾಣಿಕವಾಗಿರಬೇಕು; ಇಲ್ಲವಾದರೆ ನಮ್ಮ ಯೋಗ್ಯತೆಯು ಹೆಚ್ಚಿನ ಮಟ್ಟದ್ದೆಂದು ತಿಳಿದು ನಮ್ಮನ್ನೇ ನಾವು ವಂಚಿಸಿಕೊಂಡು ತಾತ್ಕಾಲಿಕ ತೃಪ್ತಿಯಲ್ಲಿ ಇದ್ದು ಬಿಡುವ ಭಯವಿದೆ.

ಇಹ–ಪರಗಳಲ್ಲಿ ಸುಖವನ್ನು ಭೋಗಿಸುವುದಕ್ಕೋಸ್ಕರ ಕರ್ಮ ಮಾಡುವುದರಲ್ಲಿ ಬಹಳ ಆಸಕ್ತಿ ನಮಗಿದ್ದರೆ, ನಮ್ಮ ಶಾಲೆಯ ಮೊದಲನೆಯ ಇಯತ್ತೆಯಲ್ಲಿ ನಾವಿದ್ದೇವೆ ಎಂದು ತಿಳಿಯತಕ್ಕದ್ದು. ಇದು ಭಕ್ತಿಯನ್ನು ಶುದ್ಧೀಕರಿಸುವ ಪಾಠಶಾಲೆ–ಮತ್ತಾವುದೂ ಅಲ್ಲ. ನಾವು ದೈವಾಸ್ತಿತ್ವವನ್ನು ಅಲ್ಲಗಳೆದರೆ, ವೇದೋಕ್ತವಾದ ಕರ್ಮಗಳನ್ನು ಕೂಡಾ ಮಾಡಲು ಸಿದ್ಧರಾಗಿಲ್ಲವೆಂದು ಹಠ ಹಿಡಿದರೆ ಮತ್ತು ಸಂತರಾಮಲಿಂಗ ಸ್ವಾಮಿ ವರ್ಣಿಸಿದ ದುರಭ್ಯಾಸಗಳನ್ನು ಮೆಚ್ಚಿಕೊಂಡು," ದೇವರಿಲ್ಲ+ ನಮ್ಮ ಕರ್ಮಫಲಗಳನ್ನು ನಾವು ಅನುಭವಿಸಲೇ ಬೇಕೆಂಬ ಒತ್ತಾಯವಿಲ್ಲ. ಆದುದರಿಂದ ನಮಗೆ ಯಾವ ಶಿಕ್ಷೆಯೂ ಇಲ್ಲ ; ಆಜ್ಞಾಪಕನು (ನಿಯಾಮಕನು) ಯಾವನೂ ಇಲ್ಲ ; ಪಶು, ಪತಿ, ಪಾಶ ಎಂಬ ಯಾವ ಒಂದೂ ಇಲ್ಲ ; ಅಂದರೆ, ದೇವರು, ಜೀವಾತ್ಮ, ಬಂಧನ ಎಂಬ ಯಾವುದೂ

---

೨೬. "ವೇದಾ ವಾಸ್ಸುರ್ವಿತಥವಚನಾ ವಿಸ್ಮರೇದೀಶ್ವರೋವಾ
ಧರ್ಮಾಧರ್ಮಸ್ಥಿತಿ ವಿರಚನೇ ಹ್ಯಂತಕೋವಾ ಮೃಷಾಸ್ಯಾತ್ ।
ನಿತ್ಯೋ ವಾಸ್ಯಾ ಮಹಮಿತಿ ಬಹೂನುಲ್ಲಿಖಂತಃ ಸಮಾಧೀನ್
ಮೇಧೋ ವೃದ್ಧ್ಯಾ ಮುದಿತಮನಸಃ ಸರ್ವತೋ ನಿರ್ವೃತಾಃ ಸ್ಮಃ"

– ಹೋಲಿಸಿರಿ–ಭಾಷಾಂತರಕಾರ

ಇಲ್ಲ ಎಂದರ್ಥ. ಭಕ್ತಿ ಇಲ್ಲ ಮುಕ್ತಿಯೆಂಬ ಪಡೆಯಬೇಕಾದ ಸ್ಥಿತಿಯಿಲ್ಲ ; ಅನುಗ್ರಹ ಎಂಬುದಿಲ್ಲ ; ಪಾಪವಿಲ್ಲ, ಪುಣ್ಯವಿಲ್ಲ, ತಪಸ್ಸಿಲ್ಲ, ವ್ರತವಿಲ್ಲ, ವರವಿಲ್ಲ –ಯಾವುದೂ ಇಲ್ಲ...."

–ಅರುಟ್‌ಪಾ

"...... ಬೇಕಾದ ಹಾಗೆ ನಾವು ತಿಂದು ಕುಡಿದು ಉಟ್ಟುತೊಟ್ಟು ನೋಡೋಣ. ನಮ್ಮನ್ನು ನಾವು ಬಂಗಾರದ ಒಡವೆಗಳಿಂದ, ರತ್ನಾಭರಣಗಳಿಂದ ಅಲಂಕರಿಸಿಕೊಳ್ಳೋಣ. ಕಾಮಭೋಗಗಳನ್ನು ಅನುಭೋಗಿಸೋಣ. ದೊಡ್ಡ ಬಂಗಲೆಗಳು, ದೂರದರ್ಶನ ಜೋಡಣೆಗಳು, ಕಾರುಗಳು, ಸೇವಕರು, ಕೀರ್ತಿ, ಹೆಸರು ಮುಂತಾದ ಎಲ್ಲವನ್ನೂ ಭೋಗಿಸೋಣ. ಇದೇ ನಿಜವಾಗಿಯೂ ಮಾನವರ ಜೀವನದ ಗುರಿ, ಈ ವಿಚಾರವಿದ್ದರೆ, ಅದರಿಂದ, ನಮ್ಮ ಪಾಠಶಾಲೆಯ ಮೊದಲನೆಯ ವರ್ಗಕ್ಕೂ ನಾವು ಸೇರಿಸಲ್ಪಟ್ಟಿಲ್ಲ ಮತ್ತು ನಾವು ಇನ್ನೂ ಶಾಲೆಯ ಹೊರಗೆ ಅಲೆಯುತ್ತಿದ್ದೇವೆ ; ಅದನ್ನು ಪ್ರವೇಶಿಸಲು ಕೂಡಾ ನಮಗೆ ಇಷ್ಟವಿಲ್ಲ ಎಂದು ತಿಳಿದುಕೊಳ್ಳಬೇಕು. ಇಹ–ಪರಗಳಲ್ಲಿ ನಮ್ಮ ಸುಖವನ್ನು ಪಡೆದು ಹೆಚ್ಚಿಸಿಕೊಳ್ಳಲು ಅನೇಕ ದೇವಾಲಯಗಳಲ್ಲೂ ಪವಿತ್ರ ಸ್ಥಳಗಳಲ್ಲೂ ದೇವರ ವಿವಿಧ ನಾಮ–ರೂಪಗಳನ್ನು ಪೂಜಿಸುವ ಮನೋಭಾವ ನಮಗಿದ್ದರೆ, ನಾವು ನಮ್ಮ ಶಾಲೆಯ ೨ನೆಯ ಇಯತ್ತೆಯಲ್ಲಿದ್ದೇವೆ ಎಂದು ತಿಳಿದುಕೊಳ್ಳತಕ್ಕದ್ದು. ಏಕೆಂದರೆ ಇಲ್ಲಿಯೂ ನಮ್ಮದು ವಿಷಯಭಕ್ತಿಯಷ್ಟೇ ಆಗಿರುತ್ತದೆ ಮತ್ತು ದೇವರ ಬೇರೆ ಬೇರೆ ನಾಮರೂಪಗಳನ್ನು ನಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವ ಸಾಧನಗಳನ್ನಾಗಿ ನಾವು ಬಳಸಿಕೊಳ್ಳುತ್ತೇವೆ. ದೇವರ ಒಂದೇ ಒಂದು ನಾಮರೂಪದಲ್ಲಿ ನಮ್ಮ ಪೂಜೆಯು ಕೇಂದ್ರೀಕೃತವಾಗಿದ್ದರೆ ಮತ್ತು ನಮ್ಮಲ್ಲಿ ಪ್ರಾಪಂಚಿಕ ವಸ್ತುಗಳ ಬಗೆಗಿನ ಪ್ರೀತಿ ಇದ್ದರೆ ಆಗಲೂ ನಮ್ಮದು ದೈವಭಕ್ತಿ ಎನ್ನಿಸದು – ಕೇವಲ ವಿಷಯ ಭಕ್ತಿಯಷ್ಟೇ ಆದೀತು – ಅಲ್ಲದೆ, ದೇವರ ಒಂದೇ ಒಂದು ನಾಮ–ರೂಪವು ಒಂದು ಸಾಧನವಾಗಿ ಬಳಸಲ್ಪಡುತ್ತದೆ – ಆಗ ನಾವು ನಮ್ಮ ಪಾಠಶಾಲೆಯ ೩(ಅ) ವರ್ಗದಲ್ಲಿದ್ದೇವೆ ಎಂದು ತಿಳಿದುಕೊಳ್ಳತಕ್ಕದ್ದು.

ಆದರೆ, ನಮ್ಮ ಪಾಠಶಾಲೆಯ ೧, ೨ ಮತ್ತು ೩ನೆ ಇಯತ್ತೆಗಳಲ್ಲಿ ಅಭ್ಯಾಸ ಮಾಡಿದ ಮೇಲೆ ಹಿಂದೆ ಹೇಳಿದ ಪ್ರಾಪಂಚಿಕ ಜೀವನಕ್ಕೆ ಹಿಂದಿರುಗುವುದೇ ಒಳಿತೆಂದು ಭಾವಿಸಿದರೆ ಮಾನವನು ಯೋಗಭ್ರಷ್ಟನೆನ್ನಿಸಿಕೊಳ್ಳುತ್ತಾನೆ. ೩(ಬ) ಇಯತ್ತೆಗೆ ಸೇರಿದವರಿಗೆ ಅಂಥದೆಂದೂ ಆಗದು. ತಾವು ೩(ಅ) ಇಯತ್ತೆಯಲ್ಲಿರುವೆವೆಂದು ನಂಬಿ ಕೆಲ ಮುಮುಕ್ಷುಗಳು ತಮ್ಮ ಎಲ್ಲ ಬಯಕೆಗಳೂ ಪೂರ್ತಿಯಾಗಲಿಲ್ಲವೆಂದು ನಿರುತ್ಸಾಹಕ್ಕಿಳಿದು ೧ನೆಯ ಹಾಗೂ ೨ನೆಯ ಇಯತ್ತೆಗಳ ಪಠ್ಯಗಳನ್ನು ಓದಬೇಕೆಂದು ನಿರ್ಧರಿಸಬಹುದು ಅಂದರೆ ಅವರು ಆ ಕೆಳಗಿನ ಇಯತ್ತೆಗಳಿಗೇ ಅರ್ಹರೆಂದು ಅರ್ಥವಾಗುವುದು.

ನಮ್ಮಲ್ಲಿ ಕೆಲವರು ಅನೇಕ ಗುರುಗಳ ಬಳಿಗೆ ಹೋಗಿ ತಮ್ಮ ಭಕ್ತಿಯನ್ನು ತೋರಿಸಿ, "ನನ್ನ ಗುರಿ ಮುಕ್ತಿಯೊಂದೇ – ಇಹ–ಪರಗಳ ಸುಖಭೋಗಗಳಲ್ಲ" ಎಂದೂ "ನನ್ನದು ಗುರುಭಕ್ತಿ ಮತ್ತು ೪ನೆಯ ಇಯತ್ತೆಯಲ್ಲಿ ಇರಲು ತಕ್ಕ ಅರ್ಹತೆ ನನಗಿದೆ" ಎಂದು ಹೇಳುತ್ತಾರೆ. ಇನ್ನು ಕೆಲವರು ಅದೇ ಆಲೋಚನೆಯುಳ್ಳವರಾಗಿ ದೇವರ ವಿವಿಧ ನಾಮರೂಪಗಳನ್ನು ಹೊತ್ತ ಅನೇಕಾನೇಕ ದೇವಾಲಯಗಳನ್ನು ಸಂದರ್ಶಿಸುವ

ಅಭ್ಯಾಸಗಳನ್ನಿಟ್ಟುಕೊಂಡೂ ತಾವು ಮುಕ್ತಿಯನ್ನೇ ಗುರಿಯನ್ನಾಗಿ ಇಟ್ಟುಕೊಂಡಿದ್ದೇವೆ ಎನ್ನುತ್ತಾರೆ.

ಪ್ರಪಂಚದ ಯಾವ ಸುಖ–ಭೋಗಗಳೂ ಬೇಡವೆಂದೂ ತಮಗೆ ಮುಕ್ತಿಯೊಂದೇ ಅಪೇಕ್ಷಿತವೆಂದೂ ಅವರು ಹೇಳುವುದರಿಂದ ಅವರು ೩ನೆಯ ಇಯತ್ತೆಯ (ಬ) ವಿಭಾಗಕ್ಕೆ ಸೇರಿದವರೆಂದು ನಾವು ಪರಿಗಣಿಸಬೇಕು ; ಅಥವಾ ಅವರು ಅನೇಕ ಗುರುಗಳನ್ನು ಸಂದರ್ಶಿಸುವುದರಿಂದ ಅವರಲ್ಲಿ ಗುರುಭಕ್ತಿ ಇರಬಹುದೆಂದು ತೋರುತ್ತದೆ. – ಅಂದರೆ ೪ನೆಯ ಇಯತ್ತೆಗೆ ಸೇರುವ ಅರ್ಹತೆ ಇದೆ ಎಂದು ಕಾಣುತ್ತದೆ. ಅದು ಹಾಗಲ್ಲವೇ ಅಲ್ಲ ; ಅವರು ಬೇರೆ ಬೇರೆ ಗುರುಗಳೆಡೆಗೆ ಹೋಗುವುದು ಬೇರೆ ಬೇರೆ ನಾಮ–ರೂಪಗಳೆಡೆಗೆ ಹೋಗುವ ಸ್ಥಿತಿಯೇ ಆದುದರಿಂದ ಅವರ ಭಕ್ತಿಯಲ್ಲಿ ಏಕಾಗ್ರತೆ ಇರದು ; ತತ್ಫಲವಾಗಿ ಅದು ದುರ್ಬಲವಾಗಿರುತ್ತದೆ, ನಾನಾ ಕಡೆಗಳಲ್ಲಿ ಚದುರಿ ಹೋಗಿರುತ್ತದೆ ; ಅದರಿಂದ ಅದು (ಅವರ ಭಕ್ತಿಯು) ಆ ಯಾವ ಗುರುಗಳ ಉಪದೇಶಗಳನ್ನೂ ಆಳವಾಗಿ ಒಳಹೊಕ್ಕು ನೋಡಲು ಸಮರ್ಥವಾಗದು – ಆ ಉಪದೇಶಗಳಂತೆ ನಡೆದುಕೊಳ್ಳಲು ಶಕ್ತವಾಗದು. ಆ ಗುರುಗಳ ಉಪದೇಶಗಳಿಂದ ಅವರಿಗೆ ನಿಜವಾದ ಯಾವ ಪ್ರಯೋಜನವೂ ಆಗದು. ನಮ್ಮ ಸ್ನೇಹಿತರಲ್ಲಿ ಒಬ್ಬನು ಒಂದು ಫಲಾಹಾರಗೃಹದಿಂದ ಹೊರಟು ಇನ್ನೊಂದು ಫಲಾಹಾರ ಗೃಹವನ್ನು ಹೊಗುವಾಗ ನಾವು ಕಂಡೆವೆಂದು ಇಟ್ಟುಕೊಳ್ಳೋಣ. ಅದರ ಅರ್ಥವೇನು? ಆ ಫಲಾಹಾರ ಗೃಹದಲ್ಲಿ ಅವನು ತನ್ನ ಹಸಿವನ್ನು ನೀಗಿಸಿಕೊಳ್ಳಲು ಏನನ್ನೂ ತೆಗೆದುಕೊಂಡಿಲ್ಲ ಎಂಬುದನ್ನದು ತೋರಿಸುವುದಿಲ್ಲವೇ? ಆ ಎರಡನೆಯ ಫಲಾಹಾರ ಗೃಹದಿಂದಲೂ ಅವನು ಹೊರಟು ಮೂರನೆಯದನ್ನು ಪ್ರವೇಶಿಸುತ್ತಿರುವುದನ್ನು ನಾವು ಕಂಡರೆ, ಅದರ ಅರ್ಥ, ಅವನಿನ್ನೂ ಹಸಿವಿನಿಂದ ನರಳುತ್ತಲೇ ಇದ್ದಾನೆ ! ಎಂದಾಗುವುದಿಲ್ಲವೇ? ಆ ಫಲಾಹಾರ ಮಂದಿರಗಳಲ್ಲಿ ಒಂದರಲ್ಲಾದರೂ ಆತನು ಏನನ್ನಾದರೂ ತಿಂದಿದ್ದರೆ ಅವನು ನೇರವಾಗಿ ತನ್ನ ವಸತಿ ಸ್ಥಳಕ್ಕೆ ಹಿಂದಿರುಗುತ್ತಿರಲಿಲ್ಲವೇ? ಕೆಲವರು ತಮ್ಮ ಕಾರ್ಯಗಳನ್ನು ಕುಂಟುನೆಪಗಳಿಂದ ವಿವರಿಸಿ ಬಿಡುತ್ತಾರೆ, "ಆ ಭೋಜನ ಗೃಹದಲ್ಲಿ ಅನ್ನ ಚೆನ್ನಾಗಿ ಬೆಂದಿರುತ್ತದೆ ; ಆದ್ದರಿಂದ ನಾನದನ್ನು ಅಲ್ಲಿಂದ ತೆಗೆದುಕೊಂಡು ಹೋಗುತ್ತೇನೆ. ಎರಡನೆಯದರಲ್ಲಿ ಸಾಂಬಾರು ತುಂಬಾ ಚೆನ್ನಾಗಿರುತ್ತದೆ ; ಮೂರನೆಯದರಲ್ಲಿ ಇತರ ಮೇಲೋಗರಗಳು ರುಚಿಕಟ್ಟಾಗಿರುತ್ತವೆ. ನಾಲ್ಕನೆಯದರಲ್ಲಿ ನಿತ್ಯವೂ ವಡೆ[೨೭], ಹಪ್ಪಳಗಳು[೨೭] ಹೊಸವಾಗಿರುತ್ತವೆ. ಆದ್ದರಿಂದ ನಾನು ಅಲ್ಲಿಗೆ ಹೋಗುತ್ತೇನೆ!" ಎಂದು ಮುಂತಾಗಿ. ಇದು, "ನಾನು ಒಬ್ಬ ಗುರುವಿನಿಂದ ಹಠಯೋಗ–ಪ್ರಾಣಾಯಾಮಗಳನ್ನು ಕಲಿಯುತ್ತೇನೆ, ಇನ್ನೊಬ್ಬನಿಂದ ಮಂತ್ರೋಪದೇಶ ಪಡೆಯುತ್ತೇನೆ; ಆ ಗುರುವಿನ ಹತ್ತಿರ ಕರ್ಮಯೋಗದ ಅನುಷ್ಠಾನ ಮಾಡಲು ಹೋಗುತ್ತೇನೆ ; ಇನ್ನೊಬ್ಬ ಗುರು ನನಗೆ ಭಕ್ತಿಯೋಗ ಕಲಿಸುತ್ತಾನೆ. ಈ ಗುರುವಿನ ಸಹಾಯದಿಂದ ನಾನು ವಾಸಿಯೋಗವನ್ನು (ಒಂದು ವಿಧದ ಪ್ರಾಣಾಯಾಮವನ್ನು) ಅಭ್ಯಾಸ ಮಾಡುತ್ತೇನೆ ; ಆ ಗುರು ನನಗೆ ಅದ್ವೈತವನ್ನು ವಿವರಿಸಿ ಹೇಳುತ್ತಾನೆ! ಆದುದರಿಂದ ಈ ಮಹಾತ್ಮರೆಲ್ಲರಲ್ಲಿಗೂ ನಾನು

---

೨೭ ದಕ್ಷಿಣ ಭಾರತದ ಹೋಟೇಲುಗಳಲ್ಲಿ ಬಡಿಸುವ ಮೇಲೋಗರಗಳ ಬಗೆಗಳು.

ಹೋಗುತ್ತೇನೆ" ಎಂದು ಹೇಳುವುದಕ್ಕೆ ಸರಿಸಮವಾದುದು. ಇದರ ನಿಜವಾದ ಅರ್ಥವೇನು? ಈ ಗುರುಗಳಲ್ಲಿ ಯಾವ ಒಬ್ಬನನ್ನೂ ಆತನು ಸರಿಯಾಗಿ ತಿಳಿದುಕೊಂಡಿಲ್ಲ ಎಂಬುದೇ ಅದರ ಅರ್ಥ!

> **"ಮನಸ್ಸು ತನ್ನ ಮೂಲ ಆಕರದಲ್ಲಿ ಎಂದೂ ಏಳದಂತೆ ಸದಾ ಮುಳುಗಿರುವಾಗ ಆ ಸ್ಥಿತಿಯೇ ಕರ್ಮ, ಅದೇ ಭಕ್ತಿ ; ಅದು ಯೋಗವೂ ಹೌದು, ಜ್ಞಾನವೂ ಹೌದು,"**
>
> **– "ಉಪದೇಶ ಉಂದಿಯಾರ್", ಪದ್ಯ ೧೦**
>
> **– ಶ್ರೀ ರಮಣ**

ಒಬ್ಬನು ನಿಜವಾಗಿಯೂ ಹಸಿದಿದ್ದರೆ ಅವನು ಒಂದೇ ಭೋಜನ ಗೃಹದಲ್ಲಿ ತನ್ನ ಹಸಿವನ್ನು ತಣಿಸಿಕೊಳ್ಳುತ್ತಾನೆ. ಒಂದು ಭೋಜನಗೃಹದಿಂದ (ಅಥವಾ ಫಲಾಹಾರ ಗೃಹದಿಂದ) ಮತ್ತೊಂದಕ್ಕೆ ಅವನು ಓಡಬೇಕಾಗಿಲ್ಲ. ಪ್ರಾಮಾಣಿಕ ಮುಮುಕ್ಷುಗಳ ಕಥೆ ಇದಕ್ಕೆ ಸಮಾನ. ಗುರುವು ನಿಜವಾದವನಾದರೆ ತನ್ನ ಹತ್ತಿರ ಬರುವ ಮುಮುಕ್ಷುಗಳಿಗೆ ಅವರವರ ಭಿನ್ನಮಟ್ಟದ ತಿಳುವಳಿಕೆಗಳಿಗೆ ಅನುಗುಣವಾಗಿ ಅವಶ್ಯಕ ಉಪದೇಶಗಳನ್ನು ಕೊಡುವುದು ಅವನಿಗೆ ಸಾಧ್ಯವಾಗುತ್ತದೆ. ಮುಮುಕ್ಷುವು ಪ್ರಸಿದ್ಧಿ ಕೀರ್ತಿಗಳು ಸೇರಿದಂತೆ ಪ್ರಾಪಂಚಿಕ ಸುಖಗಳ ಬಗೆಗಿನ ಆಸೆಯನ್ನಿಟ್ಟುಕೊಳ್ಳದಿರುವುದು ನಿಜವೇ ಆದರೆ – ಅವನಿಗೆ ಮುಕ್ತಿಯ ಬಗೆಗೆ ಶ್ರದ್ಧಾಯುಕ್ತ ಆಸೆಯಿದ್ದುದೇ ಆದರೆ–ಇನ್ನೊಬ್ಬ ಗುರುವಿನ ಹತ್ತಿರ ಹೋಗುವ ಅಗತ್ಯ ಅವನಿಗಿಲ್ಲ. "ಉರುಳುವ ಕಲ್ಲಿಗೆ ಪಾಚಿ ಅಂಟಿಕೊಳ್ಳದು" ಎಂಬ ಹಳೆಯ ಗಾದೆಯ ಸತ್ಯವನ್ನು ಅವನು ಅರಿತುಕೊಳ್ಳುವನು.

ಅಷ್ಟೆಲ್ಲಾ ಗುರುಗಳ ಹತ್ತಿರ ಹೋಗುವ ಮನಃ ಪ್ರಣಾಳಿ ನಮಗಿದ್ದರೆ ಮತ್ತು ಪ್ರಾಪಂಚಿಕ ಸುಖಗಳ ಬಗೆಗೆ ನಮಗೆ ಗುಪ್ತ ಒಳ ಆಸೆಗಳಿರುವುದಾದರೆ ಆಗ ನಾವು ನಮ್ಮ ಪಾಠಶಾಳೆಯ ೨ನೆಯ ಇಯತ್ತೆಯಲ್ಲಿರಲು ಯೋಗ್ಯರು ಎಂಬ ಸಂಗತಿಯನ್ನು ನಾವು ಒಪ್ಪಿಕೊಳ್ಳಬೇಕು. ತದ್ವಿರುದ್ಧವಾಗಿ, ನಮ್ಮ ನಿರೀಹತ್ವವು ಸತ್ಯವಾದುದೇ ಆದರೆ ನಾವು ೩(ಬ) ವಿಭಾಗದಲ್ಲಿರುವ ಮುಮುಕ್ಷುವಿನ ಸ್ಥಿತಿಯಲ್ಲಿದ್ದವರಾಗುತ್ತೇವೆ. ಅಂದರೆ ಅನೇಕ ಗುರುಗಳತ್ತ ಸದ್ಗುರು ಶೋಧಕ್ಕಾಗಿ ಹೋಗಿ ಕೊನೆಗೆ ಅವನನ್ನು ಭೇಟಿ ಮಾಡುತ್ತೇವೆ. ಆದ್ದರಿಂದ ೪ನೆಯ ವರ್ಗದಲ್ಲಿಯವರ ಗುರುಭಕ್ತಿಯು ನಮ್ಮಲ್ಲಿದೆ ಎಂದು ನಾವು ಅಧಿಕೃತವಾಗಿ ಹೇಳಲಾರೆವು. ೪ನೆಯ ಇಯತ್ತೆಯಲ್ಲಿರುವವರ ಗುರುಭಕ್ತಿಯು ಪಾತಿವ್ರತ್ಯಕ್ಕೆ ಸಮಾನವಾದುದು. ಈ ಕಾರಣದಿಂದಲೇ ನಾವು ಗುರುವನ್ನು "ಗುರುನಾಥ ಯಾ ದಿವ್ಯಪತಿ" ಎಂದು ಕರೆಯುತ್ತೇವೆ. ಒಂದು ಕುಟುಂಬದಲ್ಲಿ ಪತಿವ್ರತೆಯು ಎಷ್ಟೋ ಹಿರಿಯರನ್ನೂ ಭಾವಮೈದುನರನ್ನೂ ಗೌರವಿಸಿ ಅವರ ಸೇವೆ ಮಾಡಿದರೂ ತನ್ನ ಗಂಡನ ಬಗೆಗಿನ ಅವಳ ಗೌರವ ಮತ್ತು ಪ್ರೀತಿಗಳು ಬೇರೆಯ ಬಗೆಯವೇ ಆಗಿರುತ್ತವೆ. ತನ್ನ ಎಲ್ಲವುದಕ್ಕೂ ಪ್ರತಿಯೊಂದಕ್ಕೂ ಅವಳು ಅವನನ್ನೇ ಅವಲಂಬಿಸಿರುತ್ತಾಳೆ. ಹಾಗೇ ಹಿಂದೆ ಇದ್ದ ಮತ್ತು ಈಗ ಇರುವ ಎಲ್ಲ ಋಷಿಗಳಿಗೂ ಸಂತರಿಗೂ ನಾವು ಪ್ರೀತಿ ಗೌರವಗಳನ್ನು ಸಲ್ಲಿಸುತ್ತಿರಬಹುದು. ಆದರೆ ಒಮ್ಮೆ ನಾವು ನಮ್ಮ ಸದ್ಗುರುವನ್ನು ಸಂಧಿಸಿದ ಮೇಲೆ (ಅದರಲ್ಲೂ ಮುಕ್ತಿಗೋಸ್ಕರವಾಗಿ), ಇತರರಲ್ಲಿಗೆ ಹೋಗುವುದನ್ನು ಬಿಟ್ಟ ಮೇಲೆ, ನಮ್ಮ ಸದ್ಗುರುವಿನ ಉಪದೇಶವೊಂದನ್ನುಳಿದು ಇನ್ನಾರ ಉಪದೇಶದಂತೆಯೂ ನಡೆದುಕೊಳ್ಳುವುದನ್ನು ಬಿಟ್ಟ

ಮೇಲೆ ಅದೇ ನಮ್ಮ ಗುರುಭಕ್ತಿಗೆ ಸಾಕ್ಷಿಯಾಗುತ್ತದೆ. ಒಮ್ಮೆ ಗುರುವನ್ನು ಕಂಡುಕೊಂಡ ಮೇಲೆ ಆ ಗುರುವಿಗಷ್ಟೇ ಅಂಟಿಕೊಳ್ಳುವ ದೃಢ ನಿರ್ಧಾರದಿಂದ, "ನಾನು ನನ್ನ ಗುರುವಿನ ಬಳಿಗೆ ಬಂದಿದ್ದೇನೆ–ಮುಕ್ತಿಗಾಗಿ" – ಎಂದು ಮನವರಿಕೆ ಮಾಡಿಕೊಳ್ಳಬೇಕು. "ಆ ಮುಕ್ತಿ ನನಗೀಗ ದೊರಕದಿದ್ದರೂ ಇನ್ನಾವ ಗುರುವಿನ ಹತ್ತಿರವೂ ನಾನು ಹೋಗುವುದಿಲ್ಲ. ಬಂಧವಿರಲಿ, ಮುಕ್ತಿ ಬರಲಿ ; ಕೇಡಾಗಲಿ, ಒಳಿತಾಗಲಿ ; ನರಕಕ್ಕೆ ಹಾಕಲಿ, ಸ್ವರ್ಗಕ್ಕೆ ಏರಿಸಲಿ – ಆತ ಏನು ಕೊಡಲಿ – ಅವನು ನನ್ನನ್ನು ಎಲ್ಲಿ ಬೇಕಾದರೂ ಇಡಲಿ–ಅದೇ ನನಗೆ ಸಂತೋಷ" ಎಂಬ ದೃಢನಿರ್ಧಾರ ನಮಗಿರಬೇಕು. ಪೂರ್ಣಗೊಳಿಸಲಾದ ಆತ್ಮಾರ್ಪಣೆಯಿಂದ ಗುರುಭಕ್ತಿಯೇ ನಿಜವಾದ ನಿಕಷವೆನ್ನಿಸಿದ ಏಕಾಗ್ರತಾನಿಷ್ಠ ಭಕ್ತಿಯಲ್ಲಿರಬೇಕು. ಹೀಗಿದ್ದರೆ ನಾವು ನಮ್ಮ ಶಾಲೆಯ ೪ನೆಯ ಇಯತ್ತೆಯಲ್ಲಿದ್ದೇವೆ ಎಂಬುದಕ್ಕೆ ಇದು ಕುರುಹು.

"ಪವಹರಿ ಬಾಬಾ" ಎಂಬವರನ್ನು ವಿವೇಕಾನಂದರು ಭೇಟಿ ಮಾಡಿದಾಗ ಅವರು ಆ ಮಹಾತ್ಮರ ನಿಜವಾದ ಮಹತ್ವವನ್ನು ಅರಿತುಕೊಂಡದ್ದರಿಂದ ಅವರನ್ನೆ ತಮ್ಮ ಗುರುಗಳನ್ನಾಗಿ ಸ್ವೀಕರಿಸುವ ಆಲೋಚನೆ ಶ್ರೀ ವಿವೇಕಾನಂದರಲ್ಲಿ ಕ್ಷಣಕಾಲ ಸುಳಿದು ಹೋಯಿತು. ಅವರ ಹುಚ್ಚುತನವನ್ನು ಕಂಡು ಮರುಕದಿಂದ ಅವರೆದುರು ಶ್ರೀರಾಮಕೃಷ್ಣರು ಪ್ರತ್ಯಕ್ಷರಾದಾಗ ವಿವೇಕಾನಂದರು ತಮ್ಮ ತಪ್ಪನ್ನು ತಿಳಿದುಕೊಂಡು ಶ್ರೀರಾಮಕೃಷ್ಣರು ತಮ್ಮನ್ನು ಒಮ್ಮೆ ಶಿಷ್ಯರೆಂದು ಸ್ವೀಕರಿಸಿದ ಮೇಲೆ "ಪವಹರಿಬಾಬಾ" ಮಹಾಶಯರನ್ನು ಗುರುಗಳನ್ನಾಗಿ ಎಂದೆಂದೂ ನೋಡುವುದಿಲ್ಲ ಎಂದು ನಿರ್ಧಾರ ಮಾಡಿಕೊಂಡರು. ಆಗ ಅವರು "ಪವಹರಿಬಾಬಾ"ರೊಡನೆ ಭಯ ಭಕ್ತಿಯಿಂದ ನಡೆಸಿಕೊಳ್ಳತಕ್ಕ ಸ್ನೇಹಿತರನ್ನು, ಹೇಗೋ ಹಾಗೆ ವರ್ತಿಸಲಾರಂಭಿಸಿದರು. ಶ್ರೀ ವಿವೇಕಾನಂದರಿಗೆ "ಪವಹರಿಬಾಬಾ" ಮಹಾಶಯರ ಬಗ್ಗೆ ಬಹಳ ಗೌರವವಿತ್ತು. ಆದರೆ ಅವರು ಬಾಬಾ ಮಹಾಶಯರನ್ನು ಗುರುವೆಂದು ಸ್ವೀಕರಿಸಲಿಲ್ಲ. ೪ನೆಯ ಇಯತ್ತೆಯಲ್ಲಿರುವ ಶಿಷ್ಯನಿಗೆ ಗುರುಭಕ್ತಿ ಇದ್ದದ್ದೇ ಆದರೆ ಅವನು ತನ್ನ ಹೃದಯದಲ್ಲಿ ಇತರ ಋಷಿ–ಮುನಿಗಳಿಗೆ ಸ್ಥಳಕೊಡುವ ರೀತಿ ಈ ಬಗೆಯದಾಗಿರಬೇಕು.

ಆದುದರಿಂದ ಅನೇಕ ಗುರುಗಳ ಬಳಿಗೆ ಹೋಗುವವರನ್ನು ಇಬ್ಬಗೆಯಾಗಿ ವಿಂಗಡಿಸಬಹುದು : (೧) ೨ನೆಯ ಇಯತ್ತೆಗೆ ಸೇರಿದವರು, ದೇವರ ಅನೇಕ ನಾಮರೂಪಗಳನ್ನು ಪೂಜಿಸುವವರು – ಆ ಮೂಲಕ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂದಿರತಕ್ಕಂಥವರು ; ಪ್ರಾಪಂಚಿಕ ವಸ್ತುಗಳನ್ನೂ ಪ್ರಸಿದ್ಧಿ–ಕೀರ್ತಿಗಳನ್ನು ಅಪೇಕ್ಷಿಸುವಂಥವರು ; (೨) ೩ನೆಯ ಇಯತ್ತೆಯ (ಬ) ವರ್ಗದವರು ; ಗುರುವನ್ನು ಅನ್ವೇಷಿಸುತ್ತಿರುವವರು ; ಪ್ರಾಪಂಚಿಕ ಸುಖಗಳ ಬಗ್ಗೆ ಆಸೆಪಾಸೆಗಳನ್ನು ಇಟ್ಟುಕೊಳ್ಳದಂಥವರು–ಎಂದು. ಒಬ್ಬಾತನು ತನ್ನ ಗುರುವನ್ನು ಹುಡುಕುತ್ತಿರುವಾಗ ಈ ಕೆಳಗಿನ ಅಂಶದತ್ತ ಗಮನ ಹರಿಯಿಸಬೇಕು.

"ಸತ್ಯ ಹೇಳಬೇಕೆಂದರೆ – ಸತ್ಯಜ್ಞಾನಿಯು ಶ್ರುತಿಯಲ್ಲಿ ಹೇಳಲಾದ ಸತ್ಯದ ಬಗೆಗೆ ಜ್ಞಾನವನ್ನು ಗಳಿಸಿಕೊಂಡ ವಿಜ್ಞಾನಿಯಿಂದ ಭಿನ್ನ. ಅಜ್ಞಾನ ಗ್ರಂಥಿಯನ್ನು ಕತ್ತರಿಸಬೇಕೆಂಬವರು ಮಾಡತಕ್ಕ ಒಂದೇ ಒಂದು ಮುಖ್ಯ ಕೆಲಸವೆಂದರೆ, ಶ್ರುತಿಜ್ಞರನ್ನು ಬಿಟ್ಟು ಆತ್ಮರತರನ್ನು,

ಸತ್ಯಜ್ಞಾನಿಗಳನ್ನು ಸೇರಿಕೊಳ್ಳುವುದು (ಸತ್ಯವನ್ನು ಬರಿದೆ ಕೇಳಿದವರನ್ನು ಬಿಟ್ಟು, ಸಾಕ್ಷಾತ್ಕರಿಸಿಕೊಂಡವರನ್ನು ಸೇರಿಕೊಳ್ಳಬೇಕು.)

–"ಗುರುವಾಚಕಕೋವೈ"–ಪದ್ಯ ೧೧೫೮

–ಶ್ರೀ ಮುರುಗನಾರ್

ಅವರಿಗೆ "ಮಾಡು–ಬೇಡ"ಗಳನ್ನು ಅಪ್ಪಣೆ ಮಾಡುವಾತನು ಯಮನೂ (ಮೃತ್ಯುವೂ) ಹೌದು, ಬ್ರಹ್ಮನೂ (ಸೃಷ್ಟಿಕರ್ತನೂ) ಹೌದು. ಆದರೆ ನಿಜವಾದ ದಿವ್ಯ ಗುರು ಎಂದರೆ ಅವರಿಗೆ ಯಾವ ಹೊಸತನ್ನೂ ಸಾಧಿಸಿಕೊಳ್ಳಬೇಕಾದುದಿಲ್ಲ ಎಂಬುದನ್ನು ಸಿದ್ಧ ಮಾಡಿ ತೋರಿಸುವಂಥವನು.

–"ಗುರುವಾಚಕಕೋವೈ"–ಪದ್ಯ ೨೭೧[೨೮]

–ಶ್ರೀ ಮುರುಗನಾರ್

"ಸುಸ್ಥಿರವಾದ ಮಹೋನ್ನತ ಭಕ್ತಿಯ ಸ್ವರೂಪವಿರುವುದು ಯೋಗ್ಯವಾದ ಶಿಷ್ಯತ್ವಕ್ಕೆ ಮಾತ್ರ. ಸರ್ವೋಚ್ಚ ಮೌನಜ್ಯೋತಿಯಿಂದ (ಬ್ರಹ್ಮಾತ್ಮ ಜಾಗರದಿಂದ ಯಾ ಆತ್ಮಜ್ಞಾನದಿಂದ) ಅಂಥ ಭಕ್ತಿಯು ಪುಟಿದೇಳುತ್ತದೆ. ಹಾಗೆ ಅದು ಏಳುವಾಗಲೇ ಅಹಂಕಾರವು (ಬ್ರಹ್ಮಾತ್ಮದಲ್ಲಿ) ಮುಳುಗಿ ಹೋಗಿರುತ್ತದೆ. ಅದೇ ನಿಜವಾಗಿಯೂ ಸರಿಯಾದ ಗುರುತ್ವ. ಹೀಗೆ ನೀನು ತಿಳಿಯತಕ್ಕದ್ದು.

"ಗುರುವಾಚಕಕೋವೈ"–ಪದ್ಯ ೨೬೯

–ಶ್ರೀ ಮುರುಗನಾರ್

ಶಿಷ್ಯನ ವಿಚಾರ ವಾಹಿನಿಯು, ಅಂದರೆ, ಅವನ ಧ್ಯೇಯ ಮತ್ತು ಒಲವುಗಳು ಗುರುವಿನಲ್ಲಿರುವ ಅವುಗಳಿಗೆ ಸಂಪೂರ್ಣವಾಗಿ ಸಮಶ್ರುತಿಬದ್ಧವಾಗಿರಬೇಕು. ಆಗ ಮಾತ್ರ ಗುರು–ಶಿಷ್ಯ ಸಂಬಂಧವು ನಿಜವೂ ಯೋಗ್ಯವೂ ಆದುದು ಎನ್ನಿಸುವುದು.

---

೨೮. "ಗುರುವಾಚಕ ಕೋವೈ"/ ಶ್ರೀ ಮುರುಗನಾರ್ ಎಂಬ ಗ್ರಂಥದ ೨೭೧ನೆಯ ನುಡಿಯ ಟಿಪ್ಪಣಿ : ತಮ್ಮ ಪ್ರಾಚೀನ ಕರ್ಮಗಳ ಫಲಭಾರವನ್ನು ಹೊರಲಾರದೆ ಗುರುವಿನೆಡೆಗೆ ಹೋದ ಶಿಷ್ಯರಿಗೆ ಅವರ ಭಾವಿ ಗುರುವು ಅನೇಕಾನೇಕ ಹೋಮ–ನೇಮ, ಜಪತಪಾದಿಗಳನ್ನು ಮಾಡಲು ಅಪ್ಪಣೆ ಮಾಡಿ ಅವರ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸಿ ಕುಗ್ಗಿಸಿ ಕೊಲ್ಲುವುದರಿಂದ ಅಂಥ ಗುರುವು ಯಮನ ಪಾತ್ರವನ್ನು ವಹಿಸುವವನು.

ಮಾಡಿದ ಎಲ್ಲ ಕರ್ಮಗಳ ಫಲವನ್ನೂ ಜನ್ಮ–ಜನ್ಮಾಂತರಗಳಲ್ಲಿ ತಪ್ಪದೆ ಅನುಭವಿಸಬೇಕಾಗಿರುವುದರಿಂದ ಶಿಷ್ಯರಿಗೆ ಹೊಸ ಹೊಸ ಕರ್ಮಗಳನ್ನು ಮಾಡಲು ಹಚ್ಚುವ ಭಾವಿ ಗುರುವು ಹೊಸ ಕರ್ಮಗಳ ಫಲವನ್ನು ಭೋಗಿಸಲು ಹೆಚ್ಚು ಜನ್ಮಗಳನ್ನು ಅವರು ಪಡೆಯುವಂತೆ ಮಾಡುವುದು ಆ ಗುರು ಅವರ ಪಾಲಿಗೆ ಬ್ರಹ್ಮ (ಸೃಷ್ಟಿಕರ್ತ).

ಏಕಮೇವಾದ್ವಿತೀಯವಾಗಿ ಬ್ರಹ್ಮಾತ್ಮವೊಂದೇ ಇರುವ ಸತ್ಯವನ್ನು ತಿಳಿದಿರುವುದರಿಂದ ಸದ್ಗುರುವು ತನ್ನ ಸನಿಹಕ್ಕೆ ಬಂದವರಿಗೆ ಅವರು ಯಾವಾಗಲೂ ಬ್ರಹ್ಮಾತ್ಮರಿಂದ ಭಿನ್ನರಲ್ಲ ಎಂಬುದನ್ನು ಮನಗಾಣುವಂತೆ ಮಾಡುತ್ತಾನೆ. ಈ ಸತ್ಯವನ್ನು ಮೌನಶಕ್ತಿಯ ಮೂಲಕ ಅವರ ಮನಸ್ಸಿಗೆ ನಾಟುವಂತೆ ಮಾಡುವುದರಿಂದ ಅವರಿಗೆ ತಾವು ಇನ್ನೇನನ್ನೂ ಮಾಡಬೇಕಾಗಿಲ್ಲವೆಂದು ಎನ್ನಿಸುತ್ತದೆ ; ಕೇವಲ ಇದ್ದರಾಯಿತು ಎಂಬ ಅನುಭವ ಉಂಟಾಗುತ್ತದೆ. ಮಾಡುವುದು ಮಾತ್ರ ಕೆಲಸ ಇರುವುದು ಕೆಲಸವಲ್ಲವಾದುದರಿಂದ ಮತ್ತು ಹುಟ್ಟು–ಸಾವುಗಳನ್ನು ಕರ್ಮವೇ ತರತಕ್ಕದ್ದಾದುದರಿಂದ ಅವರು ಯಮ ಮತ್ತು ಬ್ರಹ್ಮ (ತ್ರಿಮೂರ್ತಿಗಳಲ್ಲಿ ಒಬ್ಬ) ರಿಂದ ಮುಕ್ತರಾಗುವರು.

"ನನ್ನ ಗುರುವು ಜ್ಞಾನಿ. ಆತನು ಸಿದ್ಧಿಗಳನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾನೆ. ಆದರೆ ನಾನು ಅವುಗಳನ್ನು ಗಳಿಸಬಯಸುತ್ತೇನೆ. ಯೋಗಸಿದ್ಧಿಗಳು (ಅಷ್ಟಸಿದ್ಧಿಗಳು) ಲಭ್ಯವಾಗುವವರೆಗೆ ನನ್ನ ಮನಸ್ಸು ವಿಶ್ರಮಿಸದು. ಹೆಚ್ಚು ಪುನರ್ಜನ್ಮಗಳನ್ನು ಪಡೆಯಬೇಕಾದುದರ ಬಗ್ಗೆ ನಾನು ಚಿಂತಿಸುವುದಿಲ್ಲ. ಆದರೆ ಬರಿಯ ಜ್ಞಾನ ನನಗೆ ಬೇಡ; ಜ್ಞಾನದ ಜೊತೆಗೆ ಸಿದ್ಧಿಗಳೂ ನನಗೆ ಬೇಕು."…. "ನನ್ನ ಗುರುವು ಪದೇ ಪದೇ ಹೇಳುವುದು ಜಗತ್ತನ್ನು ಗಮನಿಸದೆ ಒಳಗೇ ಮುಳುಗು ಎಂದು. ಆದರೆ ನನ್ನ ದೇಶಕ್ಕೂ ಜಗತ್ತಿಗೂ ನಿಃಸ್ವಾರ್ಥ ಸೇವೆ ಸಲ್ಲಿಸುತ್ತಿರುವುದು ಉತ್ತಮ ಎಂದು ನನಗೆನ್ನಿಸುತ್ತದೆ: ನಿಃಸ್ವಾರ್ಥ ಸೇವೆಯೇ ಕರ್ಮಯೋಗ. ಮೂಲೆಗುಂಪಾಗಿರುವ ಗವಿಯೊಂದರಲ್ಲಿ ಮೌನವಾಗಿ ಇರುವವನ ಜೀವನಕ್ಕಿಂತ ಮಾನವ ಕುಲದ ಸೇವೆ ಮಾಡುತ್ತಿರುವವನ ಜೀವನವೇ ಹೆಚ್ಚು ಉತ್ತಮವೆಂದು ನನಗೆನ್ನಿಸುತ್ತದೆ."…. ನನ್ನ ಗುರುವು ಭಕ್ತಿಮಾರ್ಗವನ್ನು ಕಲಿಸುತ್ತಾನೆ. ಆದರೆ ನನ್ನ ಮನಸ್ಸು ರಾಜಯೋಗದತ್ತ ಒಲೆದಿದೆ."…… ನನ್ನ ಗುರುವಿನ ಗುರಿಯು ಇದು (ಹೃದಯವನ್ನು ತೋರಿಸಿ ಹೇಳುತ್ತಾನೆ); ಆದರೆ ನನ್ನ ಗುರಿಯು (ನೆತ್ತಿಯನ್ನು ತೋರಿಸಿ ಹೇಳುತ್ತಾನೆ) ಅದು."

ಇಂಥ ಚರ್ಚಾಸ್ಪದ ಹೇಳಿಕೆಗಳನ್ನು ಗುರುಗಳ ಉಪದೇಶದ ಬಗ್ಗೆ ಕೊಡುವ ಶಿಷ್ಯಂಮನ್ಯರು ಆ ಗುರುಗಳಿಗೆ ತಕ್ಕ ಶಿಷ್ಯರಲ್ಲವೇ ಅಲ್ಲ. ಅಂಥ ಗುರುಗಳು ಅವತರಿಸಿರುವುದೂ ಆ ಬಗೆಯ ಶಿಷ್ಯರಿಗಾಗಿ ಅಲ್ಲ. ತನ್ನ ಒಲವು, ತತ್ವ, ಧ್ಯೇಯ, ಅಪೇಕ್ಷೆ ಮುಂತಾದ ಕಾಯ್ದುಕೊಂಡ ಅಂಶಗಳಾವುವೂ ಇಲ್ಲದೆ ತನ್ನ ಗುರುವಿನ ಉಪದೇಶಗಳಿಗೆ ಸಂಪೂರ್ಣವಾಗಿ ಅಂಟಿಕೊಂಡು ವರ್ತಿಸುವುದೇ ಸದ್ಗುರುಭಕ್ತಿ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಶ್ರೀ ಭಗವಾನ್ ರಮಣರು ತಮ್ಮ "ಅರುಣಾಚಲ ಪಥಿಕಂ" ಎಂಬ ಕೃತಿಯ ೨ನೆಯ ಪದ್ಯದಲ್ಲಿ ಈ ಅಂಶವನ್ನು ಹೀಗೆ ಸಮರ್ಥಿಸಿದ್ದಾರೆ. "…. ನಾನೇನನ್ನು ಹೇಳಲಿದೆ? ನಿನ್ನ ಸಂಕಲ್ಪವೇ ನನ್ನ ಸಂಕಲ್ಪ ಅದೇ ನನ್ನ ಸುಖ–ಹೇ ಅರುಣಾಚಲ, ಓ ನನ್ನ ಜೀವಿತೇಶ!"

ನಾವು ಒಂದು ದೃಷ್ಟಾಂತವನ್ನು ತೆಗೆದುಕೊಳ್ಳೋಣ. ಗುಡ್ಡದ ಮೇಲೆ ತಮ್ಮ ಪೂರ್ವಾಯುಷ್ಯದಲ್ಲಿ ಭಗವಾನ್ ಶ್ರೀ ರಮಣರು ಮೌನದಲ್ಲಿ ಇದ್ದಾಗ ಅವರ ಉಪದೇಶಗಳಿಗೆ "ನಾನು ಯಾರು" ಎಂಬ ಶೋಧ ಮಾರ್ಗವು ಕೋನಶಿಲೆಯಾದೀತೆಂಬುದು ಯಾರಿಗೂ ಗೊತ್ತಿರಲಿಲ್ಲ. ೧೯೦೨ರಲ್ಲಿ ಶ್ರೀ ಶಿವಪ್ರಕಾಶಂ ಪಿಳ್ಳೈ ಎಂಬ ಭಕ್ತನು ಶ್ರೀ ಭಗವಾನ್ ರಮಣರನ್ನು ಮೊಟ್ಟಮೊದಲು ಸಂದರ್ಶಿಸಿದನು. ಆತನು ತನ್ನ ಸಂದರ್ಶನದ ಉದ್ದೇಶವನ್ನು ಹೀಗೆ ಹೇಳಿದನು. "ಸ್ವಾಮಿಗಳೇ, ನನ್ನ ಕಾಲೇಜು ದಿನಗಳಲ್ಲಿ ನಾನು ಯಾರೆಂಬುದನ್ನು ತಿಳಿದುಕೊಳ್ಳುವ ಬಯಕೆ ನನಗೆ ಉಂಟಾಗಿತ್ತು. ಮನಃಶಾಸ್ತ್ರದ ಮೇಲಿನ ಪುಸ್ತಕಗಳನ್ನು ಓದುವ ಮತ್ತು ಇತರ ಸಾಧನಗಳ ಮೂಲಕ ನಾನು ಎಷ್ಟು ಪ್ರಯತ್ನ ಪಟ್ಟರೂ ನನಗೆ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಈ ಅಂಶದ ಮೇಲೆ ಬೆಳಕು ಬೀರಿ ನನ್ನನ್ನು ಅನುಗ್ರಹಿಸಬೇಕು. ನಾನು ಯಾರು?" ತನ್ನೆದುರು ಕುಳಿತಿದ್ದವರು ಅನನ್ಯ ಗುರುಗಳು ; ನಾನು ಯಾರು? ಎಂಬ ಶೋಧಮಾರ್ಗವನ್ನು ಕಲಿಸಲು ಮಾತ್ರ (ಭೂಲೋಕಕ್ಕೆ) ಅವರು ಬಂದಂಥವರು" ಎಂಬುದನ್ನು ಆ ಶಿಷ್ಯನು ಆಗ ಅರಿತಿರಲಿಲ್ಲ. ಗುರು ಹಾಗೂ ತಕ್ಕ ಶಿಷ್ಯರ ನಡುವೆ ಇರಬೇಕಾದ ವಿಚಾರ ವಾಹಿನಿಯ ಸರಿಯಾದ ಶ್ರುತಿಯನ್ನು ಇದು

ತೋರಿಸುತ್ತದೆ. ಯಾವ ಉದ್ದೇಶಕ್ಕಾಗಿ ಗುರುವು ಬಂದಿರುವನೋ ಅದಕ್ಕೆ ಸರಿಸಮವಾದ ಧ್ಯೇಯವು ಶಿಷ್ಯನಲ್ಲಿ ಕಂಡುಬರುವುದು ಆಶ್ಚರ್ಯವಲ್ಲವೇ! "ನಾನು ಯಾರು?" ಎಂಬ ಕಿಬ್ಬೊತ್ತಿಗೆ ಇಡೀ ಜಗತ್ತಿಗೆ ಕೊಡಲ್ಪಟ್ಟದ್ದು ಈ ಶಿಷ್ಯನಿಗಾಗಿಯೇ ಎಂಬುದು ಸರ್ವವಿದಿತ. ಅಂಥ ಸಮರ್ಪಕವಾದ ಜೋಡಿಯು ಗುರು–ಶಿಷ್ಯರಲ್ಲಿರತಕ್ಕ ಸರಿಯಾದ ಸಂಬಂಧದ ಗುರುತು.

ನಾವು ಮೇಲೆ ಅರಿತ ಸಂಗತಿಗಳಿಂದ ಜ್ಞಾನ–ಭಕ್ತಿಗಳು (ಚಿತ್ ಮತ್ತು ಆನಂದಗಳು) ಬ್ರಹ್ಮನ (ಪರಬ್ರಹ್ಮನ) ನಿಜವಾದ ಮುಖಗಳು ಎಂಬುದನ್ನು ಮನದಟ್ಟು ಮಾಡಿಕೊಳ್ಳಬಹುದು. ಬ್ರಹ್ಮನು ಸತ್ ಯಾ ಅಸ್ತಿತ್ವವಾಗಿರುವುದರಿಂದ, ಸತ್ ಎಂದರೆ ಸತ್ಯವಾಗಿರುವುದು : ಅಂದರೆ, ನಿಜಭಕ್ತಿ ಯಾ ನಿಜಜ್ಞಾನ ಎಂಬುದೇ ಬ್ರಹ್ಮ ಎಂದರ್ಥ. ಸರ್ವಶ್ರೇಷ್ಠ ಉಪದೇಶದ ಪ್ರಕಾರ,

"ಬ್ರಹ್ಮವೊಂದೇ ನಾನು ನಾನೆಂಬ ಆತ್ಮರೂಪದಿಂದ ಪ್ರಕಾಶಿಸುತ್ತದೆ."

"ಉಳ್ಳದು ನಾರ್ಪದು",–ಪರಿಶಿಷ್ಟ ಪದ್ಯ–೮

ಭಕ್ತಿ–ಜ್ಞಾನಗಳು ಬ್ರಹ್ಮಾತ್ಮವನ್ನು ಸೇರುವ ಮಾರ್ಗವನ್ನು ರಚಿಸುತ್ತವೆ. ಬ್ರಹ್ಮಾತ್ಮವಾಗಿರುವುದೇ ಜ್ಞಾನ. ಬ್ರಹ್ಮಾತ್ಮವನ್ನು ಪ್ರೀತಿಸದೆ ಬ್ರಹ್ಮಾತ್ಮವಾಗಿ ಇರುವುದು ಹೇಗೆ? [ಒಬ್ಬನು ಬ್ರಹ್ಮಾತ್ಮದಂತಿದ್ದರೆ ಅದು ಪ್ರೇಮದ ಪೂರ್ಣತೆಯ ಸ್ಥಿತಿ]. [ಒಬ್ಬನಿಗೆ ಭಕ್ತಿ ಇದ್ದರೆ ಅವನು ಬ್ರಹ್ಮಾತ್ಮತೆಯಲ್ಲಿ ಇರದೆ ಮತ್ತಾವ ಸ್ಥಿತಿಯಲ್ಲೂ ಇರಲಾರ]. ಆದುದರಿಂದ ಭಕ್ತಿ–ಜ್ಞಾನಗಳು ಎರಡು ಭಿನ್ನ ಪದಾರ್ಥಗಳಲ್ಲ–ಅವೆರಡೂ ಬ್ರಹ್ಮಾತ್ಮವೇ; ಅವು ಬ್ರಹ್ಮಾತ್ಮದ ಎರಡು ಮುಖಗಳು (ಒಂದು ನಾಣ್ಯದ ಎರಡು ಮುಖಗಳಂತಿವೆ.)

"ಗುರುತ್ವಾಕರ್ಷಣ ಶಕ್ತಿಯಿಲ್ಲದೆ ಭೂಮಿಯ ಮೇಲೆ ಯಾವ ವಸ್ತುವಾದರೂ ಸ್ಥಿರವಾಗಿ ಇರಬಲ್ಲುದೇ? ಹಾಗೆ ಭಕ್ತಿಯೊಂದು ಗುರುತ್ವಾಕರ್ಷಣ ಶಕ್ತಿ ; ಸ್ಥಿರವಾಗಿ ಇರುವುದೆಂಬುದು ಜ್ಞಾನ. ಆದುದರಿಂದ, ಅವೆರಡರಲ್ಲಿ ಯಾವುದೂ ಒಂದನ್ನು ಬಿಟ್ಟು ಇನ್ನೊಂದು ಇರಲಾರದು."

"ಸಾಧನೈ ಸಾರಂ", ಗ್ರಂಥಕರ್ತ

ಬ್ರಹ್ಮಸಿದ್ಧಿಯು (ಬ್ರಹ್ಮಾತ್ಮಸಿದ್ಧಿಯು) ವೇದಗಳ ಪರಮ ಧ್ಯೇಯ. ಅದೇ ಭಗವಾನ್ ಶ್ರೀ ರಮಣರ ಉಪದೇಶ. "ನಾನು ಯಾರು"? ಎಂದು ಶೋಧಿಸುವ ಸ್ವರೂಪದ ಜ್ಞಾನಮಾರ್ಗವನ್ನೇ "ಶ್ರೀ ರಮಣಮಾರ್ಗ–ಭಾಗ–೧" ಎಂದು ವಿವರಿಸಲಾಗಿದೆ. "ನಾನು ಯಾರು?" ಎಂಬ ಶೋಧದಿಂದ ಬ್ರಹ್ಮಾತ್ಮಜ್ಞಾನವು ಉದಯವಾಗುತ್ತದೆ. ಪ್ರೇಮ (ಪ್ರೀತಿ, ರತಿ, ಭಕ್ತಿ, ವಾತ್ಸಲ್ಯ) ತನ್ನ ಪೂರ್ಣ ಪರಿಷ್ಕೃತ ಅವಸ್ಥೆಯಲ್ಲಿ ಬ್ರಹ್ಮಾತ್ಮವಾಗಿಯೇ ಹೊಳೆಯುವುದರಿಂದ ಸ್ವಾತ್ಮ ಭಕ್ತಿಯ ಪವಿತ್ರೀಕರಣದ ಕ್ರಮವನ್ನು "ಶ್ರೀ ರಮಣ ಮಾರ್ಗ–ಭಾಗ–೨" ಎಂಬ ರೂಪದಲ್ಲಿ ವಿವರಿಸಲಾಗಿದೆ. ಪ್ರೇಮದ ಸ್ವರೂಪವು ಪ್ರಾಕೃತ (ಅನಾಗರಿಕ) ಮನುಷ್ಯನಿಂದ ಬ್ರಹ್ಮಜ್ಞಾನಿಯವರೆಗೆ ಬದಲಾಗುತ್ತಿರುವುದರಿಂದ ಮೆಟ್ಟಿಲಿಂದ ಮೆಟ್ಟಿಲಿಗೆ ಜನರನ್ನು ಮೇಲೆತ್ತಲೆಂದು ಶ್ರುತಿಗಳಲ್ಲಿ ವಿವಿಧ ಮಟ್ಟಗಳ ಉಪದೇಶಗಳನ್ನು ಮಾಡಲಾಗಿದೆ.

ಭಿನ್ನ ಮಟ್ಟದ ಜನರಿಗೆ ಬೋಧಿಸಲು ಭಿನ್ನ ಮಾದರಿಯ ಉಪಾಧ್ಯಾಯರು ಬೇಕಾಗುವುದರ ವಿವರಣೆ ಇಲ್ಲಿದೆ. ಶ್ರುತಿಪಂಡಿತರು, ಮಂತ್ರ–ಯಂತ್ರ–ತಂತ್ರ ಮುಂತಾದವುಗಳ ಉಪದೇಶಕರು, ಪುರಾಣೇತಿಹಾಸಗಳ ಪ್ರವಚನಕಾರರು (ಪವಿತ್ರಗ್ರಂಥಗಳ ವಿವರಣಕಾರರು) – ಅವರಿಗೆ ಆತ್ಮಜ್ಞಾನವಿಲ್ಲ ; ಅವರು ನಮ್ಮ ಶಾಲೆಯ ೩ನೆಯ ವರ್ಗದವರೆಗಿನ ವಿದ್ಯಾರ್ಥಿಗಳು – ಯಾವಾಗಲೂ ಎಲ್ಲೆಲ್ಲೂ ಜಗತ್ತಿಗೆಲ್ಲಾ ಅವಶ್ಯಕರಾಗಿದ್ದಾರೆ. ಅವರಿಗಿಂತ ಕೆಳಮಟ್ಟದ ಮುಮುಕ್ಷುಗಳಿಗೆ ಮೇಲು ಮೇಲಿನ ವರ್ಗಕ್ಕೆ ಸೇರುವವರೆಗೆ ಅವರು ಬೇಕಾಗಿರುತ್ತಾರೆ. ನೀತಿ, ದೈವಭಕ್ತಿ, ಕರ್ಮಪ್ರಾಧಾನ್ಯ, ಪ್ರಾಪಂಚಿಕ ಸುಖಭೋಗಗಳ ಬಗ್ಗೆ ವೈರಾಗ್ಯ ಮುಂತಾದ ವಿಷಯಗಳ ಬಗೆಗಿನ ಅವರ ಉಪದೇಶಗಳು–ಅವರು ಸ್ವತಃ ತಮ್ಮ ಉಪದೇಶಗಳಂತೆ ತಾವೇ ನಡೆದುಕೊಳ್ಳದೆ ಹೋದರೂ ಅಡ್ಡಿಯಿಲ್ಲ–ಯಾವಾಗಲೂ ಮನುಕುಲದ ಪ್ರಗತಿಗೆ ಅವಶ್ಯಕಗಳಾಗಿವೆ. ಆದರೆ ಯಾವಾಗಲೂ ನಾವು ನೋಡಿದಂತೆ ಅವರು ತಾವು ಉಪದೇಶಿಸಿದ್ದೇ ಆತ್ಯಂತಿಕ ಸತ್ಯವೆಂದು ತಮ್ಮ ಅನುಯಾಯಿಗಳು ನಂಬಬೇಕೆಂದು ಒತ್ತಾಯಿಸುವುದರಿಂದ ಅವರು (ಅನುಯಾಯಿಗಳು) ಧರ್ಮಾಂಧರಾಗಿ (ಧರ್ಮಶಾಠ್ಯದಿಂದ) ಪ್ರಗತಿಯ ಮುಂದಿನ ಮೆಟ್ಟಿಲುಗಳ ಬಗೆಗಿನ ಉಪದೇಶಗಳೆಲ್ಲವನ್ನೂ ದ್ವೇಷಿಸುವವರಾಗುತ್ತಾರೆ. ಆದುದರಿಂದ ನಮ್ಮ ಸ್ವಂತದ ತಿಳುವಳಿಕೆಯು ಅವರಿಂದ ಗೊಂದಲ–ಗಲಿಬಿಲಿಗಳಿಗೊಳಗಾಗದಂತೆ ನಾವು ಎಚ್ಚರಿಕೆಯಿಂದಿರಬೇಕು. ಮೇಲೆ ಕೊಟ್ಟ ಸ್ಪಷ್ಟೀಕರಣಗಳ ನೆರವಿನಿಂದ ನಾವು ಪ್ರೇಮ ಶುದ್ಧೀಕರಣದ ನಮ್ಮ ಪಾಠಶಾಲೆಯ ಯಾವ ಮಾರ್ಗದಲ್ಲಿ ಇರುತ್ತೇವೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು ; ಆದರೆ ಅದೇ ವೇಳೆಗೆ ಆ ಉಪದೇಶಕರ ಬಗೆಗೆ ನಾವು ಯಾವ ತರಹದ ಸಭಯ ತಿರಸ್ಕಾರವನ್ನೂ ಇಟ್ಟುಕೊಳ್ಳಬಾರದು. ಹಾಗೇ ಅವರ ಶಿಷ್ಯರ ಬಗೆಗೂ ದೇವರು, ಧ್ಯೇಯ, ಸೇವೆ ಮುಂತಾದವುಗಳ ಕುರಿತ ವಿಚಾರಗಳ ಬಗೆಗೂ ನಾವು ಉದ್ವೇಗ – ತಿರಸ್ಕಾರಗಳನ್ನು ತಾಳಬಾರದು. ಕರ್ಮಗಳಿಗೆ ಅಂಟಿಕೊಂಡಿರುವ ಮುಂತಾದ ಅವರ ವರ್ತನೆಗಳನ್ನು ಖಂಡನೆಗೆ ಗುರಿ ಮಾಡ ಹೋಗದೆ ಅವರ ಬಗ್ಗೆ ಪ್ರೀತಿ–ತಾಳ್ಮೆಗಳಿಂದ ನಾವು ವರ್ತಿಸಬೇಕು.

ತಮ್ಮ ಅನುಷ್ಠಾನಗಳ ಬಗೆಗೆ ಸಂಪೂರ್ಣ ಜುಗುಪ್ಸಿತರಾಗಿ ಅವರು ನಮ್ಮೆಡೆಗೆ ಬರುವವರೆಗೆ–ಅದಕ್ಕಿಂತ ಹೆಚ್ಚಿನ ಸತ್ಯವಾವುದೆಂದು ಕೇಳುವವರೆಗೆ – ಅವರ (ಆ ಇತರರ) ಮಾರ್ಗದಲ್ಲಿ ಕೈಹಾಕಿ ತೊಂದರೆ ಕೊಡಲು ಹೋಗಬಾರದು. ಅವರವರ ಮಾರ್ಗದಲ್ಲಿಯೇ ಅವರವರನ್ನು ಪ್ರೋತ್ಸಾಹಿಸೋಣ.

> **"ಸತ್ಯದ ಜ್ಞಾನವುಳ್ಳವನು ಕರ್ಮಸಂಗಿಗಳಾದ ಅಜ್ಞರ**
> **ಮನಸ್ಸಿನಲ್ಲಿ ಗೊಂದಲ ಉಂಟಾಗುವಂತೆ ಮಾಡಬಾರದು.**
> **"ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ**
> **ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್"**
>
> **–"ಭಗವದ್ಗೀತಾ," ೩ನೆಯ ಅಧ್ಯಾಯ, ೨೬ನೆಯ ಶ್ಲೋಕ**

ತಮ್ಮೆಡೆಗೆ ಬಂದ ಬಗೆ ಬಗೆಯ ಮುಮುಕ್ಷುಗಳ ಭಿನ್ನ ಬಿನ್ನ ಅನುಷ್ಠಾನಗಳಿಗೆ ಶ್ರೀ ರಮಣ ಮಹರ್ಷಿಗಳು ಸಮ್ಮತಿಸುವುದು ಈ ರೀತಿಯಿಂದ ಎಂಬುದನ್ನು ನಾವು ತಿಳಿದಿರತಕ್ಕದ್ದು.

ಅಧ್ಯಾಯ ಮೂರು

ಕರ್ಮ

ನಿಜವಾಗಿ ಇರತಕ್ಕ ವಸ್ತುವೆಂದರೆ ನಾವು–ಬ್ರಹ್ಮ (ಪರಬ್ರಹ್ಮ). ನಮ್ಮ ಅಪರಿವರ್ತನೀಯ ಅಸ್ತಿತ್ವವೆಂದರೆ ಸತ್. ಈ ಸತ್ತೆಯು (ಅಸ್ತಿತ್ವವು) ನಮ್ಮ ಅಸ್ತಿತ್ವ ಮಾತ್ರ ಆಗಿರುವುದರಿಂದ ಮತ್ತು "ನಾವಿದ್ದೇವೆ" ಎಂಬುದು ನಮಗೆ ಗೊತ್ತಿರುವುದರಿಂದ ನಮ್ಮನ್ನು ನಾವು ಅರಿತಿಲ್ಲ ಎಂದು ಹೇಳಲಾರೆವು. ಬ್ರಹ್ಮಾತ್ಮವನ್ನು ನಾವು ಬಲ್ಲೆವು. ಈ ಜ್ಞಾನವೇ ಚಿತ್. ಪ್ರತಿಯೊಬ್ಬನಿಗೂ ನಾನಿದ್ದೇನೆ (ಸತ್+ಚಿತ್) ಎಂಬ ಬ್ರಹ್ಮಾತ್ಮಕತ್ವದ ಬಗೆಗೆ ಪ್ರೀತಿ ಇರುವುದನ್ನು ನಿದ್ರೆಯು ಸಿದ್ಧ ಮಾಡಿ ತೋರಿಸುತ್ತದೆ. ನಮ್ಮ ಸತ್ತೆಯ ಸ್ಥಿತಿಯೇ ಆನಂದವಾಗಿರುವುದೇ ನಮಗೆ ಬ್ರಹ್ಮಾತ್ಮದ ಬಗೆಗೆ ಹಾಗೆ ಪ್ರೀತಿ ಇರಲು ಕಾರಣ. ಆದುದರಿಂದ ನಾವು ಪರಮಾನಂದ ಸ್ವರೂಪರು. ಹೀಗೆ ನಾವು ಸತ್+ಚಿತ್+ಆನಂದ.

ಅಂಥ ಸ್ವಾನುಭೂತಿಯ ಸ್ಥಿತಿಯಲ್ಲಿ ಇನ್ನೊಂದು ಪದಾರ್ಥ ಇಲ್ಲದುದರಿಂದ ನಾವೆಲ್ಲರೂ ಒಂದೇ ಒಂದು ಎನ್ನಿಸಿದ್ದೇವೆ. ನಮ್ಮ ಐಕ್ಯವು ಒಂದು ಸ್ಥಿತಿ ; ಆ ಸ್ಥಿತಿಯೇ ಪೂರ್ಣ ಸ್ವಾತಂತ್ರ್ಯ ಸ್ವರೂಪದ್ದು. ಏಕೆಂದರೆ ನಮ್ಮನು ಬಂಧಿಸಲು ಇತರ ಯಾರೂ ಇಲ್ಲ ಯಾ ಇತರರಿಂದ ಬಂಧಿಸಲ್ಪಡಲು ಯಾರೂ ಇಲ್ಲ. ನಾವು ಹೇಳಿದ್ದರ ಮೇಲಿಂದ ನಮ್ಮ ಸ್ವರೂಪವು ಏಕ, ಸತ್+ಚಿತ್+ಆನಂದ, ಪೂರ್ಣಸ್ವಾತಂತ್ರ್ಯ (ಪೂರ್ಣ ಮುಕ್ತತೆ) ಎಂದು ನಾವು ನಿಗಮನಿಸುತ್ತೇವೆ. ನಾವು ಸಂಪೂರ್ಣ ಮುಕ್ತರೆಂದಾಗ ನಾವು ಇಟ್ಟುಕೊಂಡಿರುವ ಅರ್ಥ ಯಾವುದು? ಆ ಅರ್ಥವೆಂದರೆ, ನಮ್ಮ ಇಚ್ಛೆಯಂತೆ ನಾವು ಬೇಕಾದುದನ್ನೆಲ್ಲಾ ಮಾಡಬಲ್ಲ ಸಾಮರ್ಥ್ಯ ಉಳ್ಳವರಾಗಿದ್ದೇವೆ–ಎಂದು. ನಮಗೆ ಅಂತಹ ಇಚ್ಛಾಶಕ್ತಿ ಇರುವುದರಿಂದ ನಮಗೆ ಸಂಪೂರ್ಣ ಮುಕ್ತತೆ ಇದೆ ಎಂದು ಹೇಳುವುದು ಸರಿಯಾದುದು. ಈ ಇಚ್ಛಾಶಕ್ತಿಯು ನಮ್ಮದೇ ಆದ ಶಕ್ತಿ ಮತ್ತು ನಾವೇ ಅದು. ನಾವೂ ನಮ್ಮ ಶಕ್ತಿಯೂ ಒಂದೇ ಆಗಿದ್ದೇವೆ.

ಅಂಥ ಸ್ವಾತಂತ್ರ್ಯವುಳ್ಳವನು ತನ್ನ ಸರ್ವಶಕ್ತಿ ಸಂಪನ್ನವಾದ ಶಕ್ತಿಯಿಂದ ತನ್ನ ಬ್ರಹ್ಮಾತ್ಮರೂಪದ ಅಪರಿವರ್ತನೀಯ ಸ್ಥಿತಿಯಲ್ಲಿ ಇರಬಹುದು ಅಥವಾ ಒಂದು ಕಾಲ್ಪನಿಕ ಬದಲಾವಣೆಯನ್ನು ಆತನು ತಂದುಕೊಳ್ಳಬಲ್ಲನು–ಅರ್ಥಾತ್, ತನ್ನ ಬ್ರಹ್ಮಾತ್ಮಕತೆಯನ್ನೇ ತಾನು ಮರೆತುಬಿಟ್ಟನೇನೋ ಎಂಬಂತೆ ತನ್ನ ಅಪ್ರಮಿತ ಸ್ವರೂಪವನ್ನು ಪರಿಮಿತಿಗೊಳಪಡಿಸಿಕೊಂಡ ಹಾಗೆ ಕಲ್ಪಿಸಿಕೊಳ್ಳಬಹುದು. ಒಬ್ಬ ಮನುಷ್ಯನು ತನ್ನ ಸ್ವಪ್ನಸ್ಥಿತಿಯಲ್ಲಿ ತಾನೇ ತನ್ನ ಮನಸ್ಸನ್ನೊಂದು ಸ್ವಪ್ನಪ್ರಪಂಚವನ್ನಾಗಿ ನೋಡುವಂತೆ–ಆ ಪ್ರಪಂಚದಲ್ಲಿ ಜೀವಿಗಳನ್ನೂ ತನ್ನ ಶರೀರವನ್ನೂ ಕಾಣುವಂತೆ, ಅದೇ ಶಕ್ತಿಯಿಂದ, ತನ್ನ ಕಾಲ್ಪನಿಕ ವಿಸ್ಮರಣಾವಸ್ಥೆಯಲ್ಲಿ ಅವನು ತನ್ನನ್ನೇ ತಾನು ನೋಡುತ್ತಾನೆ ; ತನ್ನಲ್ಲೇ

ನೋಡುತ್ತಾನೆ ; ತನ್ನಿಂದಲೇ ತಾನೊಬ್ಬ ಪರಿಮಿತ ವ್ಯಕ್ತಿಯೆಂದೂ ಅದೇ ಕಾಲದಲ್ಲಿ ಆ ವ್ಯಕ್ತಿ ಕಾಣುವ ಪ್ರಪಂಚ, ಜೀವಾತ್ಮ ಮತ್ತು ದೇವರುಗಳೆಂದೂ ನೋಡುತ್ತಾನೆ. ಹೀಗೆ ಸರ್ವೋಚ್ಚ ಪದಾರ್ಥವಾದ ನಾವು ನಮ್ಮ ಬ್ರಹ್ಮಾತ್ಮದ ವಿಸ್ಮೃತಿಯೆಂಬ ಕಾಲ್ಪನಿಕ ಅಜ್ಞಾನ ಸ್ವರೂಪದ ನಿದ್ರೆಯಲ್ಲಿ ನಮ್ಮದೇ ಆದ ಶಕ್ತಿಯಿಂದ ನಾವು ಜಗತ್ತು, ಜೀವಾತ್ಮ ಮತ್ತು ದೇವರುಗಳನ್ನು ನೋಡುತ್ತೇವೆ.

"ನಮ್ಮ ಅಪ್ರಮಿತ ಸತ್ತೆಯನ್ನೇ ಶರೀರವನ್ನಾಗಿ ಪರಿಮಿತಗೊಳಿಸಿ, ಆ ಶರೀರದ ಮೂಲಕ ಇಂದ್ರಿಯಜ್ಞಾನವನ್ನು ವಿಸ್ತರಿಸಿ ಅದನ್ನೇ ಜಗತ್ತನ್ನಾಗಿ ಮಾಡಿಕೊಂಡು, ನಮ್ಮ ಬ್ರಹ್ಮಾತ್ಮವನ್ನೇ ಜಗತ್ತನ್ನಾಗಿ ನೋಡುತ್ತಾ ಅದರಿಂದ ಭ್ರಾಂತರಾಗಿ ಹೋಗುವುದೇ ಆಶ್ಚರ್ಯಕರವಾದ ಮಾಯೆ."

"ಸಾಧನೈ ಸಾರಂ", ಗ್ರಂಥಕರ್ತ

ಈ ಮಾಯೆಯು ಕಾಲ್ಪನಿಕವಾದುದಲ್ಲವೇ? ಹೌದು–ಅದು ನಮ್ಮದೇ ಆದ ಕಲ್ಪನೆ.

ನಾವು ನಮ್ಮ ಸ್ವಾಭಾವಿಕ (ಸಹಜ) ಸ್ಥಿತಿಯಾದ ಪೂರ್ಣ ಮುಕ್ತಿಯನ್ನು ಅಂಥ ರೀತಿಯಿಂದ ಬಳಸಿಕೊಂಡರೂ ಅದೇ ಮುಕ್ತಿಯಿಂದ (ಸ್ವಾತಂತ್ರ್ಯದಿಂದ) ಅದನ್ನು ಬಳಸದೆಯೂ ನಾವು ಇರಬಲ್ಲೆವು! ಈ ಆತ್ಮಸ್ವಾತಂತ್ರ್ಯವೇ (ಪರ) ಬ್ರಹ್ಮಸ್ವರೂಪ. ಯಾರಿಂದಲೂ ಯಾವ ಸಾಧನದಿಂದಲೂ ಈ ನಿತ್ಯ ಸ್ವಾತಂತ್ರ್ಯವನ್ನು ನಾಶಮಾಡಲು ಸಾಧ್ಯವಾಗದು ; ಏಕೆಂದರೆ, ನಮ್ಮನ್ನುಳಿದು ಬೇರೆ (ಸತ್) ಪದಾರ್ಥ ಇನ್ನೊಂದಿಲ್ಲ. ಇಡೀ ಜಗತ್ತು, ಜೀವಾತ್ಮ ಮತ್ತು ದೇವರು ಮಾಯೆ[೨೯]ಯಲ್ಲಿ ಕಾಣಿಸುತ್ತಾರೆ. ಅವರ ಇರವು ನಮ್ಮ ಕಲ್ಪನೆಯಲ್ಲಿ ಮಾತ್ರ ಎಂದು ತೋರುತ್ತದೆ ; ಆದರೆ ನಿಜವಾಗಿ ಅವರಿಗೆ ಸ್ವಂತದ ಅಸ್ತಿತ್ವ ಇಲ್ಲವೇ ಇಲ್ಲ. ಆದುದರಿಂದ ಭ್ರಾಂತ ಸ್ಥಿತಿಯಲ್ಲಿಯೂ ನಮಗೆ ಮಾತ್ರ ಅಸ್ತಿತ್ವ (ಸತ್) ಇರುತ್ತದೆ ; ಅವರಿಗೆ ಅಂಶತಃ ಕೂಡಾ ನಿಜವಾದ ಅಸ್ತಿತ್ವವಿಲ್ಲ. [ಇಲ್ಲಿ ಮತ್ತೊಂದಿಲ್ಲ ; ನಾವಷ್ಟೇ ಇಲ್ಲಿ ಇರುವಂಥವರು.]

ನಮ್ಮ ಆಶ್ಚರ್ಯಕರವಾದ ಶಕ್ತಿಯ ಈ ಕಲ್ಪನೆ ಎಂದರೆ ಜಗತ್ತು, ಜೀವಾತ್ಮ ಮತ್ತು ದೇವರುಗಳಾಗಿ ನಮ್ಮ ಬ್ರಹ್ಮಾತ್ಮವನ್ನೇ ಬಹುತ್ವದಿಂದ ನೋಡುವುದಾಗಿದೆ ; ಮತ್ತು ನಮ್ಮನ್ನು ಜೀವಾತ್ಮಗಳಲ್ಲಿ ಕೆಲವು ವ್ಯಕ್ತಿಗಳೆಂದು ಭಾವಿಸುವುದೂ ಆಗಿದೆ. ಆ ವ್ಯಕ್ತಿ ಎಂದರೆ ನಾನೆಂಬ ಅಹಂಕಾರ. ಅದು ನಮ್ಮಲ್ಲಿ ಹುಟ್ಟುವ ಮೊದಲ ವಿಚಾರ. ನಮ್ಮ ಎಲ್ಲರಲ್ಲಿಯೂ ಅದು ಪರಿಮಿತ ರೂಪದಲ್ಲಿ ಪ್ರಕಾಶಿಸುತ್ತದೆ. ಇದು ಕೇವಲ ವಿಚಾರ–ಇದೆಂದೂ ನಮ್ಮ ಬ್ರಹ್ಮಾತ್ಮಜಾಗರ (ಅಥವಾ ಆತ್ಮಜ್ಞಾನ) ಅಲ್ಲ. ಆದರೆ "ನಾನೊಬ್ಬ ಮನುಷ್ಯ, ನಾನು ಇಂಥವನು" ಎಂದುಕೊಳ್ಳುವ ಈ ವ್ಯಕ್ತಿಯಲ್ಲಿ ಕೂಡಾ ಸಚ್ಚಿದಾನಂದದ ಸ್ವರೂಪವು ಇರುವುದಿಲ್ಲ. ಆದುದರಿಂದ ಈ ಕಾಲ್ಪನಿಕ ವ್ಯಕ್ತಿ ಕೂಡಾ ಸುಖವಾಗಿರಬೇಕೆಂದು ಆಶಿಸುವುದು ಆಶ್ಚರ್ಯವಲ್ಲ. ಆದರೆ ಅವನು ಶರೀರತ್ರಯದಲ್ಲಿ ಒಂದನ್ನು ತಾನೆಂದು ಏಕೀಕರಿಸಿಕೊಳ್ಳುವುದರಿಂದ (ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳಲ್ಲಿ

---

೨೯. "ಮಾಯೆ" ಎಂದರೆ "ಇಲ್ಲದ್ದು" ಎಂದರ್ಥ. ಅದನ್ನು ಅನಿರ್ವಚನೀಯ ಅಥವಾ ಹೇಳಲು ಬಾರದಂಥದು ಎನ್ನಲಾಗಿದೆ.

ತಾನು ಒಂದಲ್ಲಾ ಒಂದರಲ್ಲಿ ಐಕ್ಯವಾಗಿರುವೆನೆಂದು ಭಾವಿಸಿಕೊಳ್ಳುವುದರಿಂದ) ಮತ್ತು ಆಯಾ ಇಂದ್ರಿಯಕ್ಕೆ ಸಂಬಂಧಿಸಿದ ಜಗತ್ತು ಕೂಡಾ ತನ್ನಿಂದ ಹೊರಗಿದೆ ಎಂದು ನಂಬುವುದರಿಂದ ಅವನು ಹೊರ ಜಗತ್ತಿನಿಂದ ಸುಖಪಟ್ಟೇನೆಂಬ ಪ್ರತ್ಯಾಶೆಯನ್ನಿಟ್ಟುಕೊಂಡಿದ್ದಾನೆ. ಅಯ್ಯೋ! (ಮಾಯೆಯು) ಹಾಕಿದ ಮುಸುಕೇ ಅಂಥದು ! ಅವನು ತನ್ನ ಬ್ರಹ್ಮಾತ್ಮವನ್ನು ಮರೆತುದರಿಂದ ಅಂಥ ಮುಸುಕಿನೊಳಗೆ ಅವನಿರಬೇಕಾಗಿದೆ. ಅದರಿಂದ ಅವನಿಗೀಗ ಸುಖ ತನ್ನ ಒಳಗೇ ಇದೆ ಎಂಬುದರ ಅರಿವಿಲ್ಲದಾಗಿದೆ. ಆ ಅಂತಃ ಸುಖವಾದರೋ ಅವನ ಶುದ್ಧವೂ ಪೂರ್ಣ ಸ್ವಾತಂತ್ರ್ಯದ ಸಹಜ ಸ್ಥಿತಿಯೂ ಆಗಿದೆ – ಎಂಬುದು ಅವನಿಗೀಗ ತಿಳಿಯದಂತಾಗಿದೆ.

ಆದುದರಿಂದ, ಜೀವಾತ್ಮನು ಮನಸ್ಸನ್ನು ಬಳಸಿಕೊಳ್ಳುತ್ತಾನೆ ; ಜೊತೆಗೇ ಶರೀರವನ್ನೂ ಜಗತ್ತನ್ನೂ ಅದೇ ರೀತಿಯಿಂದ ತನ್ನ ಕೈಯಲ್ಲಾದ ಎಲ್ಲ ಬಗೆಗಳಿಂದಲೂ ಸುಖ ಪಡೆಯಲೆಂದು ಬಳಸಿಕೊಳ್ಳುತ್ತಾನೆ.

ಹೀಗೆ ಕರ್ಮ ಆರಂಭವಾಗುತ್ತದೆ. ತೋರಿಕೆಗೆ ಮರೆತು ಹೋದಂತಾಗಿರುವ ತನ್ನ ಸ್ವಂತದ ಸಹಜ ಸುಖವನ್ನು ತಲುಪಬೇಕೆಂಬ ಬಯಕೆಯಲ್ಲಿಯೇ ಕರ್ಮಾರಂಭದ ಕಾರಣವು ಕಂಡುಬರುತ್ತದೆ. ಆದರೆ ಮನಸ್ಸಿನ ಮೂಲಕ ಇಚ್ಛಾಶಕ್ತಿಯು ಬಹಿರ್ಮುಖಗೊಳಿಸಲ್ಪಟ್ಟಿರುವುದರ ಫಲವಾಗಿ ತನ್ನ ಮೂಲ ಆಕರವಾದ ನಿತ್ಯಸುಖದಿಂದ ವ್ಯಕ್ತಿಯು ಹೆಚ್ಚು ಹೆಚ್ಚು ಪ್ರತ್ಯೇಕಿಸಿಕೊಂಡು ದೂರದೂರ ಹೋಗುತ್ತಾನೆ. ಕರ್ಮರೂಪದ ಅವನ ಯತ್ನಗಳೆಲ್ಲವೂ ಅವನನ್ನು ನಿತ್ಯ ಸುಖದತ್ತ ಒಯ್ಯುವುದರ ಬದಲು ಅದರಿಂದ ಹೊರಗೇ ದಬ್ಬುತ್ತವೆ. ಹೀಗೆ ಕರ್ಮಗಳು ನಿತ್ಯಸುಖಕ್ಕೆ ಸಾಧನಗಳಲ್ಲ. ಆದುದರಿಂದ ಕರ್ಮಗಳು ದುಃಖ ಸಾಧನಗಳು ಮಾತ್ರ ಎಂಬುದನ್ನು ಒಬ್ಬ ಅರಿತುಕೊಳ್ಳುವವರೆಗೆ ಅವನು ಕರ್ಮಗಳನ್ನು ಮಾಡುತ್ತಲೇ ಹೋಗುವನು. ಮನೋವಾಕ್ಕಾಯಗಳ ಮೂಲಕ ಒಬ್ಬನು ಮಾಡುವ ಎಲ್ಲ ಬಗೆಯ ಕರ್ಮಗಳೂ ಅವನನ್ನು ಅವನ ಧ್ಯೇಯವಾದ ನಿತ್ಯಸುಖದಿಂದ ಬಹುದೂರ ದಬ್ಬಿಕೊಂಡು ಹೋಗುತ್ತವೆ.

ಪರಮಸತ್ ಸ್ವರೂಪದ ನಾವು ನಮ್ಮ ಪೂರ್ಣ ಸ್ವಾತಂತ್ರ್ಯದ ಮೂಲಕ ನಮ್ಮ ನೈಜ ಸ್ವರೂಪವನ್ನು ಆಭಾಸಿಕವಾಗಿ ಮರೆತಾಗ ನಮ್ಮ ಅಸದ್ವಸ್ತುವೆನ್ನಿಸುವ ಜೀವವು ತೋರುತ್ತದೆ. ಅದೀಗ ಒಂದು ದೇಹದೊಡನೆ ಏಕೀಭೂತವಾಗಿ ತಾನೊಬ್ಬ ಮನುಷ್ಯ ಎಂಬ ಅನುಭವವನ್ನು ಪಡೆಯುತ್ತದೆ. ಈಗ ಆ ಜೀವಿಗೆ ಪರಿಮಿತ ಅಸ್ತಿತ್ವ ಇರುತ್ತದೆ; ಅವನ ಜ್ಞಾನವೂ ಪರಿಮಿತ–ಹಾಗೇ ಸುಖವೂ ಪರಿಮಿತವಾಗಿರುತ್ತವೆ ಅಂದರೆ ಅವನು ತನ್ನ ಅಪರಿಮಿತ ಸತ್ತೆಯ ಸ್ವರೂಪವನ್ನು–ಬ್ರಹ್ಮಾತ್ಮ ಸ್ವರೂಪವನ್ನು – ಸ್ವದೇಹದ ಅಪರಿಮಿತ, ಅದ್ವೈತ, ಪೂರ್ಣಜ್ಞಾನವಾಗಿರುವ ಬ್ರಹ್ಮಾತ್ಮವನ್ನು ಮನಸ್ಸೆಂದೋ ಇಂದ್ರಿಯ ಜ್ಞಾನವೆಂದೋ (ಅದು ಇಂದ್ರಿಯಗಳ ಮೂಲಕ ಸ್ವೇತರ ಪದಾರ್ಥಗಳನ್ನು ಮಾತ್ರ ಅರಿತುಕೊಳ್ಳಬಲ್ಲುದು) ತಪ್ಪಾಗಿ ತಿಳಿದುಕೊಳ್ಳುತ್ತಾನೆ. ತನ್ನ ನಿತ್ಯ ಪೂರ್ಣ ಪರಮ ಆನಂದ ಸ್ವರೂಪದ ಬ್ರಹ್ಮಾತ್ಮವನ್ನು (ಆ ಬ್ರಹ್ಮಾತ್ಮವು ಇನ್ನಾವುದರಿಂದಲೂ ಹುಟ್ಟಿದ್ದಲ್ಲ – ಅನಂತರ ಅದು ಬಾಡಿ ಹೋಗುವಂಥದೂ ಅಲ್ಲ) ಈಗ ಕ್ಷುದ್ರವೂ ತಾತ್ಕಾಲಿಕವೂ ಆದ ಇಂದ್ರಿಯ ಸುಖಗಳೆಂದು ತಿಳಿದುಕೊಳ್ಳುತ್ತಾನೆ. ಇಂದ್ರಿಯ ಸುಖಗಳು ಬಾಹ್ಯ ವಸ್ತುಗಳ ಬಗೆಗಿನ ರಾಗ–ದ್ವೇಷಗಳಿಂದ

ಉಂಟಾಗುತ್ತವೆ. ಆ ವಸ್ತುಗಳನ್ನು ಜೀವಿಯು ಸದಾಕಾಲ ತನ್ನ ಸ್ವತ್ತುಗಳೆಂದು ಇಟ್ಟುಕೊಂಡಿರುವುದಿಲ್ಲ ; ಪುಣ್ಯಕರ್ಮಗಳಿಂದ ಮಾತ್ರ ಪಡೆದುಕೊಳ್ಳತಕ್ಕಂಥವುಗಳೆಂದು ಅವನು ಭಾವಿಸುತ್ತಾನೆ. ಈ ಪ್ರಕಾರ ಅವನು ತನ್ನನ್ನು ಅಲ್ಪ ಜೀವದ ಮಟ್ಟಕ್ಕೆ ಇಳಿಸಿಕೊಳ್ಳುತ್ತಾನೆ–ಅವನೊಬ್ಬ ಪರಿಮಿತ ಸಚ್ಚಿದಾನಂದನೂ ಅತೃಪ್ತನೂ ಆಗಿ ಇರುತ್ತಾನೆ ! ಹೀಗೆ ತನ್ನ ಅಪರಿಮಿತ ಸಚ್ಚಿದಾನಂದವನ್ನು ಜೀವ ಸ್ವರೂಪಕ್ಕೆ ಪರಿಮಿತವೆಂದು ಅವನು ಕಲ್ಪಿಸಿಕೊಂಡಾಗ, ಸಂಭವಿಸುವ ಕರ್ಮಗಳ ಪರಿಮಿತಿಯೊಳಗಿನದಾಗಿ ಮಾತ್ರ ಅವನ ಅಪರಿಮಿತ ಪೂರ್ಣ ಸ್ವಾತಂತ್ರ್ಯವು ಸ್ವಾತಂತ್ರ್ಯವಾಗಿ ಉಳಿದಿರುವಂತೆ ಇನ್ನೂ ತೋರುತ್ತದೆ.

ಒಮ್ಮೆ ತನ್ನಿಂದ ಭಿನ್ನವಾದ ಇತರ ಯಾವುದನ್ನೂ ನೋಡದಿದ್ದಾತನು ಈಗ ಇತರರನ್ನು ನೋಡುತ್ತಾನೆ–ಅಲ್ಲದೆ–ಅವರ ಬಗ್ಗೆ ಹೆದರುತ್ತಾನೆ ಅಥವಾ ಅವರತ್ತ ಆಕರ್ಷಿಸಲ್ಪಡುತ್ತಾನೆ. ಹೀಗೆ ಅವನೀಗ ಅನವಶ್ಯಕವಾಗಿ ಕಲ್ಪನೆಯ ಮೂಲಕ ಆತ್ಮವಂಚನೆ ಮಾಡಿಕೊಂಡು ಅಸಂಖ್ಯಾತ ದುಃಖಗಳಲ್ಲಿ ತನ್ನನ್ನು ಮುಳುಗಿಸಿಕೊಳ್ಳುತ್ತಾನೆ. ತನಗೆ ಬೇಕಾದ ವಸ್ತುಗಳು ಸಿಕ್ಕಿದಾಗ ಅವನು ಸುಖಿಯಾಗುತ್ತಾನೆ ಮತ್ತು ತನಗೆ ಬೇಕಾದ ವಸ್ತುಗಳು ಸಿಕ್ಕದಿದ್ದಾಗ ಹಾಗೂ ಬೇಡವಾದ ವಸ್ತುಗಳು (ಯಾ ವ್ಯಕ್ತಿಗಳು) ಉತ್ಕರ್ಷ ಹೊಂದುತ್ತಿದ್ದಾಗ ಅವನು ದುಃಖಿಯಾಗುತ್ತಾನೆ. ಬೇಕಾದ ವಸ್ತುಗಳ ಸಂಪಾದನೆಯೂ ಬೇಡವಾದ ವಸ್ತುಗಳ ವಿನಾಶವೂ ಕೇವಲ ತನ್ನ ಕರ್ಮ ಫಲವನ್ನೇ ಅವಲಂಬಿಸಿರುವುದರಿಂದ ಅವನು ವಿಚಾರ–ವಾಕ್–ಕಾರ್ಯಗಳೆಂಬಂಥ ಅಸಂಖ್ಯಾತ ಕರ್ಮಗಳಲ್ಲಿ ನಿರತನಾಗುತ್ತಾನೆ. ಆದರೆ– ಅಯ್ಯೋ! ಅವನ ಕಾಯವು ಅಲ್ಪಾಯುಷಿಯಾದುದರಿಂದ ತಾನು ಹೊಸದಾಗಿ ಹಿಡಿದ ಕರ್ಮಗಳೆಲ್ಲಾ ಮುಗಿಯುವುದರೊಳಗೆ ಮತ್ತು (ಮುಗಿದ ಕರ್ಮಗಳ) ಫಲಗಳನ್ನು ಅನುಭೋಗಿಸುವುದರೊಳಗೆ ಅವನ್ನವನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ತಾನು ಮುಗಿಸದೆ ಬಿಟ್ಟ ಕರ್ಮಗಳನ್ನು ಮುಂದುವರಿಸಿಕೊಂಡು ಹೋಗಲು, ಅವುಗಳ ಫಲಗಳನ್ನು ಅನುಭೋಗಿಸಲು ಮತ್ತು ತನ್ನ ಇಚ್ಛಾನುಸಾರ ಹೊಸ ಕರ್ಮಗಳನ್ನು ಆರಂಭಿಸಲು ತನಗೊಂದು ಶರೀರ ಬೇಕೆಂದು ಅವನು ಮತ್ತೆ ಬಯಸುತ್ತಾನೆ. ಈ ಹಂತದಲ್ಲಿ ಜೀವಿಯ ನಿಜ ಸ್ವರೂಪನಾದ ಮತ್ತು ಜೀವಿಯ ಪ್ರಕಾರ ಸರ್ವಶಕ್ತ, ಸರ್ವಜ್ಞ, ಸರ್ವದಯಾಮಯನಾದ ದೇವರು ಅವನ ಸಹಾಯಕ್ಕೆ ಬರುತ್ತಾನೆ.

ಅವನ ಕಲ್ಪನಾನುಸಾರವಾಗಿ ದೇವರು ಸರ್ವದಯಾಮಯನೂ ಸರ್ವಶಕ್ತನೂ ಆಗಿರುವುದರಿಂದ ಅವನ ಇಷ್ಟವೆಲ್ಲವನ್ನೂ ನೆರವೇರಿಸಿ ಕೊಡಬಲ್ಲವನೆನ್ನಿಸಿರುವುದರಿಂದ – ಆ ದೇವರು, ಆ ಮಾನವನು (ಮಾನವ್ಯ, ಅಂಡಜ, ತಿರ್ಯಗ್ ಜಾತೀಯ ಮುಂತಾದ) ಯಾವುದಾದರೊಂದು ದೇಹವನ್ನು–ತನ್ನ ಪೂರ್ವಕರ್ಮಗಳನ್ನು ಮುಂದುವರಿಸಲು ಮತ್ತು ತನ್ನ ಹಿಂದಿನ ಕರ್ಮಗಳ, ಸುಫಲ–ದುಷ್ಫಲಗಳನ್ನು ಅನುಭವಿಸಲು ಶಕ್ಯವಾಗುವಂತೆ – ಧರಿಸುವಂತೆ ಮಾಡುತ್ತಾನೆ. ತನ್ನ ಪೂರ್ವಕರ್ಮಾನುಸಾರವಾಗಿ, ಹೀಗೆ ಜೀವಿಯು ದೇಹಧಾರಣೆ ಮಾಡುತ್ತಾನಲ್ಲವೇ? ಆದರೆ ಅವನ ಪೂರ್ವಕರ್ಮಗಳ ಫಲಗಳು ಅಪರಿಮಿತವಾಗಿದ್ದರೂ ಅವನು ತನಗೀಗ ಇರುವ ಶರೀರದ ಮೂಲಕ ಅವುಗಳ ಅಲ್ಪಾಂಶವನ್ನು ಮಾತ್ರ ಅನುಭವಿಸಬಲ್ಲವನಾಗಿದ್ದಾನೆ. ಅವನ ಹಿಂದಿನ ಕರ್ಮಗಳ ಯಾವ ಭಾಗವನ್ನು ಭಗವಂತನು ಅವನು ಈ ಜನ್ಮದಲ್ಲಿ ಅನುಭವಿಸಬೇಕೆಂದು

ವಿಧಿಸಿದ್ದಾನೋ ಅದನ್ನು "ಪ್ರಾರಬ್ಧ" ಎಂದು ಕರೆಯಲಾಗುತ್ತದೆ (ಪ್ರಾರಬ್ಧವೆಂದರೆ ಫಲ ಕೊಡಲು ಪ್ರಾರಂಭಿಸಿದ ಕರ್ಮಗಳು ಎಂದರ್ಥ.)

ಅವನ ಹಿಂದಿನ ಕರ್ಮಗಳ ಉಳಿದ ಭಾಗವು ಹಾಗೇ ಕಣಜಗಟ್ಟಿರುತ್ತದೆ. ಅದನ್ನವನ್ನು ಮುಂದಿನ ಅನೇಕ ಜನ್ಮಗಳಲ್ಲಿ ಅನುಭವಿಸಬೇಕಾಗಿರುತ್ತದೆ. ಅದನ್ನು "ಸಂಚಿತ" ಎಂದು ಹೇಳಲಾಗುತ್ತದೆ (ಮುಂದಿನ ಜನ್ಮಗಳಲ್ಲಿ ಫಲ ಕೊಡಲೆಂದು ಬೈತಿಟ್ಟ ಕರ್ಮಗಳು ಎಂದರೆ ಸಂಚಿತ). ಈ ಜನ್ಮದಲ್ಲಿ ಜೀವಿಯು ಪ್ರಾರಬ್ಧಾಂತರ್ಗತವಾದ ಸುಖದುಃಖಗಳನ್ನು ಮಾತ್ರ ಅನುಭವಿಸಬಲ್ಲನು. ಪ್ರಾರಬ್ಧದಲ್ಲಿಯ ಸುಖ ದುಃಖ ರೂಪ ಫಲಗಳೆಲ್ಲಾ ವ್ಯಯಿಸಿ ಹೋದ ಮೇಲೆ ಶರೀರವು ಸಾಯುತ್ತದೆ ! ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅವನಿಗಾಗಿ ಶರೀರವೊಂದನ್ನು ರಚಿಸಿದ ಮತ್ತು ಶರೀರ ರೂಪದಲ್ಲಿ ಅವನಿಗಾಗಿ ಇರುವ ಒಂದೇ ಒಂದೆಂದರೆ ಪ್ರಾರಬ್ಧ! ಪ್ರಾರಬ್ಧಾಂತವೇ ದೇಹಾಂತ !

ಅಂಥ ಶರೀರವನ್ನುಳ್ಳ ಜೀವಿಯು (ಸಶರೀರ ಜೀವಾತ್ಮನು) ವಿಶಿಷ್ಟ ಸುಖ ದುಃಖ ಸಮೇತವಾದ ಪ್ರಾರಬ್ಧ ರೂಪದ ಶರೀರವನ್ನುಳ್ಳ ಜೀವಾತ್ಮನು ಆ ಕರ್ಮಗಳ ಕರ್ತ ಮತ್ತು ಅವುಗಳ (ಫಲಗಳ) ಭೋಕ್ತ ; ಕರ್ತೃತ್ವ-ಭೋಕ್ತೃತ್ವಗಳನ್ನುಳ್ಳ ಈ ಜೀವಿಗೆ ಹಿಂದೆ ಹೇಳಿದಂಥ ಸಂಕಲ್ಪಿಸುವ ಮತ್ತು ಮಾಡುವ ಮೂಲ ಸ್ವಾತಂತ್ರ್ಯವು ಸಹಜವಾಗಿಯೇ ಇರುವುದಲ್ಲವೇ? ಪ್ರಾರಬ್ಧ ಫಲವನ್ನು ಅನುಭವಿಸುತ್ತಿರುವಾಗಲೂ ಅವನಲ್ಲಿ ಕರ್ಮ ಸ್ವಾತಂತ್ರ್ಯ ಶಕ್ತಿಯು ಇರುತ್ತದೆ. ಹೀಗೆ ಅವನು ಪ್ರಾರಬ್ಧವನ್ನು ಅನುಭವಿಸುತ್ತಿರುವಾಗ- ಎಂದರೆ ಈಗ ಆತನು ತನ್ನ ಸಂಕಲ್ಪಿಸುವ ಮತ್ತು ಮಾಡುವ "ಸ್ವಾತಂತ್ರ್ಯವನ್ನು" ಹಿಂದಿನಂತೆಯೇ ಮಾಡಲು ಉಪಯೋಗಿಸುತ್ತಿದ್ದಾನೆ ; ಅದರಿಂದ ಎಷ್ಟೋ ಹೊಸ ಕರ್ಮಗಳನ್ನವನ್ನು ಮಾಡುತ್ತಾನೆ ; ಹಿಂದಿನ ಜನ್ಮದಲ್ಲಿ ಅರಕೆಯಾಗಿ ಬಿಟ್ಟ ಕರ್ಮಗಳನ್ನು ಮುಂಬರಿಸುತ್ತಿದ್ದಾನೆ. ಈ ರೀತಿಯಿಂದ ಅವನು ಅಸಂಖ್ಯಾತ ಕರ್ಮಗಳನ್ನು ಮಾಡುವುದರಲ್ಲಿ ಮಗ್ನನಾಗಿದ್ದಾನೆ-ತಾನು ಸಾಯುವವರೆಗೂ ಅವನು ಹೀಗೆ ಕರ್ಮ ಮಾಡುತ್ತಿರುತ್ತಾನೆ! ಹೀಗೆ ಅವನು ಹೊಸದಾಗಿ ಮಾಡಿದ ಈ ಜನ್ಮದ ಕರ್ಮಗಳು "ಆಗಮ್ಯ" (ಆಗಾಮಿ) ಎನ್ನಿಸುತ್ತವೆ (ಹೊಸದಾಗಿ ಮಾಡಿದ ಕರ್ಮಗಳಿಲ್ಲಿ ಆಗಮ್ಯಗಳು).

ಒಬ್ಬ ಮನುಷ್ಯನು ತನ್ನ ಇಡೀ ಜೀವನದಲ್ಲಿ ೧೦೦ ಚೀಲಗಳಷ್ಟು ಆಗಾಮಿಕರ್ಮಗಳನ್ನು ಮಾಡಿದನೆಂದಿಟ್ಟುಕೊಳ್ಳೋಣ. ಅವನ ದೇಹ ಸತ್ತ ಕೂಡಲೇ ಆ ೧೦೦ ಚೀಲಗಳು ಅವನ ಸಂಚಿತ ಕರ್ಮಗಳಿಗೆ ಜಮೆಯಾಗುತ್ತವೆ. ಅವುಗಳಲ್ಲಿ ಒಂದು ಚೀಲ ಕರ್ಮವನ್ನು (ಅದರಲ್ಲಿ ಹಲವು ವಿಧದ ಸುಖ-ದುಃಖಗಳಿರುತ್ತವೆ). ಮುಂದಿನ ಜನ್ಮದಲ್ಲಿ ಅವನು ಅನುಭವಿಸಲಿರುವ ಪ್ರಾರಬ್ಧ ಎಂದು ಎತ್ತಿ ಇಡಲಾಗುತ್ತದೆ. (ವಿಧಿಸಲಾಗುತ್ತದೆ). ನಾವು ಮೇಲೆ ಹೇಳಿದಂತೆ, ಮನುಷ್ಯನಿಗೆ ಅವನು ಪ್ರಾರಬ್ಧವನ್ನು ಅನುಸರಿಸುತ್ತಿರುವಾಗಲೇ ಅವನಿಗೆ "ಸಂಕಲ್ಪಿಸುವ ಮತ್ತು ಮಾಡುವ ಮೂಲಭೂತ ಸ್ವಾತಂತ್ರ್ಯ"ವಿದ್ದೇ ಇರುತ್ತವೆ ; ಅದರಿಂದ ಅವನು ಆಗಾಮಿ ಕರ್ಮಗಳನ್ನು ಪ್ರತಿಜನ್ಮದಲ್ಲೂ ಮಾಡುತ್ತಿರುತ್ತಾನೆ. ಮುಂದಿನ ಜನ್ಮದಲ್ಲಿ ಆ ಮನುಷ್ಯನು ಮತ್ತೆ ೧೦೦ ಚೀಲಗಳಷ್ಟು ಆಗಾಮಿಕರ್ಮಗಳನ್ನು ಸಂಗ್ರಹಿಸುತ್ತಾನೆ ಎಂದಿಟ್ಟುಕೊಳ್ಳೋಣ. ಆ ಜೀವನದ ಅಂತ್ಯದಲ್ಲಿ ಮೊದಲಿದ್ದ ೯೯ ಸಂಚಿತದ ಚೀಲಗಳಿಗೆ ಹೊಸದಾಗಿ ೧೦೦ ಚೀಲಗಳನ್ನು ಸೇರಿಸಲಾಗುತ್ತದೆ ; ಅದರಿಂದ ಒಟ್ಟು ೧೯೯

ಚೀಲಗಳಾಗುತ್ತವೆ. ಸಂಚಿತವು ಹೀಗೆ ಗುಣಿತ ಸಂಖ್ಯೆಯಲ್ಲಿ ಹೆಚ್ಚಾಗುತ್ತಿರುವಾಗ ಅವನು ತನ್ನ ಹುಟ್ಟು–ಸಾವುಗಳಿಗೆ ಎಲ್ಲಿ ಮತ್ತು ಯಾವಾಗ ಅಂತ್ಯವನ್ನು ಕಾಣಲು ಸಾಧ್ಯ? ಆದುದರಿಂದ ಕರ್ಮ ಮಗ್ನತೆಯಿಂದ ಮಾನವನ ಧ್ಯೇಯವಾದ ನಿತ್ಯಸುಖ ಸಿಕ್ಕಲಾರದು ಎಂಬುದನ್ನು ಅವನು ಅರಿತುಕೊಳ್ಳಬೇಕು. ಈ ಶರೀರದ ಜೀವಿತಾವಧಿಯಲ್ಲಿ ಅವನು ಆಗಾಮಿಕರ್ಮಗಳನ್ನು ಸಂಗ್ರಹಿಸುತ್ತಲೂ ಪ್ರಾರಬ್ಧ ಕರ್ಮಗಳನ್ನು ಕಳೆದುಕೊಳ್ಳುತ್ತಲೂ (ವ್ಯಯಿಸುತ್ತಲೂ) ಇರುತ್ತಾನೆ. ಅವನ ಜೀವನದಲ್ಲಿ ಉದ್ದಕ್ಕೂ ಆಗಾಮಿ–ಪ್ರಾರಬ್ಧಗಳು ನಡೆಯುತ್ತಲೇ ಇರುವುದರಿಂದ ಮಾನವನ ಪರಿಮಿತ ಬುದ್ಧಿಗೆ ಯಾವ ಕರ್ಮ ಆಗಾಮಿ, ಯಾವ ಕರ್ಮ ಪ್ರಾರಬ್ಧ ಎಂಬುದನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಅದು ಸರ್ವಜ್ಞನಾದ ದೇವರಿಗೆ ಮಾತ್ರ ಗೊತ್ತು!

ಕೆಲವು ವೇಳೆಗಳಲ್ಲಿ ಪ್ರಾರಬ್ಧಾನುಸಾರವಾಗಿ ಒಬ್ಬನ ಮನಸ್ಸು ಯಾವುದಾದರೊಂದು ದುಃಖದ ಯಾ ಸುಖದ ಅನುಭವವನ್ನು ಪಡೆಯುವಂತಹ ಒಂದು ವಿಶಿಷ್ಟ ಕರ್ಮದಲ್ಲಿ ಮಗ್ನವಾಗುವಂತೆ ಒತ್ತಾಯಿಸಲ್ಪಡಬಹುದು. ಉದಾಹರಣೆ ಇಲ್ಲಿದೆ :

ಹಿಂದಿನ ಒಂದು ಜನ್ಮದಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನನ್ನು ಹೊಡೆದಿದ್ದನು ಎಂದುಕೊಳ್ಳೋಣ. ಈ ಜನ್ಮದಲ್ಲಿ ಅವನು ತಾನು ಹೊಡೆದುದರ ಫಲವನ್ನು ಅನುಭವಿಸಬೇಕಾಗಿದೆ. ಆದುದರಿಂದ ಒಬ್ಬನೇ ತಿರುಗಾಡಲು ಹೋಗಬೇಕೆಂಬ ಒಲವು ಅವನಿಗೀಗ ಉಂಟಾಗುತ್ತದೆ. ಆದುದರಿಂದ ಆ ಪ್ರಾರಬ್ಧವನ್ನು ಅನುಭವಿಸುವುದನ್ನು ತಪ್ಪಿಸಲು ಅವನ ಸ್ನೇಹಿತರಲ್ಲಿ ಅಥವಾ ಬಂಧುಗಳಲ್ಲಿ ಯಾರೂ ಇರುವುದಿಲ್ಲ. ಆ ಮನುಷ್ಯನು ಒಬ್ಬನೇ ತಿರುಗಾಡಲು ಹೋದುದರಿಂದ ದಾರಿಯಲ್ಲಿ ಕೆಲ ಹಗೆಗಳೋ ಕಳ್ಳರೋ ಅವನನ್ನು ಹೊಡೆಯುತ್ತಾರೆ. ತನಗೆ ಒಬ್ಬನೇ ತಿರುಗಾಡಲು ಒಲವು ಉಂಟಾದದ್ದು ಆಗಾಮಿಯಿಂದ ಎಂದು ಅವನಿಗೆನ್ನಿಸಬಹುದು : “ಅಯ್ಯೋ, ನಾನು ಮಾಡಿದ್ದು ತಪ್ಪು! ನಾನು ಒಬ್ಬನೇ ಹೊರ ಹೊರಡಬಾರದಾಗಿತ್ತು. ನಾನೊಬ್ಬನೇ ಅಲ್ಲಿಗೆ ಹೋಗದೆ ಇದ್ದಿದ್ದರೆ ಇದು ಘಟಿಸುತ್ತಲೇ ಇರಲಿಲ್ಲ.” ಅಷ್ಟೇ ಅಲ್ಲ – ತನ್ನನ್ನು ಹೊಡೆದವರೂ ಒಂದು ಆಗಾಮಿ ಕರ್ಮವನ್ನು ಮಾಡಿರಬೇಕು – ಎಂದೂ ಅವನು ತೀರ್ಮಾನಿಸಬಹುದು. ಆದರೆ ಎರಡು ನಿಗಮನಗಳೂ ತಪ್ಪು. ಆ ಎಲ್ಲ ಕರ್ಮಗಳೂ ಪ್ರಾರಬ್ಧಗಳೇ! ಮಾನವಮನ ಈ ಸತ್ಯವನ್ನು ತಿಳಿಯಬಲ್ಲುದೇ? ಖಂಡಿತವಾಗಿಯೂ ತಿಳಿಯಲಾರದು. ಆದುದರಿಂದ ಒಬ್ಬ ಅಜ್ಞಾನಿಯು ತನ್ನ ಬಾಳಿನಲ್ಲಿ ಸಂಭವಿಸುತ್ತ ಬಂದ ಎಲ್ಲ ಆಗುಹೋಗುಗಳೂ ತನ್ನ ಹೊಸ ಯತ್ನಗಳಿಂದಲೇ ಸಂಭವಿಸಿದಂಥವುಗಳು ಮತ್ತು ತಾನು ಅನುಭವಿಸಿದ ಫಲಗಳೆಲ್ಲವೂ ತನ್ನ ಹೊಸ ಪ್ರಯತ್ನಗಳೇ ಎಂದು ನಂಬುತ್ತಾನೆ. ಆದರೆ ಎಡೆಬಿಡದೆ ಯತ್ನಿಸಿದರೂ ತಾನು ವೈಫಲ್ಯವನ್ನು ಎದುರಿಸಬೇಕಾಯ್ತು ಮತ್ತು ಉದ್ದಿಷ್ಟ ಗುರಿಯು ನಿರೀಕ್ಷೆಗೆ ವಿರುದ್ಧವಾಗಿ ಹೋಗಬೇಕಾಯ್ತು–ಎನ್ನಿಸುವ ಸಂದರ್ಭಗಳು ಅವನಿಗೆ ಉಂಟಾಗುತ್ತವೆ. ಇನ್ನೂ ಎಷ್ಟೋ ಸಂದರ್ಭಗಳಲ್ಲಿ ಅನಿರೀಕ್ಷಿತ ಸುಖ ದುಃಖಗಳು ತಮ್ಮಿಂದ ತಾವೇ ಅವನ ಅನುಭವಕ್ಕೆ ಬರುವದೂ ಉಂಟು.

ಹೇಗೇ ಆಗಲಿ, ಯಾರಾದರೂ ಪ್ರಾರಬ್ಧವನ್ನು ಅನುಭವಿಸಲೇಬೇಕು. ಪ್ರಾರಬ್ಧ ಯಾವುದು? ಆಗಾಮಿ ಯಾವುದು? ಮನುಷ್ಯನು ತನ್ನ ಜೀವನದಲ್ಲಿ ಮಾಡಿದ ಕೆಲಸಗಳಲ್ಲಿ

ಈಯೆರಡನ್ನು ಪರಸ್ಪರ ವಿಂಗಡಿಸಲಾರನು ; ಅವನ ಮನಸ್ಸಿಗೆ ಈ ಶಕ್ತಿ ಇಲ್ಲ. ದೇವರೊಬ್ಬನೇ ಈ ವ್ಯತ್ಯಾಸವನ್ನು ತಿಳಿದುಕೊಳ್ಳಬಲ್ಲ ಮತ್ತು ಆ ಪ್ರಕಾರ ಅವುಗಳ ಫಲ ಮನುಷ್ಯನಿಗೆ ದೊರಕುವಂತೆ ವಿಧಿಸಬಲ್ಲ ಅವೆರಡರಲ್ಲಿಯ ಭೇದವನ್ನು ಗುರುತಿಸಲು ಯಾರೂ ಹೋಗದಿರಲಿ – ಎಂಬ ಮಾತನ್ನು ಹಿಂದೆ ಹೇಳಲಾಯ್ತು. ಕೆಲವರು ಕೇಳಿಯಾರು– "ಅದು ಹಾಗಿರುವುದೇ ಆದರೆ ನಮ್ಮ ದಿನನಿತ್ಯದ ಜೀವನದಲ್ಲಿ ಪ್ರಾರಬ್ಧ, ಆಗಾಮಿಗಳಲ್ಲಿಯ ವ್ಯತ್ಯಾಸವನ್ನು ತಿಳಿದುಕೊಳ್ಳಲು ಯತ್ನಿಸುವುದು ವ್ಯರ್ಥವೇ?" ಎಂದು. ಅಲ್ಲ ; ಪಾಪ–ಪುಣ್ಯಗಳ ವಿವೇಕದಿಂದ ನಡೆದುಕೊಳ್ಳಬೇಕೆನ್ನುವ ಮುಮುಕ್ಷುಗಳು ಈ ಕೆಳಗೆ ಕೊಟ್ಟ ಕರ್ಮ ವರ್ಗೀಕರಣ ಪ್ರಕಾರ ನಡೆದುಕೊಳ್ಳಲಿ ಅದರಿಂದ ಅವರಲ್ಲಿಯ ಒಳಿತು ಹೆಚ್ಚಾಗಿ, ಕೆಡುಕು ಕಡಿಮೆಯಾಗಿ ಅವರ ಮನಸ್ಸು ಶುದ್ಧವಾಗಲು ನೆರವು ದೊರಕುವಂತಾಗುತ್ತದೆ.

೧. ಒಬ್ಬನಿಗೆ ಅನ್ಯರಿಗೆ ಕೇಡು ಮಾಡಬೇಕೆಂದೆನ್ನಿಸಿದಾಗ "ಇದು ಆಗಾಮಿಯತ್ತಣ ನನ್ನ ಯತ್ನ ; ನಾನಿದನ್ನು ನಿಲ್ಲಿಸುತ್ತೇನೆ" ಎಂದು ಆಲೋಚಿಸಿ ತನ್ನನ್ನು ಅವನು ರಕ್ಷಿಸಿಕೊಳ್ಳಲಿ.

೨. ಇತರರು ತನಗೆ ಹಾನಿಯನ್ನುಂಟು ಮಾಡುವರೆಂದು ಕಂಡುಬಂದಾಗಲೆಲ್ಲಾ ಮನುಷ್ಯನು, "ಇದು ನನ್ನ ಪ್ರಾರಬ್ಧ ಕರ್ಮದಿಂದ ಸಂಭವಿಸಿದೆ. ಅವರಿಗೆ ಹಿಂದೆ ನಾನು ಹಾನಿಯನ್ನುಂಟು ಮಾಡಿರಬೇಕು", ಎಂದು ಆಲೋಚಿಸಿ ಅವರನ್ನು ದ್ವೇಷಿಸದೆ ಆ ಅನುಭವವದ ಬಗೆಗೆ ಉದಾಸೀನನಾಗಿರಬೇಕು.

೩. ಇನ್ನೊಬ್ಬನಿಗೆ ಒಬ್ಬ ಒಳಿತನ್ನು ಮಾಡಿದಾಗ, "ನಾನಿದನ್ನು ಅವರಿಂದ ಹಿಂದಿನ ಜನ್ಮದಲ್ಲಿ ಪಡೆದಿರಬೇಕು. ಇದು ಪ್ರಾರಬ್ಧದ ವರ್ಗದಲ್ಲಿ ಬರುವುದರಿಂದ ನಾನು ಅವರಿಂದ ಇದಕ್ಕೆ ಪ್ರತಿಯಾಗಿ ಏನನ್ನೂ ಬಯಸಬಾರದು. ಪ್ರತ್ಯುಪಕಾರವನ್ನು ಬಯಸುವದು ತಪ್ಪು" – ಎಂದು ಆಲೋಚಿಸಬೇಕು.

೪. ತನಗೆ ಇತರರು ಒಳಿತನ್ನು ಮಾಡಿದಾಗ, "ಅವರಿಂದ ಈಗ ನಾನು ಪಡೆಯುತ್ತಿರುವ ಸಹಾಯವು ಆಗಾಮಿವರ್ಗಕ್ಕೆ ಸೇರುತ್ತದೆ. ಈ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ನಾನು ಅವರಿಗೆ ಹಿಂದಿರುಗಿಸಬೇಕು" ಎಂದು ಮನುಷ್ಯನು ಆಲೋಚಿಸಬೇಕು.

ಸಂಕ್ಷೇಪ

೧. ಪರಹಿಂಸೆಯು ಆಗಾಮಿಕರ್ಮ

೨. ಪರದತ್ತ ಹಿಂಸೆಯು ಪ್ರಾರಬ್ಧ ಕರ್ಮ

೩. ಪರೋಪಕಾರವು ಪ್ರಾರಬ್ಧ ಕರ್ಮ

೪. ಪರಕೃತೋಪಕಾರವು ಆಗಾಮಿ ಕರ್ಮ

ಮಾಡಿದ ಕರ್ಮಗಳನ್ನು ಮೇಲೆ ಹೇಳಿದಂತೆ ವರ್ಗೀಕರಿಸಿಕೊಂಡರೆ ಮನುಷ್ಯನಿಗೆ ಅದು ಅವನಲ್ಲಿ ಕರ್ಮಯೋಗದ ಮನಃ ಪ್ರಣಾಳಿಯನ್ನು ರೂಪಿಸುತ್ತದೆ ; ಅದು ಅವನ ಮನಸ್ಸು ಶುದ್ಧೀಕರಿಸಿ ಪರಿಪಕ್ವಗೊಳಿಸುತ್ತದೆ.

ಆದರೆ ಸತ್ಯವು ನಿಜವಾಗಿ ಹಾಗಿರಲಾರದು. ಸರಿಯಾದ ವರ್ಗೀಕರಣವು ಬೇರೆಯೇ ಆಗಿರಬಹುದು. ಅಂದರೆ, ನಮ್ಮ ವರ್ಗೀಕರಣದ ಪ್ರಕಾರ ಪರಹಿಂಸೆಯು

ಆಗಾಮಿಯಾಗಿರಬಹುದು. ಆದರದು, ಹಿಂದೆ ಇತರರು ಮಾಡಿದ್ದಕ್ಕೆ ಪ್ರತೀಕಾರ ಸ್ವರೂಪದ್ದೂ ಆಗಿರಬಹುದು. ಹೀಗೆ ಅದು ಒಬ್ಬನ ಪ್ರಾರಬ್ಧದ ಕಕ್ಷೆಯಲ್ಲಿ ಬರುತ್ತದೆ; ಆ ವಿಧವಾಗಿ ಅವನು ಮಾಡುವುದು ಅವನ ಪ್ರಾರಬ್ಧದ ಪ್ರಕಾರ ಆಗಿರಬಹುದು. ಅಂದರೆ ಅದು ಅವನ ಆಗಾಮಿಪುಣ್ಯ ಕರ್ಮವಾಗಿರಬಹುದು. ಪ್ರಾರಬ್ಧದ ಸಾಲ ತೀರಿಸುವ ಕರ್ಮವಾಗಿರದೆ ಇರಬಹುದು. ಅಲ್ಲವೇ? ಅದೇ ರೀತಿಯಲ್ಲಿ ಇತರ ವರ್ಗೀಕರಣದ ಎರಡು ಅಂಶಗಳನ್ನೂ ವಿಸ್ತರಿಸಬಹುದು. [ಪುಷ್ಟವಾದ ಅಹಂಕಾರವು ವಿಸ್ತಾರ ಹೊಂದಿ ಕೃತ್ರಿಮವಾಗಿ ಮನುಷ್ಯನ ಮನಸ್ಸನ್ನು ಮಲಿನಗೊಳಿಸಿ ಅದಕ್ಕೆ ಪಕ್ವತೆ ಬಾರದಂತೆ ಮಾಡುವ ಸತ್ಯವನ್ನು ತೋರಿಸಬೇಕೇ?] ಆದ್ದರಿಂದಲೇ, ದೇವರ ಯೋಜನೆಯಲ್ಲಿ ಸರಿಯಾದ ವರ್ಗೀಕರಣವು ಮಾನವ್ಯ ಮನಸ್ಸಿಗೆ ಕಾಣದಂತೆ ಮುಸುಕನ್ನು ಎಳೆಯಲಾಗಿದೆ! ನಿಜವಾಗಿ ಇದು ಮಾನವ್ಯ ಮನದ ಪ್ರಗತಿಗೆ ನೆರವಾಗಲು ಕೊಟ್ಟಂಥ ಒಂದು ಹರಕೆ. ಈ ಕಾರಣಕ್ಕಾಗಿಯೇ ಮುಮುಕ್ಷುಗಳಿಗೆ ತಮ್ಮ ಮನವನ್ನು ಶುದ್ಧೀಕರಿಸಿಕೊಂಡು ಪಕ್ವಗೊಳಿಸಿಕೊಳ್ಳಲೆಂದು ನೇರವಾಗಿ ಮೇಲೆ ಹೇಳಿದಂತೆ ಕೊಟ್ಟ ವರ್ಗೀಕರಣವು ಸತ್ಯಕ್ಕೆ ಹೊಂದಿಕೆಯಾಗದಿರಬಹುದು.

ಏಕೆಂದರೆ ಸಂಕಲ್ಪಿಸಿ ಕರ್ಮ ಮಾಡಲು ಇದ್ದ ಮೂಲಭೂತ ಸ್ವಾತಂತ್ರ್ಯದ ಮೂಲಕ ದೇಹವಿರುವಾಗ ಮನುಷ್ಯನು ಎರಡು ವಿಧದ ತಪ್ಪುಗಳನ್ನು ಮಾಡುತ್ತಾನೆ. (ಅಂದರೆ ಜೀವಿಸಿರುವ ಅವಧಿಯಲ್ಲಿ) – ದೇಹವು ಸಂಚಿತದಿಂದ ತೆಗೆದುಕೊಟ್ಟ ಪ್ರಾರಬ್ಧ. ಪ್ರಾರಬ್ಧದಿಂದ ಬರುವ ದುಃಖವು ಅಪರಿಹಾರ್ಯವೂ ಅಪರಿವರ್ತನೀಯವೂ ಆಗಿದ್ದರೂ ಅದನ್ನು ಕಡಿಮೆ ಮಾಡಲು ಅಥವಾ ನಿಲ್ಲಿಸಲು ಪ್ರಯತ್ನಿಸುವುದು ಮೊದಲನೆಯ ತಪ್ಪು. ಅದೇ ಮೇರೆಗೆ ಪ್ರಾರಬ್ಧದಿಂದ ಬರುವ ಸುಖವನ್ನು ಮನುಷ್ಯನು ಹೆಚ್ಚಿಸಲು ಅಥವಾ ತ್ವರಿತಗೊಳಿಸಲು ಪ್ರಯತ್ನಿಸುವುದು ಎರಡನೆಯ ತಪ್ಪು. ಆದುದರಿಂದ ತನ್ನ ಸ್ವಾತಂತ್ರ್ಯವನ್ನು ಆ ರೀತಿಯಿಂದ ಬಳಸುವುದನ್ನು ಬಿಟ್ಟು ಅದನ್ನು ಒಡೆಯನ ಸಂಕಲ್ಪಕ್ಕೆ ಬಿಟ್ಟು ಬಿಡುವುದು ಅತ್ಯುತ್ತಮ ಮಾರ್ಗ. ಏಕೆಂದರೆ ಇದು ಮನುಷ್ಯನ "ಸಂಕಲ್ಪಿಸಿ ಮಾಡುವ ಮೂಲಭೂತ ಸ್ವಾತಂತ್ರ್ಯದ" ಕಕ್ಷೆಯಲ್ಲಿ ಬರುವುದಿಲ್ಲ.

"ಒಡೆಯನ ಸಂಕಲ್ಪಕ್ಕೆ ಬಿಟ್ಟುಬಿಡುವುದು" ಎಂದಿಲ್ಲಿ ಹೇಳಿರುವುದರ ಅರ್ಥವೇನೆಂದರೆ ತನ್ನ ಪ್ರಾರಬ್ಧಕ್ಕೆ ಬಿಟ್ಟು ಬಿಡುವುದೆಂದೇ ಆಗಿದೆ. ಹೇಗೆ? ತನ್ನ ವರ್ತಮಾನ ಪ್ರಾರಬ್ಧವನ್ನು ರಚಿಸಿದ್ದು ಮನುಷ್ಯನ ಹಿಂದಿನ ಸಂಕಲ್ಪವೇ ಅಲ್ಲವೇ? ಅದು ದೇವರು ಪೂರೈಸುತ್ತಿರುವಂಥ ಭೂತಕಾಲೀನ ಮಾನವೇಚ್ಛೆ ಯಾ ಮಾನವ ಸಂಕಲ್ಪವೇ ಆಗಿದೆ. ದೇವರಿಗೆ ಕೆಲ ರಾಗದ್ವೇಷಗಳಿವೆ ಎಂಬುದು ಇದರ ಅರ್ಥವಲ್ಲ. ದೇವರಿಗೆ ಒಬ್ಬ ಮನುಷ್ಯನಿಗೆ ಒಳಿತನ್ನು ಮಾಡಬೇಕೆಂಬುದರ ಬಗ್ಗೆ ಅನುಕೂಲ ಅಥವಾ ಪ್ರತಿಕೂಲ ಸಂಕಲ್ಪವಿದೆ ಎಂದು ಅರ್ಥವಾಗದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಮನುಷ್ಯ ವ್ಯಕ್ತಿಯು ತನ್ನ ಬಯಕೆ ಅಥವಾ ಸಂಕಲ್ಪಗಳ ಪೂರೈಕೆಯನ್ನು ದೇವರಿಗೇ ಬಿಟ್ಟು ಬಿಡಬೇಕೆಂಬುದೇ ಅದರ ಅರ್ಥ. ಒಬ್ಬನು ಹಾಗೆ ಮಾಡಿದರೆ–ದೇವರು ಸರ್ವಜ್ಞನಾಗಿರುವುದರಿಂದ ಯಾವಾಗ ಏನನ್ನು ಕೊಡುವುದು ಉತ್ತಮ ಎಂಬುದನ್ನು ಅರಿತಿರುವುದರಿಂದ ಯಾವ ಪ್ರಾರಬ್ಧವನ್ನಾದರೂ ಯಾವಾಗ ಮನುಷ್ಯ ಅನುಭವಿಸುವಂತೆ ಮಾಡಿದರೆ ಅವನಿಗೆ ಮೂಲಸ್ಥಿತಿಯಾದ ಬ್ರಹ್ಮಾತ್ಮಸ್ಥಿತಿಯನ್ನುಮರಳಿ ಪಡೆಯಲು ನೆರವಾದೀತು ಎಂಬುದನ್ನರಿತು ಆ ಪ್ರಕಾರ ದೇವರು ಪ್ರಾರಬ್ಧವು ಫಲಿಸುವಂತೆ ಮಾಡುವನು.

ಒಬ್ಬನು ಹಾಗೆ ಮಾಡದಿರುವಾಗ ಏನಾಗುತ್ತದೆ? ಮನುಷ್ಯನಿಗೆ ಇಷ್ಟವಿರಲಿ–ಇಲ್ಲದಿರಲಿ, ಅವನು ಪ್ರಾರಬ್ಧವನ್ನು ಅನುಭವಿಸಲೇಬೇಕು. ಆಗಲೂ ವಿಧಿಸಲಾದ ಪ್ರಾರಬ್ಧವು ಫಲಿಸಿಯೇ ತೀರುತ್ತದೆ. ಆದರೆ ಮಾನವನು ಪ್ರಾರಬ್ಧವನ್ನು ಅನುಭವಿಸಲು ಇಷ್ಟಪಡದಿರುವುದರಿಂದ ಅವನು ಮಾನಸಿಕ ಸಮತೋಲವನ್ನೂ ವಿವೇಕವನ್ನೂ ಕಳೆದುಕೊಳ್ಳುತ್ತಾನೆ. ಯಾವ ಪ್ರಾರಬ್ಧದ ಸುಖದುಃಖಗಳನ್ನು ಅನುಭವಿಸುವ ಒತ್ತಾಯ ಬಂದಾಗ, ಅವನು ಅದರ ವಿರುದ್ಧವಾಗಿ ಹೋರಾಡುತ್ತಾನೆ ಮತ್ತು ಆ ಮೂಲಕ ಆಗಾಮಿಯನ್ನು ನಿರ್ಮಿಸುತ್ತಾನೆ. ಆದರೆ ತದ್ವಿರುದ್ಧವಾಗಿ – ದೇವರ ಬಗ್ಗೆ ವ್ಯಕ್ತಿಗೆ ಅಷ್ಟೊಂದು ಭಕ್ತಿ ಇರುವಾಗ ಅವನು ಎಲ್ಲವನ್ನೂ ದೈವೇಚ್ಛೆ ಮತ್ತು ದೈವಪ್ರಸಾದ ಎಂದು ಗ್ರಹಿಸುವುದರಿಂದ ಮನಸ್ಸನ್ನು ತೂಕ ತಪ್ಪದಂತೆ ಇಟ್ಟುಕೊಂಡು ಪ್ರಾರಬ್ಧವನ್ನು ಸಂತೋಷದಿಂದ ಸಹಿಸಲು ಶಕ್ತನಾಗುತ್ತಾನೆ. ಈ ಪ್ರಕರಣದಲ್ಲಿ ಪ್ರಾರಬ್ಧವನ್ನು ಅನುಭವಿಸುವುದರ ಫಲವು ದೇವರ ನಿರೀಕ್ಷೆಯಂತೆ ಆಗುತ್ತದೆ ; ಅಂದರೆ ಧ್ಯೇಯವನ್ನು ಶೀಘ್ರವಾಗಿ ಪಡೆಯಲು ತಕ್ಕ ಹಾಗೆ ಅವನ ಮನಸ್ಸನ್ನು ಪಕ್ವಗೊಳಿಸಲಾಗುತ್ತದೆ (೧) ದೇವರ ಇಚ್ಛೆಗೆ ಒಳಪಡುವ ಅಥವಾ ಒಳಪಡದಿರುವ ಮೂಲಭೂತ ಸ್ವಾತಂತ್ರ್ಯವು ನಮಗಿರುತ್ತದೆ ; (೨) ಅವನ ಇಚ್ಛೆಗೆ ಒಳಪಟ್ಟು ನಡೆದುಕೊಂಡರೆ ನಮ್ಮ ಪ್ರಗತಿಯು ಸುಧಾರಿಸುವುದಲ್ಲದೆ ತ್ವರಿತ ಗತಿಯಿಂದ ಸಾಗುತ್ತದೆ ; (೩) ಅವನ ಇಚ್ಛೆಗೆ ಒಳಪಡದೆ ಇರುವುದರಿಂದ ನಮ್ಮ ಪ್ರಗತಿಯು ಅಲ್ಪಗೊಳಿಸಲ್ಪಟ್ಟು ವಿಲಂಬಿತವಾಗಿ ಮುಂದಿನ ಜನ್ಮಗಳಲ್ಲಿ ಅಂಥ ಪ್ರಾರಬ್ಧವನ್ನು ಅನುಭವಿಸಿ ಪ್ರಗತಿ ಹೊಂದಬೇಕಾಗುತ್ತದೆ. ನಾವು ದೈವೇಚ್ಛೆಗೆ ಮಣಿದಿದ್ದರೆ ಈ ಜನ್ಮದಲ್ಲಿಯೇ ಆ ಪ್ರಾರಬ್ಧಾನುಭವ ಮುಗಿದು ಹೋಗುತ್ತಿತ್ತು.

[ಪ್ರಾರಬ್ಧವನ್ನು ದೇವರು ಕೂಡಾ ಬದಲಾಯಿಸಲಾರ ಅಥವಾ ತಡೆ ಹಿಡಿಯಲಾರ ಅಲ್ಲವೇ? ಎಂದು ಕೆಲವರು ಕೇಳಿಯಾರು.] ದೇವರು ಪ್ರಾರಬ್ಧದ ನಿಯಾಮಕನಾದುದರಿಂದ ಪ್ರಾರಬ್ಧದ ಅನುಭವವನ್ನು ಅವನು ಬದಲಾಯಿಸಬಲ್ಲ ಅಥವಾ ತಡೆಹಿಡಿಯಬಲ್ಲ. ಯಾವಾಗ? ಒಬ್ಬನು, "ಹೇ ಪ್ರಭೋ, ದುಃಖವನ್ನು ಅನುಭವಿಸಲು ನನಗೆ ಶಕ್ತಿ ಇಲ್ಲ ಎಂಬುದನ್ನು ನೀನು ಬಲ್ಲೆ ; ಅದನ್ನು ಸಹಿಸಿಕೊಳ್ಳಲು ಬೇಕಾದ ಶಕ್ತಿಯನ್ನು ನೀನು ನನಗೆ ದಯಪಾಲಿಸು" ಎಂದು ಅವನಿಗೆ ಶರಣಾಗತನಾಗಿ (ಅವನಿಗೆ ಸರ್ವವನ್ನೂ ಸಮರ್ಪಿಸಿ) ಬೇಡಿಕೊಂಡಾಗ, ಆಗ ಮಾತ್ರ ದೇವರನ್ನು ತಡೆಯಲು ನಮ್ಮ ಮೂಲಭೂತ ಸ್ವಾತಂತ್ರ್ಯವನ್ನು ಬಳಸಿಕೊಳ್ಳದಿದ್ದಾಗ ಆತನು ಬೇಕಾದ್ದನ್ನು ಮಾಡಿಯಾನು : ಪ್ರಾರಬ್ಧವನ್ನು ಆಗಗೊಡಬಹುದು, ಬದಲಾಯಿಸಬಹುದು ಅಥವಾ ನಿಲ್ಲಿಸಬಹುದು. ಮುನಿಮಾನಿನಿಯಾಗಿದ್ದ ಅವ್ವಯಾರ್ ಘೋಷಿಸಿದ್ದು ಇದೇ ಪ್ರಕಾರ : "ಶಿವನಿಗೆ ಆತ್ಮ ಸಮರ್ಪಣ ಮಾಡಿಕೊಂಡವರಿಗೆ ಅಪಾಯ ಉಂಟಾಗುವ ಸಂಭವ ಇಲ್ಲ. [ಇದೇ ಮುಕ್ತ ಸಂಕಲ್ಪ]. ಶಿವ ಸಮರ್ಪಣ ಮಾಡದಿದ್ದರೆ ಪ್ರತಿಯೊಂದೂ ವಿಧಿ (ಅದೃಷ್ಟ) ವಶವಾಗುತ್ತದೆ." ದೇವರು ಪ್ರಾರಬ್ಧವನ್ನು ಪರಿವರ್ತಿಸಲು ಅಥವಾ ತಡೆಯಲು ಬಲ್ಲನಲ್ಲದೆ ಆಗಾಮಿಯನ್ನು ಪ್ರಾರಬ್ಧದಲ್ಲಿ ಸೇರಿಸಿ ಕೂಡಲೇ ಅದು ಫಲ ಕೊಡುವಂತೆ ಮಾಡಬಲ್ಲನು. ಮೊದಲಿನದಕ್ಕೆ ಮಾರ್ಕಂಡೇಯನ ಕಥೆಯೂ ಎರಡನೆಯದಕ್ಕೆ ಶಂಕರಾಚಾರ್ಯರು ಮತ್ತು ಬಡಮಹಿಳೆ ಎಂಬ ಕಥೆಯೂ ಉದಾಹರಣೆಗಳು. ಆ ಎರಡೂ ಕಥೆಗಳ ಸಂಕ್ಷಿಪ್ತ ರೂಪಗಳನ್ನು ಈ ಕೆಳಗೆ ಕೊಡಲಾಗಿದೆ.

೧. ಪ್ರಾರಬ್ಧದ ಪ್ರಕಾರ ಮಾರ್ಕಂಡೇಯನ ಆಯುಷ್ಯವು ಕೇವಲ ೧೬ವರ್ಷಗಳಾಗಿದ್ದರೂ ಒಡೆಯನಾದ ಶಿವನಿಗೆ ಆತ್ಮ ಸಮರ್ಪಣ ಮಾಡಿಕೊಂಡು ಅವನು ತನ್ನ ಜೀವವನ್ನು ಉಳಿಸಿಕೊಂಡನು.

೨. ಆದಿ ಶಂಕರರು ಆಹಾರ ಭಿಕ್ಷೆ ಮಾಡುತ್ತಿದ್ದಾಗ ಒಬ್ಬ ಬಡ ಮಹಿಳೆಯು ಒಂದು ಚಿಕ್ಕ ಹಣ್ಣನ್ನು ತನ್ನ ಗುಡಿಸಿಲಿನ ಕಿಟಕಿಯ ಮೂಲಕ ಕೊಟ್ಟಳು! ಬಟ್ಟೆ ಇಲ್ಲದುದರಿಂದ ಆಕೆ ಬಾಗಿಲು ತೆರೆದು ಫಲ ಭಿಕ್ಷೆ ನೀಡಲಾರದಾದಳೆಂಬುದು ಶ್ರೀ ಶಂಕರರಿಗೆ ಗೊತ್ತಾಯಿತು. ಅವರ ಹೃದಯದಲ್ಲಿ ಅವಳ ಬಗ್ಗೆ ಮಹತ್ತಾದ ಕರುಣೆಯುಂಟಾಯಿತು.

ಅವರು ಮಹಾಲಕ್ಷ್ಮೀದೇವಿಯ[೩೦] ಬಗೆಗೆ ಕನಕಧಾರಾಸ್ತೋತ್ರವನ್ನು ರಚಿಸಿ ಹೇಳಿದರು. ದೇವಿ ಅವರಿಗೆ ಪ್ರತ್ಯಕ್ಷಳಾದಾಗ ಆ ಬಡವಿಗೆ ಐಶ್ವರ್ಯವನ್ನು ಕೊಡಲು ಅವರು ಹೇಳಿದರು. ಆಗ ಲಕ್ಷ್ಮೀದೇವಿಯು ಪ್ರಭುಶಂಕರರ ಆಜ್ಞೆಯಂತೆ ಐಶ್ವರ್ಯವನ್ನು ಕೊಡಲು ಅವಳ ಪ್ರಾರಬ್ಧದಲ್ಲಿ ಅವಕಾಶವಿಲ್ಲ ಎಂಬುದನ್ನು ಅವರಿಗೆ ತಿಳಿಸಿದಳು. ಆದರೆ ಆದಿಶಂಕರರು ಆ ಬಡವಿಯು ಚಿಕ್ಕ ಹಣ್ಣನ್ನು ಕೊಡುವುದರ ಮೂಲಕ ಮಾಡಿದ ಸದ್ಯದ ಪರೋಪಕಾರ ಕರ್ಮವನ್ನು ಅವಳ ಪ್ರಾರಬ್ಧದಲ್ಲಿ ಸೇರಿಸಿಕೊಂಡು ಆಗಲೇ ಅಲ್ಲೇ ಅವಳಿಗೆ ಐಶ್ವರ್ಯವನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದರು. ಆದಿಶಂಕರರ ಶಿಫಾರಸ್ಸಿನಂತೆ ಕೂಡಲೇ ಆ ಬಡವಿಗಾಗಿ ಅಲ್ಲಿ ಬಂಗಾರದ ಹಣ್ಣುಗಳ ಸುರಿಮಳೆಯಾಯಿತು. ಆಜ್ಞಾಪಕನ ಶಿಫಾರಸ್ಸಿನ ಪ್ರಕಾರ ಆಗಾಮಿಯನ್ನು ಪ್ರಾರಬ್ಧದಲ್ಲಿ ಸೇರಿಸಿಕೊಳ್ಳಬಹುದೆಂದು ಇಲ್ಲಿ ತೋರಿಸಿಕೊಡಲಾಗಿದೆ.

"ತನ್ನ ಸಂಕಲ್ಪಿಸುವ ಮತ್ತು ಮಾಡುವ ಮೂಲಭೂತ ಸ್ವಾತಂತ್ರ್ಯದ" ಮೂಲಕ ಅವನು ಪ್ರಾರಬ್ಧವನ್ನು ಅದರ ಪಾಡಿಗೆ ಅದು ನಡೆದು ಹೋಗಲೆಂದು ಬಿಟ್ಟು ಆಗಾಮಿಕರ್ಮಗಳನ್ನು ಮಾಡುವುದು ಮನುಷ್ಯ ಮಾಡುವ ಎರಡನೆಯ ತಪ್ಪು. ಅಂದರೆ ಅವನು ತನ್ನ ರಾಗ-ದ್ವೇಷಗಳ ಮೂಲಕ ಮುಂದಿನ ಜನ್ಮಗಳಲ್ಲಿ ತನ್ನ ಸುಖವನ್ನು ಹೆಚ್ಚಿಸಿಕೊಳ್ಳಲು ಮತ್ತು ದುಃಖಗಳನ್ನು ಪರಿಹರಿಸಿಕೊಳ್ಳಲು ಆಗಾಮಿಕರ್ಮಗಳನ್ನು ಮಾಡತೊಡಗುವುದು. ತನ್ನ ಸ್ವಂತದ ಸ್ವರೂಪವೇ ಸುಖ ಎಂಬುದನ್ನು ತಿಳಿದುಕೊಳ್ಳದುದರಿಂದ ಅವನು ಅಪೇಕ್ಷಾಪೂರ್ವಕವಾಗಿ ತನ್ನ ಮನಸ್ಸು, ಇಂದ್ರಿಯ, ದೇಹ ಮತ್ತು ಜಗತ್ತಿನ ವಸ್ತುಗಳ ಮೂಲಕ ಸುಖವನ್ನು ಪಡೆಯಬೇಕೆಂದು ವಿಚಾರ ಮಾಡಿ ಅನೇಕ ಭಿನ್ನ ಭಿನ್ನ ಕರ್ಮಗಳಲ್ಲಿ ಮಗ್ನನಾಗುತ್ತಾನೆ. ಈ ಪ್ರಕಾರ, ದೇಹವು ಸಾಯುವಾಗ ಅವನ ಸಂಚಿತದ ಹಿಮಾಲಯದೆತ್ತರದ ರಾಶಿಗೆ ಅಸಂಖ್ಯಾತ ಆಗಾಮಿಗಳನ್ನು ಸೇರಿಸಿ ಅದು ಹೆಚ್ಚು ಹೆಚ್ಚು ಎತ್ತರಕ್ಕೆ ಬೆಳೆಯುವಂತೆ ಮನುಷ್ಯನು ಮಾಡುತ್ತಾನೆ.

"ಅನುಭವಿಸಿದ ಮೇಲೆ ಕಳೆದು ಹೋಗುವ ಕರ್ಮ, ಫಲಗಳ ವಾಸನೆಗಳು ಕರ್ತನನ್ನು ಕರ್ಮಸಾಗರಕ್ಕೆ ಎಸೆಯುತ್ತವೆ. ಆದುದರಿಂದ ಕರ್ಮಫಲಗಳು ಮುಕ್ತಿಯನ್ನು ಹಡೆಯುವುದಿಲ್ಲ."

"ಉಪದೇಶ ಉಂದಿಯಾರ್", ಪದ್ಯ ೨

ಶ್ರೀ ರಮಣ

---

೩೦. ಲಕ್ಷ್ಮೀದೇವಿಯು ಐಶ್ವರ್ಯದ ಅಧಿದೇವತೆ. ಆದಿಶಂಕರರು ಶಿವನ ಅವತಾರ.

ಹೀಗೆ "ತನ್ನ ಸಂಕಲ್ಪಿಸುವ ಮತ್ತು ಕರ್ಮ ಮಾಡುವ ಮೂಲಭೂತ ಸ್ವಾತಂತ್ರ್ಯದ" ಮೂಲಕ ಮನುಷ್ಯನು ಎರಡು ತಪ್ಪುಗಳನ್ನು ಮಾಡುತ್ತಾನೆ.

ಈ ಎರಡು ತಪ್ಪುಗಳನ್ನು ತಿದ್ದುವುದು ಹೇಗೆ? ಈ ಅವಸ್ಥೆಯಲ್ಲಿ ದೇವರು ಮಾನವನ ಕಲ್ಪನೆಗನುಗುಣವಾಗಿ ಅವನಿಂದ ಭಿನ್ನನೂ ಸರ್ವಜ್ಞನೂ ಸರ್ವಶಕ್ತನೂ ಸರ್ವಕಾರುಣಿಕನೂ ಆಗಿದ್ದು ಅವನಿಗೆ ದಯೆದೋರುವವನಲ್ಲದೆ, ಹಿಂದಿನ ಅನೇಕಾನೇಕ ಜನ್ಮಗಳಲ್ಲಿ ದುಃಖವನ್ನು ಅನುಭವಿಸುತ್ತ ಬಂದ, ಆ ಮನುಷ್ಯನು ಸರಿಯಾದ ಜ್ಞಾನವನ್ನು ಕೊಡುವುದು ದೇವರ ಕರ್ತವ್ಯವೆಂದು ಪ್ರಾರ್ಥಿಸಿದಾಗ ಅವನ ನೆರವಿಗೆ ಬರುತ್ತಾನೆ. ಹಿಂದಿನ "ಭಕ್ತಿ" ಎಂಬ ಅಧ್ಯಾಯದಲ್ಲಿ ನಾವು ಆಗಲೇ ಹೇಳಿರುವಂತೆ ಮನುಷ್ಯನು ಪ್ರಾರ್ಥಿಸಿದ ಕೂಡಲೇ ಜಗತ್ತಿನ ವಸ್ತುಗಳನ್ನು ಸಂಪಾದಿಸಲು ವೇದಗಳ ಕರ್ಮಕಾಂಡ ಭಾಗವನ್ನು ನಮ್ಮ ೧ನೆಯ ಮತ್ತು ೨ನೆಯ ವರ್ಗಗಳ ಶಾಲಾ ಶಿಕ್ಷಕನನ್ನಾಗಿ ಕೊಟ್ಟದ್ದು ದೇವರೇ ಅಲ್ಲವೇ? ಮಾನವನ ಕರ್ಮಗಳಿಗೆ ತಕ್ಕ ಫಲಗಳನ್ನು ಕೊಟ್ಟವನೂ ದೇವರೇ ಅಲ್ಲವೇ? ಮೇಲೆ ಹೇಳಿದ ಎರಡು ತಪ್ಪುಗಳನ್ನು ತನ್ನ ಮೂಲಭೂತ ಕರ್ಮ ಸ್ವಾತಂತ್ರ್ಯ ಮತ್ತು ಇಚ್ಛಾ ಸ್ವಾತಂತ್ರ್ಯಗಳ ಮೂಲಕ ಮನುಷ್ಯನು ಹೇಗೆ ಮಾಡಿದನೆಂಬುದನ್ನು ಕಂಡುಹಿಡಿಯಲು ಮತ್ತು ಆ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸುವುದು ಹೇಗೆ ಎಂಬುದನ್ನು ಕಲಿಸಲು ಮುಮುಕ್ಷು ಮಾಡಿದ ಪ್ರಾರ್ಥನೆಗೆ ಉತ್ತರರೂಪವಾಗಿ ದೇವರೀಗ ಗುರುರೂಪದಲ್ಲಿ ಅವನೆಡೆಗೆ ಸಹಾಯ ಮಾಡಲು ಬರುತ್ತಾನೆ. ಈ ವ್ಯಕ್ತಿಯು ತನ್ನ ಆನಂದರೂಪದ ನಿಜಸ್ಥಿತಿಯನ್ನು ತನ್ನದೇ ಆದ ಇಚ್ಛಾ ಸ್ವಾತಂತ್ರ್ಯ ಮತ್ತು ಕರ್ಮಸ್ವಾತಂತ್ರ್ಯಗಳ ಮೂಲಕ ಮರೆತಿದ್ದಾನೆ. ಅವನೀಗ ಸುಖಕ್ಕಾಗಿ ಉಸಿರುಕಟ್ಟಿಕೊಂಡು ಕುಳಿತಿದ್ದಾನೆ ; ತನ್ನ ಪರಿಮಿತ ಶಕ್ತಿ ಮತ್ತು ಜ್ಞಾನಗಳ ಮೂಲಕ ಅವನೀಗ ಕರ್ಮರೂಪದ ಪ್ರಯತ್ನಗಳನ್ನು ಮಾಡುತ್ತಿದ್ದಾನೆ. ಅವನಿಗೆ ಅವನು ಪ್ರೀತಿಸುವ ದೇವರಲ್ಲದೆ ಇನ್ನಾರು ನಿಜವಾದ ಸಹಾಯಕರಾದಾರು? ಏಕೆಂದರೆ, ತನ್ನ ಸುಖದ ಬಯಕೆಯನ್ನು ಸಂಪೂರ್ಣವಾಗಿ ಈಡೇರಿಸುವುದೆಂದರೆ ತನ್ನ ಆತ್ಮ ವಿಸ್ಮೃತಿಯನ್ನು (ಬ್ರಹ್ಮವಿಸ್ಮೃತಿಯನ್ನು) ತೆಗೆದೊಗೆದು ಆ ಮೂಲಕ ತನ್ನ ಮೂಲ ಸ್ಥಿತಿಯನ್ನು ಜಾಗರಗೊಳಿಸಿಕೊಳ್ಳುವುದೇ ಆಗಿದೆ ಎಂಬುದನ್ನಾತ ಅರಿತಿದ್ದಾನೆ.

ಈಗ ದೇವರು ಮಾನವ ವ್ಯಕ್ತಿಯ ಸಂಚಿತವನ್ನು ಮಾನವನಿಗೆ ನಿಜಜ್ಞಾನ ಲಭಿಸುವ ರೀತಿಯಿಂದ ಬಳಸುತ್ತಾನೆ. ಮಾನವ ಜನ್ಮ ತಾಳಿದಾಗಲೆಲ್ಲಾ ಅವನ ಸಂಚಿತದಿಂದ ಒಂದು ಭಾಗವನ್ನು ತೆಗೆದು ಪ್ರಾರಬ್ಧವೆಂದು ವಿಧಿಸಲಾಗುತ್ತಿಲ್ಲವೇ? ಎಂಥ ಕರ್ಮಗಳನ್ನು (ಸತ್ಕರ್ಮ ಅಥವಾ ದುಷ್ಕರ್ಮಗಳನ್ನು) ಯಾವ ಕಾಲದಲ್ಲಿ (ಯಾವ ಜನ್ಮದ ಯಾವ ಪರಿಸ್ಥಿತಿಗಳಲ್ಲಿ) ಯಾವ ರೀತಿಯಿಂದ (ಸುಖ–ದುಃಖಗಳನ್ನು ಮಾನವ ಅನುಭವಿಸಬೇಕಾದ ಪ್ರಾಥಮ್ಯ ಕ್ರಮದಿಂದ) ವಿಧಿಸಿದರೆ – ಆ ಕರ್ಮ ಫಲಗಳ ಅನುಭವದಿಂದ ಮಾನವ ವ್ಯಕ್ತಿಯು ಹೆಚ್ಚು ಹೆಚ್ಚು ಜುಗುಪ್ಸೆಪಟ್ಟುಕೊಂಡು ಕರ್ಮ ಮಾಡುವುದು ವ್ಯರ್ಥ ಎಂಬ ನಿಗಮನಕ್ಕೆ ಬರುವನೋ ಹಾಗೆ ದೇವರು ಅವನಿಗಾಗಿ ಕರ್ಮಗಳನ್ನು ಆಯ್ಕೆ ಮಾಡುತ್ತಾನೆ. ಇದು ಆತನ ಅಪರಿಮಿತ ಅನುಗ್ರಹ! ಅಲ್ಲವೇ?

ಇದನ್ನು ತಿಳಿಯದೆ, ದೇವರು ಸರ್ವಶಕ್ತನೂ, ಸರ್ವಜ್ಞನೂ, ಸರ್ವಕಾರುಣಿಕನೂ ಎಂದು ನಂಬಿ ಮಾನವನು, "ನನ್ನ ಪ್ರಾರಬ್ಧವನ್ನು ಬದಲಾಯಿಸು, ನನ್ನ ಸುಖವನ್ನು

ಹೆಚ್ಚಿಸು, ನನ್ನ ಅದೃಷ್ಟದಲ್ಲಿರುವ ದುಃಖವನ್ನು ಕಡಿಮೆ ಮಾಡು" ಎಂದು ಒತ್ತಾಯಿಸಿ ಪ್ರಾರ್ಥನೆ ಮಾಡುತ್ತಾ ದೇವರಿಗೆ ಸಂಪೂರ್ಣವಾಗಿ ಶರಣಾಗತನಾಗದೆ (ಸರ್ವಸ್ವವನ್ನೂ ಧಾರೆಯೆರೆಯದೆ) ಇದ್ದರೆ ಅದು ಅವನ ಅಜ್ಞಾನ–ಅದು ಅವನಿಗಿರುವ ಅಲ್ಪಮತಿಯಿಂದ ದೇವರ ಯೋಜನೆಯಲ್ಲಿ ದೋಷ ಹುಡುಕಲು ಹೋದಂತೆ ಆಗುವುದು. ಅವನ ಪ್ರಾರ್ಥನೆ ಏನನ್ನು ತೋರಿಸುತ್ತದೆ. ಅದು ಅವನು ದೇವರನ್ನು ದೂರುವುದನ್ನು ತೋರಿಸುತ್ತದೆ : ಆ ದೇವರನ್ನೇ ಅವನು ಸರ್ವಜ್ಞನೆಂದು ಹೊಗಳಿ ಅವನಿಗೇ ಈಗ ಮಾನವನ ಪ್ರಾರಬ್ಧವನ್ನು ಯುಕ್ತವಾಗಿ ನಿರ್ಧರಿಸುವಷ್ಟು ವಿವೇಕವಿಲ್ಲವೆಂದಾಗುತ್ತದೆ. ಅಂದರೆ ಸರ್ವಜ್ಞನನ್ನು ಅವನು ಅಜ್ಞನನ್ನಾಗಿ ಪರಿಗಣಿಸಿದಂತಾಗುತ್ತದೆ. ಅದೇ ಮೇರೆಗೆ ತನ್ನ ಪ್ರಾರಬ್ಧದಲ್ಲಿಯ ದುಃಖಗಳನ್ನು ತನ್ನ ದೈವಪ್ರಾರ್ಥನೆಯು ಪರಿಹರಿಸದಿದ್ದರೆ ಅವನಿಗೆ ನಿರುತ್ಸಾಹ ಉಂಟಾಗುತ್ತದೆ. ಈ ನಿರುತ್ಸಾಹ ಏನನ್ನು ತೋರಿಸುತ್ತದೆ? ಸರ್ವಶಕ್ತನೆನಿಸಿದ, ಸ್ತುತಿಸಿದ ದೇವರು ತನ್ನ ದುಃಖವನ್ನು ನಿಲ್ಲಿಸಲು ಶಕ್ತನಲ್ಲ ಎಂದು ಅವನು ಭಾವಿಸಿದ್ದನ್ನು ಅದು ತೋರಿಸುತ್ತದೆ. ಅಂದರೆ ತನ್ನ ನಿರುತ್ಸಾಹದಿಂದ ಸರ್ವಶಕ್ತನನ್ನು ಅಶಕ್ತನನ್ನಾಗಿ ಪರಿಗಣಿಸುತ್ತಾರೆ! ಇಷ್ಟೇ ಅಲ್ಲ ; ತನ್ನ ದುಃಖವನ್ನೇಕೆ ದೇವರು ಪರಿಹರಿಸುವುದಿಲ್ಲ ಎಂಬುದಕ್ಕೆ ಕಾರಣ ಹುಡುಕಲು ಯತ್ನಿಸಿ ಅವನು ಹಾಗೆ ಇಷ್ಟಪಡುವುದಿಲ್ಲ ಎಂಬ ನಿಗಮನಕ್ಕೆ ಬರುತ್ತಾನೆ. ಈ ನಿಗಮನವು ಏನನ್ನು ತೋರಿಸುತ್ತದೆ? ತಾನೇ ಸರ್ವದಯಾಮಯನೆಂದು ಘೋಷಿಸಿದ ದೇವರನ್ನು ತನಗೆ ಸಹಾಯ ಮಾಡುವಷ್ಟು ದಯಾಶಾಲಿಯಲ್ಲವೆಂದು ಭಾವಿಸುತ್ತಾನೆ–ಅರ್ಥಾತ್ ಸರ್ವಕಾರುಣಿಕನು ಅವನ ನಿಗಮನದ ಮೂಲಕ ನಿಷ್ಕರುಣನಾಗುತ್ತಾನೆ! ಅಲ್ಲವೇ?

ಅವನನ್ನು ಹಾಗೆ ಎಣಿಸುವಂತೆ ಮಾಡುವುದು ಯಾವುದು? ಅದು ದುಃಖನಿವಾರಣೆಯ ಮತ್ತು ಸುಖ ಸಿದ್ಧಿಯ ಆಶೆಯೇ ಅಲ್ಲವೇ? ಈಗ ಸುಖ ಜೀವನವನ್ನು ಅನುಭವಿಸುತ್ತಿರುವ ಒಬ್ಬ ಮನುಷ್ಯನೂ ಅನಿರೀಕ್ಷಿತವಾದ ಭಾವಿ ದುಃಖಗಳ ಬಗ್ಗೆ ಹೆದರಿ ತೊಂದರೆಪಟ್ಟುಕೊಳ್ಳುತ್ತಾನೆ; ಅಥವಾ ಅವನು ಭವಿಷ್ಯತ್ಕಾಲದಲ್ಲಿ ತನಗೆ, ಸುಖತರ ಜೀವನ ಒದಗಲೆಂದು ಹಾರೈಸುತ್ತಿರಬಹುದು. ಈಗ ದುಃಖಿಸುತ್ತಿರುವ ಇನ್ನೊಬ್ಬ ಮನುಷ್ಯನು ತನ್ನ ದುಃಖ ಯಾವಾಗ ಕೊನೆಗೊಂಡೀತೆಂದು ಆಶಾಬದ್ಧ ದೃಷ್ಟಿಯಿಂದ ನೋಡುತ್ತಿರಬಹುದು – ತನ್ನ ದುಃಖ ಹೋಗಿ ಯಾವಾಗ ಅದರ ಜಾಗದಲ್ಲಿ ಸುಖ ಬಂದೀತೆಂದು ನಿರೀಕ್ಷಿಸುತ್ತಿರಬಹುದು. ಈ ಕಾರಣಗಳಿಗಾಗಿ ನಮ್ಮ ಜೀವನದ ಭವ್ಯಗತಿಯನ್ನು ತಿಳಿದುಕೊಳ್ಳಲು ನಾವು ಬಯಸುತ್ತೇವೆ. ಆದರಿದು, ಅನವಶ್ಯಕವಾದ ಮಾನಸಿಕ ಕ್ರಿಯೆ. ಯಾರೋ ಒಬ್ಬರು ಭಗವಾನ್ ಶ್ರೀ ರಮಣರನ್ನು ಕೇಳಿದರು, "ನಮ್ಮ ಗತ ಜೀವನಗಳ, ನಮ್ಮ ಸದ್ಯದ ಜೀವನದ ಭವಿತವ್ಯದ ಮತ್ತು ನಮ್ಮ ಮುಂದಿನ ಜನ್ಮಗಳ ಬಗೆಗೆ ನಾವು ತಿಳಿದುಕೊಳ್ಳಬಲ್ಲೇವೇ?" ಎಂದು. ಶ್ರೀ ಭಗವಾನ್ ರಮಣರು ಉತ್ತರಿಸಿದರು, "ತನ್ನ ವರ್ತಮಾನ ಚಟುವಟಿಕೆಗಳ ಬಗೆಗೆ ಆಲೋಚಿಸಿ ಗೊಂದಲಕ್ಕೀಡಾದ ಮತ್ತು ತೊಂದರೆಪಟ್ಟುಕೊಳ್ಳುತ್ತಿರುವ ಮನುಷ್ಯನಿಗೆ ಅವನ ಗತ–ಅನಾಗತ ಜೀವನಗಳ ಬಗೆಗೆ ಜ್ಞಾನವುಂಟಾದರೆ ಅವನು ಇನ್ನಷ್ಟು ಗೊಂದಲಗೆಟ್ಟು ದುಃಖಿಯಾಗಿ ನರಳದಿರುವನೇ? ಅವನ ಜೀವನವು ಒಂದು ನರಕವಾಗಿ ಬಿಡುವುದಿಲ್ಲವೇ? ನಾನು ಯಾರೆಂಬ ತನ್ನ ವರ್ತಮಾನ ಸ್ಥಿತಿಯ ಸತ್ಯವನ್ನು ತಿಳಿದುಕೊಳ್ಳುವುದನ್ನು ಅಲಕ್ಷಿಸಿ ಭೂತ–ಭವಿಷ್ಯತ್ತುಗಳ ಜ್ಞಾನವನ್ನು ಹುಡುಕುವುದು ಕೇವಲ ಅಜ್ಞಾನ"–ಎಂಬುದಾಗಿ.

"ವರ್ತಮಾನದ ಸತ್ಯವನ್ನು ಅರಿಯದೆ, ಭೂತ–ಭವಿಷ್ಯತ್ತುಗಳನ್ನು ತಿಳಿಯಲು ಬಯಸುವುದು ಘಟಕವಾದ '<u>ಒಂದರ</u>' ಸ್ವರೂಪವನ್ನು ಅರಿಯದೆ ಲೆಕ್ಕ ಮಾಡಲು ಯತ್ನಿಸಿದ ಹಾಗೆ."

–"ಉಳ್ಳದು ನಾರ್ಪ.ದು", ಪದ್ಯ ೧೫

ಶ್ರೀ ರಮಣ

ಸತ್ಯವು ಹೀಗಿದ್ದರೂ ಮನುಷ್ಯನು ತನ್ನ ಜೀವನದಲ್ಲಿ ಮುಂದೆ ಬರಲಿರುವ ನೋವು–ನಲಿವುಗಳನ್ನು ತಿಳಿದುಕೊಳ್ಳಲು ಬಯಸುತ್ತಾನೆ ! ಜ್ಯೋತಿಃಶಾಸ್ತ್ರವು ಅವನ ನೆರವಿಗೆ ಬರುತ್ತದೆ! ಜ್ಯೋತಿಃಶಾಸ್ತ್ರವೆಂದರೇನು? ಅದೊಂದು ವಿಜ್ಞಾನ–ಮನುಷ್ಯನು ಹುಟ್ಟುವ ಸರಿಯಾದ ಕಾಲದ ಗ್ರಹಸ್ಥಾನಗಳನ್ನು ಆಧರಿಸಿದ ಶಾಸ್ತ್ರ. ಅದು ಅವನಿಗೆ ಸಾಯುವವರೆಗೆ ಜೀವನದಲ್ಲಿ ಸಂಭವಿಸುವ ಎಲ್ಲಾ ಘಟನೆಗಳನ್ನೂ ತಿಳಿಯಲು ಸಹಾಯ ಮಾಡುತ್ತದೆ. ಸ್ವಲ್ಪದರಲ್ಲಿ ಹೇಳುವುದಾದರೆ, ಒಬ್ಬನ ಪ್ರಾರಬ್ಧವೆಂದು ದೇವರು (ಒಡೆಯನು) ವಿಧಿಸಿದ್ದನ್ನು ಓದಿ ಹೇಳುವ ಒಂದು ಅದ್ಭುತವಾದ ಶಾಸ್ತ್ರವೆಂಬುದು ನಿಜ! ಆದರೆ ಮೂರು ಮೂಲಭೂತ ಶರ್ತಗಳು (ನಿಬಂಧನೆಗಳು) ಯಾ ಉಪಾಧಿಗಳು ಅದಕ್ಕೆ ಅಗತ್ಯ : (೧) ಹುಟ್ಟಿದ ಗಳಿಗೆಯ ಸರಿಯಾದ ಎಣಿಕೆ ; (೨) ಜಾತಕವನ್ನು ಸಿದ್ಧ ಮಾಡುವ ಜೋಯಿಸನ ವಿದ್ವತ್ತೆಯ ಉನ್ನತ ಮಟ್ಟ (೩) ಜೋಯಿಸನು ದುಡ್ಡಿಗಾಗಿ ಪರರನ್ನು ಹೊಗಳುವ ಕಸಬುದಾರನಾಗಿರಕೂಡದು. ಅನೇಕ ಪ್ರಕರಣಗಳಲ್ಲಿ ಫಲ ಹೇಳುವುದು ತಪ್ಪಾಗಿ ಬಿಡುತ್ತದೆ. ಹಾಗಾಗಲು ಒಂದು ಅಥವಾ ಅದಕ್ಕೂ ಹೆಚ್ಚಿನ ನಿಬಂಧನೆಗಳು ಅಲ್ಲಿ ಇಲ್ಲವಾಗಿರುವುದು ಕಾರಣ. ಅದರಿಂದ ಜ್ಯೋತಿಃಶಾಸ್ತ್ರದ ಹೆಸರು ಕೆಡುತ್ತದೆ. ಫಲ ಜ್ಯೋತಿಷದಂತೆ ಹಸ್ತ ಸಾಮುದ್ರಿಕ, ಸಂಖ್ಯಾಜ್ಯೋತಿಷ, ಐಚಿನ್, ಪ್ಲಾನ್ಚೆಟ್[೩೧] ರೀಡಿಂಗ್, ಭಾಗ್ಯ ಜ್ಯೋತಿಷ, ಮಾನವ ಮಾಧ್ಯಮದ ಮೂಲಕ ಭೂತ(ಪ್ರೇತ)ಗಳನ್ನು ಸಂಪರ್ಕಿಸುವುದು – ಇವುಗಳನ್ನು ಎಲ್ಲೆಲ್ಲೂ ಅದೇ ಉದ್ದೇಶಕ್ಕಾಗಿ ಬಳಸುತ್ತಾರೆ. ಆ ಕಲೆ–ಕೈಗಾರಿಕೆಗಳನ್ನು ಎಷ್ಟೋ ಸಲ ಮನುಷ್ಯನು ಅವಲಂಬಿಸುತ್ತಾನೆ. ಆದರೆ ಏತಕ್ಕಾಗಿ? ಅವು ಮುಂದೆ ಬರಲಿರುವ ಸುಖದುಃಖಗಳನ್ನು ಮಾತ್ರ ಅವನಿಗೆ ತೋರಿಸಬಲ್ಲವು. ಆದರೆ ದುಃಖವನ್ನು ಕಡಿಮೆ ಮಾಡಲು ಮತ್ತು ಸುಖವನ್ನು ಹೆಚ್ಚಿಸಲು ಸಹಾಯಕವಾಗುವುದಿಲ್ಲ. ತಜ್ಞ ಜೋಯಿಸನಿಂದ ಜ್ಯೋತಿಃಶಾಸ್ತ್ರದ ಮೂಲಕ ತಾನು ಪ್ರಾರಬ್ಧವನ್ನು (ದುಃಖವನ್ನು) ಅನುಭವಿಸಬೇಕಾಗಿದೆ ಎಂಬುದನ್ನು ತಿಳಿದರೂ ಮನುಷ್ಯನು ಅವನಿಂದ ಯಾವ ಉತ್ತರವನ್ನು ಪಡೆಯುತ್ತಾನೆ? ಜೋಯಿಸನು, "ಶನಿದೇವಸ್ಥಾನಕ್ಕೆ ಹೋಗಿ ದೀಪ ಹಚ್ಚಿ ಬಾ ; ನವಗ್ರಹ ದೇವಾಲಯಕ್ಕೆ ಹೋಗಿ ಪೂಜೆ ಮಾಡಿ ಬಾ ; ಬಡವರಿಗೆ ಊಟ ಹಾಕು ; ಅಂಥ ಇಂಥ ದೇವತೆಗಳನ್ನು ಆ ಈ ಕಾಲಗಳಲ್ಲಿ ಗ್ರಹ ದೋಷಗಳನ್ನು ಕಡಿಮೆ ಮಾಡಿಕೊಳ್ಳಲು ಪೂಜಿಸು ಮತ್ತು ಅದರಿಂದ ನಿನ್ನ ತೊಂದರೆಗಳು ಕಡಿಮೆಯಾಗುವುವು–ಎಲ್ಲವೂ ಸರಿ ಹೋಗುವುದು" ಎಂದು ಅವನಿಗೆ ಬುದ್ಧಿ ಹೇಳುತ್ತಾನೆ.

---

೩೧. ಎರಡು ಸಣ್ಣ ಸುತ್ತು ಗಾಲಿಗಳೂ ಒಂದು ಸೀಸದ ಕಡ್ಡಿಯೂ ಅಳವಡಿಸಿರುವ ಹೃದಯಾಕಾರದ ಒಂದು ಸಣ್ಣ ಹಲಗೆ. ಇದರ ಮೇಲೆ ಕೈ ಬೆರಳನ್ನು ಮಿದುವಾಗಿ ಇಟ್ಟರೆ ಹಾಗಿಟ್ಟವನ ಪ್ರಯತ್ನವಿಲ್ಲದೆಯೇ ಅವನ ಮನಶ್ಚಿಂತನೆಯ ಪ್ರಶ್ನೆಗಳಿಗೆ ಉತ್ತರರೂಪವಾದ ಅಕ್ಷರಗಳನ್ನು ಬರೆಯುವುದೆಂದು ಹೇಳುವ ಸಲಕರಣೆ.

ಅದರ ನಿಜವಾದ ಅರ್ಥವೇನು? "ಎಲೈ ಮನುಷ್ಯನೇ, ನಿನ್ನ ಪ್ರಾರಬ್ಧವನ್ನು ನೀನು ಬದಲಾಯಿಸಲಾರೆ. ದೇವರಿಗೆ ಶರಣಾಗು. ಅವನೇ ಸರ್ವಶಕ್ತ, ಸರ್ವಜ್ಞ ಮತ್ತು ಸರ್ವಕಾರುಣಿಕ" ಎಂಬುದಲ್ಲವೇ ಅದರ ಅರ್ಥ? ಭಕ್ತಿ ಶುದ್ಧೀಕರಣ ಮಾಡುವ ನಮ್ಮ ಶಾಲೆಯ ೧, ೨, ೩ (ಅ) ಇಯತ್ತೆಗಳಿಗೆ ಸೇರಿಸಿಕೊಳ್ಳಲು ಜೋಯಿಸನು ಆ ಮನುಷ್ಯನನ್ನು ಕಳಿಸಿಕೊಡುವುದು ಸ್ಪಷ್ಟವಾಗುವುದಿಲ್ಲವೇ? ಅವನು ಯಾವ ರೀತಿಯಿಂದ ಹಾಗೆ ಮಾಡುತ್ತಾನೆ? ಆ ಜೋಯಿಸನು (ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ) ದೇವರ ಅನೇಕಾನೇಕ ನಾಮಗಳನ್ನೂ, ರೂಪಗಳನ್ನೂ, ಮಾನವನ ಆಸೆಗಳನ್ನೂ ಪೂರೈಸಲು (ಪ್ರಾರಬ್ಧವನ್ನು ಬದಲಾಯಿಸಲು) ಪೂಜೆ ಮಾಡಬೇಕೆಂದು ಶಿಫಾರಸ್ಸು ಮಾಡುತ್ತಾನೆ. ಇದು ನಮ್ಮ ಶಾಲೆಯ ೧, ೨, ೩ (ಅ) ಇಯತ್ತೆಗಳ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ. ಆ ವಿದ್ಯಾರ್ಥಿಗಳಿಗೆ ವೇದಗಳ ಕರ್ಮಕಾಂಡದ ವಿಭಾಗಗಳನ್ನು ಮೀರಿ ಹೋಗಲು ಎಡೆಗೊಡುವ ವಿವೇಕ ಶಕ್ತಿಯು ಬೆಳೆದಿರುವುದಿಲ್ಲ. ಆದರೆ ನಮ್ಮ ಶಾಲೆಯ ೩ನೆಯ (ಬ) ಹಾಗೂ ೪ನೆಯ ಇಯತ್ತೆಗಳಲ್ಲಿಯ ಜೀವಾತ್ಮ ದೇವರಿಗೆ ಅಂಟಿಕೋ ಎಂದು ಜೋಯಿಸ ಹೇಳುವುದಕ್ಕೆ ಮೊದಲೇ ಮತ್ತು ಅವನ ಬುದ್ಧಿವಾದವಿಲ್ಲದೆಯೇ ಹಾಗೆ ಅಂಟಿಕೊಳ್ಳುತ್ತಿಲ್ಲವೇ? ಅಂಥ ಪಕ್ವಾತ್ಮಗಳು ಮಾತ್ರ ಹಿಂದೆ ಹೇಳಿದ ಎರಡು ತಪ್ಪುಗಳನ್ನು [ಇಚ್ಛಿಸುವ ಮತ್ತು ಮಾಡುವ ಮೂಲಭೂತ ಸ್ವಾತಂತ್ರ್ಯದ ಮೂಲಕ ಮಾಡಿ ಸಂಕಲ್ಪಿಸುವುದು ಮತ್ತು ಮಾಡುವುದು ಎಂಬೆರಡು ತಪ್ಪುಗಳನ್ನು] ಸರಿಪಡಿಸಲು ಶಕ್ತವಾಗಿರುತ್ತವೆ. ನಿಜ ಶೋಧಕನಿಗೂ, ನಿಜ ಭಕ್ತನಿಗೂ ಜ್ಯೋತಿಶಾಸ್ತ್ರಜ್ಞನ ಬುದ್ಧಿವಾದವು ಉಪಯುಕ್ತವಾದೀತೇ? ಸಂಪೂರ್ಣ ಶರಣಾಗತಿಯ ಅಥವಾ ಸಮರ್ಪಣ ಭಾವದ ಮಾರ್ಗದಲ್ಲಿರುವವನು ಪ್ರಾರಬ್ಧದ ಯಾವ ದುಃಖವನ್ನು ಪರಿಹರಿಸಲು ಅಥವಾ ಯಾವ ಸುಖವನ್ನು ಹೆಚ್ಚಿಸಲು ಯಾವ ದೇವತೆಯನ್ನು ಪ್ರಾರ್ಥಿಸತಕ್ಕದ್ದು? ದೇವರು ಒಬ್ಬನೇ ಒಬ್ಬನೆಂಬುದನ್ನೂ ಇಷ್ಟಪಟ್ಟರೆ ಅವನೇ ಮುಮುಕ್ಷುವಿನ ಪ್ರಾರ್ಥನೆಯಿಲ್ಲದೆ ಪ್ರಾರಬ್ಧವನ್ನು ಬದಲಾಯಿಸಬಲ್ಲನೆಂಬುದನ್ನೂ ಆತ್ಮ ನಿವೇದನಾತ್ಮಕ (ಶರಣಾಗತಿಯ) ಭಕ್ತಿಮಾರ್ಗದವನಿಗೆ ಗೊತ್ತಿಲ್ಲವೇ? ಈ ಜ್ಞಾನ ಇಲ್ಲದವನಿಗೆ ಮಾತ್ರ ದೇವರ ಅನೇಕಾನೇಕ ನಾಮರೂಪಗಳನ್ನು ಪೂಜಿಸಲು ಅವಕಾಶವಿದೆ. ಆದರೆ ಈ ಜ್ಞಾನದಿಂದ ಅರಳಿದ ಹೃದಯವುಳ್ಳವನಿಗೆ ಜ್ಯೋತಿಷಾದಿ ಶಾಸ್ತ್ರಗಳ ರೂಪದ ಕಲೆ–ಕೈಗಾರಿಕೆಗಳಿಂದ ಪಡೆಯತಕ್ಕದ್ದೇನಿದೆ? ಒಬ್ಬ ಮುಮುಕ್ಷುವು ತಾನು ಮುಕ್ತಿಗಾಗಿ ಬಹಳ ಆಸೆಪಡುತ್ತೇನೆ ಎನ್ನುತ್ತಾ ಅದೇ ಸಮಯದಲ್ಲಿ ಆ ಕಲೆ–ಕೈಗಾರಿಕೆಗಳಲ್ಲಿ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದರೆ ಅವನೆಂದೂ ನಿಜವಾದ ಭಕ್ತ ಅಥವಾ ಆತ್ಮಶೋಧಕ ಎನ್ನಿಸಲಾರನು. ಏಕೆಂದರೆ ನಿಜವಾದ ಭಕ್ತನು ಪ್ರಾರಬ್ಧವನ್ನು ಬದಲಾಯಿಸೆಂದು ದೇವರನ್ನು ಎಂದೂ ಕೇಳನು. ಅವನು ತನ್ನ ಸಂಕಲ್ಪಿಸುವ ಮತ್ತು ಅದರಂತೆ ಮಾಡುವ ಮೂಲ ಸ್ವಾತಂತ್ರ್ಯವನ್ನು ಬ್ರಹ್ಮಾರ್ಪಣ ಮಾಡಿರುತ್ತಾನೆ. ಆದ್ದರಿಂದ ನಿಜವಾದ ಆತ್ಮಶೋಧಕನು ಎಂದೂ ಬ್ರಹ್ಮಾತ್ಮಾವಧಾನವನ್ನುಳಿದು ಇನ್ನಾವುದರತ್ತಲೂ ಪ್ರಯತ್ನಿಸನು ; ಅಲ್ಲದೆ, ಅವನಿಗೆ ಸಂಕಲ್ಪಿಸುವ ಮತ್ತು ಅದರಂತೆ ಮಾಡುವ ತನ್ನ ಮೂಲಭೂತ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸುವುದು ಹೇಗೆಂಬುದು ಗೊತ್ತು. ಅವನು ನಿಜವಾದ ಭಕ್ತ ಅಥವಾ ಆತ್ಮಶೋಧಕನಾಗಿದ್ದರೆ (ಅಂದರೆ ನಮ್ಮ ಶಾಲೆಯ ೩(ಬ) ಯಾ ೪ನೆಯ ಇಯತ್ತೆಯ ವಿದ್ಯಾರ್ಥಿಯಾಗಿದ್ದರೆ) ಈ ಕಲೆ–ಕೈಗಾರಿಕೆಗಳ ಬಗೆಗೆ ಅಭಿರುಚಿಯನ್ನಾಗಲಿ, ಅತ್ಯಲ್ಪ

ಒಲವನ್ನಾಗಲಿ ಇಟ್ಟುಕೊಂಡಿರುತ್ತಾನೆಯೇ? ಅವನು ಖಂಡಿತವಾಗಿ ಇಟ್ಟುಕೊಳ್ಳನು– ಏಕೆಂದರೆ ಅವನಿಗದು ಸಾಧ್ಯವೇ ಇಲ್ಲ! ಅವನು ಹಾಗೆ ಮಾಡುವುದೇ ಆದರೆ ಅದು ಅವನ ಭಕ್ತಿಯ ಅಭಾವವನ್ನು ಹೊರಗೆಡಹುತ್ತದೆ. ಶ್ರದ್ಧಾಶೂನ್ಯತೆಯನ್ನು ಬಯಲು ಮಾಡುತ್ತದೆ. ಸಂಪೂರ್ಣ ಸಮರ್ಪಣ ಭಾವದಲ್ಲಿ ಈ ಕಲೆ–ಕೈಗಾರಿಕೆಗಳ ಅವಶ್ಯಕತೆ ಇಲ್ಲವಾಗಬೇಕು. ಮಾಣಿಕ ವಾಚಕರು ಹೀಗೆ ಹಾಡಿದ್ದಾರೆ.

"ಯಾವ ಕ್ಷಣದಲ್ಲಿ ನೀನು ನನ್ನನ್ನು ನಿನ್ನವನನ್ನಾಗಿ ತೆಗೆದುಕೊಂಡೆಯೋ ಆ ಕೂಡಲೇ ನನ್ನ ವೈಯಕ್ತಿಕತೆ (ವ್ಯಕ್ತಿತ್ವ) ಹೊರಟು ಹೋಯ್ತು – (ಅದನ್ನು ನಾನು ಕಳೆದುಕೊಂಡೆ)! ನೀನು ಒಳಿತನ್ನಾದರೂ ನನಗೆ ಮಾಡು – ಕೇಡನ್ನಾದರೂ ಮಾಡು! ಮಧ್ಯದಲ್ಲಿ ಕೈ ಹಾಕಲು ನಾನು ಯಾರು? ಓ ಒಡೆಯ!"

ಮೇಲೆ ಹೇಳಿದ ವಿಷಯಗಳಿಂದ ಆ ಕಲೆ–ಕೈಗಾರಿಕೆಗಳು ಕೃತಕ ಮತ್ತು ನಾವು ಅವನ್ನು ದ್ವೇಷಿಸುತ್ತೇವೆ ಎಂದು ಓದುಗರಾರಾದರೂ ನಿಗಮನಿಸಿದರೆ ಅದು ತಪ್ಪು. ಆದರೆ ಅವು ನಮ್ಮ ಶಾಲೆಯ ೧, ೨, ೩ (ಅ) ಇಯತ್ತೆಯ ವಿದ್ಯಾರ್ಥಿಗಳಿಗೆ ಮಾತ್ರ ಉಪಯುಕ್ತವಾದವುಗಳು ಎಂದು ನಾವು ಘೋಷಿಸುತ್ತೇವೆ ಎಂಬುದನ್ನು ಓದುಗರು ತಿಳಿಯತಕ್ಕದ್ದು. ಸತ್ಯ ಶೋಧನೆಯನ್ನೇ ಗುರಿಯಾಗಿ ಇಟ್ಟುಕೊಂಡವರಿಗೆ ಅವು ಅವಶ್ಯಕವಲ್ಲವೇ ಅಲ್ಲ.

ನಮಗೆ ದೇವರಲ್ಲಿ ನಿಜವಾಗಿ ಶ್ರದ್ಧಾಭಕ್ತಿಗಳಿದ್ದರೆ ನಾವು ನಿರುಪಾಧಿಕವಾಗಿ (ನಿರ್ನಿಬಂಧನಾಪೂರ್ವಕವಾಗಿ) ಅವನಿಗೆ ಶರಣಾಗತರಾಗಬೇಕು. ಏಕೆಂದರೆ ಶ್ರೀ ರಮಣರು ಹೇಳಿದ್ದಾರೆ.

"ಓ ಅಣ್ಣಾಮಲೈ, ನನಗೆ ಯಾವುದಾದರೂ ದೂರುಗಳಿರಬಲ್ಲವೇ? ಹೇ ನನ್ನ ನಿಜ ಆತ್ಮವೇ (ಬ್ರಹ್ಮಾತ್ಮವೇ) ನಿನ್ನ ಇಚ್ಛೆ ಬಂದ ಹಾಗೆ ಮಾಡು ; ಆದರೆ ಓ ನನ್ನ ಪ್ರಿಯತಮ, ನಿನ್ನ ಪಾದಗಳಲ್ಲಿ ನನಗೆ ಯಾವಾಗಲೂ ಅಧಿಕಾಧಿಕ ಭಕ್ತಿಯುಂಟಾಗುವಂತೆ ಕರುಣಿಸು."

"ಶ್ರೀ ಅರುಣಾಚಲ ನವಮಣಿಮಾಲೈ" –ನುಡಿ–೭

–ಶ್ರೀ ರಮಣ

ಹೇ ಅರುಣಾಚಲ, ಪ್ರೇಮದಿಂದ ಹುಟ್ಟಿದ ಆನಂದವೇ, ನನಗೆ ಹೇಳತಕ್ಕಂಥದ್ದೇನಿದೆ? ನಿನ್ನ ಇಚ್ಛೆಯೇ ನನ್ನ ಇಚ್ಛೆ ಮತ್ತು ನಿನ್ನ ಇಚ್ಛೆಯೇ ನನ್ನ ಸುಖ."

"ಶ್ರೀ ಅರುಣಾಚಲ ಪತಿಕಂ" ಪದ್ಯ ೨

–ಶ್ರೀ ರಮಣ

ಇಂಥ ಭಕ್ತನನ್ನೇ – ಅವನು ಇದನ್ನು ತಿಳಿದು ಸ್ವೀಕರಿಸಿದ್ದರಿಂದ ಹಿಂದಿನ ಅಧ್ಯಾಯದಲ್ಲಿ ನಮ್ಮ ಶಾಲೆಯ ೪ನೆಯ ವರ್ಗದಲ್ಲಿ ಓದುವ ಅರ್ಹ ವಿದ್ಯಾರ್ಥಿ ಎಂದು ಹೇಳಿದ್ದು. ಇಂಥ ವಿದ್ಯಾರ್ಥಿಗೆ ಮಾತ್ರ ["ಸಂಕಲ್ಪಿಸುವ ಮತ್ತು ಮಾಡುವ ಸ್ವಾತಂತ್ರ್ಯವನ್ನು"] ಬಳಸುವಲ್ಲಿ ಉಂಟಾಗುವ ಮೇಲೆ ಹೇಳಿದ ಎರಡು ತಪ್ಪುಗಳನ್ನು ತಿದ್ದಿಕೊಳ್ಳುವ ಕ್ರಮವನ್ನು ಹೇಳಲು ಸಾಧ್ಯ. ನಿಜವಾಗಿಯೂ ಇಂಥ ಕೆಲವೇ ವಿದ್ಯಾರ್ಥಿಗಳಿಗೆ

–ಅವರು ಅನೇಕ ಜನ್ಮಗಳಲ್ಲಿ ಕರ್ಮಗಳ ಬಗೆಗೆ ತಳೆದ ವೈರಾಗ್ಯದ ಮೂಲಕ ಅವುಗಳ ಫಲಗಳನ್ನು ಅನುಭವಿಸುವುದರಿಂದ ಪರಿಪಕ್ವಗೊಂಡದ್ದರಿಂದ – ದೇವರು ಗುರುವಾಗಿ ಬರುತ್ತಾನೆ! ಮೊಟ್ಟಮೊದಲು ವ್ಯಕ್ತಿಯು ತನ್ನೆದುರಿರುವ ಗುರುವು ತನ್ನಂತೆಯೇ ಮನುಷ್ಯನೆಂದು ತಿಳಿಯುತ್ತಾನೆ. ಆದರೆ ಗುರುವು ಅವನ ಬ್ರಹ್ಮಾತ್ಮವಲ್ಲದೆ ಬೇರೆ ಯಾವುದೂ ಅಲ್ಲವಾದುದರಿಂದ – ಗುರುವಿನ ಬಗೆಗೆ ಏಳುತ್ತಿರುವ ಅಂಥ ಸ್ವಾಭಾವಿಕವೂ ಅಪ್ರಮಿತವೂ ಅದಮ್ಯವೂ ಆದ ಭಕ್ತಿಯು ಪ್ರವಹಿಸುವುದು ಆಶ್ಚರ್ಯವೇನೂ ಅಲ್ಲ.

ಈಗ ಗುರುವು ಅವನು ತನ್ನ "ಇಚ್ಛಿಸುವ ಹಾಗೂ ಹಾಗೆ ಮಾಡುವ ಮೂಲಭೂತ ಸ್ವಾತಂತ್ರ್ಯವನ್ನು" ಹೇಗೆ ನಿರ್ವಹಿಸಬೇಕೆಂಬುದನ್ನು ಅವನಿಗೆ ಉಪದೇಶಿಸುತ್ತಾನೆ. "ನೀನೇ ಆಗಿರುವ ನಿನ್ನ ಸತ್ಯತೆಯನ್ನು ತಿಳಿಯಲು ನಿನ್ನ ಸ್ವಾತಂತ್ರ್ಯವನ್ನು ಬಳಸುವುದೊಂದೇ ಸರಿಯಾದ ಬಳಸುವಿಕೆ. [ನೀನದನ್ನು ತಿಳಿಯಲಾರೆಯಾದರೆ ಅಥವಾ ತಿಳಿಯದಿದ್ದರೆ ಆ ಸ್ವಾತಂತ್ರ್ಯವನ್ನು ದೇವರಿಗೆ ಸಮರ್ಪಿಸು. ಆಗ ದೇವರು ತನ್ನ ಇಷ್ಟ ಬಂದಂತೆ ಅದನ್ನು ನಿನ್ನ ಮೇಲೆ ಪ್ರಯೋಗಿಸುವನು] ಹಾಗೆಂದರೆ, ಅದನ್ನು ಬಳಸುವ ಸರಿಯಾದ ರೀತಿಯನ್ನು ತಿಳಿದುಕೋ ಇಲ್ಲವೆ ಅದನ್ನು ಹೇಗೆ ಬಳಸಬೇಕೆಂಬುದನ್ನರಿತಿರುವ ದೇವರ ಕೈಗೆ ಅದನ್ನೊಪ್ಪಿಸು–ಎಂದರ್ಥ. ಈ ಪ್ರಕಾರ, ಗುರುವು ಶಿಷ್ಯನೆದುರು ಶೋಧ ಮಾರ್ಗವನ್ನಿಡುತ್ತಾನೆ (ಶಿಷ್ಯನಿಗೆ ಆತ್ಮಶೋಧದ ಮಾರ್ಗವನ್ನು ತೋರಿಸುತ್ತಾನೆ) ಆತ್ಮ ಸಮರ್ಪಣಾ ಭಾವವನ್ನು ತಿಳಿಸುತ್ತಾನೆ – ಅರ್ಥಾತ್ ಜ್ಞಾನಮಾರ್ಗವನ್ನು ಮತ್ತು ಭಕ್ತಿಮಾರ್ಗವನ್ನು ವಿವರಿಸುತ್ತಾನೆ.

ಆ ಕಾಲದಿಂದ ಆತ್ಮಶೋಧದ ಅಥವಾ ಆತ್ಮಾರ್ಪಣದ (ಆತ್ಮನಿವೇದನೆಯ) ಮಾರ್ಗವನ್ನು ಹಿಡಿದ ಭಕ್ತನು, ತನ್ನ ಜೀವನದಲ್ಲಿ ಆಗುವುದೆಲ್ಲವೂ ತನ್ನ ಮಾನಸಿಕ ವ್ಯಾಪಾರವನ್ನು ಕಡಿಮೆ ಮಾಡಲು ಮತ್ತು ತನ್ನನ್ನು ಬ್ರಹ್ಮಾತ್ಮೋನ್ಮುಖನನ್ನಾಗಿ ಮಾಡಲು ಅನುಕೂಲಕರ ಮಾತ್ರ, ಎಂದು ತಿಳಿದುಕೊಳ್ಳುತ್ತಾನೆ. ಅಷ್ಟೇ ಅಲ್ಲ– ಇಂದು ಅವನು ಹಿಡಿದಿರುವ ಆಧ್ಯಾತ್ಮಿಕ ಮಾರ್ಗದತ್ತ ತಿರುಗುವುದಕ್ಕಿಂತ ಪೂರ್ವದಲ್ಲಿ ತನಗಾದುದೆಲ್ಲವೂ ದೇವರ ಆಜ್ಞೆಯಂತೆ ಬಂದ ಪ್ರಾರಬ್ಧ ಕರ್ಮಫಲಗಳೆಂದೂ ಅವೆಲ್ಲಾ ತನ್ನ ಮನದ ಚಟುವಟಿಕೆಗಳನ್ನು ಕಡಿಮೆ ಮಾಡಿ ತನ್ನನ್ನು ಬ್ರಹ್ಮಾತ್ಮೋನ್ಮುಖ ಮಾಡಲು ಅನುಕೂಲವಾದವುಗಳಾಗಿದ್ದವೆಂದೂ ತಿಳಿದುಕೊಳ್ಳಲು ಶಕ್ತನಾಗುವನು. ಜೀವನದ ಬಗೆಗಿನ ತನ್ನ ಹೊಸ ದೃಷ್ಟಿಕೋನದತ್ತ ಆಶ್ಚರ್ಯ ಪಡುತ್ತಿರುವ ಶಿಷ್ಯನಿಗೀಗ ಶ್ರೀ ರಮಣೋಕ್ತವಾದ ಈ ವಾತ್ಸಲ್ಯಪೂರ್ಣವಾದ ಮಾತುಗಳು ಮನಸ್ಸಿನ ಮೂಲಕ ಹೊಳೆಯುವುವು : "ಹೊರಗಿನಿಂದ ನಿನ್ನನ್ನು ಒಳಗೆ ಒತ್ತುವ ಮಾತುಗಳಿವು ಎಂದು ತಿಳಿ" ಎಂಬುದಾಗಿ.

ಜೀವನದ ಈ ಹೊಸ ದೃಷ್ಟಿಕೋನವನ್ನು ಅವನು ಪಡೆದ ಕೂಡಲೇ ತನ್ನ ಪ್ರಾರಬ್ಧವನ್ನು ಬದಲಾಯಿಸಬೇಕೆಂದು ತನ್ನ ಗುರುವನ್ನೋ, ದೇವರನ್ನೋ ಪ್ರಾರ್ಥಿಸಲು ಅವನು ನಾಚಿಕೊಳ್ಳುತ್ತಾನೆ. ಏಕೆಂದರೆ, ತನ್ನ ಜೀವನದಲ್ಲಿ ನಡೆಯುತ್ತಿರುವ ಚಟುವಟಿಕೆಗಳೆಲ್ಲವೂ ತನ್ನನ್ನು ಬ್ರಹ್ಮಾತ್ಮೋನ್ಮುಖನನ್ನಾಗಿ ಮಾಡಲೆಂದೇ ನಡೆಯುತ್ತಿರುವಂಥವುಗಳು– ಎಂಬುದನ್ನೀಗ ಅವನು ತಿಳಿದುಕೊಳ್ಳುತ್ತಾನೆ, ಎಂಬುದು ಅವನಿಗೆ ಗೊತ್ತಾಗುತ್ತದೆ. ಅಂಥ ಪಕ್ವ ಶಿಷ್ಯನ ದೃಷ್ಟಿಯಲ್ಲಿ ಪ್ರಾರಬ್ಧವು ಸಂಪೂರ್ಣವಾಗಿ ಇಲ್ಲವಾಗುವುದು ಎಂಬುದು

ಸಂಕ್ಷಿಪ್ತ ತಾತ್ಪರ್ಯ. ಅವನು "ಪ್ರಾರಬ್ಧ" ಎಂಬ ಪದವನ್ನು ಬಳಸನು. "ಅದು ತನ್ನ ದೇವರ ವಾತ್ಸಲ್ಯ ಪೂರ್ಣ ಸಂಕಲ್ಪ ; ಅವನ ಸಂಕಲ್ಪವೇ ನನ್ನ ಸಂತೋಷ, ಸುಖ" ಎಂದು ಹೇಳುವನು. ಈಗ ಆತ್ಮ ಸಮರ್ಪಣವು, ಸಂಪೂರ್ಣವಾಗುತ್ತದೆ. ಜೀವನವೀಗ ಒಂದೇ ಒಂದು ಅಮಿತ ಆನಂದವಾಗಿ ಪರಿವರ್ತಿಸಲ್ಪಟ್ಟಿರುತ್ತದೆ! ಸಂತ ಅಪ್ಪಾರ್ ಹಾಡಿದಂತೆ ಅತಿ ಹೆಚ್ಚಿನ ಚಿತ್ರಹಿಂಸೆ ಕೂಡ.

[[೨](ನನ್ನನ್ನು ಎಸೆದೆಡೆಯಲ್ಲಿ) ನನ್ನೊಡೆಯನ ಪಾದಗಳೆಡೆಯಲ್ಲಿ ನನ್ನನ್ನು ಎಸೆದಾಗ, ವೀಣೆ ಮಧುರ ನಾದವನ್ನು ನುಡಿಯುತ್ತಿದ್ದಾಗ ಮಲಯ ಮಾರುತನ ಸುಖ ಸ್ಪರ್ಶದಲ್ಲಿ ಮಳೆಗಾಲದ (ವಸಂತಕಾಲದ) ಕೆರೆಯ ತಂಪಾದ ಏರಿಯ ಮೇಲೆ ಮಲಗಿಸಿದಂತೆ ನನಗೆನ್ನಿಸಿತು."]

ಹಾಗೆ ಬದಲಾದ ಅವನ ಮನಸ್ಸು ಅಲ್ಲಿಂದ ಮುಂದೆ ಮನಸ್ಸೇ ಅಲ್ಲ. ಅದು ಅವನ ಸ್ವರೂಪವಾದ ಬ್ರಹ್ಮಾತ್ಮವೇ ಆಗಿರುತ್ತದೆ. ಹಿಂದೆ ಮನಸ್ಸೆಂದು ನಾವು ಯಾವುದನ್ನು ಕರೆಯುತ್ತಿದ್ದೆವೋ ಅದೀಗ ನಾಶ ಹೊಂದಿತೆಂದು ನಾವು ಹೇಳಬಹುದು. ಕರ್ತೃತ್ವದೊಡನೆ ಭೋಕ್ತೃತ್ವವೂ ನಾಶ ಹೊಂದಿತೆಂದು ನಾವು ತಿಳಿದುಕೊಳ್ಳಬಲ್ಲವರಾದೆವು. ಅವನ ಈ ದ್ವಿಮುಖಗಳು ಹೀಗೆ ನಾಶ ಹೊಂದಿದ ಬಳಿಕ ಜೀವಿಯು ಸುಮ್ಮನಿರುವುದು "ಸುಮ್ಮನೆ ಇರುವಿಕೆ (ಮೌನಸ್ಥಿತಿ)" ಎಂದೆನ್ನಿಸುತ್ತದೆ. ಇದೇ ನಿಜವಾದ ಗುರೂಪದೇಶ. ಹಾಗೆ ಶಾಂತವಾಗಿರುವುದೇ ದೇವರ ಹಾಗೂ ಗುರುವಿನ ಸೇವೆ. ಹಾಗೆ ಶಾಂತವಾಗಿರುವುದೇ ದೇವರಲ್ಲಿರುವುದು (ದಿವ್ಯ ಜೀವನ)]. ಇದೇ ಮೂಲದ ಸಹಜ ಸ್ಥಿತಿ, ಸ್ವಾಭಾವಿಕ ಸ್ಥಿತಿ, ಸ್ವ ಸ್ವರೂಪಸತ್ತೆ.

ಹಾಗೆ ಸುಮ್ಮನಿರಲು ಸಂಕಲ್ಪಿಸುವುದು–ಅಂದರೆ–ಹಾಗೆ ಶಾಂತಸ್ಥಿತಿಯಲ್ಲಿರಲು ಬಯಸುವುದು ಅಥವಾ ಆ ಶಾಂತಸ್ಥಿತಿಯಲ್ಲಿರಲು ಬಯಸದಿರುವುದು–ಅಂದರೆ–ಕರ್ಮ ಮಾಡುವುದು–ಎಂಬುದು ಮನುಷ್ಯನ ಸಂಕಲ್ಪ ಶಕ್ತಿಗೆ ಅಧೀನ. ಏಕೆಂದರೆ "ಸಂಕಲ್ಪಿಸಲು ಮತ್ತು ಮಾಡಲು ಪೂರ್ಣ ಸ್ವಾತಂತ್ರ್ಯವಿರುವುದು ಮಾನವನ ಸ್ವರೂಪವೇ ಸರಿ– (ಪರ) ಬ್ರಹ್ಮವೇ ಸರಿ–ಪರಮಾತ್ಮವೇ ಸರಿ.

ಕರ್ತೃತ್ವನಾಶವೇ ಭೋಕ್ತೃತ್ವನಾಶ ಎಂದು ಮೇಲೆ ಹೇಳಲಾಯ್ತು. ನಮ್ಮ ಇದೇ ಪೂರ್ಣ ಸ್ವಾತಂತ್ರ್ಯ ಎಂಬ ಶಕ್ತಿಯು ಕರ್ತೃ ಎಂಬ ಪ್ರತ್ಯೇಕ ಪದಾರ್ಥವನ್ನು ಸೃಷ್ಟಿಸಿದ್ದು ಅರ್ಥಾತ್ ಕಲ್ಪಿಸಿದ್ದು (ಊಹಿಸಿದ್ದು). ಈಗ ಅದು ತದ್ವಿರುದ್ಧವಾಗಿ ತೀಕ್ಷ್ಣ ಇಚ್ಛಾಶಕ್ತಿಯಾಗಿಯೂ ಕ್ರಿಯಾಶಕ್ತಿಯಾಗಿಯೂ ಶಾಂತಿಯಿಂದಿರಲು ಪ್ರೇರಿಸುತ್ತದೆ. ಈ ಅನ್ಯಾದೃಶ ಶಕ್ತಿಯು –ಉತ್ಕ್ರಿಯ ಶಾಂತಿಯು–ಕ್ಷುದ್ರವೂ ಅಸತ್ತೂ ಕಾಲ್ಪನಿಕವೂ ಆದ ಮತ್ತು ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಬಳಸಲಾದ –ಇಚ್ಛಾ ಕ್ರಿಯಾಶಕ್ತಿಯನ್ನು ನಾಶ ಮಾಡುತ್ತದೆ. ಈ ಹಂತದಲ್ಲಿ ಬ್ರಹ್ಮಾತ್ಮವನ್ನು ಬ್ರಹ್ಮಾತ್ಮದಿಂದ ಬ್ರಹ್ಮಾತ್ಮದಲ್ಲಿ ಬಹುವಾಗಿ ನೋಡುತ್ತಿರುವ ಮೇಲೆ ಹೇಳಿದ ಕಲ್ಪನಾಶಕ್ತಿಯು ನಿಂತು ಹೋಗುತ್ತದೆ. ಹೀಗೆ ಏಕವನ್ನು ಬಹುವಾಗಿ ನೋಡುವ ಅಸ್ವಾಭಾವಿಕ ಅಧ್ಯಾರೋಪವು ಪೂರ್ವೋಕ್ತ

೩೨. ರಾಜ ತನ್ನನ್ನು ಕೊಲ್ಲಲೆಂದು ಯಾವ ಒಲೆಯೊಳಗೆ ಎಸೆದನೋ ಆ ಒಲೆಯ ಬಾಗಿಲು ತೆರೆದಾಗ ಸಂತ ಅಪ್ಪಾರ್ ಈ ಪದ್ಯವನ್ನು ಹಾಡಿದರು.

ಕಲ್ಪನಾಶಕ್ತಿಯಿಂದಾದದ್ದೆಂದು ತಾತ್ಪರ್ಯ. ಅದು ನಿಂತು ಹೋದ ಮೇಲೆ, ಕರ್ತೃತ್ವ ಹೊಂದಿ ಎಲ್ಲಿ ವ್ಯಕ್ತಿಯು (ಜೀವಿಯು) ತೋರಿದನೋ ಎಲ್ಲಿ ಅವನ ಹುಟ್ಟು ಸಾವುಗಳು ಕಂಡವೋ ಆ ಸ್ವಪ್ನದ ಅಧಿಕರಣವಾದ ಅವಿದ್ಯಾನಿದ್ರೆಯು ಆ ಮುಮುಕ್ಷುವಿಗೆ ಬ್ರಹ್ಮಾತ್ಮಜ್ಞಾನವಾದ ಕೂಡಲೇ ಅದೃಶ್ಯವಾಗುವುದು. ಉಕ್ತಜ್ಞಾನವು ಮುಮುಕ್ಷುವಿನ ಸ್ವಸ್ವರೂಪದ ನಿಜವಾದ ಜಾಗರ. ಅದು ಯಾವಾಗಲೂ ಅದ್ವಿತೀಯ ಏಕವಾಗಿ (ಏಕಮೇವಾದ್ವಿತೀಯವಾಗಿ) ಪ್ರಕಾಶಿಸುತ್ತಿರುತ್ತದೆ. ಅದಕ್ಕೆ ಇತರತಾಜ್ಞಾನವಿಲ್ಲ ; ಅದು ಪೂರ್ಣಾತ್ಮ. ಹೀಗೆ ಮುಮುಕ್ಷುವಿನ ಕರ್ತೃತ್ವ ನಾಶವಾದೊಡನೆಯೇ ಅಲ್ಲಿ ಭೋಕ್ತೃತ್ವವುಳ್ಳ ಯಾರಿರುತ್ತಾರೆ? ಆದುದರಿಂದ ಕೃತಕರ್ಮಗಳ ಸದಸತ್‌ಫಲಗಳಿಂದೊಡಗೂಡಿದ (ಫಲಬೀಜಗಳಿಂದ, ಫಲದಾದೃಷ್ಟದಿಂದ ಕೂಡಿದ)] ಸಂಚಿತ ರಾಶಿಯು ಎಚ್ಚತ್ತ ಕೂಡಲೇ ಸ್ವಪ್ನದಲ್ಲಿದ್ದ ಸಾಲು ಸಂಪಾದನೆಗಳೆರಡೂ ಅದೃಶ್ಯವಾಗುವಂತೆ – ಅದೃಶ್ಯವಾಗುವುದು. "ಕೈವಲ್ಯನವನೀತ" ಎಂಬ ಗ್ರಂಥದಲ್ಲಿ ಹೇಳಿರುವುದು ಹೀಗೆ :

> **"ಮಹಾಪ್ರಲಯಾಗ್ನಿ ಬಂದ ಅವಧಿಯಲ್ಲಿ ಹತ್ತಿಯ ಹೊರೆಯೊಂದು ಸುಟ್ಟು ಬೂದಿಯಾಗಿ ಹೋದಂತೆ ವಿವಿಧ ರೂಪದ ಅಸಂಖ್ಯಾತ ಜನ್ಮದ ಸಂಚಿತವು ಜ್ಞಾನಾಗ್ನಿಯಿಂದ ಸಂಪೂರ್ಣವಾಗಿ ಸುಟ್ಟು ಬೂದಿಯಾಗಿ ಹೋಗುವುದು."**
>
> **– "ಕೈವಲ್ಯ ನವನೀತಂ"–ಅಧ್ಯಾಯ–೧–ಪದ್ಯ ೯೬**

ಮತ್ತು ಭಗವದ್ಗೀತೆಯಲ್ಲಿ–

> **ಜ್ಞಾನಾಗ್ನಿಯು ಎಲ್ಲ ಕರ್ಮಗಳನ್ನೂ ಸುಟ್ಟು ಬೂದಿಮಾಡುತ್ತದೆ**
>
> **(ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮ ಸಾತ್ ಕುರುತೇಽರ್ಜುನ)**
>
> **ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮ ಸಾತ್ ಕುರುತೇ ತಥಾ"**
>
> **– "ಭಗವದ್ಗೀತೆ"–ಅಧ್ಯಾಯ–೪–ನುಡಿ–೩೬**

ಕರ್ತೃತ್ವನಾಶವಾದ ಮೇಲೆ ಆಗಾಮಿ ಮತ್ತೆ ಉಂಟಾಗಲಾರದೆಂದು ಮೊದಲೇ ಹೇಳಲಾಗಿದೆ. ಈವರೆಗೆ ಪ್ರಾಶ್ನಿಕರ ಸಮಾಧಾನಕ್ಕಾಗಿ ಶ್ರುತಿಗಳಲ್ಲಿ – "ಸಂಚಿತ–ಆಗಾಮಿಗಳು ನಾಶವಾದ ಮೇಲೆ ಪ್ರಾರಬ್ಧವು ಉಳಿದಿರುತ್ತದೆ ; ಅದನ್ನು ಮುಮುಕ್ಷು (ಜೀವನ್ಮುಕ್ತನುಕೂಡಾ) ಅನುಭವಿಸಲೇ ಬೇಕು ; ಅದು ಅವನ ದೇಹಾವಸಾನದ ಅನಂತರವೇ ನಷ್ಟವಾಗುವುದು" – ಎಂದು ಹೇಳಲಾಯಿತು. ಆದರೆ ಇದು ಹರಿತವಾದ ವಿವೇಕ (ನಿತ್ಯಾನಿತ್ಯವಸ್ತುವಿವೇಕ) ಉಳ್ಳ ಪೂರ್ಣ ಪರಿಪಕ್ವ ಮುಮುಕ್ಷುಗಳಿಗಾಗಿ ಹೇಳಿದ್ದಲ್ಲ. ಏಕೆಂದರೆ, ಇಲ್ಲಿ ಅವರು ಸ್ವಲ್ಪ ವಿಚಾರ ಮಾಡಬೇಕೆಂಬ ನಿರೀಕ್ಷೆಯಿದೆ ಅಂದರೆ, ಕರ್ತೃತ್ವ–ಭೋಕ್ತೃತ್ವಗಳು ಜೀವಿಯ ಎರಡು ಮುಖಗಳಾಗಿರುವುದರಿಂದ, ವ್ಯಕ್ತಿಯು (ನಾಣ್ಯವೊಂದರ ಎರಡು ಮುಖಗಳಂತೆ) ತದ್ಧರ್ಮಯುಕ್ತನಾಗಿರುವಾಗ, ಆತ್ಮಜ್ಞಾನವು ಉದಯವಾಗಿ ಆ ಮೂಲಕ ಕರ್ತೃತ್ವವು ನಾಶವಾದ ಅನಂತರ (ಜೀವಿಗೆ) ಭೋಕ್ತೃತ್ವ ಹೇಗೆ ಉಳಿಯುತ್ತದೆ? ಅದೆಂದೂ ಉಳಿಯಲಾರದು – ಖಂಡಿತವಾಗಿ ಉಳಿಯಲಾರದು ! ಭೋಕ್ತೃತ್ವ ಹೀಗೆ ಕಳೆದು ಹೋದ ಮೇಲೆ ಪ್ರಾರಬ್ಧವನ್ನು ಅನುಭವಿಸಲು ಯಾರಿರುತ್ತಾರೆ ಮತ್ತು ಹೇಗೆ ಅದನ್ನು ಯಾರಾದರೂ ಅನುಭವಿಸುತ್ತಾರೆ? ಯಾರೂ ಇರಲಾರರು! ಭೋಕ್ತೃವಿಲ್ಲದುದರಿಂದ

ಪ್ರಾರಬ್ಧವು ಶೂನ್ಯಸಮವಾಗುವುದಿಲ್ಲವೇ? ಆದುದರಿಂದ ಜ್ಞಾನಿಗೆ ನಿಜವಾಗಿ ಮೂರು ವಿಧದ ಕರ್ಮಗಳೂ ಇಲ್ಲ. ಆದರೆ ಅಜ್ಞಾನಿಯೂ ಅಪಕ್ವನೂ ಆದವನು ಜ್ಞಾನಿಯನ್ನು ಒಂದು ಶರೀರವೆಂದು ಗ್ರಹಿಸುವುದರಿಂದ – ಅವನಿಗೆ ಹಾಗೆ ಎಣಿಸದೆ ಇರಲು ಸಾಧ್ಯವಾಗದಿರುವುದರಿಂದ – ಶ್ರುತಿಗಳು ಅವನಿಗೆ ಜ್ಞಾನಿಗೆ ಪ್ರಾರಬ್ಧವೊಂದೇ ಇರುತ್ತದೆ ಎಂದು ಹೇಳಬೇಕಾಯಿತು. ಅದರಿಂದಲೇ ಪರಮೋಚ್ಚ ಪದಾರ್ಥ ಸ್ವರೂಪನು (ಸಚ್ಚಿದಾನಂದನು) ಭಿನ್ನ ಬಿನ್ನ ಗುರುಗಳ ರೂಪವನ್ನು ತಾಳಿ ಬೇರೆ ಬೇರೆ ಕಾಲಗಳಲ್ಲಿ ನಿಯಮಗಳನ್ನು ರಚಿಸುತ್ತಾನೆ–ಆ ನಿಯಮಗಳೇ ಶ್ರುತಿಗಳು – ಈಗ ಆತನು ಶ್ರೀ ರಮಣರ ರೂಪವನ್ನು ತಾಳಿದ್ದಾನೆ. ಆ ರೂಪದಿಂದ ಆತನೀಗ ಬಹಳ ಪರಿಪಕ್ವಾತ್ಮರಿಗಾಗಿ ಶ್ರುತಿಗಳಿಗೆ ಈ ಕೆಳಗಿನ ತಿದ್ದುಪಡಿಯನ್ನು ಕೊಡುತ್ತಾನೆ. ಆ ರಮಣಾತ್ಮಕ ಗುರು ಬೇರೆ ಬೇರೆ ಕಾಲಗಳಲ್ಲಿ ಉಕ್ತ ತಿದ್ದುಪಡಿಯನ್ನು ಮಾಡಿದ್ದಾನೆ :

> **"ಸಂಚಿತ ಮತ್ತು ಆಗಾಮಿಗಳು ಜ್ಞಾನಿಗೆ ಅಂಟುವುದಿಲ್ಲ–ಪ್ರಾರಬ್ಧವು (ಅವನು ಅನುಭವಿಸಲೆಂದು) ಇದ್ದೇ ಇರುತ್ತದೆ – ಎಂದು ಹೇಳುವುದು ಇತರರ ಪ್ರಶ್ನೆಗಳಿಗೆ ಕೊಟ್ಟ ಹಾರಿಕೆಯ ಉತ್ತರ ಮಾತ್ರ. ಗಂಡನು ಸತ್ತಾಗ ಹೇಗೆ ಅವನ ಯಾವ ಹೆಂಡಿರೂ ಅವಿಧವೆಯರಾಗಿ ಇರುವುದಿಲ್ಲವೋ ಹಾಗೇ ಮೂರು ಕರ್ಮಗಳೂ ಕರ್ತೃವಾದ ಅಹಂಕಾರ ಸತ್ತ ಕೂಡಲೇ ಅಸ್ತಿತ್ವದಲ್ಲಿ ಇರುವುದಿಲ್ಲ. ಹೀಗೆ ನೀನು ತಿಳಿದುಕೊಳ್ಳತಕ್ಕದ್ದು."**
>
> **– "ಉಳ್ಳದು ನಾರ್ಪ.ದು"–ಪರಿಶಿಷ್ಟ, ಪದ್ಯ ೩೩**
>
> **–ಶ್ರೀ ರಮಣ**

ಭಕ್ತಿಮಾರ್ಗದಲ್ಲಿರುವ ಮುಮುಕ್ಷುವು ಒಬ್ಬ ದೇವರು ಅಥವಾ ಗುರು ಇದ್ದಾನೆಯೆಂದೂ ಅವನು ತನ್ನನ್ನು ರಕ್ಷಿಸುತ್ತಾನೆಯೆಂದೂ ಯಾವುದು ತನಗೆ ಒಳಿತೋ ಅದನ್ನವನು ತನಗೆ ಮಾಡುತ್ತಾನೆಯೆಂಬ ಪ್ರತ್ಯಾಶೆಯಿಂದ ನಂಬಿರುತ್ತಾನೆ. ಅಂಥ ಮುಮುಕ್ಷುವು "ಸಂಕಲ್ಪಿಸುವ ಮತ್ತು ಮಾಡುವ ತನ್ನ ಮೂಲ ಸ್ವಾತಂತ್ರ್ಯವನ್ನು" ಬಳಸಿಕೊಂಡು ತನ್ನ ಕರ್ತೃತ್ವವನ್ನು ದೇವರಿಗೆ ಯಾ ಗುರುವಿಗೆ ಸಮರ್ಪಿಸುತ್ತಾನೆ. ಆದುದರಿಂದ ಅವನು ಆ ಮುಂದೆ ಪ್ರಯತ್ನ ಮಾಡಬೇಕಾಗಿಲ್ಲ. (ಆಗಾಮಿ ಕರ್ಮವನ್ನು ಆಚರಿಸಬೇಕಾಗಿಲ್ಲ) ಮತ್ತು ಅವನ್ನು ಶಾಂತನಾಗಿ ಇರುತ್ತಾನೆ.]

ದೇವರಲ್ಲಿ ಯಾ ಗುರುವಿನಲ್ಲಿ ನಂಬಿಗೆ ಇಲ್ಲದ ಇನ್ನೊಂದು ಬಗೆಯ ಮುಮುಕ್ಷುಗಳಿದ್ದಾರೆ ; ಅವರು ತಮ್ಮ ಯತ್ನಗಳನ್ನೂ ಚಟುವಟಿಕೆಗಳನ್ನೂ ಆಳವಾಗಿ ಸೂಕ್ಷ್ಮಾವಲೋಕನ ಮಾಡುತ್ತಾರೆ. ಆ ಸಮಯದಲ್ಲಿ ಅವರು ಜೀವನದ ಸಂತಸಗಳನ್ನೂ ಅಗ್ನಿಪರೀಕ್ಷೆಗಳನ್ನೂ ಅನುಭವಿಸುತ್ತಿರುತ್ತಾರೆ ಮತ್ತು ಅಂತ್ಯದಲ್ಲಿ ಅವರು ತಮ್ಮ "ಸಂಕಲ್ಪಿಸುವ ಮತ್ತು ಮಾಡುವ" ಮೂಲ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸುವುದನ್ನು ಅರಿತುಕೊಳ್ಳುತ್ತಾರೆ. ತಮ್ಮ "ಸಂಕಲ್ಪಿಸುವ ಮತ್ತು ಮಾಡುವ" ಮೂಲ ಸ್ವಾತಂತ್ರ್ಯದ ಮೂಲಕ ಅವರು ಪ್ರಥಮ, ದ್ವಿತೀಯ ಪೌರುಷೇಯ ವಸ್ತುಗಳ ಬಗೆಗಿನ ಅವಧಾನವನ್ನು ಹಿಂತೆಗೆದುಕೊಂಡು ಬ್ರಹ್ಮಾತ್ಮೋನ್ಮುಖರಾಗಿ ತಮ್ಮ ಶೋಧದಲ್ಲಿ (ಕಾಲ್ಪನಿಕ) ಅನವಧಾನಕ್ಕೆ ಎಡೆಗೊಡದೆ ಬ್ರಹ್ಮಾತ್ಮದ ಸತ್ಯವನ್ನು ಪುನಃ ಪಡೆಯಲು ಪ್ರಯತ್ನಿಸುತ್ತಾರೆ –ಆ ಸತ್ಯವೆಂದರೆ ನೈಷ್ಕರ್ಮ್ಯಸಿದ್ಧಿ. [ಹೀಗೆ ಅವರು ಶಾಂತರಾಗಿ ಇರುತ್ತಾರೆ.]

ದೇವರಿಗೆ ಸರ್ವ ಸಮರ್ಪಣವನ್ನು ಸಂಪೂರ್ಣವಾಗಿ ಮಾಡುವುದನ್ನು ಯಾ ಕಾಲ್ಪನಿಕ ಸ್ವರೂಪದ ಅನವಧಾನವನ್ನು ಆತ್ಮಶೋಧದ ಮೂಲಕ ಪರಿಹರಿಸಿಕೊಳ್ಳುವುದನ್ನು ಬಯಸುವ ಸ್ವಾತಂತ್ರ್ಯವೂ ಅದರಂತೆ ನಡೆದುಕೊಳ್ಳುವ ಸ್ವಾತಂತ್ರ್ಯವೂ ವ್ಯಕ್ತಿಗಿದೆ. ಅದಕ್ಕೆಂದೂ ಭಂಗ (ಬಾಧೆ) ಉಂಟಾಗದು ; ಏಕೆಂದರೆ, ಅದು ಬ್ರಹ್ಮನದೇ ಆದ ಸ್ವರೂಪ (ಸ್ವಭಾವ). ಈ ಸ್ವಾತಂತ್ರ್ಯ ಮಾತ್ರ ಇಲ್ಲದೆ ಹೋಗಿದ್ದರೆ ಮೋಕ್ಷ ಯಾ ಬಿಡುಗಡೆ ಯಾ ದುಃಖದಿಂದ ಸಂಪೂರ್ಣವಾಗಿ ದೂರ ಇರುವುದು ಎಂದೂ ಖಂಡಿತವಾಗಿ ಸಾಧ್ಯವಾಗುತ್ತಿರಲಿಲ್ಲ ಮತ್ತು ಅನಾದಿಕಾಲದಿಂದ ಬಂದ ಎಲ್ಲ ಗುರುಗಳೂ ಶ್ರುತಿಗಳೂ ಅನವಶ್ಯಕ ಮತ್ತು ವ್ಯರ್ಥ ಎನ್ನಿಸಿಬಿಡುತ್ತಿದ್ದವು !

ಪ್ರಾರಬ್ಧದಿಂದ ಮಾತ್ರ ಜ್ಞಾನವು ಲಭ್ಯ ಎಂದು ನಂಬಿದ ಕೆಲವರು ಸೋಮಾರಿಗಳಾಗಿ ಬದುಕಿರುತ್ತಾರೆ. ಅಂದರೆ ಜ್ಞಾನವನ್ನು ಪಡೆಯಲು ಕೂಡಾ ಅವರು ಬಯಸದೆ ಇರುತ್ತಾರೆ. ಅಂಥವರು ಜ್ಞಾನಸಾಧನೆಯ ಬಗೆಗಿನ ತಮ್ಮ ಬಯಕೆ ಹಾಗೂ ಯತ್ನಗಳತ್ತ ಮಾತ್ರ ಸೋಮಾರಿತನವನ್ನು ತೋರಿಸುತ್ತಾರೆ ಮತ್ತು ಪ್ರಾರಬ್ಧದ ಮೇಲೆ ಎಲ್ಲಾ ತಪ್ಪನ್ನು ಹೊರಿಸಿ ಅದರ ಅನುಗ್ರಹದ ವಶವರ್ತಿಗಳಾಗಿ ಬದುಕಿರುತ್ತಾರೆ. ಆದರೆ ಅದೇ ಕಾಲದಲ್ಲಿ ಅವರು ತಮ್ಮ ಪ್ರಾಪಂಚಿಕ ಚಟುವಟಿಕೆಗಳ ಬಗೆಗೆ ಆಲಸ್ಯವನ್ನೆಂದೂ ತೋರಿಸುವುದಿಲ್ಲ ; ಅಂದರೆ – ಪ್ರಾರಬ್ಧದ ಕಾರ್ಯವನ್ನು ತಡೆಯಲು ಯತ್ನಿಸುವುದರಲ್ಲಿ ಅವರು ತಮ್ಮ ಕಠಿನ ಪರಿಸ್ಥಿತಿಯನ್ನು ಎದುರಿಸುವ ಧೈರ್ಯವನ್ನು ತೋರಿಸದೆ ಇರುವುದಿಲ್ಲ. (ಪ್ರಾರಬ್ಧದಿಂದ ಬರುವ ದುಃಖಗಳನ್ನು ಕಡಿಮೆ ಮಾಡಿಕೊಳ್ಳುವುದರಲ್ಲಿ ಮತ್ತು ಸುಖವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಸಾಹಸ ತೋರದೆ ಇರರು.) ಆದರೆ ಪ್ರಾರಬ್ಧಕ್ಕೆ ಯಾರೂ ಎಂದೂ ಅಡ್ಡಿಯೊಡ್ಡಲಾರರು ಯಾ ಬದಲಾಯಿಸಲಾರರು. ಅದರ ನಿಷ್ಕೃಷ್ಟ ಪರಿಣಾಮವು ಶೂನ್ಯ. ತಾವು ಮಾಡಬೇಕಾಗಿಲ್ಲದುದನ್ನು ಮಾಡಬಾರದುದನ್ನೂ ಮಾಡುವುದರಲ್ಲಿ ಬಹಳ ಧೈರ್ಯ ಮಾಡುವವರು ತಾವು ಮಾಡಬೇಕಾದುದನ್ನು ಮಾಡುವುದರಲ್ಲಿ ಸೋಮಾರಿಗಳಾಗಿರುತ್ತಾರೆ. ಆತ್ಮಾವಧಾನದಿಂದ ಕರ್ತೃತ್ವವಿನಾಶ ಮಾಡಲು ಪ್ರಯತ್ನಿಸುವುದು ಅತ್ಯಗತ್ಯವಾದದ್ದು. ಅದನ್ನು ಮಾಡದಿರುವುದು ಅಜ್ಞಾನ ಪರ್ವತದ ಉನ್ನತ ಶಿಖರ! ಆದುದರಿಂದ ದೇವರಲ್ಲಿ ನಂಬಿಗೆಯಿದ್ದವರು ತಮ್ಮ ಕರ್ತೃತ್ವವನ್ನು ಅವನಿಗೆ ಅರ್ಪಿಸುವುದರಲ್ಲಿ ಧೈರ್ಯ ತಾಳಬೇಕು; ಮಿಕ್ಕವರು ಆತ್ಮಾವಧಾನಕ್ಕೆ ಧೈರ್ಯ ಮಾಡಬೇಕು. "ಸಂಕಲ್ಪಿಸುವ ಮತ್ತು ಮಾಡುವ ಸ್ವಾತಂತ್ರ್ಯದ" ಸರಿಯಾದ ಬಳಕೆ ಎಂದರೆ ಇದೊಂದೇ ಆಗಿದೆ.

ಆದರೆ ನಮ್ಮಲ್ಲಿಯ ಕೆಲವರು ಕೇಳಬಹುದು. "ತಿಳಿದುಕೊಳ್ಳುವ ಪರಿಮಿತ ಶಕ್ತಿಯಿಂದ (ಅಲ್ಪಚಿಚ್ಛಕ್ತಿಯಿಂದ) ಕೂಡಿದ ವ್ಯಕ್ತಿಯೆಂಬ, ಸತ್ಯಶಕ್ತಿಯ ಕೇವಲ ಕಾಲ್ಪನಿಕ ಪ್ರತಿಬಿಂಬ (ವಿಪ್ರತಿಬಿಂಬ)ದಿಂದ –ಆ ಸತ್ಯವು ಅಖಂಡ ಚಿಚ್ಛಕ್ತಿಯಾಗಿರುವುದರಿಂದ – ಅದರ ಪೂರ್ಣತೆಯನ್ನು ಪಡೆಯುವುದು ಅಸಾಧ್ಯ. ಆ ಸತ್ಯವು ಅಪರಿಮಿತ ಜ್ಞಾನ, ಅದೇ ದೇವರು, ಅದೇ ಗುರು. ಆದುದರಿಂದ ಅದರ ಶಕ್ತಿಯ ಅನುಗ್ರಹ ಅವಶ್ಯಕವಲ್ಲವೇ?" ಹೌದು ; ನಿಜವಾಗಿಯೂ ಅದು ಅವಶ್ಯಕ. ಏಕೆಂದರೆ, ಸಹಾಯವು ಅವಶ್ಯಕ. ದೇವರಲ್ಲಿ ನಂಬಿಗೆಯಿದ್ದವರಿಗೆ ಅದು ಅವರ "ನಾನುತನ"ವನ್ನು ಸಮರ್ಪಿಸುವ ಯತ್ನಗಳಲ್ಲಿ, ಹಾಗೆ ಸಮರ್ಪಿಸಲು ಅಪಾರ ಶಕ್ತಿಯನ್ನು ವರವಾಗಿ ಕೊಡುತ್ತದೆ (ವರದಾನ ಮಾಡುತ್ತದೆ). "ದೇವರತ್ತ ಒಂದು ಹೆಜ್ಜೆಯನ್ನಿಡು ; ಆತನು ಹತ್ತು ಹೆಜ್ಜೆಗಳನ್ನು ನಿನ್ನತ್ತ ಇಡುವನು"

ಎಂಬಂಥ ಗಾದೆಗೆ ಇದೇ ಅರ್ಥ. ದೇವರಲ್ಲಿ ನಂಬಿಗೆ ಇಲ್ಲದಿದ್ದರೂ ಗುರುವಿನಲ್ಲಿ ಶ್ರದ್ಧೆ ಇಲ್ಲವಾದರೂ ಒಬ್ಬ ಮುಮುಕ್ಷುವು (ತನ್ನ ಅಹಂಕಾರ ವಿನಾಶನ ಪ್ರಯತ್ನದಲ್ಲಿ) ತನ್ನ ಸತ್ಯಸ್ವರೂಪವಾದ ಬ್ರಹ್ಮಾತ್ಮ ಶೋಧಕ್ಕಾಗಿ ಉತ್ಸಾಹದಿಂದ ತೀಕ್ಷ್ಣ ಪ್ರಯತ್ನ ಮಾಡುತ್ತ ಹೋದರೆ ಅವನ ಬ್ರಹ್ಮಾತ್ಮವೇ ಗುರುಪಟ್ಟದಲ್ಲಿ ಕುಳಿತು ಅವನಿಗೆ ಒಳಗಿನಿಂದಲೂ ಹೊರಗಿನಿಂದಲೂ ನೆರವನ್ನು ಕೊಡುತ್ತದೆ. ಅದು ತಿಳುವಳಿಕೆಯ ಸ್ಪಷ್ಟತೆಯ ರೂಪದಲ್ಲಿ ಪ್ರಕಾಶಿಸುತ್ತದೆ. ಆ ಸ್ಪಷ್ಟತೆಯು ಅವನ ಜೀವನದಲ್ಲಿಯ ಹೊರ ಘಟನೆಗಳ ಮೂಲಕ ಬಾಹ್ಯೋನ್ಮುಖ ಪ್ರಜ್ಞೆಯೆಲ್ಲವೂ ದುಃಖವಾಗಿದೆ ಎಂಬ ತಿಳಿವಳಿಕೆಯನ್ನು ಅವನಿಗೆ ಕೊಡುತ್ತದೆ. ಅದು ಅವನೊಳಗಿನ ಆನಂದ ರೂಪದಿಂದ ಹೊಳೆಯುತ್ತದೆ ಮತ್ತು ಅವನನ್ನು ಅಂತರ್ಮುಖನನ್ನಾಗಿ ತನ್ನತ್ತ ತಿರುಗುವಂತೆ ಮಾಡುತ್ತದೆ ಮತ್ತು "ಈ ಆನಂದವೇ ನನ್ನ ನೈಜಸ್ಥಿತಿ" ಎಂದು ಅವನು ತಿಳಿದುಕೊಳ್ಳುವಂತೆ ಮಾಡುತ್ತದೆ. ಹೀಗೆ ಅದು ಅವನನ್ನು ಸುಮ್ಮನೆ ಇರುವ ಇರವಿನತ್ತ ಸೆಳೆದುಕೊಳ್ಳುತ್ತದೆ. ಈ ಪ್ರಕಾರ, ಗುರುವಿನ ಅನುಗ್ರಹವು (ಯಾ ದೇವರ) ಒಳಹೊರಗುಗಳಿಂದ ಅಂಥವನಿಗೂ (ಗುರುದೇವಾದಿಗಳಲ್ಲಿ ಶ್ರದ್ಧೆಯಿಲ್ಲದವನಿಗೂ) ನೆರವನ್ನೀಯುತ್ತದೆ.

> **"ನಿಜವಾಗಿಯೂ ಆತ್ಮವು ಸರ್ವೋಚ್ಚ ತತ್ವ (ಸತ್ಯವಸ್ತು). ಓ ಅರುಣಾಚಲ, ನೀನೇ ಇದನ್ನು ನನ್ನೆದುರು ತೆರೆದಿಡು."**
>
> **–ಶ್ರೀ ಅರುಣಾಚಲ ಅಕ್ಷರಮಣಮಾಲೈ ಪದ್ಯ೪೩**
>
> **–ಶ್ರೀ ರಮಣ**

ಆದುದರಿಂದ ಮುಮುಕ್ಷುಗಳಾದ ಆ ಇಬ್ಬರಲ್ಲಿ ಯಾರೂ ಪರಮಾತ್ಮನ ಅನುಗ್ರಹವು ಬಹಳ ಅಪೂರ್ವ ಎಂದು ತೊಂದರೆ ಪಡುವುದು ಬೇಡ. ಸತ್ಯ ಹೇಳುವುದಾದರೆ ಪರಮಾನುಗ್ರಹವು ಯಾವಾಗಲೂ ಹರಿದು ಬರಲು ಸಿದ್ಧವಾಗಿದೆ. ಅದು ಯಾವಾಗಲೂ ಹರಿಯುತ್ತಿರುತ್ತದೆ. ಈ ಅನಾವರಣವು ಯಾವಾಗಲೂ ಸಾಧ್ಯ ಮತ್ತು ಅನುಗ್ರಹದಿಂದ ಮಾತ್ರ ಆಗತಕ್ಕಂಥದು. ಪ್ರಾರಬ್ಧಾನುಸಾರವಾಗಿ ಸುಖ ದುಃಖಗಳು ಬಂದಾವು. ಅವುಗಳಿಂದ ಚಲಿತನಾಗದಿರುವ ಕೇಂದ್ರ ಸ್ಥಲದಲ್ಲಿ ಮುಮುಕ್ಷುವು ಯಾವಾಗಲೂ ಇರಬಲ್ಲ ಸ್ವಾತಂತ್ರ್ಯವುಳ್ಳವನಾಗಿದ್ದಾನೆ. ಏಕೆಂದರೆ, ಇದಕ್ಕೆ ಮಾತ್ರ ಅವನಿಗೆ ಸ್ವಾತಂತ್ರ್ಯವಿದೆ. ಪ್ರಾರಬ್ಧವು ಕಾರ್ಯಕ್ಕೆ ಬರುವುದನ್ನು ಅಡ್ಡಿ ಮಾಡುವುದಕ್ಕೆ ಅವನಿಗೆ ಸ್ವಾತಂತ್ರ್ಯವಿಲ್ಲ. ಸುಮ್ಮನಿರಲು ಯತ್ನಿಸುವುದರಲ್ಲಿ ಸಂಕಲ್ಪಿಸಲು ಮತ್ತು ಅದರಂತೆ ನಡೆಯಲು ಇರುವ ಸ್ವಾತಂತ್ರ್ಯವನ್ನು ಅನ್ವಯಿಸಿದಾಗ ಕರ್ತೃತ್ವವು ನಾಶ ಹೊಂದುತ್ತದೆ. ಮೂರು ಕರ್ಮಗಳನ್ನು ಅನುಭವಿಸಲು ಬೇಕಾಗಿರುವ ಭೋಕ್ತೃತ್ವವೂ ಅದರೊಟ್ಟಿಗೇ ನಾಶ ಹೊಂದುತ್ತದೆ. ಈ ಸ್ವಾತಂತ್ರ್ಯದಿಂದ ಮಾತ್ರ ನಾವು ಗುರಿಯನ್ನು ತಲುಪಬಲ್ಲೆವು. ಈ ಸ್ವಾತಂತ್ರ್ಯವಿಲ್ಲದಿದ್ದರೆ ನಮಗೆ ಪ್ರತ್ಯಾಶೆಯೇ ಇರುತ್ತಿರಲಿಲ್ಲ. ಅನುಗ್ರಹವೇ ಆದ ಈ ಸ್ವಾತಂತ್ರ್ಯವು ಕರ್ಮದಿಂದ ಮುಕ್ತರಾಗಲು ನಾವು ಹೋಗಬೇಕಾದ ಮಾರ್ಗವನ್ನು ರಚಿಸಿಕೊಡುತ್ತದೆ. ಇದೇ ಕರ್ಮಗಳ ರಹಸ್ಯ. ನಾವು ಹೀಗೆ ತಿಳಿದುಕೊಳ್ಳಬೇಕು!

ಶ್ರೀ ರಮಣಾರ್ಪಣಮಸ್ತು

ಪರಿಶಿಷ್ಟ – ೧

ಸ್ವಪ್ರಯತ್ನ (ವೈಯಕ್ತಿಕ–ಯತ್ನ)

ನಮ್ಮ ವೈಯಕ್ತಿಕ ಪ್ರಯತ್ನವು ಎರಡು ಬಗೆಯದಾಗಬಹುದು. (೧) ಕರ್ಮೋತ್ಪತ್ತಿ ಪ್ರಯತ್ನ (ಪ್ರವೃತ್ತಿ) ಮತ್ತು (೨) ಕರ್ಮನಾಶ ಪ್ರಯತ್ನ (ನಿವೃತ್ತಿ) ಎಂದು. ಕರ್ಮೋತ್ಪತ್ತಿಗಾಗಿ ಪ್ರಯತ್ನ ಮಾಡಿದಾಗ ಎಲ್ಲಾ ಕರ್ಮ ಫಲಗಳನ್ನೂ ಅನುಭವಿಸಿ ಮುಗಿಸುವವರೆಗೆ ಪ್ರಬುದ್ಧರಾಗುವ ಅವಕಾಶವೇ ಇರದು. ಪ್ರಾರಬ್ಧವನ್ನು ಅನುಭವಿಸುತ್ತಿರುವಾಗ ಆಗಾಮಿಗಳು ಹೆಚ್ಚು ಹೆಚ್ಚಾಗಿ ಉತ್ಪತ್ತಿಯಾಗುತ್ತಾ ಹೋಗುವುದರಿಂದ ಕರ್ಮದ ಮೂಲಕ ಪ್ರಬೋಧ ಉಂಟಾಗುವ ಪ್ರತ್ಯಾಶೆಯೇ ಇಲ್ಲವೆಂಬುದು ಸ್ಪಷ್ಟ. ಜೊತೆಗೆ, ಅನುಭವಿಸಲ್ಪಡುತ್ತಾ ಕರ್ಮಫಲಗಳು ಸ್ವಲ್ಪ ಸ್ವಲ್ಪವಾಗಿ ಖರ್ಚಾಗುತ್ತಾ ಹೋದರೂ ಅವು ಬೀಜರೂಪದ ವಾಸನೆಗಳಾಗಿ ಉಳಿದಿರುತ್ತವೆ. ಆ ವಾಸನೆಗಳೆಂದೂ ನಮ್ಮನ್ನು ಕರ್ಮನಾಶದತ್ತ ಒಯ್ಯಲಾರವು. ತದ್ವಿರುದ್ಧವಾಗಿ ಅವು ಕರ್ಮೋತ್ಪತ್ತಿ ಸಾಧನಗಳಾಗುತ್ತವೆ.[೧] ಹೀಗೆ ಕರ್ಮೋತ್ಪಾದನ ಮಾಡುವ ಸ್ವ ಪ್ರಯತ್ನಗಳ ಮೂಲಕ ಪ್ರಬೋಧವನ್ನು ಯಾ ಮುಕ್ತಿಯನ್ನು ಪಡೆಯಲು ಶಕ್ಯವಾಗದು.

ಆತ್ಮಾವಧಾನವೇ (ಪರಬ್ರಹ್ಮನಿಷ್ಠೆಯೇ) ಕರ್ಮನಿರ್ಮೂಲನದ ಸ್ವ ಪ್ರಯತ್ನ. ಪ್ರಬೋಧ ಅಥವಾ ಮುಕ್ತಿ ಎಂದರೆ ಆತ್ಮ ಜಾಗರದಲ್ಲಿರುವುದು. ಏಕೆಂದರೆ ಆತ್ಮ ಮತ್ತು ಅದರ ಜಾಗರ ಎಂದರೆ ಒಂದೇ. ನಿದ್ರೆಯಿಂದ ಯಾ ಸ್ವಪ್ನದಿಂದ ಒಬ್ಬನು ಎಚ್ಚತ್ತನು ಎಂದಿಟ್ಟುಕೊಳ್ಳೋಣ. ಅದರ ಅರ್ಥವೇನು? ಅವನು ತನ್ನ ಸ್ವಪ್ನದ ಅಥವಾ ನಿದ್ರೆಯ ಪೂರ್ವದಲ್ಲಿದ್ದ ಸ್ವ ಪ್ರಬೋಧಕ್ಕೆ (ಶರೀರ ಪ್ರಜ್ಞೆಗೆ) ಹಿಂದಿರುಗಿದನೆಂದರ್ಥ. ಅಂದರೆ ಅವನು ತನ್ನ ಸ್ವಪ್ನ ಶರೀರ ಮತ್ತು ಪ್ರಪಂಚಪ್ರಜ್ಞೆಗಳಿಂದ ಅವುಗಳ ಮೂಲವಾದ ವರ್ತಮಾನದ ದೇಹ ಪ್ರಜ್ಞೆಗೆ ಮತ್ತು ಪ್ರಪಂಚ ಪ್ರಜ್ಞೆಗೆ ಹಿಂದಿರುಗಿದನು ಎಂದರ್ಥ. ಸ್ವಪ್ನಸ್ಥನನ್ನು ಎಬ್ಬಿಸುವುದು ಯಾವುದು? ಹಾಗೆ ಎಚ್ಚರವಾಗುವುದಕ್ಕೆ ಕಾರಣಗಳು ಎರಡು (೧) ಸ್ವಪ್ನ ಫಲ ಕೊಡುವ ಕರ್ಮ ಮುಗಿದು ಹೋಗುವುದು ; ಆಗ ನಿದ್ರೆಯಲ್ಲಿ ಯಾ ಜಾಗರದಲ್ಲಿ ಸ್ವಪ್ನವು ಕೊನೆಗೊಳ್ಳುವುದು. (೨) ಅತಿಭಯ–ಅತಿದುಃಖ ಅತಿಸುಖ ಎಂಬೀ ಮೂರರಲ್ಲಿ ಒಂದರ ಉಲ್ಬಣದಿಂದ ಸ್ವಪ್ನಸ್ಥನ[೨] ಅವಧಾನವು ಅವನಿಗೆ ತಿಳಿದೋ ತಿಳಿಯದೆಯೋ ಅವನತ್ತ ಸೆಳೆಯಲ್ಪಡುವುದು. ಅವನೆಂದರಿಲ್ಲಿ ಸ್ವಪ್ನಸ್ಥ ಉತ್ತಮ ಪುರುಷನು–

---

೧. "ಉಪದೇಶ ಉಂದಿಯಾರ್" ಗ್ರಂಥದ ೨ನೆಯ ನುಡಿಯನ್ನು ನೋಡಿರಿ.

೨. ಸ್ವಪ್ನಸ್ಥ=ಸ್ವಪ್ನದ್ರಷ್ಟಾರ : ಕನಸು ಕಾಣುವಾಗ ನಿದ್ರೆಯಲ್ಲಿರುವ ಮನುಷ್ಯನು ಇನ್ನೊಂದು ದೇಹವನ್ನು ಧರಿಸುತ್ತಾನೆ. ಕನಸಿನಲ್ಲಿ ಸ್ವಪ್ನ ಶರೀರದೊಡನೆ ಚಲಿಸುತ್ತಾನೆ ಅವನು. ಎಚ್ಚರವಾಗಿದ್ದಾಗಿನ ಅವನ ಶರೀರ ಆಗ ಅಚಲವಾಗಿರುತ್ತದೆ. ಕನಸಿನಲ್ಲಿ ಅವನು ತನ್ನ ಸ್ವಪ್ನ ಶರೀರದಲ್ಲಿ ತಾದಾತ್ಮ್ಯ ಹೊಂದುತ್ತಾನೆ. ಈ

ಅರ್ಥಾತ್ ಅವನ ಮನಸ್ಸು ಅಥವಾ ಅವಧಾನವು ಹೃದಯಕ್ಕೆ ಹಿಂದಿರುಗುವಂತೆ ಬಲಾತ್ಕರಿಸಲ್ಪಡುವುದು.-ಅಂದರೆ ಸ್ವಪ್ನದಲ್ಲಿರುವ ಉತ್ತಮ ಪುರುಷನೆಡೆಗೆ ಜಗ್ಗಲ್ಪಡುವುದು. ಹಾಗೇ ಸದ್ಯದ ಜೀವನವನ್ನು ಪ್ರಾರಂಭಿಸಿದ ಯಾ ಜಾಗ್ರದವಸ್ಥೆಯನ್ನಾರಂಭಿಸಿದ ಪ್ರಾರಬ್ಧವು ಖರ್ಚಾಗಿ ಹೋದಾಗ ಈ ಜಾಗ್ರದವಸ್ಥೆಯು (ಯಾ ಜೀವನವು) ಅಂತ್ಯವಾಗುತ್ತದೆ-ಅಂದರೆ ನಿದ್ರೆಯಲ್ಲಿ ಮುಕ್ತಾಯವಾಗುವ ಸ್ವಪ್ನದಂತೆ ಅದು ಮರಣದಲ್ಲಿ ಮುಕ್ತಾಯವಾಗುತ್ತದೆ. ಈ ಪ್ರಕಾರ, ಪ್ರಾರಬ್ಧಾವಸಾನವು ಈ ಜಾಗ್ರದವಸ್ಥೆಯನ್ನು ಮಾತ್ರ ಕೊನೆಗೊಳಿಸುವುದಲ್ಲದೆ ಪ್ರಬೋಧೋದಯವಾಗುವಂತೆ ಮಾಡಲಾರದು.

ಇದೇ ರೀತಿಯಿಂದ, ಯಾವ ಸಾಧನದಿಂದಲೇ ಆಗಲಿ, ನಮ್ಮ ಅವಧಾನವು ಆತ್ಮೋನ್ಮುಖವಾಗಿ ತಿರುಗಿಸಲ್ಪಟ್ಟರೆ (ಪರಬ್ರಹ್ಮನಿಷ್ಠವಾಗಿ ಮಾಡಲ್ಪಟ್ಟರೆ) ಸ್ವಪ್ನ ಸದೃಶವಾದ ಜಾಗ್ರದವಸ್ಥೆಯಷ್ಟೇ ಅಲ್ಲದೆ ನಿದ್ರಾ ಸದೃಶವಾದ ನಮ್ಮ ಬ್ರಹ್ಮಾತ್ಮ ವಿಸ್ಮರಣೆಯೂ ನಮ್ಮನ್ನು ನಮ್ಮ ಸಹಜ ಸ್ಥಿತಿಯಲ್ಲಿ ಬಿಟ್ಟು ಕೊನೆಗೊಳ್ಳುವುವು. ನಮ್ಮ ಪ್ರಾರಬ್ಧವು ನಮ್ಮ ಜೀವನದಲ್ಲಿ ಅತಿಭಯ, ಅತಿದಯೆ, ಅತಿದುಃಖ ಅಥವಾ ಅತಿ ಸಂತೋಷ ಎಂಬ ಭಾವೋದ್ರೇಕದ ಸಿಡಿಲ ಹೊಡೆತವನ್ನು ನಮಗೆ ಕೊಡಬಹುದು. (ಅಧ್ಯಾತ್ಮೋನ್ಮುಖರಾಗಲು ನಮ್ಮ ಋಷಿಮುನಿಗಳು ಅಂಥ ಅನಿರೀಕ್ಷಿತ ಆಘಾತಗಳನ್ನು ಅನುಭವಿಸಬೇಕಾಗಿತ್ತು ಎಂಬುದು ನಿದರ್ಶನ). ಅಂಥ ಅನುಕೂಲ ಸನ್ನಿವೇಶಗಳನ್ನು ಬಳಸಿಕೊಂಡು ವ್ಯಕ್ತಿಯು ತನ್ನ ಅವಧಾನವನ್ನು ಬ್ರಹ್ಮಾತ್ಮದತ್ತ ಹಿಂದಿರುಗಿಸಿ ಮಹಾ ಪ್ರಬೋಧವು (ತನ್ನಲ್ಲಿ) ಉಂಟಾಗುವಂತೆ ಮಾಡುವನು. ಅದರಿಂದಲೇ ಭಗವಾನ್ ಶ್ರೀ ರಮಣರು ನಮಗೆ ಆತ್ಮೋನ್ಮುಖರಾಗಲು ಉಪದೇಶಿಸಿದ್ದಾರೆ.

ನಿದ್ರೆಯಿಂದ ನಾವು ಎಚ್ಚತ್ತ ಕೂಡಲೇ ನಮ್ಮ ಅವಧಾನವು ಹೇಗೆ ಕೆಲಸ ಮಾಡುತ್ತದೆ? ಮೊದಲು ನಾವು ದೇಹಭಾನವುಳ್ಳವರಾಗುತ್ತೇವೆ. ಅನಂತರ ಪಂಚೇಂದ್ರಿಯಗಳ ಮೂಲಕ ಜಗತ್ತಿನ ಎಲ್ಲಾ ವಸ್ತುಗಳ ತಿಳುವಳಿಕೆಯನ್ನು ಪಡೆಯುತ್ತೇವೆ. ನಮ್ಮ ಶರೀರವು ಮಧ್ಯಮ ಪೌರುಷೇಯ ಪದಾರ್ಥವಲ್ಲವೇನು? ಜಾಗ್ರದವಸ್ಥೆಯಲ್ಲಿ ಉದ್ದಕ್ಕೂ ನಮ್ಮ ಅವಧಾನವು ಮಧ್ಯಮ-ಪ್ರಥಮ ಪೌರುಷೇಯ ಪದಾರ್ಥಗಳಲ್ಲಿ ಮಾತ್ರ ಮಗ್ನವಾಗಿರುತ್ತದೆ. ನಿದ್ರೆ ಮೈಯೇರಿ ಬಂದಾಗ ಈ ಅವಧಾನವು ತನ್ನ ಕೆಲಸವನ್ನು ತನ್ನಷ್ಟಕ್ಕೇ ನಿಲ್ಲಿಸಿ ಬಿಡುತ್ತದೆ. ಮಧ್ಯಮ ಪ್ರಥಮ ಪೌರುಷೇಯ ಪದಾರ್ಥಗಳಲ್ಲಿ ಮಗ್ನವಾಗುವುದೆಂದರೇ ವಿಚಾರ ಮಾಡುವುದು. ಜಾಗ್ರದವಸ್ಥೆ ಇಡೀ ವಿಚಾರಗಳ ಹೊರೆಯಷ್ಟೇ ಅಲ್ಲದೆ ಇನ್ನೇನೂ ಅಲ್ಲ. (ವಿಚಾರದ ಹೊರೆ ಅಥವಾ ಮೂಟೆ ಎಂದರೆ ಆಲೋಚಿಸುವ ಕ್ರಿಯೆ ಎಂದರ್ಥ).

ಹುಟ್ಟಿನಿಂದ ಸಾವಿನವರೆಗೆ ಪ್ರತಿದಿನವೂ ಇದೇ ನಡೆಯುತ್ತಿರುತ್ತದೆ ; ಸೃಷ್ಟಿಯಿಂದ ಪ್ರಲಯದವರೆಗೂ ನಡೆಯುತ್ತಿರುವುದು ಇದೇ. ಸ್ವಲ್ಪದರಲ್ಲಿ ಹೇಳುವುದಾದರೆ, ನಿದ್ರೆಯಿಂದ ನಿದ್ರೆಗೆ, ಹುಟ್ಟಿನಿಂದ ಹುಟ್ಟಿಗೆ, ಸೃಷ್ಟಿಯಿಂದ ಲಯಕ್ಕೆ ಯಾವ ಜೀವಿಯೂ ತನ್ನ

ನಾನೆಂಬುದೇ ಸ್ವಪ್ನ ಪ್ರೇಕ್ಷಕ. ಸ್ವಪ್ನದಲ್ಲಿಯ ಎಲ್ಲ ದೃಶ್ಯಗಳೂ ಮಧ್ಯಮ-ಪ್ರಥಮ ಪೌರುಷೇಯಗಳಲ್ಲಿ ಯಾವುದಾದರೂ ಒಂದು. ಸ್ವಪ್ನದಲ್ಲಿಯ ಉತ್ತಮ ಪುರುಷನೇ ಕನಸುಗಾರನು. ಸ್ವಪ್ನ ಶರೀರವು ಜಾಗ್ರದವಸ್ಥೆಯ ಶರೀರಕ್ಕಿಂತ ಭಿನ್ನವಾಗಿರುವುದರಿಂದ ಜಾಗರಸ್ಥನ ಅನುಭವವು ಸ್ವಪ್ನಸ್ಥನ ಅನುಭವಕ್ಕಿಂತ ಬಿನ್ನವಾಗಿರುತ್ತದೆ. ಸ್ವಪ್ನಸ್ಥನಿಗೆ ತನ್ನ ಸ್ವಪ್ನ ಶರೀರದಲ್ಲಿ ಕಾಣಿಸಿಕೊಂಡ ಗಾಯವು ಜಾಗರಸ್ಥನ ಮಲಗಿದ ಶರೀರದಲ್ಲಿ ಕಂಡುಬರದಿರುವುದು ಒಂದು ಉದಾಹರಣೆ.

ಅವಧಾನವನ್ನು ಬ್ರಹ್ಮಾತ್ಮದತ್ತ ತಿರುಗಿಸನು! ಒಬ್ಬನು ತನ್ನ ಜಾಗ್ರದವಸ್ಥೆಯಲ್ಲಿ ಅವಧಾನವನ್ನು ಉತ್ತಮ ಪುರುಷ ವಾಚ್ಯವಾದ ಪದಾರ್ಥದತ್ತ ತಿರುಗಿಸಿದರೆ ಜಾಗ್ರದವಸ್ಥೆ ಮುಗಿದು ಹೋಗಿ ಪ್ರಬೋಧಸ್ಥಿತಿಯಲ್ಲಿ ಅವನನ್ನು ಉಳಿಸಿ ಹೋದೀತು. ಈ ಆತ್ಮೋನ್ಮುಖತೆ ಎಂಬುದು (ನಿರ್ವಿಕಲ್ಪ) ಅಸ್ತಿತ್ವವಲ್ಲದೆ ಮಾಡುವಿಕೆ (ಆಗುವಂತೆಸಗುವಿಕೆ) ಅಲ್ಲ. ಆದುದರಿಂದ ಅದು ವಿಚಾರವೂ ಅಲ್ಲ, ಕರ್ಮವೂ ಅಲ್ಲ. ಈ ಬಗೆಯ ಸ್ವ ಪ್ರಯತ್ನ ಮಾತ್ರ ಕರ್ಮವಿನಾಶಕ ಪ್ರಯತ್ನ ಎಂದು ಕರೆಯಲ್ಪಡುತ್ತದೆ. ಇದೊಂದೇ ಮುಕ್ತಿಗೊಯ್ದು ಮುಟ್ಟಿಸುತ್ತದೆ. ಮಿಕ್ಕ ಎಲ್ಲಾ ಅವಧಾನ ಪ್ರಯತ್ನಗಳೂ ಮಧ್ಯಮ ಪ್ರಥಮ ಪೌರುಷೇಯ ವಸ್ತುಗಳತ್ತಣವುಗಳಾದುದರಿಂದ ಅವು ಕೇವಲ ಕರ್ಮೋತ್ಪಾದಕಗಳು ಮತ್ತು ಅವು ಮುಕ್ತಿದಾಯಕಗಳಾಗಲಾರವು. ಸತ್ಯವು ಈ ಬಗೆಯದು ! ಆದರೂ ನಮ್ಮಲ್ಲಿಯ ಕೆಲವರು ಜ್ಞಾನ ಅಥವಾ ಪ್ರಬೋಧವು ಪ್ರಾರಬ್ಧ ಫಲ ಎನ್ನುವ ರೂಢಿಯಿದೆ. ಅದು ತಪ್ಪು. ಜ್ಞಾನವು ಕರ್ಮಫಲಗಳಿಂದ ಬದ್ಧವಲ್ಲ–ಕರ್ಮ ಫಲಾತೀತ. ಮೇಲೆ ಹೇಳಿದ ದ್ವಿತೀಯ ವಿಧದ ಬ್ರಹ್ಮಾತ್ಮಪ್ರಯತ್ನವು ಸಹಜ ಸ್ಥಿತಿಯೆಂದು ಪ್ರಸಿದ್ಧವಾಗಿದೆ. ಯಾವಾಗ? ಅದು ಅಪ್ರಯತ್ನತಃ ಸಾಗುತ್ತಿರುವಾಗ. ಇದೇ ಅಪ್ರಯತ್ನ ಪ್ರಯತ್ನಸ್ಥಿತಿ–ಉತ್ಕ್ರಿಯ ಶಾಂತಿ.

ಪರಿಶಿಷ್ಟ – ೨

ಜನ್ಮಾನುಜನ್ಮ ಕರ್ಮ ಪುನರಾರಂಭ

ಸಾವಿನ ದೆಸೆಯಿಂದ ಒಬ್ಬ ವ್ಯಕ್ತಿ ಅಥವಾ ಜೀವಿಯು ದೇಹ ಬಿಟ್ಟೊಡನೆಯೇ ಇನ್ನೊಂದು ಶರೀರವನ್ನು ಧರಿಸುತ್ತಾನೆ. ಈ ವರ್ಗಾವಣೆಯಿಂದ ಅವನು ಸ್ಥಳಾಂತರ ಹೊಂದುತ್ತಾನೆ ಮಾತ್ರ ; ಆದರೆ ಆತನು ತನ್ನ ಕರ್ಮವನ್ನು ಅಥವಾ ಸಂಬಳವನ್ನು (ಕರ್ಮಫಲವನ್ನು) ಬದಲಾಯಿಸುವುದಿಲ್ಲ. ಅವನಿಗೆ ಹೊಸ ಜನ್ಮ ಬರುತ್ತದೆ. ದೇವರ ದಯೆಯಿಂದ. ಆ ಹೊಸ ಜನ್ಮದಲ್ಲಿ ಅವನು ಹಿಂದೆ ಆರಂಭಿಸಿದ ಎಲ್ಲಾ ಅನುಕೂಲ ವಾಸನೆಗಳಿಂದ ಅವನು ಎಲ್ಲಿಗೆ ಬಿಟ್ಟಿದ್ದನೋ ಅಲ್ಲಿಂದ ಅವನ ಕರ್ಮಗಳನ್ನು ಮುಂಬರಿಸುತ್ತಾನೆ. ಹೀಗೆ ಅವನನ್ನು ಅನುಸರಿಸಿ ಬರುವಂಥವುಗಳೆಂದರೆ, (೧) ಕರ್ಮ ಫಲ ಮತ್ತು (೨) ವಾಸನೆಗಳು.

ಸಂಚಿತದಿಂದ ಆಯ್ದು ತೆಗೆದುಕೊಟ್ಟಂಥ ಭಾಗವೆನ್ನಿಸುವ ಪ್ರಾರಬ್ಧವು ಹೊಸ ಜನ್ಮದ ಸ್ವರೂಪವನ್ನು ರಚಿಸುತ್ತದೆ. ಅಂದರೆ ಜೀವಿಯು ಎಷ್ಟರಮಟ್ಟಿಗೆ ಸುಖದುಃಖಗಳನ್ನು ಅನುಭವಿಸಬೇಕು ಮತ್ತು ಯಾವಾಗ ಅವನ ದೇಹ ಸಾಯಬೇಕು ಎಂಬುದನ್ನು ನಿರ್ಧರಿಸುತ್ತದೆ. ಸಂಚಿತದಲ್ಲಿ ಉಳಿದಿರುವ ಕರ್ಮಫಲಗಳು ಜೀವಿಯ ರಕ್ಷಣಾನಿಧಿ (ಉಳಿತಾಯ ನಿಧಿ) ; ಅದು ಅವನ ಮುಂದಿನ ಜನ್ಮಗಳ ಖರ್ಚಿಗಾಗಿ ಇರುತ್ತದೆ. ಜೀವಿಯಲ್ಲಿ ಕಂಡುಬರುವ ಈ ಕರ್ಮಸಾತತ್ಯವು (ಕರ್ಮಾನುಗಮನವು) ಕರ್ಮಪುನರಾರಂಭ ಎನ್ನಿಸುತ್ತದೆ.

ಕರ್ಮಫಲಗಳು ದ್ವಿವಿಧ ; ಫಲ ಮತ್ತು ಬೀಜ ಎಂಬುದಾಗಿ. ಆದುದರಿಂದ ಕರ್ಮಪುನರಾರಂಭವೂ ದ್ವಿವಿಧವಾಗಿರಬೇಕಾಗುತ್ತದೆ. ಮೊಟ್ಟಮೊದಲು, ಕರ್ಮಫಲಗಳ ಸಾತತ್ಯವು ಫಲಗಳ ಪುನರಾರಂಭ. ಮೊದಲ ಬಗೆಯ ಪುನರಾರಂಭವು ಜೀವಿಯ ಭೋಕ್ತೃತ್ವಕ್ಕೆ ಸಂಬಂಧಿಸಿದ್ದಾಗಿರುತ್ತದೆ ; ಎರಡನೆಯ ಬಗೆಯ ಪುನರಾರಂಭವು ಅವನ ಕರ್ತೃತ್ವಕ್ಕೆ ಸಂಬಂಧಿಸಿದ್ದಾಗಿರುತ್ತದೆ. "ಅವನ ಯೋಗ್ಯತೆ ಎಲ್ಲಿದೆ? ಅವನ ಪ್ರಾರಬ್ಧವು ಆ ರೀತಿಯದಾಗಿರಬಹುದು. ಅದರಿಂದಲೇ ಅವನು ಒಳ್ಳೆಯ ಆರೋಗ್ಯವಂತನೂ ಐಶ್ವರ್ಯವಂತನೂ ಯಾವ ತೊಂದರೆಯೂ ಇಲ್ಲದೆ ಕೀರ್ತಿವಂತನೂ ಆಗಿರುತ್ತಾನೆ. ಆದರದು ಎಲ್ಲರಿಗೂ ಸಾಧ್ಯವೇ? (ಅಂದರೆ ತಮ್ಮ ಪ್ರಾರಬ್ಧದಲ್ಲಿ ಕರ್ಮಫಲದ ಅಂಥ ಪುನರಾರಂಭವಿಲ್ಲದವರಿಗೆ ಅದೆಲ್ಲಾ ಸಾಧ್ಯವೇ?)" ಎಂದು ಜನಗಳು ಹೇಳುವುದನ್ನು ನಾವು ಕೇಳಿಲ್ಲವೇ? ಇಂಥ ಮಾತುಗಳು ಜೀವಿಯ ಭೋಕ್ತೃತ್ವ ಮುಖಕ್ಕೆ ಸಂಬಂಧಿಸಿದ ಕರ್ಮಫಲದ ಪುನರಾರಂಭಕ್ಕೆ ಮಾತ್ರ ಅನ್ವಯಿಸದು. ಕೆಲವರು ಪದೇಪದೇ ಹೇಳುತ್ತಿರುತ್ತಾರೆ : "ಶ್ರೀ ರಮಣರ ಬಗೆಗೆ ಏನು ಹೇಳಬೇಕು." ಅವರ ಪ್ರಾರಬ್ಧವು ಅವರಿಗೆ ಮುಕ್ತಿಯನ್ನು

ಕೊಟ್ಟಿತು. ಅವರ ಪ್ರಾರಬ್ಧಾನುಸಾರವಾಗಿ ಅವರು ಜೀವನ್ಮುಕ್ತರಾದರು. ಆದುದರಿಂದ ಅದು ಅವರ ಪ್ರಾರಬ್ಧದಲ್ಲಿಯ ಫಲಗಳ ಪುನರಾರಂಭದಿಂದಲೇ ಸಂಭವಿಸಿದ್ದು – ಎಂದು. ಹೀಗೆ ಮಾತಾಡುವುದು ತಿಳುವಳಿಕೆ ಇಲ್ಲದ್ದನ್ನು ಮಾತ್ರ ತೋರಿಸುತ್ತದೆ.

ಶ್ರೀ ರಮಣರ ಪ್ರಕರಣದಲ್ಲಿ ನಿಜವಾಗಿಯೂ ಅದು ಒಂದು ಪುನರಾರಂಭದಿಂದಲೇ ಆದುದು. ಆದರೆ ಅದು ಭೋಕ್ತೃತ್ವ ಮುಖಕ್ಕೆ ಸಂಬಂಧಿಸಿದ ಕರ್ಮಫಲದ ಪುನರಾರಂಭದಿಂದ ಆದುದರಲ್ಲ. ಅದು ಎರಡನೆಯ ವಿಧದ, ಕರ್ತೃತ್ವಮುಖಕ್ಕೆ ಸಂಬಂಧಿಸಿದ, ಪುನರಾರಂಭದಿಂದ ಆದುದು (ಅಂದರೆ ಸಾಧನೆಯ ಪರವಾದ ಅವರ ಭೂತಕಾಲೀನ ವಾಸನೆಗಳ ಪುನರಾರಂಭದಿಂದ ಆದುದು) ; ಏಕೆಂದರೆ, ಮಧ್ಯಮ–ಪ್ರಥಮ ಪೌರುಷೇಯ ವಸ್ತುಗಳ ಬಗೆಗೆ ಮಾಡಿದ ಯತ್ನಗಳ ಸ್ವರೂಪದ ಕರ್ಮಗಳ ಫಲಗಳು ಮಾತ್ರ ಪ್ರಾರಬ್ಧದ ಕಕ್ಷೆಯಲ್ಲಿ ಬರಬಲ್ಲವು. ಅವು ಮಾತ್ರ ದೇಹ–ಮನಸ್ಸುಗಳ ಮೂಲಕ ಅನುಭವಿಸುವ ಸುಖದುಃಖಗಳನ್ನು ಕೊಡಲು ಇರುವ ಭೋಕ್ತೃತ್ವದ ಮುಖಕ್ಕೆ ಆಹಾರ ಒದಗಿಸಬಲ್ಲವು. ("ಸ್ವಪ್ರಯತ್ನ" ಎಂಬ ಲೇಖನದ ಒಂದನೆಯ ಪರಿಶಿಷ್ಟದಲ್ಲಿ ಮಧ್ಯಮ–ಪ್ರಥಮ ಪೌರುಷೇಯ ವಸ್ತುಗಳ ಬಗೆಗೆ ಮಾಡಿದ ಪ್ರಯತ್ನಗಳೆಲ್ಲಾ ಬಹಿರ್ಮುಖ ಸ್ವರೂಪದವುಗಳು ಎಂದು ವಿವರಿಸಿರುವುದನ್ನು ನೋಡಿರಿ). ಅದೇ ಮೇರೆಗೆ, ಮಧ್ಯಮ–ಪ್ರಥಮ ಪೌರುಷೇಯ ಪದಾರ್ಥಗಳತ್ತ ಮಾಡಿದ ಪ್ರಯತ್ನಗಳಿಂದ ವಾಸನೆಗಳು ಹುಟ್ಟಿದಾಗ ಅವುಗಳನ್ನು "ಸ್ವಭಾವಗತ ಕರ್ತೃತ್ವ" ಎನ್ನಬಹುದು. ಕರ್ತೃತ್ವ ಮುಖದ ಮೂಲಕ ಪ್ರತಿಯೊಂದು ಜನ್ಮದಲ್ಲಿಯೂ ಈ ವಾಸನೆಗಳೇ ಆಗಾಮಿಗಳನ್ನು ನಿರ್ಮಿಸುವಂಥವುಗಳು. ಆದರೆ ಮುಕ್ತಿಗಾಗಿ ನಾವು ಪ್ರತಿಯೊಂದು ಜನ್ಮದಲ್ಲಿಯೂ ಆಯುಷ್ಯವಿಡೀ ಮಾಡುತ್ತ ಬಂದ ಆತ್ಮಸಾಧನೆಯೆಂಬ ಆಧ್ಯಾತ್ಮಿಕ ಅನುಷ್ಠಾನವು "ಸ್ವಭಾವಗತ ಅಸ್ತಿತ್ವ" ಎನ್ನಿಸುವುದು. ಸ್ವಭಾವಗತ ಕರ್ತೃತ್ವವು ಆಧ್ಯಾತ್ಮಿಕ ಸಾಧನೆಗೆ ವಿಘ್ನವಾದರೆ ಸ್ವಭಾವಗತ ಅಸ್ತಿತ್ವವು ನಮ್ಮ ಈ ಜನ್ಮದ ಆ ಸಾಧನೆಗೆ ಪೋಷಕವಾಗುವುದು. ಭಗವಾನ್ ಶ್ರೀ ರಮಣರ ವಿಷಯದಲ್ಲಿ ಅವರ ಸಾಕ್ಷಾತ್ಕಾರವು ಪ್ರಾರಬ್ಧ ಫಲದ ಪುನರಾರಂಭದ ದೆಸೆಯಿಂದಾದುದು ಎಂದು ಹೇಳಬಾರದು ; ಆದರದು ಸದ್‌ವಾಸನೆಯ[೩] ಬಗೆಗಿನ ಮಹಾಪ್ರೀತಿಯ ರೂಪದಲ್ಲಿ ಇರುವ ಸ್ವಭಾವಗತ ಅಸ್ತಿತ್ವದ ವಾಸನೆಗಳ ಪುನರಾರಂಭದ ದೆಸೆಯಿಂದಾದುದು ಎಂದು ಹೇಳಬೇಕು. ಸ್ವಭಾವಗತ ಅಸ್ತಿತ್ವ = ಸಹಜ ಸತ್ತೆ.

ಪ್ರಾರಬ್ಧವೆಂಬ ಫಲವು ಭೋಕ್ತೃತ್ವ ಮುಖದಿಂದ ಮಾತ್ರ ಅನುಭವಿಸಲ್ಪಡತಕ್ಕದ್ದು; ವಾಸನೆಗಳಾದರೋ ಕರ್ತೃತ್ವ ಮುಖದಿಂದ ಮಾತ್ರ ಕೆಲಸ ಮಾಡಬಲ್ಲವುಗಳು. ವಾಸನೆಗಳು ಎಲ್ಲ ಪ್ರಾಣಿಗಳಲ್ಲಿಯೂ ಅನುಭವ ಪ್ರೇರಕಗಳಾದರೂ ಕರ್ತೃತ್ವಮುಖದ ಮಾನವರಲ್ಲಿ ಮಾತ್ರ ಅವು ಆಗಾಮಿಗಳನ್ನು ಸಂಗ್ರಹಿಸುವಂಥವುಗಳಾಗಿರುತ್ತವೆ. "ಸ್ವಭಾವಗತ ಕರ್ತೃತ್ವವನ್ನು" ಯಾ "ಸ್ವಭಾವಗತ ಅಸ್ತಿತ್ವವನ್ನು ಕರ್ತೃತ್ವ ಮುಖದಿಂದ ಬಳಸುವ ಮೂಲಕ ಮನುಷ್ಯನು ಜನ್ಮಾನುಜನ್ಮಗಳಲ್ಲಿ ಆಗಾಮಿಗಳನ್ನು ಸಂಚಯಿಸುತ್ತಾ ಹೋಗುತ್ತಾನೆ. ಅದರಿಂದ ಅವನು ಕರ್ಮಸಾಗರದಲ್ಲಿ ಮುಳುಗುತ್ತಾನೆ, ಕರ್ಮಫಲ ಸಮುದ್ರದಲ್ಲಿ ಕಂತಿ ಹೋಗುತ್ತಾನೆ ; ಅಥವಾ ಅವನು ಆತ್ಮಸಾಧನೆಯನ್ನು ಹಿಡಿಯುತ್ತಾನೆ ಮತ್ತು ಮುಕ್ತಿಯನ್ನು ಪಡೆಯುತ್ತಾನೆ.

---

೩. ಮುಂದೆ ಕೊಟ್ಟ ರೇಖಾವಿನ್ಯಾಸವನ್ನು ಈ ಸಂದರ್ಭದಲ್ಲಿ ನೋಡಿರಿ.

ಪುನರಾರಂಭ

- ಕರ್ಮದ
  - ಭಕ್ತೃತ್ವ ಮುಖದಿಂದ ಅನುಭವಿಸಬೇಕಾದ ಫಲಗಳು
- ಕರ್ತೃತ್ವದ ಮುಖದ ಮೂಲಕ ಕರ್ಮದತ್ತ ಒಯ್ಯುವ ವಾಸನೆಗಳ
  - ಸ್ವಭಾವಗತ ಕರ್ತೃತ್ವ
    - ಭೋಕ್ತೃತ್ವಮುಖದ ಕಾರ್ಯದ ಪ್ರೇರಣೆಯ

      (ಅಂದರೆ ಪ್ರಾರಬ್ಧದ ಕಾರ್ಯವನ್ನು ಉತ್ತೇಜಿಸುವ)
    - ಆಗಾಮಿಗಳನ್ನು ಸಂಗ್ರಹಿಸುವ
  - ಸ್ವಭಾವಗತ ಅಸ್ತಿತ್ವ (ಕರ್ತೃತ್ವ ಮುಖದಲ್ಲಿದ್ದೂ ಮಾಡುವ ಸ್ವರೂಪದ್ದಲ್ಲ–ಹೇಗೆ? ಏಕೆಂದರೆ, ಮಾಡಲು ಅಥವಾ ಮಾಡದಿರಲು ಇರುವ ಸಂಪೂರ್ಣ ಸ್ವಾತಂತ್ರ್ಯದ ದೆಸೆಯಿಂದ–ಅರ್ಥಾತ್–ಇರುವುದು, ಇರುವುದಕ್ಕಿರುವ ಸ್ವಾತಂತ್ರ್ಯದ ಬಳಕೆಯನ್ನು ಒಂದು ಮಾಡುವಿಕೆ ಎಂದು ಹೇಳಬೇಕಾಗುತ್ತದೆ.)

ಈ ಸ್ವಭಾವಗತ ಅಸ್ತಿತ್ವದ ವಾಸನೆಯನ್ನೇ ಭಗವಾನ್ ಶ್ರೀ ರಮಣರು ತಮ್ಮ "ಶ್ರೀ ಅರುಣಾಚಲ ಅಕ್ಷರಮಣಮಾಲೈ" ಎಂಬ ಗ್ರಂಥದ ೬೯ನೆಯ ಪದ್ಯದಲ್ಲಿ ಪೂರ್ಣತ್ವದ ವಾಸನೆ ಎಂದು ಹೇಳಿದ್ದು.

"ಹೇ ಅರುಣಾಚಲ, ಪೂರ್ಣತ್ವವು ನಿನ್ನ ನಿಜಸ್ವರೂಪ. ನೀನು ನನ್ನೊಡನೆ ನಿನ್ನ ಪೂರ್ಣಐಕ್ಯವನ್ನು ದಯಪಾಲಿಸು. ಅದರಿಂದ ಪ್ರಾಪಂಚಿಕ ವಾಸನೆಗಳಿಂದ ತುಂಬಿದ ನನ್ನ ಮನಸ್ಸು ಪೂರ್ಣತ್ವದ ವಾಸನೆಯಿಂದ ತುಂಬಿರುವಂತಾಗಲಿ."

ಇಲ್ಲಿ ಶ್ರೀ ರಮಣರು ಯಾವಾಗಲೂ ಮಧ್ಯಮ–ಪ್ರಥಮ ಪುರುಷ ವಾಚ್ಯಗಳತ್ತ ಅವಧಾನಿಸುವ ವಾಸನೆಯುಳ್ಳ ಮನಸ್ಸು ನನ್ನದು ; ಅದರ ಆ ವಾಸನೆಗೆ ಬದಲಾಗಿ ಯಾವಾಗಲೂ ಉತ್ತಮ ಪುರುಷವಾಚ್ಯದತ್ತಣ ವಾಸನೆಯುಂಟಾಗುವಂತೆ ಮಾಡು" ಎಂದು ಪ್ರಾರ್ಥಿಸುತ್ತಾರೆ. ಆದುದರಿಂದ ಶ್ರೀ ಅರುಣಾಚಲನು ಶ್ರೀ ರಮಣರಿಗೆ (ಪರಬ್ರಹ್ಮ ಸ್ವರೂಪವಾದ) ಅಸ್ತಿತ್ವ (ಸತ್ತೆ) ದತ್ತ ಹರಿಯುವ ವಾಸನೆಯನ್ನು (ಪ್ರವೃತ್ತಿಯನ್ನು) ತನ್ನ ಪೂರ್ಣ ಐಕ್ಯದಾನದ ಮೂಲಕ ಕೊಡಲಿ ಎಂಬುದು ಪ್ರಾರ್ಥನೆಯ ಸಾರಾಂಶ.

ವ್ಯಕ್ತಿಯ ಮುಕ್ತಿಯು ನಿಜವಾಗಿಯೂ ವ್ಯಕ್ತಿತ್ವದ ನಾಶ, ಅಹಂಕಾರದ ನಾಶ. ಇದೊಂದು ಆತ್ಮಹತ್ಯೆ. "ಸ್ವಭಾವಗತ ಅಸ್ತಿತ್ವದ" ವಾಸನೆಯ ಮೂಲಕ ಕರ್ಮನಾಶ ಮಾಡುವ ಪ್ರಯತ್ನದಿಂದ ಈ ಆತ್ಮಹತ್ಯೆಯನ್ನೆಸಗಬೇಕು. ಒಬ್ಬನ ಪ್ರಯತ್ನವು ಮಧ್ಯಮ ಪ್ರಥಮ ಪುರುಷವಾಚ್ಯ ವಸ್ತುಗಳತ್ತ ಇರುವ ತನಕ (ಅಂದರೆ, ಕರ್ಮೋತ್ಪತ್ತಿಗಾಗಿ ಮಾಡುವ ಪ್ರಯತ್ನ ನಡೆಯುತ್ತಿರುವವರೆಗೆ) ಅದರಿಂದ ಹುಟ್ಟುವ ವಾಸನೆಗಳೆಂದರೆ "ಸ್ವಭಾವಗತ ಕರ್ತೃತ್ವ" ಸ್ವರೂಪದವುಗಳೇ ಆಗಿರುತ್ತವೆ. ಸ್ವಭಾವಗತ ಕರ್ತೃತ್ವವೆಂದೂ ಮುಕ್ತಿದಾಯಕವಾಗದು. ಮುಕ್ತಿಯೋ ಅಹಂಕಾರದ ನಾಶ. ಕರ್ಮನಾಶ ಮಾಡುವುದಕ್ಕಾಗಿ ನಡೆಸಿದ ಪ್ರಯತ್ನದಿಂದ ಲಬ್ಧವಾದ "ಸ್ವಭಾವಗತ ಅಸ್ತಿತ್ವ" ಎಂಬ ವಾಸನೆಯು (ಅಂದರೆ ಆತ್ಮಾವಧಾನವು) ಒಂದು ವಾಸನೆ ಎಂದು ಕರೆಯಲೂ ಸಾಧ್ಯವಾಗದು. ಏಕೆಂದರೆ, ಅದು ನಿಜವಾಗಿಯೂ "ಅವಾಸನೆ" – ಅದನ್ನು ಈವರೆಗೆ "ಸ್ವಭಾವಗತ ಅಸ್ತಿತ್ವ" ಎಂದು ಬಣ್ಣಿಸುತ್ತಾ ಬರಲಾಗಿದೆ. ಈ ವಾಸನೆಯೊಂದೇ ಮುಕ್ತಿದಾಯಕ. ಅದರಿಂದಲೇ ಆತ್ಮಾವಧಾನವೆಂದರೆ ಆತ್ಮಹತ್ಯೆ ಎಂದು "ಶ್ರೀ ರಮಣ ಮಾರ್ಗದ" ಒಂದನೆಯ ಭಾಗದ ಒಂದನೆಯ ಪರಿಶಿಷ್ಟದ ಏಳನೆಯ ಪದ್ಯದಲ್ಲಿ ಹೇಳಲಾಗಿದೆ. ಆದುದರಿಂದ ಯಾರೂ ಮುಕ್ತಿಗಾಗಿ ಪ್ರಾರಬ್ಧವನ್ನು ಅವಲಂಬಿಸದಿರಲಿ. ಮುಕ್ತಿಯು ಯಾವ ರೀತಿಯಿಂದಲೂ ಪ್ರಾರಬ್ಧಕ್ಕೆ ಸಂಬಂಧಿಸಿಲ್ಲ. ಪ್ರಾರಬ್ಧವು ಕರ್ಮಫಲದ ವಿಷಯದಲ್ಲಿ ಭೋಕ್ತೃತ್ವದ ಮುಖಕ್ಕೆ ಸೇರಿದ್ದಾಗಿದೆ. ಅದು ರೇಖಾವಿನ್ಯಾಸದಲ್ಲಿ ತೋರಿಸಿದಂತೆ ಬ್ರಹ್ಮಾತ್ಮ ಪ್ರಯತ್ನಕ್ಕೆ ಸರಿಯಾಗಿ ವಿರುದ್ಧ ಸ್ಥಾನದಲ್ಲಿದೆ. ಆದರೆ ಮುಕ್ತಿಯು ಅವಾಸನೆ ಎನ್ನಿಸಿದ "ಸ್ವಭಾವಗತ ಅಸ್ತಿತ್ವಕ್ಕೆ ಮಾತ್ರ ಸಂಬಂಧಿಸಿದೆ ಎಂದರೆ "ಸ್ವಭಾವಗತ ಅಸ್ತಿತ್ವ" ಎಂಬ ವಾಸನೆಯ ಪುನರಾರಂಭದ ಮೂಲಕ ಮುಕ್ತಿಯು ಲಭ್ಯವಾಗಲು ಸಾಧ್ಯ ; "ಸ್ವಭಾವಗತ ಅಸ್ತಿತ್ವ" ಎಂದರೆ ಕರ್ತೃತ್ವಾಭಾವ ಅಥವಾ ಕರ್ಮರಹಿತ ಕರ್ಮ (ಅರ್ಥಾತ್ ಕರ್ತೃತ್ವ ರಹಿತವಾದ ಕರ್ಮ). ಕರ್ಮರಹಿತಕರ್ಮವು ಮುಕ್ತಿಯನ್ನು ಪಡೆಯಲು ಮಾಡಬೇಕಾದ ಸರಿಯಾದ ಅನುಷ್ಠಾನ–ಸರಿಯಾದ ಆತ್ಮೋನ್ಮುಖತೆ (ಬ್ರಹ್ಮಾತ್ಮೋನ್ಮುಖತೆ).

ಮೇಲೆ ಹೇಳಿದ ಮಾತಿನಿಂದ (೧) ಮುಕ್ತಿಯು ಪ್ರಾರಬ್ಧಬದ್ಧವಲ್ಲ (ಪ್ರಾರಬ್ಧೋಪಾಹಿತವಲ್ಲ) ; (೨) ಹಿಂದೆ ಮಾಡಿದ ಆತ್ಮ ಸಾಧನೆಯಂಥ ಆಧ್ಯಾತ್ಮಿಕ ಅನುಷ್ಠಾನದ ಸಾಮರ್ಥ್ಯವು ತಾನೇ ಪುನರಾರಬ್ಧವಾಗಿ ಈ ಜನ್ಮದಲ್ಲಿಯೂ ಮುಮುಕ್ಷುವಿಗೆ ನೆರವೀಯುತ್ತದೆ. ಆದುದರಿಂದ ನಮ್ಮ ಪ್ರಾರಬ್ಧದಲ್ಲಿ ಮುಕ್ತಿಗೆ ಅವಕಾಶವಿದೆಯೋ ಇಲ್ಲವೋ ಎಂಬ ಬಗ್ಗೆ ಸಂಶಯವನ್ನು ತಾಳದೆ ಜ್ಯೋತಿಃಶಾಸ್ತ್ರ, ಹಸ್ತಸಾಮುದ್ರಿಕ, ಐಚಿನ್, ಸಂಖ್ಯಾಜ್ಯೋತಿಷ ಮುಂತಾದವುಗಳನ್ನು ನೋಡುವ ಯತ್ನ ಮಾಡುವುದರ ಮೂಲಕ ನಿರುತ್ಸಾಹ ಹೊಂದದೆ (ಏಕೆಂದರೆ, ಈ ಕಲೆ ಕೈಗಾರಿಕೆಗಳು ಅದನ್ನು ಹೇಳಲಾರವು) ಮಹಾಧೈರ್ಯದಿಂದ ನಾವು ಆತ್ಮೋನ್ಮುಖರಾಗಿ 'ಸ್ವಭಾವಗತ ಅಸ್ತಿತ್ವದ" ಸತ್–ವಾಸನೆಯ ಮೂಲಕ ಮುಕ್ತಿಯನ್ನು ಸಂಪಾದಿಸೋಣ.

ಪರಿಶಿಷ್ಟ – ೩

ವೈಯಕ್ತಿಕ ನೈರ್ಮಲ್ಯ (ಆಚಾರಗಳು)

ಒಮ್ಮೆ ಒಬ್ಬ ಶಿಷ್ಯನು ಒಬ್ಬ ಗುರುವಿನ ಬಳಿಗೆ ಹೋಗಿ ದೇವರ ಸಾಕ್ಷಾತ್ಕಾರದ ಸಿದ್ಧಿಗಾಗಿ ಉಪದೇಶ ಮಾಡಲು ಕೇಳಿಕೊಂಡನು. ಗುರು ಹೇಳಿದನು, "ದೇವರು ನಿನ್ನಲ್ಲಿದ್ದಾನೆ. ಅವನನ್ನು ನೀನು ತಿಳಿದುಕೊಳ್ಳಬೇಕಾದರೆ ಆಚಾರ ತತ್ವಗಳನ್ನು ಅನುಸರಿಸು. ನಿರ್ಮಲವಾಗಿರು – ಯಾವಾಗಲೂ ನಿನ್ನನ್ನು ಪವಿತ್ರನನ್ನಾಗಿ ಇಟ್ಟುಕೋ", ಎಂದು. ಶಿಷ್ಯನು ಮನೆಗೆ ಹಿಂದಿರುಗಿದನು. ಆಚಾರಗಳ ಬಗೆಗಿನ ಎಲ್ಲವನ್ನೂ ತಿಳಿದುಕೊಳ್ಳಲು ಅವನು ವೇದ ಶಾಸ್ತ್ರಗಳನ್ನು ಓದಿದನು ಮತ್ತು (ಅವುಗಳಲ್ಲಿ ಹೇಳಿದಂತೆ) ನಡೆದುಕೊಳ್ಳಲಾರಂಭಿಸಿದನು. ಸ್ನಾನಕ್ಕೆ ಬಹಳ ಲಕ್ಷ್ಯ ಕೊಟ್ಟನು ; ಬಟ್ಟೆ ತೊಳೆದುಕೊಳ್ಳುವುದಕ್ಕೆ, ಮನೆ ಗುಡಿಸಲಿಕ್ಕೆ, ಆಹಾರ ತಯಾರಿಕೆಗೆ ಮತ್ತು ಕುಡಿಯುವ ನೀರಿನ ಸಂಗ್ರಹಕ್ಕೆ ಕೂಡ ಸ್ವಚ್ಛತಾ ನೀತಿಯನ್ನು ಅನ್ವಯಿಸಿದನು. ಮತ್ತೆ ಬಹುಬೇಗ ತನ್ನ ಶರೀರವೂ ವಸ್ತ್ರವೂ ಕೊಳಕಾದುದನ್ನು ಕಂಡು ಅವನು ದಿನಕ್ಕೆ ಎರಡು ಸಲ ಸ್ನಾನ ಮಾಡಲು ಮತ್ತು ಬಟ್ಟೆ ಬದಲಾಯಿಸಲು ಶುರು ಮಾಡಿದನು. ಕಾಲ ಕ್ರಮೇಣ ಅವನ ಸ್ನಾನಸಂಖ್ಯೆಯು ದಿನಕ್ಕೆ ಆರಕ್ಕೇರಿತು. ಅವನ ಉಡುಪಿನ ಬದಲಾವಣೆ ಕುಡಾ ಅದೇ ಸಂಖ್ಯೆಯಲ್ಲಿ ಏರಿತು. ಆಹಾರ–ಪಾನೀಯಗಳ ನಿರ್ವಹಣೆಯಲ್ಲಿಯೂ ಹೆಚ್ಚು ಹೆಚ್ಚು ಸೂಕ್ಷ್ಮವಾದ ದೇಖರೇಖೆ ಮಾಡತೊಡಗಿದನು. ಒಂದೆರಡು ವರ್ಷಗಳ ಅನಂತರ ಅವನು ಪುನಃ ತನ್ನ ಗುರುವನ್ನು ಸಮೀಪಿಸಿದನು. ಗುರುವಿಗೆ ಶಿಷ್ಯನು ತನ್ನ ಶರೀರ, ಉಡಿಗೆ ಮತ್ತು ಚಟುವಟಿಕೆಗಳಲ್ಲಿ ಉನ್ನತಮಟ್ಟದ ಸ್ವಚ್ಛತೆಯನ್ನು ಇಟ್ಟುಕೊಂಡದ್ದಕ್ಕಾಗಿ ಸಂತೋಷ ಉಂಟಾದರೂ ಬೇಸರದ ದನಿಯಿಂದ ಹೇಳಿದನು. "ಸಾಕಾಗುವಷ್ಟು ಸ್ವಚ್ಛನಾಗಿಲ್ಲ ನೀನು! ಇನ್ನೂ ಹೆಚ್ಚು ಆಚಾರಗಳನ್ನು ಪಾಲಿಸು ; ಚೊಕ್ಕವಾಗಿರು ; ಹೊಲಸು ವಸ್ತುಗಳನ್ನು ಮುಟ್ಟಬೇಡ", ಎಂದು.

ಅವನು ಮನೆಗೆ ಹಿಂದಿರುಗಿದನು. ಇನ್ನೂ ಹೆಚ್ಚು ಹೆಚ್ಚು ಕಠಿನವಾದ ನೈರ್ಮಲ್ಯ ನಿಯಮಾವಳಿಯನ್ನು ಪಾಲಿಸಲಾರಂಭಿಸಿದನು (ಆಚಾರ ಸಂಹಿತೆಯಂತೆ ನಡೆದುಕೊಳ್ಳಲಾರಂಭಿಸಿದನು). ಅತಿ ಮಡಿವಂತಿಕೆಯು ಅವನ ಜೀವನದಲ್ಲೀಗ ಎದ್ದು ಕಾಣಿಸಿತು. ಅದರಿಂದ ಅವನ ಹೆಂಡತಿ, ಮಕ್ಕಳು, ನೆಂಟರು, ಇಷ್ಟರು ಕೂಡಾ ಅವನ ಹತ್ತಿರ ಹೋಗಲು ಹೆದರಲಾರಂಭಿಸಿದರು. ಅವನ ದೃಷ್ಟಿಯಲ್ಲಿ ಅತಿ ಚಿಕ್ಕ ಕಲೆಯು ಯಾ ಧೂಲೀಕಣವು ತನ್ನ ಬಟ್ಟೆಯಲ್ಲಿ ಕಾಣಿಸಿದರೆ ಅದು ಅತ್ಯಂತ ಅಸಹ್ಯವಾಗಿ ತೋರಲಾರಂಭಿಸಿತು (ಅತ್ಯಂತ ಅಸಹ್ಯವೆಂದು ಅವನು ಎಣಿಸತೊಡಗಿದನು.) ತನ್ನ ಕೂದಲನ್ನು ಯಾ ಕಾಲ್ಬೆರಳನ್ನು ಮುಟ್ಟುವುದು ಕೂಡಾ ಅತಿ ಹೆಚ್ಚಿನ ಅಶುದ್ಧಿ ಎಂದು ಅವನಿಗೆ ತೋರತೊಡಗಿತು. ಅವನು ಅಷ್ಟು ಸಲ ಮೀಯಬೇಕಾಯ್ತು ಮತ್ತು ಅಷ್ಟೇ

ಸಲ ಬಟ್ಟೆ ತೊಳೆದುಕೊಳ್ಳಬೇಕಾಯ್ತು ! ಉಪವಾಸ ಮಾಡುವುದು ಕೂಡಾ ಅವನಿಗೆ ಒಂದು ಅಭ್ಯಾಸವೇ ಆಗಿ ಹೋಯ್ತು. ಯಾವಾಗ ಆಹಾರ–ಪಾನೀಯಗಳು ಅಶುದ್ಧವೆಂದು ಅವನ ಮನದಲ್ಲಿ ಹೊಳೆದರೆ ಸಾಕು–ಆ ಕೂಡಲೇ, ಅವು ಎಷ್ಟು ಬೆಲೆಯವುಗಳಾಗಿದ್ದರೂ ಎಷ್ಟು ರುಚಿಕರವಾಗಿದ್ದರೂ ಅವನು ಅವುಗಳನ್ನು ಬಿಟ್ಟು ಬಿಡುತ್ತಿದ್ದನು. ತನ್ನ ನೈರ್ಮಲ್ಯಕ್ಕಾಗಿ ಇಷ್ಟೆಲ್ಲಾ ಮಾಡಿದ ಆ ಶಿಷ್ಯನು ಭಾರವಾದ ಹೃದಯದಿಂದಲೂ ಅಸಂತೃಪ್ತ ಮುಖ ಮುದ್ರೆಯಿಂದಲೂ ತನ್ನ ಗುರುವಿನೆಡೆಗೆ ಮತ್ತೆ ಹೋದನು. ಆಗ ಅವನು ಅಳಲು ತೋಡಿಕೊಂಡನು. "ನಾನೇನು ಮಾಡಲಿ? ಎಷ್ಟು ಸಲ ತೊಳೆದರೂ ನನ್ನ ಮೈಯೂ ಅರಿವೆಗಳೂ ಕೊಳಕಾಗಿಯೇ ಇರುತ್ತವೆ!" ಎಂದು. ಗುರುವು ಮುಗುಳು ನಗೆಯಿಂದ ಹೇಳಿದನು, "ನೀನೆಂಥ ದಡ್ಡನು! ಶರೀರವೆಂಬುದು ಕೊಳಕು ವಸ್ತುಗಳ ಒಂದು ಹೊರೆಯಲ್ಲವೇ? ಅದನ್ನು ನೀನೇಕೆ ಮುಟ್ಟುವೆ? ತಪ್ಪದೆ ನೀನು ಅಸ್ಪೃಶ್ಯತೆಯನ್ನು ಪಾಲಿಸಬೇಕು!" ಎಂದು. ಆದರೆ ಅಯ್ಯೋ! ಆ ಬಡವನು ಕಕ್ಕುಬೆಕ್ಕಾದನು. ಅವನಿಗೆ ತಿಳಿಯಲೇ ಇಲ್ಲ! "ಏನು? ನನ್ನ ದೇಹವನ್ನು ನಾನು ಮುಟ್ಟದಿರುವುದೇ?.... ನಾನದನ್ನು ಹೇಗೆ ಮಾಡಲಿ?" ಎಂದು ಅವನು ಗುರುವನ್ನು ಕೇಳಿದನು. ಆಗ ಗುರುವು, "ಎಂಥ ಆಶ್ಚರ್ಯ ! ನೀನು ಶರೀರವೇ? ಕೊಳಕು ಸಾಮಗ್ರಿಗಳ ಗಂಟೇ? ನೀನು ಶುದ್ಧಜ್ಞಾನದ (ಜಾಗರದ) ಆ ವಸ್ತುವಲ್ಲವೇ? ನೀನು ಶರೀರ ಸ್ವರೂಪನು ಎಂದು ಆಲೋಚಿಸಿದಾಗ ನೀನದನ್ನು ಮುಟ್ಟುತ್ತೀಯೆ. ಶವಸದೃಶವಾದ ಶರೀರವನ್ನು ತಾನೆಂದು ಮನುಷ್ಯನು ತಪ್ಪಾಗಿ ತಿಳಿದುಕೊಳ್ಳುವುದೇ ಹೆಣ ಮುಟ್ಟಿದ ಮೈಲಿಗೆ ! ಅಸ್ಪೃಶ್ಯತೆಯ ತತ್ವಕ್ಕೆ ಗಟ್ಟಿಯಾಗಿ ಅಂಟಿಕೋ ; ದೇಹವನ್ನು ಮುಟ್ಟಬೇಡ ; ಈ ಪ್ರಕಾರ ಶುಚಿಯಾಗಿರು!"

ಸದ್ ಗುರುವಿನ ದಿವ್ಯವಾಣಿಯ ಸಾಮರ್ಥ್ಯವು ಆ ಶಿಷ್ಯನಲ್ಲಿ ಪ್ರಬೋಧ ಉದಯಿಸುವಂತೆ ಮಾಡಿತು ; ಗಂಭೀರವಾಗಿ ಅವನು ಆಲೋಚಿಸಿದನು : "ದೇಹವಲ್ಲದ ನಾನು ಯಾರು? ಹೇಗೆ ಏನಾಗಿ ನಾನು ಇದ್ದೇನೆ?" ಗುರು ನೀಡಿದ ಹೊಸ ತಿರುವಿನಿಂದ ಅವನು ಆತ್ಯಂತಿಕ (ಪರಿಪೂರ್ಣ) ಶುದ್ಧಿಯತ್ತ ಹೊರಳಿದನು. ಅವನಲ್ಲದು ಇಲ್ಲಿಯವರೆಗೂ ಕತಕತನೆ ಕುದಿಯುತ್ತಿತ್ತು. ಅದೀಗ ಅವನನ್ನು ಆತ್ಮ ಸಾಕ್ಷಾತ್ಕಾರಕ್ಕೆ ಅರ್ಹನನ್ನಾಗಿ ಮಾಡಿತು. ಆತ್ಮ ಸಾಕ್ಷಾತ್ಕಾರವೆಂದರೆ, ಅವನ ಬ್ರಹ್ಮಾತ್ಮದ ಸ್ವಾಭಾವಿಕವಾದ ನಿರಪೇಕ್ಷ ಶುದ್ಧಿ ಪರಿಪೂರ್ಣ ಶುದ್ಧಿ. ಆ ಪ್ರಕಾರ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ಆತನು ಮನೆಗೆ ಮರಳಿದನು. ದೇಹೇತರನು ತಾನೆಂದು ಯಾವಾಗಲೂ ಅನುಭವ ಪಡೆಯುತ್ತಿದ್ದ ಆತನು, "ಯಾವಾಗಲೂ ಶುದ್ಧನಾಗಿರು" ಎಂಬ ಗುರ್ವಾಜ್ಞೆಯನ್ನು ಅಕ್ಷರಶಃ ಪಾಲಿಸಲು ಈಗ ಶಕ್ತನಾದನು.

"ತಾನು ಏನಾಗಿರಲಿಲ್ಲವೋ ಅದರ ಬಗ್ಗೆ" ಅವನು ಉದಾಸೀನನಾಗಿದ್ದುದರಿಂದ ಶರೀರವು ಅಲಕ್ಷಿತವಾಯಿತು. ಅದರ ದೇಖರೇಖೆ ನೋಡಲು ಅಲ್ಲಿ ಯಾರೂ ಇಲ್ಲದುದರಿಂದ ಬಾಹ್ಯಶೌಚವು ಪರಿತ್ಯಕ್ತವಾಯಿತು. ಕೆಲತಿಂಗಳುಗಳು ಕಳೆದವು. ಅವನ ಕೆಲ ಸ್ನೇಹಿತರೂ ನೆಂಟರೂ ಅವನಿದ್ದಲ್ಲಿಗೆ ಬಂದರು. "ಏನಾಯಿತು! ಎಂಥ ದೃಶ್ಯ! ಅವನು ಅಷ್ಟು ಕೊಳಕನಾಗಿದ್ದನು ; ಮಲ ಮೂತ್ರಗಳನ್ನು ವಿಸರ್ಜಿಸಿದ ಮೇಲೂ ಅವನು ಸರಿಯಾಗಿ ತೊಳೆದು ಚೊಕ್ಕ ಮಾಡಿಕೊಳ್ಳುತ್ತಿರಲಿಲ್ಲ. ಅವನ ಆಚಾರಗಳೆಲ್ಲವೂ ಎಲ್ಲಿಗೆ ಹೋದವು? ಅವಮಾನ! ಹೊಲಸು!" ಎಂದು ಅವನನ್ನವರು ಅಪಹಾಸ್ಯ ಮಾಡಿದರು. ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದ ಕೆಲವರು ಅವನ ಹತ್ತಿರ ಹೋಗಿ ಕೇಳಿದರು, "ನೀನು ಶೌಚದ

ಪರಮಭಕ್ತನಾಗಿದ್ದೆ–ಕೆಲ ತಿಂಗಳ ಹಿಂದೆ! ಅದೆಲ್ಲಾ ಈಗ ಎಲ್ಲಿಗೆ ಹೋಯಿತು?" ಎಂದು. ಎಲ್ಲಾ ತಿಳಿದುಕೊಂಡವನಂತೆ ಅವನು ಮುಗುಳು ನಗೆಯಿಂದ ಉತ್ತರವಿತ್ತನು. "ಈಗ ಮಾತ್ರ ನಾನು ಸಂಪೂರ್ಣ ಶುದ್ಧನಾಗಿದ್ದೇನೆ!" ಎಂದು. ಅದನ್ನು ಸಹಿಸಲಾರದೆ ಅವನ ಸ್ನೇಹಿತರು ಅವನು ಆಚಾರವನ್ನು ಉಪದೇಶಿಸಿದ ಗುರು ಹೇಳಿದ್ದನ್ನು ಮಾತ್ರ ಕೇಳುವನೆಂದು ಭಾವಿಸಿ ಅವನನ್ನು ಆ ಗುರುವಿನೆಡೆಗೆ ಕರೆದೊಯ್ದರು.

ನಮ್ಮ ಸ್ನೇಹಿತನಲ್ಲಿ ಉಂಟಾದ ಅನುಚಿತ ಪರಿವರ್ತನದ ಬಗ್ಗೆ ಆ ಗುರುವಿನೆದುರಿಗೆ ಅವರು ದೂರಿಕೊಂಡರು. ಅವನಿಗೆ ಎದುರುವಾದ ಎದ್ದದ್ದನ್ನು ಕಂಡು ಗುರುವು "ಆಚಾರದ ಸರಿಯಾದ ಪಾಲನೆ (ನಿಜವಾದ ಪಾಲನೆ) ಎಂದರೆ ಇದೇ! ಇದೇ ಪರಮಾಚಾರ (ಬ್ರಹ್ಮಾಚಾರ). ಬಾಹ್ಯಶೌಚವನ್ನು ಪಾಲಿಸಿದ್ದರಿಂದ ಬಂದ ಆಚಾರದ ಪರಿಪೂರ್ಣಸ್ಥಿತಿ ಮತ್ತು ಫಲ ಎಂದರೆ ಇದೇ. ಅವನನ್ನು ಮುಟ್ಟದಿರಿ. ಅವನನ್ನು ಹೊಲಸು ಮಾಡದಿರಿ. ಅವನು ಶುದ್ಧತಮನಾಗಿದ್ದಾನೆ." ಕಥೆ ಇಲ್ಲಿಗೆ ಮುಗಿಯುತ್ತದೆ.

> **"ಕೊಳಕು ದೇಹವನ್ನು ಶುಚಿಯಾಗಿಡಲು ಹೆಚ್ಚು ಹೆಚ್ಚು ಬಲಾತ್ಕಾರದಿಂದ ಮನುಷ್ಯನು ಪ್ರಯತ್ನಿಸಿದಷ್ಟೂ ಪುನಃ ಪುನಃ ಅದು ಹೊಲಸಾಗುತ್ತಲೇ ಹೋಗುತ್ತದೆ. ಶ್ರುತಿಗಳು ಬಾಹ್ಯಶೌಚವನ್ನು (ಆಚಾರಗಳನ್ನು) ಶಿಫಾರಸ್ಸು ಮಾಡಿರುವುದು ನಮಗೆ ಶರೀರದಲ್ಲಿ ಜುಗುಪ್ಸೆಯನ್ನುಂಟು ಮಾಡಿ ಅದರ ಬಗೆಗಿನ ಆಸಕ್ತಿಯನ್ನು ನಾವು ಬಿಟ್ಟು ಬಿಡುವಂತೆ ಮಾಡುವುದಕ್ಕಾಗಿಯೇ (ನಾನೀ ದೇಹವೆಂಬ ಕಲ್ಪನೆಯನ್ನು ಬಿಟ್ಟುಕೊಡುವಂತೆ ಮಾಡುವುದಕ್ಕಾಗಿಯೇ)."**

–ಗುರುವಾಚಕ ಕೋವೈ", ಪದ್ಯ ೬೮೦

– ಶ್ರೀ ಮುರುಗನಾರ್

ಪರಿಶಿಷ್ಟ – ೪

(ವಿಭಾಗ–ಅ)

"ಶ್ರೀ ಅರುಣಾಚಲ ಅಷ್ಟಕಂ" ಎಂಬ ಕೃತಿಯ ೬ನೆಯ ಪದ್ಯದ ವಿವರಣಾತ್ಮಕ ಟಿಪ್ಪಣಿ –

ಪದ್ಯ ೬ :

> **"ಎಲೈ ಹೃದಯವೇ, ಆತ್ಮಜ್ಞಾನ ಜ್ಯೋತಿಯೇ, ಏಕಮೇವಾದ್ವಿತೀಯನಾದ ನೀನು ಮಾತ್ರ ಇರುವೆ. ನೀನೇ ಆಗಿರುವ ಅನ್ಯನಲ್ಲದ ಆಶ್ಚರ್ಯಕರವಾದ ಒಂದು ಶಕ್ತಿಯಿದೆ. ಪ್ರಾರಬ್ಧದ ಸುಂಟರಗಾಳಿಯಿಂದ (ತಿರುಗಣಿ ಮಡುವಿನಿಂದ) ಅಣು ಸದೃಶ ಸೂಕ್ಷ್ಮವೂ ಕಪ್ಪಾದುದೂ ಮಂಜಿನಂಥದೂ ಆದ ವಿಚಾರ ಸಂತತಿಯು ಮನದ ಪ್ರತಿಬಿಂಬಿತ ಬೆಳಕಿನಲ್ಲಿ ನಿನ್ನ ಪ್ರೇರಣಾನುಸಾರ ಏಳುತ್ತದೆ. ಈ ಮಂಜು ಅಂತರ್ಗತ ಸೂಕ್ಷ್ಮ ಪ್ರಪಂಚದ ಛಾಯಾ ಚಿತ್ರಗಳಾಗಿ ತೋರುತ್ತದೆ–ಮನೋಜ್ಯೋತಿ ಎಂಬ ಕನ್ನಡಿಯ ಮೇಲೆ ; ಹಾಗೇ ಅದು ಹೊರಗೆ, ಕಣ್ಣು ಮೊದಲಾದ ಪಂಚೇಂದ್ರಿಯಗಳ ಮೂಲಕ, ಹೊರಚಾಚಿದ ಭೌತ ಪ್ರಪಂಚದ ಚಿತ್ರಗಳಾಗಿಯೂ ದೃಶ್ಯವಾಗುವುದು. ಪಾರದರ್ಶಕ ಕನ್ನಡಿಯ ಮೂಲಕ ಹೊರಬೀಳುವ ಚಲನಚ್ಚಿತ್ರದ ಪ್ರದರ್ಶನ ಅದಕ್ಕೆ ದೃಷ್ಟಾಂತ. ಓ ಅನುಗ್ರಹ (ಪ್ರಸಾದ ಕರುಣ) ಪರ್ವತವೇ, ಅವು ತೋರಲಿ, ತೋರದಿರಲಿ, ಅದರಿಂದೇನು? ಅವು ನಿನ್ನಿಂದ ಪ್ರತ್ಯೇಕವಾಗಿ ಇರುವಂಥವುಗಳಲ್ಲ."**

ವಿವರಣಾತ್ಮಕ ಟಿಪ್ಪಣಿ :

ಅರುಣಾಚಲವು ಹೃದಯ. ಅದೊಂದೇ ಇರುವ ವಸ್ತುವಾಗಿದೆ. ಅದು ಆತ್ಮಜ್ಞಾನದ (ಆತ್ಮಪ್ರಬೋಧದ ಬ್ರಹ್ಮಾತ್ಮ ಪ್ರಕಾಶದ) ಜ್ಯೋತಿ. ಇರುವುದು ಅದೊಂದೇ ಸತ್ಯ. ಹಾಗಾದರೆ ಯಾರಾದರೂ ಕೇಳಿಯಾರು : "ಜಗತ್ತಿನ ಅಸ್ತಿತ್ವಕ್ಕೆ ವಿವರಣೆಯನ್ನು ಕೊಡುವುದು ಹೇಗೆ? ಅದು ಪಂಚವಿಧವಾದ ಪ್ರಾಕೃತಿಕ ಘಟನೆ ; ಅಂದರೆ (೧) ಸೃಷ್ಟಿ, (೨) ಸ್ಥಿತಿ, (೩) ಲಯ (೪) ತಿರೋಧಾನ (ಅದೃಶ್ಯವಾಗುವುದು, ಮುಸುಕಿನೊಳಗೆ ಸೇರುವುದು) ಮತ್ತು (೫) ಅನುಗ್ರಹ (ಅನಾವರಣ) – ಈ ಪ್ರಪಂಚ ಎಲ್ಲಿಂದ ಬಂತು?" – ಎಂದು. ಈ ಕೆಳಗಿನ ಸಾಲುಗಳನ್ನು ಭಗವಾನ್ ಶ್ರೀ ರಮಣರ ಉತ್ತರವನ್ನು ವಿವರಿಸಲಾಗಿದೆ.

ಈಯೆಲ್ಲ ಪಂಚವಿಧ ಘಟನೆಗಳೂ (ಪಂಚ ಕೃತ್ಯಗಳೂ) ಸತ್ಯವಲ್ಲ! ಹೇಗೆ?

ಬ್ರಹ್ಮಾತ್ಮದಲ್ಲಿ ಒಂದು ವಿಚಿತ್ರ ಶಕ್ತಿಯಿದೆ. ಅದರಲ್ಲಿ ಒಂದು ವಿಚಿತ್ರ ಶಕ್ತಿಯಿದೆ ಎಂದು ಹೇಳಿದರೂ ಅದೊಂದು ಬ್ರಹ್ಮಾತ್ಮ ಭಿನ್ನವಾದ ಪ್ರತ್ಯೇಕ ಪದಾರ್ಥ ಎಂದು

ತಿಳಿಯಬಾರದು. ಅದು ದ್ವಿತೀಯ ಪದಾರ್ಥವಲ್ಲ. ಅದು ಬ್ರಹ್ಮಾತ್ಮವೇ. ಭಗವಾನ್ ರಮಣರು ಅದನ್ನೇಕೆ ವಿಚಿತ್ರ ಶಕ್ತಿಯೆಂದು ಕರೆದರು? ಆ ಶಕ್ತಿಯಲ್ಲಿ ಹಿಮಾಣುಸದೃಶವಾದ ಸೂಕ್ಷ್ಮ ಕೃಷ್ಣ ಕಣ ಸಂತಾನಗಳು ಕಾಣುತ್ತವೆ ; ಇವು ವಿಚಾರಗಳು. ಈ ಎಲ್ಲ ವಿಚಾರಗಳಲ್ಲಿ "ನಾನು" ಎಂಬ ಮನಸ್ಸು ಮೊಟ್ಟಮೊದಲನೆಯದು. ಉಳಿದೆಲ್ಲ (ಹಿಮಸದೃಶ) ವಿಚಾರಗಳೆಲ್ಲವೂ ಮನೋಗೋಚರ (ಪ್ರಥಮ ವಿಚಾರ ರೂಪದ ಮನಸ್ಸಿಗೆ ಕಾಣುವಂಥವುಗಳು). ಆಶ್ಚರ್ಯ ಇಂತಿದೆ : (೧) ದ್ರಷ್ಟಾರ ಎನ್ನಿಸಿದ ಮನಸ್ಸು ; (೨) ಲೋಕಗಳ ರೂಪದಲ್ಲಿ ತೋರುವ ವಿಚಾರಗಳು ; ಅವು ದೃಶ್ಯವಾಗಲು ಬೇಕಾದ ಪ್ರತಿಫಲಿತ ಬೆಳಕನ್ನುಳ್ಳ ಮನಸ್ಸು – ಈ ಎಲ್ಲವೂ ಬ್ರಹ್ಮಾತ್ಮವೇ ಆಗಿರುವುದು! ಅದರಿಂದಲೇ ಶ್ರೀ ಭಗವಾನ್ ರಮಣ ಮಹರ್ಷಿಗಳು ಅದನ್ನು ವಿಚಿತ್ರ ಯಾ ಆಶ್ಚರ್ಯಕರ ಶಕ್ತಿ ಎಂದು ಕರೆದಿರುವುದು. ಹಿಮ ಸದೃಶ ವಿಚಾರಗಳು, ಮನಃಪಟಲದ ಮೇಲೆ ಒಳಗೇ ದೃಶ್ಯವಾದಾಗ, ಸೂಕ್ಷ್ಮಲೋಕಗಳ ಸ್ವರೂಪದಲ್ಲಿರುತ್ತವೆ ; ಶರೀರದ ಪಂಚೇಂದ್ರಿಯಗಳ ಮೂಲಕ ನೋಡಿದರೆ (ಆ ಪಂಚೇಂದ್ರಿಯಗಳೂ ಹಿಮಸದೃಶ ವಿಚಾರಗಳಲ್ಲಿ ಒಂದು ಆಗಿರುವುದರಿಂದ) ಹೊರಗೆ ಸ್ಥೂಲ ಪ್ರಪಂಚಗಳ ಚಿತ್ರಗಳು ಕಾಣಿಸುತ್ತವೆ. ಈ ಇಡೀ ಘಟನೆ ಪ್ರಾರಬ್ಧದ ಸುಂಟರಗಾಳಿಯಿಂದ (ತಿರುಗಣಿಮಡುವಿನಿಂದ) ನಡೆಯುತ್ತದೆ. ಶ್ರೀ ರಮಣ ಮಹರ್ಷಿಗಳು ಹೊರಗೆ ನಾವು ಸ್ಥೂಲ ಪ್ರಪಂಚವನ್ನು ನೋಡುವುದನ್ನು ಪರದೆಯ ಮೇಲೆ ಚಲಚ್ಚಿತ್ರದ ನೋಟವನ್ನು ಮುಂಚಾಚುವುದಕ್ಕೆ ಹೋಲಿಸಿದ್ದಾರೆ. ಆ ಪ್ರಕ್ರಿಯೆ ಈ ಪ್ರಕ್ರಿಯೆಗೆ ಸಮಾನ ಎಂದು ತಾತ್ಪರ್ಯ. ಪಂಚೇಂದ್ರಿಯಗಳು (ಲೆನ್ಸ್) ರಾವು (ಭೂತ)ಗನ್ನಡಿ. ಅವುಗಳ ಮೂಲಕ ಪರದೆಯ ಮೇಲೆ ಹಿಮೋಪಮ ವಿಚಾರ ರೂಪಗಳು ವಿಸ್ತರಿಸಲ್ಪಟ್ಟು ಬಾಹ್ಯ ಪ್ರಪಂಚವಾಗಿ ಮುಂಚಾಚಲ್ಪಡುತ್ತವೆ. ಬ್ರಹ್ಮ ಜಾಗರದ ಆತ್ಮಜ್ಯೋತಿಯ ಪ್ರತಿಬಿಂಬವಾದ ಮನಸ್ಸು ಸ್ಥೂಲವಾದ ಪ್ರಪಂಚ ಚಿತ್ರವನ್ನು ಹೊರಗೆ ಮುಂಚಾಚುವ ಯಂತ್ರ. ಪ್ರತಿಫಲಿತ ಬೆಳಕಿನ ಅಭಾವದಲ್ಲಿ ತಾನೇ ಕನ್ನಡಿಯೂ ಆದ ಮನಸ್ಸು ಸ್ಥೂಲ–ಸೂಕ್ಷ್ಮ ಪ್ರಪಂಚಗಳೆರಡನ್ನೂ ಉಂಟು ಮಾಡಲಾರದು. ಆದುದರಿಂದ (೧) ಹೊರಗಿನ ಸ್ಥೂಲ ಪ್ರಪಂಚ ; (೨) ಸೂಕ್ಷ್ಮ ಮಾನಸ ಪ್ರಪಂಚ ; ಮತ್ತು (೩) ಪ್ರತಿಫಲಿತ ಬೆಳಕಾದ ಮನಸ್ಸು–ಈಯೆಲ್ಲವೂ ಮಿಥ್ಯೆ, ಮೂರ್ಛೆ, ನಿದ್ರೆ, ಸಾವು ಮತ್ತು ಪ್ರಲಯಗಳು ಆತ್ಮಜ್ಯೋತಿಯು ಕೆಲಸ ಮಾಡದಿರುವ ಸ್ಥಿತಿಗಳು ಮತ್ತು ತತ್ಫಲವಾಗಿ ಮನಸ್ಸೂ ಬಾಹ್ಯ ಪ್ರಪಂಚವೂ ಅಸ್ತಿತ್ವದಲ್ಲಿರುವುದಿಲ್ಲ. ಆದುದರಿಂದ ಮೂಲಭೂತ ಬೆಳಕಾದ ಆತ್ಮಜಾಗರಕ್ಕೆ (ಪರಬ್ರಹ್ಮಜ್ಞಾನಕ್ಕೆ) ಅದೆಲ್ಲಾ ಅಪ್ರಯೋಜನಕರ; ಅದಕ್ಕೆ ಅವು ಇರುವಂತೆ ತೋರಿದರೂ ಒಂದೇ, ತೋರದಿದ್ದರೂ ಒಂದೇ. ಈ ವಿಷಯವು ಹೀಗಿರುವದರಿಂದ ಶ್ರೀ ಭಗವಾನ್ ರಮಣರು "ಸ್ವಪ್ನದಲ್ಲಿ ತೋರುವ ಜಗತ್ತು ಜಾಗ್ರದವಸ್ಥೆಯಲ್ಲಿ ತೋರುವ ಜಗತ್ತು ಮತ್ತು ನಮ್ಮ ಜೀವನವಿಡೀ ಅಲ್ಲದೆ ಮೂರ್ಛೆ, ನಿದ್ರೆ, ಮರಣ, ಪ್ರಲಯಗಳಲ್ಲಿ ತೋರದಿರುವ ಜಗತ್ತು – ಈಯೆಲ್ಲವೂ ನಿನ್ನಿಂದ ಭಿನ್ನವಲ್ಲ– ಹೇ ಅರುಣಾಚಲ, ನೀನೇ ಅನುಗ್ರಹ ಪರ್ವತ, ನೀನೇ ಆತ್ಮಜ್ಞಾನ ಎಂದು ಹೇಳಿದ್ದಾರೆ.

ಪರಿಶಿಷ್ಟ – ೪

(ವಿಭಾಗ–ಬ)

"ಉಳ್ಳದು – ನಾರ್ಪದು" ವಿನ ೮ನೆಯ ಪದ್ಯದ ವಿವರಣಾತ್ಮಕ ಟಿಪ್ಪಣಿಗಳು

ಪದ್ಯ ೮ :

> **"ಒಬ್ಬನು ಯಾವ ರೂಪದಿಂದ ಮತ್ತು ಯಾವ ನಾಮದಿಂದ ಸರ್ವೋತ್ತಮವೆನ್ನಿಸಿದ ಸತ್ ಪದಾರ್ಥವನ್ನು ಪೂಜಿಸಿದರೂ ಅದು ಆ ರೂಪ–ನಾಮಗಳಲ್ಲಿ ಮಾತ್ರ ಆ ಪರತತ್ವವನ್ನು ನೋಡುವ ಮಾರ್ಗ. ಆದರೂ ಆ ಸತ್ಯವಸ್ತುವಿನ ಸತ್ಯದಲ್ಲಿ ಸ್ವ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು, ಅದರೊಡನೆ ಏಕೀಭೂತನಾಗಿ, ಅದರಲ್ಲಿ ಕರಗಿ ಹೋಗಿ ಬಿಡುವುದೇ ನಿಜವಾದ ದರ್ಶನ ಅಥವಾ ಸಾಕ್ಷಾತ್ಕಾರ : ನೀನು ಹೀಗೆ ತಿಳಿದುಕೊಳ್ಳತಕ್ಕದ್ದು !"**

ಟಿಪ್ಪಣಿಗಳು :

ಪರಬ್ರಹ್ಮಕ್ಕೆ ಅದರದೇ ಆದ ರೂಪವಿಲ್ಲ, ನಾಮವಿಲ್ಲ. ಸತ್, ಚಿತ್, ಆನಂದ ಎಂಬೀ ಮೂರು ಅದರ ನಿಜವಾದ ಮುಖಗಳು. ನಾಮ–ರೂಪಗಳು ಅದರ ಅಸನ್ಮುಖಗಳು. ಆದುದರಿಂದ ಪರಬ್ರಹ್ಮವನ್ನು ಯಾವ ನಾಮ–ರೂಪಗಳಿಂದ ಪೂಜಿಸಲಾಗುವುದೋ ಆ ನಾಮರೂಪಗಳಲ್ಲಿ ಅದು ಪ್ರತ್ಯಕ್ಷವಾಗುವುದು. ಈ ಪದ್ಯದ ಅರ್ಥವನ್ನು ಇಲ್ಲಿ ಕೆಲವರು ಹೀಗೆ ಹೇಳುತ್ತಾರೆ : "ಪರತತ್ವವನ್ನು ನಾಮ–ರೂಪಗಳಿಂದ ಆರಾಧಿಸುವುದು ಅದನ್ನು ನಾಮ–ರೂಪ ರಹಿತವಾಗಿ ನೋಡಲು ಸಾಧನ" ಎಂದು. ಈ ವ್ಯಾಖ್ಯೆ ತಪ್ಪು. ತಮಿಳಿನ "ಪೇರ್ ಉರುವಿಲ್" ಎಂಬ ಪದಗಳಿಗೆ ಎರಡು ಅರ್ಥಗಳಿವೆ : (೧) ಪೇರ್ ಉರುವಿಲ್ = ನಾಮರೂಪಗಳಲ್ಲಿ (ಅದನ್ನು ನೋಡುವುದು); (೨) ಪೇರ್ ಉರು ಇಲ್ = ನಾಮರೂಪ ರಹಿತವಾಗಿ (ಅದನ್ನು ನೋಡುವುದು) ; ಅರ್ಥಾತ್ ಒಂದು ನಾಮರೂಪದಲ್ಲಿ ಪರತತ್ವ ಪೂಜೆ ಮಾಡುವುದರ ಮೂಲಕ ಅದರ ನಾಮರೂಪರಹಿತ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಇಲ್ಲಿ ನಾವು ಸಂದರ್ಭಾನುಸಾರವಾಗಿ ಯಾವ ಅರ್ಥವನ್ನು ಗ್ರಹಿಸಬೇಕು? ಎಂಬುದನ್ನು ತಿಳಿದುಕೊಳ್ಳಬೇಕು. ಶ್ರೀ ರಮಣರು–ನಾಮರೂಪಸಹಿತವಾಗಿ ಪರತತ್ವವನ್ನು ಪೂಜಿಸಿದರೆ ನಾಮರೂಪರಹಿತ ಸ್ವರೂಪದಲ್ಲಿ ಪರತತ್ವದ ಸಾಕ್ಷಾತ್ಕಾರವಾಗುವುದು–ಎಂಬ ಅರ್ಥವನ್ನು ಇಟ್ಟುಕೊಂಡಿದ್ದರೆ ಅವರು (ಅದೇ ನಿಜವಾದ ಸಾಕ್ಷಾತ್ಕಾರವಾಗುವುದರಿಂದ) "ಆದರೂ" ಎಂಬ ಪದದಿಂದ ಆರಂಭವಾಗುವ ಅದೇ ಪದ್ಯದ ಈ ಕೆಳಗಿನ ಸಾಲುಗಳಲ್ಲಿ ಪರತತ್ವದ ಸತ್ಯವಾದ ದರ್ಶನದ ಸ್ವರೂಪವನ್ನು ಲಕ್ಷಣಬದ್ಧವಾಗಿ ಹೇಳುವ ಅವಶ್ಯಕತೆಯೇ ಇರಲಿಲ್ಲ. ಶ್ರೀ

ಭಗವಾನ್ ರಮಣರು ಅದೇ ಪದ್ಯದ ಕೊನೆಯ ಎರಡು ಸಾಲುಗಳಲ್ಲಿ ನಿಜದರ್ಶನ ಎಂದರೆ ಏನೆಂಬುದನ್ನು ಲಕ್ಷಣಿಸಿ ಹೇಳಿದ್ದರಿಂದ "ಪೇರ್ ಉರು+ಇಲ್" ಎಂಬುದರ ಎರಡನೆಯ ಅರ್ಥವನ್ನು ಈ ಸಂದರ್ಭದಲ್ಲಿ ಹೇಳಬಾರದು ಎಂದು ಗ್ರಹಿಸಬೇಕು. ಇನ್ನೂ ಹೆಚ್ಚಿನ ಸಂಗತಿ ಎಂದರೆ – ಶ್ರೀ ರಮಣರು "ಅರುಣಾಚಲ ಅಷ್ಟಕಂ" ಎಂಬ ಕೃತಿಯ ೩ನೆಯ ಪದ್ಯದಲ್ಲಿ ಹೇಳಿದ ಅಂಶದಿಂದ ಅವರ ಇಂಗಿತವೇನೆಂಬುದನ್ನು ತಿಳಿದುಕೊಳ್ಳಬಹುದು. ಆ ಅಂಶವೆಂದರೆ – "ನಾಮರೂಪಗಳಿಂದ ಆರಾಧಿಸಿದರೆ ನಾಮರೂಪದಿಂದ ಮಾತ್ರ ಪರತತ್ವವನ್ನು ತಿಳಿದುಕೊಳ್ಳಲು ಸಾಧ್ಯ. ನಾಮ–ರೂಪ ರಹಿತವಾದ ಪರತತ್ವವನ್ನು ಪೂಜಿಸಲು ಯತ್ನಿಸುವುದು ವ್ಯರ್ಥ : ನಾಮರೂಪರಹಿತವಾದ ಪರತತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ, ಆತ್ಮಶೋಧದ ಮೂಲಕ ವ್ಯಕ್ತಿತ್ವವನ್ನು ಪರತತ್ವದಲ್ಲಿ ಕರಗಿಸಿ ಬಿಡುವುದೇ ನಾಮರೂಪರಹಿತ ಪರತತ್ವ ಸಾಕ್ಷಾತ್ಕಾರ ಮಾಡಿಕೊಳ್ಳಲು ಇರುವ ಒಂದೇ ಒಂದು ಮಾರ್ಗ. ಮೂರನೆಯದೆನ್ನಿಸುವ ಈ ಪದ್ಯದ ಕೊನೆಯ ೨ ಸಾಲುಗಳಲ್ಲಿ ಶ್ರೀ ರಮಣರು ತಮ್ಮ ಅನುಭವವನ್ನೇ (ಸಾಕ್ಷಾತ್ತಾಗಿ) ಹೇಳಿದ್ದಾರೆ. ಆ ಅನುಭವದ ಪ್ರಕಾರ ಪರತತ್ವ ಸ್ವರೂಪದ ಬ್ರಹ್ಮಾತ್ಮದ ಜ್ಞಾನವು ಉದಯವಾದಾಗ ವ್ಯಕ್ತಿತ್ವವು ಅಸ್ತಿತ್ವದಲ್ಲಿ ಇರದು. ನಾಮ–ರೂಪರಹಿತವಾದ ಪರತತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದರಲ್ಲಿ ಪರತತ್ವದ ನಾಮರೂಪ ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ಒಂದು ವೇಳೆ ನಾವು ತಿಳಿದುಕೊಳ್ಳಬೇಕೆಂದು ಬಯಸಿದರೆ, "ಭಕ್ತಿ" ಎಂಬ ೨ನೆಯ ಅಧ್ಯಾಯವನ್ನು ಓದಬಹುದು. ಅದರಲ್ಲಿ ಸುಪ್ರಿಯನಾದ ದೇವರು ನಾಮರೂಪಸಹಿತ ಪೂಜಿಸಲ್ಪಟ್ಟಾಗ ಹೇಗೆ ಸದ್ಗುರು ರೂಪದಲ್ಲಿ ಅವತರಿಸುವನು ಎಂಬುದನ್ನು ಹೇಳಲಾಗಿದೆ. ಅದೇ ಸುಪ್ರಿಯನಾದ ದೇವರು ಸದ್ ಗುರುವಿನ ನಾಮರೂಪ ಧರಿಸಿ ಬರಬೇಕು ಮತ್ತು ಹಾಗೆ ಬಂದು ಪೂಜಕನಿಗೆ ಪರತತ್ವದ ನಿಜದರ್ಶನ ಲಭಿಸಲೆಂದು ಆತ್ಮ ಸಮರ್ಪಣದ ಯಾ ಆತ್ಮಶೋಧದ ಮೂಲಕ ಅದ್ವೈತ ಜ್ಞಾನವನ್ನು ತಲುಪುವುದು ಹೇಗೆ ಎಂಬುದನ್ನು ಕಲಿಸಬೇಕು.

ಪರಿಶಿಷ್ಟ – ೪

(ವಿಭಾಗ–ಕ)

"ಉಳ್ಳದು ನಾರ್ಪದು"ವಿನ ೯, ೧೦, ೧೧, ೧೨ ನೆಯ ಪದ್ಯಗಳ ಮೇಲಿನ ವಿವರಣಾತ್ಮಕ ಟಿಪ್ಪಣಿ:–

"ಉಳ್ಳದು ನಾರ್ಪದು"ವಿನ ಲಭ್ಯವಿರುವ ಇಂಗ್ಲಿಷು ಭಾಷಾಂತರಗಳಲ್ಲಿರುವ ೯ನೆಯ ನುಡಿಯ ಭಾಷಾಂತರದಲ್ಲಿ ಮತ್ತು ಅದರ ಮೇಲಿನ ವ್ಯಾಖ್ಯೆಯಲ್ಲಿ ಬ್ರಹ್ಮಾತ್ಮವನ್ನು ತೆಗೆದುಕೊಂಡು ಅದನ್ನು ದ್ವ್ಯಣುಕ–ತ್ರ್ಯಣುಕಗಳ ಅಧಿಕರಣವೆಂದು ವಿವರಿಸಲಾಗಿದೆ. ಅದೇ ರೀತಿಯಿಂದ "ಉಳ್ಳದು ನಾರ್ಪ.ದು"ವಿನ ೧೦ನೆಯ ನುಡಿಯಲ್ಲಿ ಬಂದಿರುವ "ಜ್ಞಾನಾಜ್ಞಾನಗಳು ಯಾರಿಗೆ?" ಎಂಬ ಸಾಲುಗಳನ್ನು ತಪ್ಪಾಗಿ ಭಾಷಾಂತರಿಸಲಾಗಿದೆ : "ಜ್ಞಾನಾಜ್ಞಾನಗಳು"= ಬ್ರಹ್ಮಾತ್ಮಕ್ಕೆ ಸೇರಿದಂಥವುಗಳು ಮತ್ತು ಅದು ಜ್ಞಾನಾಜ್ಞಾನಗಳಿಗೆ ಅಧೀನ" ಎಂಬ ಶಂಕೆ ಓದುಗರಿಗೆ ಉಂಟಾಗುವಂತೆ ಮಾಡಿದ್ದು ತಪ್ಪು!

"ಉಳ್ಳದು ನಾರ್ಪ.ದುವಿನ" ೧೧ನೆಯ ನುಡಿಯಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳು, "ಅಹಂಕಾರವೇ ಜ್ಞಾನಾಜ್ಞಾನಗಳಿಗೆ ಅಧಿಕರಣವಾಗಿದೆ" ಎಂದು ಸಾರಿದ್ದಾರೆ. ಖೇದಕರವಾದ ಸಂಗತಿಯೆಂದರೆ, ಇಲ್ಲಿಯೂ "ಉಳ್ಳದು ನಾರ್ಪ.ದುವಿನ"ಈವರೆಗೆ ಪ್ರಕಟವಾದ ಇಂಗ್ಲಿಷು ಭಾಷಾಂತರಗಳಲ್ಲೆಲ್ಲಾ ಉಕ್ತ ಅಧಿಕರಣವು ಬ್ರಹ್ಮಾತ್ಮವೆಂದೇ ಗಣಿಸಲ್ಪಟ್ಟಿದೆ.[೪]

ಒಂದು ವಸ್ತುವನ್ನು ತಿಳಿದಿರುವುದು ಯಾ ತಿಳಿಯದಿರುವುದು ಬ್ರಹ್ಮಾತ್ಮದ ಸ್ವರೂಪವಲ್ಲ. ಬ್ರಹ್ಮಾತ್ಮವು ಯಾವುದನ್ನೇ ಆಗಲಿ–ತಿಳಿದುಕೊಳ್ಳುವುದೂ ಇಲ್ಲ. ಮರೆತುಬಿಡುವುದೂ ಇಲ್ಲ. ಅದು ಅರಿವು–ಮರೆವುಗಳೆಂಬ ಸ್ಥಿತಿಗಳನ್ನು ಮೀರಿದುದು. ಅರಿಯುವ ಮತ್ತು ಮರೆಯುವ ಸ್ವಭಾವವಿರುವುದು ಮನಸ್ಸಿಗೆ ; ಮನಸ್ಸೆಂದರೆ ಅಹಂಕಾರವೆಂದೇ ಅರ್ಥ. "ಪದಾರ್ಥಗಳನ್ನು ತಿಳಿದುಕೊಂಡಿರುವ ಪದಾರ್ಥವು ನಿಜಜ್ಞಾನ ಸ್ವರೂಪವುಳ್ಳದ್ದಲ್ಲ." ಎಂಬುದನ್ನು ಶ್ರೀ ರಮಣರು "ಉಳ್ಳದು ನಾರ್ಪ.ದುವಿನ" ೧೨ನೆಯ ನುಡಿಯಲ್ಲಿ ಹೇಳಿದ್ದಾರೆ. ಇರುವಿಕೆಯಲ್ಲದೆ ಅರಿಯುವಿಕೆಯೆಂದೂ ನಿಜಜ್ಞಾನವೆನ್ನಿಸದು. ಆತ್ಮಜ್ಞಾನವು ಆಲಯವಿಜ್ಞಾನವಲ್ಲದೆ ಪ್ರವೃತ್ತಿ ವಿಜ್ಞಾನವಲ್ಲ–ವ್ಯಕ್ತಿನಿಷ್ಠ ಜ್ಞಾನವಲ್ಲದೆ, ವಸ್ತುನಿಷ್ಠ ಜ್ಞಾನವಲ್ಲ. "ಅಂಥ ಬ್ರಹ್ಮಾತ್ಮಜ್ಞಾನ ಕೂಡಾ ಬ್ರಹ್ಮಾತ್ಮವಾಗಿ ಇರುವುದಲ್ಲದೆ ಮತ್ತೇನೂ ಅಲ್ಲ" ಎಂದಿದ್ದಾರೆ.

---

೪. ಶ್ರೀ ಭಗವಾನ್ ರಮಣರು ಬಳಸಿದ ಕಾವ್ಯ ಭಾಷೆಯು ಅಭಿಜಾತ ತಮಿಳು ಎಂಬುದನ್ನೂ ತಮಿಳರಿಗೇ ಅದು ಅರ್ಥವಾಗಬೇಕಾದರೂ ಅದಕ್ಕೆ ಗದ್ಯ ರೂಪದ ವಿವರಣೆಗಳು ಬೇಕಾಗುತ್ತವೆ ಎಂಬುದನ್ನೂ ಇಲ್ಲಿ ಹೇಳಬೇಕಾಗಿದೆ.

ಭಗವಾನ್ ಶ್ರೀ ರಮಣರು ತಮ್ಮ "ಉಪದೇಶ ಉಂದಿಯಾರಿನ" ೨೬ನೆಯ ನುಡಿಯಲ್ಲಿ. ಹೀಗೆ ಬ್ರಹ್ಮಾತ್ಮವಾಗಿರುವುದೇ "ನಾನಿದ್ದೇನೆ" (ಅಹಮಸ್ಮಿ) ಎಂಬ ಶುದ್ಧವಾದ ಎಚ್ಚರ (ಜಾಗರ). ಆದುದರಿಂದ ಇತರ ಪದಾರ್ಥಗಳನ್ನು ತಿಳಿದಿರುವುದು ಅಥವಾ ತಿಳಿಯದಿರುವುದು ಅಹಂಕಾರದ ಲಕ್ಷಣ. ಅಹಂಭಾವದಲ್ಲಿ ಮಾತ್ರ ಈ ಇತರ ಪದಾರ್ಥಗಳಿಗೆ ಅಸ್ತಿತ್ವವಿರಬಲ್ಲುದು. ಹೀಗೆ ಜ್ಞಾನಾಜ್ಞಾನಗಳು ಅಹಂಕಾರಕ್ಕಲ್ಲದೆ ಬ್ರಹ್ಮಾತ್ಮಕ್ಕಲ್ಲ. ಬ್ರಹ್ಮಾತ್ಮಕ್ಕೆ ಎರಡಿಲ್ಲ. ಸ್ವೇತರ ಪದಾರ್ಥದ ಜ್ಞಾನವಿರುವುದಿಲ್ಲವಷ್ಟೇ ಅಲ್ಲ–ಬ್ರಹ್ಮಾತ್ಮಕ್ಕೆ ತನ್ನ ಜ್ಞಾನ ಕೂಡಾ ಇಲ್ಲ "(ತಾನು ಸ್ವೇತರಪದಾರ್ಥಗಳಿಂದ ಭಿನ್ನವಾದ ಪ್ರತ್ಯೇಕ ಪದಾರ್ಥ ಎಂಬ ಜ್ಞಾನ ಕೂಡಾ ಇಲ್ಲ)"– ಎಂಬ ಸೂಕ್ಷ್ಮತರ ರಹಸ್ಯವನ್ನು ಶ್ರೀ ಭಗವಾನ್ ರಮಣರು ಒಮ್ಮೆ ಹೇಳಿದ್ದನ್ನೂ ನಾವು ಮರೆಯದಿರುವುದು ಮುಖ್ಯ.

ಪ್ರತ್ಯೇಕೀಕರಣಗಳಿಂದ ತುಂಬಿದ ಪ್ರಪಂಚವು ದ್ವ್ಯಣುಕ–ತ್ರ್ಯಣುಕಗಳಿಂದ ಕೂಡಿರುವಂಥದು. ಅಸದ್‌ಜ್ಞಾನವೆನ್ನಿಸಿರುವ ಅಹಂಕಾರದ ಲೀಲೆಯಲ್ಲಿ ಮಾತ್ರ ಅದು ಪ್ರಕಾಶಿಸಬಲ್ಲದು. ಮಂದ ಪ್ರಕಾಶದ ಸಂಧ್ಯೆಯಲ್ಲಿ ಮಾತ್ರ ಹಗ್ಗವು ಹಾವಾಗಿ ತೋರೀತು. ವಿಶಾಲವಾದ ಹಗಲು ಬೆಳಕಿನಲ್ಲಿ ಹಗ್ಗವು ಸ್ಪಷ್ಟವಾಗಿ ಹಗ್ಗವಾಗಿಯೇ ಕಾಣಿಸೀತು – ಅದರಲ್ಲಿ ಕಾಲ್ಪನಿಕವೆನ್ನಿಸುವ ಹಾವು ಎಂದೂ ಕಾಣಿಸಲಾರದು. ಅದೇ ಮೇರೆಗೆ (ಅಜ್ಞಾನರೂಪದ) ಮನೋಜ್ಯೋತಿಯಲ್ಲಿ ಮಾತ್ರ ಪರಬ್ರಹ್ಮನನ್ನು [ದ್ವ್ಯಣುಕ–ತ್ರ್ಯಣುಕಗಳಿಂದ] ತುಂಬಿದ ಅನ್ಯ ಪದಾರ್ಥ ಸಮುದಾಯವನ್ನಾಗಿ ಕಾಣಲು ಸಾಧ್ಯ. ಬ್ರಹ್ಮಾತ್ಮ ಮೂಲಜ್ಯೋತಿಯಲ್ಲಿ ನಾಮ, ರೂಪ, [ದ್ವ್ಯಣುಕ, ತ್ರ್ಯಣುಕ] ಮೊದಲಾದ ಪರಿಭೇದಗಳಿಲ್ಲ ಮತ್ತು ಅವು ತೋರಲಾರವು! ಏಕೆ? ಏಕೆಂದರೆ, ಕತ್ತಲಿನ ಮತ್ತು ಕೃತಕ ದೀಪಜ್ಯೋತಿಯ ಹಿನ್ನೆಲೆಯನ್ನು ಸೂರ್ಯನ ಪ್ರಖರ ಜ್ಯೋತಿಯು ನುಂಗಿ ಬಿಟ್ಟಿದೆ. "ಶ್ರೀ ಅರುಣಾಚಲ ಪಂಚರತ್ನಂ" ಎಂಬ ಕೃತಿಯ ಒಂದನೆಯ ನುಡಿಯಲ್ಲಿ ಭಗವಾನ್ ಶ್ರೀ ರಮಣ ಮಹರ್ಷಿಗಳು ಹೇಳಿದ್ದು ಇದನ್ನೇ : "ನಾಮರೂಪಮಯವಾದ ಇಡೀ ವಿಶ್ವವನ್ನು ಪರಮೋಚ್ಚ ಜ್ಞಾನಜ್ಯೋತಿಯ ಕಿರಣಗಳಿಂದ ವ್ಯಾಪಿಸಿ ಕಿರಣಗಳನ್ನು ಚೆಲ್ಲಿ ಮುಳುಗಿಸಿ" ಎಂಬ ಮಾತಿನಲ್ಲಿ [ದ್ವ್ಯಣುಕ–ತ್ರ್ಯಣುಕಗಳಿಂದಾದ] ಜಗತ್ತಿನ ಚಿತ್ರಗಳು ಬ್ರಹ್ಮಾತ್ಮದ ಮೂಲ ಬೆಳಕಿನಲ್ಲಿ ಇರಲಾರವು. ಆದುದರಿಂದ "ಯಾರಿಗೆ ಜ್ಞಾನಾಜ್ಞಾನಗಳು?" ಎಂದು "ಉಳ್ಳದು ನಾರ್ಪ.ದುವಿನ" ೧೦ನೆಯ ನುಡಿಯಲ್ಲಿ ಕೇಳಿದಾಗ ಅದು ಅಹಂಕಾರಕ್ಕೆ ಮಾತ್ರ ಎಂದು ನಾವು ಉತ್ತರ ಕೊಡಬಲ್ಲವರಾಗಬೇಕು.

ಅಹಂಕಾರದ ಸ್ವರೂಪವನ್ನು ಅದು ಏನೆಂದು ಶೋಧಿಸಿದರೆ (ಕೂಡಲೇ) ಅದು ಅದೃಶ್ಯವಾಗಿ ಬಿಡುತ್ತದೆ. ಹೀಗೆ [ದ್ವ್ಯಣುಕ–ತ್ರ್ಯಣುಕಗಳ] ಆಧಾರವಾದ ಅಭಾವರೂಪದ ಅಹಂಕಾರ ಇರುವಂಥದಲ್ಲ – ಎಂಬ ಸರಿಯಾದ ತಿಳುವಳಿಕೆಯನ್ನು ಮಾಡಿಕೊಂಡ ಮೇಲೆ ಬ್ರಹ್ಮಾತ್ಮಜ್ಞಾನವು ಉದಯಿಸುವುದು ಮತ್ತು [ದ್ವ್ಯಣುಕ–ತ್ರ್ಯಣುಕಗಳು] ಮಾಯವಾಗುವುವು. ಬ್ರಹ್ಮಾತ್ಮದ ಬೆಳಕಿನಲ್ಲಿ [ದ್ವ್ಯಣುಕ–ತ್ರ್ಯಣುಕಗಳ] ಆಧಾರವಾದ ಅಹಂಕಾರವೇ ಅಸ್ತಿತ್ವರಹಿತವಾದುದು ಎಂಬ ಸಂಗತಿ ಗೊತ್ತಾಗುವುದು. ಆ ಅಹಂಕಾರದ ಜ್ಞಾನದೊಡನೆಯೇ [ದ್ವ್ಯಣುಕ–ತ್ರ್ಯಣುಕಗಳ] ಅಸ್ತಿತ್ವವೂ ನಮಗೆ ಗೊತ್ತಾಗುವುದು. [ಬ್ರಹ್ಮಾತ್ಮವೆಂಬ ಸರ್ವನಿರಪೇಕ್ಷ ಪದಾರ್ಥದ ಅನುಭವವುಂಟಾದೊಡನೆಯೇ ದ್ವ್ಯಣುಕ–

ತ್ರ್ಯಣುಕಗಳಗಳ ಅಧಿಕರಣವಾದ ಅಹಂಕಾರವೂ ಅದೃಶ್ಯವಾಗುವುದು]. ಆತ್ಯಂತಿಕ ಸತ್ಯದ ವಿರುದ್ಧವಾಗಿ ಮಾಡಲಾದ ವ್ಯಾಖ್ಯಾತೃನಿಗಮನವು ನಿಲ್ಲಲಾರದಾಗುವುದರಿಂದ ಓದುಗನನ್ನು ಆ ವ್ಯಾಖ್ಯಾನಕಾರರ ಬರೆಹವು ಅಡ್ಡದಾರಿಗೆ ಬಹಳವಾಗಿ ಎಳೆಯಲಾರದು ಎಂದು ನಾವು ನಮ್ಮನ್ನು ಸಂತೈಸಿಕೊಳ್ಳಬೇಕಾಗಿದೆ. ಆದರೆ ವಾಚಕನು ಶ್ರೀ ಭಗವಾನ್ ರಮಣ ಮಹರ್ಷಿಗಳ ಇಂಗಿತವು –ದ್ವ್ಯಣುಕ–ತ್ರ್ಯಣುಕಗಳ ಅಧಿಕರಣವಾಗಿರುವುದು ಅಹಂಕಾರವಲ್ಲದೆ ಬ್ರಹ್ಮಾತ್ಮವಲ್ಲ–ಎಂಬುದೇ ಆಗಿದೆ ಎಂದು ತಿಳಿದುಕೊಳ್ಳುವುದು ಅಗತ್ಯವಾಗಿದೆ.

ಬಿ.ಎಚ್.ಶ್ರೀಧರ

ಜನನ : ೨೪ ಏಪ್ರಿಲ್ ೧೯೧೮ರಂದು ದಕ್ಷಿಣ ಕನ್ನಡದ ಬಿಜೂರಿನ ಬವಲಾಡಿಯಲ್ಲಿ.

ಶಿಕ್ಷಣ : ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಬಿಜೂರು, ಸೊರಬ, ಸಾಗರದಲ್ಲಿ. ಬಿ.ಎ. ಆನರ್ಸ್ ೧೯೪೧ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಿಂದ, ರಾಜ್ಯಕ್ಕೆ ಪ್ರಥಮ. ಎಂ.ಎ. ಸಂಸ್ಕೃತ ಮೈಸೂರು ವಿಶ್ವವಿದ್ಯಾಲಯದಿಂದ.

ವೃತ್ತಿ : ಪುಣೆಯ ಎಕೌಂಟ್ಸ್ ಆಫೀಸಿನಲ್ಲಿ 'ಗುಮಾಸ್ತಗಿರಿ', ಭಟ್ಕಳದ ಇಸ್ಲಾಮಿಯ ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ಸಹ ಶಿಕ್ಷಕರಾಗಿ ೪ ವರ್ಷ ಹಾಗೂ ಹೆಡ್ ಮಾಸ್ತರ್ ಆಗಿ ಒಂದು ವರ್ಷ, 'ಕರ್ಮವೀರ' ವಾರಪತ್ರಿಕೆ (ಹುಬ್ಬಳ್ಳಿ)ಯ ಉಪಸಂಪಾದಕರಾಗಿ ಕೆಲಸ ಮಾಡಿ ೧೯೫೧ರಲ್ಲಿ ಕುಮಟಾದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಬಳಿಕ ಶಿರಸಿಯ ಎಂ.ಎಂ. ಕಾಲೇಜಿನಲ್ಲಿ ವೈಸ್ ಪ್ರಿನ್ಸಿಪಾಲರಾಗಿ ೭ ವರ್ಷ, ಅನಂತರ ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಪ್ರೊಫೆಸರ್ ಹಾಗೂ ಪ್ರಾಚಾರ್ಯರಾಗಿ ನಿವೃತ್ತರಾದರು.

ಕುಟುಂಬ : ೧೯೪೬ರಲ್ಲಿ ರಮಾದೇವಿಯವರೊಡನೆ ವಿವಾಹ, ಸುಮಾ, ಪ್ರತಿಭಾ, ವಿಜಯಾ, ರಾಜಶೇಖರ, ರಾಜೇಶ್ವರಿ – ಮಕ್ಕಳು.

ಕೃತಿಗಳು : ಮೇಘನಾದ, ರಸಯಜ್ಞ, ಜಾತವೇದ ಸೇರಿದಂತೆ ಹತ್ತು ಕವನ ಸಂಕಲನಗಳು; ಯಕ್ಷಗಾನ ಪ್ರಸಂಗ, ನಾಟಕ, ಆತ್ಮಕತೆ, ವಿನೋದ, ವಿಮರ್ಶೆ ಹಾಗೂ ಜ್ಞಾನಸೂತ್ರ, ರಾಷ್ಟ್ರಸೂತ್ರ, ಕಾವ್ಯಸೂತ್ರದಂತಹ ವೈಚಾರಿಕ ಕೃತಿಗಳು ಒಟ್ಟು ಮೂವತ್ತು. ಅರವಿಂದರ Foundation of Indian Culture, The Secret of the Veda ಹಾಗೂ ಶಿವಪುರಾಣ, ಮನುಸ್ಮೃತಿ ಸೇರಿದಂತೆ ಹತ್ತು ಅನುವಾದಿತ ಕೃತಿಗಳು.

ಪ್ರಶಸ್ತಿಗಳು : ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ತೀ.ನಂ.ಶ್ರೀ ಸ್ಮಾರಕ ಬಹುಮಾನ, ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಬಹುಮಾನ, ಕೇಂದ್ರ ಸರಕಾರದ ಸಂರಕ್ಷಣಾ ಶಾಖೆ ಬಹುಮಾನ, ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ, ದೇವರಾಜ ಬಹಾದೂರ ಬಹುಮಾನ, ಮುಂತಾದವು.

ಸ್ಮರಣೆ : ಶಿರಸಿಯ ಬಿ.ಎಚ್. ಶ್ರೀಧರ ಸಾಹಿತ್ಯ ಸಮಿತಿಯು ಪ್ರತಿವರ್ಷ ಏಪ್ರಿಲ್ ೧೪ರಂದು ಕನ್ನಡದ ಅತ್ಯುತ್ತಮ ಸಾಹಿತ್ಯ ಕೃತಿಯೊಂದಕ್ಕೆ ಶ್ರೀಧರರ ಹೆಸರಿನ ಬಹುಮಾನವನ್ನು ನೀಡುತ್ತಿದೆ.

ಎಚ್.ಆರ್. ಅಮರನಾಥ

ಜನನ : ಎಪ್ರಿಲ್ ೪, ೧೯೫೮, ಸಕಲೇಶಪುರ (ಹಾಸನ ಜಿಲ್ಲೆ)

ಶಿಕ್ಷಣ : ಎಸ್.ಎಸ್.ಎಲ್.ಸಿ. ವರೆಗೆ ಶಿರಾಳಕೊಪ್ಪ, ಬಿ.ಎ. ಪದವಿ – ಶಿರಸಿ, ಎಮ್.ಎ. (ಇಂಗ್ಲೀಷ್) – ಕರ್ನಾಟಕ ವಿ.ವಿ., ಧಾರವಾಡ.

ವೃತ್ತಿ : ಶಿರಸಿ, ದಾಂಡೇಲಿ, ಉಡುಪಿ, ಹಳಿಯಾಳ, ಮುಂಡಗೋಡ, ಸೊರಬ ಮತ್ತು ಸಾಗರದಲ್ಲಿ ಇಂಗ್ಲೀಷ್ ಉಪನ್ಯಾಸಕರಾಗಿ ೩೫ ವರ್ಷ ಸೇವೆ. ೩೦–೦೪–೨೦೧೮ರಲ್ಲಿ ಸೇವಾನಿವೃತ್ತಿ.


ಕುಟುಂಬ : ತಂದೆ – ವಿದ್ವಾನ್ ರಾಮಚಂದ್ರಭಟ್ಟ, ಹಾಸಣಗಿ, ತಾಯಿ – ಶ್ರೀಮತಿ ಸರಸ್ವತಮ್ಮ, ಪತ್ನಿ – ಮಂಜುಳಾ, ಪುತ್ರಿ – ಚಂದನಾ.

ಕೃತಿಗಳು : ಕವನ ಸಂಕಲನಗಳು – ಹುಚ್ಚು ಹಾದಿಯ ಪಯಣಿಗ, ಹತ್ತರೊಳಗೆ ಹನ್ನೊಂದು, ಅಮರಪಥ, ದೀಪಕಾಣಿಕೆ.

ವಿಮರ್ಶೆ – ಮೂರು ಮಹಾಕಾವ್ಯಗಳು, ಭಾರತ ಸಿಂಧು ರಶ್ಮಿ – ದೃಷ್ಟಿ–ಸೃಷ್ಟಿ.

ನಾಟಕಗಳು – ಮಹಾಚೈತ್ರ ನಿರ್ಣಯ, ವಿಶ್ವಾಮಿತ್ರ, ಶಿವ ಮೆಚ್ಚಿದ ಮಗ, ಇತ್ಯಾದಿ ಎಂಟು ನಾಟಕಗಳು.

ಪ್ರಶಸ್ತಿಗಳು : ಆರ್.ಬಿ. ಕರಂದೀಕರ್ ಚಾರಿಟೆಬಲ್ ಟ್ರಸ್ಟಿನ ಪ್ರಶಸ್ತಿ
ಶ್ರೀ ಕಡಂಗೋಡ್ಲು ಶಂಕರಭಟ್ಟ ಕಾವ್ಯ ಪ್ರಶಸ್ತಿ
ಬಾಲಕೃಷ್ಣ ಸಾಹಿತ್ಯ ಪುರಸ್ಕಾರ





ತಮಿಳುನಾಡಿನ ಅರುಣಾಚಲದಲ್ಲಿ ನೆಲೆ ನಿಂತ ಭಗವಾನ್ ಶ್ರೀರಮಣಮಹರ್ಷಿಗಳು ನಿಜ ಅರ್ಥದಲ್ಲಿ ಜಗದ್ಗುರುಗಳು. ಅವರು ನಿರ್ದೇಶಿಸಿದ "ನಾನು ಯಾರು?" ಎಂಬ ಆತ್ಮಶೋಧದ ಮಾರ್ಗ ನಮ್ಮ ನಿಜಸ್ಥಿತಿಯಾದ ಪರಮ ಆನಂದದ ಭಾವವನ್ನು ತಿಳಿಯುವ ಸರಳ, ನೇರ ಉಪಾಯ. ಯಾವ ದೇವ, ದೈವದ ಸಹಾಯವನ್ನೂ ಬಯಸದ ಶುದ್ಧ ಜ್ಞಾನಮಾರ್ಗ ಅದು. 'ಆತ್ಮಜ್ಞಾನ'ವನ್ನು ತಮ್ಮ ಹದಿನಾರನೇ ವಯಸ್ಸಿನಲ್ಲಿಯೇ ಪಡೆದ ಶ್ರೀರಮಣರು ಮುಂದಿನ ೫೪ ವರ್ಷ ದೇಶ-ವಿದೇಶಗಳ ವಿವಿಧ ಧರ್ಮ-ಮತಗಳ ಅಸಂಖ್ಯಾತ ಜಿಜ್ಞಾಸುಗಳಿಗೆ ಸದ್ಗುರುವಾಗಿ ಅರಿವು ನೀಡಿದವರು.

'ಶ್ರೀರಮಣಮಾರ್ಗ ಭಾಗ-೧' ರಲ್ಲಿ 'ನಾನು ಯಾರು?' ಎಂಬ ಆತ್ಮಶೋಧದ ಜ್ಞಾನಮಾರ್ಗವನ್ನು ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಭಾಗ-೨ ರಲ್ಲಿ ಭಕ್ತಿ, ಕರ್ಮ, ಜಗತ್ತು ಮುಂತಾದ ವಿಷಯಗಳ ಕುರಿತಾದ ಸಾಮಾನ್ಯ ಅರ್ಥೈಸುವಿಕೆಯನ್ನು ತಾರ್ಕಿಕವಾಗಿ ಹಿಂಜಿನೋಡಿ ಶ್ರೀರಮಣರ ವಿಚಾರವನ್ನು ಇನ್ನಷ್ಟು ಸ್ಪಷ್ಟಪಡಿಸಲಾಗಿದೆ. ಹೀಗೆ ನಿರೂಪಿಸುವಲ್ಲಿ ಲೇಖಕ ಶ್ರೀ ಓಂ ಸಾಧುಗಳು ಶ್ರೀ ಭಗವಾನರ ಮೂಲ ತಮಿಳು ಕೃತಿಗಳನ್ನು ಆಧರಿಸಿದ್ದಾರೆಯೇ ಹೊರತು ಅವುಗಳ ಅನುವಾದವನ್ನೋ, ಭಗವಾನರೊಂದಿಗಿನ ಇತರ ಭಕ್ತರ ಸಂವಾದಗಳ ದಾಖಲೆಯನ್ನೋ ಅಲ್ಲ ಎನ್ನುವುದು ಮುಖ್ಯ. ಹೀಗಾಗಿ ಈ ಕೃತಿಗಳ ವಾಚನ-ಮನನ ಶ್ರೀರಮಣ ಬೋಧನೆಯ ಸಾರವನ್ನು ತಪ್ಪಾಗಿ ಅರ್ಥೈಸಿಕೊಂಡು ಅನಪೇಕ್ಷಿತ ಮಾರ್ಗಗಳಲ್ಲಿ ವೃಥಾ ಅಲೆಯುವುದನ್ನು ತಪ್ಪಿಸುತ್ತದೆ.

ಈ ಕೃತಿಗಳ ಲೇಖಕ ಶ್ರೀ ಸಾಧು ಓಂ ಅವರು ತಮ್ಮ ತಾರುಣ್ಯದಲ್ಲೇ ಶ್ರೀರಮಣರನ್ನು ಗುರುವಾಗಿ ಸ್ವೀಕರಿಸಿ "ನೀನು ಯಾವುದಕ್ಕಾಗಿ ಬಂದಿರುವೆಯೋ ಆ ಕರ್ತವ್ಯದಲ್ಲಿರು" ಎಂಬ ಭಗವಾನರ ನಿರ್ದೇಶನವನ್ನು ಮಹಾವಾಕ್ಯವಾಗಿ ಪಾಲಿಸಿ ಆತ್ಮಶೋಧ ಮತ್ತು ಆತ್ಮಶರಣಾಗತಿಯ ಮಾರ್ಗದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡವರು.

ಶ್ರೀ ಸಾಧು ಓಂ ಮತ್ತು ಅವರ ನಿಕಟಾನುವರ್ತಿಗಳಾದ ಶ್ರೀ ಧಾಕಪ್ಪಾಜಿ ಅವರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದ ಕವಿ, ತ್ರಿಭಾಷಾ ವಿದ್ವಾಂಸ ಪ್ರೊ. ಬಿ.ಎಚ್. ಶ್ರೀಧರರು ಶ್ರೀರಮಣರನ್ನು ಅಂತರಂಗದಲ್ಲಿ ಸ್ಥಾಪಿಸಿಕೊಂಡಿದ್ದರು. ಹೀಗಾಗಿ ಪರಮಶ್ರದ್ಧೆಯಿಂದ ಈ ಎರಡೂ ಕೃತಿಗಳ ಅನುವಾದವನ್ನು ೩೦-೩೫ ವರ್ಷಗಳ ಹಿಂದೆಯೇ ಶ್ರೀ ಸಾಧು ಓಂ ಅವರ ಇಚ್ಛೆಯಂತೆ ಮಾಡಿದ್ದರು. ಆದರೆ ಕಾರಣಾಂತರದಿಂದ ಮೊದಲ ಭಾಗದ ಕೆಲವು ಅಧ್ಯಾಯಗಳ ಅನುವಾದ ಅಲಭ್ಯವಾಗಿ ಅನುವಾದ ಬೆಳಕು ಕಾಣಲಿಲ್ಲ. ಈಗ ಶ್ರೀಧರರ ಅಂತೇವಾಸಿ ಶಿಷ್ಯರೂ. ರಮಣದರ್ಶನ ಜಿಜ್ಞಾಸುಗಳೂ, ಕವಿ-ವಿಮರ್ಶಕ-ವಿದ್ವಾಂಸ ಪ್ರೊ. ಎಚ್.ಆರ್. ಅಮರನಾಥರು ಅಲಭ್ಯವಾದ ಭಾಗಗಳನ್ನು ಅನುವಾದಿಸಿಕೊಟ್ಟು ಕೃತಿಗೆ ಪೂರ್ಣರೂಪವನ್ನು ನೀಡಿದ ಕಾರಣ ಈ ಕೃತಿಗಳು ಬೆಳಕು ಕಾಣುತ್ತಿವೆ ಮತ್ತು ಶ್ರೀರಮಣರ ವಚನಗಳು ಕನ್ನಡಹೃದಯಗಳನ್ನು ತಲುಪುತ್ತಿವೆ.

॥ಶ್ರೀ ರಮಣಾರ್ಪಣಮಸ್ತು॥

ತೇಜು ಪಬ್ಲಿಕೇಷನ್ಸ್